ಹಲವು ಭೂಮಿ ಹಲವು ಬಣ್ಣ



ಕೆಲವು ಪ್ರಖ್ಯಾತ ಸ್ವದೇಶೀ
ಮತ್ತು
ವಿದೇಶೀ ಕಥೆಗಳು

ವಿವಿಧ ಮೂಲಗಳಿಂದ ಕನ್ನಡಕ್ಕೆ

ಡಾ. ಆರ್. ಲಕ್ಷ್ಮೀನಾರಾಯಣ

ಡಾ. ಆರ್. ಲಕ್ಷ್ಮೀನಾರಾಯಣ

ಓ. ಆರ್. ರಾಮಣ್ಣ, ಪುಟ್ಟಮ್ಮ ದಂಪತಿಗಳ ಮಗನಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು (ಜನನ:2.12.1949–) ತುಮಕೂರಿನವರು. 1971ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ದಿಂದ ಎಂ. ಎ ಮುಗಿಸಿದ ಮೇಲೆ 1971 ರಿಂದ 2006ರವರೆಗೆ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ, ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ, 2006 ಮೇ ಯಿಂದ 2007ರ ಡಿಸೆಂಬರ್‌ವರೆಗೆ ಧಾರವಾಡದಲ್ಲಿ ಇಲಾಖೆಯ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ 2007ರಲ್ಲಿ ನಿವೃತ್ತರಾದರು. 2004ರಲ್ಲಿ 'ವಕ್ರೋಕ್ತಿ ಜೀವಿತ – ಒಂದು ಅಧ್ಯಯನ' ಎಂಬ ಮಹಾ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಪಿಎಚ್. ಡಿ. ಪದವಿ. ಇಂಗ್ಲಿಷ್ ಮತ್ತು ಹಿಂದಿಯಿಂದ ಅನುವಾದ ಮಾಡುವುದರಲ್ಲಿ ನಿರತರು.

ಪ್ರಕಟಿತ ಸ್ವತಂತ್ರ ಕೃತಿಗಳು: ವಿಮರ್ಶೆ: 'ಮಾಸ್ತಿ', (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ) ಆಹ್ಲಾದ, (ಇಳಾ ಪ್ರಕಾಶನ) 'ಎಸ್. ವಿ. ಪರಮೇಶ್ವರ ಭಟ್ಟ' (ಕೇಂದ್ರ ಸಾಹಿತ್ಯ ಅಕಡೆಮಿ ಪ್ರಕಟಣೆ), ಚೆಲುವಿನ ನೆಲೆಗಳ ಹಾದಿಯಲ್ಲಿ, ಒಳತಿರುಳು (ಎರಡೂ ಸಿ.ವಿ.ಜಿ. ಪ್ರಕಾಶನ), ವಕ್ರೋಕ್ತಿ ಜೀವಿತ–ಒಂದು ಅಧ್ಯಯನ, ಉರಿಲಿಂಗ ಪೆದ್ದಿ (ಮೈ.ವಿ.ವಿ).

ಅನುವಾದಿತ ಕೃತಿಗಳು: 'ಚಿನ್ನದ ಕಳಶ (ಚೀಣಾದ ಜನಪದ ಕಥೆಗಳ ಸಂಕಲನ), 'ಬರ್ಟೋಲ್ಟ್ ಬ್ರೆಕ್ಟ್' (ಇಂಗ್ಲಿಷ್‌ನಿಂದ), ವಾಙ್ಮಯ ವಿವೇಕ (ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ಅನುವಾದಿತ ಲೇಖನಗಳು), 'ಇನ್ನೊಬ್ಬ

ದ್ರೋಣಾಚಾರ್ಯ' (ಹೆಸರಾಂತ ಹಿಂದೀ ನಾಟಕದ ಕನ್ನಡ ಅನುವಾದ), ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಕನ್ನಡ ವಕ್ರೋಕ್ತಿ ಜೀವಿತ, (ಸಂಸ್ಕೃತ ವಕ್ರೋಕ್ತಿ ಜೀವಿತದ ಕನ್ನಡ ರೂಪ) ಬೇಗುದಿ (ಕಿರಣ್ ನಗರ್‌ಕರ್ ಅವರ ಪ್ರಶಸ್ತಿ ಪುರಸ್ಕೃತ ಇಂಗ್ಲಿಷಿನ 'ಕಕೋಲ್ಡ್ ' ಕಾದಂಬರಿಯ ಕನ್ನಡ ರೂಪ), ಅನುರೂಪ (ಪ್ರಸಿದ್ಧ ಕವಿಗಳ ಅನುವಾದಿತ ಕವಿತೆಗಳ ಸಂಕಲನ), ವಕ್ರೋಕ್ತಿ ಮತ್ತು ಶೈಲಿಶಾಸ್ತ್ರದ ಪರಿಕಲ್ಪನೆಗಳು (ಇಂಗ್ಲಿಷ್‌ನಿಂದ), ಬದುಕಿನ ಇನ್ನೊಂದು ಹಾದಿ (ಆರ್.ಎಲ್. ಕಪೂರರ ಇಂಗ್ಲಿಷ್ ಕೃತಿಯ ಕನ್ನಡ ಅನುವಾದ), ಪಾಲಿ–ಕನ್ನಡ ಶಬ್ದಕೋಶ (ಮೂಲ ಡಾ. ಅಂಬೇಡ್ಕರ್‌ರವರ ಇಂಗ್ಲಿಷ್ ಕೃತಿಯ ಕನ್ನಡ ಅಳವಡಿಕೆ), ಪ್ರಾಕೃತ–ಕನ್ನಡ ಬೃಹತ್ ನಿಘಂಟು ('ಪಾಇಅ ಸದ್ದ–ಮಹಣ್ಣವೋ'ದ ಕನ್ನಡ ಅಳವಡಿಕೆ), ಕಾಗದ ಮತ್ತು ಕ್ಯಾನ್‌ವಾಸ್ (ಅಮೃತಾ ಪ್ರೀತಮ್ ಅವರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವನ ಸಂಕಲನದ ಕನ್ನಡ ರೂಪ)

ಸಂಪಾದಿತ ಕೃತಿಗಳು: 'ರುದ್ರಭಟ್ಟ' (ಜಗನ್ನಾಥ ವಿಜಯ ಸಂಗ್ರಹ), ಎಂ.ವಿ.ಸೀ. ಸಮಗ್ರ ಸಾಹಿತ್ಯ ಸಂಪುಟ–4(ಭಾಗ–1 ಮತ್ತು 2), ಹೊಸಗನ್ನಡ ಕಾವ್ಯ ಸಂಗ್ರಹ.

ಪ್ರಶಸ್ತಿಗಳು: ಕನ್ನಡ ವಕ್ರೋಕ್ತಿ ಜೀವಿತ ಕೃತಿಗೆ 2007ರ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ಅದೇ ಕೃತಿಗೆ 2004ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಬೇಗುದಿ' ಕೃತಿಗೆ 2013ರ ಕರ್ನಾಟಕ ಸಾಹಿತ್ಯ ಅಕಡೆಮಿ ಪ್ರಶಸ್ತಿ, ಆಹ್ಲಾದ ಕೃತಿಗೆ ಗೊರೂರು ಸಾಹಿತ್ಯ ಪ್ರಶಸ್ತಿ, 2019 ರಲ್ಲಿ ಕುವೆಂಪು ಭಾಷಾ ಭಾರತಿ ಜೀವಮಾನದ ಸಾಧನೆಗಾಗಿ ನೀಡುವ ವಿಶೇಷ ಪುರಸ್ಕಾರ, ಮೈಕೋ ಕನ್ನಡ ಬಳಗದ ಕಿಟ್ಟೆಲ್ ಪುರಸ್ಕಾರ(2019), ಮಂಗಳೂರಿನ ಎಸ್.ವಿ.ಪಿ. ಸಂಸ್ಮರಣ ಸಮಿತಿಯು ನೀಡುವ 'ಎಸ್.ವಿ.ಪಿ. ಸಂಸ್ಮರಣ ಪ್ರಶಸ್ತಿ' (2020), 2000 ದಲ್ಲಿ ರಾಜ್ಯ ಸರ್ಕಾರದಿಂದ ಉತ್ತಮ ಕಾಲೇಜು ಶಿಕ್ಷಕ ಪ್ರಶಸ್ತಿ.

ಬೆಳ್ಳಿ ಕಥನ – 21

ಹಲವು ಭೂಮಿ ಹಲವು ಬಣ್ಣ

ಕೆಲವು ಪ್ರಖ್ಯಾತ ಸ್ವದೇಶೀ ಮತ್ತು ವಿದೇಶೀ ಕಥೆಗಳು

ವಿವಿಧ ಮೂಲಗಳಿಂದ ಕನ್ನಡಕ್ಕೆ

ಡಾ. ಆರ್. ಲಕ್ಷ್ಮೀನಾರಾಯಣ

ಸಿವಿಜಿ ಪಬ್ಲಿಕೇಷನ್ಸ್
ಬೆಂಗಳೂರು 560 058

HALAVU BHOOMI HALAVU BANNA

Written by
Dr. R. Lakshminarayana
No. 12, 'Shrinikethana'
2nd Cross, Shivananda Nagar
Moodalapalya, Bangalore-560072
Mobile : 9449028996

Published by
CVG PUBLICATIONS
No. 277, 5th Cross
Vidhana Soudha Extn.,
Leggere, Bangalore - 560 058

First Impression : 2021
Price : Rs. 250/-
Pages : iv + xviii + 242 = 264
Paper Used : 70 GSM Maplitho
Book Size : 1/8th Demmy
Cover page Design :Arunkumar G.

Printed by
SHAKTHI PRINTERS & PUBLISHERS
Bengaluru - 560 058

ಸಿವಿಜಿ ಪಬ್ಲಿಕೇಷನ್ಸ್

ಬೆಂಗಳೂರು

ಬೆಳ್ಳಿಹಬ್ಬದ ಪ್ರಕಟಣೆಗಳು

ಸಂಪಾದಕ ಮಂಡಳಿ

ಮಾಲೆಗಳ ಸಹ ಸಂಪಾದಕರು

ಡಾ. ಚನ್ನವೀರೇಗೌಡ

ಸಂಚಾಲಕರು

ಗಿರಿಜಾ ಗೌಡ

1. **ಬೆಳ್ಳಿ ಬೆರಗು**
   ಮಕ್ಕಳ ಸಾಹಿತ್ಯ – ಎ. ಕೆ. ರಾಮೇಶ್ವರ
2. **ಬೆಳ್ಳಿ ಬೆಳಸು**
   ಜಾನಪದ, ಸಮಾಜ, ವಿಜ್ಞಾನ, ವಿಮರ್ಶೆ, ವೈಚಾರಿಕ, ಸಂಶೋಧನೆ
   – ಡಾ. ಮೀರಾಸಾಬಿಹಳ್ಳಿ ಶಿವಣ್ಣ
3. **ಬೆಳ್ಳಿ ಲೋಕ**
   ಹಿರಿಯ ಲೇಖಕರ ಕೃತಿಗಳು– ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
4. **ಬೆಳ್ಳಿ ಬೆಳಕು**
   ಕುವೆಂಪು ಸಾಹಿತ್ಯ– ಡಾ. ಬೈರಮಂಗಲ ರಾಮೇಗೌಡ
5. **ಬೆಳ್ಳಿ ನೋಟ**
   ಪ್ರವಾಸ ಕಥನ– ಡಿ. ಎಸ್. ಲಿಂಗರಾಜು
6. **ಬೆಳ್ಳಿ ಕಥನ**
   ಕತೆ–ಕಾದಂಬರಿ– ಕಂನಾಡಿಗಾ ನಾರಾಯಣ
7. **ಬೆಳ್ಳಿ ಚಂದಿರ**
   ಮಕ್ಕಳ ಕತೆಗಳು – ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಕಥೆಯೆಂಬುದೇ ಅರ್ಧ ಸತ್ಯ.

ಮನುಷ್ಯನೊಬ್ಬನಿಗೆ ಹೆಂಗರುಳು ಇದ್ದರೆ ಮಾತ್ರ ಭಾವನಾತ್ಮಕತೆ ಹುಟ್ಟಲು ಸಾಧ್ಯ. ಭಾವನಾತ್ಮಕತೆ ಇದ್ದರಷ್ಟೇ ಸೃಜನಾತ್ಮಕತೆ ಒಲಿಯುತ್ತದೆ. ಅಂದರೆ ಲೇಖಕನೊಬ್ಬ ಒಳಗಿನಿಂದ ಹೆಂಗರುಳನ್ನು ಹೊಂದಿದ್ದರೆ ಮಾತ್ರ ಈ ಸೃಜನಾತ್ಮಕತೆ ಹುಟ್ಟಲು ಸಾಧ್ಯ ಎಂದಂತಾಯಿತು. ಬಹುಪಾಲು ಲೇಖಕರು ಮೊದಮೊದಲು ಕವನಗಳಿಂದ ತಮ್ಮ ಪ್ರಲಾಪಗಳನ್ನು ಹೊರಹಾಕಲು ಪ್ರಯತ್ನಿಸುತ್ತಾರೆ. ಅದು ಮಗುವೊಂದು ನಡೆಯಲು ಕಲಿಯುವ ಮುನ್ನಿನ ಅಂಬೆಗಾಲಿನಂತೆ. ಈ ಅಂಬೆಗಾಲಿನ ನಡಿಗೆಯನ್ನೇ ಮತ್ತೆ ಮತ್ತೆ ಪ್ರಯೋಗಿಸಲ್ಪಟ್ಟು ಅದರಲ್ಲೇ ಸೌಖ್ಯವನ್ನು, ಔನ್ನತ್ಯವನ್ನು ಕಂಡುಕೊಂಡವರಿದ್ದಾರೆ. ಆ ಶೈಶವಾವಸ್ಥೆಯಲ್ಲಿ ಹಾಗೂ ಮುಂದೆಯೂ ಕವಿಯಾಗಿ ಉಳಿಯುವವರಲ್ಲಿ ಹೆಂಗರುಳಿನ ಪ್ರಮಾಣ ಅಧಿಕವಾಗಿರುವುದು ಇದಕ್ಕೆ ಕಾರಣವಿರಬಹುದೇನೋ.

ಇನ್ನು ವಿಫಲ ಕವಿತೆಗಳನ್ನು ಬರೆದವರು, ತಮಗೆ ಯಾಕೋ ಇದು ಸರಿಯಾದ ಪ್ರಕಾರವಲ್ಲವೆಂದುಕೊಂಡು ಗದ್ಯದತ್ತ

ಹೊರಳುತ್ತಾರೆ. ಬಹುಶಃ ಮುಂದೆ ದೊಡ್ಡವರಾಗುತ್ತ, ಗಡುಸಾಗುತ್ತ, ಹೆಂಗರುಳಿನ ಪ್ರಮಾಣ ಕಡಿಮೆಯಾಗುತ್ತ ಇಲ್ಲವೇ ಆ ಸೂಕ್ಷ್ಮತೆ ಕಡಿಮೆಯಾಗುತ್ತ ಅವರು ಗದ್ಯದತ್ತ ವಾಲುತ್ತಾರೇನೋ ಗೊತ್ತಿಲ್ಲ.

ಗದ್ಯ ಬರೆಯುವುದು ಪದ್ಯ ಬರೆಯುವಷ್ಟು ಸುಲಭವಲ್ಲ, ಹಾಗಂತ ಪದ್ಯ ಬರೆಯುವುದೂ ಕೂಡ ಗದ್ಯ ಬರೆಯುವಷ್ಟು ಸಲೀಸಲ್ಲ ! ಪದ್ಯದ ಹೆಂಗರುಳು ಇಲ್ಲದೇ ಇದ್ದರೆ ಅಂಥ ಗದ್ಯ ಕೇವಲ ಮೆದುಳಿಗೆ ತಾಗಬಹುದೇ ವಿನಾ ಹೃದಯಕ್ಕಲ್ಲ ಎಂಬಂಥ ಕ್ಲೀಷೆಯನ್ನು ಅರ್ಥ ಮಾಡಿಕೊಳ್ಳುವಷ್ಟರಲ್ಲಿ ಲೇಖಕನ ಪ್ರಯಾಣ ಬಹಳ ದೂರವೇ ಸಾಗಿಬಿಟ್ಟಿರುತ್ತದೆ.

ನಮಗೆ ಬೇಕಿರುವುದು ಹೃದಯಕ್ಕೆ ತಾಗುವ ಗದ್ಯ. ಗದ್ಯವೆಂದರೆ ಬರೀ ಗಡುಸಾದ ವಾಚಾಳಿತನವಲ್ಲ. ಅದರಲ್ಲಿ ಪದ್ಯದ ಹೃದ್ಯ ಅಂಶವೂ ಸಮ್ಮಿಳಿತಗೊಂಡಿರಬೇಕು. ಆಗ ಅದು ನೀಡುವ ಮಾಧುರ್ಯ ಹೃದ್ಯವಾಗಿರುತ್ತದೆ. ಉದಾಹರಣೆಗೆ ದೇವನೂರ ಮಹದೇವರ ಕುಸುಮಬಾಲೆಯ ಗದ್ಯ ಕೇವಲ ಗದ್ಯವಾಗಿರದೇ ಪದ್ಯದ ಲೇಪನವೂ ಹದವಾಗಿ ಬೆರೆತಿರುವುದನ್ನು ತಾವು ಗಮನಿಸಿರಬಹುದು. ಒರಟಾದ ಹೃದಯದ ಮೇಲೂ ಒಂದು ತಣ್ಣನೆಯ ಮೃದು ಗಾಳಿ ಬೀಸಿದಂತೆ ಮನಸ್ಸಿಗೆ ಮುದ ನೀಡುವುದನ್ನು ತನ್ಮಯ ಓದುಗರು ಗಮನಿಸಿರಬಹುದು. ಗದ್ಯದಲ್ಲಿ ಪದ್ಯ ಬೆರೆಯದಿದ್ದರೆ ಅದು ತುಂಬ ಶುಷ್ಕವಾಗಿ ಪರಿಣಮಿಸುತ್ತದೆ. ಹಾಗಾದರೆ ಗದ್ಯ ಪೂರ್ಣ ಗದ್ಯವೂ ಅಲ್ಲ, ಪದ್ಯ ಕೂಡ ಪೂರ್ಣ ಪದ್ಯವೂ ಅಲ್ಲ. ಅಂದರೆ ಗಪದ್ಯ ಮತ್ತು ಪಗದ್ಯಗಳ ಹದವಾದ ಸಮ್ಮಿಶ್ರಣವು ಸದ್ಯದ ಅಗತ್ಯವಿರಬಹುದೇ ಎಂಬ ಜಿಜ್ಞಾಸೆ ಅನೇಕ ಸಲ ನನ್ನನ್ನು ಕಾಡಿದೆ.

ಇದೇ ಮಾತನ್ನು ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಅನ್ವಯಿಸಬಹುದು. ಯಾವುದೇ ಪ್ರಕಾರವಾದರೂ ಸಹ ಅದರಲ್ಲೊಂದು ಕಥೆಯ ಗಮಲು ಗೊತ್ತೋ ಗೊತ್ತಿಲ್ಲದೆಯೋ ಇದ್ದೇ ಇರುತ್ತದೆ. ಕಥೆ–ಕಾದಂಬರಿಯಲ್ಲಿ ಮಾತ್ರವಲ್ಲದೇ ಪ್ರಬಂಧದಲ್ಲೂ ಕಥೆಯಿದೆ, ನಾಟಕದಲ್ಲೂ ಕಥೆ ಇದೆ, ಆತ್ಮಕಥೆ–ಜೀವನಚರಿತ್ರೆಯಲ್ಲೂ ಕಥೆ ಇದೆ, ಪ್ರವಾಸಕಥನದಲ್ಲೂ ಕೂಡ ಕಥೆಯಿದೆ. ಅಷ್ಟೇ ಏಕೆ, ವಿಮರ್ಶೆಯಲ್ಲಿ ಕೂಡ ಕಥೆ ಇದೆ. ಅಂದರೆ ಕಥೆ ಇಲ್ಲದೇ ಸಾಹಿತ್ಯವಿಲ್ಲ ಎಂದಂತಾಯಿತು.

ಹಾಗಾದರೆ ಕಥೆ ಮತ್ತು ಸಾಹಿತ್ಯ ಎರಡೂ ಒಂದೆಯೇ ಎಂದು ಕೇಳಿದರೆ; ಇರಬಹುದು, ಇಲ್ಲದಿರಲೂಬಹುದು ಎಂದುತ್ತರಿಸಬಹುದು. ಕಥೆಯೆಂದರೆ ಹೇಗೆ ಅರ್ಧ ಸತ್ಯ ಹಾಗೂ ಇನ್ನರ್ಧ ಸುಳ್ಳೋ ಹಾಗೆ ಸಾಹಿತ್ಯವೆಂದರೂ ಅರ್ಧ ಸತ್ಯ ಮತ್ತು

ಮತ್ತರ್ಧ ಸುಳ್ಳು. ಸುಳ್ಳು ಎಂದರೆ ಕೀಳುಪಮೆಯಾಗಿ ಅರ್ಥೈಸಬೇಕಿಲ್ಲ. ಅದನ್ನು ಕಲ್ಪನೆ ಎಂದರೂ ಆದೀತು. ಹಾಗೆ ಅರ್ಧ ಸತ್ಯ ಮತ್ತು ಅರ್ಧ ಕಲ್ಪನೆಗಳೆರಡರ ಹದವಾದ ಸಮ್ಮಿಶ್ರಣವು ಸೇರಿದರೆ ತಾನೇ ಪಾಕವಾಗಿ ಪರಿವರ್ತಿತವಾಗುವುದು. ಈ ಪಾಕದಿಂದಲೇ ನಾವು ತಿನ್ನುವ ಯಾವುದೇ ಖಾದ್ಯ ರುಚಿಯನ್ನು ಪಡೆಯುವುದು. ಪಾಕಶಾಸ್ತ್ರ ಪ್ರವೀಣರಿಂದ ಹೇಗೆ ನಮ್ಮ ನಿಜದ ನಾಲಿಗೆಯು ರುಚಿಯನ್ನು ಆಸ್ವಾದಿಸುವುದೋ ಹಾಗೆ ಸಾಹಿತ್ಯಶಾಸ್ತ್ರ ಪ್ರವೀಣರಿಂದ ನಮ್ಮ ಮನಸ್ಸಿನ ನಾಲಿಗೆಯೂ ರುಚಿಯನ್ನು ಕಂಡುಕೊಳ್ಳುವುದು.

ಅಂದರೆ ಸಾಹಿತ್ಯದ ಓದಿಗೆ ಒಂದು ರುಚಿ ಇದೆ ಎಂದಂತಾಯಿತು. ಬರೀ ಸಾಹಿತ್ಯದ ಓದಿಗೇ ಯಾಕೆ, ಎಲ್ಲ ಪ್ರಕಾರದ ಓದಿಗೂ ಒಂದು ರುಚಿ ಇದೆ. ಅದು ವಿಜ್ಞಾನದ ಓದೇ ಆಗಿರಲಿ, ತಂತ್ರಜ್ಞಾನದ ಓದೇ ಆಗಿರಲಿ, ನಾವು ಡ್ರೈ ಅಂದುಕೊಳ್ಳಬಹುದಾದ ರಸಾಯನ ಶಾಸ್ತ್ರದ ಓದೇ ಆಗಿರಲಿ, ಭೂಗರ್ಭ ಶಾಸ್ತ್ರದ ಓದೇ ಆಗಿರಲಿ.. ಅದಕ್ಕೊಂದು ರುಚಿ ಇದ್ದೇ ಇದೆ. ಇಲ್ಲದಿದ್ದರೆ ಅಪಾರವಾಗಿ ಹಸಿದುಕೊಂಡವರಂತೆ ಅಂಬೇಡ್ಕರ್ ಕಾನೂನುಶಾಸ್ತ್ರವನ್ನೂ, ಜಗದೀಶಚಂದ್ರ ಭೋಸ್ ಸಸ್ಯಶಾಸ್ತ್ರವನ್ನೂ, ಎಸ್.ಚಂದ್ರಶೇಖರ್ ಖಗೋಳಶಾಸ್ತ್ರವನ್ನೂ ಓದಬೇಕಿರಲಿಲ್ಲ.

ಆದ್ದರಿಂದ ಎಲ್ಲ ಓದಿಗೂ ಒಂದು ರುಚಿಯಿದೆ, ಒಂದು ಸುಖವಿದೆ, ಒಂದು ಆಮೋದವಿದೆ ಎಂದಂತಾಯಿತು. ಇಂಥದೇ ಸಂತೋಷವನ್ನು ಒಬ್ಬ ಕುಡುಕ ತನ್ನ ಪಾನೀಯದಲ್ಲೂ, ಒಬ್ಬ ಚಟಗಾರ ತನ್ನ ಇಸ್ಪೀಟಿನ ಎಲೆಯಲ್ಲೂ ಕಂಡುಕೊಂಡಿರಬಹುದು. ಅದನ್ನೇ ತನ್ನ ಜೀವನದ ಪರಮೋಚ್ಚ ಸುಖ ಎಂದು ಅನುಭವಿಸುತ್ತಿರಬಹುದು. ಒಬ್ಬ ಧೂಮಪಾನಿಯಂತೆ, ಒಬ್ಬ ಕುದುರೆ ರೇಸಿಗನಂತೆ ಓದುಗ ಕೂಡ ಅಮಲನ್ನು ಅರಸಿಕೊಂಡೇ ಸಾಹಿತ್ಯ ಓದಲು ತೊಡಗುತ್ತಾನೆ. ಒಂದು ಕಾಲದಲ್ಲಿ ಕಾದಂಬರಿಗಳನ್ನು ಓದಬೇಕೆಂದರೆ ನಮ್ಮ ಹೆಣ್ಣುಮಕ್ಕಳು ಪಠ್ಯಪುಸ್ತಕದ ಮಧ್ಯದಲ್ಲಿ ಮರೆಮಾಚಿಕೊಂಡು, ರತಿವಿಜ್ಞಾನದ ಪುಸ್ತಕವನ್ನು ಓದುವಷ್ಟೇ ಅಪಾಯಕಾರಿಯೆನ್ನುವಂತೆ, ಕದ್ದುಮುಚ್ಚಿ ಓದಬೇಕಾಗುತ್ತಿತ್ತು. ಆದರೆ ಈ ಓದು ಎನ್ನುವುದು ದೇಹವನ್ನು ಮೀರಿ ಮನಸ್ಸನ್ನು ಆಕ್ರಮಿಸಿದಾಗ, ಮನಸ್ಸನ್ನು ಮೀರಿ ತಾಧ್ಯಾತ್ಮವನ್ನು ಆವರಿಸಿದಾಗ ಓದಿಗೆ ತನ್ನ ಪರಮೋಚ್ಚ ಗುರಿ ಸಾಧನೆಯಾಗುತ್ತದೆ. ಇಂಥ ಅತ್ಯುಚ್ಚ ಸುಖಕ್ಕಾಗಿಯೇ ಮನುಷ್ಯ ಹಾತೊರೆಯುವುದು. ಇದು ನೆನ್ನೆ-ಇವತ್ತಿನದಲ್ಲ; ಕಾಲದಿಂದಲೂ ಬಂದಿರುವಂಥದು. ಹಿಂದೆ ಬರೆವಣಿಗೆ ಮತ್ತು ಮುದ್ರಣ ಇಷ್ಟು ಸಲೀಸಾಗಿರಲಿಲ್ಲವಾದ ಕಾರಣ ಮಾತಿನಲ್ಲಿ ಕಥೆಗಳೂ, ಹಾಡಿನಲ್ಲಿ ಕಾವ್ಯ-ಪದಗಳು ಹಾಡುಗಬ್ಬವಾಗಿ ಬಾಯ್ದೆರೆಯಾಗಿ ಬಾಯಿಯಿಂದ

ಬಾಯಿಗೆ ಹರಿದುಬಂದಿರುವುದು. ಆದರೆ ಈ ಬಾಯಿಮಾತುಗಳು ಗಾಳಿಯಲ್ಲಿ ತೇಲಿಹೋಗಿ ದಾಖಲಾಗದೇ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡುಬಿಟ್ಟವು. ಆದರೆ ಆಧುನಿಕ ಕಾಲದ ಕೆಲ ಪರಿಕರಗಳಿಂದ ಅವುಗಳ ಸಂರಕ್ಷಣೆ ಸಾಧ್ಯವಾಗಿದೆಯೆಂದು ನಾವು ಭಾವಿಸಬಹುದಾದರೂ ಅದರ ಪ್ರಮಾಣ ಶೇಕಡ ೦.೦೧ನ್ನೂ ಮೀರಿರಲಾರದು.

ಹೀಗಾಗಿ ಕಥನ ನನಗೆ ಯಾವಾಗಲೂ ಕುತೂಹಲದ ಕೇಂದ್ರ.

* * *

ಹಾಗಾಗಿಯೇ ಸಿವಿಜಿ ಪ್ರಕಾಶನ ಸಂಸ್ಥೆಯ ಬೆಳ್ಳಿಹಬ್ಬದ ಸಂಭ್ರಮದಲ್ಲಿ ಏಳು ವಿವಿಧ ಮಾಲೆಗಳಲ್ಲಿ ಒಟ್ಟು ನೂರಾ ಇಪ್ಪತ್ತೈದು ಪುಸ್ತಕಗಳನ್ನು ಪ್ರಕಟಿಸುವ ಇರಾದೆಯನ್ನು ಸಿವಿಜಿ ಚಂದ್ರು ಮುಂದಿರಿಸಿದಾಗ ತಡಮಾಡದೇ ನಾನು ಕಥೆ ಮತ್ತು ಕಾದಂಬರಿಗಳನ್ನುಳ್ಳ 'ಬೆಳ್ಳಿಕಥನ' ಮಾಲೆಯ ಜವಾಬ್ದಾರಿ ನನಗಿರಲಿ ಎಂದು ಆಯ್ದುಕೊಂಡೆ. ಈಗಾಗಲೇ ಬೇರೆ ಬೇರೆ ಸಂದರ್ಭಗಳಲ್ಲಿ ಸಾಹಿತ್ಯ ಪರಿಷತ್ತಿಗೆ (ವರ್ತಮಾನದ ಕಥೆಗಳು), ಸಾಹಿತ್ಯ ಅಕಾಡೆಮಿಗೆ (ಸಣ್ಣ ಕಥೆಗಳು ೨೦೧೨–೨೦೧೩), ಸಿವಿಜಿ ಪಬ್ಲಿಕೇಷನ್ಸ್‌ಗೆ (ಕಾಲ ಕರಗುವ ಮುನ್ನ), ಚಂದ್ರಗಿರಿ ಪ್ರತಿಷ್ಠಾನಕ್ಕೆ (ಕಥಾಭೂಮಿ) ಕಥೆಗಳನ್ನು ಸಂಪಾದಿಸಿ ಪ್ರಕಟಿಸಿ ಯಶಸ್ಸು ಗಳಿಸಿದ್ದ ಅನುಭವದ ಹಿನ್ನೆಲೆಯಲ್ಲಿ ಒಂದು ಭಂಡ ಧೈರ್ಯದಿಂದಲೇ ಮುನ್ನುಗ್ಗಿದೆ. ಅದು ಅಸಾಧ್ಯವಾದದ್ದೇನಲ್ಲವಾದರೂ ಈಗಾಗಲೇ ಪ್ರಸಿದ್ಧ ಪ್ರಕಾಶಕರನ್ನು ಕಂಡುಕೊಂಡಿರುವ ಲೇಖಕರಿಗಿಂತ ಹೊಸಬರಿಗೆ, ಪ್ರಕಾಶನವೆಂಬುದು ಕಗ್ಗಂಟಾಗಿರುವಂಥವರಿಗೆ ಅವಕಾಶ ನೀಡಬೇಕೆನ್ನುವ ಸದಾಶಯದೊಂದಿಗೆ ಒಂದಷ್ಟು ಹೊಸ ಪ್ರತಿಭೆಗಳಿಗೂ ಅವಕಾಶ ನೀಡಲು ಪ್ರಯತ್ನಿಸಿದ್ದೇನೆ. ಅವರುಗಳು ಮುಂದೆ ಹೆಮ್ಮರವಾಗಿ ಬೆಳೆದು ನಿಲ್ಲಲು ನಾವು ಹಾಕುವ ಈ ಸಣ್ಣ ಏಣಿಯೂ ಕಾರಣವಾಗಬಹುದೆಂಬ ಭರವಸೆಯೊಡನೆ, ಈಗಾಗಲೇ ಬೆಳೆದು ನಿಂತಿರುವವರ ಸಾಲಿನಲ್ಲಿಯೇ ಸಮಾನಾಂತರವಾಗಿ ಕುರ್ಚಿ ಹಾಕಿ ಕೂರಿಸುವ ಪ್ರಯತ್ನವನ್ನೂ ಮಾಡಿದ್ದೇನೆ.

ಇಂಥದೊಂದು ಸಂಪಾದನೆಯ ಸಂದರ್ಭದಲ್ಲಿ ನನಗೆ ಸಲಹೆ–ಸಹಕಾರ ನೀಡಿದ ಇದೇ ಯೋಜನೆಯ ಇನ್ನಿತರೆ ಮಾಲೆಗಳ ಸಂಪಾದಕರಾದ ಡಾ.ಮೀರಾಸಾಬಿಹಳ್ಳಿ ಶಿವಣ್ಣ, ಡಾ.ಬೈರಮಂಗಲ ರಾಮೇಗೌಡ, ಡಾ.ಮಲ್ಲೇಪುರಂ ವೆಂಕಟೇಶ ಅವರಿಗೂ ನಾನು ಆಭಾರಿ. ಅಲ್ಲದೇ ಇಂಥ ಮಹಾನುಭಾವರ ಸಾಲಿನಲ್ಲಿ ನನಗೂ ಒಂದು ಸಂಪಾದನೆಯ ಜವಾಬ್ದಾರಿ ವಹಿಸುವಂಥ ಸಹೃದಯತೆ ಮೆರೆದ ಡಾ.ಸಿವಿಜಿ ಚಂದ್ರು ಹಾಗೂ ಶ್ರೀಮತಿ ಗಿರಿಜಾ ಚಂದ್ರು ಅವರಿಗೂ ನನ್ನ ಕೃತಜ್ಞತೆಗಳು

ಸಲ್ಲಲೇಬೇಕು. ಅಲ್ಲದೇ ನನ್ನೆಲ್ಲ ಮೈಗಳ್ಳತನವನ್ನು ಮನ್ನಿಸಿ ತಮ್ಮ ಪುಸ್ತಕಗಳನ್ನು ಈ ಮಾಲೆಯಲ್ಲೇ ಉಳಿಸಿಕೊಂಡು ಸಹನೆಯಿಂದ ಕಾದ ಈ ಮಾಲಿಕೆಯಲ್ಲಿರುವ ಎಲ್ಲ ಸಮಕಾಲೀನ ಕೃತಿಕಾರರಿಗೂ ಪ್ರೀತಿಯ ಧನ್ಯವಾದಗಳು. ಅಂತೆಯೇ ಇವೆಲ್ಲ ಪುಸ್ತಕಗಳ ಮುಖಪುಟಗಳನ್ನು ತಮ್ಮ ಆಪ್ತ ಬಣ್ಣಗಳ ಮೂಲಕ ಶೃಂಗರಿಸಿರುವ ಅಪರೂಪದ ಕಲಾವಿದ ಶ್ರೀ.ಜಿ.ಅರುಣಕುಮಾರ್ ಅವರಿಗೆ, ನನ್ನೆಲ್ಲ ಉಪಟಳಗಳನ್ನು ಸೈರಿಸಿಕೊಂಡು ಡಿ.ಟಿ.ಪಿ. ಹಾಗೂ ಪುಟವಿನ್ಯಾಸ ಮಾಡಿದ ಶ್ರೀಮತಿ ಮಂಜುಳಾ, ಶ್ರೀಮತಿ ಲತಾ ಅವರಿಗೂ ಧನ್ಯವಾದಗಳು. ಅದೇ ರೀತಿ ಈ ಎಲ್ಲರ ಪ್ರಯತ್ನಗಳನ್ನು ಸಾರ್ಥಕಗೊಳಿಸುವಂತೆ ಅಂದವಾಗಿ ಮುದ್ರಿಸಿದ ಶಕ್ತಿ ಪ್ರಿಂಟರ್ಸ್‌ನ ಅಜ್ಞಾತ ಸಿಬ್ಬಂದಿ ವರ್ಗದವರಿಗೂ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಇಷ್ಟೆಲ್ಲ ಮಾಡಿದ್ದು ನಿಮಗಾಗಿ, ನಿಮ್ಮ ಒಂದು ಮುಗುಳು ನಗೆಗಾಗಿ. ಅಂಥದೊಂದು ಓದಿನ ಸುಖ, ಖುಷಿ ತಮ್ಮದಾಗಿದ್ದಲ್ಲಿ ನಮಗೊಂದು ಮಾತು ತಿಳಿಸಿ, ನಾವೂ ಆಹ್ಲಾದಗೊಳ್ಳುತ್ತೇವೆ. ಈ ಎಲ್ಲ ಶ್ರಮದ ಹಿಂದಿನ ಬೆವರನ್ನು ಒರೆಸಿಕೊಂಡು ನೆಮ್ಮದಿಯ ನಿಟ್ಟುಸಿರೊಂದನ್ನು ಬಿಡಲು ತಹತಹದಿಂದ ಕಾದಿದ್ದೇವೆ..

– ಕಂನಾಡಿಗಾ ನಾರಾಯಣ
ಸಂಪಾದಕರು, ಬೆಳ್ಳಿ ಕಥನ ಮಾಲೆ

ಅರಿಕೆ

ನಾನು ಆಗಾಗ್ಗೆ ಹಿಂದಿ ಮತ್ತು ಇಂಗ್ಲಿಷಿನಿಂದ ಅನುವಾದಿಸಿದ ಕಥೆಗಳು ಇಲ್ಲಿ ಸೇರಿವೆ. ನಮ್ಮ ದೇಶದ ಹೆಸರಾಂತ ಕಥೆಗಾರರಾದ ಪ್ರೇಮಚಂದ್, ಅಮೃತಾ ಪ್ರೀತಮ್, ಒರಿಯಾದ ಲಕ್ಷ್ಮೀನಾಥ್ ಬೇಜ್ ಬರುವಾ ಅವರ ಜೊತೆ ಅನಿವಾಸಿ ಭಾರತೀಯ ಲೇಖಕರ ಕಥೆಗಳು ಇಲ್ಲಿವೆ. ಈ ಭಾರತೀಯ ಲೇಖಕರ ಕಥೆಗಳ ಜೊತೆಯಲ್ಲಿ ಅಮೆರಿಕ, ರಷ್ಯಾ, ಜಪಾನ್, ಫ್ರಾನ್ಸ್, ಇಟಲಿ, ಲ್ಯಾಟಿನ್ ಅಮೆರಿಕಾ (ಮೆಕ್ಸಿಕೋ) ಮತ್ತು ನಮ್ಮದೇ ನೆರೆಯ ದೇಶವಾದ ಪಾಕಿಸ್ತಾನೀ ಲೇಖಕರ ಕಥೆಗಳೂ ಇಲ್ಲಿವೆ. ಇವರಲ್ಲಿ ಕೆಲವರು ನೊಬೆಲ್ ಪುರಸ್ಕೃತರು. ನಮ್ಮ ದೇಶದ ಲೇಖಕರ ಕಥೆಗಳನ್ನು ಹಿಂದೀ ಮೂಲದಿಂದ ಅನುವಾದಿಸಿದ್ದರೆ ವಿದೇಶೀ ಕಥೆಗಳನ್ನು ಇಂಗ್ಲಿಷ್ ಮೂಲದಿಂದ ಅನುವಾದಿಸಿದ್ದೇನೆ.

ಶ್ರೇಷ್ಠ ಕಥೆಗಾರರ ಕಥೆಗಳಿಂದ ಕನ್ನಡದ ಸಣ್ಣ ಕಥೆಗಳ ಕಣಜ ಅತ್ಯಂತ ಶ್ರೀಮಂತವೂ ಸಂಪದ್ಭರಿತವೂ ಆಗಿದೆ. ಹಾಗಿದ್ದಾಗ ಈ ಅನ್ಯಭಾಷೆಯ ಕಥೆಗಳು ಕನ್ನಡಕ್ಕೆ ಬೇಕಿತ್ತೆ?

ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಭೂಮಿ ಒಂದೇ ಬಣ್ಣದ ಮಣ್ಣಿನಿಂದ ಕೂಡಿಲ್ಲ. ನಮ್ಮ ನೆಲದ ಬಣ್ಣ ಎಷ್ಟು ಗಾಢವಾಗಿದೆ ಅಥವಾ ಅನ್ಯರ ನೆಲಕ್ಕಿಂತ ಹೇಗೆ ಭಿನ್ನವಾಗಿದೆ, ಅಲ್ಲಿಯ ಜನರ ಬದುಕು, ಬವಣೆಗಳು ನಮ್ಮದಕ್ಕಿಂತ ಹೇಗೆ ಭಿನ್ನವಾಗಿವೆ ಎಂಬುದನ್ನು ಅರಿಯಲು ಮತ್ತು ನಮ್ಮ ಕಥಾ ಕಣಜ ಅದೆಷ್ಟು ಅಮೂಲ್ಯವಾದುದು ಎಂದು ಅರಿಯಲೂ ಬೇರೆ ಕಡೆಗೆ ಆಗಾಗ್ಗೆ ಕಣ್ಣು ಹಾಯಿಸಿ ನೋಡುವುದು ಅಗತ್ಯವಾಗಬಹುದು ಎನಿಸಿ ಇವುಗಳನ್ನು ಕನ್ನಡಿಸುವ ಧೈರ್ಯ ಮಾಡಿದೆ. ಕಥೆಗಳಿಗೆ ಕೊನೆಯೆಲ್ಲಿ?

ಆತ್ಮೀಯ ಮಿತ್ರರೂ ಖ್ಯಾತ ಲೇಖಕರೂ ಆದ ಡಾ. ಮೀರಾಸಾಬಿಹಳ್ಳಿ ಶಿವಣ್ಣನವರು ಈಗ್ಗೆ ಕೆಲವು ತಿಂಗಳ ಹಿಂದೆ ಸಿವಿಜಿ ಪ್ರಕಾಶನ ಬೆಳ್ಳಿಹಬ್ಬದ ಸಂದರ್ಭಕ್ಕಾಗಿ ಹೊರತರುತ್ತಿರುವ ಗ್ರಂಥಮಾಲೆಯಲ್ಲಿ ನನ್ನದೂ ಒಂದು ಪುಸ್ತಕ ಇರಲೆಂದು ಅಪೇಕ್ಷಿಸಿದರು. ಅವರು ಕೇಳಿದಾಗ ನಾನು ಬೇರೆ ಕೆಲಸದಲ್ಲಿ ತೊಡಗಿದ್ದೆನಾಗಿ ಕೂಡಲೇ ಕೊಡಲಾಗಲಿಲ್ಲ. ಆದರೆ ಆ ಗ್ರಂಥಗಳ ಮಾಲೆಯಲ್ಲಿ ಸೇರಲು ಇನ್ನೂ ಕಾಲಾವಕಾಶವಿದೆಯೆಂದು ತಿಳಿದು ಇದನ್ನು ಕೊಡುತ್ತೇನೆಂದು ಹೇಳಿದೆ. ಈ ಪ್ರೀತಿಯ ಒತ್ತಾಯಕ್ಕಾಗಿ ಮಿತ್ರ ಶಿವಣ್ಣನವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಇದಕ್ಕೊಂದು ಅರ್ಥಪೂರ್ಣವಾದ ಬೆನ್ನುಡಿ ಬರೆದಿರುವ ಈ ಮಾಲೆಯ ಸಂಪಾದಕರಾದ ಕಂನಾಡಿಗಾ ನಾರಾಯಣ ಅವರಿಗೂ ನಾನು ಆಭಾರಿ. ಇಷ್ಟೊಂದು ಪುಸ್ತಕಗಳನ್ನು ಹೊರತರುತ್ತಿರುವ ಡಾ. ಸಿವಿಜಿ ಚಂದ್ರು ಅವರ ಸಾಹಸ ನಿಜಕ್ಕೂ ಅತ್ಯಂತ ಅಭಿನಂದನೀಯವಾದ್ದು. ನನ್ನದನ್ನೂ ಆ ಮಾಲೆಯಲ್ಲಿ ಸೇರಿಸಿಕೊಳ್ಳಲು ಸಮ್ಮತಿಸಿದ್ದಕ್ಕೆ ನಾನು ಅವರಿಗೆ ಕೃತಜ್ಞ. ಹಾಗೆಯೇ ಸುಂದರ ಮುಖಪುಟ ರಚಿಸಿಕೊಟ್ಟ ಕಲಾವಿದ ಅರುಣ್‌ಕುಮಾರ್ ಅವರಿಗೂ ಧನ್ಯವಾದಗಳು.

ಇಲ್ಲಿ ಸೇರಿರುವ ಕಥೆಗಳಲ್ಲಿ ಕೆಲವು 'ಈ ಭಾನುವಾರ', 'ಮಯೂರ' ಮತ್ತು 'ಉತ್ಥಾನ' ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು. ಹೀಗೆ ಮೊದಲಿಗೆ ಇವಕ್ಕೆ ಆಶ್ರಯಕೊಟ್ಟ ಆ ಸಂಪಾದಕರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

– ಡಾ.ಆರ್. ಲಕ್ಷ್ಮೀನಾರಾಯಣ

ಅರ್ಪಣೆ

ಹಿರಿಯ
ಬಂಧು
ಕೀರ್ತಿಶೇಷ
ಎಚ್. ಎನ್. ಗೋಪಾಲರಾಯರ
ಸವಿನೆನಪಿಗೆ

ಪರಿವಿಡಿ

ಸ್ವದೇಶೀ ಕಥೆಗಳು

ವಿದೇಶೀ ಕಥೆಗಳು

ಹೆಂಡತಿ

ಅಸ್ಸಾಮೀ ಮೂಲ : ಲಕ್ಷ್ಮೀನಾಥ್ ಬೇಜ್ ಬರೂವಾ

ಶಿಶುರಾಮನು ಆಗತಾನೆ ಹೊಲದಿಂದ ಬಂದು ನೇಗಿಲನ್ನು ಒಂದುಕಡೆ ಇಟ್ಟ. ಬೇಗಬೇಗ ಒಂದು ಕಾಗೆಸ್ನಾನ ಮಾಡಿ ಬಟ್ಟೆ ಬದಲಾಯಿಸಿಕೊಂಡು ಕೂಡಲೇ ಅಡಿಗೆಮನೆಗೆ ಧಾವಿಸಿದ. ಅವನ ಹೆಂಡತಿ ಭಾದಾರಿ ಮಧ್ಯಾಹ್ನದ ಅಡುಗೆ ಮಾಡುತ್ತಿದ್ದಳು. ಇನ್ನೂ ಅನ್ನಕ್ಕೆ ಇಟ್ಟಿರಲಿಲ್ಲ. ತರಕಾರಿ ಅಣಿಮಾಡಿರಲಿಲ್ಲ. ನೋಡುತ್ತಿದ್ದ ಹಾಗೆಯೇ ಶಿಶುರಾಮನು ಕನಲಿ ಕೆಂಡವಾದನು. ನೋಡುತ್ತಾನೆ ಇನ್ನೂ ತರಕಾರೀನೇ ಹೆಚ್ಚಿಲ್ಲ. ಬಾಳೆಎಲೆ ಮೇಲೆ ಚಾಕು ನವಿಲಿನ ಹಾಗೆ ಬಿದ್ದಿದೆ. ಧೂಳು ಮೆತ್ತಿದ ಮೀನು ಗಾಂಜಾ ಕುಡಿದ ಬೈರಾಗಿಯ ಹಾಗೆ ನೆಲದಮೇಲೆ ಹೊರಳಾಡುತ್ತಾ ಇದೆ. ಅಲ್ಲೇ ಒಂದುಕಡೆ ಭಾದಾರಿ ಕಣ್ಣುತುಂಬಾ ಹೊಗೆ ಕವಿದುಕೊಂಡು ಬೆಂಕಿಯನ್ನು ಹೊತ್ತಿಸಲು ಒಲೆ ಊದುತ್ತಿದ್ದಾಳೆ. ಇನ್ನೂ ಏನೂ ಮಾಡಿಲ್ಲವೆನ್ನುವುದನ್ನು ನೋಡಿ ಶಿಶುರಾಮನು ಉರಿದು ಬಿದ್ದನು. ಬೆಳಿಗ್ಗೆಯಿಂದಲೇ ಅವನ ತಲೆ ಕೆಟ್ಟುಹೋಗಿತ್ತು. ಆ ಹೊತ್ತು ಕೃಷ್ಣಪಕ್ಷದ ಏಕಾದಶಿಯ ದಿನವಾದ್ದರಿಂದ ಹೊಲಕ್ಕೆ ಆರು ಊಡುವಂತಿರಲಿಲ್ಲ. ಆದರೆ ಎತ್ತುಗಳೇನು ಅವನಿಗೆ ಕಡಿಮೆ

ಕಾಟ ಕೊಟ್ಟಿದ್ದವೆ..? ಸಾಲದ್ದಕ್ಕೆ ಪಕ್ಕದ ಹೊಲದ ಬಾಹುವಾನಿಗೂ ಅವನಿಗೂ ಜಗಳ ಬೇರೆ ಆಗಿತ್ತು. ಬೈದಾಟದಿಂದ ಪ್ರಾರಂಭಿಸಿ ಕೈಕೈ ಮಿಲಾಯಿಸುವ ಘಟ್ಟಕ್ಕೆ ಬರುವುದಕ್ಕೆ ಮುಂಚೆಯೇ ಬಾಹುವಾ ಅಲ್ಲಿಂದ ಕಂಬಿಕಿತ್ತು ಹೇಗೋ ಏನೊ ಬಚಾವಾಗಿದ್ದ. ಅದೇ ಅದುಮಿಟ್ಟಿದ್ದ ಸಿಟ್ಟು ಈಗ ಭಾದಾರಿಯ ಮೇಲೆ ಎರಗಿತು. ಹೆಂಗಸಿನ ಮೇಲೆ ಪರಾಕ್ರಮ ತೋರಿಸುವುದೆಂದರೆ ಅದು ಅತ್ಯಂತ ನಿರಪಾಯಕಾರಿಯದ್ದು. ಆದದ್ದಾದರೂ ಅದೇ. ಬಾಹುವಾನಿಗೆ ಸಿಗಬೇಕಾಗಿದ್ದ ಶಿಕ್ಷೆಯನ್ನು ಈಗ ಶಿಶುರಾಮನು ಅಸಲು- ಬಡ್ಡಿ ಸಮೇತ ಭಾದಾರಿಗೆ ಕೊಟ್ಟುಬಿಟ್ಟನು.ಅದಕ್ಕೆ ತಕ್ಕನಾಗಿ ಒಂದು ನೆಪವೂ ಸಿಕ್ಕಿಬಿಟ್ಟಿತು. ದನಗಳಿಗೆ ಮೇವು ಹಾಕಲು ಇಷ್ಟೇಕೆ ತಡಮಾಡಬೇಕಾಗಿತ್ತು ಅವಳು..?

ಭೂಮಿತಾಯಿಯ ಹಾಗೆ ಎಲ್ಲ ಹೊಡೆತಗಳನ್ನೂ ಸಹಿಸಿಕೊಂಡು ಹೋಗುವುದು ಭಾದಾರಿಗೆ ಅಭ್ಯಾಸವಾಗಿಬಿಟ್ಟಿತ್ತು. ದಾಂಪತ್ಯ ಜೀವನವೆಂದರೆ ಊಟ-ತಿಂಡಿಗಳ ಹಾಗೆ ಗಂಡನ ಹೊಡೆತ- ಬಡಿತಗಳನ್ನೂ ಸಹಿಸಿಕೊಳ್ಳಬೇಕಾಗುತ್ತದೆ ಎನ್ನುವುದು ಆಕೆಗೆ ಖಚಿತವಾಗಿಬಿಟ್ಟಿತ್ತು. ಶಿಶುರಾಮನ ವಿಷಯಕ್ಕೆ ಭಕ್ತಿ ತೋರುವುದರಲ್ಲೇ ತನಗೆ ಮುಕ್ತಿ ಇದೆ ಎಂದು ಅವಳಿಗೆ ಅನ್ನಿಸುತ್ತಿತ್ತು.

ಆದರೆ ಪ್ರತಿಯೊಂದು ವಿಷಯಕ್ಕೂ ಒಂದು ಮಿತಿ ಅಂತ ಇರುತ್ತೆ. ಅಷ್ಟೇಕೆ ಭೂಮಿ ತಾಯಿ ಕೂಡ ಭೂಕಂಪದ ಮೂಲಕ ತನ್ನ ಪ್ರತಿಭಟನೆಯನ್ನು ತೋರುತ್ತಾಳೆ. ಹಾಗಾಗಿ ಆ ಬಡಪಾಯಿ ಭಾದಾರಿ ಈ ಅನ್ಯಾಯದ ವಿರುದ್ಧ ಬಂಡೆದ್ದಿದ್ದರೆ ಅದರಲ್ಲಿ ಅಸಹಜವಾದ್ದು ತಾನೆ ಏನಿತ್ತು...?

ಭಾದಾರಿ ಒಲೆ ಹೊತ್ತಿಸಲು ಒದ್ದಾಡಿ ಸೋತುಹೋಗಿದ್ದಳು. ಶಿಶುರಾಮನು ದೂರದಿಂದಲೇ ಸುಳ್ಳು ದೋಷಾರೋಪಣೆ ಮಾಡುವ ಭಂಗಿಯಲ್ಲಿ ಹೇಳಿದ-ಎಷ್ಟು ಹೊತ್ತು ಆಗಿದೆ ಅಂತ ಏನಾದರೂ ಜ್ಞಾನ ಇದೆಯಾ..?ಕೋಪದಿಂದ ಅವನ ಮುಖ ಮತ್ತು ಕಣ್ಣುಗಳು ಕೆಂಪಾದವು.

ಮುಖ ಸೊಟ್ಟಗೆ ಮಾಡಿ ಕೊಂಡು ಭಾದಾರಿಯೂ ಒರಟು ದನಿಯಲ್ಲಿ ಹೇಳಿದಳು- ನನ್ನ ತಲೆಬುರುಡೆಯನ್ನು ಒಲೆಯೊಳಗಿಟ್ಟು ಒಲೆ ಹೊತ್ತಿಸಿ ಬಿಡಲೆ..? ಮನೆಯಲ್ಲಿ ಒಂದು ಸೌದೆಯ ತೊಗಟೇನೂ ಇಲ್ಲ. ಹಸಿ ಸೌದೆ ಹೊತ್ತಿಸಿ ಹೊತ್ತಿಸಿ ಸಾಕಾಗಿಹೋಗಿದೆ. ಸರಿಯಾಗಿ ಹಿಂದೆ ಮುಂದೆ ಯೋಚನೆ ಮಾಡದೆ ಸಿಟ್ಟಿಗೇಳಬೇಡ. ಅವಳ ಬಾಡಿದ ಕಣ್ಣುಗಳಿಂದ ಕಣ್ಣೀರಿನ ಹೊನಲೇ ಹರಿಯಿತು.

'ಏನು ಬೊಗಳಿದೆ ಬೋಸುಡಿ..? ನಾಯಿಮುಂಡೆ' ಎಂದು ಜೋರಾಗಿ ಹೂಂಕರಿಸುತ್ತ ಬಾಳೆಎಲೆ ಮೇಲೆ ಇಟ್ಟಿದ್ದ ಚಾಕು ಎತ್ತಿಕೊಂಡು ಭಾದಾರಿಯ ಭುಜಕ್ಕೆ ತಿವಿದುಬಿಟ್ಟನು.

ಗಲಾಟೆ ಕೇಳಿಸಿಕೊಂಡು ಶಿಶುರಾಮನ ತಮ್ಮ ಕೇಲಾರಾಮನು ಅವನನ್ನು ಬಲವಂತವಾಗಿ ದಬ್ಬಿಕೊಂಡು ಹೊರಗೆ ಕರೆದುಕೊಂಡು ಹೋದನು. ಆ ನತದೃಷ್ಟ ಹೆಣ್ಣು ಭಾದಾರಿ ರಕ್ತ ಬಸಿಯುತ್ತಿರುವ ದೇಹದೊಂದಿಗೆ ನೆಲದಮೇಲೆ ಬಿದ್ದುಕೊಂಡಿದ್ದಳು.

ಅನಂತರ ಭಾದಾರಿಯನ್ನು ಆಸ್ಪತ್ರೆಗೆ ಕಳಿಸಿಕೊಡಲಾಯಿತು. ಎರಡು ದಿನ ಅವಳು ಪ್ರಜ್ಞಾಹೀನಳಾಗಿದ್ದಳು. ಮೂರನೇ ದಿನ ಪ್ರಜ್ಞೆ ಬಂತು. ಪ್ರಜ್ಞೆ ಬರುತ್ತಿದ್ದಂತೆ ಅವಳು ಸುತ್ತಲೂ ಬೇರೆ ಯಾರನ್ನೋ ಹುಡುಕುತ್ತಿರುವಂತೆ ಕಂಡಳು. ಅವಳ ಹಾಸಿಗೆಯ ಪಕ್ಕ ಯಾರೋ ಆತಂಕದಿಂದ ತಾನು ಯಾವಾಗ ಎಚ್ಚರಗೊಳ್ಳುವೆನೋ ಎಂಬ ನಿರೀಕ್ಷೆಯಿಂದ ಖಂಡಿತಾ ಕೂತಿರುತ್ತಾರೆಂದು ಅವಳಿಗೆ ಒಂದು ಭರವಸೆ ಇತ್ತು. ವಾರ್ಡರ್ ತನ್ನ ಹತ್ತಿರ ಬಂದಾಗ 'ಅವನೆಲ್ಲಿ..?' ಎಂದು ಕೇಳಿದಳು.

ಯಾರ ವಿಷಯ ನೀನು ಮಾತಾಡ್ತಿರೋದು..? ವಾರ್ಡರ್‌ಗೆ ಏನೂ ಅರ್ಥವಾಗಲಿಲ್ಲ. ಸ್ವಲ್ಪ ಹೊತ್ತು ಸುಮ್ಮನಿದ್ದು ಅವಳು ಮತ್ತೆ ಹೇಳಿದಳು–"ನನ್ನ ಯಜಮಾನರು" "ಆ ಬದ್ಮಾಶ್‌ನೆ?" "ಅವನು ಈಗ ಅರೆಸ್ಟಾಗಿ ಜುಡಿಷಿಯಲ್ ಕಷ್ಟಡಿಯಲ್ಲಿದ್ದಾನೆ ಅವನನ್ನು ಇಲ್ಲಿಗೆ ಕರೆದುಕೊಂಡು ಬನ್ನಿ", "ಡಾ.ಸಾಹೇಬರೆ" ಭಾದಾರಿಯ ದನಿಯಲ್ಲಿ ಅಪಾರ ವಿನಯವಿತ್ತು. "ಅದು ಹೇಗೆ ಸಾಧ್ಯ..?" "ಅವನು ಈಗ ಕಷ್ಟಡಿಯಲ್ಲಿದ್ದಾನೆ. ಅವನ ವಿಷಯ ಮಾತಾಡಬೇಡ. ಅದರಿಂದ ನಿನಗೆ ಕೆಡುಕಾಗುತ್ತೆ."

ಭಾದಾರಿ ಕಣ್ಣು ಮುಚ್ಚಿಕೊಂಡಳು. ಒಂದು ಗಳಿಗೆಯ ನಂತರ ಅವಳು ಮೂರ್ಛೆ ಹೋದಳು. ಡಾಕ್ಟರು ಬಂದರು. ವಿಷಯ ಎಲ್ಲ ಕೇಳಿ ಶಿಶುರಾಮನನ್ನು ಕರೆದುಕೊಂಡು ಬರಲು ಆದೇಶಿಸಿದರು. ಕರೆತರಲು ಎಲ್ಲ ವ್ಯವಸ್ಥೆಯಾಯಿತು. ಶಿಶುರಾಮನು ಭಾದಾರಿಯ ಹಾಸಿಗೆಯ ಬಳಿ ಬಂದನು. ಅದರ ಉದ್ದೇಶ ಅವಳಿಗೆ ಪ್ರಜ್ಞೆ ಬಂದ ಕೂಡಲೇ ಅವನನ್ನು ನೊಡಲು ಸಾಧ್ಯವಾಗಲಿ ಎನ್ನುವುದು.

ಮರುದಿನ ಪ್ರಜ್ಞೆ ಬರುತ್ತಿದ್ದ ಹಾಗೆಯೇ ತನ್ನ ಗಂಡನ ಕೈಬೆರಳುಗಳು ತನ್ನ ತಲೆಗೂದಲೊಂದಿಗೆ ಆಟವಾಡುತ್ತಿರುವುದನ್ನು ಅವಳು ಕಂಡಳು. ಅವನನ್ನು ನೋಡಿ ಅವಳ ಮನಸ್ಸಿಗೆ ನೆಮ್ಮದಿಯೆನಿಸಿತು.ಅವಳು ಮುಗುಳ್ನಗುತ್ತ ಕೇಳಿದಳು– "ಹೇಗಿದ್ದಿ..? ಹೊತ್ತಿಗೊತ್ತಿಗೆ ಸರಿಯಾಗಿ ಊಟ ಸಿಗುತ್ತಾ ಇದೆಯಾ..? ಖಂಡಿತವಾಗಿಯೂ ನಿನಗೆ ತುಂಬ ಕಷ್ಟ ಆಗ್ತಿದೆ. ಹೆದರುವಂಥದ್ದೇನೂ ಇಲ್ಲ. ಈಗ ಮೂರು ನಾಲ್ಕು ದಿನದಲ್ಲಿ ನಾನು ಸರಿಹೋಗಿಬಿಡ್ತೀನಿ. ನನ್ನನ್ನು ಇಲ್ಲಿಂದ ಯಾವಾಗ ಕರೆದುಕೊಂಡುಹೋಗ್ತಿ..? ದಿನ ಗೊತ್ತು ಮಾಡು. ಈಗ ಇನ್ನೂ ಹೆಚ್ಚು ದಿನ ಇಲ್ಲಿರುವುದು ನನಗೆ ಸರಿಕಾಣುತ್ತಿಲ್ಲ. ನಿನ್ನ ಸೇವೆಯಲ್ಲೇ ದಿನಗಳು ಕಳೆದು ಹೋಗುತ್ತವೆ."

ಎರಡು ಹನಿ ಕಣ್ಣೀರು ಶಿಶುರಾಮನ ಕೆನ್ನೆಗಳ ಮೇಲಿಂದ ಹರಿದು ಕೆಳಗೆ ತೊಟ್ಟಿಕ್ಕಿತು. ಡಾಕ್ಟರು ಬಂದಮೇಲೆ ಭಾದಾರಿ ದೈನ್ಯದಿಂದ ಹೇಳಿದಳು–"ಸ್ವಾಮಿ ಅವನು ನಿರಪರಾಧಿ. ಅವನನ್ನು ಬಿಟ್ಟುಬಿಡಿ. ನಾನೇ ಚಾಕು ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳೋದಕ್ಕೆ ಹೊರಟಿದ್ದೆ." ಅವಳ ಕಣ್ಣುಗಳಿಂದ ಕಣ್ಣೀರಿನ ಧಾರೆ ಹರಿಯತೊಡಗಿತು.

ಈ ಮಾತನ್ನು ಕೇಳಿ ಎಲ್ಲರೂ ಮೂಕವಿಸ್ಮಿತರಾದರು. ಶಿಶುರಾಮನಿಗೆ ಇನ್ನು ತಡೆಯಲಾಗಲಿಲ್ಲ. ಅವನು ಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದನು.

"ಡಾಕ್ಟ್ರೇ ಅವಳ ಮಾತು ಏನೇನೂ ಸರಿ ಇಲ್ಲ. ಅವಳಿಗೆ ಚಾಕು ಹಾಕಿದವನು ನಾನೇ. ನನಗೆ ಶಿಕ್ಷೆಕೊಡಿ. ನಾನು ತಪ್ಪಿತಸ್ಥ. ನಾನೇ ಅವಳಿಗೆ ಚಾಕು ಹಾಕಿದವನು." ಉದ್ವೇಗದಲ್ಲಿ ಅವನು ಬಾಯಿಗೆ ಬಂದಹಾಗೆ ಏನೇನೋ ವದರಿದ.

ಒಂದು ವಾರದ ನಂತರ ಭಾದಾರಿ ಆಸ್ಪತ್ರೆಯಿಂದ ಡಿಸ್ ಛಾರ್ಜ್ ಆಗಿ ಮನೆಗೆ ಬಂದಳು. ಶಿಶುರಾಮನನ್ನು ಶಿಕ್ಷೆಯಿಂದ ಬಚಾವ್ ಮಾಡಲು ಅವಳು ಬಹಳಷ್ಟು ಪ್ರಯತ್ನಿಸಿದಳಾದರೂ ಯಶಸ್ವಿಯಾಗಲಿಲ್ಲ.

ಕಾನೂನು ಅವನನ್ನು ಬಿಡಲಿಲ್ಲ. ಶಿಶುರಾಮನಿಗೆ ಮೂರುತಿಂಗಳ ಕಾರಾಗೃಹವಾಸದ ಕಠಿಣ ಶಿಕ್ಷೆ ಆಯಿತು. ಅವನು ತನ್ನ ಪಾಪಗಳಿಗಾಗಿ ಪ್ರಾಯಶ್ಚಿತ್ತವನ್ನನುಭವಿಸಲು ನಗುಮುಖದಿಂದ ಜೈಲಿಗೆ ಹೋದನು.

ಆದರೆ ಭಾದಾರಿಗೆ ತಾನೇ ಎಲ್ಲ ಅನರ್ಥಗಳ ಮೂಲ ಎನಿಸಿತು. ಹಾಗಾಗಿ ಅವಳು ತನ್ನನ್ನು ತಾನೇ ನಿಂದಿಸಿಕೊಂಡಷ್ಟು ಬೇರೆ ಯಾರಾದರೂ ಅವಳನ್ನು ನಿಂದಿಸಲು ಸಾಧ್ಯವೇ..?

❖

ಪ್ರಾರ್ಥನೆ

ಮೂಲ ಹಿಂದೀ ಲೇಖಕರು : ಪ್ರೇಮಚಂದ್

ಸರ್ಕಾರೀ ಅನಾಥಾಲಯದಿಂದ ಹೊರದೂಡಿ ನನ್ನನ್ನು ಸೇನೆಯಲ್ಲಿ ಸೇರಿಸಲಾಯಿತು. ನನ್ನ ಶರೀರ ದಷ್ಟಪುಷ್ಟವಾಗಿ ಬಲಿಷ್ಠವಾಗಿತ್ತು. ಸಾಧಾರಣ ಮನುಷ್ಯರಿಗಿಂತ ನನ್ನ ಕೈ ಕಾಲುಗಳು ಉದ್ದವಾಗಿ ಮಾಂಸಖಂಡಗಳಿಂದ ಕೂಡಿಕೊಂಡಿದ್ದುವು. ನನ್ನ ಎತ್ತರ ಪೂರಾ ಆರು ಅಡಿ ಒಂಬತ್ತು ಅಂಗುಲ ಇತ್ತು. ಸೇನಾ ದಳದಲ್ಲಿ ನಾನು 'ದೇವ' ಎಂಬ ಹೆಸರಿನಿಂದ ಖ್ಯಾತನಾಗಿದ್ದೆ. ನಾನು ಸೈನ್ಯಕ್ಕೆ ಸೇರಿದಾಗಿನಿಂದ ನನ್ನ ಅದೃಷ್ಟವೂ ಬದಲಾಗತೊಡಗಿತು. ನನ್ನಿಂದ ಅದೆಂಥೆಂಥ ಕೆಲಸಗಳಾದುವೆಂದರೆ ಅವುಗಳಿಂದ ಪ್ರತಿಷ್ಠೆಯೊಂದಿಗೆ ನನ್ನ ಆದಾಯವೂ ಹೆಚ್ಚುತ್ತ ಹೋಯಿತು. ನಮ್ಮ ದಳದ (ಪ್ಲೆಟೂನಿನ) ಸೈನಿಕನಿಗೂ ನಾನು ಯಾರೆಂದು ಗೊತ್ತಿತ್ತು. ಮೇಜರ್ ಸರದಾರ್ ಹಿಮ್ಮತ್ ಸಿಂಹರ ಕೃಪೆ ನನ್ನ ಮೇಲೆ ಬಹಳವಾಗಿತ್ತು. ಕಾರಣ ನಾನು ಒಮ್ಮೆ ಅವರ ಪ್ರಾಣವನ್ನು ರಕ್ಷಿಸಿದ್ದೆ. ಇದರ ಹೊರತಾಗಿಯೂ ಅದೇಕೋ ಏನೋ ಅವರನ್ನು ನೋಡಿದ ಕೂಡಲೇ ನನ್ನ ಹೃದಯುದಲ್ಲಿ ಭಕ್ತಿ ಮತ್ತು ಶ್ರದ್ಧೆ ಉಂಟಾಗುತ್ತಿತ್ತು.ಇವರು ನನಗೆ ಪೂಜ್ಯರು ಎಂದೇ ನಾನು

ಯಾವಾಗಲೂ ತಿಳಿಯುತ್ತಿದ್ದೆ . ಸರದಾರ್ ಸಾಹೇಬರೂ ನನ್ನೊಂದಿಗೆ ಸ್ನೇಹದಿಂದ ನಡೆದುಕೊಳ್ಳುತ್ತಿದ್ದರು.

ನನಗೆ ನನ್ನ ತಂದೆ ತಾಯಿ ಯಾರೆಂದು ತಿಳಿದಿಲ್ಲ. ಅವರ ನೆನಪು ಕೂಡ ನನಗಿಲ್ಲ. ಈ ಬಗ್ಗೆ ಯೋಚಿಸುತ್ತ ಕುಳಿತೆನೆಂದರೆ ಕೆಲವು ಮಸಕು ಮಸಕಾದ ದೃಶ್ಯಗಳು ತೇಲಿ ಬರುತ್ತವೆ. ಅವುಗಳೆಂದರೆ ದೊಡ್ಡ ದೊಡ್ಡ ಪರ್ವತಗಳ ನಡುವೆ ವಾಸಿಸುತ್ತಿದ್ದ ಒಂದು ಕುಟುಂಬ ಮತ್ತು ಬಹುಶಃ ನನ್ನ ತಾಯಿ ಆಗಿದ್ದಿರಬಹುದಾದ ಒಂದು ಹೆಣ್ಣಿನ ಮುಖ. ಮಲೆಸೀಮೆಯ ನಡುವೆಯೇ ನಾನು ಹುಟ್ಟಿ ಬೆಳೆದೆ. ಪೆಶಾವರದಿಂದ 80 ಮೈಲಿ ದೂರದಲ್ಲಿ 'ಕುಲಾಹಾ' ಎಂಬ ಒಂದು ಹಳ್ಳಿ ಇದೆ. ಅಲ್ಲೇ ಒಂದು ಸರ್ಕಾರೀ ಅನಾಥಾಲಯವಿದೆ. ಇದರಲ್ಲೇ ನಾನು ಬೆಳೆದು ದೊಡ್ಡವನಾದೆ. ಇಲ್ಲಿಂದ ಹೊರಟು ಬಂದು ಸೀದಾ ಸೇನೆಗೆ ಸೇರಿಕೊಂಡೆ. ಹಿಮಾಲಯದ ಹವೆಯಲ್ಲಿ ನನ್ನ ದೇಹ ದೃಢಗೊಂಡಿದೆ. ಗಡಿ ಪ್ರಾಂತಗಳಲ್ಲಿ ವಾಸಿಸುವ ಅಫ್ರೀದೀ, ಗಿಲ್ ಜಯೀ, ಮಹಸೂದೀ ಮೊದಲಾದ ಗಿರಿಜನರ ಹಾಗೆಯೇ ನಾನೂ ನಾಗರಿಕತೆಯ ಗಂಧಗಾಳಿ ಇಲ್ಲದೆ ಬೆಳೆದವನು. ಅವರ ಮತ್ತು ನನ್ನ ನಡುವೆ ಕಿಂಚಿತ್ ವ್ಯತ್ಯಾಸವಿರುವುದು ಈ ನಾಗರಿಕತೆಯಲ್ಲಿ. ನಾನು ಸ್ವಲ್ಪ ಮಟ್ಟಿಗೆ ಓದಿ ಬರೆದು ಮಾಡಿದವನು. ಮಾತು ಕತೆ ಆಡುತ್ತೀನಿ, ಶಿಷ್ಟಾಚಾರ ಕಾನೂನು ತಿಳಿವಳಿಕೆ ಇರುವವನು. ಕಿರಿಯರ ಮತ್ತು ಹಿರಿಯರ ವಿಷಯಕ್ಕೆ ಲಕ್ಷ್ಯ ವಹಿಸುತ್ತೇನೆ. ಆದರೆ ನನ್ನ ಆಕಾರ ಮಾತ್ರ ಯಾವುದೇ ಗಡಿನಾಡುಗಳಲ್ಲಿರುವ ಪುರುಷರ ಹಾಗೆಯೇ ಇದೆ.

ಒಮ್ಮೊಮ್ಮೆ ಪರ್ವತ ಪ್ರದೇಶಗಳಲ್ಲಿ ಸ್ವಚ್ಛಂದವಾಗಿ ಸಂಚರಿಸಬೇಕೆಂಬ ಬಲವಾದ ಇಚ್ಛೆ ಉಂಟಾಗುತ್ತದೆ. ಆದರೆ ಬದುಕಿನ ಪ್ರಶ್ನೆ ಎದ್ದುನಿಂತು ನನ್ನ ಆಸೆಯನ್ನು ಹತ್ತಿಕ್ಕುತ್ತದೆ. ಆ ಒಣ ಪ್ರದೇಶದಲ್ಲಿ ಊಟವೆಂಬುದು ತೀರ ದುಸ್ತರವಾಗಿತ್ತು . ಅಲ್ಲಿಯ ಜನ ಆಹಾರಕ್ಕಾಗಿ ಮನುಷ್ಯನ ಕೊಲೆ ಮಾಡಿಬಿಡುತ್ತಾರೆ. ಮೈಮೇಲೆ ಧರಿಸುವ ಬಟ್ಟೆಗಾಗಿ ಹೆಣದ ಮೇಲಿನ ಬಟ್ಟೆಯನ್ನು ಹರಿದೆಸೆಯುತ್ತಾರೆ. ಒಂದು ಬಂದೂಕಿಗಾಗಿ ಸರ್ಕಾರೀ ಸೇನೆಯ ಮೇಲೆ ದಾಳಿ ಮಾಡುತ್ತಾರೆ. ಅದೂ ಅಲ್ಲದೆ ಅಲ್ಲಿಯ ಗಿರಿಜನ ವರ್ಗಗಳ ಒಬ್ಬೊಬ್ಬ ಮನುಷ್ಯನಿಗೂ ನಾನು ಯಾರೆಂದು ತಿಳಿದಿತ್ತು. ಅವರೆಲ್ಲ ನನ್ನ ರಕ್ತ ಪಿಪಾಸುಗಳಾಗಿದ್ದರು. ನಾನು ಅವರ ಕೈಗೆ ಸಿಕ್ಕಿಬಿಟ್ಟಿದ್ದೇ ಆದರೆ ಪ್ರಪಂಚದಲ್ಲಿ ನನ್ನ ಹೇಳ ಹೆಸರಿಲ್ಲದಂತೆ ಮಾಡಿಬಿಡುತ್ತಾರೆ, ಅದೆಷ್ಟು ಅಫ್ರೀದೀ ಮತ್ತು ಗಿಲಜಇಯಿಗಳನ್ನು ನಾನು ಕೊಂದಿದ್ದೆನೋ ಅದೆಷ್ಟು ಅಫ್ರೀದೀ ಮತ್ತು ಗಿಲಜಇಯಿಗಳನ್ನು ಹಿಡಿದಿಡಿದು

ಸರ್ಕಾರೀ ಸೆರೆಮನೆಗೆ ಕಳಿಸಿದ್ದೆನೋ ಲೆಕ್ಕವಿಲ್ಲ. ಅಲ್ಲದೆ ಅವರುಗಳ ಅದೆಷ್ಟು ಹಳ್ಳಿಗಳನ್ನು ಸುಟ್ಟು ಬೂದಿ ಮಾಡಿದ್ದೆನೋ ಗೊತ್ತಿಲ್ಲ! ನಾನೂ ತುಂಬ ಎಚ್ಚರಿಕೆಯಿಂದಿರುತ್ತಿದ್ದೆ. ನಾನು ಸಾಧ್ಯವಾದಷ್ಟೂ ಒಂದು ಜಾಗದಲ್ಲಿ ಎಂದೂ ಒಂದು ವಾರಕ್ಕಿಂತ ಹೆಚ್ಚು ಕಾಲ ಇರುತ್ತಿರಲಿಲ್ಲ.

2

ಒಂದು ದಿನ ನಾನು ಸರದಾರ್ ಹಿಮ್ಮತ್ ಸಿಂಹರ ಮನೆಯ ಕಡೆ ಹೋಗುತ್ತಿದ್ದೆ. ಆಗ ಎರಡು ಗಂಟೆ ಆಗಿತ್ತು. ಈಚಿನ ದಿನಗಳಲ್ಲಿ ರಜಾ ಇದ್ದಂತಿತ್ತು. ಕಾರಣ ಈಚೆಗೆ ತಾನೆ ಕೆಲವು ಹಳ್ಳಿಗಳನ್ನು ಸುಟ್ಟುಹಾಕಲಾಗಿತ್ತು. ಆದ್ದರಿಂದ ಅವುಗಳಿಂದ ತಕ್ಷಣದಲ್ಲಿ ಯಾವುದೇ ಹೆದರಿಕೆ ಇರಲಿಲ್ಲ. ನಾವುಗಳು ನಿಶ್ಚಿಂತರಾಗಿ ಹರಟೆ ವಿನೋದಗಳಲ್ಲಿ ದಿನ ಕಳೆಯುತ್ತಿದ್ದೆವು. ಕೂತು ಕೂತು ಮನಸ್ಸಿಗೆ ಗಾಬರಿಯಾಗಿತ್ತು. ಮನಸ್ಸನ್ನು ಪ್ರಫುಲ್ಲಗೊಳಿಸುವ ಸಲುವಾಗಿ ಸರದಾರ್ ಸಾಹೇಬರ ಮನೆ ಕಡೆ ಹೊರಟಿದ್ದೆ. ಆದರೆ ಮಾರ್ಗ ಮಧ್ಯದಲ್ಲಿ ಒಂದು ದುರ್ಘಟನೆ ನಡೆದುಹೋಯಿತು. ಹಿಂದೂಸ್ತಾನದ ಒಬ್ಬ ಸೈನಿಕನ ತಲೆ ಒಡೆದುಹಾಕಬಹುದಾಗಿದ್ದ ಒಬ್ಬ ಮುದಿ ಅಫ್ರೀದಿಯು ಒಬ್ಬ ಸೈನಿಕನೊಂದಿಗೆ ಕಾದಾಟಕ್ಕೆ ನಿಂತಿದ್ದ. ನಾನು ನೋಡು ನೋಡುತ್ತಿದ್ದಂತಯೇ ತನ್ನ ಸೊಂಟದಿಂದ ಒಂದು ಹರಿತವಾದ ಚೂರಿ ಹೊರಸೆಳೆದು ಅವನ ಎದೆಗೆ ಚುಚ್ಚಿಬಿಟ್ಟ. ಈ ಸೈನಿಕನ ಬಳಿ ಒಂದು ಒಂದು ಬಂದೂಕು ಇತ್ತು. ಅದಕ್ಕಾಗಿ ಇಷ್ಟೆಲ್ಲ ಹೋರಾಟ ನಡೆದಿತ್ತು. ರೆಪ್ಪೆ ಮಿಟುಕಿಸುವುದರಲ್ಲಿ ಸೇನಾ ಯೋಧನ ಕತೆ ಮುಗಿದುಹೋಯಿತು. ಮುದಿಯ ಬಂದೂಕು ಎತ್ತಿಕೊಂಡು ಓಡಿದ. ನಾನು ಅವನ ಹಿಂದೆ ಓಡಿದೆ. ಆದರೆ ಓಡುವುದರಲ್ಲಿ ಅವನ ವೇಗ ಅದೆಷ್ಟು ತೀವ್ರವಾಗಿತ್ತೆಂದರೆ ನೋಡ ನೋಡುತ್ತಲೇ ಅವನು ಕಣ್ಣಿಂದ ಮರೆಯಾಗಿಬಿಟ್ಟ. ನಾನು ವಿಚಾರ ಮಾಡದೆ ಅವನ ಬೆನ್ನುಹತ್ತಿದ್ದೆ. ಗಡಿಯ ಸಮೀಪಕ್ಕೆ ಹೋಗುತ್ತ ಹೋಗುತ್ತ ಅವನಿಂದ ಇಪ್ಪತ್ತು ಮೊಳದಷ್ಟು ದೂರ ಮಾತ್ರ ಉಳಿದಿತ್ತು. ಅವನು ಹಿಂದಕ್ಕೆ ತಿರುಗಿ ನೋಡಿದ. ನಾನು ಏಕಾಂಗಿಯಾಗಿ ಅವನ ಬೆನ್ನಟ್ಟಿದ್ದೆ. ಅವನು ಬಂದೂಕಿನ ಗುರಿಯನ್ನು ನನ್ನ ಕಡೆಗೆ ತಿರುಗಿಸಿದ. ನಾನು ತಕ್ಷಣ ನೆಲದ ಮೇಲೆ ಮಲಗಿಬಿಟ್ಟೆ. ಬಂದೂಕಿನ ಗೋಲಿ ನನ್ನ ಎದುರುಗಡೆ ಇದ್ದ ಕಲ್ಲಿಗೆ ತಾಕಿತು. ನಾನು ಗೋಲಿಗೆ ಬಲಿಯಾದೆನೆಂದು ಅವನು ಭಾವಿಸಿದ. ಅವನು ಮೆಲ್ಲ ಮೆಲ್ಲಗೆ ಎಚ್ಚರಿಕೆಯಿಂದ ನನ್ನ ಕಡೆಗೆ ಸಾಗಿಬಂದ. ನಾನು ಉಸಿರುಕಟ್ಟಿ ಮಲಗಿದೆ. ಅವನು ಯಾವಾಗ ಸರಿಯಾಗಿ ನನ್ನ ಬಳಿಯೇ ಬಂದನೋ ಆಗ ನಾನು ಸಿಂಹದ ಹಾಗೆ

ನೆಗೆದು ಅವನ ಕುತ್ತಿಗೆ ಹಿಡಿದು ನೆಲದ ಮೇಲೆ ಕೆಡವಿದೆ ಮತ್ತು ಚೂರಿಯನ್ನು ಹೊರಸೆಳೆದು ಅವನ ಎದೆಯಲ್ಲಿ ಚುಚ್ಚಿಬಿಟ್ಟೆ. ಅಫ್ರೀದಿಯ ಕತೆ ಮುಗಿದೇಹೋಯಿತು. ಅದೇ ಹೊತ್ತಿಗೆ ನನ್ನ ದಳದ ಕೆಲವರು ಅಲ್ಲಿಗೆ ಬಂದರು. ಸುತ್ತ ಇದ್ದವರೆಲ್ಲ ನನ್ನನ್ನು ಹೊಗಳತೊಡಗಿದರು. ಇನ್ನೂ ನಾನು ಪೂರ್ತಿ ಎಚ್ಚರದಲ್ಲಿರಲಿಲ್ಲ. ನನಗೆ ಪ್ರಜ್ಞೆ ಪೂರ್ತಿ ಮರಳಿತು. ಆ ಮುದುಕನನ್ನು ನೋಡಿ ನನ್ನ ಮನಸ್ಸಿಗೆ ಗಾಬರಿಯಾಗತೊಡಗಿತು. ಇದುವರೆಗೆ ಅದೆಷ್ಟು ಅಫ್ರೀದಿಗಳನ್ನು ಕೊಂದಿದ್ದೆನೋ ಗೊತ್ತಿಲ್ಲ. ಆದರೆ ಎಂದಿಗೂ ನನ್ನ ಹೃದಯ ಇಷ್ಟೊಂದು ಗಾಬರಿಗೊಂಡಿರಲಿಲ್ಲ. ನಾನು ನೆಲದ ಮೇಲೆ ಕುಳಿತು ಆ ಮುದುಕನತ್ತ ನೋಡತೊಡಗಿದೆ. ನಮ್ಮ ದಳದ ಸೈನಿಕರೂ ಅಲ್ಲಿಗೆ ಬಂದು ಸೇರಿದರು. ನಾನು ಗಾಯಗೊಂಡಿದ್ದೇನೆಂದು ತಿಳಿದು ಅನೇಕ ರೀತಿಯ ಪ್ರಶ್ನೆಗಳನ್ನು ಕೇಳತೊಡಗಿದರು. ನಿಧಾನವಾಗಿ ಎದ್ದು ಮಾತಿಲ್ಲದೆ ನಗರದ ಕಡೆಗೆ ಹೊರಟೆ. ಸಿಪಾಯಿಗಳು ನನ್ನ ಹಿಂದೆ ಹಿಂದೆ ಆ ಮುದುಕನ ಹೆಣವನ್ನು ಎಳೆದುಕೊಂಡು ಹೊರಟರು. ನಗರದ ಜನ ಒಂದೇ ಸಮನೆ ನನಗೆ ಜಯಕಾರ ಹೇಳತೊಡಗಿದರು. ನಾನು ಮೌನವಾಗಿ ಸರದಾರ ಹಿಮ್ಮತ್ ಸಿಂಹರ ಮನೆಯೊಳಗೆ ನುಗ್ಗಿದೆ.

ಸರದಾರರು ಆ ಹೊತ್ತಿನಲ್ಲಿ ತಮ್ಮ ಖಾಸಗಿ ಕೋಣೆಯಲ್ಲಿ ಕುಳಿತು ಏನೋ ಬರೆಯುತ್ತಿದ್ದರು. ಅವರು ನನ್ನನ್ನು ನೋಡಿ "ಏನು ಆ ಅಫ್ರೀದಿಯನ್ನು ಕೊಂದು ಬಂದೆ ತಾನೆ?" ಎಂದು ಕೇಳಿದರು.

ನಾನು ಕುಳಿತುಕೊಳ್ಳುತ್ತ– "ಹೌದು ಕೊಂದೆ. ಆದರೆ ಸರದಾರ್ ಸಾಹೇಬರೆ ನಾನು ಏಕೋ ಸ್ವಲ್ಪ ಅಂಜುಬುರುಕನಾಗಿಬಿಟ್ಟಿದ್ದೀನಿ" ಎಂದೆ.

ಸರದಾರ್ ಸಾಹೇಬರು ಆಶ್ಚರ್ಯದಿಂದ ಹೇಳಿದರು– "ಅಸದ್ ಖಾನ್ ಮತ್ತು ಅಂಜುಬುರುಕತನ! ಇವು ಎರಡೂ ಒಂದೇ ಜಾಗದಲ್ಲಿ ಇರಲು ಸಾಧ್ಯವಿಲ್ಲ."

ನಾನು ಏಳುತ್ತ ಹೇಳಿದೆ– "ಸರದಾರ್ ಸಾಹೇಬರೆ ಇಲ್ಲಿ ಏಕೋ ಮೈಗೆ ಸ್ವಸ್ಥವಿದ್ದಂತೆ ಅನಿಸುತ್ತಿಲ್ಲ. ಎದ್ದು ಹೊರಗಡೆ ವರಾಂಡಾದಲ್ಲಿ ಕುಳಿತುಕೊಳ್ಳಿ. ಯಾಕೋ ಏನೋ ಗೊತ್ತಾಗುತ್ತ ಇಲ್ಲ, ನನ್ನ ಎದೆ ಹೊಡೆದುಕೊಳ್ಳುತ್ತಾ ಇದೆ."

ಸರದಾರ್ ಸಾಹೇಬರು ಮೇಲೆದ್ದು ನನ್ನ ಹತ್ತಿರಕ್ಕೆ ಬಂದು ಪ್ರೀತಿಯಿಂದ ನನ್ನ ಬೆನ್ನ ಮೇಲೆ ಕೈಯಾಡಿಸುತ್ತ– "ಅಸದ್ ನೀನು ಓಡಿ ಓಡಿ ದಣಿದಿದ್ದಿ ಅಷ್ಟೆ, ಬೇರೆ ಏನೂ ಇಲ್ಲ. ಆಯಿತು, ವರಂಡಾದಲ್ಲಿ ಕುಳಿತುಕೊಳ್ಳೋಣ ನಡಿ. ಸಂಜೆಯ ತಣ್ಣನೆಯ ಗಾಳಿ ನಿನ್ನನ್ನು ಉಲ್ಲಾಸಗೊಳಿಸುತ್ತೆ." ಎಂದರು.

ಸರದಾರ್ ಸಾಹೇಬರು ಮತ್ತು ನಾನು ಇಬ್ಬರೂ ವರಾಂಡಾದಲ್ಲಿ ಕುರ್ಚಿಗಳ ಮೇಲೆ ಕುಳಿತೆವು. ನಗರದ ನಾಲ್ಕು ರಸ್ತೆಗಳು ಕೂಡುವ ಸ್ಥಳದಲ್ಲಿ ಆ ಮುದುಕನ ಶವವನ್ನು ಇಡಲಾಗಿತ್ತು. ಅದರ ಸುತ್ತಲೂ ಜನರ ಗುಂಪು ಸೇರಿತ್ತು. ವರಾಂಡಾದಲ್ಲಿ ನಾನು ಕುಳಿತಿದ್ದನ್ನು ನೋಡಿ ಜನ ನನ್ನ ಕಡೆಗೆ ಬೊಟ್ಟುಮಾಡಿ ತೋರಿಸತೊಡಗಿದರು. ಸರದಾರ್ ಸಾಹೇಬರು ಈ ದೃಶ್ಯವನ್ನು ನೋಡಿ "ಅಸದ್‌ಖಾನ್ ನೋಡಿದೆಯಾ ಜನರ ಕಣ್ಣಿನಲ್ಲಿ ನೀನು ಅದೆಷ್ಟು ಎತ್ತರಕ್ಕೆ ಹೋಗಿದ್ದೀ? ನಿನ್ನ ಶೌರ್ಯವನ್ನು ಇಲ್ಲಿಯ ಪ್ರತಿಯೊಬ್ಬ ಹುಡುಗನೂ ಹೊಗಳುತ್ತಾನೆ. ಈಗಲೂ ನಾನು ಅಂಜುಬುರುಕ ಅಂತ ಹೇಳ್ತೀಯಾ?" ಎಂದರು.

ನಾನು ಮುಗುಳ್ನಗುತ್ತ ಹೇಳಿದೆ– "ಈ ಮುದುಕನನ್ನು ಕೊಂದಾಗಿನಿಂದ ನನ್ನ ಹೃದಯ ನನಗೆ ಧಿಕ್ಕಾರ ಹೇಳ್ತಾ ಇದೆ".

ಸರದಾರ್ ಸಾಹೇಬರು ನಗುತ್ತ "ಏಕೆ ಅಂದರೆ ನೀನು ನಿನಗಿಂತ ಕಡಿಮೆ ಬಲಶಾಲಿಯನ್ನು ಕೊಂದಿದ್ದೀ"

ನಾನು ಧೈರ್ಯ ತಂದುಕೊಂಡು ಹೇಳಿದೆ– "ಇರಬಹುದು, ಇದೇ ಸರಿ."

ಅದೇ ಹೊತ್ತಿಗೆ ಒಬ್ಬ ಅಫ್ರೀದಿ ಮಹಿಳೆ ಸರದಾರ್ ಸಾಹೇಬರ ಮನೆ ಮುಂದೆ ಬಂದು ನಿಂತುಕೊಂಡಳು. ಅವಳ ಮುಖ ನೋಡುತ್ತಿದ್ದ ಹಾಗೆಯೇ ಸರದಾರ್ ಸಾಹೇಬರ ಮುಖ ಬಿಳಿಚಿಕೊಂಡಿತು. ಅವರ ಭಯಭೀತ ದೃಷ್ಟಿ ಅವಳ ಮುಖದ ಕಡೆಯಿಂದ ನನ್ನ ಕಡೆಗೆ ತಿರುಗಿತು. ನಾನೂ ಆಶ್ಚರ್ಯದಿಂದ ಅವರ ಮುಖದ ಕಡೆ ನೋಡತೊಡಗಿದೆ. ಆ ಮಹಿಳೆಯಂಥ ಸುಗಠಿತ ಶರೀರ ಪುರುಷರಿಗೂ ಅಪರೂಪವೆಂದೇ ಹೇಳಬೇಕು. ಕಾಕಿ ಬಣ್ಣದ ದಪ್ಪ ಬಟ್ಟೆಯ ಪೈಜಾಮ ಮತ್ತು ನೀಲಿ ಬಣ್ಣದ ದಪ್ಪನೆಯ ಕುರ್ತಾ ಧರಿಸಿದ್ದಳು. ಬಲೂಚಿಸ್ತಾನದ ಮಹಿಳೆಯರ ಹಾಗೆ ತಲೆಯ ಮೇಲೆ ಕರ್ಚೀಫು ಕಟ್ಟಿಕೊಂಡಿದ್ದಳು. ಹಳದಿ ಬಣ್ಣದ ಆಕೆಯಲ್ಲಿ ಯೌವನದ ಕಾಂತಿ ಎದ್ದು ಕಾಣುತ್ತಿತ್ತು. ಈ ಕ್ಷಣದಲ್ಲಿ ಅವಳ ಕಣ್ಣುಗಳಲ್ಲಿ ಯಾರ ಹೃದಯಲ್ಲಾದರೂ ಭಯ ಹುಟ್ಟಿಸುವಂಥ ಭೀಷಣತೆ ತುಂಬಿತ್ತು. ಆ ಹೆಣ್ಣಿನ ಕಣ್ಣುಗಳು ಸರದಾರ ಸಾಹೇಬರ ಕಡೆಯಿಂದ ನನ್ನ ಕಡೆಗೆ ತಿರುಗಿದವು. ಅವಳು ದಿಟ್ಟಿಸಿ ನೋಡುತ್ತಿದ್ದ ರೀತಿ ನನ್ನನ್ನು ಭಯಭೀತಗೊಳಿಸಿತು. ಆ ಹೆಣ್ಣು ಸರದಾರ ಸಾಹೇಬರ ಕಡೆ ನೋಡಿ ಮತ್ತೆ ನೆಲದ ಮೇಲೆ ಉಗುಳಿಬಿಟ್ಟಳು. ಆ ಮೇಲೆ ನನ್ನನ್ನು ನೋಡುತ್ತ ನಿಧಾನವಾಗಿ ಬೇರೆ ಕಡೆಗೆ ಹೊರಟುಹೋದಳು.

ಆ ಮಹಿಳೆ ಹೋಗುತ್ತಿದ್ದುದನ್ನು ನೋಡಿ ಸರದಾರ ಸಾಹೇಬರಿಗೆ ಜೀವದಲ್ಲಿ ಜೀವ ಬಂದಂತಾಯಿತು. ನನ್ನ ತಲೆಯ ಮೇಲಿಂದಲೂ ಒಂದು ಭಾರ ತೊಲಗಿತು. ನಾನು ಸರದಾರ ಸಾಹೇಬರನ್ನು –"ನಿಮಗೆ ಈಕೆ ಗೊತ್ತೇನು?"–ಅಂತ ಕೇಳಿದೆ. ಸರದಾರ ಸಾಹೇಬರು ಒಂದು ನೀಳವಾದ ತಣ್ಣನೆಯ ಉಸಿರೆಳೆಯುತ್ತ– "ಓಹೋ, ಚೆನ್ನಾಗಿ ಗೊತ್ತು. ಈಕೆ ನನಗೋಸ್ಕರ ಪ್ರಾಣವನ್ನೇ ಬೇಕಾದರೂ ಕೊಡುತ್ತಿದ್ದಂಥ ಕಾಲವೊಂದಿತ್ತು. ವಾಸ್ತವದಲ್ಲಿ ಅವಳು ತನ್ನ ಪ್ರಾಣವನ್ನು ಪಣಕ್ಕಿಟ್ಟು ನನ್ನ ಪ್ರಾಣ ರಕ್ಷಣೆ ಕೂಡ ಮಾಡಿದ್ದಳು. ಆದರೆ ಈಗ ಅವಳಿಗೆ ನನ್ನ ಮುಖ ನೋಡಿದರೆ ತಿರಸ್ಕಾರ. ನನ್ನ ಹೆಂಡತಿಯನ್ನು ಸಾಯಿಸಿದವಳು ಇವಳೇ. ಇವಳನ್ನು ನೋಡಿದಾಗಲೆಲ್ಲ ನನ್ನ ಚೈತನ್ಯವೇ ಉಡುಗಿಹೋಗುತ್ತದೆ. ಅದೇ ದೃಶ್ಯ ನನ್ನ ಕಣ್ಣುಗಳ ಮುಂದೆ ನರ್ತಿಸಲು ಪ್ರಾರಂಭಿಸುತ್ತದೆ."

ನಾನು ಭಯ–ವಿಹ್ವಲ ಸ್ವರದಲ್ಲಿ ಹೇಳಿದೆ– "ಅವಳು ನನ್ನ ಕಡೆಗೂ ಅತ್ಯಂತ ಭಯಾನಕ ದೃಷ್ಟಿಯಿಂದ ನೋಡಿದ್ದಳು. ಅದೇಕೋ ಏನೋ ನನ್ನ ರೋಮಗಳೂ ನಿಮಿರಿ ನಿಂತಿದ್ದುವು."

ಸರದಾರ ಸಾಹೇಬರು ತಲೆ ಆಡಿಸುತ್ತ ಬಹಳ ಗಾಂಭೀರ್ಯದಿಂದ ಹೇಳಿದರು– "ಅಸದ್ ಖಾನ್ ನೀನೂ ಎಚ್ಚರದಿಂದ ಇರು. ಬಹುಶಃ ಈ ಮುದಿ ಅಫ್ರೀದಿಗೂ ಇವಳಿಗೂ ಏನೋ ಸಂಬಂಧ ಇರಬೇಕು. ಅವಳ ಸೋದರನೋ ತಂದೆಯೋ ಆಗಿದ್ದಿರಬಹುದು. ನಿನ್ನ ಕಡೆಗಿನ ಅವಳ ನೋಟಕ್ಕೆ ಏನೋ ಒಂದು ಲೆಕ್ಕಾಚಾರ ಇರಬೇಕು.. ಬಹಳ ಭಯಂಕರ ಹೆಣ್ಣು ಅವಳು."

ಸರದಾರ್ ಸಾಹೇಬರ ಮಾತು ಕೇಳಿ ನನ್ನ ನರನರವೂ ಕಂಪಿಸಿತು. ಮಾತಿನ ಸರಣಿಯನ್ನು ಬೇರೆ ಕಡೆಗೆ ತಿರುಗಿಸುತ್ತ ಹೇಳಿದೆ–"ಸರದಾರ್ ಸಾಹೇಬರೆ ಇವಳನ್ನು ಯಾಕೆ ನೀವು ಪೋಲೀಸರ ವಶಕ್ಕೆ ಒಪ್ಪಿಸಬಾರದು? ಇವಳಿಗೆ ಗಲ್ಲು ಶಿಕ್ಷೆ ಆಗುತ್ತೆ."

ಸರದಾರ್ ಸಾಹೇಬರು ಹೇಳಿದರು– "ಅಯ್ಯಾ ಅಸದ್ ಖಾನ್ ಇವಳು ನನ್ನ ಪ್ರಾಣ ಉಳಿಸಿದ್ದಳು. ಅಲ್ಲದೆ ಬಹುಶಃ ಈಗಲೂ ನನ್ನನ್ನು ಇಷ್ಟಪಡುತ್ತಾಳೆ. ಇವಳ ಕಥೆ ಬಹಳ ದೀರ್ಘವಾದ್ದು. ಯಾವಾಗಲಾದರೂ ಪುರಸತ್ತಿದ್ದಾಗ ಹೇಳ್ತೀನಿ".

ಸರದಾರರ ಮಾತುಗಳಿಂದ ನನಗೂ ಕುತೂಹಲ ಶುರುವಾಗಿತ್ತು. ಆ ವೃತ್ತಾಂತವನ್ನು ತಿಳಿಸಬೇಕೆಂದು ಒತ್ತಾಯಿಸತೊಡಗಿದೆ. ಮೊದಲಿಗೆ ಅದನ್ನು ತಳ್ಳಿಹಾಕಲು ನೋಡಿದರು. ಆದರೆ ನಾನು ತುಂಬಾ ಒತ್ತಾಯ ಮಾಡಿದ ಮೇಲೆ ವಿಧಿಯಿಲ್ಲದೆ– "ಅಸದ್, ನಾನು ನಿನ್ನನ್ನು ನನ್ನ ಸೋದರನೆಂದೇ ಭಾವಿಸಿದ್ದೇನೆ. ಹಾಗಾಗಿ ನಿನ್ನಲ್ಲಿ ಏನೂ ಮುಚ್ಚು-ಮರೆ ಮಾಡಲ್ಲ. ಕೇಳು" ಎಂದು ಹೇಳತೊಡಗಿದರು.

3

ಅಸದ್ ಖಾನ್ ಈಗ ಐದು ವರ್ಷದ ಹಿಂದೆ ನಾನು ಈಗ ಕಾಣುವಷ್ಟು ವಯಸ್ಸಾದವನಾಗಿರಲಿಲ್ಲ. ಆಗ ನನ್ನ ವಯಸ್ಸು 40 ವರ್ಷಕ್ಕಿಂತ ಹೆಚ್ಚಿರಲಿಲ್ಲ. ಒಂದೂ ಕೂದಲು ಬೆಳ್ಳಗಾಗಿರಲಿಲ್ಲ. ಆಗ ಇಬ್ಬರು ಯೋಧರೊಂದಿಗೆ ಕಾದಾಡುವಷ್ಟು ಶಕ್ತಿ ನನ್ನಲ್ಲಿತ್ತು. ಜರ್ಮನರೊಂದಿಗೆ ನಾನು ಸೆಣಸಿದ್ದೇನೆ. ಅದೆಷ್ಟು ಜನರನ್ನು ಸಾಯಿಸಿದ್ದೇನೋ ಗೊತ್ತಿಲ್ಲ. ಜರ್ಮನ್ ಯುದ್ಧದ ನಂತರ ನನ್ನನ್ನು ಈ ಗಡಿ ಪ್ರದೇಶದ ಸೇನಾ ದಳದ ಮೇಜರ್ ಮಾಡಿ ಕಳಿಸಲಾಯಿತು. ಮೊತ್ತ ಮೊದಲಬಾರಿಗೆ ಇಲ್ಲಿಗೆ ಬಂದಾಗ ತುಂಬ ಕಷ್ಟಗಳು ಎದುರಾದವು. ಆದರೆ ನಾನು ಅವುಗಳನ್ನು ಲೆಕ್ಕಿಸಲಿಲ್ಲ. ದಿನಕಳೆದಂತೆಯೆ ಅವೆಲ್ಲವುಗಳನ್ನೂ ಗೆದ್ದುನಿಂತೆ. ಇಲ್ಲಿಗೆ ಬಂದ ಮೇಲೆ ಎಲ್ಲಕ್ಕಿಂತ ಮೊದಲು ಇಲ್ಲಿಯ ಭಾಷೆಯಾದ ಪಶ್ತೋ ಕಲಿಯಲಾರಂಭಿಸಿದೆ. ಅದರ ನಂತರ ಇನ್ನಿತರ ಭಾಷೆಗಳನ್ನು ಕಲಿತೆ. ಎಷ್ಟರ ಮಟ್ಟಿಗೆ ಅಂದರೆ ತುಂಬ ಸಲೀಸಾಗಿ ಅವನ್ನು ಆಡಲು, ನುಡಿಗಟ್ಟುಗಳನ್ನು ಬಳಸಲು ಕಲಿತೆ. ಆ ನಂತರ ಕೆಲವು ಜನರ ತಂಡಗಳನ್ನು ಮಾಡಿಕೊಂಡು ಈ ಪ್ರದೇಶದ ಒಳಭಾಗಗಳಲ್ಲೆಲ್ಲಾ ಅಲೆದಾಡಿದೆ. ಈ ಪರೀಕ್ಷೆಗಳಲ್ಲಿ ಎಷ್ಟೋ ಸಲ ಸತ್ತು ಸತ್ತು ಬದುಕಿದೆ. ಆದರೆ ಎಲ್ಲ ಕಷ್ಟಗಳನ್ನು ಎದುರಿಸುತ್ತ ಇಲ್ಲಿ ಸುಖವಾಗಿ ಇರತೊಡಗಿದೆ. ಆ ಕಾಲದಲ್ಲಿ ನನ್ನಿಂದ ಎಂಥೆಂಥ ಕೆಲಸಗಳು ಆದುವು ಅಂದರೆ ಅವುಗಳಿಂದ ಸರ್ಕಾರದಲ್ಲಿ ನನ್ನ ಪ್ರಸಿದ್ಧಿ ಮತ್ತು ಪ್ರತಿಷ್ಠೆ ಹೆಚ್ಚಿದವು. ಒಂದು ಸಲ ಕರ್ನಲ್ ಹ್ಯಾಮಿಲ್ಟನ್ ಅವರ ಹೆಂಡತಿಯನ್ನು ನಾನೊಬ್ಬನೇ ಬಿಡಿಸಿಕೊಂಡು ಬಂದಿದ್ದೆ. ಅಷ್ಟೇ ಅಲ್ಲದೆ ಈ ಪ್ರದೇಶದ ಅದೆಷ್ಟೋ ಪುರುಷರು ಮತ್ತು ಮಹಿಳೆಯರ ಪ್ರಾಣ ಉಳಿಸಿದೆ. ಇಲ್ಲಿಗೆ ಬಂದ ಮೂರು ವರ್ಷಗಳ ನಂತರ ನನ್ನ ಕಥೆ ಪ್ರಾರಂಭವಾಗುತ್ತೆ.

ಒಂದು ರಾತ್ರಿಯಲ್ಲಿ ನಾನು ನನ್ನ ಕ್ಯಾಂಪಿನ ಹೊರಗಡೆ ಮಲಗಿದ್ದೆ. ಅಫ್ರೀದಿಗಳೊಂದಿಗೆ ಯುದ್ಧ ನಡೆಯುತ್ತಿತ್ತು. ಹಗಲಿನಲ್ಲಿ ಯುದ್ಧಮಾಡಿ ಆಯಾಸಗೊಂಡ ಸೈನಿಕರು ಎಚ್ಚರವಿಲ್ಲದೆ ಬಿದ್ದುಕೊಂಡಿದ್ದರು. ಕ್ಯಾಂಪಿನಲ್ಲಿ ನಿಶ್ಶಬ್ದ ನೆಲೆಸಿತ್ತು. ಮಲಗಿದ್ದಾಗಲೇ ನನಗೂ ಯಾವಾಗಲೋ ನಿದ್ದೆ ಬಂದಿತ್ತು. ಎಚ್ಚರವಾದಾಗ ನೋಡಿದರೆ ನನ್ನ ಎದೆಯ ಮೇಲೆ ಸುಮಾರು ನನ್ನ ಎರಡರಷ್ಟು ವಯಸ್ಸಿನ ಅಫ್ರೀದಿಯೊಬ್ಬ ಕುಳಿತು ನನ್ನ ಎದೆಗೆ ಚೂರಿ ಹಾಕಲು ಉದ್ಯುಕ್ತನಾಗಿದ್ದ. ನಾನು ಪೂರ್ತಿಯಾಗಿ ಅವನ ವಶದಲ್ಲಿದ್ದೆ. ಬದುಕುಳಿಯುವ ಯಾವ ಉಪಾಯವೂ ಇರಲಿಲ್ಲ. ಆದರೆ ಆ ಹೊತ್ತಿನಲ್ಲಿ ನಾನು ಬಹಳ ಧೈರ್ಯದಿಂದ ವರ್ತಿಸಿದೆ. ಪಶ್ತೋ ಭಾಷೆಯಲ್ಲಿ– "ನನ್ನನ್ನು ಸಾಯಿಸಬೇಡ.

ಸರಕಾರದ ಸೈನ್ಯದಲ್ಲಿ ನಾನು ಆಫೀಸರ್ ಆಗಿದ್ದೇನೆ. ನನ್ನನ್ನು ಹಿಡಿದುಕೊಂಡು ಹೋಗು. ಸರಕಾರ ನಿನಗೆ ಹಣ ಕೊಟ್ಟು ನನ್ನನ್ನು ಬಿಡಿಸಿಕೊಳ್ಳುತ್ತೆ" ಎಂದೆ.

ದೇವರ ದಯದಿಂದ ನನ್ನ ಮಾತು ಅವನ ಮನಸ್ಸಿನಲ್ಲಿ ಕೂತುಬಿಟ್ಟಿತು. ಸೊಂಟದಿಂದ ಹಗ್ಗ ತೆಗೆದು ನನ್ನ ಕೈಕಾಲು ಕಟ್ಟಿ ಹೆಗಲ ಮೇಲೆ ಹೊರೆಯ ಹಾಗೆ ಇಟ್ಟುಕೊಂಡು ಕ್ಯಾಂಪಿನಿಂದ ಹೊರಬಂದ. ಹೊರಗಡೆ ಹೊಡೆದಾಟದ ಬಿಸಿ ಜೋರಾಗಿತ್ತು. ಅವನು ಒಂದು ವಿಚಿತ್ರ ರೀತಿಯಲ್ಲಿ ಜೋರಾಗಿ ಕಿರುಚುತ್ತ ಏನೋ ಹೇಳಿ ನನ್ನನ್ನು ಹೆಗಲ ಮೇಲೆ ಹೊತ್ತುಕೊಂಡು ಕಾಡಿನ ಕಡೆಗೆ ಓಡಿದ. ಅವನಿಗೆ ನನ್ನ ಭಾರ ಕಿಂಚಿತ್ತೂ ಗೊತ್ತಾಗುತ್ತಿರಲಿಲ್ಲ ಮತ್ತು ಬಹಳ ವೇಗವಾಗಿ ಓಡುತ್ತಿದ್ದ ಎಂದಷ್ಟೇ ಹೇಳಬಲ್ಲೆ. ಅವನ ಹಿಂದೆ ಅವನದೇ ಪಂಗಡದ ಕೆಲವರು ಲೂಟಿ ಹೊಡೆದ ಮಾಲನ್ನು ಹೊತ್ತು ಓಡಿ ಬರುತ್ತಿದ್ದರು.

ಬೆಳಿಗ್ಗೆ ಹೊತ್ತಿಗೆ ನಾವುಗಳು ಒಂದು ಸರೋವರದ ಸಮೀಪಕ್ಕೆ ಹೋದೆವು. ಸರೋವರವು ದೊಡ್ಡ ದೊಡ್ಡ ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟಿತ್ತು. ಅದರ ನೀರು ಬಹಳ ಸ್ವಚ್ಛವಾಗಿತ್ತು. ಕಾಡಿನ ಮರಗಳು ಆ ಕಡೆ ಈ ಕಡೆ ಬೆಳೆಯುತ್ತಿದ್ದುವು. ಕೆರೆಯನ್ನು ಸಮೀಪಿಸಿದ ನಾವು ಎಲ್ಲರೂ ಅಲ್ಲೇ ನಿಂತೆವು. ಆ ತಂಡದ ಮುಖಂಡನಾದ ಮುದುಕನು ನನ್ನನ್ನು ಒಂದು ಕಲ್ಲಿನ ಮೇಲೆ ಕೆಡವಿದನು. ನನ್ನ ಸೊಂಟಕ್ಕೆ ಭಾರೀ ಏಟು ತಗುಲಿತು. ಯಾವುದೋ ಮೂಳೆ ಮುರಿದು ಹೋಗಿರಬೇಕು ಎನಿಸಿತು. ಆದರೆ ದೇವರ ದಯದಿಂದ ಮೂಳೆ ಮುರಿದಿರಲಿಲ್ಲ. ನನ್ನನ್ನು ನೆಲಕ್ಕೆ ಕೆಡವಿದ ನಂತರ ಆ ಸರದಾರನು "ಎಷ್ಟು ರೂಪಾಯಿ ಕೊಡಿಸುವೆ" ಎಂದು ಕೇಳಿದ.

ನಾನು ನನ್ನ ನೋವನ್ನು ನುಂಗಿಕೊಂಡು ಹೇಳಿದೆ– "ಐದು ನೂರು ರೂಪಾಯಿ".

ಸರದಾರನು ಮುಖ ಗಂಟಿಕ್ಕಿಕೊಂಡು ಹೇಳಿದ–"ಇಲ್ಲ ಇಷ್ಟು ಕಮ್ಮಿ ನಾನು ತೆಗೆದುಕೊಳ್ಳಲ್ಲ. ಎರಡು ಸಾವಿರಕ್ಕೆ ಒಂದು ಪೈಸಾ ಕಡಿಮೆ ಸಿಕ್ಕಿದರೂ ನಿನ್ನ ಪ್ರಾಣ ಉಳಿಯಲ್ಲ."

ನಾನು ಸ್ವಲ್ಪ ಯೋಚಿಸುತ್ತ ಹೇಳಿದೆ–"ಸರಕಾರ ಒಬ್ಬ ಕಪ್ಪು ಮನುಷ್ಯನಿಗೆ ಇಷ್ಟೊಂದು ಹಣ ಖರ್ಚು ಮಾಡಲ್ಲ"

ಸರದಾರನು ಚೂರಿ ಹೊರಸೆಳೆಯುತ್ತ– "ಹಾಗಿದ್ದ ಮೇಲೆ ಸರಕಾರ ಇನಾಮು ಕೊಡುತ್ತೆ ಅಂತ ಏಕೆ ಹೇಳಿದೆ? ಹಾಗಾದರೆ ಇಲ್ಲೇ ಸಾಯಿ" ಎಂದನು.

ಸರದಾರನ ಚೂರಿ ನನ್ನತ್ತ ಮುನ್ನುಗ್ಗಿತು.

ನಾನು ಗಾಬರಿಗೊಂಡು ಹೇಳಿದೆ– "ಆಯಿತು ಸರದಾರ ನಾನು ನಿನಗೆ ಎರಡು ಸಾವಿರ ಕೊಡಿಸ್ತೀನಿ"

ಸರದಾರನು ನಿಂತು ಜೋರಾಗಿ ನಕ್ಕನು. ಅವನ ನಗುವಿನ ಪ್ರತಿಧ್ವನಿಯಿಂದ ಆ ಜಡ ಬೆಟ್ಟಗಳೂ ಕಂಪಿಸಿದವು. ನಾನು ಮನಸ್ಸಿನಲ್ಲೇ "ಭಾರೀ ಭಯಂಕರ ವ್ಯಕ್ತಿ ಇವನು" ಎಂದುಕೊಂಡೆ.

ಆ ತಂಡದ ಇತರೆಯವರು ತಾವು ಲೂಟಿಮಾಡಿದ ಮಾಲುಗಳನ್ನು ಸರದಾರನ ಮುಂದೆ ಇಡತೊಡಗಿದರು. ಅದರಲ್ಲಿ ಹಲವು ಬಂದೂಕುಗಳು, ಗುಂಡುಗಳು, ರೊಟ್ಟಿಗಳು ಮತ್ತು ಬಟ್ಟೆಗಳೂ ಇದ್ದವು. ನನ್ನನ್ನೂ ತಲಾಶ್ ಮಾಡಿದರು. ನನ್ನ ಹತ್ತಿರ ಆರು ಗುಂಡುಗಳ ಒಂದು ಪಿಸ್ತೂಲು ಇತ್ತು. ಪಿಸ್ತೂಲು ಕೈಗೆ ಬಂದದ್ದಕ್ಕೆ ಸರದಾರ ಕುಣಿದಾಡಿದನು ಮತ್ತು ಅದನ್ನು ಹಿಂದೆಮುಂದೆ ತಿರುಗಿಸಿ ನೋಡತೊಡಗಿದನು. ಅಲ್ಲೇ ಆಗಲೇ ಮಾಲುಗಳನ್ನು ತಮ್ಮ ತಮ್ಮಲ್ಲಿ ಹಂಚಿಕೊಳ್ಳಲಾರಂಭಿಸಿರು. ಎಲ್ಲರಿಗೂ ಸಮನಾದ ಪಾಲು ದೊರೆಯಿತು. ಆದರೆ ನನ್ನ ರಿವಾಲ್ವರ್ ಅದರಲ್ಲಿ ಸೇರಿರಲಿಲ್ಲ. ಅದು ಸರದಾರ ಸಾಹೇಬನ ಸ್ವಂತ ಆಸ್ತಿಯಾಗಿತ್ತು.

ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದ ಮೇಲೆ ಮತ್ತೆ ಯಾತ್ರೆ ಶುರುವಾಯಿತು. ಈ ಸಲ ನನ್ನ ಕಾಲಿನ ಕಟ್ಟುಗಳನ್ನು ಬಿಚ್ಚಲಾಯಿತು. ಜೊತೆಯಲ್ಲಿ ನಡೆದುಬರಲು ಹೇಳಿದರು. ದಾರಿ ಗೊತ್ತಾಗಬಾರದೆಂದು ಕಣ್ಣಿಗೆ ಬಟ್ಟೆ ಕಟ್ಟಿದರು. ನನ್ನ ಕೈಗಳನ್ನು ಹಗ್ಗದಿಂದ ಕಟ್ಟಲಾಗಿತ್ತು. ಹಗ್ಗದ ಒಂದು ತುದಿಯನ್ನು ಒಬ್ಬ ಅಫ್ರೀದಿ ಹಿಡಿದಿದ್ದನು.

ನಡೆದು ನಡೆದು ನನ್ನ ಕಾಲು ನೋಯತೊಡಗಿತು. ಆದರೆ ಅವರ ಗಂತವ್ಯ ಸ್ಥಾನ ಇನ್ನೂ ಬಂದಿರಲಿಲ್ಲ. ಮೇಲೆ ಜೇಷ್ಠ ಮಾಸದ ಸೂರ್ಯ ಹೊಳೆಯುತ್ತಿದ್ದನು. ಕಾಲು ಸುಡುತ್ತಿತ್ತು. ಬಾಯಾರಿಕೆಯಿಂದ ಗಂಟಲು ಒಣಗುತ್ತಿತ್ತು. ಆದರೆ ಅವರುಗಳು ಸಲೀಸಾಗಿ ನಡೆದುಹೋಗುತ್ತಿದ್ದರು. ತಮ್ಮತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು. ಆದರೆ ಅವರ ಒಂದೂ ಮಾತು ನನಗೆ ಅರ್ಥವಾಗುತ್ತಿರಲಿಲ್ಲ. ಯಾವಾಗಲೋ ಒಂದೋ ಎರಡೋ ಶಬ್ದ ಅರ್ಥವಾಗುತ್ತಿತ್ತು. ಆದರೆ ಬಹಳಷ್ಟು ಏನೂ ಅರ್ಥವಾಗುತ್ತಿರಲಿಲ್ಲ. ಈ ಸಲ ತಮಗೆ ದೊರೆತ ಗೆಲುವಿನಿಂದ ಅವರುಗಳು ಸಂತುಷ್ಟರಾಗಿದ್ದರು. ಒಬ್ಬ ಅಫ್ರೀದಿ ಒಂದು ಹಾಡು ಹೇಳತೊಡಗಿದ. ಅದು ಬಹಳ ಚೆನ್ನಾಗಿತ್ತು.

ಅಸದ್ ಖಾನ್ ಕೇಳಿದ–"ಸರದಾರ ಸಾಹೇಬರೇ ಆ ಹಾಡು ಏನು?"

ಸರದಾರ ಸಾಹೇಬನು ಹೇಳಿದನು–"ಅದರ ಭಾವ ನೆನಪಿದೆ. ಭಾವ ಏನೆಂದರೆ–

"ಒಬ್ಬ ಅಫ್ರೀದಿ ಹೋಗುತ್ತಾ ಇದ್ದಾನೆ. ಅವನ ಹೆಂಡತಿ ಎಲ್ಲಿಗೆ ಹೋಗುತ್ತಿದ್ದೀಯಾ" ಅಂತ ಕೇಳುತ್ತಾಳೆ.

ಯುವಕ "ನಿನಗೆ ಆಹಾರ ಮತ್ತು ಬಟ್ಟೆ ತರುವ ಸಲುವಾಗಿ ಹೋಗುತ್ತಿದ್ದೇವೆ." ಎನ್ನುತ್ತಾನೆ.

ಹೆಂಡತಿ ಕೇಳುತ್ತಾಳೆ–"ಮಕ್ಕಳಿಗೆ ಏನೂ ತರೋದಿಲ್ಲವೇನು?"

ಯುವಕ ಹೇಳುತ್ತಾನೆ– "ದೊಡ್ಡವನಾದ ಮೇಲೆ ಯುದ್ದಮಾಡಿ ತನ್ನ ಪ್ರೇಮಿಗೆ ಆಹಾರ ಮತ್ತು ಬಟ್ಟೆ ತರಲೆಂದು ಮಗುವಿಗೆ ಬಂದೂಕು ತರುತ್ತೇನೆ."

ಹೆಂಡತಿ ಹೇಳುತ್ತಾಳೆ–"ಯಾವಾಗ ಬರುತ್ತೀ ಹೇಳು?"

ಯುವಕ ಹೇಳುತ್ತಾನೆ– "ಏನಾದರೂ ಗೆದ್ದಕೊಂಡ ನಂತರದಲ್ಲಷ್ಟೇ ಬರುತ್ತೇನೆ ಇಲ್ಲ ಅಂದರೆ ಸತ್ತುಹೋಗುತ್ತೀನಿ."

ಹೆಂಡತಿ ಹೇಳುತ್ತಾಳೆ– "ಶಹಬ್ಬಾಶ್, ಹೋಗು . ನೀನು ವೀರ. ನೀನು ಖಂಡಿತಾ ಯಶಸ್ವಿಯಾಗುತ್ತೀಯ"

ಆ ಹಾಡು ಕೇಳಿ ನಾನು ಮಂತ್ರಮುಗ್ಧನಾದೆ. ಹಾಡು ಮುಗಿಯುತ್ತಿದ್ದಂತೆ ನಾವುಗಳು ನಿಂತೆವು. ನನ್ನ ಕಣ್ಣ ಪಟ್ಟಿಗಳನ್ನು ಕಳಚಲಾಯಿತು. ಎದುರುಗಡೆ ದೊಡ್ಡ ಮೈದಾನ ಇತ್ತು. ಅವರುಗಳು ಇರಲೆಂದು ಅದರ ಸುತ್ತಲೂ ಗುಹೆಗಳನ್ನು ಮಾಡಿದ್ದರು.

ಮತ್ತೊಮ್ಮೆ ನನ್ನನ್ನು ತಲಾಶ್ ಮಾಡಲಾಯಿತು. ಈ ಸಲ ನನ್ನ ಬಟ್ಟೆಗಳನ್ನು ಕಳಚಲಾಯಿತು. ಮೈ ಮೇಲೆ ಬರೀ ಪೈಜಾಮಾ ಮಾತ್ರ ಉಳಿದಿತ್ತು. ಎದುರುಗಡೆ ಒಂದು ಭಾರೀ ಚಪ್ಪಡಿಯನ್ನು ಇಡಲಾಗಿತ್ತು. ಎಲ್ಲರೂ ಸೇರಿಕೊಂಡು ಅದನ್ನು ಸರಿಸಿದರು. ನನ್ನನ್ನು ಅತ್ತಲೇ ಕರೆದೊಯ್ದರು. ನನ್ನ ಆತ್ಮ ಕಂಪಿಸಿತು. ಇವರಂತೂ ನನ್ನನ್ನು ಜೀವಂತವಾಗಿ ಸಮಾಧಿಗೆ ತಳ್ಳಿಬಿಡುತ್ತಾರೆ. ನಾನು ಬಹಳ ನೋವಿನ ಮುಖ ಮಾಡಿ ಸರದಾರನ ಕಡೆ ತಿರುಗಿ ಹೇಳಿದೆ–"ಸರದಾರ್ ಸರಕಾರ ನಿಮಗೆ ಹಣ ಕೊಡುತ್ತೆ ನನ್ನನ್ನು ಕೊಲ್ಲಬೇಡಿ"

ಸರದಾರ್ ನಕ್ಕು ಹೇಳಿದ– "ನಿನ್ನನ್ನು ಯಾರು ಕೊಲ್ಲುತ್ತಾರೆ. ಸೆರೆಯಲ್ಲಿಟ್ಟಿರುತ್ತೀವಿ. ಈ ಮನೆಯಲ್ಲಿ ಬಂದಿಯಾಗಿರುತ್ತೀಯ. ಹಣ ಬಂದ ಮೇಲೆ ನಿನ್ನನ್ನು ಬಿಡಲಾಗುತ್ತದೆ."

ಸರದಾರನ ಮಾತು ಕೇಳಿ ನನಗೆ ಜೀವದಲ್ಲಿ ಜೀವ ಬಂದ ಹಾಗಾಯಿತು. ಸರದಾರನು ನನ್ನ ಪಾಕೆಟ್ ಬುಕ್ ಮತ್ತು ಪೆನ್ಸಿಲ್ ಮುಂದಿಡುತ್ತ– "ತಗೋ ಇದರಲ್ಲಿ ಬರಿ. ಒಂದು ಪೈಸೆ ಕಮ್ಮಿ ಬಂದರೂ ನಿನ್ನ ಪ್ರಾಣಕ್ಕೆ ರಕ್ಷಣೆ ಇಲ್ಲ" ಎಂದನು.

ನಾನು ಕಮೀಶನರ್ ಹೆಸರಿಗೆ ಒಂದು ಪತ್ರ ಬರೆದೆ. ಆ ಜನರು ನನ್ನನ್ನು ಅದೇ ಕತ್ತಲೆ ಕೋಣೆಯಲ್ಲಿ ಕೂಡಿಹಾಕಿ ಹಗ್ಗ ಎಳೆದರು.

4

ಸರದಾರ್ ಸಾಹೇಬರು ಒಂದು ದೀರ್ಘ ನಿಟ್ಟುಸಿರು ಬಿಟ್ಟು ಹೇಳತೊಡಗಿದರು. "ಅಸದ್ ಖಾನ್ ಆ ಬಾವಿಯಲ್ಲಿ ನನ್ನನ್ನು ನೇತುಹಾಕಿದ ಕ್ಷಣದಲ್ಲಿ ನನ್ನ ಅಂತರಾತ್ಮವು ಕಂಪಿಸುತ್ತಿತ್ತು . ಕೆಳಗೆ ಕತ್ತಲೆಯಿದ್ದ ಜಾಗದಲ್ಲಿ ಬೆಳುದಿಂಗಳು ಹರಡಿತ್ತು. ಒಳಗಿನಿಂದ ತೀರ ಚಿಕ್ಕದೂ ಆಗಿರಲಿಲ್ಲ ದೊಡ್ಡದೂ ಆಗಿರಲಿಲ್ಲ. ನೆಲ ತರಕಲು ತರಕಲಾಗಿತ್ತು. ವರ್ಷಗಟ್ಟಲೆ ಇಲ್ಲಿ ನೀರಿನ ಧಾರೆಯು ಹರಿದಿದ್ದಿರಬೇಕು ಮತ್ತು ಅದರಿಂದಲೇ ಈ ಹಳ್ಳ(ತಗ್ಗು) ಉಂಟಾಗಿರಬೇಕು ಎನಿಸುತ್ತಿತ್ತು. ಕಲ್ಲಿನ ದಪ್ಪ ಗೋಡೆಯಿಂದ ಆ ಹಳ್ಳ ಸುತ್ತುವರಿಯಲ್ಪಟ್ಟಿತ್ತು. ಎಲ್ಲೆಲ್ಲಿ ಅಲ್ಲಿ ರಂಧ್ರಗಳಿದ್ದುವೋ ಅವುಗಳಿಂದ ಬೆಳಕು ಮತ್ತು ಗಾಳಿ ಬರುತ್ತಿತ್ತು. ಕೆಳಕ್ಕೆ ಹೋಗಿ ನಾನು ನನ್ನ ಸ್ಥಿತಿ–ಗತಿಯ ಬಗ್ಗೆ ಚಿಂತಿಸತೊಡಗಿದೆ. ಮನಸ್ಸು ತುಂಬ ಗಾಬರಿಗೊಳ್ಳುತ್ತಿತ್ತು. ಯಮನ ಕೋಣೆಯ ವೇದನೆಯನ್ನು ಅನುಭವಿಸುವುದೂ ನನ್ನ ಹಣೆಯಲ್ಲಿ ಬರೆದಿತ್ತು.

ಮೆಲ್ಲ ಮೆಲ್ಲಗೆ ಸಂಜೆ ಕಾಲಿಟ್ಟಿತು. ಅವರುಗಳು ಇದುವರೆಗೆ ನನ್ನನ್ನೇನೂ ವಿಚಾರಿಸಿರಲಿಲ್ಲ. ಹಸಿವಿನಿಂದ ಜೀವ ಕಂಗಾಲಾಗಿತ್ತು. ಮತ್ತೆ ಮತ್ತೆ ನನ್ನನ್ನೂ ವಿಧಿಯನ್ನೂ ನಿಂದಿಸುತ್ತಿದ್ದೆ. ಮನುಷ್ಯ ಅಸಹಾಯಕನಾದಾಗ ದೈವವನ್ನು ನಿಂದಿಸುತ್ತಾನೆ.

ಅಂತೂ ಕೊನೆಗೆ ಯಾರೋ ಒಂದು ರಂಧ್ರದಿಂದ ನಾಲ್ಕು ದೊಡ್ಡ ದೊಡ್ಡ ರೊಟ್ಟಿಗಳನ್ನು ಹೊರಗಡೆಯಿಂದ ಎಸೆದರು. ರೊಟ್ಟಿಯ ಒಂದು ಚೂರು ಕಂಡ ಕೂಡಲೇ ನಾಯಿ ಅದರತ್ತ ಓಡುವಂತೆ ನಾನೂ ಓಡಿ ಅದನ್ನು ಎತ್ತಿಕೊಂಡು ಆ ರಂಧ್ರದತ್ತ ನೋಡತೊಡಗಿದೆ. ಆದರೆ ಆ ಮೇಲೆ ಯಾರೂ ಏನನ್ನೂ ಎಸೆಯಲಿಲ್ಲ. ಮತ್ತು ಯಾವುದೇ ಅದೇಶ ನೀಡಲೂ ಇಲ್ಲ. ಕುಳಿತುಕೊಂಡು ರೊಟ್ಟಿಗಳನ್ನು ತಿನ್ನತೊಡಗಿದೆ. ಸ್ವಲ್ಪ ಹೊತ್ತಿನ ನಂತರ ಅದೇ ರಂಧ್ರದ ಮೇಲೆ ಯಾರೋ ನೀರು ತುಂಬಿದ ಒಂದು ಬಟ್ಟಲನ್ನು ಇರಿಸಿದ್ದರು. ನಾನು ದೇವರಿಗೆ ವಂದಿಸುತ್ತ ನೀರು ಎತ್ತಿಕೊಂಡು ಕುಡಿದೆ. ಜೀವಕ್ಕೆ ತೃಪ್ತಿಯಾದ ಮೇಲೆ "ಇನ್ನಷ್ಟು ನೀರು ಬೇಕು" ಎಂದು ಹೇಳಿದೆ.

ಇದಕ್ಕೆ ಗೋಡೆಯ ಆ ಕಡೆಯಿಂದ ಒಂದು ಭೀಷಣ ಅಟ್ಟಹಾಸ ಕೇಳಿಬಂತು. ಯಾರೋ ಖಣಖಣ ದನಿಯಲ್ಲಿ ಹೇಳಿದರು–'ನೀರು ಸಿಗುವುದು ಇನ್ನು ನಾಳೆಗೆ. ಬಟ್ಟಲು ಕೊಟ್ಟುಬಿಡು; ಕೊಡದೆ ಇದ್ದರೆ ನಾಳೆನೂ ನೀರು ಸಿಕ್ಕಲ್ಲ.'

ಮಾಡೋದೇನು, ಸೋತು ಬಟ್ಟಲನ್ನು ಅಲ್ಲೇ ಇಟ್ಟುಬಿಟ್ಟೆ.

ಹೀಗೇ ಹಲವು ದಿನಗಳು ಕಳೆದುಹೋದವು. ದಿನವೂ ಎರಡೂ ಹೊತ್ತು ನಾಲ್ಕು ರೊಟ್ಟಿ, ಮತ್ತು ಒಂದು ಲೋಟ ನೀರು ದೊರೆಯುತ್ತಿತ್ತು. ಕ್ರಮೇಣ ನಾನೂ ಈ ನೀರಸ ಜೀವನಕ್ಕೆ ಹೊಂದಿಕೊಂಡೆ. ನಿರ್ಜನತೆ ಈಗ ಅಷ್ಟು ಕೆಟ್ಟನಿಸುತ್ತಿರಲಿಲ್ಲ. ಒಮ್ಮೊಮ್ಮೆ ನನ್ನ ಭಾಷೆಯಲ್ಲಿ ಕೆಲವೊಮ್ಮೆ ಪಶ್ತೋ ಭಾಷೆಯಲ್ಲಿ ಹಾಡುತ್ತಿದ್ದೆ. ಇದರಿಂದ ಆರೋಗ್ಯ ಸ್ವಲ್ಪ ಸುಧಾರಿಸುತ್ತಿತ್ತು ಮತ್ತು ಹೃದಯಕ್ಕೆ ನೆಮ್ಮದಿ ದೊರೆಯುತ್ತಿತ್ತು.

ಒದು ದಿನ ರಾತ್ರಿ ಹೊತ್ತು ನಾನು ಒಂದು ಪಶ್ತೋ ಗೀತೆ ಹಾಡುತ್ತಿದ್ದೆ. ತನ್ನನ್ನು ಸುಡಲಿರುವ ಬಕಗಳೊಂದಿಗೆ ಮಜನೂ ಹೇಳುತ್ತಿದ್ದ–'ಯಾತ್ರಿಕರನ್ನು ಸುಟ್ಟು ಬೂದಿಮಾಡುವ ಆ ತಾಪ ನಿಮ್ಮಲ್ಲಿಲ್ಲವೆ? ಆ ತಾಪ ನನ್ನನ್ನೇಕೆ ಸುಡುತ್ತಿಲ್ಲ? ನನ್ನ ಅಂತರಂಗದಲ್ಲಿಯೇ ಒಂದು ಜ್ವಾಲೆ ಅಡಗಿರುವುದು ಅದಕ್ಕೆ ಕಾರಣವೆ?'

"ನೋಡು ಲೈಲಾ ನಿನ್ನನ್ನು ಹುಡುಕುತ್ತ ಇಲ್ಲಿಗೆ ಬಂದಾಗ ದೇಹವನ್ನು ಮರಳಿನಿಂದ ಮುಚ್ಚಿಕೊಳ್ಳಬೇಡ. ಹಾಗೆ ಮಾಡಿದರೆ ಲೈಲಾಳ ಹೃದಯ ಗಾಜಿನ ಹಾಗೆ ಒಡೆದುಹೋಗುತ್ತದೆ."

ನಾನು ಹಾಡುವುದು ನಿಲ್ಲಿಸಿದೆ. ಅದೇ ಹೊತ್ತಿಗೆ ರಂಧ್ರದ ಮೂಲಕ ಯಾರೋ ಹೇಳಿದರು– "ಕೈದಿ ಆ ಹಾಡನ್ನು ಇನ್ನೊಂದು ಸಲ ಹಾಡು!" ನಾನು ಬೆಚ್ಚಿಬಿದ್ದೆ. ಸ್ವಲ್ಪ ಸಂತೋಷವೂ ಆಯಿತು; ಆಶ್ಚರ್ಯವೂ ಆಯಿತು. ಕೇಳಿದೆ– "ನೀನು ಯಾರು?"

ಅದೇ ರಂಧ್ರದಿಂದ ಉತ್ತರ ಸಿಕ್ಕಿತು– "ನಾನು ತೂರಯಾ. ಸರದಾರನ ಮಗಳು"

"ನಿನಗೆ ಈ ಹಾಡು ಇಷ್ಟವಾಯಿತೆ"?– ನಾನು ಕೇಳಿದೆ.

"ಹೌದು ಇಷ್ಟ ಆಯಿತು ಕೈದಿ. ಹಾಡು. ನಾನು ಇನ್ನೊಮ್ಮೆ ಕೇಳಲಿಚ್ಛಿಸುತ್ತೀನಿ. ಹಾಡು ಹಾಡುತ್ತಿರು. ಇದಕ್ಕೆ ಪ್ರತಿಯಾಗಿ ನಾನು ನಿನಗೆ ಇನ್ನೆರಡು ರೊಟ್ಟಿ ಮತ್ತು ಇನ್ನಷ್ಟು ನೀರು ಕೊಡುತ್ತೀನಿ".

ತೂರಯಾ ಹೊರಟುಹೋದಳು. ಇದರ ನಂತರ ನಾನು ದಿನವೂ ರಾತ್ರಿ ಹೊತ್ತು ಅದೇ ಹಾಡು ಹಾಡುತ್ತಿದ್ದೆ. ಮತ್ತು ತೂರಯಾ ಆ ಗೋಡೆಯ ಹತ್ತಿರ ಬಂದು ಕೇಳಿಸಿಕೊಳ್ಳುತ್ತಿದ್ದಳು.

ನನ್ನ ಮನೋರಂಜನೆಯ ಒಂದು ದಾರಿ ಹೀಗೆ ತೆರೆದುಕೊಂಡಿತು.

ಕ್ರಮೇಣ ಒಂದು ತಿಂಗಳು ಕಳೆಯಿತು. ಆದರೆ ನನ್ನನ್ನು ಬಿಡಿಕೊಳ್ಳಲು ಇದುವರೆಗೆ ಯಾರೂ ಹಣ ಕಳಿಸಲಿಲ್ಲ. ದಿನ ಕಳೆದಂತೆ ನನಗೆ ಜೀವನದ ಬಗ್ಗೆ ನಿರಾಶೆ ಉಂಟಾಗುತ್ತ ಹೋಯಿತು.

ಸರಿಯಾಗಿ ಒಂದು ತಿಂಗಳ ನಂತರ ಸರದಾರ ಬಂದು ಹೇಳಿದ– "ಕೈದಿ ನಾಳೆಯ ಒಳಗೆ ಹಣ ಬರದೆ ಹೋದರೆ ನಿನ್ನನ್ನು ಕೊಲ್ಲಲಾಗುವುದು. ಇನ್ನು ನಿನಗೆ ರೊಟ್ಟಿ ಕೊಡುತ್ತಾ ಇರಕ್ಕಾಗಲ್ಲ." ನನಗೆ ಬದುಕುವ ಯಾವ ಆಶೆಯೂ ಉಳಿಯಲಿಲ್ಲ. ಆ ದಿನ ನಾನು ಏನನ್ನೂ ತಿನ್ನಲಿಲ್ಲ, ಏನನ್ನೂ ಕುಡಿಯಲೂ ಇಲ್ಲ. ರಾತ್ರಿ ಆಯಿತು. ಮತ್ತೆ ರೊಟ್ಟಿಗಳನ್ನು ಎಸೆಯಲಾಯಿತು. ಆದರೆ ತಿನ್ನಬೇಕೆನಿಸಲಿಲ್ಲ.

ಗೊತ್ತಾದ ವೇಳೆಗೆ ಬಂದ ತೂರಯಾ– "ಕೈದಿ ಹಾಡು ಹೇಳು" ಎಂದಳು.

ಅಂದು ಯಾವುದೂ ಹಿಡಿಸುತ್ತಿರಲಿಲ್ಲ. ನಾನು ಸುಮ್ಮನಿದ್ದೆ.

ತೂರಯಾ ಮತ್ತೆ ಕೇಳಿದಳು– "ಕೈದಿ ಏನು ನಿದ್ದೆ ಮಾಡ್ತಿದ್ದೀಯಾ?"

ನಾನು ತೀರ ಕಟ್ಟ ದನಿಯಲ್ಲಿ "ಇಲ್ಲ ಈ ಹೊತ್ತು ನಿದ್ದೆಮಾಡಿ ಏನು ಮಾಡಲಿ. ನಾಳೆ ನಿದ್ದೆಮಾಡುತ್ತೀನಿ. ಕಾರಣ ಮತ್ತೆ ಏಳಲೇಬೇಕಾಗಲ್ಲ."

"ಯಾಕೆ ಸರ್ಕಾರ ಹಣ ಕಳಿಸಲಿಲ್ಲವೇನು?" ತೂರಯಾ ಕೇಳಿದಳು.

ನಾನು ಹೇಳಿದೆ– "ಕಳಿಸಬಹುದೇನೋ. ಆದರೆ ನಾಳೆ ನನ್ನನ್ನು ಸಾಯಿಲಾಗುತ್ತದೆ. ನಾನು ಸತ್ತ ಮೇಲೆ ಹಣ ಬಂದರೂ ಅದರಿಂದ ನನಗೇನು ಪ್ರಯೋಜನ?"

ತೂರಯಾ ಸಾಂತ್ವನದ ದನಿಯಿಂದ ಹೇಳಿದಳು– "ಆಯಿತು, ನೀನು ಹಾಡು. ನಾಳೆ ನೀನು ಸಾಯಲು ನಾನು ಬಿಡುವುದಿಲ್ಲ."

ನಾನು ಹಾಡಲು ಶುರು ಮಾಡಿದೆ. ಹೋಗುವಾಗ ತೂರಯಾ– "ಕೈದಿ ನಿನಗೆ ಮರದ ಸೆರೆಮನೆಯಲ್ಲಿ ಇರುವುದು ಇಷ್ಟವಾಗುತ್ತದೆಯೆ?" ಎಂದು ಕೇಳಿದಳು.

ನಾನು ಸಂತೋಷದಿಂದ "ಆಗಬಹುದು" ಎಂದೆ.

ಮರುದಿನವೇ ಆ ಕತ್ತಲೆಯ ಕೂಪದಿಂದ ನನಗೆ ಬಿಡುಗಡೆಯಾಯಿತು. ನನ್ನ ಎರಡೂ ಕಾಲುಗಳನ್ನು ದಪ್ಪನಾದ ಬಡಿಗೆಗಳಂಥ ರಂಧ್ರಗಳಲ್ಲಿ ಬಂಧಿಸಲಾಯಿತು. ಮರದಿಂದ ಮಾಡಿದ ಕೀಲುಗಳಿಂದ ನೆಲದ ತಗ್ಗುಗಳಲ್ಲಿ ಅವುಗಳನ್ನು ಕಟ್ಟಲಾಯಿತು.

ಸರದಾರನು ನನ್ನ ಬಳಿ ಬಂದು "ಅಯ್ಯಾ ಕೈದಿ ನಿನಗೆ ಇನ್ನೂ ಹದಿನೈದು ದಿನಗಳ ಅವಧಿಯನ್ನು ಹೆಚ್ಚಾಗಿ ನೀಡಲಾಗುವುದು. ಇದರ ನಂತರ ನಿನ್ನ ರುಂಡವನ್ನು ಮುಂಡದಿಂದ ಬೇರ್ಪಡಿಸಲಾಗುವುದು. ಇಂದು ನಿನ್ನ ಮನೆಗೆ ಎರಡನೇ ಪತ್ರ ಬರಿ. ಅವಧಿಯೊಳಗೆ ಹಣ ಬರಲಿಲ್ಲವಾದರೆ ನಿನ್ನನ್ನೇ ಹಲಾಲ್ ಮಾಡಿಬಿಡಲಾಗುವುದು" ಎಂದನು.

ನಾನು ಎರಡನೇ ಪತ್ರ ಬರೆದು ಅವನ ಕೈಗೆ ಕೊಟ್ಟೆ.

ಸರದಾರ ಅತ್ತ ಹೋದ ಮೇಲೆ ತೂರಯಾ ಬಂದಳು. ಈಗ ತಾನೆ ಹೋದಳಲ್ಲ ಅವಳೇ ತೂರಯಾ. ಇವಳೇ ಆ ಸರದಾರನ ಮಗಳು. ನನ್ನ ಹಾಡು ಕೇಳುತ್ತಿದ್ದವಳು ಇವಳೇ. ಸರದಾರನಿಗೆ ಶಿಫಾರಸ್ ಮಾಡಿ ನನ್ನ ಪ್ರಾಣ ಉಳಿಸಿದವಳು ಇವಳೇ.

ತೂರಯಾ ಬಂದು ನನ್ನನ್ನು ನೋಡತೊಡಗಿದಳು. ನಾನು ಅವಳತ್ತ ನೋಡತೊಡಗಿದೆ.

ತೂರಯಾ ಕೇಳಿದಳು– "ಕೈದಿ ಮನೆಯಲ್ಲಿ ನಿನ್ನವರು ಯಾರ‍್ಯಾರು ಇದ್ದಾರೆ?"

ನಾನು ಅತ್ಯಂತ ವ್ಯಾಕುಲ ಸ್ವರದಲ್ಲಿ ಹೇಳಿದೆ–"ಇಬ್ಬರು ಚಿಕ್ಕ ಚಿಕ್ಕ ಹುಡುಗರು; ಬೇರೆ ಯಾರೂ ಇಲ್ಲ."

ಅಫ್ರೀದಿಗಳು ಮಕ್ಕಳನ್ನು ತುಂಬ ಪ್ರೀತಿಸುತ್ತಾರೆಂದು ನನಗೆ ತಿಳಿದಿತ್ತು.

ತೂರಯಾ ಕೇಳಿದಳು– "ಅವರ ತಾಯಿ ಇಲ್ಲವೆ?"

ನಾನು ಕೇವಲ ಕರುಣೆ ಹುಟ್ಟಿಸುವ ಸಲುವಾಗಿ ಹೇಳಿದೆ– "ಇಲ್ಲ, ಅವರ ತಾಯಿ ಸತ್ತುಹೋಗಿದ್ದಾಳೆ. ಅವು ಒಂಟಿಯಾಗಿವೆ. ಬದುಕಿವೆಯೋ ಸತ್ತಿವೆಯೋ ಗೊತ್ತಿಲ್ಲ, ಕಾರಣ ನನ್ನ ಹೊರತು ಅವರನ್ನು ನೋಡಿಕೊಳ್ಳುವವರು ಬೇರೆ ಯಾರೂ ಇರಲಿಲ್ಲ".

ಹಾಗೆ ಹೇಳುತ್ತ ಹೇಳುತ್ತ ನನ್ನ ಕಣ್ಣು ತುಂಬಿಬಂದುವು. ತೂರಯಾಳ ಕಣ್ಣುಗಳೂ ಒದ್ದೆಯಾದವು. ತೂರಯಾ ತನ್ನ ಭಾವಾವೇಶವನ್ನು ಹತೋಟಿಗೆ ತಂದುಕೊಂಡು ಹೇಳಿದಳು– "ಹಾಗಾದರೆ ನಿನ್ನವರು ಯಾರೂ ಇಲ್ಲವಾ? ಮಕ್ಕಳು ಒಂಟಿಯಾಗಿವೆಯಾ? ಅವು ತುಂಬ ಅಳುತ್ತಿರಬಹುದು".

ನಾನು ಮನಸ್ಸಿನಲ್ಲೇ ಸಂತಸ ತಾಳುತ್ತ ಹೇಳಿದೆ– "ಹೌದು, ಖಂಡಿತಾ ಅಳುತ್ತಾ ಇರುತ್ತಾರೆ. ಬಹುಶಃ ಸತ್ತುಹೋಗಿರಲೂ ಬಹುದು. ಯಾರಿಗೆ ಗೊತ್ತು?"

ತೂರಯಾ ನನ್ನ ಮಾತನ್ನು ಮಧ್ಯದಲ್ಲೇ ತುಂಡರಿಸಿ ಹೇಳಿದಳು– "ಇಲ್ಲ, ಇನ್ನೂ ಸತ್ತಿರಲ್ಲ. ನೀನು ವಾಸ ಮಾಡುವುದು ಎಲ್ಲಿ. ನಾನು ಹೋಗಿ ಪತ್ತೆ ಮಾಡಿಸ್ತೀನಿ".

ನಾನು ಮನೆಯ ವಿಳಾಸ ನೀಡಿದೆ. "ಆ ಜಾಗದಲ್ಲಿ ನಾನು ಹಲವಾರು ಸಲ ಹೋಗಿಬಂದಿದ್ದೀನಿ. ಪೇಟೆಯಲ್ಲಿ ವ್ಯಾಪಾರ ಮಾಡಿಕೊಂಡು ಬರಲು ಹೋಗುತ್ತೇನೆ. ಈ ಸಲ ಹೋದರೆ ನಿನ್ನ ಮಕ್ಕಳ ಸಮಾಚಾರ ತರುತ್ತೀನಿ" ಎಂದಳು.

ನಾನು ಸಂದೇಹದಿಂದ ಕೇಳಿದೆ– "ಯಾವಾಗ ಹೋಗುತ್ತೀಯಾ?"

ಅವಳು ಸ್ವಲ್ಪ ಯೋಚಿಸಿ– "ಈ ಗುರುವಾರ ಹೋಗುತ್ತೀನಿ. ಆಯಿತು, ನೀನು ಅದೇ ಹಾಡು ಹೇಳು"

ನಾನು ಇಂದು ಭಾರಿ ಸಂತೋಷ ಮತ್ತು ಹುರುಪಿನಿಂದ ಹಾಡಲಾರಂಭಿಸಿದೆ. ತೂರಯಾಳ ಮೇಲೆ ಇದರ ಪ್ರಭಾವ ಎಷ್ಟರ ಮಟ್ಟಿಗೆ ಆಗುತ್ತೆ ಅಂತ ನೋಡಿದೆ.

ಅವಳ ದೇಹ ಕಂಪಿಸತೊಡಗಿತು. ಕಣ್ಣುಗಳಲ್ಲಿ ನೀರು ಹೊರಹೊಮ್ಮಿತು. ಕೆನ್ನೆಗಳು ಬಿಳಿಚಿಕೊಂಡವು. ಅವಳು ನಡುಗುತ್ತಾ ಕುಳಿತುಬಿಟ್ಟಳು. ಅವಳ ಸ್ಥಿತಿ ನೋಡಿ ನಾನು ಎರಡರಷ್ಟು ಉತ್ಸಾಹದಿಂದ ಹಾಡಲಾರಂಭಿಸಿದೆ. ಕೊನೆಯಲ್ಲಿ– "ತೂರಯಾ ಒಂದು ವೇಳೆ ನನ್ನನ್ನು ಸಾಯಿಸಿದರೆ ನನ್ನ ಸಾವಿನ ಸುದ್ದಿಯನ್ನು ಮಕ್ಕಳಿಗೆ ಮುಟ್ಟಿಸು."

ನನ್ನ ಮಾತಿನ ಪ್ರಭಾವ ಅವಳ ಮೇಲೆ ಪೂರಾ ಆಯಿತು. ಗದ್ಗದಿತ ಕಂಠದಿಂದ ತೂರಯಾ ಹೇಳಿದಳು– "ಕೈದಿ ನೀನು ಸಾಯುವುದಿಲ್ಲ. ನಿನ್ನ ಮಕ್ಕಳ ಸಲುವಾಗಿ ನಿನ್ನನ್ನು ಬಿಟ್ಟುಬಿಡುತ್ತೇನೆ"

ನಾನು ನಿರಾಶನಾಗಿ ಹೇಳಿದೆ– "ತೂರಯಾ ನೀನು ಬಿಟ್ಟರೂ ನಾನು ಉಳಿಯುವುದಿಲ್ಲ. ಈ ಕಾಡಿನಲ್ಲಿ ಅಲೆದೂ ಅಲೆದೂ ಸತ್ತುಹೋಗುತ್ತೇನೆ. ಇನ್ನು ನಿನಗೂ ತೊಂದರೆ ಉಂಟಾಗಬಹುದು. ನನ್ನ ಪ್ರಾಣದ ಸಲುವಾಗಿ ನಿನ್ನನ್ನು ನಾನು ಕಷ್ಟಕ್ಕೆ ಸಿಲುಕಿಸುವುದಿಲ್ಲ,"

ತೂರಯಾ ಹೇಳಿದಳು– "ನನ್ನ ಬಗ್ಗೆ ನೀನು ಯೋಚನೆ ಮಾಡುವುದು ಬೇಡ. ನನ್ನ ಮೇಲೆ ಯಾರೂ ಸಂದೇಹ ಪಡಲ್ಲ. ನಾನು ಸರದಾರನ ಮಗಳು. ನಾನು ಏನು ಹೇಳುತ್ತೀನಿ ಅದನ್ನು ಎಲ್ಲರೂ ಒಪ್ಪಿಕೊಳ್ತಾರೆ. ಆದರೆ ನೀನು ಹೋಗಿ ಹಣ ಕಳುಹಿಸುತ್ತೀಯಾ ತಾನೆ?"

ನಾನು ಸಂತುಷ್ಟನಾಗಿ ಹೇಳಿದೆ– "ಹೌದು ತೂರಯಾ ಹಣ ಕಳಿಸುತ್ತೀನಿ"

ಹೋಗುತ್ತ ತೂರಯಾ ಹೇಳಿದಳು– "ಹಾಗಿದ್ದರೆ ನಾನು ನಿನ್ನನ್ನು ಬಿಡುಗಡೆ ಮಾಡಿಸುತ್ತೀನಿ."

ಈ ಘಟನೆಯ ನಂತರ ತೂರಯಾ ಯಾವಾಗಲೂ ನನ್ನ ಮಕ್ಕಳ ವಿಚಾರ ಮಾತಾಡ್ತಾ ಇದ್ದಳು. ಅಸದ್‌ಖಾನ್ ನಿಜಕ್ಕೂ ಈ ಅಫ್ರೀದಿಗಳಿಗೆ ಮಕ್ಕಳೆಂದರೆ ಪಂಚ ಪ್ರಾಣ. ಆ ಬ್ರಹ್ಮ ಅವರನ್ನು ಬರ್ಬರ ಹಿಂಸ್ರ ಪಶುಗಳನ್ನಾಗಿ ಮಾಡಿದ್ದರೂ ಮಾನವ ಸ್ವಭಾವದಿಂದ ವಂಚಿತರನ್ನಾಗಿಯೂ ಮಾಡಿಲ್ಲ. ಆ ಗುರುವಾರ ಬಂತು. ಸರದಾರನಾಗಲಿ ಅವನ ತಂಡವಾಗಲಿ ಇದುವರೆಗೂ ಬರಲಿಲ್ಲ. ಆ ದಿನ ಸಾಯಂಕಾಲ ತೂರಯಾ ಬಂದು ಹೇಳಿದಳು–"ಕೈದಿ, ಈಗ ನಾನು ಹೋಗಲು ಸಾಧ್ಯವಿಲ್ಲ. ಕಾರಣ ನಮ್ಮ ತಂದೆ ಇನ್ನಿದುವರೆಗೂ ಬರಲಿಲ್ಲ. ನಾಳೆಗೂ ಅವನು ಬರದಿದ್ದರೆ ರಾತ್ರಿಗೆ ನಿನ್ನನ್ನು ಬಿಟ್ಟುಬಿಡುತ್ತೇನೆ. ನೀನು ನಿನ್ನ ಮಕ್ಕಳ ಬಳಿಗೆ ಹೋಗು. ಆದರೆ ಮಾತ್ರ ಹಣ ಕಳಿಸುವುದನ್ನು ಮರೆಯ ಬೇಡ. ನಾನು ನಿನ್ನ ಮೇಲೆ ನಂಬಿಕೆ ಇಟ್ಟಿದ್ದೀನಿ."

ನಾನು ಆ ದಿನ ಬಹಳ ಉತ್ಸಾಹದಿಂದ ಹಾಡು ಹೇಳಿದೆ. ಅರ್ಧ ರಾತ್ರಿಯ ತನಕ ತೂರಯಾ ಕೇಳುತ್ತಿದ್ದಳು. ಆ ನಂತರ ಮಲಗಲು ಹೋದಳು. ನಾಳೆಯೂ ಸರದಾರ

ಬರದೆ ಇರಲೆಂದು ನಾನು ಮನಸ್ಸಿನಲ್ಲೇ ದೇವರನ್ನು ಬೇಡುತ್ತಿದ್ದೆ. ಮರದಲ್ಲಿ ಬಂಧಿತವಾದ ನನ್ನ ಕಾಲು ಪೂರ್ತಿ ನಿಷ್ಪ್ರಯೋಜಕವಾಗಿಬಿಟ್ಟಿತ್ತು. ಇಡೀ ಶರೀರ ನೋಯುತ್ತಾ ಇತ್ತು. ಇದಕ್ಕಿಂತಲೂ ಕತ್ತಲೆಯ ಕೂಪದಲ್ಲೇ ಚೆನ್ನಾಗಿತ್ತು. ಕಾರಣ ಅಲ್ಲಿ ಕೈ ಕಾಲು ಆಡಿಸ ಬಹುದಿತ್ತು.

ಮಾರನೇ ದಿನವೂ ತಂಡ ಹಿಂತಿರುಗಲಿಲ್ಲ. ಆ ಹೊತ್ತು ತೂರಯಾ ತುಂಬ ಚಿಂತಿತಳಾಗಿದ್ದಳು.ಸಂಜೆಗೆ ಬಂದು ನನ್ನ ಕಾಲುಗಳನ್ನು ಬಂಧನದಿಂದ ಬಿಡಿಸಿ– "ಕೈದಿ ಈಗ ನೀನು ಹೊರಟುಬಿಡು. ನಡಿ, ನಾನು ನಿನ್ನನ್ನು ಸ್ವಲ್ಪ ದೂರ ಕಳಿಸಿಕೊಡುತ್ತೀನಿ" ಎಂದಳು.

ಸ್ವಲ್ಪ ಹೊತ್ತಿನ ತನಕ ನಾನು ಕೈಕಾಲುಗಳನ್ನು ಚಾಚಿಕೊಂಡು ಮಲಗಿದ್ದೆ. ನಿಧಾನವಾಗಿ ಕಾಲುಗಳು ಸರಿಹೋದವು. ದೇವರಿಗೆ ಧನ್ಯವಾದ ಹೇಳುತ್ತ ತೂರಯಾಳ ಜೊತೆ ಹೊರಟೆ.

ತೂರಯಾಳನ್ನು ಸಂತುಷ್ಟಗೊಳಿಸಲು ನಾನು ದಾರಿಯುದ್ದಕ್ಕೂ ಹಾಡಿಕೊಂಡೇ ಹೋದೆ. ತೂರಯಾ ಮತ್ತೆ ಮತ್ತೆ ಕೇಳಿ ಮತ್ತೆ ಮತ್ತೆ ಅಳುತ್ತಿದ್ದಳು. ಅರ್ಧ ರಾತ್ರಿಯ ಹೊತ್ತಿಗೆ ಒಂದು ಸರೋವರದ ಸಮೀಪಕ್ಕೆ ಹೋದೆವು. ಅಲ್ಲಿಗೆ ಹೋದ ಮೇಲೆ ತೂರಯಾ ಹೇಳಿದಳು– "ನೀನು ಸೀದಾ ಹೋಗಿಬಿಡು. ಪೆಶಾವರ ತಲುಪುತ್ತೀಯಾ. ನೋಡು ಎಚ್ಚರಿಕೆಯಿಂದ ಹೋಗಬೇಕು. ಇಲ್ಲದೆ ಹೋದರೆ ಯಾರಾದರೂ ನಿನ್ನನ್ನು ಬಂದೂಕಗೆ ಗುರಿಮಾಡಿಬಿಡುತ್ತಾರೆ. ತಗೋ ನಿನ್ನ ಬಟ್ಟೆಗಳು. ಆದರೆ ಹಣ ಕಳಿಸಬೇಕು. ನಿನಗೆ ನಾನು ಜಾಮೀನಾಗಿರುತ್ತೀನಿ. ಹಣ ಬರಲಿಲ್ಲ ಅಂದರೆ ನನ್ನ ಪ್ರಾಣ ಹೋಗುತ್ತೆ; ಅಷ್ಟೇ ಅಲ್ಲ ನಿನ್ನ ಪ್ರಾಣ ಕೂಡ. ಹಣ ಬಂತೂ ಅಂತ ಆದರೆ ನೀನು ಒಂದು ವೇಳೆ ಯಾರಾದರೂ ಅಫ್ರೀದಿಯನ್ನು ಕೊಂದರೂ ಯಾವ ಅಫ್ರೀದಿಯೂ ನಿನ್ನ ಮೇಲೆ ಕೈ ಮಾಡಲ್ಲ. ಹೋಗು ದೇವರು ನಿನ್ನನ್ನು ಕಾಪಾಡಲಿ ಮತ್ತು ನಿನ್ನ ಮಕ್ಕಳೊಂದಿಗೆ ಸೇರಿಸಲಿ."

ತೂರಯಾ ಆ ನಂತರ ನಿಲ್ಲಲಿಲ್ಲ. ಹಾಡನ್ನು ಗುನುಗುತ್ತ ಹೊರಟುಹೋದಳು. ರಾತ್ರಿ ಎರಡು ಪ್ರಹರ ಕಳೆದಿತ್ತು. ಸುತ್ತಲೂ ಭಯಂಕರ ನಿಶ್ಶಬ್ದ ಆವರಿಸಿತ್ತು. ಕೇವಲ ಗಾಳಿ ಸುಂಯ್ ಸುಂಯ್ ಎಂದು ಬೀಸುತ್ತಿತ್ತು. ಆಕಾಶದ ಮಧ್ಯದಲ್ಲಿ ಚಂದ್ರನು ತನ್ನ ಹದಿನಾರೂ ಕಲೆಗಳಿಂದ ಶೋಭಿಸುತ್ತಿದ್ದನು. ಸರೋವರದ ದಡದ ಮೇಲೆ ಹೆಚ್ಚು ಹೊತ್ತು ಇರುವುದು ಸುರಕ್ಷಿತವಾಗಿರಲಿಲ್ಲ. ನಾನು ನಿಧಾನವಾಗಿ ದಕ್ಷಿಣದತ್ತ ನಡೆದೆ.

ಸಲಸಲಕ್ಕೂ ಸುತ್ತಲೂ ನೋಡುತ್ತ ಹೋಗುತ್ತಿದ್ದೆ. ದೇವರ ದಯೆಯಿಂದ ಬೆಳಕು ಹರಿಯುವ ಹೊತ್ತಿಗೆ ಪೆಶಾವರದ ಗಡಿಯನ್ನು ತಲುಪಿದೆ.

ಗಡಿಯಲ್ಲಿ ಸಿಪಾಹಿಗಳ ಪಹರೆ ಇತ್ತು. ನನ್ನನ್ನು ನೋಡಿದ ಕೂಡಲೆ ಇಡೀ ಸೇನೆಯಲ್ಲಿ ಗುಜುಗುಜು ಶುರುವಾಯಿತು. ಎಲ್ಲರೂ ನಾನು ಸತ್ತೆನೆಂದೇ ತಿಳಿದಿದ್ದರು. ಜೀವಂತವಾಗಿ ಹಿಂತಿರುಗಿದ್ದು ನೋಡಿ ಎಲ್ಲರೂ ತುಂಬಾ ಸಂತೋಷಪಟ್ಟರು.

ಕರ್ನಲ್ ಹ್ಯಾಮಿಲ್ಟನ್ ಸಾಹೇಬರೂ ಸುದ್ದಿ ತಿಳಿಯುತ್ತಿದ್ದಂತೆ ನನ್ನನ್ನು ಭೇಟಿಮಾಡಲು ಬಂದರು. ಎಲ್ಲ ಸಮಾಚಾರ ಕೇಳಿ ಹೇಳಿದರು– "ಮೇಜರ್ ಸಾಹೇಬರೆ, ನೀವು ಸತ್ತುಹೋಗಿದ್ದೀರಿ ಎಂದು ನಾನು ತಿಳಿದಿದ್ದೆ. ನಿಮ್ಮ ಎರಡು ಪತ್ರಗಳು ಬಂದಿದ್ದವು. ಆದರೆ ನೀವು ಅವನ್ನು ಬರೆದದ್ದು ಅಂತ ನನಗೆ ಕನಸಿನಲ್ಲೂ ನಂಬಿಕೆ ಬರಲಿಲ್ಲ. ನಾನಂತೂ ಅವುಗಳನ್ನು ನಕಲಿ ಎಂದೇ ತಿಳಿದಿದ್ದೆ. ನೀವು ಜೀವ ಸಹಿತ ಉಳಿದು ಬಂದದ್ದಕ್ಕೆ ದೇವರಿಗೆ ಧನ್ಯವಾದಗಳನ್ನು ಹೇಳಬೇಕು."

ನಾನು ಕರ್ನಲ್ ಸಾಹೇಬರಿಗೆ ಧನ್ಯವಾದಗಳನ್ನು ಹೇಳಿದೆ. ಮನಸ್ಸಿನಲ್ಲೇ ಅಂದುಕೊಂಡೆ: ಕಪ್ಪು ಮನುಷ್ಯ ಬರೆದದ್ದು ನಕಲಿ, ಆದರೆ ಅದೇ ಬಿಳಿ ಮನುಷ್ಯ ಬರೆದಿದ್ದಾಗಿದ್ದರೆ ಆಗ ಎರಡು ಯಾಕೆ ನಾಲ್ಕು ಸಾವಿರವನ್ನೇ ಕಳಿಸಿರುತ್ತಿದ್ದರು. ಅದೆಷ್ಟೊಂದು ಹಳ್ಳಿಗಳನ್ನು ಸುಟ್ಟುಹಾಕಲಾಗುತ್ತಿತ್ತೋ, ಇನ್ನು ಏನೇನೆಲ್ಲಾ ಆಗುತ್ತಿತ್ತೋ ಯಾರಿಗೆ ಗೊತ್ತು!

ನಾನು ಮಾತಿಲ್ಲದೆ ಮನೆಗೆ ಬಂದೆ. ಮಕ್ಕಳನ್ನು ನೋಡಿ ಮನಸ್ಸಿಗೆ ಅತೀವ ಸಂತೋಷವಾಯಿತು. ಅದೇ ದಿನ ಒಬ್ಬ ನಂಬಿಕಸ್ಥನಾದ ಆಳಿನ ಮೂಲಕ ಎರಡು ಸಾವಿರ ರೂಪಾಯಿಗಳನ್ನು ತೂರಯಾಳಿಗೆ ಕಳಿಸಿಕೊಟ್ಟೆ.

5

ಸರದಾರನು ಒಂದು ತಣ್ಣನೆಯ ಉಸಿರು ತೆಗೆದುಕೊಂಡು ಹೇಳಿದ– "ಅಸದ್ಖಾನ್ ನನ್ನ ಕಥೆ ಇನ್ನೂ ಮುಗಿದಿಲ್ಲ. ಅದರ ದುಃಖಾಂತ ಭಾಗ ಇನ್ನೂ ಉಳಿದಿದೆ. ಇಲ್ಲಿಗೆ ಬಂದ ಮೇಲೆ ನಿಧಾನವಾಗಿ ನನ್ನೆಲ್ಲ ಕಷ್ಟಗಳನ್ನು ಮರೆತುಬಿಟ್ಟೆ. ಆದರೆ ತೂರಯಾಳನ್ನು ಮರೆಯಲು ಸಾಧ್ಯವಾಗಲಿಲ್ಲ. ತೂರಯಾಳ ಕೃಪೆಯಿಂದಾಗಿಯೇ ನಾನು ನನ್ನ ಹೆಂಡತಿ ಮಕ್ಕಳೊಂದಿಗೆ ಒಂದುಗೂಡಲು ಸಾಧ್ಯವಾಯಿತು. ಅಷ್ಟೇ ಅಲ್ಲ, ಬದುಕೂ ದೊರೆತಿತ್ತು. ಅಂದ ಮೇಲೆ ಅವಳನ್ನು ನಾನು ಮರೆಯುವುದೆಂತು!"

ತಿಂಗಳುಗಳು ಮತ್ತು ವರ್ಷಗಳು ಕಳೆದುಹೋದವು. ತೂರಯಾಳನ್ನಾಗಲಿ ಅವಳ ತಂದೆಯನ್ನಾಗಲಿ ನೋಡಲಿಲ್ಲ. ತೂರಯಾ ಬರಲು ಹೇಳಿದ್ದಳು . ಆದರೆ ಅವಳು ಬರಲಿಲ್ಲ. ಒಂದು ವೇಳೆ ತೂರಯಾ ಬಂದುಬಿಟ್ಟರೆ ನಾನು ಸುಳ್ಳನೆಂದಾಗಿಬಿಡುತ್ತೇನೆಂಬ ಯೋಚನೆಯಿಂದ ಅಲ್ಲಿಂದ ಬಂದ ಮೇಲೆ ನನ್ನ ಹೆಂಡತಿಯನ್ನು ಅವಳ ತೌರಿಗೆ ಕಳುಹಿಸಿದ್ದೆ. ಆದರೆ ಮೂರು ವರ್ಷಗಳೇ ಕಳೆದು ಹೋದರೂ ತೂರಯಾ ಬರದೆ ಇದ್ದಾಗ ನಾನು ನಿಶ್ಚಿಂತನಾಗಿ ನನ್ನ ಹೆಂಡತಿಯನ್ನು ತವರಿನಿಂದ ಕರೆಸಿಕೊಂಡೆ. ನಾವು ಸುಖದಿಂದ ದಿನ ಕಳೆಯುತ್ತಿದ್ದಾಗ ಇದ್ದಕ್ಕಿದ್ದಂತೆ ದುರದೃಷ್ಟದ ಆ ಕ್ಷಣ ಬಂದೇ ಬಿಟ್ಟಿತು.

ಒಂದು ದಿನ ಸಾಯಂಕಾಲದ ಹೊತ್ತು ನಾನು ಮನೆಯ ಅಂಗಳದಲ್ಲಿ ಕುಳಿತುಕೊಂಡು ನನ್ನ ಹೆಂಡತಿಯೊಂದಿಗೆ ಮಾತು-ಕತೆ ಆಡುತ್ತಿದ್ದೆ. ಆಗ ಯಾರೋ ಮನೆಯ ಬಾಗಿಲನ್ನು ತಟ್ಟಿದ ಸದ್ದು ಕೇಳಿಸಿತು. ಮನೆಯ ಆಳು ಬಾಗಿಲು ತೆಗೆದ. ಒಬ್ಬ ಕಾಬೂಲಿ ಹೆಂಗಸು ನಿರ್ಭಯವಾಗಿ ಮೆಟ್ಟಿಲುಗಳನ್ನು ಹತ್ತಿಕೊಂಡು ಮೇಲೆ ಬಂದಳು. ಅವಳು ಅಂಗಳಕ್ಕೆ ಬಂದು ಶುದ್ಧ ಪಶ್ತೋ ಭಾಷೆಯಲ್ಲಿ "ಸರದಾರರು ಎಲ್ಲಿದ್ದಾರೆ" ಎಂದು ಕೇಳಿದಳು. ನಾನು ಕೊಠಡಿಯೊಳಕ್ಕೆ ಬಂದು- "ನೀನು ಯಾರು, ಏನು ಬೇಕು" ಎಂದು ಕೇಳಿದೆ.

ಆ ಹೆಂಗಸು ಕೆಲವು ಹವಳಗಳನ್ನು ಹೊರ ತೆಗೆಯುತ್ತ- "ಈ ಹವಳಗಳನ್ನು ಮಾರಲು ಬಂದಿದ್ದೇನೆ. ಕೊಳ್ಳುತ್ತೀರಾ?" ಎಂದು ಕೇಳಿದಳು.

ನನ್ನ ಹೆಂಡತಿಯೂ ನನ್ನೊಂದಿಗೆ ಕೊಠಡಿಯೊಳಕ್ಕೆ ಬಂದಿದ್ದಳು. ಅವಳು ಹವಳಗಳನ್ನು ಕೈಗೆತ್ತಿಕೊಂಡು ನೋಡತೊಡಗಿದಳು. ಅದೇ ಕಾಬೂಲಿ ಹೆಂಗಸು – "ಸರದಾರರೆ ಈ ಹೆಂಗಸು ಯಾರು, ನಿಮ್ಮವರೆ?" ಎಂದು ಕೇಳಿದಳು.

"ನನ್ನ ಹೆಂಡತೀನೆ, ಬೇರೆ ಇನ್ಯಾರು?" ಎಂದು ಉತ್ತರಿಸಿದೆ.

ಕಾಬೂಲಿ ಹೆಂಗಸು- "ನಿಮ್ಮ ಹೆಂಡತಿ ಸತ್ತು ಹೋಗಿದ್ದಳಲ್ಲವೆ? ಏನು ನೀವು ಎರಡನೇ ಮದುವೆ ಮಾಡಿಕೊಂಡಿರಾ?" ಎಂದು ಕೇಳಿದಳು.

ನಾನು ರೋಷದಿಂದ ಹೇಳಿದೆ- "ಬಾಯಿ ಮುಚ್ಚು, ಎಲ್ಲಿಯ ಮೂರ್ಖ ಹೆಂಗಸು ನೀನು. ನೀನು ಸತ್ತುಹೋಗಿರಬಹುದು ಅಷ್ಟೆ."

ಆದರೆ ನನ್ನ ಮಾತು ಕೇಳಿ ಅದು ಯಾಕೋ ಏನೋ ಆ ಕಾಬೂಲಿ ಹೆಂಗಸಿನ ಕಣ್ಣುಗಳು ಮಿನುಗತೊಡಗಿದವು. ಅವಳು ತುಂಬಾ ತೀಕ್ಷ್ಣ ಸ್ವರದಲ್ಲಿ ಹೇಳಿದಳು- "ನಿಜ, ನಾನು ಮೂರ್ಖಳಲ್ಲದೆ ಹೋಗಿದ್ದರೆ ನಿನ್ನನ್ನು ಅದು ಹೇಗೆ ತಾನೆ ಬಿಟ್ಟುಬಿಡುತ್ತಿದ್ದೆ?

ಏ ನರಕದ ಕುನ್ನಿ ನನ್ನ ಹತ್ತಿರ ಸುಳ್ಳು ಹೇಳಿದೆಯಾ! ನೋಡುತ್ತಾ ಇರು, ನಿನ್ನ ಹೆಂಡತಿ ಸತ್ತಿರದಿದ್ದರೆ ಈಗ ಸತ್ತಳು!"

ಹೀಗೆಂದು ಹೇಳುತ್ತ ಹೇಳುತ್ತ ಸಿಂಹಿಣಿಯ ಹಾಗೆ ಮುಗಿಬಿದ್ದು ಅವಳು ಒಂದು ಹರಿತವಾದ ಚೂರಿಯನ್ನು ಹೊರತೆಗೆದು ನನ್ನ ಹೆಂಡತಿಯ ಎದೆಗೆ ತಿವಿದುಬಿಟ್ಟಳು. ಅವಳನ್ನು ತಡೆಯಲೆಂದು ನಾನು ಮುನ್ನುಗ್ಗಿದೆ. ಆದರೆ ಅವಳು ಹಾರಿ ಅಂಗಳಕ್ಕೆ ಹೋಗಿ ಹೇಳಿದಳು– "ಈಗ ಗುರುತಿಟ್ಟುಕೋ ನಾನೇ ತೂರಯಾ. ನಾನು ಇವತ್ತು ನಿನ್ನ ಮನೆಯಲ್ಲಿರೋದಕ್ಕೋಸ್ಕರ ಬಂದಿದ್ದೆ. ನಿನ್ನನ್ನು ಮದುವೆಯಾಗಿ ನಿನ್ನವಳಾಗಿ ಇರುತ್ತಾ ಇದ್ದೆ. ನಿನಗೋಸ್ಕರ ನಾನು ಅಪ್ಪ, ಮನೆ, ಎಲ್ಲ ಬಿಟ್ಟುಬಂದಿದ್ದೆ. ಆದರೆ ನೀನು ಸುಳ್ಳುಗಾರ, ಮೋಸಗಾರ. ಈಗ ನೀನು ನಿನ್ನ ಹೆಂಡತಿಯ ಹೆಸರು ಹೇಳಿ ಅಳು. ನಾನು ಇವತ್ತಿನಿಂದ ನಿನ್ನ ಹೆಸರು ಹೇಳಿಕೊಡು ಅಳುತ್ತಿರುತ್ತೀನಿ." ಹೀಗೆ ಹೇಳುತ್ತ ಅವಳು ವೇಗವಾಗಿ ಕೆಳಗೆ ಹೋಗಿಬಿಟ್ಟಳು.

ಈಗ ನಾನು ನನ್ನ ಹೆಂಡತಿಯ ಸಮೀಪಕ್ಕೆ ಹೋದೆ. ಅವಳು ಹಾಕಿದ ಚೂರಿ ನೇರವಾಗಿ ಹೃದಯಕ್ಕೆ ತಾಕಿತ್ತು. ಒಂದೇ ಏಟಿಗೆ ಅವಳ ಕತೆ ಮುಗಿದಿತ್ತು. ಡಾಕ್ಟರನ್ನು ಕರೆಸಿದೆ. ಆದರೆ ಅವಳು ಸತ್ತುಹೋಗಿದ್ದಳು.

ಹಾಗೆ ಹೇಳುತ್ತ ಸರದಾರ್ ಸಾಹೇಬರ ಕಣ್ಣು ತುಂಬಿಬಂದುವು. ತಮ್ಮ ಒದ್ದೆ ಕಣ್ಣುಗಳನ್ನು ಒರೆಸಿಕೊಂಡು ಹೇಳಿದರು– "ಅಸದ್ ಖಾನ್ ತೂರಯಾ ಇಂಥ ಪಿಶಾಚ ಹೃದಯದವಳಾಗಿರುತ್ತಾಳೆಂದು ನಾನು ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ನಾನು ಅವಳನ್ನು ಮುಂಚೇನೆ ಗುರುತು ಹಿಡಿದಿದ್ದರೆ ಈ ಆಪತ್ತು ಆಗೋದಕ್ಕೆ ಬಿಡುತ್ತಿರಲಿಲ್ಲ. ಆದರೆ ಕೋಣೆಯಲ್ಲಿ ಕತ್ತಲೆ ಕವಿದಿತ್ತು. ಅದೂ ಅಲ್ಲದೆ ನಾನು ಅವಳ ಕಡೆಯಿಂದ ಬಹಳ ನಿರಾಶನಾಗಿ ಬಿಟ್ಟಿದ್ದೆ. ಆ ನಂತರ ತೂರಯಾ ಮತ್ತೆಂದೂ ಬರಲಿಲ್ಲ. ಈಗ ಯಾವಾಗ ನನ್ನನ್ನು ನೋಡಿದರೂ ನನ್ನ ಕಡೆ ನೋಡುತ್ತ ಸರ್ಪಿಣಿಯ ಹಾಗೆ ಬುಸುಗುಡುತ್ತ ಹೋಗಿಬಿಡುತ್ತಾಳೆ. ಇವಳನ್ನು ನೋಡಿ ನನ್ನ ಹೃದಯ ಕಂಪಿಸತೊಡಗುತ್ತದೆ ಮತ್ತು ನನ್ನ ಮೇಲೆ ಹತೋಟಿ ಕಳೆದುಕೊಂಡು ಬಿಡುತ್ತೇನೆ. ಇವಳನ್ನು ಹಿಡಿಸಿಕೊಡಲೆ ಎಂದು ಹಲವು ಸಲ ಯತ್ನಿಸಿದೆ. ಆದರೆ ಅವಳನ್ನು ನೋಡುತ್ತಲೇ ನಾನು ಪೂರಾ ನಿಷ್ಪ್ರಯೋಜಕನಾಗಿ ಬಿಡುತ್ತೇನೆ. ಕೈಕಾಲುಗಳು ನನ್ನ ಹತೋಟಿಗೆ ಸಿಗುವುದೇ ಇಲ್ಲ. ನನ್ನೆಲ್ಲ ಪೌರುಷ ಮಾಯವಾಗಿ ಬಿಡುತ್ತೆ.

ಇಷ್ಟೇ ಅಲ್ಲ. ತೂರಯಾಳಿಗೆ ಈಗಲೂ ನನ್ನ ಮೇಲೆ ವ್ಯಾಮೋಹವಿದೆ. ನನ್ನ ಮಕ್ಕಳಿಗೆ ಒಂದಿಲ್ಲೊಂದು ಬಹಳ ಬೆಲೆ ಬಾಳುವ ವಸ್ತುಗಳನ್ನು ಕೊಟ್ಟು ಹೋಗುತ್ತಾಳೆ. ಮಕ್ಕಳು ಸಿಗದೆ ಇದ್ದ ದಿನ ಬಾಗಿಲ ಒಳಗೆ ಎಸೆದು ಹೋಗುತ್ತಾಳೆ. ಅದರಲ್ಲಿ– "ಸರದಾರ ಸಾಹೇಬರ ಮಕ್ಕಳಿಗೆ" ಎಂಬ ಬರಹವಿರುವ ಕಾಗದದ ಚೂರು ಇರುತ್ತದೆ.

ಈಗಲೂ ನನಗೆ ಈ ಹೆಂಗಸನ್ನು ಅರ್ಥಮಾಡಿಕೊಳ್ಳಲಾಗಿಲ್ಲ. ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಷ್ಟೂ ನೆನಪು ಕಠಿಣವಾಗುತ್ತದೆ. ಇವಳೇನು ಮಾನವಳೋ ಇಲ್ಲ ದಾನವಳೋ ಎಂಬುದು ಅರ್ಥವಾಗುವುದಿಲ್ಲ!

ಅದೇ ಹೊತ್ತಿಗೆ ಸರದಾರ ಸಾಹೇಬರ ಮಗ ಬಂದು– "ನೋಡಿ ಈಗ ಅದೇ ಹೆಂಗಸು ಚಿನ್ನದ ತಾಯಿತ ಕೊಟ್ಟುಹೋಗಿದ್ದಾಳೆ" ಎಂದು ಹೇಳಿದ.

ಸರದಾರರು ನನ್ನ ಕಡೆ ನೋಡಿ ಹೇಳಿದರು– "ನೋಡಿದೆಯಲ್ಲ ಅಸದ್ ಖಾನ್, ನಾನು ನಿನಗೆ ಹೇಳಿರಲಿಲ್ಲವಾ? ನೋಡು ಇವತ್ತೂ ಈ ತಾಯಿತ ಕೊಟ್ಟುಹೋಗಿದ್ದಾಳೆ. ಅದೆಷ್ಟು ತಾಯಿತಗಳು ಮತ್ತು ಅದೆಷ್ಟು ಇತರೆ ವಸ್ತುಗಳನ್ನು ಅರ್ಜುನ್ ಮತ್ತು ನಿಹಾಲ್‌ರಿಗೆ ಕೊಟ್ಟುಹೋಗಿರ ಬಹುದೋ ಗೊತ್ತಿಲ್ಲ. ತೂರಯಾ ತುಂಬ ವಿಚಿತ್ರ ಹೆಂಗಸು ಎಂದಷ್ಟೇ ಹೇಳಬಲ್ಲೆ."

6

ಸರದಾರ ಸಾಹೇಬರಿಂದ ಬೀಳ್ಕೊಂಡು ನಾನು ಮನೆಯ ಕಡೆ ಹೊರಟೆ. ನಾಲ್ಕು ರಸ್ತೆಗಳು ಕೂಡುವ ಆ ಸ್ಥಳದಿಂದ ಮುದುಕನ ಶವವನ್ನು ತೆಗೆಯಲಾಗಿತ್ತು ಆದರೆ ಅಲ್ಲಿಗೆ ಹೋದಾಗ ನನ್ನ ರೋಮಗಳು ನಿಮಿರಿ ನಿಂತವು. ನನಗೇ ಅರಿವಿಲ್ಲದಂತೆ ಒಂದು ನಿಮಿಷ ಅಲ್ಲಿ ನಿಂತುಕೊಂಡೆ. ಒಮ್ಮೆಲೇ ಹಿಂದೆ ನೋಡಿದೆ. ನೆರಳಿನ ಹಾಗೆ ಒಬ್ಬ ಹೆಂಗಸು ನನ್ನ ಹಿಂದೆ ಹಿಂದೆಯೇ ಬರುತ್ತಿದ್ದಳು. ನಾನು ನಿಂತದ್ದು ನೋಡಿ ಆ ಹೆಂಗಸು ನಿಂತು ಒಂದು ಅಂಗಡಿಯಲ್ಲಿ ಕೆಲವು ಸಾಮಾನುಗಳನ್ನು ವ್ಯಾಪಾರ ಮಾಡತೊಡಗಿದಳು.

"ಅವಳು ತೂರಯಾಳೆ?"– ಎಂದು ನನ್ನ ಹೃದಯವನ್ನು ಪ್ರಶ್ನಿಸಿದೆ.

"ಹೌದು, ಬಹುಶಃ ಅವಳೇ" ಎಂದು ಹೃದಯ ಉತ್ತರಿಸಿತು.

ತೂರಯಾ ನನ್ನನ್ನು ಏಕೆ ಹಿಂಬಾಲಿಸುತ್ತಿದ್ದಾಳೆ? ಎಂದು ಯೋಚಿಸುತ್ತ ನಾನು ಮನೆ ತಲುಪಿದೆ. ಊಟ ಮಾಡಿ ಮಲಗಿದೆ. ಆದರೆ ಏನು ಮಾಡಿದರೂ ನಿದ್ರೆ ಹತ್ತದಷ್ಟು ಮಟ್ಟಿಗೆ ಇಂದಿನ ಘಟನೆಗಳ ಪ್ರಭಾವ ನನ್ನ ಮೇಲೆ ಆಗಿತ್ತು. ನಿದ್ರೆ ಮಾಡಲು ಯತ್ನಿಸಿದಷ್ಟೂ ನಿದ್ರೆ ನನ್ನಿಂದ ದೂರ ಓಡುತ್ತಿತ್ತು.

ಸೇನೆಯ ಗಡಿಯಾರ ಹನ್ನೆರಡು ಬಾರಿಸಿತು, ಒಂದು ಗಂಟೆ ಬಾರಿಸಿತು, ಎರಡು ಗಂಟೆ ಬಾರಿಸಿತು. ಆದರೆ ನಿದ್ರೆ ಮಾತ್ರ ಹತ್ತಿರ ಸುಳಿಯುತ್ತಿಲ್ಲ. ನಾನು ಮಗ್ಗುಲು ಬದಲಾಯಿಸುತ್ತ ಮಲಗಲು ಪ್ರಾರಂಭಿಸಿದ್ದೆ. ಇದೇ ಚಿಂತೆಯಲ್ಲಿ ಯಾವಾಗ ನಿದ್ರೆ ನನ್ನನ್ನು ಆವರಿಸಿತೋ ನನಗೆ ಕಿಂಚಿತ್ತೂ ನೆನಪಿಲ್ಲ.

ನಾನು ನಿದ್ರೆ ಮಾಡುತ್ತಿದ್ದರೂ ನನ್ನ ಅರಿವು ಎಚ್ಚತ್ತಿತ್ತು. ತೂರಯಾಳನ್ನು ಬಹುಮಟ್ಟಿಗೆ ಹೋಲುತ್ತಿದ್ದ, ಆದರೆ ಅವಳಿಗಿಂತಲೂ ಹೆಚ್ಚು ಭಯಾನಕವಾದ ಆಕೃತಿಯ ಹೆಂಗಸೊಬ್ಬಳು ಗೋಡೆ ಒಡೆದು ಮನೆಯ ಒಳಗೆ ನುಗ್ಗಿ ಬಂದಿದ್ದಾಳೆಂದು ಭಾಸವಾಯಿತು. ಅವಳ ಕೈಯಲ್ಲಿ ಒಂದು ಹರಿತವಾದ ಚೂರಿ ಇದೆ. ಲಾಟೀನಿನ ಬೆಳಕಿನಲ್ಲಿ ಅದು ಹೊಳೆಯುತ್ತಿದೆ. ಅವಳು ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಎಚ್ಚರಿಕೆಯ ಕಣ್ಣುಗಳಿಂದ ನೋಡುತ್ತ ನಿಧಾನವಾಗಿ ನನ್ನ ಕಡೆಗೆ ಮುಂದುವರಿಯುತ್ತಿದ್ದಾಳೆ. ಅವಳನ್ನು ನೋಡಿ ನಾನು ಏಳಲಿಚ್ಛಿಸುತ್ತೇನೆ. ಆದರೆ ಕಾಲುಗಳು ಅವುಗಳಲ್ಲಿ ಜೀವವೇ ಇಲ್ಲವೇನೋ ಎಂಬಂತೆ ನನ್ನ ಹತೋಟಿಯಲ್ಲೇ ಇಲ್ಲ. ಆ ಹೆಂಗಸು ನನ್ನ ಹತ್ತಿರಕ್ಕೆ ಬಂದುಬಿಟ್ಟಳು. ಸ್ವಲ್ಪ ಹೊತ್ತು ನನ್ನ ಕಡೆ ನೋಡಿ ಅನಂತರ ಚೂರಿ ಹಿಡಿದಿದ್ದ ತನ್ನ ಕೈಯನ್ನು ಮೇಲಕ್ಕೆ ಎತ್ತಿದಳು. ನಾನು ಕಿರುಚಲು ಯತ್ನಿಸಿದೆ. ಆದರೆ ನನ್ನ ಗಂಟಲು ಕೂತುಹೋಯಿತು. ಶಬ್ದಗಳು ಕಂಠದಿಂದ ಹೊರಡಲೇ ಇಲ್ಲ. ಅವಳು ನನ್ನ ಎರಡೂ ಕೈಗಳನ್ನು ತನ್ನ ಮೊಳಕಾಲ ಕೆಳಗೆ ಒತ್ತಿಹಿಡಿದು ನನ್ನ ಎದೆಯ ಮೇಲೆ ಕುಳಿತುಬಿಟ್ಟಳು. ನಾನು ಒದ್ದಾಡತೊಡಗಿದೆ. ನನ್ನ ಕಣ್ಣುಗಳು ತೆರೆದುಕೊಂಡವು. ನಿಜಕ್ಕೂ ಒಬ್ಬ ಕಾಬೂಲಿ ಹೆಂಗಸು ನನ್ನ ಎದೆಯ ಮೇಲೆ ಹತ್ತಿ ಕೂತಿದ್ದಳು. ಅವಳ ಕೈಯಲ್ಲಿ ಚೂರಿ ಇತ್ತು. ಅವಳು ಚೂರಿ ಹಾಕಬೇಕೆಂದೇ ಬಯಸಿದ್ದಳು.

ನಾನು ಹೇಳಿದೆ– "ಯಾರು ತೂರಯಾಳೇನು?"

ಇವಳು ನಿಜಕ್ಕೂ ತೂರಯಾಳೇ ಆಗಿದ್ದಳು. ಅವಳು ನನ್ನನ್ನು ಬಲವಾಗಿ ಅಮುಕುತ್ತ ಹೇಳಿದಳು– "ಹೌದು, ನಾನು ತೂರಯಾಳೇ. ಈ ಹೊತ್ತು ನೀನು ನನ್ನ ತಂದೆಯನ್ನು ಕೊಂದಿದ್ದೀಯಾ. ಅದಕ್ಕೆ ಪ್ರತಿಯಾಗಿ ನಿನ್ನ ಪ್ರಾಣ ಹೋಗಲಿದೆ."

ಹೀಗೆ ಹೇಳಿ ಅವಳು ತಾನು ಹಿಡಿದಿದ್ದ ಚೂರಿಯನ್ನು ಮೇಲಕ್ಕೆ ಎತ್ತಿದಳು. ಅದು ನನ್ನ ಜೀವನ್ಮರಣದ ಪ್ರಶ್ನೆಯ ಕ್ಷಣ. ನಾನು ಸಾಯಲು ಸಿದ್ಧನಿರಲಿಲ್ಲ. ಬದಕಬೇಕೆಂಬ ಆಸೆ ನನ್ನಲ್ಲಿ ಸಾಹಸವನ್ನು ಜಾಗೃತಗೊಳಿಸಿತು. ನನ್ನ ಆಸೆಗಳು ಮತ್ತು ಹುರುಪು ಇನ್ನೂ ಉಳಿದಿದ್ದುವು. ನಾನು ನನ್ನ ಬಲಗೈಯನ್ನು ಬಿಡಿಸಿಕೊಳ್ಳಲು ಬಲವಾಗಿ ಯತ್ನಿಸಿದೆ.

ಒಂದೇ ಎಳೆತಕ್ಕೆ ನನ್ನ ಕೈ ಬಿಡಿಸಿಕೊಂಡೆ. ಪೂರ್ಣ ಸಾಮರ್ಥ್ಯವನ್ನು ಬಳಸಿ ಚೂರಿ ಹಿಡಿದಿದ್ದ ತೂರಯಾಳ ಕೈಯನ್ನು ಹಿಡಿದುಕೊಂಡುಬಿಟ್ಟೆ. ಏಕೋ ಏನೋ ತೂರಯಾ ಕಿಂಚಿತ್ತೂ ವಿರೋಧಿಸಲಿಲ್ಲ. ನನ್ನ ಕೈಯನ್ನು ನೋಡುತ್ತ ನನ್ನ ಎದೆಯ ಮೇಲಿನಿಂದ ಕೆಳಗಿಳಿದಳು. ಅವಳ ಕಣ್ಣುಗಳು ನಿಸ್ತಬ್ಧವಾಗಿ ಒಂದೇ ಸಮನೆ ನನ್ನ ಕೈಯನ್ನೇ ನೋಡುತ್ತಿದ್ದವು.

ನಾನು ನಕ್ಕು ಹೇಳಿದೆ– "ಪಗಡೆ ಆಟದಲ್ಲಿ ಸೋಲು– ಗೆಲುವು ಉಲ್ಟಾ ಆಯಿತು. ಈಗ ಸಾಯುವ ಸರದಿ ನಿನ್ನದು. ನಿಮ್ಮ ತಂದೆಯನ್ನು ಸಾಯಿಸಿದೆ. ಈಗ ನಿನ್ನನ್ನೂ ಸಾಯಿಸುತ್ತೇನೆ."

ತೂರಯಾ ನೆಟ್ಟ ನೋಟದಿಂದ ನನ್ನ ಕೈಯಿನ ಕಡೆಯೇ ನೋಡುತ್ತಿದ್ದಳು. ಅವಳು ಪ್ರತಿಯಾಗಿ ಏನೂ ಹೇಳಲಿಲ್ಲ.

ನಾನು ಅವಳ ಕೈಹಿಡಿದು ಜೋರಾಗಿ ಅಲ್ಲಾಡಿಸುತ್ತ ಹೇಳಿದೆ– "ಯಾಕೆ ಏನೂ ಮಾತಾಡ್ತಾ ಇಲ್ಲ? ಈಗಂತೂ ನಿನ್ನ ಪ್ರಾಣ ನನ್ನ ಮುಷ್ಟಿಯಲ್ಲಿದೆ"

ತೂರಯಾ ಮೌನ ಮುರಿದು ಗಂಭೀರವಾದ ಮತ್ತು ದೃಢವಾದ ಕಂಠದಿಂದ ಹೇಳಿದಳು– "ನೀನು ನನ್ನ ಸೋದರ! ಈ ಹೊತ್ತು ನೀನು ನಿನ್ನ ತಂದೆಯನ್ನು ಕೊಂದಿದ್ದೀ!"

ತೂರಯಾಳ ಮಾತು ಕೇಳಿ ಆ ಕ್ಷಣದಲ್ಲೂ ನನಗೆ ನಗು ಬಂತು

ನಗುತ್ತ ಹೇಳಿದೆ– "ಅಫ್ರೀದಿಗಳು ಕಪಟಿಗಳೂ ಆಗಿರುತ್ತಾರೆ ಅಂತ ಇವತ್ತೇ ನನಗೆ ಗೊತ್ತಾದ್ದು"

ತೂರಯಾ ಶಾಂತ ದನಿಯಲ್ಲಿ ಹೇಳಿದಳು– "ನೀನು ನನ್ನ ಕಳೆದುಹೋದ ಸೋದರ ನಾಜಿರ್. ನಿನ್ನ ಕೈಯಲ್ಲಿದೆಯಲ್ಲಾ ಆ ಗುರುತು ಅದೇ ಹೇಳ್ತಾ ಇದೆ ನೀನು ನನ್ನ ಕಳೆದುಹೋದ ಸೋದರ ಅಂತ".

ಚಿಕ್ಕಂದಿನಿಂದಲೂ ನನ್ನ ಕೈಯಲ್ಲಿ ಒಂದು ಸರ್ಪದ ಹಚ್ಚೆ ಇತ್ತು. ಸೈನ್ಯದ ರಿಜಿಸ್ಟರ್‌ನಲ್ಲಿ ಇದೇ ಗುರುತನ್ನು ನನ್ನ ಗುರುತೆಂದು ನಮೂದಿಸಿದೆ.

ನಾನು ನಕ್ಕು ಹೇಳಿದೆ– "ತೂರಯಾ ನೀನು ನನಗೆ ಮೋಸ ಮಾಡಕ್ಕಾಗಲ್ಲ. ನಾನು ಈಗ ಯಾವ ಥರದಲ್ಲೂ ನಿನ್ನನ್ನು ಬಿಡಲ್ಲ"

ತೂರಯಾ ತನ್ನ ಕೈಯಲ್ಲಿದ್ದ ಚೂರಿಯನ್ನು ಅತ್ತ ಎಸೆದು ಹೇಳಿದಳು– "ನಿಜಕ್ಕೂ ನೀನು ನನ್ನ ಸೋದರನೇ. ನಿನಗೆ ನಂಬಿಕೆ ಆಗ್ತಾ ಇಲ್ಲ ಅಂದರೆ ನೋಡು ನನ್ನ ಬಲಗೈಯಲ್ಲಿ ಇಂಥದೇ ಹಾವಿನ ಹಚ್ಚೆ ಹಾಕಲಾಗಿದೆ."

ನಾನು ತೂರಯಾಳ ಕೈನತ್ತ ದೃಷ್ಟಿ ಹಾಯಿಸಿ ನೋಡಿದರೆ ಥೇಟ್ ನನ್ನ ಕೈಯಲ್ಲಿದ್ದಂಥ ಹಾವಿನ ಹಚ್ಚೆಯನ್ನು ಅಲ್ಲೂ ಹಾಕಲಾಗಿತ್ತು.

"ತೂರಯಾ ನಾನು ನಿನ್ನನ್ನು ನಂಬಲ್ಲ. ಇದೊಂದು ಆಕಸ್ಮಿಕ ಅಷ್ಟೆ"– ಎಂದು ನಾನು ಯೋಚಿಸಿ ಹೇಳಿದೆ.

ತೂರಯಾ ಹೇಳಿದಳು– "ನನ್ನ ಕೈ ಬಿಡು. ನಾನು ನಿನ್ನ ಮೇಲೆ ಆಕ್ರಮಣ ಮಾಡಲ್ಲ. ಅಫ್ರೀದಿಗಳು ಸುಳ್ಳು ಹೇಳಲ್ಲ"

ನಾನು ಅವಳ ಕೈ ಬಿಟ್ಟೆ. ಅವಳು ನೆಲದ ಮೇಲೆ ಕುಳಿತು ನನ್ನತ್ತ ನೋಡತೊಡಗಿದಳು. ಸ್ವಲ್ಪ ಹೊತ್ತಿನ ನಂತರ ಹೇಳಿದಳು– "ಆಯಿತು, ನಿನಗೆ ನಿನ್ನ ತಂದೆ ತಾಯಿಗಳ ವಿಳಾಸ ಗೊತ್ತಿದೆಯಾ?" ನಾನು ತಲೆ ಅಲ್ಲಾಡಿಸುತ್ತ ಹೇಳಿದೆ– "ಇಲ್ಲ, ನಾನು ಸರ್ಕಾರೀ ಅನಾಥಾಲಯದಲ್ಲಿ ಬೆಳೆದು ದೊಡ್ಡವನಾದೆ"

ತೂರಯಾ ನನ್ನ ಮಾತು ಕೇಳಿ ಎದ್ದುನಿಂತು ಹೇಳಿದಳು– "ಹಾಗಿದ್ದ ಮೇಲೆ ನೀನು ನನ್ನ ಕಳೆದುಹೋದ ಅಣ್ಣ ನಾಜಿರನೇ. ನಾನು ಹುಟ್ಟುವ ಒಂದು ವರ್ಷದ ಮುಂಚೆ ನೀನು ಕಳೆದುಹೋಗಿದ್ದೆ. ನನ್ನ ತಂದೆ ತಾಯಿಗಳು ಆಗ ಸರ್ಕಾರೀ ಸೇನೆಯ ಮೇಲೆ ಆಕ್ರಮಣ ಮಾಡಲು ಬಂದಿದ್ದರು. ಆಗ ನೀನೂ ಜೊತೆಯಲ್ಲಿದ್ದೆ. ನನ್ನ ತಾಯಿ ಯುದ್ಧ ಮಾಡುವುದರಲ್ಲಿ ಬಹಳ ಚತುರಳಾಗಿದ್ದಳು. ನಿನ್ನನ್ನು ತನ್ನ ಬೆನ್ನಿಗೆ ಕಟ್ಟಿಕೊಂಡೇ ಸೆಣಸುತ್ತಿದ್ದಳು. ಅದೇ ಸಮಯಕ್ಕೆ ಒಂದು ಗುಂಡು ಬಂದು ಅವಳ ಕಾಲಿಗೆ ಹೊಕ್ಕಿತು. ಆಕೆ ಕೆಳಗೆ ಬಿದ್ದು ಮೂರ್ಛೆಹೋದಳು. ಸರಿ ನಿನ್ನನ್ನು ಯಾರೋ ಬೆನ್ನ ಮೇಲಿನಿಂದ ಬಿಚ್ಚಿಕೊಂಡು ಒಯ್ದರು. ನನ್ನ ತಾಯಿಯನ್ನು ಅಪ್ಪ ತನ್ನ ಹೆಗಲ ಮೇಲೆ ಹೊತ್ತುಕೊಂಡನು. ಆದರೆ ನಿನ್ನನ್ನು ಹುಡುಕಲಾಗಲಿಲ್ಲ. ಆಮೇಲೆ ನಿನಗಾಗಿ ಬಹಳ ಹುಡುಕಾಡಿದರು. ಆದರೆ ಎಲ್ಲೂ ನಿನ್ನ ಸುಳಿವು ಸಿಗಲಿಲ್ಲ. ಅಮ್ಮ ಆಗಾಗ್ಗೆ ನಿನ್ನ ವಿಚಾರ ಎತ್ತುತ್ತಾ ಇದ್ದಳು. ಅವಳ ಕೈಯಲ್ಲೂ ಗುರುತು ಇತ್ತು.

ಹಾಗೆ ಹೇಳಿ ಅವಳು ಅದೇ ಕೈಯನ್ನು ನನಗೆ ತೋರಿಸಿದಳು. ನಾನು ಅವಳ ಕೈಮೇಲಿದ್ದ ಹಾವಿನ ಗುರುತನ್ನು ನನ್ನ ಕೈಮೇಲಿದ್ದ ಹಾವಿನ ಗುರುತಿನೊಂದಿಗೆ ತಾಳೆನೋಡಿದೆ. ವಾಸ್ತವದಲ್ಲಿ ಎರಡೂ ಹಾವುಗಳು ತದ್ರೂಪಿಗಳಾಗಿದ್ದುವು. ಒಂದು ಕೂದಲೆಳೆಯಷ್ಟೂ ವ್ಯತ್ಯಾಸವಿರಲಿಲ್ಲ. ನಾನು ಹತಾಶನಂತೆ ಚಿಕ್ಕ ಮಂಚದ ಮೇಲೆ ಬಿದ್ದುಬಿಟ್ಟೆ.

ತೂರಯಾ ನನ್ನ ಪಕ್ಕ ಕುಳಿತು ಸ್ನೇಹದಿಂದ ನನ್ನ ಹಣೆಯ ಬೆವರು ಒರೆಸತೊಡಗಿದಳು, ಅವಳು ಹೇಳಿದಳು– "ನಾಜಿರ್ – ನೀನು ಸತ್ತಿಲ್ಲ, ಬದುಕಿದ್ದೀ ಎಂದು ಅಮ್ಮ ಹೇಳ್ತಾ

ಇದ್ದಳು. ಒಂದು ದಿನ ನೀನು ಖಂಡಿತವಾಗಿಯೂ ನಮ್ಮನ್ನು ಕೂಡಿಕೊಳ್ಳುವೆ ಎಂದು ಹೇಳುತ್ತಿದ್ದಳು."

ತೂರಯಾಳ ಮಾತಿನ ಮೇಲೆ ಈಗ ನನಗೆ ನಂಬಿಕೆ ಉಂಟಾಗಿತ್ತು. ತೂರಯಾ ಹೇಳುತ್ತಾ ಇರುವುದು ಸರಿಯಾಗಿದೆ ಎಂದು ಅದು ಯಾರು ನನ್ನ ಹೃದಯದಲ್ಲಿ ಕುಳಿತುಕೊಂಡು ಹೇಳುತ್ತಾ ಇದ್ದರೋ ಗೊತ್ತಿಲ್ಲ. ನಾನೊಂದು ದೀರ್ಘವಾದ ಉಸಿರೆಳೆದುಕೊಂಡು ಹೇಳಿದೆ– "ಏನು ತೂರಯಾ ಈಹೊತ್ತು ನಾನು ಯಾರನ್ನು ಕೊಂದೆನೋ ಆತ ನಮ್ಮ ತಂದೆ ಆಗಿದ್ದನೆ?"

ತೂರಯಾಳ ಮುಖದ ಮೇಲೆ ದುಃಖದ ಒಂದು ಸಣ್ಣ ಮೋಡ ಕವಿಯಿತು. ಅವಳು ಅತ್ಯಂತ ಶೋಕಭರಿತ ಸ್ವರದಲ್ಲಿ ಹೇಳಿದಳು– "ಹೌದು ನಾಜಿರ್. ಆ ಭಾಗ್ಯಹೀನ ನಮ್ಮ ತಂದೆಯೇ ಆಗಿದ್ದ. ತನ್ನ ಪ್ರೀತಿಪಾತ್ರನಾದ ಮಗನಿಂದಲೇ ಹತ್ಯೆಗೀಡಾಗುತ್ತಾನೆ ಅಂತ ಯಾರು ತಾನೆ ತಿಳಿದಿದ್ದರು?" ನಂತರ ಸಮಾಧಾನ ಮಾಡುವ ರೀತಿಯಲ್ಲಿ ಹೇಳಿದಳು– "ಆದರೆ ನಾಜಿರ್ ನೀನು ಗೊತ್ತಿಲ್ಲದೆ ಈ ಕೆಲಸ ಮಾಡಿದ್ದೀ. ತಂದೆಯ ಸಾವಿನಿಂದ ನಾನು ನಿಜಕ್ಕೂ ಏಕಾಂಗಿಯಾಗಿಬಿಟ್ಟಿದ್ದೆ. ಈಗ ನಿನ್ನನ್ನು ಪಡೆದುಕೊಂಡು ತಂದೆಯ ಸಾವಿನ ದುಃಖವನ್ನು ಮರೆಯುತ್ತೀನಿ. ನಾಜಿರ್ ನೀನು ದುಃಖಿಸಬೇಡ. ನಿನ್ನ ತಂದೆ ಯಾರು, ತಾಯಿ ಯಾರು ಅಂತ ನಿನಗೆ ತಾನೆ ಎಲ್ಲಿ ಗೊತ್ತಿತ್ತು ಹೇಳು? ನೋಡು ನಾನೇ ನಿನ್ನನ್ನು ಕೊಲ್ಲಬೇಕು ಅಂತ ಬಂದಿದ್ದೆ. ನಿನ್ನನ್ನು ಕೊಂದುಬಿಡುತ್ತಾ ಇದ್ದೆ. ಆದರೆ ದೇವರ ದಯದಿಂದ ನಾನು ನಮ್ಮ ಮನೆತನದ ಗುರುತನ್ನು ನೋಡಿಬಿಟ್ಟೆ. ದೇವರ ಇಚ್ಛೆ ಇದೇ ಆಗಿತ್ತು." ನನ್ನ ತಂದೆಯ ಹೆಸರು ಹೈದರ್ ಎಂದು ತೂರಯಾಳಿಂದ ಗೊತ್ತಾಯಿತು. ಅವನು ಅಫ್ರೀದಿಗಳ ಒಂದು ಗುಂಪಿನ ಸರದಾರನಾಗಿದ್ದ. ಸರದಾರ್ ಹಿಮ್ಮತ್ ಸಿಂಹರ ವಿಚಾರವಾಗಿ ತೂರಯಾಳೊಂದಿಗೆ ಮಾತನಾಡಿದಾಗ ಅವಳು ಸರದಾರ ಸಾಹೇಬರನ್ನು ಬಹಳವಾಗಿ ಪ್ರೀತಿಸುತ್ತಿದ್ದಳೆಂದು ತಿಳಿಯಿತು. ಅವಳು ನಮ್ಮ ತಂದೆಯೊಂದಿಗೆ ಜಗಳಾಡಿಕೊಂಡು ಸರದಾರ ಸಾಹೇಬರನ್ನು ಮದುವೆಯಾಗಲೆಂದು ಬಂದಿದ್ದಳು. ಆದರೆ ಅಲ್ಲಿ ಅವರ ಹೆಂಡತಿ ಇದ್ದದ್ದು ನೋಡಿ ಅವಳು ಅಸೂಯೆ ಮತ್ತು ಕೋಪದಿಂದ ಹುಚ್ಚಳಾಗಿ ಸರದಾರರ ಹೆಂಡತಿಯನ್ನು ಕೊಂದುಬಿಟ್ಟಳು. ಕಾಬೂಲಿ ಹೆಣ್ಣಿನ ವೇಷದಲ್ಲಿ ಹೋಗಿ ಸ್ವಲ್ಪ ತಮಾಷೆ ಮಾಡಬೇಕೆಂದಿದ್ದಳು. ಆದರೆ ಘಟನಾ ಚಕ್ರ ಅವಳನ್ನು ಇನ್ನೊಂದೇ ಕಡೆಗೆ ಒಯ್ದಿತು.

ನಾನು ಸರದಾರ ಸಾಹೇಬರ ಪರಿಸ್ಥಿತಿಯನ್ನು ವಿವರಿಸಿ ಹೇಳಿದೆ. ಅದನ್ನು ಕೇಳಿ ಸ್ವಲ್ಪ ಹೊತ್ತು ಯೋಚಿಸುತ್ತಿದ್ದು ಅನಂತರ ಹೇಳಿದಳು– "ಇಲ್ಲ, ಆ ಮನುಷ್ಯ ಸುಳ್ಳುಗಾರ

ಮತ್ತು ಮೋಸಗಾರ. ನಾನು ಅವನನ್ನು ಮದುವೆ ಆಗಲ್ಲ. ಆದರೆ ನಿನ್ನ ಸಲುವಾಗಿ ಈಗ ಎಲ್ಲ ಮರೆತುಬಿಡುತ್ತೀನಿ. ನಾಳೆ ಅವರ ಮಕ್ಕಳನ್ನು ಕರೆದುಕೊಂಡು ಬಾ. ನಾನು ಅವರನ್ನು ಮುದ್ದಾಡುತ್ತೀನಿ".

ಬೆಳಿಗ್ಗೆ ತೂರಯಾಳನ್ನು ನೋಡಿ ನನ್ನ ಆಳಿಗೆ ಆಶ್ಚರ್ಯವಾಯಿತು. ನಾನು ಅವನಿಗೆ – "ಈಕೆ ನನ್ನ ತಂಗಿ" ಎಂದೆ.

ನನ್ನ ನೌಕರನಿಗೆ ನನ್ನ ಮಾತಿನ ಮೇಲೆ ನಂಬಿಕೆ ಬರಲಿಲ್ಲ. ಆಗ ನಾನು ಎಲ್ಲವನ್ನೂ ವಿಶದವಾಗಿ ಹೇಳಿದೆ. ಆಗಲೇ ತಂದೆಯ ಶವದ ವಿಷಯ ಏನಾಯಿತೆಂದು ತಿಳಿದುಕೊಂಡು ಬರಲು ಕಳಿಸಿದೆ. ಅವನು ಹಿಂತಿರುಗಿ ಬಂದು "ಶವವನ್ನು ಇನ್ನೂ ಠಾಣೆಯಲ್ಲೇ ಇರಿಸಲಾಗಿದೆ" ಎಂದು ಹೇಳಿದ.

ನಾನು ದೊಡ್ಡ ಸಾಹೇಬರ ಹೆಸರಿಗೆ ಒಂದು ಪತ್ರ ಬರೆದು ಎಲ್ಲ ವಿಷಯನ್ನೂ ತಿಳಿಸಿದೆ. ಶವವನ್ನು ಪಡೆದುಕೊಳ್ಳಲು ಕೋರಿಕೆ ಸಲ್ಲಿಸಿದೆ. ಆ ಕೂಡಲೇ ಅವರ ಒಪ್ಪಿಗೆ ಬಂದಿತು.

ಒಂದು ಪತ್ರ ಬರೆದು ಮೇಜರ್ ಸಾಹೇಬರನ್ನೂ ಕರೆಸಿದೆ.

ಮೇಜರ್ ಸಾಹೇಬರು ಬಂದು– "ಏನು ವಿಷಯ ಅಸದ್? ಇಷ್ಟು ಬೇಗ ಏಕೆ ಬರಲು ತಿಳಿಸಿದೆ?" ಎಂದು ಕೇಳಿದರು.

ನಾನು ನಗುತ್ತ ಹೇಳಿದೆ– "ಮೇಜರ್ ಸಾಹೇಬರೆ ನನ್ನ ಹೆಸರು ಅಸದ್ ಎಂದು ಈಗ ಉಳಿದಿಲ್ಲ. ನನ್ನ ಅಸಲಿ ಹೆಸರು ನಾಜಿರ್ ಎಂದು"

ಮೇಜರ್ ಸಾಹೇಬರು ಆಶ್ಚರ್ಯದಿಂದ ನನ್ನ ಕಡೆ ನೋಡುತ್ತ ಹೇಳಿದರು– "ಒಂದು ರಾತ್ರಿ ಒಳಗೆ ನೀನು ಹುಚ್ಚನಾಗಿಬಿಡಲಿಲ್ಲ ತಾನೆ?"

ನಾನು ನಗುತ್ತ ಹೇಳಿದೆ– "ಇಲ್ಲ ಸರದಾರ್ ಸಾಹೇಬರೆ. ಈಗ ಇನ್ನೂ ಇದೆ ಕೇಳಿ. ತೂರಯಾ ನನ್ನ ಒಡಹುಟ್ಟಿದ ತಂಗಿ. ನಿನ್ನೆ ದಿನ ನಾನು ಯಾರನ್ನು ಕೊಂದೆನೋ ಅವನು ನನ್ನ ತಂದೆಯಾಗಿದ್ದ."

ಸರದಾರ್ ಸಾಹೇಬರು ನನ್ನ ಮಾತು ಕೇಳಿ ಆಕಾಶದಿಂದ ಬಿದ್ದವರಂತಾಗಿಬಿಟ್ಟರು. ಅವರ ಕಣ್ಣು ಆಶ್ಚರ್ಯದಿಂದ ಕಪಾಲದತ್ತ ಸರಿಯಿತು. ಕೇಳಿದರು– "ಏನು ಅಸದ್ ನೀನು ನನ್ನನ್ನು ಹುಚ್ಚನನ್ನಾಗಿ ಮಾಡಿಬಿಡುತ್ತೀಯೇನು?"

ನಾನು ಸರದಾರ್ ಸಾಹೇಬರ ಕೈ ಹಿಡಿದುಕೊಂಡು ಹೇಳಿದೆ– "ಬನ್ನಿ ತೂರಯಾಳ ಬಾಯಿಂದಲೇ ಎಲ್ಲ ವಿಷಯ ಕೇಳಿಕೊಳ್ಳಿ. ತೂರಯಾ ನನ್ನ ಮನೆಯಲ್ಲಿ ಕುಳಿತುಕೊಂಡು ನಿಮ್ಮನ್ನು ನಿರೀಕ್ಷೆ ಮಾಡುತ್ತಾ ಇದ್ದಾಳೆ."

ಸರದಾರ್ ಸಾಹೇಬರು ಮಾತಿಲ್ಲದೆ ಮೌನವಾಗಿ ನನ್ನ ಹಿಂದೆ ಹಿಂದೆಯೇ ಬಂದರು. ತೂರಯಾ ಅವರು ಬಂದದ್ದನ್ನು ನೋಡಿ ಎದ್ದು ನಿಂತು ನಗುತ್ತ ಹೇಳಿದಳು–"ಕೈದಿ ನೀನು ಅದೇ ಹಾಡನ್ನು ಮತ್ತೆ ಹಾಡು".

ತೂರಯಾಳ ಮಾತು ಕೇಳಿ ನಾನು ಮತ್ತು ಸರದಾರ್ ಸಾಹೇಬರು ನಗಲಾರಂಭಿಸಿದೆವು.

ಸರದಾರ್ ಸಾಹೇಬರನ್ನು ಕೂಡಿಸಿಕೊಂಡು ನಾನು ಎಲ್ಲ ವಿಚಾರಗಳನ್ನೂ ವಿವರ ವಿವರವಾಗಿ ಹೇಳಿದೆ. ಕಥೆ ಕೇಳಿ ಸರದಾರ ಸಾಹೇಬರು ನನ್ನೊಂದಿಗೆ– "ನಾಜಿರ್ ಈಗ ನಾನು ನಿನ್ನನ್ನು ನಾಜಿರ್ ಎಂದೇ ಕರೆಯುತ್ತೇನೆ. ತೂರಯಾಳನ್ನು ನನಗೆ ಕೊಡು ಎಂದು ನಿನ್ನನ್ನು ಪ್ರಾರ್ಥಿಸುತ್ತೇನೆ!. ನಾನು ಇವಳನ್ನು ಮದುವೆಯಾಗುವೆ." ಎಂದರು.

ನಾನು ನಗುತ್ತ– "ಆದರೆ ನೀವು ಹಿಂದೂ. ನಾವುಗಳು ಮುಸಲ್ಮಾನರು. ಸರದಾರ್ ಸಾಹೇಬರು ನಕ್ಕು ಹೇಳಿದರು" – "ಮಿಲಿಟರಿಯವರಿಗೆ ಯಾವುದೂ ಜಾತಿ–ಪಂಥ ಇಲ್ಲ."

ತೂರಯಾ ಕೂಡಲೇ ಹೇಳಿದಳು– "ಆದರೆ ಸರದಾರ ಸಾಹೇಬರೆ, ನಾನು ನಿಮ್ಮನ್ನು ಮದುವೆ ಆಗಲ್ಲ. ಒಂದು ವೇಳೆ ನೀವು ನಿಮ್ಮ ಎರಡೂ ಮಕ್ಕಳನ್ನು ನನ್ನ ಹತ್ತಿರ ಕಳಿಸಿಕೊಟ್ಟರೆ ನಾನು ಅವರಿಬ್ಬರಿಗೂ ತಾಯಿಯಾಗುತ್ತೇನೆ."

ಸರದಾರ ಸಾಹೇಬರು ನಗುತ್ತ ನಮ್ಮಿಂದ ಬೀಳ್ಕೊಂಡರು.

ಅದೇ ದಿನ ಸಂಜೆ ನಾವು ಸರದಾರ್ ಸಾಹೇಬರು ತೂರಯಾ ಮತ್ತಿತರೆ ಮಿಲಿಟರಿಯವರೊಂದಿಗೆ ತಂದೆಯ ಶವವನ್ನು ಹೂಳಿದೆವು.

ಸೂರ್ಯ ಮುಳುಗುತ್ತಿದ್ದ. ನಿಧ ನಿಧಾನವಾಗಿ ಕತ್ತಲು ಆವರಿಸುತ್ತಿತ್ತು. ನಾನು ಮತ್ತು ತೂರಯಾ ಇಬ್ಬರೂ ನಮ್ಮ ತಂದೆಯ ಸಮಾಧಿಯ ಬಳಿ ಪ್ರಾರ್ಥನೆಯನ್ನು ಓದುತ್ತಿದ್ದೆವು.

❖

ಇಬ್ಬರು ಸೋದರರು

ಮೂಲ: ಪ್ರೇಮಚಂದ

ಬೆಳಗಿನ ಮನೋಹರವಾದ ಬಂಗಾರದ ಬಿಸಿಲಿನಲ್ಲಿ ಕಲಾವತಿಯು ಇಬ್ಬರೂ ಮಕ್ಕಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಹಾಲು, ಅನ್ನ ತಿನ್ನಿಸುತ್ತಿದ್ದಳು. ಕೇದಾರ ಹಿರಿಯ ಮಗು, ಮಾಧವ ಕಿರಿಯ ಮಗು.ಇಬ್ಬರೂ ಬಾಯಲ್ಲಿ ಅನ್ನದ ತುತ್ತು ಇಟ್ಟುಕೊಂಡು ಒಂದೆರಡು ಹೆಜ್ಜೆ ಕುಣಿದು ಕುಪ್ಪಳಿಸಿ ಮತ್ತೆ ಅಮ್ಮನ ತೊಡೆಯೇರಿ

ಕುಳಿತುಕೊಳ್ಳುತ್ತಿದ್ದರು. ತಮ್ಮ ತೊದಲು ನುಡಿಯಲ್ಲಿ

"ದೇವರೇ ಬಿಸಿಲು ಬರಿಸು ಬೇಗನೆ

ಅಲ್ಲದಿರೆ ನಿನ್ನ ಮಗುವಿಗೆ ಥಂಡಿಯಾಗುವುದು"

ಎಂಬ ಯಾರೋ ಹಿಂದಿನ ಸಹೃದಯ ಕವಿಯೊಬ್ಬ ಒಂದು ಚಳಿಗಾಲದಲ್ಲಿ ಚಳಿಯಿಂದ ಪೀಡಿತನಾದ ಬಾಲಕನ ಹೃದಯದಿಂದ ಬಂದ ನುಡಿಯನ್ನು ಹಾಡುತ್ತಿದ್ದರು.

ತಾಯಿಯು ಮಕ್ಕಳನ್ನು ಮುದ್ದು ಮುದ್ದಾಗಿ ಕರೆಯುತ್ತ ಇನ್ನೂ ದೊಡ್ಡ ದೊಡ್ಡ ತುತ್ತುಗಳನ್ನು ತಿನ್ನಿಸುವಳು. ಅವಳ ಹೃದಯದಲ್ಲಿ ಪ್ರೀತಿಯ ಉತ್ಸಾಹ ಮತ್ತು ಕಣ್ಣುಗಳಲ್ಲಿ ಅಭಿಮಾನದ ನೋಟ ತುಂಬಿತ್ತು. ಇಬ್ಬರೂ ಸೋದರರು

ಬೆಳೆದು ದೊಡ್ಡವರಾದರು. ಹಾಗೆ ದೊಡ್ಡವರಾಗುತ್ತ ಇಬ್ಬರೂ ಪರಸ್ಪರ ಹೆಗಲ ಮೇಲೆ ಕೈ ಹಾಕಿಕೊಂಡು ಆಟವಾಡುತ್ತಿದ್ದರು. ಕೇದಾರನ ಬುದ್ಧಿ ತುಂಬ ದೃಢವಾಗಿತ್ತು ಅಂತೆಯೇ ಮಾಧವನ ಶರೀರ ದೃಢವಾಗಿತ್ತು. ಇಬ್ಬರಲ್ಲೂ ಅದೆಷ್ಟು ಸ್ನೇಹವಿತ್ತೆಂದರೆ ಜೊತೆಜೊತೆಯಲ್ಲೇ ಇಬ್ಬರೂ ಶಾಲೆಗೆ ಹೋಗುತ್ತಿದ್ದರು, ಜೊತೆಯಲ್ಲೇ ಉಣ್ಣುತ್ತಿದ್ದರು ಜೊತೆಯಲ್ಲೇ ಇರುತ್ತಿದ್ದರು. ಇಬ್ಬರಿಗೂ ಮದುವೆಯಾಯಿತು. ಕೇದಾರನ ಹೆಂಡತಿ ಚಂಪಾ. ಹೆಚ್ಚು ಮಾತನಾಡುವವಳು ಮತ್ತು ಚಂಚಲಸ್ವಭಾವದವಳು. ಮಾಧವನ ಹೆಂಡತಿ ಶ್ಯಾಮಾ ಶ್ಯಾಮಲ ವರ್ಣದ, ರೂಪರಾಶಿ. ತುಂಬ ಮೃದುಭಾಷಿ. ಅತ್ಯಂತ ಸುಶೀಲಳು ಮತ್ತು ಶಾಂತ ಸ್ವಭಾವದವಳು ಆಗಿದ್ದಳು.

ಕೇದಾರನು ಚಂಪಾಳ ಮೇಲೆ ಪ್ರಾಣ ಇಟ್ಟುಕೊಂಡಿದ್ದನು. ಹಾಗೆಯೇ ಮಾಧವನಿಗೆ ಶ್ಯಾಮಾಳ ಮೇಲೆ ಅಪಾರ ಪ್ರೀತಿ. ಆದರೆ ಕಲಾವತಿಯ ಮನಸ್ಸಾದರೋ ಯಾರೊಂದಿಗೂ ಹೊಂದಿಕೊಳ್ಳಲಿಲ್ಲ. ಇಬ್ಬರ ವಿಷಯಕ್ಕೂ ಅವಳು ಸಂತುಷ್ಟಳು; ಇಬ್ಬರ ವಿಷಯಕ್ಕೂ ಅಸಂತುಷ್ಟಳು. ಚಂಪಾಳು ಶ್ಯಾಮಾಳ ಶಾಂತ ಸ್ವಭಾವದಿಂದ ತನ್ನ ಸ್ವಭಾವವನ್ನು ಬದಲಿಸಿಕೊಳ್ಳಲಿ ಎಂಬ ಉದ್ದೇಶದಿಂದ ಚಂಪಾಳಿಗೆ ಆ ಬಗ್ಗೆ ತರಬೇತಿಕೊಡುವ ವ್ಯರ್ಥ ಪ್ರಯತ್ನದಲ್ಲೇ ಕಳೆದುಹೋಗುತ್ತಿತ್ತು.

ಇಬ್ಬರೂ ಸೋದರರಿಗೆ ಮಕ್ಕಳಾದರು. ಪುಷ್ಪವಾಗಿ ಬೆಳೆದುನಿಂತ ವೃಕ್ಷ ಚೆನ್ನಾಗಿ ಹರಡಿಕೊಂಡು ಹಣ್ಣುಗಳಿಂದ ಸಮೃದ್ಧವಾಯಿತು. ಕುತ್ಸಿತ ವೃಕ್ಷದಲ್ಲಿ ಕೇವಲ ಒಂದು ಹಣ್ಣು ಮಾತ್ರ ಕಾಣಿಸಿಕೊಂಡಿತು. ಅದೂ ಕೂಡ ಬಣ್ಣವಿಲ್ಲದೆ ಬಾಡಿ ನಿಂತಿತ್ತು. ಆದರೆ ಇಬ್ಬರೂ ಅಸಂತುಷ್ಟರಾಗಿದ್ದರು. ಮಾಧವನಿಗೆ ಹಣ ಕಾಸಿನ ದುರಾಸೆ ಇತ್ತು. ಕೇದಾರನಿಗೆ ಮಕ್ಕಳ ಅಭಿಲಾಷೆ.

ಅದೃಷ್ಟದ ಈ ಕೂಟನೀತಿ ನಿಧನಿಧಾನವಾಗಿ ದ್ವೇಷಕ್ಕೆ ಎಡೆಮಾಡಿಕೊಟ್ಟಿತು. ಅದು ಸ್ವಾಭಾವಿಕವೇ ಆಗಿತ್ತು. ಶ್ಯಾಮಾ ತನ್ನ ಮಕ್ಕಳನ್ನು ಸಂಭಾಳಿಸುವುದು, ಸಜ್ಜುಗೊಳಿಸುವುದರಲ್ಲಿ ಅದೆಷ್ಟು ನಿರತಳಾಗಿರುತ್ತಿದ್ದಳು ಅಂದರೆ ಅವಳಿಗೆ ತಲೆ ಎತ್ತಲು ಬಿಡುವಿರುತ್ತಿರಲಿಲ್ಲ. ಬಡಪಾಯಿ ಚಂಪಾಳಿಗೆ ಬೆಂಕಿಯ ಮುಂದೆ ಬೇಯಬೇಕಾಗಿತ್ತು ಮತ್ತು ಬೀಸುವ ಕಲ್ಲಿನಲ್ಲಿ ಬೀಸಿ ದಣಿಯ ಬೇಕಾಗಿತ್ತು. ಈ ಆ ನೀತಿ ಒಮ್ಮೊಮ್ಮೆ ಕಟು ಶಬ್ದಗಳಲ್ಲಿ ಹೊರಹೊಮ್ಮುತ್ತಿತ್ತು. ಶ್ಯಾಮಾ ಕೇಳಿಸಿಕೊಳ್ಳುತ್ತಿದ್ದಳು, ಕೋಪಿಸಿಕೊಳ್ಳುತ್ತಿದ್ದಳು ಮತ್ತು ಸದ್ದಿಲ್ಲದೆ ಸುಮ್ಮನೆ ಸಹಿಸಿಕೊಳ್ಳುತ್ತಿದ್ದಳು. ಅವಳ ಈ ಸಹನೆ ಚಂಪಾಳ ಸಿಟ್ಟನ್ನು ಕಡಿಮೆ ಮಾಡುವುದರ ಬದಲು ಇನ್ನಷ್ಟು ಹೆಚ್ಚಿಸುತ್ತಿತ್ತು. ಎಷ್ಟರ ಮಟ್ಟಿಗೆ ಅಂದರೆ

ಬಟ್ಟಲು ಕಂಠದ ವರೆಗೆ ತುಂಬಿತು. ಜಿಂಕೆ ಓಡಿ ತಪ್ಪಿಸಿಕೊಳ್ಳುವ ಹಾದಿ ಸಿಕ್ಕದೆ ಬೇಟೆಗಾರನತ್ತಲೇ ಭರದಿಂದ ಓಡಿತು. ಚಂಪಾ ಮತ್ತು ಶ್ಯಾಮಾ ಸಮಾನಾಂತರ ರೇಖೆಗಳಂತೆ ಬೇರೆಯಾದರು. ಅಂದು ಒಂದೇ ಮನೆಯಲ್ಲಿ ಎರಡು ಒಲೆಗಳು ಹೊತ್ತಿದವು. ಆದರೆ ಸೋದರರು ಅನ್ನದ ಮುಖ ನೋಡಲಿಲ್ಲ. ಕಲಾವತಿ ದಿನವೆಲ್ಲಾ ಅಳುತ್ತಿದ್ದಳು.

2

ಅನೇಕ ವರ್ಷಗಳು ಗತಿಸಿದವು. ಒಂದು ಕಾಲದಲ್ಲಿ ಒಂದೇ ತೊಡೆಯ ಮೇಲೆ ಕುಳಿತುಕೊಳ್ಳುತ್ತಿದ್ದ, ಒಂದೇ ತಟ್ಟೆಯಲ್ಲಿ ಉಣ್ಣುತ್ತಿದ್ದ, ಒಂದೇ ಎದೆಯಿಂದ ಹಾಲು ಕುಡಿಯುತ್ತಿದ್ದ ಸೋದರರಿಗೆ ಈಗ ಒಂದೇ ಮನೆಯಲ್ಲಿ, ಒಂದೇ ಹಳ್ಳಿಯಲ್ಲಿ ಇರುವುದು ಕಷ್ಟವಾಯಿತು. ಆದರೆ ಕುಲದ ಕೀರ್ತಿಗೆ ಕಲಂಕ ತಗಲಿದರಲೆಂಬ ಉದ್ದೇಶದಿಂದ

ಧಗಧಗಿಸುತ್ತಿರುವ ಬೆಂಕಿಯನ್ನು ಬೂದಿಯ ಕೆಳಗೆ ಮುಚ್ಚಿಹಾಕುವ ವ್ಯರ್ಥ ಪ್ರಯತ್ನ ನಡೆಸಲಾಗುತ್ತಿತ್ತು. ಅವರಲ್ಲಿ ಈಗ ಸೋದರ ಪ್ರೀತಿ ಇರಲಿಲ್ಲ. ಸೋದರ ಎಂಬ ಶಬ್ದಕ್ಕೆ ನಾಚಿಕೆ ಉಂಟುಮಾಡುತ್ತಿತ್ತು.. ತಾಯಿಯೂ ಜೀವಿಸಿದ್ದಳು. ಆದರೆ ಇಬ್ಬರೂ ಮಕ್ಕಳ ವೈಮನಸ್ಯವನ್ನು ನೋಡಿ ಕಣ್ಣೀರು ಕರೆಯುತ್ತಿದ್ದಳು. ಹೃದಯದಲ್ಲಿ ಪ್ರೇಮವಿತ್ತು, ಆದರೆ ಕಣ್ಣುಗಳಲ್ಲಿ ಅಭಿಮಾನವಿರಲಿಲ್ಲ. ಹೂವೇನೋ ಅದೇ. ಆದರೆ ಅದರಲ್ಲಿ ಆ ಕಾಂತಿ ಇರಲಿಲ್ಲ.

ಸೋದರರು ಬುದ್ಧಿ ಬಲಿಯದ ಮುಗ್ಧ ಹುಡುಗರಾಗಿದ್ದಾಗ ಒಬ್ಬನು ಅಳುವುದನ್ನು ನೋಡಿ ಇನ್ನೊಬ್ಬನೂ ಅಳಲಾರಂಭಿಸುತ್ತಿದ್ದ. ಈಗ ಒಬ್ಬನು ಅಳುವುದನ್ನು ನೋಡಿ ಇನ್ನೊಬ್ಬನು ಚಪ್ಪಾಳೆ ಹೊಡೆದುಕೊಂಡು ನಗುತ್ತಿದ್ದ. ಈಗ ಅವರಿಬ್ಬರೂ ತಿಳಿವಳಿಕೆಯುಳ್ಳ ಬುದ್ಧಿವಂತರಾಗಿ ಬಿಟ್ಟಿದ್ದರು.

ತಮ್ಮವರಾರು ಬೇರೆಯವರಾರು ಎಂಬ ಅರಿವಿಲ್ಲದಿದ್ದಾಗ ಅವರನ್ನು ರೇಗಿಸಲು ಒಬ್ಬನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುತ್ತೀವಿ ಎಂದು ಬೆದರಿಕೆ ಹಾಕಿದರೆ ಇನ್ನೊಬ್ಬನು ನೆಲದ ಮೇಲೆ ಮಲಗಿಕೊಂಡು ಆ ಮನುಷ್ಯನ ಕುರ್ತ ಹಿಡಿದುಕೊಂಡುಬಿಡುತ್ತಿದ್ದ. ಈಗ ಒಂದು ವೇಳೆ ಸಾವು ಬೆದರಿಕೆ ಹಾಕಿದರೂ ಇನ್ನೊಬ್ಬನ ಕಣ್ಣಲ್ಲಿ ನೀರು ಬರುತ್ತಿರಲಿಲ್ಲ. ಈಗ ಅವರು ತಮ್ಮವರು ಅಂದರೆ ಯಾರು, ಬೇರೆಯವರು ಅಂದರೆ ಯಾರು ಎಂದು ಗುರುತಿಸ ಬಲ್ಲವರಾಗಿದ್ದರು.

ಬಡಪಾಯಿ ಮಾಧವನ ಸ್ಥಿತಿ ಶೋಚನೀಯವಾಗಿತ್ತು. ಖರ್ಚು ವಿಪರೀತ. ಆದರೆ ಆದಾಯ ಕಮ್ಮಿ. ಅದರ ಮೇಲೆ ಕುಲ ಮರ್ಯಾದೆಯನ್ನು ನಿಭಾಯಿಸುವ ಹೊಣೆಗಾರಿಕೆ

ಬೇರೆ. ಹೃದಯ ಅಳುತ್ತಿದ್ದರೂ ತುಟಿಗಳು ನಗುತ್ತಿರಬೇಕಾಗಿತ್ತು. ಹೃದಯ ಮಲಿನವಾಗಿರಬಹುದು, ಆದರೆ ಬಟ್ಟೆಗಳು ಮಾತ್ರ ಮಲಿನವಾಗಿರುವಂತಿಲ್ಲ. ನಾಲ್ಕು ಗಂಡು ಮಕ್ಕಳು. ನಾಲ್ಕು ಹೆಣ್ಣು ಮಕ್ಕಳು. ಇನ್ನು ಅಗತ್ಯ ವಸ್ತುಗಳಾದರೋ ಮುತ್ತಿನಷ್ಟು ಬೆಲೆಬಾಳುವಂಥವು. ಕೆಲವು ಕಾಸಿನಷ್ಟು ಬೆಲೆಯ ಜಮೀನುದಾರಿಕೆ ಎಲ್ಲಿಯ ವರೆಗೆ ತಾನೆ ನಿಭಾಯಿಸ ಬಲ್ಲುದು?

ಗಂಡು ಮಕ್ಕಳ ಮದುವೆ ಬೇಕೆಂದಾಗ ಮಾಡಬಹುದು. ಆದರೆ ಹೆಣ್ಣು ಮಕ್ಕಳ ಮದುವೆಯನ್ನು ಎಷ್ಟು ದಿನ ತಾನೆ ತಡೆದಿರಲು ಸಾಧ್ಯ! ಎರಡು ಕಾಸಿನ ಜಮೀನು ಮೊದಲ ಮಗಳ ಮದುವೆಯಲ್ಲಿ ಕಾಣಿಕೆಯಾಗಿ ನೀಡಲಾಗಿತ್ತು.

ಅಷ್ಟರ ಮೇಲೂ ಗಂಡಿನ ಕಡೆಯವರು ಊಟ ಮಾಡದೆ ಮನೆಯ ಅಂಗಳದಿಂದ ಎದ್ದುಹೋಗಿಬಿಟ್ಟಿದ್ದರು. ಉಳಿದ ಜಮೀನು ಎರಡನೇ ಮಗಳ ಮದುವೆಯಲ್ಲಿ ಹೊರಟುಹೋಯಿತು. ಒಂದು ವರ್ಷದ ನಂತರ ಮೂರನೇ ಮಗಳ ಮದುವೆಯೂ ಆಯಿತು. ಮರ ಮುಟ್ಟು ಕೂಡ ಉಳಿಯಲಿಲ್ಲ. ಹೌದು ಈಗಿನ ಟೊಂಗೆ ತುಂಬಿಕೊಂಡಿತ್ತು. ಆದರೆ ಮಾಂಸ ಮತ್ತು ನಾಯಿಗಿರುವ ಸಂಬಂಧವೇ ದಾರಿದ್ರ್ಯ ಮತ್ತು ಅಡವಿಡುವುದರಲ್ಲಿರುವ ಸಂಬಂಧ.

3

ಮದುವೆಯ ಬಳಿಕ ಈ ಹುಡುಗಿಯನ್ನಿನ್ನೂ ಗಂಡ ಮಾವನ ಮನೆಯಿಂದ ತನ್ನ ಮನೆಗೆ ಕರೆದೊಯ್ದಿರಲಿಲ್ಲ. ಅಷ್ಟರಲ್ಲಿ ಮಾಧವನಿಗೆ ಬಾಕಿ ಕಂದಾಯ ಚುಕ್ತಾ ಮಾಡಲು ವಾರಂಟ್ ಬಂದುಬಿಟ್ಟಿತು. ಮದುಮಗಳ ಒಡವೆಗಳನ್ನು ಅಡವು ಮಾಡಲಾಯಿತು. ಸಂಕಟದಿಂದ ಬಿಡಿಸಿಕೊಂಡಿದ್ದಾಯಿತು. ಚಂಪಾ ಇದೇ ಸಮಯಕ್ಕಾಗಿ ಕಾದಿದ್ದಳು. ಕೂಡಲೇ ಹೊಸ ಸಂಬಂಧದವರ ಸೂಚನೆ ಕೊಟ್ಟಳು. ನೀವುಗಳು ಮೈಮೇಲೆ ಎಚ್ಚರವಿಲ್ಲದವರ ಹಾಗೆ ಕೂತಿದ್ದೀರಿ. ಇಲ್ಲಿ ಒಡವೆಗಳನ್ನೆಲ್ಲ ಚೊಕ್ಕಟ ಮಾಡಲಾಗುತ್ತಿದೆ. ಮರು ದಿನ ಒಬ್ಬ ಕ್ಷೌರದವನು ಮತ್ತು ಇಬ್ಬರು ಬ್ರಾಹ್ಮಣರು ಮಾಧವನ ಮನೆಯ ಬಗಿಲಿಗೆ ಬಂದು ಕೂತುಬಿಟ್ಟರು. ಬಡಪಾಯಿಯ ಕುತ್ತಿಗೆಗೆ ನೇಣು ಬಿದ್ದಹಾಗೆ ಆಯಿತು. ಹಣ ಎಲ್ಲಿಂದ ತಾನೆ ಬರಬೇಕು? ಆಸ್ತಿ, ಐಶ್ವರ್ಯ, ತೋಟ, ತುಡಿಕೆ ಯಾವುದೂ ಇಲ್ಲ. ಇನ್ನು ವಿಶ್ವಾಸ. ಅದು ಯಾವತ್ತೋ ಹಾರಿಹೋಗಿತ್ತು. ಈಗ ಇದ್ದ ಸಂಪತ್ತೆಂದರೆ ಅದೇ ಎರಡು ಕೊಠಡಿಗಳು. ಅದರಲ್ಲೇ ಅವನು ತನ್ನ ಆಯುಷ್ಯವನ್ನೆಲ್ಲಾ ಕಳೆದಿದ್ದ. ಇನ್ನು ಅದನ್ನು ಕೊಂಡುಕೊಳ್ಳೋ ಗಿರಾಕಿಗಳು ಯಾರೂ ಇರಲಿಲ್ಲ. ತಡವಾದ್ದರಿಂದ

ಮರ್ಯಾದೆ ಮೂರು ಕಸಿಗೆ ಹರಾಜಾಗ್ತಾ ಇತ್ತು. ಬೇರೆ ಇನ್ನೇನೂ ಉಪಾಯವಿಲ್ಲದೆ ಕೇದಾರನ ಹತ್ತಿರ ಬಂದು ಕಣ್ಣಿನಲ್ಲಿ ನೀರು ತುಂಬಿಕೊಂಡು ಹೇಳಿದ– "ಅಣ್ಣಾ ಈಗ ನಾನು ಭಾರೀ ಸಂಕಟದಲ್ಲಿದ್ದೀನಿ. ನನಗೆ ಸಹಾಯ ಮಾಡು."

ಕೇದಾರ ಹೇಳಿದ– "ಮಾಧೂ! ಈಗ ನನಗೂ ತೀರಾ ಕಷ್ಟವಾಗಿದೆ. ನಿನ್ನ ಹತ್ತಿರ ನಿಜ ಹೇಳ್ತಾ ಇದ್ದೀನಿ." ಚಂಪಾ ಅಧಿಕಾರಯುತವಾದ ದನಿಯಿಂದ ಹೇಳಿದಳು– "ಅಲ್ಲ, ಇವರ ವಿಷಯಕ್ಕೂ ಕಂಜೂಸ್ ಆಗುತ್ತಿದ್ದೀರಾ! ಊಟ ಬೇರೆಯಾಗಿ ಮಾಡಿಬಿಟ್ಟಾಕ್ಷಣಕ್ಕೆ ಮರ್ಯಾದೆ ಬೇರೆ ಆಗಿಬಿಡುತ್ತೇನು!"

ಕೇದಾರನು ತನ್ನ ಹೆಂಡತಿಯ ಕಡೆಗೆ ಕುಡಿನೋಟದಿಂದ ನೋಡಿ– "ಇಲ್ಲ, ಇಲ್ಲ. ನಾನು ಹಾಗಲ್ಲ ಹೇಳಿದ್ದು. ಕೈ ಕಟ್ಟಿಹಾಕಿದ್ದರೇನು, ಏನಾದರೂ ಒಂದು ವ್ಯವಸ್ಥೆ ಆಗುತ್ತೆ" ಎಂದು ಹೇಳಿದ.

ಚಂಪಾ ಮಾಧವನನ್ನು ಕೇಳಿದಳು– "ಹತ್ತಿಪ್ಪತ್ತು ರೂಪಾಯಿಗಿಂತ ಹೆಚ್ಚಿಗೇನೆ ಒಡವೆ ಹಾಕಿದ್ದಿರಿ ಅಲ್ಲವಾ?"

ಮಾಧವ ಹೇಳಿದ– "ಹ್ಞೂ, ಬಡ್ಡಿ ಎಲ್ಲ ಸೇರಿ ಒಂದು ನೂರಿಪೊತ್ತೈದು ರೂಪಾಯಿ ಆಗುತ್ತೆ"

ಕೇದಾರನು ರಾಮಾಯಣ ಪಾರಾಯಣ ಮಾಡುತ್ತಿದ್ದ. ಮತ್ತೆ ಪಾರಾಯಣ ಮಾಡುವುದರಲ್ಲಿ ತೊಡಗಿದ. ಚಂಪಾ ತತ್ವದ ಮಾತು ಆಡತೊಡಗಿದಳು– "ಹಣ ಜಾಸ್ತಿ ಆಯಿತು. ನಮ್ಮ ಹತ್ತಿರ ಇದ್ದಿದ್ದರೆ ಯೋಚನೆ ಮಾಡಬೇಕಾಗಿರಲಿಲ್ಲ. ನಾವೂ ಬೇರೆ ಯಾರಿಂದಲಾದರೂ ಕೊಡಿಸಬೇಕು. ಮತ್ತು ಸಾಹುಕಾರರುಗಳು ಕಾಗದ ಪತ್ರ ಇಲ್ಲದೆ ಹಣ ಬಿಚ್ಚೋರಲ್ಲ."

ಮಾಧವ ಯೋಚಿಸಿದ–ಪತ್ರ ಗಿತ್ರ ಬರೆದುಕೊಡೋದಕ್ಕೆ ನನ್ನ ಹತ್ತಿರ ಏನಾದರೂ ಇದ್ದಿದ್ದರೆ ಬೇರೆ ಶ್ರೀಮಂತರೇನು ಸತ್ತುಹೋಗಿದ್ದರೇನು. ನಿಮ್ಮ ಮನೆ ಬಾಗಿಲಿಗೆ ಯಾಕಾದರೂ ಬರುತ್ತಿದ್ದೆ? ಹೇಳಿದ– "ಬರೆದು ಗಿರೆದು ಕೊಡೋದಕ್ಕೆ ನನ್ನ ಹತ್ತಿರ ಏನು ತಾನೆ ಇದೆ? ಒಂದು ಚೂರು ಜಾಗ ಅಂತ ಏನಾದರು ಇದ್ದರೆ ಅದು ಈ ಬೊಗಸೆಯಗಲದ ಮನೆ ಮಾತ್ರ"

ಕೇದಾರ ಮತ್ತು ಚಂಪಾ ಇಬ್ಬರೂ ಮರ್ಮಭೇದಕವಾದ ನೋಟದಿಂದ ಒಬ್ಬರನ್ನು ಒಬ್ಬರು ನೋಡಿ ಮನಸ್ಸಿನಲ್ಲೇ ಅಂದುಕೊಂಡರು–ಇವತ್ತು ನಿಜಕ್ಕೂ ಜೀವನದ ಮೆಚ್ಚಿನ ಆಸೆಗಳು ಈಡೆರುತ್ತವೇನು? ಆದರೆ ಹೃದಯದ ಈ ಉತ್ಸಾಹ ಬಾಯಿಗೆ ಬರುವ

ಹೊತ್ತಿಗೆ ಗಂಭೀರವಾದ ಆಕಾರವನ್ನು ತಾಳಿಬಿಟ್ಟಿತು. ಚಂಪಾ ಬಹಳ ಗಂಭೀರವಾಗಿ ಹೇಳಿದಳು– "ಮನೆಯ ಮೇಲಂತೂ ಯಾವ ಸಾಹುಕಾರರೂ ಯಾವತ್ತೂ ದುಡ್ಡು ಕೊಡೋದಿಲ್ಲ. ಪಟ್ಟಣ ಆಗಿದ್ದರೆ ಒಂದು ಸ್ವಲ್ಪ ಬಾಡಿಗೆನಾದರೂ ಬರುತ್ತಾ ಇತ್ತು. ಆದರೆ ಹಳ್ಳೀಲಿ ಬಿಟ್ಟಿಗೆ ಕೊಟ್ಟರೂ ಯಾರೂ ತೊಗೊಳ್ಳಲ್ಲ. ಇನ್ನು ಪಾಲುಗಾರಿಕೆ ಯದೊಂದು ಉಳಿಯಿತು."

ಚಂಪಾಳ ನಿಷ್ಠುರತೆಯಿಂದ ತಾವು ಆಡ್ತಾ ಇರುವ ಆಟ ಹಾಳಾಗಿಬಿಡುತ್ತೋ ಏನೋ ಅಂತ ಕೇದಾರನಿಗೆ ಹೆದರಿಕೆ ಆಯಿತು. ಹೇಳಿದ– "ಒಬ್ಬ ಸಾಹುಕಾರ ನನಗೆ ಚೆನ್ನಾಗಿ ಗೊತ್ತು. ಅವನು ಏನಾದರೂ ಹೇಳಿದರೆ ಕೇಳಬಹುದೋ ಏನೋ!"

ಚಂಪಾ ಗೋಣು ಆಡಿಸುತ್ತ ಗಂಡನ ಈ ಉಪಾಯವನ್ನು ಪ್ರಶಂಸಿಸುತ್ತ ಹೇಳಿದಳು– "ಆದರೆ ಒಂದು ನಲವತ್ತು ಅರುವತ್ತು ರೂಪಾಯಿಗಿಂತ ಹೆಚ್ಚಿಗೆ ಸಿಗೋದು ಕಷ್ಟ."

ಕೇದಾರನು ಬಹಳ ಸಾಹಸಪಟ್ಟು ಹೇಳಿದ– "ಅಲ್ಲ ಬಹಳ ಒತ್ತಾಯ ಮಾಡಿದರೆ ಒಂದು ಎಂಬತ್ತು ರೂಪಾಯಿ ಸಿಗಬಹುದು. ಸರಿ ಮತ್ತಿನ್ನೇನು!"

ಈಗ ಕೇದಾರನ ಕಡೆ ತೀಕ್ಷ್ಣವಾಗಿ ನೋಡಿ ಒಲ್ಲದ ಮನಸ್ಸಿನಿಂದ ಹೇಳಿದಳು– "ಸಾಹುಕಾರರುಗಳು ಅಷ್ಟೊಂದು ಕುರುಡರೇನಾಗಿರಲ್ಲ."

ಮಾಧವನಿಗೆ ತನ್ನ ಅಣ್ಣ ಅತ್ತಿಗೆಯ ಈ ಗುಟ್ಟಿನ ರಹಸ್ಯ ಸ್ವಲ್ಪ ಮಟ್ಟಿಗೆ ಅರ್ಥವಾಗುತ್ತಿತ್ತು. ಇವರಿಗೆ ಇಷ್ಟೊಂದು ಬುದ್ಧಿ ಎಲ್ಲಿಂದ ಬಂತು ಅಂತ ಅವನಿಗೆ ಆಶ್ಚರ್ಯವಾಗಿತ್ತು. "ಹೆಚ್ಚಿಗೆ ಬೇಕಿರುವ ಹಣ ಎಲ್ಲಿಂದ ಬರುತ್ತೆ?" ಅಂತ ಕೇಳಿದ.

ಚಂಪಾ ಸಿಡಿಮಿಡಿಗುಟ್ಟುತ್ತ ಹೇಳಿದಳು– "ಹೆಚ್ಚಿನ ಹಣಕ್ಕೆ ಹೆಚ್ಚು ಚಿಂತೆಮಾಡು! ನೂರಿಪ್ಪೊತ್ತೈದು ರೂಪಾಯಿಗಳನ್ನು ಈ ಎರಡು ಕೊಠಡಿಗಳಿಗೆ ಈ ಜನ್ಮದಲ್ಲಿ ಯಾರೂ ಕೊಡಲ್ಲ. ಎಂಬತ್ತು ರೂಪಾಯಿ ಬೇಕು ಅಂದರೆ ಒಬ್ಬ ಸಾಹುಕಾರರಿಂದ ಕೊಡಿಸುತ್ತೇನೆ. ಪತ್ರ ಗಿತ್ರ ಸಿದ್ಧಪಡಿಸು"

ಈ ರಹಸ್ಯಾತ್ಮಕವಾದ ಮಾತುಗಳಿಂದ ಮಾಧವನಿಗೆ ಸಂದೇಹ ಉಂಟಾಯಿತು. ಈ ಜನ ನನ್ನ ಜೊತೆ ಏನೋ ಭಾರೀ ಸಂಚು ನಡೆಸುತ್ತಿದ್ದಾರೆ ಎಂಬ ಭಯ ಉಂಟಾಯಿತು. ದೃಢವಾಗಿ ಕಡ್ಡಿ ಎರಡು ತುಂಡು ಮಾಡಿದ ಹಾಗೆ ಹೇಳಿದ– "ಬೇರೆ ಇನ್ನೇನು ಚಿಂತೆ ಮಾಡಲಿ? ಒಡವೆ ಇದ್ದಿದ್ದರೆ ಆಯಿತು ಇಟ್ಟುಬಿಡೋಣ ಅಂತ ಹೇಳ್ತಾ ಇದ್ದೆ. ನಮ್ಮ ಹತ್ತಿರ ಅಂತೂ ಒಂದು ಹಾಳು ದಾರವೂ ಇಲ್ಲ. ಕೆಟ್ಟ ಹೆಸರು ಬರೋದಾದರೆ ಹತ್ತಕ್ಕಾದರೇನು ಐವತ್ತಕ್ಕಾದರೇನು ಎರಡೂ ಒಂದೇನೇ. ಒಂದು

ವೇಳೆ ಮನೆ ಮಾರಿದರೂ ನನ್ನ ಹೆಸರು ಹಾಳಾಗದೆ ಉಳಿಯುತ್ತೆ ಅಂದರೆ ಅದಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ಅತ್ಲಾಗೆ ಮನೇನೂ ಮಾರೂ ಹೆಸರೂ ಹಾಳಾಗಲಿ ಅನ್ನುವ ರೀತಿ ಆದರೆ ನಾನು ಹಾಗೆ ಮಾಡಕ್ಕೆ ಹೋಗಲ್ಲ. ಬರೀ ಹೆಸರಿನದೇ ಚಿಂತೆ. ಒಮ್ಮೆಗೆ ಹಾಗಾಗಿ ಬಿಟ್ಟಿತು ಅಂದರೆ ಯಾರೇನು ಮಾಡ್ತಾರೆ ನನಗೆ? ನಿಜ ಹೇಳಬೇಕು ಅಂತ ಅಂದರೆ ನನಗೆ ನನ್ನ ಹೆಸರಿನ ಬಗ್ಗೆ ಅಂಥಾ ಚಿಂತೆ ಏನೂ ಇಲ್ಲ. ನನ್ನ ಹೆಸರು ಯಾರಿಗೆ ತಾನೆ ಗೊತ್ತಿದೆ. ಲೋಕ ಅಣ್ಣನನ್ನು ನೋಡಿ ನಗುತ್ತೆ."

ಕೇದಾರನ ಮುಖ ಒಣಗಿ ಹೋಯಿತು. ಚಂಪಾಳಿಗೂ ಗಾಬರಿ ಆಯಿತು. ಅವಳು ಮಾತಿನಲ್ಲಿ ಬಹಳ ಬುದ್ಧಿವಂತಳಾದ ಹೆಂಗಸು. ಮಾಧವನಂಥ ಒಬ್ಬ ಹಳ್ಳಿ ಗುಗ್ಗು ಹೀಗೆ ಖಡಾಖಂಡಿತವಾಗಿ ಮಾತಾಡ್ತಾನೆ ಅಂತ ಅಂದುಕೊಂಡಿರಲಿಲ್ಲ. ಅವನ ಕಡೆಗೆ ಗೌರವದಿಂದ ನೋಡಿ ಹೇಳಿದಳು– "ಮಗೂ ನೀನೂ ಒಂದೊಂದು ಸಲ ಒಳ್ಳೆ ಹುಡುಗನ ಥರ ಮಾತಾಡ್ತಿ! ಅಲ್ಲ, ಯಾರು ತಾನೆ ಈ ಗುಡಿಸಿಲಿಗೆ ನೂರು ರೂಪಾಯಿ ತೆಗೆದು ಕೊಟ್ಟಾನು?"

"ನೂರಿಪ್ಪತ್ತೈದಕ್ಕೆ ಬದಲಾಗಿ ನೂರು ರೂಪಾಯಿ ಕೊಡಿಸಿಬಿಡು ಸಾಕು, ನಾನು ಈ ಹೊತ್ತೇ ನನ್ನ ಭಾಗದ್ದನ್ನು ಮಾರಿಬಿಡುತ್ತೀನಿ. ನನಗೂ ಅಷ್ಟೇ ತಾನೆ ಸಿಕ್ಕೋದು ಮನೆಗೆ? ನಿನಗೆ ಅದೇ ಎಂಬತ್ತು ರೂಪಾಯೇ ಸಿಕ್ಕೋದು. ಬಾಕಿ ಹೆಚ್ಚಿನ ಹಣದ ವ್ಯವಸ್ಥೆಯನ್ನು ನಾವು ನಾವು ಮಾಡಿಕೊಳ್ಳೋಣ. ಮರ್ಯಾದೆ ನಮ್ಮದು ನಿಮ್ಮದು ಎರಡೂ ಒಂದೇ. ಅದು ಹೋಗೋದಿಲ್ಲ. ಆ ಹಣವನ್ನು ಬೇರೆ ಖಾತೆಗೆ ಹಾಕಲಾಗುವುದು."

ಮಾಧವನ ಆಸೆಗಳು ಈಡೇರಿದವು. ಅವನು ಯುದ್ಧ ಗೆದ್ದುಬಿಟ್ಟ. ನನಗೆ ಬೇಕಾಗಿರೋದು ಹಣ. ಒಂದಲ್ಲದಿದ್ದರೆ ಹತ್ತು ಖಾತೆಗೆ ಹಾಕಿಕೊಳ್ಳಲಿ ಎಂದು ಯೋಚಿಸುತ್ತಿದ್ದ. ಈಗ ಇರುವ ಮನೆಯನ್ನು ಪ್ರಾಣ ಇರುವ ತನಕ ಬಿಡುವ ಮಾತೇ ಇಲ್ಲ. ಸಂತೋಷ ಭರಿತನಾಗಿ ಹೊರಟ. ಅವನು ಅತ್ತ ಹೋದ ಮೇಲೆ ಕೇದಾರ ಮತ್ತು ಚಂಪಾ ಇಬ್ಬರೂ ಕಪಟ ವೇಷವನ್ನು ಬಿಟ್ಟು ಒಬ್ಬರ ಮೇಲೆ ಇನ್ನೊಬ್ಬರು ಈ ಬಗೆಯ ನಿರ್ದಾಕ್ಷಿಣ್ಯ ವಾಪಾರದ ದೋಷಾರೋಪ ಮಾಡುವ ಪ್ರಯತ್ನ ಮಾಡುತ್ತ ಇದ್ದರು. ಆಮೇಲೆ ಊಟ ತುಂಬಾ ರುಚಿಯಾಗೇನೂ ಇಲ್ಲದೆ ಇದ್ದರೂ ಹೊಟ್ಟೆ ತುಂಬಾ ಅಂತೂ ಇದೆ. ಇನ್ನು ಮನೆ. ಶ್ಯಾಮಾ ರಾಣಿ ಅದು ಹೇಗೆ ರಾಜ್ಯಬಾರ ನಡೆಸುತ್ತಾಳೋ ನೋಡೋಣ ಅಂದುಕೊಂಡರು.

ಕೇದಾರನ ಮನೆ ಮುಂದೆ ಎರಡು ಎತ್ತುಗಳು ನಿಂತಿವೆ. ಇವುಗಳಲ್ಲಿ ಅದೆಷ್ಟೊಂದು ಸೌಹಾರ್ದ, ಸ್ನೇಹ, ಮತ್ತು ಪ್ರೇಮ! ಎರಡೂ ಒಂದೇ ನೊಗಕ್ಕೆ ಹೆಗಲು ಕೊಟ್ಟು ಹೆಜ್ಜೆ ಹಾಕುತ್ತವೆ. ಇವುಗಳಲ್ಲಿ ಇರುವ ಸಂಬಂಧ ಇಷ್ಟೇ. ಆದರೆ ಇವುಗಳಲ್ಲಿ ಒಂದು ಚಂಪಾಳ ತೌರು ಮನೆಗೆ ಏನೋ ಮಂಗಳ ಕಾರ್ಯದ ಸಲುವಾಗಿ ಹೋಗಿದ್ದಾಗ ಇನ್ನೊಂದು ಕೊಟ್ಟಿಗೆಯಲ್ಲಿ ಮುಖ ಹಾಕಲಿಲ್ಲ. ಆದರೆ ಒಂದೇ ತೊಡೆಯ ಮೇಲೆ ಆಟವಾಡಿದ, ಒಂದೇ ಎದೆಯಿಂದ ಹಾಲು ಕುಡಿದ ಸೋದರರು ಒಂದೇ ಮನೆಯಲ್ಲಿ ವಾಸ ಮಾಡಲೂ ಇಷ್ಟವಿಲದಷ್ಟು ಒಬ್ಬರಿಗೊಬ್ಬರು ಪರಕೀಯರಾಗಿಬಿಟ್ಟಿದ್ದಾರೆ.

4

ಬೆಳಗಿನ ಸಮಯ. ಕೇದಾರನ ಮನೆಯ ಬಾಗಿಲಿನಲ್ಲಿ ಊರಿನ ಮುಖಂಡರು ಮತ್ತು ಜಮೀನುದಾರರು ವಿರಾಜಮಾನರಾಗಿದ್ದರು. ಮುಂಶಿ ದಾತಾ ದಯಾಲ ಬಹಳ ಅಭಿಮಾನದಿಂದ ಚಿಕ್ಕ ಮಂಚದ ಮೇಲೆ ಕುಳಿತು ಕಾಗದ ಪತ್ರಗಳ ಕರಡು ತಯಾರಿಸುವುದರಲ್ಲಿ ತೊಡಗಿದ್ದರು . ಮತ್ತೆ ಮತ್ತೆ ಲೆಕ್ಕಣಿಕೆಯನ್ನು ಮಸಿಯಲ್ಲಿ ಅದ್ದಿಕೊಳ್ಳುತ್ತಿದ್ದರು, ಮತ್ತೆ ಮತ್ತೆ ಪತ್ರವನ್ನು ಕೆಳಕ್ಕೆ ಇಡುತ್ತಿದ್ದರು. ಆದರೆ ಪತ್ರದ ಚಂದ ಪ್ರತಿ ಸಿದ್ಧವಾಗುತ್ತಿಲ್ಲ. ಕೇದಾರನ ಮುಖ ಅರಳಿತ್ತು. ಮತ್ತು ಚಂಪಾಳ ಸಂತಸಕ್ಕಂತೂ ಪಾರವೇ ಇರಲಿಲ್ಲ. ಮಾಧವನ ಮುಖ ಬಾಡಿ ಕಳಾಹೀನವಾಗಿತ್ತು.

ಮುಖಂಡನೊಬ್ಬ ಹೇಳುತ್ತಿದ್ದ– "ಸೋದರರನಂಥ ಹಿತೈಷಿ ಇಲ್ಲ; ಸೋದರರನಂಥ ಶತ್ರುನೂ ಇಲ್ಲ. ಕೇದಾರನು ತಮ್ಮನ ಮರ್ಯಾದೆ ಉಳಿಸಿದ್ದಾನೆ." ಜಮೀನುದಾರನು ಅದನ್ನು ಅನುಮೋದಿಸುತ್ತ– "ಸೋದರರು ಅಂದರೆ ಹೀಗಿರಬೇಕು." ಅಂದ.

ಘೂಟ್ ಲಾಯರ್ ಹೇಳಿದ– "ಸತ್ಪುತ್ರ ಅನ್ನಿಸಿಕೊಂಡವನು ಮಾಡೋ ಕೆಲಸ ಇದೇ."

ದಾತಾ ದಯಾಳನು ಕೇಳಿದ– "ಗಿರವಿ ಪತ್ರ ಬರೆಸುವವನ ಹೆಸರೇನು?"

ಅಣ್ಣ ಹೇಳಿದ– "ಮಾಧವ ಬಿನ್ ಶಿವದತ್ತ"

ಬರೆಸಿಕೊಳ್ಳುವವನ ಹೆಸರು?

"ಕೇದಾರ ಬಿನ್ ಶಿವದತ್ತ."

ಮಾಧವನು ಆಶ್ಚರ್ಯಚಕಿತನಾಗಿ ನೋಡಿದ. ಕಣ್ಣಲ್ಲಿ ನೀರುಬಂತು. ಕೇದಾರನಿಗೆ ಅವನ ಕಡೆ ನೋಡಲಾಗಲಿಲ್ಲ. ಜಮೀನುದಾರ ಮತ್ತು ಘೂಟ್ ಲಾಯರ್ ಇಬ್ಬರೂ ವಿಸ್ಮಿತರಾದರು. ಏನು ಕೇದಾರನೇ ಹಣ ಕೊಡುತ್ತಿದ್ದಾನೇನು? ಮಾತು ಆಗಿದ್ದದ್ದು

ಯಾರೋ ಬೇರೆ ಸಾಹುಕಾರ ಅಂತ. ಮನೆಯಲ್ಲೇ ಹಣ ಇದೆ ಅಂದ ಮೇಲೆ ಈ ಗಿರವಿ ಪತ್ರದ ಅಗತ್ಯ ತಾನೆ ಏನಿತ್ತು? ಅಣ್ಣ ತಮ್ಮಂದಿರಲ್ಲಿ ಈ ರೀತಿಯ ಅಪನಂಬಿಕೇನೆ, ರಾಮ ರಾಮ ! ಏನು ಮಾಧವನ ಬೆಲೆ ಎಂಬತ್ತು ರೂಪಾಯಾ ! ಹತ್ತಿಕ್ಕಿಕೊಂಡೇ ಕುಳಿತಿದ್ದರೆ ಹಣ ಏನು ನೀರಿನಲ್ಲಿ ಹೋಗಿಬಿಡುತ್ತಿತ್ತೇನು?

ವಿಸ್ಮಯದ ಆಳವಾದ ನದಿಯಲ್ಲಿ ನೌಕೆಗಳು ಹೊಯ್ದಾಡುತ್ತಿವೆಯೇನೋ ಎನ್ನುವಂತೆಎಲ್ಲರ ಕಣ್ಣುಗಳೂ ಸನ್ನೆಯಲ್ಲೇ ಪರಸ್ಪರ ಮಾತಾಡತೊಡಗಿದವು.

ಶ್ಯಾಮಾ ಮನೆಯ ಹೊಸ್ತಿಲ ಮೇಲೆ ನಿಂತಿದ್ದಳು. ಅವಳು ಯಾವಾಗಲೂ ಕೇದಾರನನ್ನು ತುಂಬ ಗೌರವಿಸುತ್ತಿದ್ದಳು. ಆದರೆ ಇಂದು ಲೋಕಮರ್ಯಾದೆ ತನ್ನ ಭಾವನನ್ನು ವ್ಯಂಗ್ಯವಾದ ಮಾತುಗಳಿಂದ ತಿವಿಯುವುದನ್ನು ತಡೆಯಿತು.

ಮುದಿ ತಾಯಿಗೆ ಇದನ್ನು ಕೇಳಿ ಒಣಗಿದ ನದಿ ಉಕ್ಕಿ ಹರಿದಂತೆ ಕಣ್ಣುಗಳಿದ ನೀರಿನ ಪ್ರವಾಹ ಉಕ್ಕಿ ಹರಿಯಿತು.

ಅವಳು ಒಮ್ಮೆ ಆಕಾಶದತ್ತ ನೋಡಿ ಹಣೆ ಹಣೆ ಚಚ್ಚಿಕೊಂಡಳು.

ಇಂಥದೇ ಒಂದು ಸುಂದರ ಪ್ರಾತಃಕಾಲದಲ್ಲಿ ಎರಡು ಮುದ್ದಾದ ಮಕ್ಕಳು ತನ್ನ ಮಡಿಲಿನಲ್ಲಿ ಕುಣಿದು ಕುಪ್ಪಳಿಸುತ್ತ ಅನ್ನ ಹಾಲು ಕುಡಿಯುತ್ತ ಇದ್ದ ಆ ದಿನಗಳ ನೆನಪಾಯಿತು ಅವಳಿಗೆ. ಆಗ ತಾಯಿಯ ಕಣ್ಣುಗಳಲ್ಲಿ ಅದೆಂಥ ಅಭಿಮಾನ ಇತ್ತು, ಹೃದಯದಲ್ಲಿ ಅದೆಷ್ಟು ಉತ್ಸಾಹ, ಭರವಸೆ ಇತ್ತು!

ಆದರೆ ಇಂದು ಅಯ್ಯೋ! ಇಂದು ಕಣ್ಣುಗಳಲ್ಲಿ ನಾಚಿಕೆ ಮತ್ತು ಹೃದಯದಲ್ಲಿ ಶೋಕ–ಸಂತಾಪ. ಅವಳು ನೆಲದ ಕಡೆ ನೋಡುತ್ತ ಕಾತರ ತುಂಬಿದ ಸ್ವರದಲ್ಲಿ ಹೇಳಿದಳು– "ಓ ದೇವರೇ ಇಂಥ ಮಕ್ಕಳನ್ನು ನಾನು ಹೆರಬೇಕಾಗಿ ಬಂತೆ?"

❖

ಭೂಮಿಯ ಬರಹಗಾರರೆಲ್ಲರ ಸ್ವರ್ಗಲೋಕ ಸಂಚಾರ

ಪಂಜಾಬಿ ಮೂಲ: ಅಮೃತಾ ಪ್ರೀತಮ್

ಒಂದು ದಿನ ಸರಸ್ವತಿಯ ವಾಹನವಾದ ಹಂಸ ಮಾನಸ ಸರೋವರದಲ್ಲಿ ಮಿಂದು ಬಂದಿತು. ಆಗ ಸರಸ್ವತಿ ತನ್ನ ಕೈಯಿಂದಲೇ ಮುತ್ತಿನ ಕಾಳುಗಳನ್ನು ತಿನ್ನಿಸಿದಳು. ಹಂಸದ ಬಿಳಿದಾದ ಗರಿಗಳನ್ನು ಮುದ್ದಿಸುತ್ತ ನೀಳ ನಿಟ್ಟುಸಿರೊಂದನ್ನು ಬಿಟ್ಟಳು.

ಅಂದು ಸರಸ್ವತಿ ಆಗ ತಾನೆ ಅರಳಿದ ಹೂಗಳಿಂದ ಸಿಂಗರಿಸಿಕೊಂಡಿದ್ದಳು. ಅವಳ ಅನುಪಮ ಚೆಲುವನ್ನು ನೋಡುತ್ತಿದ್ದಂತೆಯೇ ಬ್ರಹ್ಮನ ನೋಟ ಅವಳಲ್ಲಿಯೇ ನಟ್ಟು ಮೋಹಗೊಂಡಿತು. ಸರಸ್ವತಿಯು ನಿಟ್ಟುಸಿರು ಬಿಟ್ಟದ್ದನ್ನು ನೋಡಿದ ಬ್ರಹ್ಮದೇವನು – "ಸುಂದರಿ! ಗುಣವಂತೆ! ನಿನ್ನ ಸುಂದರ, ರಸಭರಿತ ತುಟಿಗಳ ಮೇಲೆ ನಿಟ್ಟುಸಿರಿನ ನೆರಳು ಕವಿದದ್ದೇಕೆ..?" ಎಂದು ಕೇಳಿದನು.

ಸರಸ್ವತಿ ಕಣ್ಣಿನ ನೋಟ ತಗ್ಗಿಸಿ, ಹಂಸದ ಗರಿಗಳನ್ನು ಮುದ್ದಿಸುತ್ತ – "ದೇವ! ತಾವು ಅಂತರ್ಯಾಮಿಗಳು. ನನ್ನ ಈ ಹಂಸ ಮುತ್ತಿನ ಕಾಳುಗಳನ್ನು ಆರಿಸಿಕೊಂಡು ತಿನ್ನುತ್ತಿದ್ದಾಗ, ಇದ್ದಕ್ಕಿದ್ದಂತೆ ನನಗೆ, ಈ ಭೂಮಿಯ ಮೇಲಿನ ಕೆಲವು ಜನರಿಗೆ

'ನಾನು ಮಾತಿನ ಶಕ್ತಿ ನೀಡಿದ್ದೀನಲ್ಲ, ಅವರಿಗೆ ಹೊಟ್ಟೆ ತುಂಬಾ ತಿನ್ನುವಷ್ಟು ಗೋಧಿಯಾದರೂ ಸಿಕ್ಕುತ್ತೋ ಇಲ್ಲವೋ ಅನ್ನುವ ಯೋಚನೆ ಬಂದುಬಿಟ್ಟಿತು".

"ನಿನಗೇನು ಬೇಕಾಗಿದೆ ದೇವಿ! ಭೂಮಿಯ ಕಷ್ಟ – ಸುಖ ಅಂದರೆ ಅದು ಭೂಮಿಯ ಕಷ್ಟ ಸುಖ. ಅದು ಅಲ್ಲಿಯ ರೀತಿ" ಎಂದು ಬ್ರಹ್ಮನು ಹೇಳಿದನು. ಆಗ ಸರಸ್ವತಿ ಒಮ್ಮೆ ದೇವತೆಗಳ ನಗರಿಯಾದ 'ಸ್ವರ್ಗ'ದ ಕಡೆಗೆ ಕಣ್ಣು ಹಾಯಿಸುತ್ತ – "ನಿಜ ನಿಮ್ಮ ಮಾತು! ಭೂಮಿಯ ಸುಖ – ದುಃಖಗಳು ಅಂದರೆ ಭೂಮಿಯ ಸುಖ ದುಃಖಗಳೇ. ಒಂದು ದಿನ ಅವರನ್ನು ಇಲ್ಲಿಗೆ ಕರೆದುಕೊಂಡು ಬಂದು ಸ್ವರ್ಗ ಲೋಕದ ಸುಖವನ್ನು ನೀಡಬೇಕು ಅನ್ನುವುದಷ್ಟೇ ನನ್ನ ಆಸೆ. ಅದೂ ಅಲ್ಲದೆ, ಸ್ವರ್ಗದ ಈ ನೋಟ ಅವರ ವಾಣಿಗೆ ಇನ್ನಷ್ಟು ಶಕ್ತಿ ತಂದುಕೊಡುತ್ತೆ" ಎಂದಳು.

"ನಿನ್ನ ಮನಸ್ಸಿನ ಇಚ್ಛೆ ನೆರವೇರುತ್ತೆ ದೇವಿ! ನಿನ್ನ ಮಾತು ಯಾವತ್ತೂ ವ್ಯರ್ಥವಾಗಲ್ಲ" ಎಂದು ಹೇಳಿ ಬ್ರಹ್ಮನು ತನ್ನ ದೇವದೂತರನ್ನು ಕರೆದು ಭೂಲೋಕದ ಕವಿಗಳು ಮತ್ತು ಲೇಖಕರನ್ನೆಲ್ಲ ಒಂದು ದಿನಕ್ಕೋಸ್ಕರ ಸ್ವರ್ಗಕ್ಕೆ ಕರೆತರಬೇಕೆಂದು ಆಜ್ಞಾಪಿಸಿದನು.

ದೇವದೂತರು ಬ್ರಹ್ಮನ ಆದೇಶದಂತೆ ಭೂಮಿಯ ಮೇಲಿನ ಕವಿಗಳು ಮತ್ತು ಬರಹಗಾರರನ್ನೆಲ್ಲ ಸ್ವರ್ಗಕ್ಕೆ ಕರೆತಂದರು. ಬ್ರಹ್ಮ ಮತ್ತು ಸರಸ್ವತಿ ಇಬ್ಬರೂ ತಮ್ಮ ಪೀಠದ ಮೇಲೆ ಕುಳಿತು ಬಂದವರನ್ನೆಲ್ಲ ಮತ್ತೆ ಮತ್ತೆ ತಮ್ಮ ಬಳಿಗೆ ಕರೆದು ಒಳ್ಳೆ ಅತಿಥಿ ಸತ್ಕಾರ ಮಾಡತೊಡಗಿದರು.

ಎಲ್ಲರಿಗಿಂತ ಮೊದಲು ಮುಂದೆ ಬಂದವರಿಗೆ ದೇವದೂತರು – "ನೋಡಿ ಬ್ರಹ್ಮದೇವನ ಪಕ್ಕದಲ್ಲಿ ಕುಳಿತಿರುವ ಸರಸ್ವತಿ ನಿಮ್ಮ ಅಧಿದೇವಿ. ನೀವೆಲ್ಲರೂ ದೇವಿಗೆ ನಿಮ್ಮ ನಿಮ್ಮ ಪ್ರಮಾಣ ಪತ್ರಗಳನ್ನು ಸಲ್ಲಿಸಿ" ಎಂದರು.

ಒಬ್ಬ ಲೇಖಕರು ಬಹಳ ನೆಮ್ಮದಿಯಿಂದ ಮುಂದೆ ಸಾಗಿ, ನಮಸ್ಕರಿಸಿ "ನಾವೆಲ್ಲರೂ ಒಂದೇ ವಿಚಾರಧಾರೆಯ ಲೇಖಕರು ಮತ್ತು ಕವಿಗಳು. ನಾವೆಲ್ಲ ಅಧ್ಯಾತ್ಮವಾದಿಗಳು. ಮೃತ್ಯುಲೋಕದ ಹುಟ್ಟು ಒಂದು ಕನಸು. ನಾವು ಕನಸನ್ನು ಸತ್ಯವೆಂದು ಒಪ್ಪುವುದಿಲ್ಲ. ನಾವು ನಮ್ಮ ಬರಹದ ಮಾಧ್ಯಮದಿಂದ ಆತ್ಮದ ಹುಡುಕಾಟ ನಡೆಸುತ್ತೇವೆ. ಭೋಗ ವಿಲಾಸಗಳಿಂದ ನಿರ್ಲಿಪ್ತರಾಗಿರುತ್ತೇವೆ. ಅಲ್ಲದೆ ಸಾಂಸಾರಿಕ ಸುಖಗಳನ್ನು ತ್ಯಾಗಮಾಡುವ ಮೂಲಕ ಆತ್ಮಾನಂದವನ್ನು ಅರಸುತ್ತೇವೆ.." ಎಂದು ಹೇಳಿದನು.

ಸರಸ್ವತಿಯ ಕಣ್ಣುಗಳು ಪ್ರೇಮ ಮತ್ತು ಕರುಣೆಗಳಿಂದ ಆರ್ದ್ರವಾದವು. ಆಕೆ ಕೆಲವು ದೇವದೂತರನ್ನು ಕರೆದು – "ಹೋಗಿ ಸ್ವರ್ಗಲೋಕದ ಎಲ್ಲ ಸುಖಗಳನ್ನೂ ಇವರಿಗೆ ಸಮರ್ಪಿಸಿ" ಎಂದು ಆಜ್ಞಾಪಿಸಿದಳು.

ಅನಂತರ ದೇವದೂತರು ಇನ್ನು ಕೆಲವು ಜನರನ್ನು ದೇವಿಯ ಮುಂದೆ ಕರೆತಂದು, "ದೇವಿಗೆ ನಿಮ್ಮ ಪ್ರಮಾಣ ಪತ್ರ ಸಲ್ಲಿಸಿ" ಎಂದರು.

ಮುಂದೆ ನಿಂತವರಲ್ಲಿ ಒಬ್ಬ ಲೇಖಕರು ದೇವಿಗೆ ನಮಸ್ಕರಿಸಿ, 'ನಾವೆಲ್ಲರೂ ಭೌತವಾದಿಗಳು, ಶಾರೀರಿಕ ಶಾಂತಿ ಸಿಗಲಿಲ್ಲ ಎಂದರೆ, ಆಧ್ಯಾತ್ಮಿಕ ಶಾಂತಿಗೆ ಏನೂ ಅರ್ಥವೇ ಇಲ್ಲ ಎಂದು ನಾವು ತಿಳಿದಿದ್ದೇವೆ. ನಮ್ಮ ಈ ಭೂಮಿಯ ಮೇಲೆ, ಬಲಿಷ್ಠರು ನಮ್ಮ ಹಕ್ಕನ್ನು ಕಸಿದುಕೊಂಡಿದ್ದಾರೆ. ಭೌತಿಕ ವಸ್ತುಗಳ ಮೇಲೆ ಬೇರೆಯವರಿಗೆ ಎಷ್ಟು ಹಕ್ಕಿದೆಯೋ ನಮಗೂ ಅಷ್ಟೇ ಹಕ್ಕಿದೆ. ಈ ಭೂಮಿ ಕೆಲವೇ ಜನರ ಭೋಗ ವಿಲಾಸಗಳ ಬೀಡಾಗಿದೆ. ನಮ್ಮ ಬರವಣಿಗೆಯ ಹೋರಾಟ ಏನಿದ್ದರೂ ಈ ಭೂಮಿಯ ಮೇಲಿನ ಪದಾರ್ಥಗಳನ್ನು ಪಡೆದುಕೊಳ್ಳುವ ಸಲುವಾಗಿ' ಎಂದನು.

ಸರಸ್ವತಿಯು ಮುಗುಳ್ನಕ್ಕು ದೇವದೂತರಿಗೆ 'ಹೋಗಿ ಇವರಿಗೆ ಸ್ವರ್ಗಲೋಕದ ಬಹಳಷ್ಟು ಸುಖಗಳನ್ನು ನೀಡಿ. ಮುವ್ವತ್ತಾರು ಬಗೆಯ ಉಣಿಸುಗಳನ್ನು ಸಿದ್ಧಪಡಿಸಿ ಮತ್ತು ಒಳ್ಳೆ ಬೆಲೆಬಾಳುವ ವಸ್ತುಗಳನ್ನು ಇವರುಗಳಿಗೆ ಉಡುಗೊರೆಯಾಗಿ ನೀಡಿ' ಎಂದು ಆದೇಶಿಸಿದಳು.

ಅನಂತರ ದೇವದೂತರು, ಹೊಸ ಹೊಸ ಲೇಖಕರು ಮತ್ತು ಕವಿಗಳನ್ನು ಸರಸ್ವತಿಯ ಎದುರು ಕರೆತಂದು ಅವರಿಗೆ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಹೇಳಿದರು. ಅವರಲ್ಲಿ ಒಬ್ಬ ಲೇಖಕ ಮುಂದೆ ಬಂದು, ದೃಢವಾದ ದನಿಯಲ್ಲಿ "ದೇವಿ! ನಾವೆಲ್ಲರೂ ಸಿದ್ಧಾಂತವಾದಿಗಳು. ಎಲ್ಲಿಯವರೆಗೂ ಜನಜಾಗೃತಿ ಆಗುವುದಿಲ್ಲವೋ, ಅಲ್ಲಿಯವರೆಗೂ ನಾವು ಅಧ್ಯಾತ್ಮವಾದವನ್ನಾಗಲಿ, ಭೌತವಾದವನ್ನಾಗಲಿ, ಕಿಂಚಿತ್ತೂ ಅರ್ಥಮಾಡಿಕೊಳ್ಳಲಾರೆವು. ಎಲ್ಲಿಯವರೆಗೂ ಜನರ ಚೇತನದಲ್ಲಿ ಕ್ರಾಂತಿ ಉಂಟಾಗುವುದಿಲ್ಲವೋ ಅಲ್ಲಿಯವರೆಗೂ ಸರಿಯಾದ ಸಮಯಕ್ಕೆ ಯಾವುದೇ ಕ್ರಾಂತಿಯನ್ನು ಕಿಂಚಿತ್ತೂ ಅರ್ಥೈಸಿಕೊಳ್ಳಲಾರೆವು. ನಮ್ಮ ದನಿ ಎಂದರೆ ಭೂಮಿಯ ಮೇಲೆ ಅತ್ಯಂತ ಅಪಾಯಕಾರಿ ಎಂದು ತಿಳಿಯಲಾಗುತ್ತದೆ. ಆ ಕಾರಣಕ್ಕಾಗಿ ಕೆಲವೊಂದು ಸಲ ನಮ್ಮನ್ನು ಜೈಲಿಗೆ ತಳ್ಳಿ ನಾನಾ ಶಿಕ್ಷೆಗಳನ್ನು ಕೊಟ್ಟರೆ, ಇನ್ನು ಕೆಲವು ಸಲ, ದೇಶಭ್ರಷ್ಟರನ್ನಾಗಿ ಮಾಡಲಾಗುತ್ತದೆ. ಇನ್ನೂ ಕೆಲವು ಸಲ ನಮ್ಮ ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಈಗಂತೂ ಲೋಕದಲ್ಲಿ ಅನೇಕ ಥರದ ಯಂತ್ರಗಳಿವೆ. ಅವುಗಳ ಶಬ್ದ ದೂರದೂರದವರೆಗೂ ಕೇಳಿಸುತ್ತದೆ. ನಮ್ಮಲ್ಲಿ ಅನೇಕರಿಗೆ ಈ ಯಂತ್ರದ ಮೂಲಕ ಮಾತಾಡುವುದನ್ನು ನಿಷೇಧಿಸಲಾಗಿದೆ. ಹೀಗೆ ನಮ್ಮ ಚಿಂತನೆ ಮತ್ತು ನಾಲಿಗೆಯನ್ನು ಮೂಕಗೊಳಿಸುವ ಯತ್ನ ಮಾಡಲಾಗುತ್ತಿದೆ" ಎಂದು ಹೇಳಿದನು.

ಸರಸ್ವತಿಯ ಕಣ್ಣುಗಳು ಪ್ರೀತಿಯಿಂದ ತುಂಬಿಬಂದವು. ದೇವದೂತರಿಗೆ "ಹೋಗಿ! ಇವರನ್ನು ಎಲ್ಲ ದೇವತೆಗಳ ಬಳಿಗೆ ಕರೆದುಕೊಂಡು ಹೋಗಿ. ಅವರ ಜೊತೆ ಸಮಾಲೋಚನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ" ಎಂದು ಆದೇಶಿಸಿದಳು.

ಇದರ ನಂತರ ದೇವದೂತನು, ಇನ್ನಷ್ಟು ಜನರನ್ನು ದೇವಿಯ ಮುಂದೆ ಕರೆದುಕೊಂಡು ಬಂದರು. ಅವರು ಸರಸ್ವತಿಗೆ ತಮ್ಮ ಪ್ರಮಾಣ ಪತ್ರಗಳನ್ನು ಸಲ್ಲಿಸುತ್ತ "ನಾವೆಲ್ಲ ಪ್ರಯೋಗವಾದಿಗಳು. ಹಳೆಯ ಯಾವುದೇ ಸಿದ್ಧಾಂತಗಳನ್ನು ನಾವು ನಂಬುವುದಿಲ್ಲ. ಅಲ್ಲದೆ ಬೇರೆ ಯಾವುದೇ ತತ್ವದಲ್ಲೂ ನಮಗೆ ನಂಬಿಕೆಯಿಲ್ಲ. ನಾವು ಹೊಸ ಹೊಸ ಅನುಭವಗಳಿಂದ ಹೊಸ ಹೊಸ ಸಿದ್ಧಾಂತಗಳನ್ನು ಸಂಶೋಧಿಸುತ್ತೇವೆ. ಆದರೆ ಹೊಸದು ಏನನ್ನೇ ಮಾಡಬೇಕಾಗಿದ್ದರೂ ಮೊದಲು ಹಳೆಯದನ್ನು ಮುರಿಯ ಬೇಕಾಗುತ್ತೆ. ನಾವು ಎಲ್ಲವುದನ್ನೂ ಮುರೀತಾ ಇದ್ದೇವೆ... ಪರಂಪರೆ ಎನ್ನುವ ಹೆಸರಿನ ಯಾವುದನ್ನೂ ನಾವು ಒಪ್ಪುವುದಿಲ್ಲ" ಎಂದು ಹೇಳಿದರು.

ಸರಸ್ವತಿ ಮುಗುಳ್ನಕ್ಕು ಕೆಲವು ದೇವದೂತರನ್ನು ಕರೆದು "ನೋಡಿ ಇವರನ್ನು ಬಹಳ ಎಚ್ಚರಿಕೆಯಿಂದ ಕರೆದುಕೊಂಡು ಹೋಗಿ, ಇವರ ಜೊತೆಯಲ್ಲೇ ಇದ್ದು ಸ್ವರ್ಗದ ನಗರವನ್ನೆಲ್ಲಾ ತೋರಿಸಿ" ಎಂದು ಹೇಳಿದಳು.

ಇದರ ನಂತರ ದೇವದೂತರು ಬಾಕಿ ಉಳಿದವರನ್ನೆಲ್ಲಾ ಕರೆದುಕೊಂಡು ಬಂದು ಸರಸ್ವತಿಯ ಮುಂದೆ ನಿಲ್ಲಿಸಿ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಹೇಳಿದರು. ಇವರಲ್ಲಿ ಎಲ್ಲರಿಗಿಂತ ಮುಂದಕ್ಕೆ ಹೋಗಲು ಅವರಲ್ಲೇ ನೂಕು ನುಗ್ಗಲು ಶುರುವಾಯಿತು. ಪ್ರತಿಯೊಬ್ಬರೂ ಬೇರೆಯವರನ್ನು ಹಿಂದಕ್ಕೆ ತಳ್ಳುತ್ತ – "ದೇವೀ ನನ್ನ ಪ್ರಮಾಣ ಪತ್ರ ನನ್ನ ಪ್ರಶಂಸಾ ಗೀತೆ, ನನ್ನ ದ್ವಂದ್ವ ಗಾಯನ..."

"ನಾನು ನಿನ್ನನ್ನು ಕುರಿತ ಸ್ತುತಿಯಲ್ಲಿ ನಿನ್ನ ರೂಪದ ವರ್ಣನೆ ಮಾಡಿದ್ದೇನೆ"

"ನಾನು ನಿನ್ನ ಬಂಗಾರದ ಬಣ್ಣದ ಶರೀರದ ಆಲಂಕಾರಿಕ ವರ್ಣನೆ ಮಾಡಿದ್ದೇನೆ..."

"ದೇವಿ ! ನಾನು ನಿನ್ನ ವೀಣೆಯ ಸ್ವರಗಳನ್ನು ಛಂದೋಬದ್ಧಗೊಳಿಸಿದ್ದೇನೆ"

"ನೋಡು ದೇವಿ! ನಾನು ನಿನ್ನ ಕಮಲದ ಹೂವಿನ ಸೌಂದರ್ಯವನ್ನು ವರ್ಣಿಸಿದ್ದೇನೆ"

"ದೇವಿ ಸರಸ್ವತಿ! ನಾನು ನಿನ್ನ ವಾಹನವಾದ ಹಂಸ ಪಕ್ಷಿ ಗರಿಗೆದರಿ ಹಾರುವುದರ ವರ್ಣನೆಯನ್ನು ತುಂಬಿದ್ದೇನೆ".

ಹೀಗೆ ಹಲವು ಸ್ವರಗಳು ತಾರಕಕ್ಕೇರಿದ್ದರಿಂದ, ಸರಸ್ವತಿಯು ಗಾಬರಿಗೊಂಡು, ಬ್ರಹ್ಮನ ಕಡೆ ನೋಡಿದಳು. ಬ್ರಹ್ಮನು ಮುಗುಳ್ನಕ್ಕು ದೇವದೂತರತ್ತ ನೋಡಿದ.

ದೇವದೂತರು ಹತ್ತಿರ ಬಂದು ಮೆಲ್ಲಗೆ ಹೇಳತೊಡಗಿದರು "ಇವರೆಲ್ಲರೂ, ಭೂಮಿಯ ಮೇಲೆ ಯಾವುದೇ ರಾಜ ಸಿಂಹಾಸನದ ಮೇಲೆ ಕೂತುಕೊಂಡರೂ ಆ ರಾಜನನ್ನು ಕುರಿತ ಸ್ತೋತ್ರ ಗೀತೆಯನ್ನು ರಚಿಸಿ ಬರುತ್ತಾರೆ".

ಬ್ರಹ್ಮನು ಸರಸ್ವತಿಯತ್ತ ನೋಡಿ "ಹೇಳು ದೇವಿ! ಈಗ ನಿನ್ನ ಇಚ್ಛೆ ಏನು..?" ಎಂದನು.

ಸರಸ್ವತಿ ಸ್ವಲ್ಪ ಹೊತ್ತು ಯೋಚನೆ ಮಾಡುತ್ತಾ ಇದ್ದು ಅನಂತರ ಹೇಳಿದಳು "ನಾವು ಕೊಟ್ಟ ಮಾತನ್ನಂತೂ ನಡೆಸಿಕೊಡಲೇಬೇಕು. ಇವರಿಗೂ ನಾವು ಒಂದು ದಿನ ಸ್ವರ್ಗದ ದರ್ಶನ ಮಾಡಿಸುತ್ತೀವಿ ಅಂತ ಮಾತುಕೊಟ್ಟಿದ್ದೀವಿ..." ಆನಂತರ ಕೆಲವು ದೇವದೂತರನ್ನು ಹತ್ತಿರ ಕರೆದು "ಇವರನ್ನು ಸ್ವರ್ಗಲೋಕದೊಳಗೆ ಕರೆದುಕೊಂಡು ಹೋಗುವುದಕ್ಕೆ ಮುಂಚೆ ಸ್ವರ್ಗದ ಪ್ರತಿಯೊಂದು ಬಾಗಿಲ ಮೇಲೂ" "ಎಲ್ಲ ದೇವ, ದೇವಿಯರೂ ಅವಕಾಶವಾದಿಗಳ ಬಗ್ಗೆ ಎಚ್ಚರದಿಂದಿರುವುದು ಎಂದು ಬೋರ್ಡ್ ಬರೆಸಿ ಹಾಕಿಬಿಡಿ" ಎಂದು ಮೆಲ್ಲನೆ ಹೇಳಿದಳು.

❖

ದೊಡ್ಡ ಮನೆ

ಪಂಜಾಬಿ ಮೂಲ : ಅಮೃತಾ ಪ್ರೀತಂ

ನನ್ನ ಮಾತು ಕೇಳುವುದು ನನ್ನ ಅಮ್ಮಮ್ಮ ಮಾತ್ರ . ಬೇರೆ ಯಾರೂ ಕೇಳಲ್ಲ. ಈ ಹೊತ್ತು ಅಮ್ಮಮ್ಮ ಬರುತ್ತಾರೆ ಅಂತ ಪಪ್ಪ ಹೇಳುತ್ತಾ ಇದ್ದರು. ಭೂತದ ವಿಷಯ ಏನಿದ್ದರೂ ನಾನು ಅಮ್ಮಮ್ಮನ ಹತ್ತಿರ ಹೇಳುತ್ತೀನಿ. ಅಮ್ಮನಿಗೆ ಯಾವಾಗ ಹೇಳಿದರೂ ಅವಳು ನಂಬುವುದಿಲ್ಲ. ಪಪ್ಪ ಕೂಡ ನಂಬಲ್ಲ. ಮೊದಲು ಕೂಡ ಅಮ್ಮಮ್ಮ ಮಾತ್ರ ನನ್ನ ಮಾತು ಕಿವಿಮೇಲೆ ಹಾಕಿಕೊಂಡಿದ್ದರು. ನನ್ನ ಮಾತನ್ನು ಇವರು ಯಾಕೆ ಕೇಳುತ್ತಿಲ್ಲ ಅಂತ ಅಮ್ಮಮ್ಮನಿಗೆ ಪಪ್ಪನ ಮೇಲೆ ಕೋಪ ಬಂದಿತ್ತು. ಅಮ್ಮನ ಮೇಲೂ ಕೋಪ ಬಂದಿತ್ತು. ಈ ಹೊತ್ತು ಮತ್ತೆ ಅವರಿಬ್ಬರ ಮೇಲೆ ಸಿಟ್ಟು ಬರುತ್ತೆ......

ಬಹಳ ಮೋಜೆನಿಸಿತ್ತು. ಅಮ್ಮಮ್ಮ ನನ್ನ ರೂಮ್ ನಲ್ಲಿ ಬೆಂಕಿ ಹತ್ತಿಸಿ, ಅದರಲ್ಲಿ ಒಂದುರಾಶಿ ಮೆಣಸಿನ ಕಾಯಿ ಸುರುವಿದರು. ಅವರು ನನ್ನ ಮುಖಕ್ಕೆ ಬಟ್ಟೆ ಕಟ್ಟಿದ್ದರು. ತಾವೂ ತಮ್ಮ ಮುಖಕ್ಕೆ ಬಟ್ಟೆ ಕಟ್ಟಿಕೊಂಡಿದ್ದರು. ಆದರೆ ಪಪ್ಪ ಅಮ್ಮ ಇಬ್ಬರೂ ಮುಖಕ್ಕೆ ಬಟ್ಟೆ ಕಟ್ಟಿಕೊಂಡಿರಲಿಲ್ಲ. ಅವರಿಬ್ಬರಿಗೂ ಭಾರಿಭಾರಿ ಸೀನುಗಳು ಬಂದುವು. ಇಬ್ಬರೂ ಸೀನಿಸೀನಿ ಸೀನುತ್ತಿದ್ದರು.

ಭೂತಕ್ಕೂ ಭಾರೀ ಸೀನುಗಳು ಬಂದಿರಬಹುದು. ಅದರಿಂದಲೋ ಏನೋ ತುಂಬ ದಿನಗಳವರೆಗೆ ನನ್ನ ರೂಮಿಗೆ ಅದು ಬರಲಿಲ್ಲ. ಅಮ್ಮಮ್ಮ ಹಳ್ಳಿಗೆ ಹೊರಟುಹೋದಮೇಲೆ ಒಂದು ದಿನ ಭೂತ ನನ್ನ ರೂಮಿಗೆ ಬಂದೇ ಬಿಟ್ಟಿತು.....

ಭೂತ ಬರುವ ವಿಷಯವನ್ನು ಪಪ್ಪನಿಗೆ ಹೇಳಿದ್ದೆ. ಅಮ್ಮನಿಗೂ ಹೇಳಿದ್ದೆ. ಆದರೆ ಅಮ್ಮಮ್ಮನಿಗೆ ಏನೋ ಒಂದು ಭ್ರಮೆ ಹಿಡಿದಿದೆ ಅಂತ ಅಮ್ಮಮ್ಮನ ಮೇಲೆ ಅವರಿಗೆ ಸಿಟ್ಟು. ರಾತ್ರಿಹೊತ್ತು ನಾನು ಅಮ್ಮಮ್ಮನ ಹತ್ತಿರ ಕತೆ ಕೇಳಲಿಕ್ಕೂ ಬಿಡುತ್ತಿರಲಿಲ್ಲ. ಅಮ್ಮಮ್ಮ ಭೂತಗಳ ಕತೆ ಹೇಳಿ ನನಗೆ ಭೂತಗಳ ಕನಸೇ ಬೀಳುತ್ತೆ ಅಂತ ಪಪ್ಪ ಹೇಳುತ್ತಿದ್ದರು.

ಆದರೆ ಅಮ್ಮಮ್ಮ ಎಷ್ಟು ದಿವಸ ಇರುತ್ತಿದ್ದರೋ ಅಷ್ಟೂ ದಿವಸ ಭೂತ ನನ್ನ ಕೊಠಡಿಗೆ ಬರುತ್ತಿರಲಿಲ್ಲ. ಅಮ್ಮಮ್ಮ ಆ ಕಡೆ ಊರಿಗೆ ಹೊರಟುಹೋದಮೇಲಷ್ಟೇ ಅದು ಬರುತ್ತಿತ್ತು. ಅಮ್ಮಮ್ಮ ಈ ಸಲ ಬಹಳ ದಿನಗಳ ತನಕ ಇಲ್ಲೇ ಇರುತ್ತಾರೆ ಅಂತ ಪಪ್ಪ ಹೇಳುತ್ತಾ ಇದ್ದರು......

ಈ ಸಲ ಅಮ್ಮಮ್ಮನಿಗೆ ಅದೇನಾಗಿಬಿಟ್ಟಿದೆಯೋ ಗೊತ್ತಿಲ್ಲ. ಬಂದಾಗಿನಿಂದಲೂ ಏನೋ ಮಂತ್ರದ ಥರ ಹೇಳುತ್ತಿರುತ್ತಾರೆ. ಅಮ್ಮ ಖುಶಿಯಾಗಿದ್ದಾಳೆ. ಆದರೆ ಅಮ್ಮಮ್ಮ ನಗುತ್ತಾ ಇದ್ದಾರೆ. ಪಪ್ಪ ಕೂಡ ಖುಶಿಯಾಗಿದ್ದಾರೆ. ಪೇಟೆಗೆ ಹೋಗಿ ಅಂಗಡಿಯಿಂದ ಗುಗ್ಗುಳ ತಗೊಂಡು ಬನ್ನಿ ಅಂತ ಅಮ್ಮಮ್ಮ ಅವರಿಗೆ ಹೇಳಿದ್ದರು. ಪಪ್ಪ ತಂದುಕೊಟ್ಟಿದ್ದರು. ಅಮ್ಮಮ್ಮ ಅಮ್ಮನ ಮಂಚದ ಹತ್ತಿರ ಬೆಂಕಿಹೊತ್ತಿಸಿ, ಅಂಗಡಿಯಿಂದ ತರಿಸಿದ್ದ ಆ ಕಪ್ಪುಬಣ್ಣದ ಔಷಧೀಯ ದ್ರವ್ಯ ಗುಗ್ಗುಳವನ್ನು ಬೆಂಕಿಯಲ್ಲಿ ಹಾಕಿಬಿಟ್ಟರು. ಬೆಂಕಿಯಿಂದ ಭಾರೀ ಹೊಗೆ ಎದ್ದಿತು. ಆಹೊತ್ತು ಅಮ್ಮಮ್ಮ ಮೆಣಸಿನಕಾಯಿಯನ್ನು ಹೀಗೇ ಬೆಂಕಿಗೆ ಹಾಕಿದ್ದರು.

“ಪಪ್ಪ ಅಮ್ಮನ ಕೋಣೆಯಲ್ಲೂ ಭೂತ ಬರುತ್ತೇನು?”

“ಇಲ್ಲ.”

“ಹಾಗಿದ್ದಮೇಲೆ ಅಮ್ಮಮ್ಮ ಅಮ್ಮನ ಮಂಚದ ಹತ್ತಿರ ಯಾತಕ್ಕೆ ಬೆಂಕಿ ಹತ್ತಿಸಿದ್ದಾರೆ?”

ಬೆಂಕಿ ಹತ್ತಿಸಿದ್ದರೆ ಕೋಣೆಯ ಹವಾ ತುಂಬಾ ಚೆನ್ನಾಗಿ ಆಗುತ್ತೆ.”

“ಇದರಿಂದ ಭೂತ ಓಡಿಹೋಗಲ್ಲವಾ?”

ಭೂತ ಗೀತ ಅಂತ ಏನೂ ಇರಲ್ಲ ಅಂತ ಉರ್ಮಿ ನಿನಗೆ ಅದೆಷ್ಟುಸಲ ನಾನು ಹೇಳಿದ್ದೀನಿ ಅಲ್ವ”?

"ಬಹುಶಃ ನಿನ್ನೆ ಅರ್ಧರಾತ್ರಿಯಲ್ಲಿ ಅದು ನನ್ನ ಕೋಣೆಯಲ್ಲಿ ಕಾಣಿಸಿಕೊಂಡಿತ್ತು".

ಅಲ್ಲಿಂದ ಮುಂದಕ್ಕೆ ಪಪ್ಪ ನನ್ನ ಮಾತು ಕೇಳಿಸಿಕೊಳ್ಳುವುದು ಬಿಟ್ಟುಬಿಟ್ಟರು. ಆದರೆ ಅಮ್ಮಮ್ಮ ಕೇಳಿಸಿಕೊಳ್ಳುತ್ತಿದ್ದರು. ಅವರು ನನ್ನನ್ನು ತಮ್ಮ ಮಡಿಲಲ್ಲಿಟ್ಟುಕೊಂಡು "ತೊಲಗು ಭೂತವೆ ತೊಲಗು" ಎಂಬ ಮಂತ್ರ ಪಠಿಸಲು ಶುರುಮಾಡಿದರು.

ಅಮ್ಮಮ್ಮ ನನ್ನ ಕೊಠಡಿಗೂ ಹೋಗಿ ಬೆಂಕಿಹೊತ್ತಿಸಿ ಅದರಲ್ಲಿ ಗುಗ್ಗುಳ ಹಾಕಿ ಅದೆಷ್ಟೋ ಹೊತ್ತು ಮಂತ್ರ ಪಠಿಸುತ್ತಾ ಇದ್ದರು.

"ಇದರಿಂದ ಕೊಠಡಿಯ ಹವಾ ಚೆನ್ನಾಗಿ ಆಗುತ್ತೆ. ಭೂತ ಓಡಿಹೋಗಲ್ಲ ಅಂತ ಪಪ್ಪ ಹೇಳ್ತಾ ಇದ್ದರು."

"ಇದರಿಂದ ಭೂತ ಕೂಡ ಓಡಿಹೋಗುತ್ತೆ ಅಂತ ಪಪ್ಪನಿಗೇನು ಗೊತ್ತು?"

"ಭೂತ ಗೀತ ಅಂತ ಯಾವುದೂ ಇರಲ್ಲ ಅಂತ ಪಪ್ಪ ಹೇಳ್ತಾರೆ".

"ಪಪ್ಪನಿಗೇನು ಗೊತ್ತು?"

"ಅಮ್ಮನ ಕೊಠಡಿಗೆ ಭೂತ ಬಂದಿತ್ತೇನು?"

"ಇಲ್ಲ."

ಅದು ಪಪ್ಪನ ಕೊಠಡಿಗೂ ಹೋಗಲ್ಲ. ಮತ್ತೆ ನನ್ನ ಕೊಠಡಿಗೇ ಯಾತಕ್ಕೆ ಬರುತ್ತೆ"?

ಅಮ್ಮಮ್ಮ ನನ್ನ ಮಾತಿಗೆ ಉತ್ತರ ಕೊಡಲಿಲ್ಲ. ಮತ್ತೆ ಮಂತ್ರಪಠಣ ಶುರುಮಾಡಿದರು. ಮಂತ್ರ ಪಠಿಸುತ್ತ ಪಠಿಸುತ್ತ ಕೊಠಡಿಯ ಹೊರಗಡೆ ನಿಂತುಕೊಂಡಿದ್ದ ಪಪ್ಪನ ಕಡೆ ನೋಡುತ್ತ–"ಹುಡುಗೀನ ನಿಮ್ಮ ಕೊಠಡಿಯಲ್ಲೇ ನಿಮ್ಮ ಜೊತೆಯಲ್ಲೇ ಮಲಗಿಸಿಕೊಳ್ಳಿ ಅಂತ ಅದೆಷ್ಟುಸಲ ಹೇಳಿದ್ದೀನಿ. ಈ ಪಟ್ಟಣದ ವೈಯಾರಿಗಳಿಗೆ ಅದು ಅರ್ಥವಾಗಲ್ಲ. ಮಕ್ಕಳನ್ನು ಪ್ರತ್ಯೇಕವಾದ ಕೊಠಡಿಯಲ್ಲಿ ಹಾಕಿಬಿಟ್ಟು ತಾನುಮಾತ್ರ....... "ಎಂದು ಹೇಳತೊಡಗಿದರು.

ಪಪ್ಪ ಬಂದು ಅಮ್ಮಮ್ಮನಿಗೆ ಮತ್ತೆ ತೋರಿಸಿ ಹೇಳಿದರು–"ನೋಡಿ ಎರಡೂ ಕೊಠಡಿಗಳ ನಡುವಿನ ಬಾಗಿಲು ತೆರೆದಿರುತ್ತೆ. ರಾತ್ರಿಗೆ ಇವಳ ಕೊಠಡಿಯ ಎದುರುಗಡೆ ಬಾಗಿಲು ಪಕ್ಕ, ದಯಾಲಿಯ ಮಂಚ ಇರುತ್ತೆ.ರಾತ್ರಿ ಇವಳಿಗೆ ಯಾವಾಗ ಮನಸ್ಸಿಗೆ ಬರುತ್ತೋ ಆಗ ನಮ್ಮ ಕೋಣೆ ಒಳಕ್ಕೆ ಬಂದುಬಿಡಬಹುದು"

"ಅಮ್ಮಮ್ಮ ನನಗೆ ದಿನವೂ ಭಯ ಆಗಲ್ಲ. ಭೂತ ಬಂದಾಗ ಮಾತ್ರ......" ಎಂದು ನಾನು ಹೇಳಿದೆ.

ಪಪ್ಪ ಭೂತದ ವಿಷಯ ಕಿವಿಮೇಲೆ ಹಾಕಿಕೊಳ್ಳಲಿಲ್ಲ. ಕೊಠಡಿಯಿಂದ ಹೊರನಡೆದುಬಿಟ್ಟರು. ಅಮ್ಮಮ್ಮ ಮಾತ್ರ ಕೇಳಿಸಿಕೊಳ್ಳುತ್ತಿದ್ದರು.

ಅಮ್ಮಮ್ಮ ಕೇಳಿದರು–"ನಿನಗೆ ಭೂತದ ಹೆಜ್ಜೆಯ ಸಪ್ಪಳ ಕೇಳಿಸುತ್ತೇನು?"

"ಇಲ್ಲ."

"ಬಾಗಿಲಿನಿಂದ ಒಳಕ್ಕೆ ಬರುತ್ತೋ ಕಿಟಕಿಯಿಂದ ಒಳಕ್ಕೆ ಬರುತ್ತೋ?"

"ಗೊತ್ತಿಲ್ಲ"

"ಒಳಕ್ಕೆ ಬಂದು ಏನಾದರೂ ಹೇಳುತ್ತೇನು?"

"ಇಲ್ಲ."

"ಹಾಗಾದರೆ ಆ ಭೂತ ಬರುತ್ತೆ ಅಂತ ನಿನಗೆ ಹೇಗೆ ಗೊತ್ತು?"

"ಅದು ನನ್ನ ತಲೆಮೇಲೆ ಕೈ ಹಾಕುತ್ತೆ. ಹೆಗಲ ಮೇಲೆ ಮತ್ತು ಬೆನ್ನಮೇಲೆ ಕೂಡ ಹಾಕುತ್ತೆ."

"ಆ ಕೈ ಕಪ್ಪಗಿರುತ್ತೇನು?"

"ಗೊತ್ತಿಲ್ಲ."

"ನೀನು ಯಾವತ್ತೂ ನೋಡಿಲ್ಲವೇನು?"

"ನನಗೆ ಹೆದರಿಕೆ ಆಗುತ್ತೆ. ನಾನು ನೋಡೋದಿಲ್ಲ?"

"ಹಾಗಾದರೆ ಅದು ಎಷ್ಟು ಹೊತ್ತು ನಿಂತಿರುತ್ತೆ?"

"ಗೊತ್ತಿಲ್ಲ."

ನನ್ನ ಮುಖದ ಬಣ್ಣ ಬಿಳಿಚಿಕೊಂಡುಬಿಟ್ಟಿತು ಅಂತ ಅಮ್ಮಮ್ಮ ಹೇಳುತ್ತಾರೆ. ಕಳೆದಸಲ ಅವರು ಪಪ್ಪನ ಹತ್ತಿರವೂ ಹೇಳಿದ್ದರು. ಪಪ್ಪ ಡಾಕ್ಟರ್ ಹತ್ತಿರ ಕರೆದುಕೊಂಡುಹೋಗಿದ್ದರು. ಆದರೆ ನನಗೆ ಕಾಯಿಲೆ ಇಲ್ಲ ಅಂತ ಅಮ್ಮಮ್ಮ ಹೇಳುತ್ತಾ ಇದ್ದರು. ಡಾಕ್ಟರರಿಗೆ ಏನೂ ಮಾಡಕ್ಕಾಗಲ್ಲ, ಕಾಳಿಮಾತೆ ಮಾತ್ರ ಮಾಡಬಹುದು ಅಂತ ಅಮ್ಮಮ್ಮ ಹೇಳುತ್ತಾ ಇದ್ದರು. ನಾನು ಕಾಳಿಕಾ ದೇವಿಯನ್ನೇ ನಂಬಲ್ಲ ಅಂತ ಪಪ್ಪ ಹೇಳುತ್ತಾ ಇದ್ದರು.

ಅಮ್ಮಮ್ಮ ನನ್ನ ತಲೆಮೇಲೆ ಕೈಯಾಡಿಸಿ ನೇವರಿಸಿದರು. ಕೆನ್ನೆಗೆ ಮುತ್ತುಕೊಟ್ಟು–"ಪಪ್ಪನಿಗೆ ಹೇಳಬೇಡ. ನಾನು ನಾಳೆ ನಿನ್ನನ್ನು ಕಾಳಿದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತೀನಿ" ಎಂದು ಹೇಳಿದರು.

"ಕಾಳಿದೇವಿ ಯಾರು ಅಮ್ಮಮ್ಮ?"

“ಅವಳೇ ದುರ್ಗಿ. ಭೂತ ಪ್ರೇತಗಳ ಒಡತಿ.”

“ಅವಳು ಏನು ಮಾಡುತ್ತಾಳೆ?”

“ಅವಳು ನಮ್ಮ ಮೇಲೆ ಕೃಪೆಮಾಡುತ್ತಾಳೆ. ನೀನು ಮಲಗುವ ಹೊತ್ತಿನಲ್ಲಿ ಕಾಳಿಮಾತೆಯ ಜಪಮಾಡು.”

“ಯಾವ ಥರ?”

“ಹೇ ಕಾಳಿಮಾತೆ ಅಂತ ಹೇಳಿಕೊಂಡು.”

“ಆದರೆ ಅವಳು ನನ್ನ ಮಾತೆ ಅಲ್ಲವಲ್ಲ.”

“ಅವಳೂ ನಿನ್ನ ಅಮ್ಮನೇ (= ಮಾತೆನೇ)”

“ಆದರೆ ಅಮ್ಮ (=ಮಾತೆ) ಒಬ್ಬಳೇ ತಾನೆ. ಇಬ್ಬರು ಹೇಗಿರುತ್ತಾರೆ?”

“ನೀನು ಕರ್ಮಬದ್ಧಳಲ್ಲವೆ? ಅದರಿಂದ ನಿನಗೆ ಇಬ್ಬರು ಅಮ್ಮಂದಿರು” ಹಾಗೆಂದು ಹೇಳಿ ಅಮ್ಮಮ್ಮ ಕಣ್ಣುಮುಚ್ಚಿ “ಹೇ ಕಾಳಿ! ಹೇ ದುರ್ಗೆ! ಈ ಹುಡುಗಿ ನಿನ್ನ ಸ್ವಂತ ಮಗಳು. ಇವಳ ತಲೆಮೇಲೆ ನಿನ್ನ ಕೈ ಇಡು” ಎಂದು ಹೇಳಿದರು.

ಅನಂತರ ಅಮ್ಮಮ್ಮನಿಗೆ ಒಂದು ವಿಚಿತ್ರ ಯೋಚನೆ ಬಂತು. ಪಕ್ಕದ ಕೊಠಡಿಯಲ್ಲಿದ್ದ ಅಮ್ಮನ ಹತ್ತಿರಕ್ಕೆ ನನ್ನನ್ನು ಕರೆದುಕೊಂಡುಹೋದರು. ಮಂಚದಮೇಲೆ ಕೂಡಿಸಿ ಒಂದು ತಂಬಿಗೆ ನೀರು ತಂದು ನನ್ನ ಕಾಲು ತೊಳೆದರು. ಯಾವ ನೀರಿನಿಂದ ಕಾಲು ತೊಳೆದಿದ್ದರೋ ಅದನ್ನೇ ಮತ್ತೆ ತಂಬಿಗೆಗೆ ಹಾಕಿ ಅಮ್ಮನಿಗೆ–“ಈ ಹುಡುಗಿ ದೇವರು. ಇವಳ ಕಾಲುತೊಳೆದ ನೀರು ಕುಡಿ. ದೇವರು ನಿನಗೆ ಗಂಡುಮಗುವನ್ನು ದಯಪಾಲಿಸಲಿ.”ಎಂದು ಹೇಳಿದರು.

ಅಮ್ಮ ಬಟ್ಟಲಿನಲ್ಲಿದ್ದ ಕೊಳಕು ನೀರನ್ನು ಕುಡಿದು ಬಿಟ್ಟಳು. ಅಮ್ಮ ಆ ಕೊಳಕು ನೀರನ್ನು ಯಾಕಾದರೂ ಕುಡಿದಳೋ ಎಂದು ನಾನು ಚಿಂತಿತಳಾಗಿದ್ದೆ. ಪಪ್ಪನೂ ಕೊಠಡಿಯಲ್ಲೇ ಇದ್ದರು. ಆದರೆ ಅವರೂ ಏನೂ ಹೇಳಲಿಲ್ಲ. ಅವರು ಅಮ್ಮಮ್ಮನ ಮೇಲೆ ರೇಗಬಹುದು ಎಂದು ನಾನು ಲೆಕ್ಕಹಾಕಿದ್ದೆ. ಆದರೆ ಅವರು ಇಬ್ಬರ ಕಡೆಗೂ ಸುಮ್ಮನೆ ನೋಡುತ್ತ ಇದ್ದುಬಿಟ್ಟರು.

ಆಮೇಲೆ ಅಮ್ಮಮ್ಮ ನನ್ನ ಕೈಹಿಡಿದುಕೊಂಡು ಅಮ್ಮನ ತಲೆಮೇಲೆ ಇರಿಸಿದರು. “ಮಗಳು ಸಾಕ್ಷಾತ್ ದೇವೀನೆ. ಅವಳ ಮನೆಯಲ್ಲಿ ಗಂಡುಮಗ–ನಿನ್ನ ತಮ್ಮರಾಯ ಹುಟ್ಟಲಿ ಅಂತ ಅವಳು ಅಮ್ಮನಿಗೆ ಆಶೀರ್ವಾದ ಮಾಡಲಿ.

ಅಮ್ಮಮ್ಮ ನೋಡಿದರೆ ಅಳುತ್ತಿದ್ದರು.

ಅಮ್ಮಮ್ಮ ಯಾವಾಗಲೋ ಅಳುತ್ತಾರೆ, ಇನ್ಯಾವಾಗಲೋ ನಗುತ್ತಾರೆ. ಅಮ್ಮಮ್ಮನಿಗೆ ಏನಾಗಿದೆ ಅಂತ ಗೊತ್ತಾಗ್ತಾ ಇಲ್ಲ.

(2)

ಅಮ್ಮನಿಗೆ ವಿಪರೀತ ಕಾಯಿಲೆ. ಪಪ್ಪ ಈಗತಾನೆ ಡಾಕ್ಟರನ್ನು ಕರೆದುಕೊಂಡು ಬಂದಿದ್ದಾರೆ. ಅಮ್ಮಮ್ಮ, ಡಾಕ್ಟರು ಎಲ್ಲರೂ ಕೊಠಡಿಯಲ್ಲೇ ಇದ್ದಾರೆ. ಆದರೆ ಪಪ್ಪ ಕೊಠಡಿಯ ಹೊರಗಡೆ ನಿಂತುಕೊಂಡು, ಕೊಠಡಿಯಕಡೆ ನೋಡುತ್ತ ಇದ್ದಾರೆ. ಪಪ್ಪ ಕೊಠಡಿಯ ಒಳಕ್ಕೆ ಯಾತಕ್ಕೆ ಹೋಗುತ್ತಾ ಇಲ್ಲವೋ ಗೊತ್ತಿಲ್ಲ. ನನ್ನನ್ನೂ ಕೊಠಡಿಯ ಒಳಕ್ಕೆ ಹೋಗಲು ಬಿಡುತ್ತಾ ಇಲ್ಲ.

"ಪಪ್ಪ ಅಮ್ಮ ಯಾವಾಗ ಹುಷಾರಾಗುತ್ತಾರೆ?" ಹಾಗೆ ಕೇಳುತ್ತ ನನಗೆ ಅಳು ಬಂದುಬಿಟ್ಟಿತು. ಪಪ್ಪ ನನ್ನನ್ನು ಎತ್ತಿಕೊಂಡು ತುಂಬ ಮುದ್ದುಮಾಡಿದರು. "ಹಕ್ಕೀನೋ ಕಾಗೆನೋ ಹೇಳು" ಎಂದು ನನ್ನನ್ನುಕೇಳತೊಡಗಿದರು.

ಈ ಪಪ್ಪನಿಗೆ ಏನಾಗಿದೆ? ಅಮ್ಮನಿಗೆ ಇಷ್ಟೊಂದು ಕಾಯಿಲೆ ಆಗಿದೆ. ಪಪ್ಪ ಹಕ್ಕಿ ಮತ್ತು ಕಾಗೆ ಕತೆ ಹೇಳಕ್ಕೆ ಶುರುಮಾಡಿದರಲ್ಲ ಅಂತ ಅನ್ನಿಸಿತು.

"ಹಕ್ಕಿನೋ ಕಾಗೆನೋ ಹೇಳು" ಅಂತ ಪಪ್ಪ ಮತ್ತೆ ಕೇಳತೊಡಗಿದರು.

"ಕಾಗೆ"ಅಂತ ನಾನು ಹೇಳಿದೆ. ಆದರೆ ಪಪ್ಪ ಹೇಳುತ್ತಾ ಇರೋದು ಏನು ಎಂದು ಅರ್ಥವಾಗಲಿಲ್ಲ.

ಅಮ್ಮಮ್ಮ ಕೊಠಡಿಯೋಳಗಿಂದ ಹೊರಕ್ಕೆ ಬಂದಾಗ, ತಲೆಯ ಮೇಲೆ ಹೊದ್ದಿದ್ದ ದುಪಟ್ಟಾದಿಂದ ಕಣ್ಣೊರಸಿಕೊಳ್ಳುತ್ತಿದ್ದರು. ಅವರು ಅಳುತ್ತಾ ಇದ್ದಾರೆ ಎಂದು ನಾನು ತಿಳಿದುಕೊಂಡೆ. ಆದರೆ ಪಪ್ಪನ ಕಡೆ ನೋಡಿ ಅವರು ನಕ್ಕುಬಿಟ್ಟರು.

"ಗಾಬರಿಪಡುವಂಥದ್ದೇನೂ ಇಲ್ಲ. ಡಾಕ್ಟರು ಒಳ್ಳೆಯ ಸಮಾಚಾರವನ್ನೇ ಹೇಳಿದ್ದಾರೆ"

ಆಮೇಲೆ ಅಮ್ಮಮ್ಮ ನನ್ನನ್ನು ಪಪ್ಪನ ತೊಡೆಯ ಮೇಲಿಂದ ಎತ್ತಿಕೊಂಡು ತಮ್ಮ ತೊಡೆಯ ಮೇಲೆ ಕೂರಿಸಿಕೊಂಡರು. ಅಮ್ಮಮ್ಮನಿಗೆ ಈಗ ನನ್ನನ್ನು ಎತ್ತಿಕೊಳ್ಳಲು ಆಗುವುದಿಲ್ಲ. ಆದರೆ ಚಿಕ್ಕ ಮಗುವನ್ನು ಎತ್ತಿಕೊಳ್ಳುವ ಹಾಗೆ ಅವರು ನನ್ನನ್ನು ಎತ್ತಿಕೊಂಡರು. "ನಿನ್ನ ಬಾಯಿ ಸಿಹಿಯಾಗಲಿ.ಹೇಳು ಹಕ್ಕಿನೋ ಕಾಗೆನೋ" ಎಂದು ಕೇಳಿದರು.

ಆಮೇಲೆ ಪಪ್ಪ, ಅಮ್ಮಮ್ಮ ಎಲ್ಲರಿಗೂ ಏನಾಗಿದೆಯೋ ಗೊತ್ತಿಲ್ಲ. ಎಲ್ಲರೂ ನನ್ನನ್ನು ಕೇಳೋದು ಒಂದೇ. ಅಮ್ಮನಿಗೆ ಹುಷಾರಿಲ್ಲ. ಅವರ ವಿಷಯ ಯಾರೂ ಏನೂ ಮಾತಾಡುತ್ತಿಲ್ಲ. ಹಕ್ಕಿ ಮತ್ತು ಕಾಗೆಯ ವಿಷಯವನ್ನೇ ಮಾತಾಡುತ್ತ ಇದ್ದಾರೆ.

"ಕಾಗೆ" ಎಂದು ನಾನು ಅಮ್ಮನ ಪ್ರಶ್ನೆಗೆ ಉತ್ತರಿಸಿದೆ. ಈ ಮಾತು ಹೇಳಿದರೆ ಪಪ್ಪನಿಗೆ ಬಹಳ ಖುಶಿಯಾಗುತ್ತೆ ಅಂತ ಅನ್ನಿಸಿತು.

ಅಮ್ಮಮ್ಮ ನನ್ನ ಕೆನ್ನೆಗೆ ಮುತ್ತುಕೊಟ್ಟು–"ನಿನ್ನ ಕಾಲು ದೇವರು, ನಿನ್ನ ಮುಖ ದೇವರು" ಅಂತ ಹೇಳಿದರು. ಅನಂತರ ಡಾಕ್ಟರರೂ ರೂಮ್ ನಿಂದ ಹೊರಕ್ಕೆ ಬಂದರು. ಅವರು ಕೂಡ ಎಲ್ಲದಕ್ಕೂ ಮುಂಚೆ ನನ್ನ ಮುಖವನ್ನು ಮುದ್ದಿಸಿ "ನಿನಗೆ ತಮ್ಮರಾಯ ಬರುತ್ತಾನೆ" ಎಂದರು.

"ಚಿಕ್ಕವನಾ" ಎಂದು ಡಾಕ್ಟರನ್ನು ಕೇಳಿದೆ. ಡಾಕ್ಟರರಿಗೆ ಎಲ್ಲರಿಗಿಂತ ಜಾಸ್ತಿ ಗೊತ್ತಿರುತ್ತೆ ಅಂತ ಅನ್ನಿಸಿತು.

"ಹೌದು ಚಿಕ್ಕ ಮಗು"

"ಎಲ್ಲಿದ್ದಾನೆ?"

"ಈಗಲೇ ಇಲ್ಲ. ತುಂಬ ದಿನ ಆದಮೇಲೆ ಬರುತ್ತಾನೆ."

"ಎಲ್ಲಿಂದ ಬರುತ್ತಾನೆ?"

"ನೀನು ಬಂದಹಾಗೇ ಅಮ್ಮನ ಹೊಟ್ಟೆಯಿಂದ ಬರುತ್ತಾನೆ."

"ಆದರೆ ಅಮ್ಮನಿಗೆ ಕಾಯಿಲೆ ಆಗಿದೆ."

"ಪುಟಾಣಿ ಮಗು ಬರುವಾಗ ಅಮ್ಮ ಕಾಯಿಲೇನೂ ಬೀಳುತ್ತಾರೆ."

"ಅವರು ಅಳುತ್ತಾರೆ."

"ಅತ್ತೂ ಅಳುತ್ತಾರೆ, ನಕ್ಕೂನಗುತ್ತಾರೆ."

"ಅಮ್ಮಮ್ಮನೂ ಅತ್ತೂ ಅಳುತ್ತಾರೆ, ನಕ್ಕೂ ನಗುತ್ತಾರೆ."

ಮುಂದೆ ಏನೋ ಹೇಳುತಾ್ತ ಇದ್ದೆ. ಆದರೆ ಯಾರೂ ಕೇಳಿಸಿಕೊಳ್ಳಲಿಲ್ಲ. ಎಲ್ಲರೂ ನಗತೊಡಗಿದರು.

ಚಿಕ್ಕ ತಮ್ಮ ಬಂದಾಗ,ಭೂತ ಅವನ ಕೊಠಡಿಗೂ ಹೋಗಿಬಿಟ್ಟಿತು ಅಂದರೆ ಅವನು ತುಂಬ ಅಳುತ್ತಾನಲ್ಲ ಅಂತ ನನಗೆ ಚಿಂತೆ ಆಗಿಬಿಟ್ಟಿದೆ.

(3)

ನಮ್ಮ ದೊಡ್ಡ ಬಂಗಲೆಯ ಹಿಂಬದಿಯ ಕೊಠಡಿಯಲ್ಲಿ ಚಿಕ್ಕಮ್ಮ ಇರುತ್ತಾಳೆ. ಅಲ್ಲಿ ಚಿಕ್ಕಮ್ಮ ಮಾತ್ರ ಇರೋದು. ಇನ್ಯಾರೂ ಇರಲ್ಲ. ಅವರು ಖಾಸಾ ಚಿಕ್ಕಮ್ಮ ಅಲ್ಲ ಅಂತ ಅಮ್ಮ ನನಗೆ ತಿಳಿಸಿದ್ದರು. ಆದರೆ ಮಾತ್ರ ಅವರು ತುಂಬ ಒಳ್ಳೆಯವರು. ಪಪ್ಪನ ಫ್ರೆಂಡ್ ಒಬ್ಬರು ಇದ್ದರು. ಪಪ್ಪ ಅವರನ್ನು ನನ್ನ ತಮ್ಮ ಎಂದು ಹೇಳಿಕೊಳ್ಳುತ್ತಿದ್ದರು.

ಆಮನುಷ್ಯ ವಿದೇಶಕ್ಕೆ ಹೋಗುವಾಗ ಚಿಕ್ಕಮ್ಮನನ್ನು ಇಲ್ಲೇ ಬಿಟ್ಟು ಹೊರಟುಹೋದ. ಆತ ವಿದೇಶಕ್ಕೆ ಹೊರಟುಹೋದಮೇಲೆ ಅಲ್ಲೇ ಯಾರೋ ಒಬ್ಬ ವಿದೇಶೀಯಳನ್ನು ಮದುವೆಮಾಡಿಕೊಂಡ ಅಂತ ಅಮ್ಮ ಹೇಳುತ್ತಾ ಇದ್ದರು. ಈ ಬಡಪಾಯಿ ಚಿಕ್ಕಮ್ಮ ಇಲ್ಲಿ ಒಬ್ಬರೇ ಇರುತ್ತಾರೆ. ಆತ ಪ್ರತಿ ತಿಂಗಳೂ ಇವರಿಗೆ ಹಣ ಕಳುಹಿಸುತ್ತಾನೆ. ಆದರೆ ತಾನು ಮಾತ್ರ ಬರಲ್ಲ.

ಚಿಕ್ಕಮ್ಮ ನನ್ನನ್ನು ತುಂಬ ಮುದ್ದುಮಾಡುತ್ತಾರೆ. ಅವರ ಕೊಠಡಿಗೆ ನಾನು ಹೋಯಿತು ಅಂದರೆ ಅದೆಷ್ಟೋ ತಿನ್ನಲು ಕೊಡುತ್ತಾರೆ. ಆದರೆ ಚಿಕ್ಕಮ್ಮನ ಕೊಠಡಿಯ ಹತ್ತಿರ ದೊಡ್ಡ ದೊಡ್ಡ ಮರಗಳಿವೆ. ನಾನು ಮರಗಳ ನಡುವೆ ಹೋಗಿ ಆಡಕೂಡದು ಎಂದು ಚಿಕ್ಕಮ್ಮ ಹೇಳಿದ್ದರು. ಮರಗಳಲ್ಲಿರುವ ಭೂತಗಳು ಮಕ್ಕಳಿಗೆ ಅಂಟಿಕೊಂಡುಬಿಡುತ್ತವೆ ಎಂದು ಹೇಳಿದ್ದರು.

ಪಪ್ಪನು ಒಂದು ವಿಚಿತ್ರ ವ್ಯಕ್ತಿಯೇ ಸರಿ. ಭೂತ ಗೀತ ಅಂತ ಯಾವುದೂ ಇರಲ್ಲ ಅಂತ ಒಂದು ಸಲ ಹೇಳಿದರೆ, ಅಮ್ಮಮ್ಮ ಹೇಳೋದೇ ಸರಿ ಅಂತ ಇನ್ನೊಂದುಸಲ ಹೇಳುತ್ತಾರೆ. ನೀನು ಮರಗಳ ಕೆಳಗೆ ಆಟ ಆಡಬೇಡ. ನಮ್ಮ ಬಂಗಲೆ ಹಿಂದುಗಡೆ ಹೋಗುತ್ತಾ ಇರಬೇಡ ಅಂತ ಹೇಳುತ್ತಾರೆ.

ಆದರೆ ಯಾವಾಗ ಹೋದರೂ ಚಿಕ್ಕಮ್ಮ ಬೇಗ ಹೋಗಲು ಬಿಡುವುದಿಲ್ಲ. ಮತ್ತೆ ಕತ್ತಲೆ ಆಯಿತು ಅಂದರೆ ಪಪ್ಪ ರೇಗುತ್ತಾರೆ.

ಈಗ ಅಮ್ಮಮ್ಮ ಬಂದಾಗಿನಿಂದ ಭೂತ ನನ್ನ ರೂಮಿಗೆ ಬರುತ್ತಾ ಇಲ್ಲ. ಆದರೆ ಚಿಕ್ಕಮ್ಮನ ಹತ್ತಿರ ಹೋದರೆ ಯಾವುದಾದರೂ ಮರದಮೇಲೆ ಕೂತಿರುವ ಭೂತ ನನ್ನನ್ನು ನೋಡಿ, ಅದಕ್ಕೆ ನನ್ನ ಜ್ಞಾಪಕ ಬಂದುಬಿಟ್ಟರೆ.....ಆಮೇಲೆ ಏನೋ ಯಾರಿಗೆ ಗೊತ್ತು?

ಅಮ್ಮಮ್ಮ ಪ್ರತಿದಿನವೂ ಅಮ್ಮನ ಕೊಠಡಿಯಲ್ಲಿ ಗುಗ್ಗುಳ ಹೊತ್ತಿಸುತ್ತಾರೆ. ನನ್ನ ಕೊಠಡಿಯಲ್ಲಿ ಕೂಡ ಹೊತ್ತಿಸುತ್ತಾರೆ. ಮತ್ತೆ "ಈಗ ಭೂತ ಬರಲ್ಲ" ಅಂತ ಅಮ್ಮಮ್ಮ ಹೇಳುತ್ತಾರೆ.

ನಮ್ಮ ಮನೆಗೆ ಒಬ್ಬ ಪುಟ್ಟ ಬರುತ್ತಾ ಇದ್ದಾನೆ ಅಂತ ಯಾರೂ ನನಗೆ ಹೇಳೇ ಇರಲಿಲ್ಲ. ಅಮ್ಮನ ಥರ ನೀವೂ ಒಬ್ಬ ಪುಟ್ಟನನ್ನು ತಂದುಕೊಂಡುಬಿಡಿ. ಇಡೀ ದಿನವೆಲ್ಲಾ ಅದಕ್ಕೆ ಮಮ್ಮು ತಿನ್ನಿಸುತ್ತಾ ಇರಿ ಅಂತ ಚಿಕ್ಕಮ್ಮನಿಗೆ ಹೇಳುತ್ತೀನಿ.

ಆದರೆ ಈಗ ಅಲ್ಲ. ಈಗ ಕತ್ತಲು ಆಗೋದಕ್ಕೆ ಶುರುವಾಗಿದೆ. ಕತ್ತಲು ಆಗುತ್ತಿದ್ದಹಾಗೇ

ಭೂತಗಳು ಮರಗಳಮೇಲೆಹೋಗಿ ಕುಳಿತುಬಿಡುತ್ತವೆ ಎಂದು ಅಮ್ಮಮ್ಮ ಹೇಳುತ್ತಿದ್ದರು.

ಅಮ್ಮಮ್ಮ ನನ್ನನ್ನು ನಾಳೆ ಕಾಳಿಕಾ ದೇವಸ್ಥಾನಕ್ಕೆ ಕರೆದುಕೊಂಡುಹೋಗುತ್ತಾರೆ. ಅವರು ದೇವಿಗೆ ಬಟ್ಟೆಯ ಪಟ್ಟಿಗಳಿಂದ ಕೆಂಪುಬಣ್ಣದ ಏಳು ಸೀರೆಗಳನ್ನು ಮಾಡಿದ್ದಾರೆ. ಕಾಳಿಮಾತೆ ಕೆಂಪುಬಣ್ಣದ ಸೀರೆಗಳಿಂದ ಪ್ರಸನ್ನಳಾಗುವುದಿಲ್ಲ, ಆ ದೇವಿಗೆ ಬೇಕಾಗಿರುವುದು ರಕ್ತ ಒಂದೇ ಅಂತ ಅಮ್ಮ ಹೇಳುತ್ತಾ ಇದ್ದರು. ಆದರೆ ಅಮ್ಮಮ್ಮ ಹೇಳುವುದು ಒಂದು ಕುರಿಗೆ ಎಷ್ಟು ಬೆಲೆ ಆಗುತ್ತೋ ಅಷ್ಟೂ ಹಣವನ್ನು ಕಾಳಿಗೆ ಅರ್ಪಿಸಿಬಿಡುವುದರಿಂದ ಆ ಹಣದಿಂದ ಕುರಿಯನ್ನು ಖರೀದಿಸಿ ಅದರ ರಕ್ತ ತೆಗೆದುಕೊಳ್ಳಲು ಅನುಕೂಲವಾಗುತ್ತದೆ ಎಂದು.

ನಾಳೆ ಬೆಳಿಗ್ಗೆ ನಾವು ಗುಡಿಗೆ ಹೋಗುತ್ತಿದ್ದೀವಿ ಎಂದು ಪಪ್ಪನಿಗೆ ನಾನು ಹೇಳಕೂಡದು ಎಂದು ಅಮ್ಮಮ್ಮ ಹೇಳಿದ್ದಾರೆ. ಆದರೆ ಅಮ್ಮಮ್ಮನದೂ ಒಂದು ವಿಚಿತ್ರವೇ. ಪಪ್ಪ ಈಗ ಕುರಿಮಾಂಸ ತಿನ್ನುತ್ತಾರಾದರೂ ಅಡಿಗೆಮನೆಗೆ ಮಾಂಸ ತರಲು ಅಮ್ಮಮ್ಮ ಬಿಡುವುದಿಲ್ಲ. ಒಂದು ದೊಡ್ಡ ಒಲೆ ಹೊತ್ತಿಸಿ ಹೊರಗಡೆ ಇಟ್ಟುಬಿಡುತ್ತಾರೆ......ಆದರೆ ಕಾಳಿ ದೇವಸ್ಥಾನಕ್ಕೆ ಹೋಗಿ ಕಾಳಿಮಾತೆಗೆ ಒಂದು ಕುರಿಯನ್ನು ಅರ್ಪಿಸಿ ಬರುತ್ತಾರೆ.

ಮೊನ್ನೆದಿನ ಪಪ್ಪ ಮಾಂಸ ಬೇಯಿಸಿದ್ದರು. ಅಮ್ಮನಿಗೆ ಇತ್ತೀಚೆಗೆ ಏನಾಗಿದೆ ಅಂತ ಗೊತ್ತಾಗುತ್ತಾ ಇಲ್ಲ. ಮೊದಲು ಎಂದೂ ಮಾಂಸ ತಿನ್ನುತ್ತಿರಲಿಲ್ಲ. ಆದರೆ ಮೊನ್ನೆ "ಅದರ ಮಾಂಸ ತಿನ್ನಲು ಆಸೆ ಆಗುತ್ತಾ ಇದೆ." ಅಂತ ಪಪ್ಪನಿಗೆ ಹೇಳತೊಡಗಿದರು. ಪಪ್ಪ ಅವರಿಗೆ ಬಟ್ಟಲಿನಲ್ಲಿ ಮಾಂಸ ಹಾಕಿಕೊಡಲು ಹೊರಟಿದ್ದರು. ಆಗ ಅಮ್ಮಮ್ಮ "ಹೊಟ್ಟೆಯಲ್ಲಿರೋವಾಗಲೇ ಮಾಂಸ ಬೇಡುತ್ತಾ ಇರುವ ಇವನಿಗೆ ಏನುಮಾಡಲಿ ನಾನು"ಎಂದು ಅಳತೊಡಗಿದರು.

ಅಮ್ಮನಿಗೆ ಅಷ್ಟೇನೂ ಕಾಯಿಲೆ ಇಲ್ಲ. ಆದರೆ ಅಮ್ಮಮ್ಮ ಮಾತ್ರ ಈಗಲೂ ಅದೇ ಥರ ಯಾವಾಗಲೋ ನಗುತ್ತಾರೆ, ಇನ್ಯಾವಾಗಲೋ ಅಳುತ್ತಾರೆ.

ರಾತ್ರಿ ನಾನು ಅಮ್ಮಮ್ಮನಿಗೆ ಹೇಳಿದೆ–"ಅಮ್ಮಮ್ಮ ಪುಟ್ಟ ಬರೋವಾಗ ಅದರ ಅಮ್ಮ ಒಂದೊಂದು ಸಲ ಅಳುತ್ತಾಳೆ, ಒಂದೊಂದು ಸಲ ನಗುತ್ತಾಳೆ ಅಂತ ಡಾಕ್ಟರ್ ಹೇಳುತ್ತಿದ್ದರು. ನೀವೂ ಒಂದೊಂದು ಸಲ ಅಳುತ್ತೀರಿ ಒಂದೊಂದು ಸಲ ನಗುತ್ತೀರಿ. ನಿಮಗೂ ಪುಟ್ಟ ಬರುತ್ತಾನೇನು?".

ಅಮ್ಮಮ್ಮ ನನ್ನ ಮೇಲೆ ಕೋಪಮಾಡಿಕೊಂಡರು. ಆದರೆ ಅವರ ಕೋಪ ಬಹಳಹೊತ್ತು ಇರಲ್ಲ. ನನ್ನನ್ನು ಅವುಚಿಕೊಂಡು ಮುದ್ದಿಸತೊಡಗಿದರು. "ನಾನು ಮುದುಕಿ ಆಗಿಬಿಟ್ಟಿದ್ದೀನಿ.

ಯಾರೇ ಮುದುಕಿ ಆಗಿದ್ದರೂ ಅವರಿಗೆ ಹೀಗೆ ಈಗ ಹೇಳಿದ ಹಾಗೆ ಹೇಳಬಾರದು." ಎಂದು ಹೇಳಿದರು.

4

ಚಿಕ್ಕಮ್ಮ ಕೂಡ ತುಂಬ ವಿಚಿತ್ರ. ಈ ಹೊತ್ತು ನಾನು ಅವರ ಹತ್ತಿರ ಹೋಗಿ ನಮ್ಮ ಮನೆಗೆ 'ಒಂದು ಪುಟ್ಟಮಗು' ಬರಲಿದೆ ಎಂದು ಹೇಳಿದಾಗ ಸುಮ್ಮನೇನೆ ಕೂತಿದ್ದರು.

ಬಹುಶಃ ಅವರು ನಾನು ಹೇಳಿದ್ದು ಕೇಳಿಸಿಕೊಳ್ಳಲಿಲ್ಲವೇನೋ ಎಂದು ಭಾವಿಸಿ ಮತ್ತೆ ಹೇಳಿದೆ–"ಚಿಕ್ಕಮ್ಮ ಒಬ್ಬ ಡಾಕ್ಟರ್ ಬಂದಿದ್ದರು. ನಮ್ಮ ತಾಯಿಯ ಹೊಟ್ಟೆಯಿಂದ ಒಂದು ಪುಟ್ಟಪಾಪ ಹೊರಬರಲಿದೆ ಎಂದು ಅವರು ಹೇಳಿದರು."

ಈ ಹೆಂಗಸರೆಲ್ಲ ಒಂದೇ ಥರ. ನೋಡಿದರೆ ಚಿಕ್ಕಮ್ಮ ಅಳುತ್ತಾ ಇದ್ದಾರೆ. "ಚಿಕ್ಕಮ್ಮ ನೀವು ಯಾಕೆ ಅಳುತ್ತಾ ಇದ್ದೀರಿ" ಎಂದು ಕೇಳಿದೆ. ಹಾಗೆಂದ ಕೂಡಲೇ ನಗತೊಡಗಿದರು. "ನೋಡು ನಾನು ನಗುತ್ತಾ ಇದ್ದೀನಿ" ಎಂದರು.

ಅಮ್ಮಮ್ಮ ಮುದುಕಿ. ಆದರೆ ಚಿಕ್ಕಮ್ಮ ಮುದುಕಿ ಅಲ್ಲ. ನಾನು ಚಿಕ್ಕಮ್ಮನಿಗೆ ಹೇಳೀದೆ– "ನೀವು ಅತ್ತೂ ಅಳುತ್ತೀರಿ ನಕ್ಕೂ ನಗುತ್ತೀರಿ. ಡಾಕ್ಟರ್ ಹೇಳುತ್ತಿದ್ದರು–'ಪುಟ್ಟ ಗಂಡುಮಗು ಬರೋವಾಗ, ಅದರ ತಾಯಿ ಅತ್ತೂ ಅಳುತ್ತಾಳೆ, ನಕ್ಕೂ ನಗುತ್ತಾಳೆ.' ನಿಮಗೂ ಪುಟ್ಟಪಾಪು ಬರುತ್ತಾನಲ್ಲವೆ?". ಚಿಕ್ಕಮ್ಮನಿಗೆ ಅದೇನಾಯಿತೋ ಗೊತ್ತಿಲ್ಲ, ಮತ್ತೆ ಅಳಲು ಪ್ರಾರಂಭಿಸಿದರು.

ಚಿಕ್ಕಮ್ಮ ಯಾಕೆ ನಗುವುದಿಲ್ಲ, ಗೊತ್ತಾಗ್ತಾ ಇಲ್ಲ. ಯಾವತ್ತೂ ನಗಲ್ಲ. ನಾನು ಪ್ರತಿದಿನವೂ ಅವರ ಹತ್ತಿರ ಹೋಗುತ್ತಾ ಇರಬೇಕು ಅಂತ ಅವರು ಹೇಳುತ್ತಾರೆ. ಆದರೆ ನಾನು ಅಲ್ಲಿಗೆ ಹೋದಾಗ ನಗಲ್ಲ, ಮಾತಾಡಲ್ಲ. ಸುಮ್ಮನೆ ಕೂತುಕೊಂಡುಬಿಡುತ್ತಾರೆ. ಕತೆಗಳನ್ನು ಕೂಡ ಹೇಳಲ್ಲ. ಆದರೆ ತಿಂಡಿ ತಿನಿಸು ಕೊಡುತ್ತಾರೆ. ಏನಾದರೂ ಕೊಡುತ್ತಿರುತ್ತಾರೆ.

ನಾನು ಆ ಕ್ಷಣವೇ ಅಲ್ಲಿಂದ ಹೊರಟುಬಂದಿದ್ದೆ. ಹಾಲಿನ ಕೆನೆ ತಿನ್ನು ಎಂದು ನನಗೆ ಹೇಳುತ್ತಾ ಇದ್ದರು. ಅವರು ಅಳುತ್ತಾ ಇದ್ದರೆ ನನಗೆ ತಿನ್ನಲು ಮನಸ್ಸಾಗುತ್ತಿರಲಿಲ್ಲ.

ಮನೆಗೆಹೋಗಿ ನಾನು ಅಮ್ಮಮ್ಮನಿಗೆ ಹೇಳಿದಾಗ, ಅವರು ಅಮ್ಮನ ಕೊಠಡಿಗೆ ಹೋಗಿ–"ನೋಡು ನಿನ್ನ ಗಿಣಿ ಪಾಠ ಕಲಿತುಕೊಂಡು ಬಂದಿದೆ. ಆ ಡಾಕ್ಟರ್ ಕಡೆಯಿಂದ ಕಲಿತಿರೋ ಒಂದು ಮಾತನ್ನು ನಿನ್ನೆ ರಾತ್ರಿ ನನಗೆ ಹೇಳುತ್ತಾ ಇದ್ದಳು–'ಅಮ್ಮಮ್ಮ ನೀವು ಅತ್ತೂ ಅಳುತ್ತೀರಿ, ನಕ್ಕೂ ನಗುತ್ತೀರಿ. ನಿಮಗೂ ಪುಟ್ಟ ಬರುತ್ತಾನಾ' ಅಂತ.

ಈಗ ಆ ಬಡಪಾಯಿಗೂ ಅದನ್ನೇ ಹೇಳಿಬಂದಿದ್ದಾಳೆ" ಎಂದು ನಗತೊಡಗಿದರು.

ಚಿಕ್ಕಮ್ಮ ನಮ್ಮ ಮನೆಗೆ ಬರುವುದು ಅಪರೂಪವೇ. ಆದರೆ ಈ ಹೊತ್ತು ನನ್ನ ಹಿಂದೆ ಹಿಂದೆನೇ ಬಂದರು. ಅವರು ಮೊದಲು ಅಮ್ಮಮ್ಮನಿಗೆ ಅಭಿನಂದನೆ ಹೇಳಿ ಆಮೇಲೆ ನಮ್ಮ ಅಮ್ಮನಿಗೆ ಅಭಿನಂದನೆ ಹೇಳಿದರು.

ಅವರ ಮುಖ ನೋಡಿದರೆ, ಅವರು ಆಗತಾನೆ ಅತ್ತು ಅತ್ತು ಮುಖ ತೊಳೆದುಕೊಂಡು ಬಂದಿದ್ದಾರೆ ಎಂದು ಅನ್ನಿಸುತ್ತಾ ಇತ್ತು. ಅಮ್ಮಮ್ಮ ಅವರಿಗೆ –"ಇವಳು ನಿಮ್ಮ ಹತ್ತಿರ ಏನು ಬಡಬಡಸಿ ಬಂದಿದ್ದಾಳೆ ಅಂತ ನನಗೆ ಹೇಳಿದ್ದಾಳೆ. ಮಗುವಿನ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ" ಎಂದು ಹೇಳಿದರು.

"ನಿನ್ನೆರಾತ್ರಿ ನನಗೂ ಇದೇ ಮಾತನ್ನು ಹೇಳಿದ್ದಳು. ಹೆಣ್ಣಿನ ಹಣೆಬರಹ ಎಷ್ಟು ವಿಚಿತ್ರವಾಗಿರುತ್ತೆ ಅಂತ ಈಗ ಈ ವಯಸ್ಸಿಗೆ ಏನುತಾನೆ ಗೊತ್ತಿರುತ್ತೆ ಹೇಳಿ?" ಎಂದರು.

ಚಿಕ್ಕಮ್ಮ ಮತ್ತೆ ಅತ್ತುಬಿಡುತ್ತಾರೇನೊ ಅನ್ನಿಸಿತು. ಆದರೆ ಅಳಲಿಲ್ಲ. ಬೇಗನೆ ಅಲ್ಲಿಂದ ಹೊರಟುಬಿಟ್ಟರು.

ಅವರು ಆಕಡೆ ಹೋದಮೇಲೆ ಅಮ್ಮಮ್ಮ, ಯಾವ ಹೆಂಗಸಿನ ಗಂಡ ದೂರದ ಊರಿನಲ್ಲಿರುತ್ತಾರೋ, ಆ ಹೆಂಗಸಿಗೆ ಇಂಥ ಮಾತನ್ನು ಹೇಳಬಾರದು ಎಂದು ನನಗೆ ತಿಳಿಸಿದರು.

ಸ್ವಲ್ಪ ಸ್ವಲ್ಪ ಅರ್ಥವಾಯಿತು. "ಪಪ್ಪ ಅಮ್ಮನ ಜೊತೆ ಇರುತ್ತಾರಲ್ಲ ಹಾಗೆ, ಚಿಕ್ಕಪ್ಪ ಚಿಕ್ಕಮ್ಮನ ಜೊತೆ ಯಾಕೆ ಇರಲ್ಲ ಎಂದು ಕೇಳಿದೆ. ಅಮ್ಮಮ್ಮ ಆಕಾಶದ ಕಡೆಗೆ ಕೈತೋರಿಸಿ– "ಹೆಣ್ಣಿನ ಹಣೆಬರಹವನ್ನು ಆ ದೇವರು ಎಡಗೈಯಿಂದ ಬರೀತಾನೆ. ಯಾವುದಾದರೂ ಗೆರೆ ನೆಟ್ಟಗಿತ್ತು ಅಂದರೆ ಅದೇ ಒಂದು ಸಂತೋ಼ಷದ ವಿಷಯ" ಎಂದರು.

ರಾತ್ರಿ ಸ್ಲೇಟ್ ಹಿಡಿದುಕೊಂಡು ಅದೆಷ್ಟೋ ಹೊತ್ತು ಕೂತಿದ್ದೆ. ಸ್ಲೇಟನ್ನು ಬೆರಳುಗಳಲ್ಲಿ ಹಿಡಿದು ಎಡಗೈಯಿಂದ ಅಕ್ಷರ ಬರೆಯುತ್ತಾ ಇದ್ದೆ. ಆದರೆ ಯಾವೊಂದು ಅಕ್ಷರವನ್ನೂ ಬರೆಯಲಾಗುತ್ತಿರಲಿಲ್ಲ. ಕೈ ನೋಯತೊಡಗಿತು. ದೇವರು ಅದು ಯಾತಕ್ಕೆ ಎಡಗೈಯಿಂದ ಬರೀತಾನೋ ಗೊತ್ತಾಗಲ್ಲ. ಅದಕ್ಕೇ ಅವನಿಗೆ ನೇರವಾಗಿ ಬರೆಯಲಾಗುವುದಿಲ್ಲ.

5

ನನ್ನ ಮಾತನ್ನು ಯಾರೂ ಒಪ್ಪುತ್ತಿರಲಿಲ್ಲ. ನಾನು ಸತ್ಯ ಹೇಳುತ್ತಿದ್ದೀನಿ ಅಂತ ಅಮ್ಮನಿಗೆ ಈಗ ಗೊತ್ತಾಗಿಬಿಟ್ಟಿದೆ.

ರಾತ್ರಿ ಅಮ್ಮನ ಕೋಣೆಗೆ ಭೂತ ಬಂದಿತ್ತು......

ಪಪ್ಪ ಬೆಳಿಗ್ಗೆಯಿಂದ ಏನೂ ತಿಂದಿರಲಿಲ್ಲ. ಅಮ್ಮ ಅಳುತ್ತಾ ಇದ್ದಾರೆ. ಅಮ್ಮಮ್ಮನೂ ಅಳುತ್ತಾ ಇದ್ದಾರೆ.

ಆದರೆ ಒಂದು ವಿಚಿತ್ರ ಸಂಗತಿ ಎಂದರೆ, ನನ್ನ ತಲೆಮೇಲೆ ಮತ್ತು ಮುಖದ ಮೇಲೆ ಕೈಯಿಟ್ಟ ಹಾಗೆ ಅಮ್ಮನ ತಲೆ ಮತ್ತು ಮುಖದ ಮೇಲೆ ಕೈ ಇಟ್ಟಿರಲಿಲ್ಲ. ಬೆಳಿಗ್ಗೆ ಎದ್ದಾಗಷ್ಟೆ, ಅವರಿಗೆ ತನ್ನ ಕೂದಲಿನಲ್ಲಿ ಸ್ವಲ್ಪ ಕೂದಲು ಕತ್ತರಿಸಲಾಗಿದೆ ಎಂದು ಗೊತ್ತಾದದ್ದು.

ನನ್ನ ಕೂದಲನ್ನು ಅದು ಎಂದೂ ಕತ್ತರಿಸಿರಲಿಲ್ಲ. ಅಮ್ಮಮ್ಮ ಅಳುತ್ತಳುತ್ತಲೇ "ಭೂತ ಗೋತಾ" ಎಂಬ ಮಂತ್ರ ಪಠಿಸುತ್ತಿದ್ದರು.

ಅಮ್ಮಮ್ಮ ಈಗ ಕಾಳಿಮಾತೆಯ ಹೆಸರು ಎತ್ತುತ್ತಿಲ್ಲ. ಮತ್ತೆ ಮತ್ತೆ "ಶಿವಶಂಭೂ ಶಿವಶಂಭೂ" ಅಂತ ಹೇಳುತ್ತಾರೆ. ನಾನು ಕೇಳಿದ್ದಕ್ಕೆ "ಎಲ್ಲ ಭೂತಗಳೂ ಶಿವನ ಗಣದಲ್ಲಿರುತ್ತವೆ. ಶಿವನ ಕೃಪೆಯಾಯಿತೆಂದರೆ ಯಾವ ಭೂತವೂ ಹತ್ತಿರ ಸುಳಿಯಲ್ಲ" ಎಂದರು.

ಅಮ್ಮಮ್ಮ ಅಪ್ಪನ ಹತ್ತಿರ–"ಹೋಗಿ, ಶಿವದೇವಸ್ಥಾನದಲ್ಲಿ ಭಂಗಿಸೊಪ್ಪಿನ ಸೇವೆಮಾಡಿಸಿ" ಎಂದು ಕೇಳಿಕೊಳ್ಳುತ್ತ ಇದ್ದಾರೆ.

ಅಪ್ಪ ಹಣೆಯ ಮೇಲೆ ಕೈ ಇಟ್ಟುಕೊಂಡು ಕೂತುಬಿಟ್ಟಿದ್ದಾರೆ. ಏಳುತ್ತಾ ಇಲ್ಲ. ಆಫೀಸಿಗೆ ಹೋಗುವ ಹೊತ್ತಾಯಿತು ಆದರೂ ಏಳುತ್ತಾ ಇಲ್ಲ.

"ಉರ್ಮಿ ಹೇಳುತ್ತಾ ಇದ್ದದ್ದು ನಿಜವೇ. ಇದುವರೆತನಕ ಹುಡುಗಿ ಬದುಕಿದ್ದಾಳಲ್ಲ, ಅದಕ್ಕೆ ದೇವರಿಗೆ ಧನ್ಯವಾದ ಹೇಳು."

ಅಮ್ಮ ಅಳುತ್ತಾನೇ ಇದ್ದಾರೆ. ಪಪ್ಪನನ್ನು ಹಿಡಿದುಕೊಂಡು ಅಲ್ಲಾಡಿಸುತ್ತಾಳೆ–"ಈ ದೊಡ್ಡಮನೆಯಲ್ಲಿ ಯಾವುದೋ ಪ್ರೇತ ಇದೆ. ಮುಂಚೆ ಹುಡುಗಿಯ ಬೆನ್ನುಹತ್ತಿತ್ತು. ಈಗ–ಈಗ– ಯಾರ ಮುಖವನ್ನು ಇನ್ನೂ ನೋಡಿಯೇ ಇಲ್ಲವೋ ಅದರ........."

ಪಪ್ಪ ಜೇಬಿನಿಂದ ಕರ್ಚೀಫ್ ತೆಗೆದುಕೊಂಡು ಕಣ್ಣುಗಳ ಮೇಲೆಯೇ ಇಟ್ಟುಕೊಂಡುಬಿಟ್ಟಿದ್ದಾರೆ.

"ಆ ದೇವರಮೇಲೆ ಆಣೆ, ಈ ಬಂಗಲೆಯನ್ನು ಮಾರಿಬಿಡಿ. ನನಗೆ ಈ ಭವ್ಯಬಂಗಲೆಗಳು ಬೇಕಿಲ್ಲ. ಒಂದು ಹುಲ್ಲಿನ ಗುಡಿಸಿಲು ಹಾಕಿಸಿಕೊಡಿ ಸಾಕು" ಎಂದು ಅಮ್ಮ ಪಪ್ಪನ ಕೈಹಿಡಿದು ಎಳೆಯುತ್ತ ಹೇಳುತ್ತಿದ್ದರು.

ಪಪ್ಪ ಅಳುತ್ತಾ ಇದ್ದರು. ಅವರ ಕಣ್ಣುಗಳ ಮೇಲಿದ್ದ ಕರ್ಚೀಫು ಕೆಳಗೆ ಬಿತ್ತು. ಪಪ್ಪ ಕರ್ಚೀಫು ಎತ್ತಿಕೊಂಡು ಮತ್ತೆ ಕಣ್ಣುಗಳ ಮೇಲೆ ಹಾಕಿಕೊಳ್ಳಲಿಲ್ಲ. ನಾನು ಮೊದಲ ಬಾರಿಗೆ ಪಪ್ಪ ಅಳುತ್ತ ಇರುವುದನ್ನು ನೋಡಿದೆ.

ಅಮ್ಮಮ್ಮ ಈ ದಿನ ಬೆಳಿಗ್ಗೆ ಹೊತ್ತಿನಲ್ಲೇ ಗುಗ್ಗುಳ ಹಚ್ಚುತ್ತ ಇದ್ದಾರೆ. ಮಂತ್ರ ಪಠಿಸುತ್ತಾ ಇದ್ದಾರೆ.

ಪಪ್ಪನಿಗೆ ಇದ್ದಕ್ಕಿದ್ದಹಾಗೆ ಅದೇನಾಯಿತೋ ಗೊತ್ತಾಗುತ್ತ ಇಲ್ಲ. ಕೊಠಡಿಯಿಂದ ಎದ್ದು ಹೊರಕ್ಕೆ ಬಂದುಬಿಟ್ಟಿದ್ದಾರೆ. ಅವರ ಕಣ್ಣುಗಳು ತೀರಾ ಕೆಂಪಾಗಿವೆ. ಆದರೆ ಅಳುವಿನಿಂದ ಕೆಂಪಾಗಿವೆ ಎಂದು ಅನ್ನಿಸುತ್ತಿಲ್ಲ. ಭಾರೀ ಕೋಪಬಂದರೆ ಹೇಗೋ ಹಾಗೆ ಕೆಂಪಾಗಿಬಿಟ್ಟಿವೆ.

ಆದರೆ ಪಪ್ಪನಿಗೆ ಸಿಟ್ಟು ಬಂದಿರುವುದು ಏಕೆ ಎಂದು ಗೊತ್ತಾಗುತ್ತಿಲ್ಲ. ಮನುಷ್ಯರ ಸಿಟ್ಟು ಭೂತಗಳನ್ನು ಏನೂ ಮಾಡಲು ಸಾಧ್ಯವಿಲ್ಲ ಎಂದು ಅಮ್ಮಮ್ಮ ಹೇಳುತ್ತಿದ್ದರು.

ಭೂತಗಳನ್ನು ಓಡಿಸುವುದಾದರೆ ಅವುಗಳನ್ನು ಪ್ರಸನ್ನಗೊಳಿಸಿ ಓಡಿಸಬೇಕು.

ಪಪ್ಪ ದಯಾಲಿಗೆ ಚಹಾ ಮಾಡಲು ಹೇಳಿದ್ದಾರೆ. ಅಮ್ಮನಿಗೂ ಅಮ್ಮಮ್ಮನಿಗೂ "ಎದ್ದು ಚಹಾ ಕುಡಿಯಿರಿ" ಎಂದು ಅಪ್ಪಣೆಮಾಡುವ ಹಾಗೆ ಹೇಳಿದರು.

ಅಮ್ಮಮ್ಮ ಪಪ್ಪ ಹೇಳಿದ್ದನ್ನು ಯಾವತ್ತೂ ಮೀರಲ್ಲ. ಅಳುತ್ತಳುತ್ತಲೇ ಚಹಾ ಕುಡಿಯತೊಡಗಿದರು. ಪಪ್ಪ ಒಂದು ಪರೋಟಾದ ಮೇಲೆ ಬೆಣ್ಣೆಹಾಕಿ ಅಮ್ಮನ ಮುಂದೆ ಇಟ್ಟರು. ಅಮ್ಮ ಅದು ಬೇಡ ಎಂದು ಹೇಳಲಾರರು. ತಿನ್ನಲಾರಂಭಿಸಿದರು. ಪಪ್ಪ ಹಾಲಿನ ಲೋಟ ತುಂಬಿಸಿ ನನ್ನ ಕೈಗೆ ಹಿಡಿದುಕೊಳ್ಳಲು ಕೊಟ್ಟಿದ್ದಾರೆ. ಅಮ್ಮಮ್ಮನಿಗೆ ಚಹಾ ಕುಡಿಯಲು ಹೇಳುತ್ತಿದ್ದಾರೆ.

ಅಮ್ಮಮ್ಮ ಚಹಾದ ಲೋಟವನ್ನು ಮುಂದಿಟ್ಟುಕೊಂಡಿದ್ದಾರೆ. ಒಂದು ಗುಟುಕು ನುಂಗುತ್ತ–"ಇದು ನನ್ನ ಗಂಟಲಿನಲ್ಲಿ ಇಳಿಯುವುದಿಲ್ಲ. ಭವಿಷ್ಯತ್ತಿನಲ್ಲಿ ಏನಾಗುತ್ತೋ ಗೊತ್ತಿಲ್ಲಪ್ಪ." ಎಂದರು.

ಬಹುಶಃ ನಮ್ಮ ಪುಟ್ಟಮರಿ ಈಗ ಬರಲ್ಲ ಅಂತ ಅನ್ನಿಸುತ್ತೆ. ಪಪ್ಪನನ್ನು ಕೇಳಬೇಕಂತಿದ್ದೀನಿ. ಆದರೆ ಪಪ್ಪನನ್ನು ನೋಡಿದರೆ ಈ ಹೊತ್ತಿನಿಂದ ಭಯವಾಗುತ್ತ ಇದೆ.

ಇಂದು ಪಪ್ಪ ಆಫೀಸಿಗೆ ಹೋಗಲ್ಲ ಅಂತ ಅನ್ನಿಸುತ್ತೆ. ಆದರೆ ಅವರು ಚಹಾ ಕುಡಿದು ಹೊರಟುಹೋಗಿದ್ದರು. ಅಮ್ಮ ಮತ್ತೆ ಚಿಕ್ಕ ಮಂಚದಮೇಲೆ ಮೇಲೆ ಮಲಗಿದ್ದರು.

ಅಮ್ಮಮ್ಮನನ್ನು ನೋಡಿದರು. ಈ ಹೊತ್ತು ಭಯ ಅನ್ನಿಸುತ್ತ ಇದೆ. ಆದರೆ ಪಪ್ಪನನ್ನು ಕಂಡರೆ ಆಗುವಷ್ಟು ಅಲ್ಲ. ಮೆಲ್ಲಗೆ ಕೇಳುತ್ತೇನೆ–"ಅಮ್ಮಮ್ಮ ನಮ್ಮ ಪುಟ್ಟಮರಿ ಬರುತ್ತೋ ಇಲ್ಲವೋ?"

ಅಮ್ಮಮ್ಮನಿಗೆ ಏನಾಗಿದೆ ಅಂತ ಗೊತ್ತಾಗುತ್ತಿಲ್ಲ. ಎರಡೂ ಕೈಗಳನ್ನು ಮೇಲಕ್ಕೆ ಎತ್ತಿಕೊಂಡಿರುತ್ತಾರೆ ಮತ್ತು ಅಳುತ್ತಾ ಇರುತ್ತಾರೆ.

ಅಮ್ಮಮ್ಮ ಮನೆಗೆ ಬಂದಾಗಿನಿಂದಲೂ ಅವರೇ ನನ್ನ ತಲೆ ಬಾಚುತ್ತಾರೆ.ಆದರೆ ಈಹೊತ್ತು ಮಧ್ಯಾಹ್ನ ಆಗಿಬಿಟ್ಟಿದೆ. ಅಮ್ಮಮ್ಮ ಇದುವರೆಗೂ ನನ್ನ ಕೂದಲು ಒಪ್ಪಮಾಡಿಲ್ಲ. ಮಧ್ಯಾಹ್ನ ಅಮ್ಮ ನನ್ನನ್ನು ಒಳಕ್ಕೆ ಕರೆದು ತಾನೇ ಸ್ವತಃ ನನ್ನ ತಲೆಬಾಚುತ್ತ–"ನಿಜವಾಗಿಯೂ ನೀನು ಯಾವಾಗಲಾದರೂ ಭೂತವನ್ನು ನೋಡಿದ್ದೀಯಾ, ಇಲ್ಲ ಹೀಗೇ ಇಂಥದ್ದು ಯಾವುದಾದರೂ ಕನಸು ಕಂಡು ನೀನು ಹೆದರಿಕೊಳ್ಳುತ್ತಾ ಇದ್ದೆಯಾ?" ಎಂದು ಕೇಳಿದರು.

ಅದು ಕಣ್ಣಿಗೆ ಕಾಣಿಸಲ್ಲ. ಆದರೆ ನನ್ನಮೇಲೆ ಕೈಹಾಕುತ್ತೆ...... ಈ ಮಾತನ್ನು ನಾನು ಈ ಮೊದಲು ಎಷ್ಟೋ ಸಲ ಹೇಳಿದ್ದೆ. ಈಗಲೂ ಮತ್ತೆ ಅದನ್ನೇ ಹೇಳಿದೆ. ಆಮೇಲೆ ನಾನು ಸುಮ್ಮನಾಗಿಬಿಟ್ಟೆ. ಪಪ್ಪ ಹೋಗುವಾಗ ನನ್ನನ್ನು ಆಚೆಗೆ ಕರೆದು–"ಈಹೊತ್ತು ಅಮ್ಮನ ಹತ್ತಿರ ಭೂತದ ವಿಷಯ ಮಾತಾಡಬೇಡ" ಎಂದು ಹೇಳಿಹೋದರು.

ಮಾತಾಡಲ್ಲ. ಆದರೆ ಈಗಂತೂ ನಿಜಕ್ಕು ಭೂತಗಳಿರುತ್ತವೆ ಎಂದು ಅಮ್ಮನಿಗೂ ಗೊತ್ತಾಗಿಬಿಟ್ಟಿದೆ.

ಅಮ್ಮ ಬಹುಶಃ ಮಲಗಿಬಿಟ್ಟಿರಬೇಕು. ಅಮ್ಮಮ್ಮ ಕಣ್ಣುಮುಚ್ಚಿಕೊಂಡು ಮಂತ್ರಪಠಣೆ ಮಾಡುತ್ತಿದ್ದಾರೆ. ಪಪ್ಪ ಆಫೀಸಿನಿಂದ ಇನ್ನೂ ಬಂದಿಲ್ಲ.

ಅನೇಕಸಲ ನನಗೆ ಭಯವಾಗುತ್ತೆ. ವಿಪರೀತ ಹಸಿವಾಗುತ್ತೆ. ನಿನ್ನೆ ಅಮ್ಮ ತಿನ್ನಲು ಕೆಮ್ಮಣ್ಣು ಬೇಕು ಅಂತ ಹೇಳುತ್ತಾ ಇದ್ದರು. ಅಮ್ಮಮ್ಮ ಅಜವಾನ ಹಾಕಿದ ಅದೆಷ್ಟೋ ಮಣ್ಣಿನ ಉಂಡೆಗಳನ್ನು ಹುರಿದಿಟ್ಟಿದ್ದರು. ಬಹಳ ರುಚಿಕರವಾದವು. ಆದರೆ ಅದೆಲ್ಲಿಟ್ಟಿತ್ತೋ ಪತ್ತೆಯಿಲ್ಲ. ಚಿಕ್ಕಮ್ಮನ ಹತ್ತಿರ ಯಾವಾಗಲೂ ಮಿಠಾಯಿ ಇರುತ್ತೆ. ಕೇಳಬೇಕಾದ್ದೇ ಇಲ್ಲ.ಸ್ವತಃ ತಾನೇ ಕೊಟ್ಟುಬಿಡುತ್ತಾರೆ.

ಚಿಕ್ಕಮ್ಮನ ಕೊಠಡಿಗೆ ಹೋದೆ. ಕೊಠಡಿ ತೆರೆದೇ ಇತ್ತು.ಆದರೆ ಚಿಕ್ಕಮ್ಮ ನಿದ್ದೆಮಾಡುತ್ತಿದ್ದರು. ಮಿಠಾಯಿ ಎಲ್ಲಿ ಇಟ್ಟಿರುತ್ತೆ ಅಂತ ನನಗೆ ಗೊತ್ತಿತ್ತು. ಅಲಮಾರಿನೊಳಗೆ ಕೈಹಾಕುತ್ತಾ ಇದ್ದೆ. ಅಷ್ಟರಲ್ಲಿ ಚಿಕ್ಕಿಗೆ ಎಚ್ಚರವಾಗಿಬಿಟ್ಟಿತು. ನಾನು ಜೋರಾಗಿ ಚೀರಿದೆ.

ಚಿಕ್ಕಮ್ಮನ ಮುಖದ ಶ್ಯಾಮಲವರ್ಣ ಇನ್ನಷ್ಟು ಗಾಢವಾಯಿತು. ನಾನು ಕೊಠಡಿಯಿಂದ ಹೊರಕ್ಕೆ ಓಡಿಬಂದೆ. ಚಿಕ್ಕಮ್ಮ ಕರೆದರು. ಆದರೆ ನಾನು ನಿಲ್ಲಲಿಲ್ಲ. ಓಡುತ್ತಲೇ ಹೋದೆ. ಅಮ್ಮಮ್ಮನ ಹತ್ತಿರಕ್ಕಾಗಲಿ ಅಮ್ಮನ ಹತ್ತಿರಕ್ಕಾಗಲಿ ನಾನು ಹೋಗಲಿಲ್ಲ. ಹೊರಗಿನ ಬಾಗಿಲ ಹತ್ತಿರಕ್ಕೆ ಹೋಗಿಬಿಟ್ಟೆ.

ಪಪ್ಪ ಬಂದಹೊತ್ತಿನಲ್ಲಿ ನಾನು ಹೊರಬಾಗಿಲ ಹತ್ತಿರ ಅಳುತ್ತಾ ನಿಂತಿದ್ದೆ.

ಅಮ್ಮನಿಗೆ ಏನೋ ಆಗಿದೆ ಎಂದು ಬಹುಶಃ ಅಪ್ಪನಿಗೆ ಅನ್ನಿಸಿರಬೇಕು. ಅವರು ಕೂಡಲೇ–"ನೀನು ಯಾಕೆ ಅಳುತ್ತಿದ್ದೀ? ಅಮ್ಮನಿಗೆ ಕಾಯಿಲೆ ಜಾಸ್ತಿ ಆಗಿದೆಯೇನು" ಎಂದು ಕೇಳಿದರು.

"ಇಲ್ಲ."

ಆದರೆ ಪಪ್ಪನನ್ನು ನೋಡಿ ಇನ್ನಷ್ಟು ಅಳು ಬಂದುಬಿಟ್ಟಿತು. "ನನಗೆ ಹೆದರಿಕೆ ಆಗುತ್ತೆ. ನಾನು ಒಳಗಡೆ ಹೋಗಲ್ಲ" ಎಂದೆ. ಪಪ್ಪ ನನ್ನ ತೋಳುಹಿಡಿದುಕೊಂಡು ನನ್ನನ್ನು ಒಳಕ್ಕೆ ಕರೆದೊಯ್ಯತೊಡಗಿದರು. ಆದರೆ ಕಾಲುಗಳು ನಡುಗುತ್ತಿದ್ದುವು. ಪಪ್ಪಾ ಒಳಗಡೆ ಭೂತ ಇದೆ. ಒಳಕ್ಕೆ ಹೋಗಬೇಡಿ. ಅಮ್ಮಮ್ಮನನ್ನು ಹೊರಕ್ಕೆ ಕರೀರಿ" ಎಂದುಹೇಳಿ ಪಪ್ಪನ ತೋಳುಗಳನ್ನು ಬಹಳ ಜೋರಾಗಿ ಜಗ್ಗಿದೆ. ಪಪ್ಪ ಎದ್ದುನಿಂತರು.

"ನಿಜಹೇಳು. ಏನಾಗಿದೆ?" ಪಪ್ಪ ಎದ್ದುನಿಂತು ಕೇಳಿದರು. "ಈ ಹೊತ್ತು ಚಿಕ್ಕಿಯ ಕೋಣೆಯಲ್ಲಿ ಭೂತ ಬಂದಿತ್ತು. ಅದು ಚಿಕ್ಕಿಯ ಮುಖದ ಬಣ್ಣವನ್ನು ನೀಲಿಮಾಡಿಬಿಟ್ಟಿದೆ ಪಪ್ಪ." ನಾನು ಬಹಳ ಹೆದರಿಬಿಟ್ಟಿದ್ದೆ. ಚಿಕ್ಕಿಯ ಮುಖ ಕಣ್ಣೆದುರು ಕಾಣುತ್ತಿತ್ತು.

ಪಪ್ಪ ನನ್ನನ್ನು ಬಲವಂತವಾಗಿ ಒಳಕ್ಕೆ ಕರೆದುಕೊಂಡುಹೋಗಿಬಿಡುತ್ತಾರೆನೋ ಎಂದು ಆತಂಕವಾಗಿಬಿಟ್ಟಿತ್ತು. ಅವರು ಬಹಳಹೊತ್ತು ನಿಂತಿದ್ದರು. ಆದರೆ ಅವರು ಏನೂ ಹೇಳಲಿಲ್ಲ. ಆಮೇಲೆ–"ಹಿಂದುಗಡೆ ಇರುವ ಮರಗಳ ಹತ್ತಿರ ಹೋಗಕೂಡದು ಅಂತ ನಿನಗೆ ಹೇಳಿದ್ದೆ. ನೀನು ಅಲ್ಲಿ ಏನುಮಾಡುವುದಕ್ಕೆ ಹೋಗಿದ್ದೆ?" ಎಂದು ಕೇಳಿದರು.

"ಪಪ್ಪ ಕತ್ತಲೆಯಲ್ಲಿ ಹೋಗಿರಲಿಲ್ಲ. ಈಗತಾನೆ ಹೋಗಿದ್ದೆ. ಆದರೆ ಭೂತ–ಗೀತ ಅಂತ ಏನೂ ಇರಲ್ಲ ಅಂತ ನೀವು ಹೇಳುತ್ತಾ ಇದ್ದಿರಲ್ಲ." ನಾನು ಹಾಗೆ ಹೇಳಿದಾಗ ಪಪ್ಪ ಏನೂ ಮಾತಾಡಲಿಲ್ಲ.

ಭೂತಗಳು ನಿಜಕ್ಕೂ ಇರುತ್ತವೆ ಎಂದು ಪಪ್ಪನಿಗೂ ಬಹುಶಃ ಮನವರಿಕೆ ಆಗಿರಬೇಕು.

"ನೀನು ಅಮ್ಮನಿಗೆ ಹೇಳಿದೆಯಾ?" ಪಪ್ಪ ಕೇಳಿದರು. "ಇಲ್ಲ, ನಾನು ಒಳಕ್ಕೆ ಹೋಗಿಲ್ಲ. ನನಗೆ ಆ ಕೋಣೆ ಕಂಡರೂ ಭಯವಾಗುತ್ತೆ."

ಪಪ್ಪ ಸುಮ್ಮನಾಗಿಬಿಟ್ಟರು.

ಪಪ್ಪ ಸಿಟ್ಟಾಗಬಹುದು ಎಂದು ನನಗೆ ಭಯವಿತ್ತು. ಆದರೆ ಅವರು ಸಿಟ್ಟಾಗಲಿಲ್ಲ. "ನೀನು ನನ್ನ ಬಹಳ ಧೈರ್ಯಶಾಲಿ ಮಗಳಲ್ಲವೆ?"

"ಹೌದು ಪಪ್ಪ".

"ನಮ್ಮ ಮನೆಗೆ ತುಂಬ ಮುದ್ದಾದ ಒಬ್ಬ ಪುಟ್ಟ ಬರುತ್ತಾನೆ ಅಂತ ನಿನಗೆ ಗೊತ್ತಿದೆ ತಾನೆ?"

"ಹೌದು".

"ಪುಟ್ಟ ಬರುವ ಸಮಯದಲ್ಲಿ ಯಾರೇ ಆದರೂ ಒಳ್ಳೊಳ್ಳೆ ಮಾತಾಡುತ್ತಿರಬೇಕು. ಹೆದರಿಕೊಳ್ಳಕೂಡದು".

"ಆದರೆ ಅಮ್ಮ ಬೆಳಿಗ್ಗೆ ಅಳುತ್ತಾ ಇದ್ದರು. ರಾತ್ರಿ ಅವರ ಕೋಣೆಯಲ್ಲಿ ಭೂತ ಬಂದಿತ್ತು."

"ಇನ್ನು ಬರೋದಿಲ್ಲ."

"ನನ್ನ ಕೋಣೆಗೂ ಬರೋದಿಲ್ಲವೆ?"

"ಇಲ್ಲ, ಇನ್ನು ಬರುವುದಿಲ್ಲ."

"ಆದರೆ ಇವತ್ತು ಚಿಕ್ಕಮ್ಮನ ಕೋಣೆಗೆ ಬಂದಿತ್ತು."

"ಇನ್ನು ಯಾವತ್ತೂ ಬರಲ್ಲ."

"ಪಪ್ಪ ನೀವು ಇವತ್ತು ಈಶ್ವರನ ದೇವಸ್ಥಾನಕ್ಕೆ ಹೋಗಿದ್ದಿರಿ ಅಂತ ಅಮ್ಮ ಬೆಳಿಗ್ಗೆ ಹೇಳಿದ್ದರು."

ಪಪ್ಪ ಸುಮ್ಮನಾದರು. ಆಮೇಲೆ "ಹೌದು" ಎಂದರು. ನನ್ನ ಭಯ ಸ್ವಲ್ಪಮಟ್ಟಿಗೆ ಕಡಿಮೆ ಆಯಿತು. ಆದರೆ ಇನ್ನೊಂದುಸಲ ಪಪ್ಪನನ್ನು ಕೇಳಿದೆ–"ಈಗ ಖಂಡಿತ ಭೂತ ಬರಲ್ವೆ?" "ಇಲ್ಲ" ಹಾಗೆಂದು ಪಪ್ಪ ನನಗೆ ಭರವಸೆಕೊಟ್ಟರು.

"ಬೆಳಿಗ್ಗೆ ಅಮ್ಮಮ್ಮ ಅಳುತ್ತಾ ಇದ್ದರು. ನಮ್ಮ ಪುಟ್ಟ ಬರುವುದಿಲ್ಲವೇನೋ ಅಂತ ಹೆದರಿಕೆ ಆಗಿಬಿಟ್ಟಿತ್ತು."

"ಬರುತ್ತೆ, ನನ್ನ ಹತ್ತಿರ ನೀನು ಒಂದು ಪ್ರಾಮಿಸ್ ಮಾಡುವುದಾದರೆ"–ಎಂದು ನಿಲ್ಲಿಸಿ ಮತ್ತೆ ಮುಂದುವರಿದು–"ನಾನು ಬೆಳಿಗ್ಗೆ ಕೂಡ ಅಮ್ಮನ ಹತ್ತಿರ ನೀನು

ಭೂತದ ವಿಚಾರ ಮಾತಾಡಕೂಡದು ಅಂತ ಹೇಳಿದ್ದೆ. ಇನ್ನು ಮುಂದೆ ಯಾವತ್ತೂ ಕೂಡ ಅಮ್ಮನ ಹತ್ತಿರ ಭೂತದ ವಿಷಯ ಮಾತಾಡಲ್ಲ ಅಂತ ಪ್ರಾಮಿಸ್ ಮಾಡು."

"ಮಧ್ಯಾಹ್ನ ಅಮ್ಮ ನನ್ನ ತಲೆ ಬಾಚಿದ್ದರು. ಆದರೆ ಆಗ ಅವರೇ ನನ್ನ ಹತ್ತಿರ ಭೂತಗಳ ಬಗ್ಗೆ ಕೇಳಿದ್ದರು." ಎಂದು ಪಪ್ಪನಿಗೆ ಹೇಳಿದೆ.

ಆದರೆ ಪಪ್ಪ–"ಆಯಿತು. ಇನ್ನು ಮೇಲೆ ಮಾತಾಡಬೇಡ. ಅವಳೇ ಕೇಳಿದರೂ ಅದರ ವಿಷಯ ಮಾತಾಡಬೇಡ. ಈ ಹೊತ್ತು ಚಿಕ್ಕಮ್ಮನ ವಿಷಯಕೂಡ ಹೇಳಬೇಡ. ಇನ್ನು ಮೇಲೆ ನೀನು ಭೂತದ ವಿಷಯ ಮಾತಾಡಿದೆ ಅಂದರೆ ನಮ್ಮ ಪುಟ್ಟ ಬರಲ್ಲ."

ಇಲ್ಲ ಮಾತಾಡಲ್ಲ ಎಂದು ಅಪ್ಪನಿಗೆ ಮಾತುಕೊಟ್ಟೆ.

6

ಪಪ್ಪ ಹೇಳಿದ್ದು ಸರಿಯಾಗೇ ಇತ್ತು. ಈಗಾಗಲೇ ಬಹಳ ದಿನಗಳಿಂದ ಭೂತ ಬರುತ್ತಾ ಇಲ್ಲ. ಅಮ್ಮಮ್ಮ ಈದಿನ ಊರಿಗೆ ಹೋಗಬೇಕಾಗಿದೆ.. ಅವರಿಗೆ ಊರಿಂದ ಮಾವನ ಕಾಗದ ಬಂದಿದೆ. ಅಮ್ಮ ಒಬ್ಬರೇ ಆಗಿಬಿಡುತ್ತಾರೆ ಅಂತ ಅಮ್ಮಮ್ಮನಿಗೆ ಹೆದರಿಕೆ ಶುರುವಾಗಿಬಿಡುತ್ತೆ.

ಆದರೆ ಈಗ ನನಗೆ ಭಯ ಆಗಲ್ಲ. ಊರಿಂದ ಅಜ್ಜಿಯನ್ನು ಕರೆಸಿ ಎಂದು ಪಪ್ಪನಿಗೆ ಅಮ್ಮಮ್ಮ ಹೇಳುತ್ತಾ ಇದ್ದರು. ಪಪ್ಪ ಆಗಲ್ಲ ಎಂದು ಹೇಳಿದ್ದು ಒಳ್ಳೆಯದೇ ಆಯಿತು. ಅಜ್ಜಿ ನನಗೆ ಹಿಡಿಸುತ್ತಿರಲಿಲ್ಲ. ಅಜ್ಜಿ ಇಲ್ಲೇ ಅಮ್ಮನ ಜೊತೆಯಲ್ಲೇ ಇರುತ್ತಾ ಇದ್ದರು ಎಂದು ಅಮ್ಮ ಹೇಳಿದ್ದರು. ನಾನು ಹುಟ್ಟಿದಾಗ, ಅಮ್ಮ ಹೆಣ್ಣು ಯಾಕೆ ಹೆರಬೇಕಿತ್ತು ಗಂಡು ಮಗುವನ್ನು ಯಾಕೆ ಹೆರಲಿಲ್ಲ ಎಂದು ಅಜ್ಜಿಗೆ ಅಮ್ಮನಮೇಲೆ ಸಿಟ್ಟು ಬಂದುಬಿಟ್ಟಿತ್ತು. ಹಾಗಾಗಿ ಕೋಪಮಾಡಿಕೊಂಡು ಹಳ್ಳಿಗೆ ಹೋಗಿಬಿಟ್ಟಿದ್ದರಂತೆ.

ಹೆಣ್ಣುಮಗು ಹುಟ್ಟಿದರೆ ಅಜ್ಜಿ ಯಾಕೆ ಸಿಟ್ಟುಮಾಡಿಕೊಳ್ಳಬೇಕು? ಮುದುಕಿಯರು ಅಂದರೆ ಹೀಗೇನೇ ಎಂದು ಅಮ್ಮ ಹೇಳುತ್ತಿದ್ದರು. ಆದರೆ ಅಮ್ಮಮ್ಮನೂ ಮುದುಕಿನೇ ತಾನೆ? ಆದರೆ ಅವರಿಗೇನೂ ಅಮ್ಮನ ಮೇಲೆ ಸಿಟ್ಟಿಲ್ಲ.....

ದೇವರೇ! ಭಗವಂತಾ! ಅಜ್ಜಿ ಯಾವತ್ತೂ ಇಲ್ಲಿಗೆ ಬರುವುದು ಬೇಡಪ್ಪಾ.

ಆದರೆ ಈಗ ಪುಟ್ಟ ಬಂದಾಗ, ಸಿಟ್ಟುಮಾಡಿಕೊಂಡಿರುವ ಅಜ್ಜಿ, ಸಮಾಧಾನ ಮಾಡಿಕೊಂಡು ಇಲ್ಲಿಗೆ ಬಂದುಬಿಡುತ್ತಾರೆ ಅಂತ ಅದುಹೇಗೆ ಗೊತ್ತು?......ಅಮ್ಮ ಈಗಲೂ ಗಂಡು ಮಗುವನ್ನು ಯಾಕೆ ಹೆರಬೇಕು? ಹೆಣ್ಣು ಮಗುವನ್ನು ಯಾಕೆ ಹೆರಬಾರದು? ಹಾಗಾದರೆ ಅಜ್ಜಿ ಇಲ್ಲಿಗೆ ಯಾವತ್ತೂ ಬರುವುದೇ ಇಲ್ಲವೆ?......

ಹೋದ ವರ್ಷ ಒಂದು ದಿನ ಬಂದಿದ್ದರು. ತೀರ್ಥಯಾತ್ರೆಗೆ ಹೊರಟಿದ್ದರಲ್ಲ, ಮಾರ್ಗಮಧ್ಯದಲ್ಲಿ ಇಲ್ಲಿಗೆ ಬಂದಿದ್ದರು. ಬರುತ್ತಿದ್ದ ಹಾಗೇ ಜಗಳ ಶುರುಮಾಡಿದರು. ಅಮ್ಮಮ್ಮ ಬರುತ್ತಿದ್ದ ಹಾಗೇ ನನ್ನನ್ನು ಮುದ್ದು ಮಾಡುವುದಕ್ಕೆ ಶುರುಮಾಡುತ್ತಾರೆ. ಆದರೆ ಅಜ್ಜಿಯಂತೂ ನನ್ನನ್ನು ಹತ್ತಿರ ಕರೆಯುವುದು ಸಹಿತ ಇಲ್ಲ.

ಅಮ್ಮ ಅವರಿಗೆ ರೊಟ್ಟಿಮಾಡಿ ತಟ್ಟೆಯಲ್ಲಿಟ್ಟುಕೊಟ್ಟಿದ್ದರು. ಅವರು ಲೋಟದಿಂದ ನೀರು ತೆಗೆದುಕೊಂಡು ತಟ್ಟೆಯ ಮೇಲೆಲ್ಲಾ ಚಿಮುಕಿಸಿ ಆಮೇಲೆ ರೊಟ್ಟಿ ತಿನ್ನತೊಡಗಿದ್ದರು......ಅದು ಪುಣ್ಯತೀರ್ಥಗಳ ಜಲ, ಗಂಗಾಜಲ. ಅದರಿಂದ ಅವರು ನಮ್ಮ ಮನೆಯನ್ನು ಪವಿತ್ರಗೊಳಿಸಿದ್ದರು ಎಂದು ಅಮ್ಮ ಹೇಳಿದ್ದರು. ನೀರಿನ ಲೋಟವನ್ನು ಅವರು ಮಂಚದಮೇಲೆ ಕಂಬಗಳ ಮಧ್ಯೆ ಇಟ್ಟಿದ್ದರು. ನಾನು ಅದನ್ನು ಸರಿಯಗಿ ಇರಿಸದೆ ಹೋಗಿದ್ದರೆ ಅದು ಮಂಚದ ಮೇಲಿಂದ ಬಿದ್ದುಬಿಡುತ್ತಿತ್ತು. ನಾನು ಲೋಟಕ್ಕೆ ಕೈಹಾಕಿದಕೂಡಲೇ ಅಜ್ಜಿಯು ರೊಟ್ಟಿ ಇದ್ದ ತಟ್ಟೆಯನ್ನು ಕೆಳಕ್ಕೆ ಕೆಡವಿಬಿಟ್ಟರು.

'ರಾಕ್ಷಸಿ' ಎಂದು ಜೋರಾಗಿ ಕಿರುಚುತ್ತ ಮಂಚದ ಪಕ್ಕದಲ್ಲಿಟ್ಟಿದ್ದ ತಮ್ಮ ಊರುಗೋಲನ್ನು ಕೈಗೆತ್ತಿಕೊಂಡಾಗ, ಅವರೆಲ್ಲಿ ಆ ಊರೆಗೋಲಿನಿಂದ ನನಗೆ ಹೊಡೆದುಬಿಡುತ್ತಾರೋ ಅನ್ನಿಸಿತು. ನಾನು ಪಪ್ಪನ ಬೆನ್ನ ಹಿಂದೆ ಬಚ್ಚಿಟ್ಟುಕೊಂಡುಬಿಟ್ಟಿದ್ದೆ. ಆದರೆ ಅಜ್ಜಿ ಬೈಗಳ ಸುರಿಮಳೆಗರೆಯುತ್ತ ಕೋಲು ಹಿಡಿದುಕೊಂಡು–"ಈ ಮನೆಯಲ್ಲಿ ನಾನು ಅನ್ನ–ನೀರು ಏನೊಂದು ಚೂರೂ ಮುಟ್ಟವುದಿಲ್ಲ. ನೀನು ಈ ಹಾಳು ಚಂಡಾಲಿ ರಾಕ್ಷಸ ಮುಂಡೇದನ್ನು ಇಟ್ಟುಕೋ" ಎಂದು ಹೇಳುತ್ತಿದ್ದರು.

ಅಮ್ಮ ಅಳುತ್ತಿದ್ದರು. ಆದರೆ ಪಪ್ಪನಿಗಂತೂ ಸಿಟ್ಟು ನೆತ್ತಿಗೇರಿತ್ತು. ಪಪ್ಪ ಆ ಕೂಡಲೇ ಹೋಗಿ ಅವರನ್ನು ಊರಿಗೆ ಹೋಗುವ ಬಸ್ಸಿಗೆ ಹತ್ತಿಸಿ ಬಂದರು.

ಆಮೇಲೆ ಅಮ್ಮನನ್ನು ನಾನು –"ಅಜ್ಜಿ ನನ್ನನ್ನು ರಾಕ್ಷಸಿ, ಚಂಡಾಲಿ ಅಂತೆಲ್ಲ ಯಾತಕ್ಕೆ ಕರೆಯುತ್ತಾರೆ?"ಎಂದು ಕೇಳಿದ್ದಕ್ಕೆ ಅಮ್ಮ, "ಅಜ್ಜಿ ಹುಚ್ಚಿ" ಎಂದು ಹೇಳಿದಳು.

ಅಜ್ಜಿಗೆ ನಾನು ಯಾಕೆ ಗಂಡಾಗಿ ಹುಟ್ಟಲಿಲ್ಲ, ಹೆಣ್ಣಾಗಿ ಹುಟ್ಟಿಬಿಟ್ಟೆ ಅಂತ ಸಿಟ್ಟು. ಆದರೆ 'ಚಿಕ್ಕವರಾಗಿದ್ದಾಗ' ಅವರೂ ಹೆಣ್ಣಾಗೇ ತಾನೆ ಇದ್ದದ್ದು.

ಆಮೇಲೆ ಅಮ್ಮಮ್ಮ ಒಂದು ವಿಚಿತ್ರ ಸಂಗತಿಯನ್ನು ತಿಳಿಸಿದ್ದರು. ಅದೇನೆಂದರೆ– ಗಂಡುಮಕ್ಕಳು ಹುಟ್ಟುವುದಕ್ಕೆ ಬಹಳಷ್ಟು ಅದೃಷ್ಟಮಾಡಿರಬೇಕು. ಅಮ್ಮಮ್ಮನಿಗೆ ಐದುಜನ ಅಕ್ಕತಂಗಿಯರು. ಆದರೆ ಅಣ್ಣತಮ್ಮಂದಿರು ಯಾರೂ ಹುಟ್ಟಿರಲಿಲ್ಲ. ಅವರ ಮನೆಯಲ್ಲಿ ತಮ್ಮ ಹುಟ್ಟಿದಾಗಲಂತೂ ಎಲ್ಲ ಅಕ್ಕತಂಗಿಯರೂ ಆ ತಮ್ಮನ ಉಚ್ಚೆ ಕುಡಿದಿದ್ದರು....

ಥೂ ಹೊಲಸು.......ನನಗಂತೂ ಆ ಮಾತು ಕೇಳಿದರೇ ವಾಂತಿ ಬರುತ್ತೆ. ಆದರೆ ಅಮ್ಮಮ್ಮ ಹೀಗಂತ ಹೇಳಿ ನಗುತ್ತಾ ಇದ್ದರು. ನಾನು ಅಮ್ಮಮ್ಮನ ಥರ ಗಲೀಜ್ ಅಲ್ಲ. ಆದರೆ ಅವರು ಅದುಹೇಗೆ ಬೇರೆಯವರ ಮೂತ್ರ ಕುಡಿದಿದ್ದರೋ ಗೊತ್ತಿಲ್ಲ.

ಅಜ್ಜಿ ಯಾವಾಗಲೂ ತಮ್ಮಹತ್ತಿರ ಗಂಗಾಜಲವನ್ನು ಇಟ್ಟುಕೊಂಡಿರುತ್ತಾರೆ. ಗಂಗಾಜಲ ಪವಿತ್ರವಾದ್ದು. ಆದರೆ ಅಜ್ಜಿ ನನಗೆ ಹಿಡಿಸುವುದಿಲ್ಲ. ಅಮ್ಮಮ್ಮ ನನಗೆ ತುಂಬ ಹಿಡಿಸುತ್ತಾರೆ. ಅಮ್ಮ ಈ ಹೊತ್ತು ನನ್ನದೊಂದು ಹಳೆಯ ಕುರ್ತಾ ತೆಗೆದುಕೊಂಡು ಪುಟ್ಟನಿಗೊಂದು ಚಿಕ್ಕ ಕುರ್ತಾ ಸಿದ್ಧಪಡಿಸುತ್ತಿಸುತ್ತಿದ್ದರು. ಪುಟ್ಟನಿಗೆ ಜರಿ ಅಂಚಿನ, ತುಂಬಾ ಒಳ್ಳೊಳ್ಳೆ ಹೊಸ ಬಟ್ಟೆಗಳನ್ನು ತಾವು ತರುವುದಾಗಿ ಅಮ್ಮಮ್ಮ ಹೇಳಿಹೋಗಿದ್ದರು. ಆದರೆ ಅವರು ಪುಟ್ಟನಿಗೆ ಮೊದಲು ಹೊಸ ಬಟ್ಟೆ ತೊಡಿಸುವುದಿಲ್ಲ ಎಂದು ಅಮ್ಮ ಹೇಳಿದ್ದರು. ಮೊದಲು ಹಳೆಬಟ್ಟೆ ತೊಡಿಸುತ್ತಾರೆ. ಪುಟ್ಟನಿಗೆ ಹಳೆಬಟ್ಟೆ ತೊಡಿಸಿದರೆ ಅವನು ಬದುಕಿರುತ್ತಾನೆ ಅಂತ.......ಆದರೆ ಪುಟ್ಟ ಮರೀನೇ ಹುಟ್ಟುತ್ತಾನೆ ಅಂತ ಅಮ್ಮನಿಗೆ ಅದುಹ್ಯಾಗೆ ಗೊತ್ತು? ಒಂದುವೇಳೆ ನನ್ನ ಹಾಗೆ ಹುಡುಗಿ ಆಗಿಬಿಟ್ಟರೆ?

ಹಕ್ಕೀನೋ ಕಾಗೆನೋ ಹೇಳು ಎಂದು ಪಪ್ಪ ಕೇಳುತ್ತಾ ಇದ್ದಾಗ, ಹಕ್ಕಿ ಅಂದರೆ ಹೆಣ್ಣು, ಕಾಗೆ ಅಂದರೆ ಗಂಡು ಅಂತ ಅಮ್ಮ ಹೇಳಿದ್ದರು.

ನಾನು ಅವರಿಗೆ ಕಾಗೆ ಅಂತ ಹೇಳಿದ್ದರಿಂದ ಅವರಿಗೆ ಹುಟ್ಟುವುದು ಹುಡುಗಿ ಅಲ್ಲ, ಹುಡುಗನೇ ಎಂದು ಗೊತ್ತಾಗಿಬಿಟ್ಟತ್ತು.

ಅಮ್ಮ ಜಿಲೇಬಿ ತಿನ್ನಬೇಕು ಎಂದು ಕೇಳಿದಾಗ, ಅಜ್ಜಿ ಖಂಡಿತಾ ಗಂಡೇ ಹುಟ್ಟುವುದು ಎಂದು ಹೇಳಿದ್ದರು. ಹೊಟ್ಟೆಯಲ್ಲಿ ಹುಡುಗಿ ಇದ್ದರೆ, ಅವಳು ಹಪ್ಪಳ ತಿನ್ನಬೇಕು ಅಂತ ಕೇಳುತ್ತಾಳೆ. ಹುಡುಗರು ಜಿಲೇಬಿ ಕೇಳುತ್ತಾರೆ.

ಆದರೆ ಈಚಿನ ದಿನಗಳಲ್ಲಿ ಅಮ್ಮಂದಿರು ಜಿಲೇಬಿ ತಿನ್ನುವುದಿಲ್ಲ. ಅವರಿಗೆ ಹುಡುಗ ಬೇಕಿದ್ದರೆ ದಿನವೂ ಯಾತಕ್ಕೆ ಜಿಲೇಬಿ ತಿನ್ನಲ್ಲ?

ಅಮ್ಮ ನಿನ್ನೆ ಹಪ್ಪಳ ತಿಂದಿದ್ದರು. ಹುಡುಗೀನೇ ಹುಟ್ಟುತ್ತಾಳೇನೋ ಯಾರಿಗೆ ಗೊತ್ತು? ಹಾಗೆನೋಡಿದರೆ ಹುಡುಗಿ ಆದರೆ ಒಳ್ಳೆಯದೇ. ಆಗ ಅಜ್ಜಿ ಬರುವುದಿಲ್ಲ.

7

ಮನೆಯ ಹಿಂದೆ ಇರುವ ಮರಗಳ ಹತ್ತಿರ ಹೋಗಬೇಡ ಎಂದು ಪಪ್ಪ ಹೇಳಿದ್ದರು. ಚಿಕ್ಕಿಮನೆಗೂ ಹೋಗಬೇಡ ಅಂತ ಹೇಳಿದ್ದರು.

ಆದರೆ ಈಹೊತ್ತು ಚಿಕ್ಕಮ್ಮ ನಮ್ಮ ಮನೆ ಹತ್ತಿರ ಬಂದು, ಸನ್ನೆಮಾಡಿ ನನ್ನನ್ನು ಬಾ

ಎಂದು ಕರೆದಿದ್ದರು. ಇನ್ನೂ ಕತ್ತಲಾಗಿರಲಿಲ್ಲ. ಹಾಗಾಗಿ ನಾನು ಹೋದೆ. ಪಪ್ಪ ಸಿಟ್ಟುಮಾಡಿಕೊಳ್ಳುತ್ತಾರೆನೋ ಎಂದು ಭಯ ಆಗುತ್ತ ಇತ್ತು. ಅಲ್ಲಿ ನಾನು ತುಂಬ ಹೊತ್ತು ಕುಳಿತುಕೊಳ್ಳಲಾಗುವುದಿಲ್ಲ ಎಂದು ಚಿಕ್ಕಿಗೆ ಹೇಳಿಬಿಡುತ್ತೀನಿ.

"ಚಿಕ್ಕಿ ನಿಮಗೆ ತುಂಬಾ ಕಾಯಿಲೆನಾ?" ಚಿಕ್ಕಿ ತುಂಬಾ ತೆಳ್ಳಗಾಗಿಬಿಟ್ಟಿರುವುದು ಕಾಣಿಸುತ್ತಿತ್ತು.

"ಹೌದು ಅದರಿಂದಲೇ ಊರಿಗೆ ಹೋಗುತ್ತಾ ಇದ್ದೀನಿ. ನಿನ್ನನ್ನು ಒಂದು ಸಲ ಭೇಟಿಮಾಡಿಬಿಡೋಣ ಎಂದೇ ಕರೆದೆ."

"ಯಾವಾಗ ಹೋಗುತ್ತೀರಿ?"

"ಗೊತ್ತಿಲ್ಲ."

ನನಗೆ ಗೊತ್ತಾಗಿದೆ. ಭೂತಗಳಿಗೆ ಹೆದರಿಕೊಂಡುಬಿಟ್ಟಿದ್ದೀರಿ"

"ಹೌದಾ? ಇಲ್ಲವಲ್ಲ".......ಚಿಕ್ಕಮ್ಮ ಅಳತೊಡಗಿದರು.

"ಇನ್ನು ಮೇಲೆ ಭೂತ ಬರುವುದಿಲ್ಲ ಅಂತ ಪಪ್ಪ ಹೇಳುತ್ತಾ ಇದ್ದರು."

"ಒಳ್ಳೆಯದಾಯಿತು.........."

"ನಿಮ್ಮ ಕೊಠಡಿಗೆ ಬಂದಿತ್ತೇನು?"

"ಇಲ್ಲ."

"ಅದೇ....... ಒಂದು ಸಲ ನಿಮ್ಮ ಮುಖ ನೀಲಿ ಆಗಿಬಿಟ್ಟಿತ್ತಲ್ಲ ಆಗ"?

"ನೀನು ನೋಡಿದ್ದೆಯಾ? ಅದಕ್ಕೇ ಓಡಿಹೋಗಿದ್ದೆಯಾ?"

"ಹೌದು"

"ಭೂತ ನಿನಗೆ ಏಟು ಕೊಟ್ಟಿತ್ತಾ?"

"ಇಲ್ಲ".

"ಆದರೆ ಅದು ನನಗೆ ಹೊಡೆಯುತ್ತಾ ಇತ್ತು. ಅದು ನಿನ್ನ ತಲೆಕೂದಲನ್ನು ಕತ್ತರಿಸಿತ್ತಲ್ಲವಾ?"

"ಇಲ್ಲ, ಅದು ಅಮ್ಮನ ತಲೆಕೂದಲು ಕತ್ತರಿಸಿತ್ತು. ಆದರೆ ಅಮ್ಮನಿಗೆ ಹೊಡೆದಿರಲಿಲ್ಲ. ನಿಮಗೆ ಯಾಕೆ ಹೊಡೆಯಿತು.?"

"ಗೊತ್ತಿಲ್ಲ."

"ಆಮೇಲೂ ಬಂದಿತ್ತಲ್ಲವಾ?"

"ಇಲ್ಲ."

"ಹಾಗಾದರೆ ಈಗ ಏಕೆ ಹೆದರುತ್ತೀರಿ?"

"ಹೆದರುತ್ತಾ ಇಲ್ಲ."

"ಹಾಗಿದ್ದಮೇಲೆ ಊರಿಗೆ ಯಾಕೆ ಹೋಗುತ್ತಾ ಇದ್ದೀರಿ?"

ಚಿಕ್ಕಮ್ಮ ಮತ್ತೆ ಅಳತೊಡಗಿದರು. ಆದರೆ ಅವರು ನನಗೆ ಮುತ್ತಿಟ್ಟರು. "ಈ ಹೊತ್ತು ಬಾದಾಮ್ ಹಲ್ವ ಮಾಡಿದ್ದೀನಿ. ಸ್ವಲ್ಪ ತಿನ್ನಲ್ಲ" ಎಂದು ಹೇಳಿದರು.

ನನಗೆ ಹಸಿವಿರಲಿಲ್ಲ. ಆದರೆ ಚಿಕ್ಕಿ ನನಗೆ ಹಲವಾ ತಿನ್ನಿಸಿದರು. "ಚಿಕ್ಕಿ ನಮ್ಮ ಪುಟ್ಟ ಬಂದಾಗ ನೀವು ಬರುತ್ತೀರಿ ತಾನೆ?"

"ಇಲ್ಲ........ಗೊತ್ತಿಲ್ಲ........ಹ್ಞೂ".

8

ಈ ಅಜ್ಜಿ ಅದೆಲ್ಲಿಂದ ಬಂದಿಳಿದುಬಿಟ್ಟರು. ಪಪ್ಪ ಕರೆಸಿರಲಿಲ್ಲ. ತನ್ನಷ್ಟಕ್ಕೆ ತಾನೆ ಬಂದುಬಿಟ್ಟರು.

ಅವರು ಯಾತಕ್ಕೆ ಬಂದಿದ್ದಾರೆ, ಏನು ಅಂತ ಅಮ್ಮನೂ ಏನೂ ಹೇಳಲಿಲ್ಲ. ಆದರೆ ಮಂಚದಿಂದ ಎದ್ದು ಅವರ ಕಾಲುಮುಟ್ಟಿ ನಮಸ್ಕಾರಮಾಡಿದರು.

ಅಜ್ಜಿನೂ ಅಮ್ಮಮ್ಮನ ಥರಾನೇ ಒಟ್ಟೊಟ್ಟಿಗೇ ನಗುವುದು, ಅಳುವುದು ಮಾಡುತ್ತಿದ್ದಾರೆ. ಅಮ್ಮನಜೊತೆ ಜಗಳ ಆಡುತ್ತಿರುತ್ತಾರೆ. ಆದರೆ ಮೊದಲಿನ ಹಾಗಲ್ಲ. ಸ್ವಲ್ಪ ಬೇರೆತರಹ. "ನೀವುಗಳು ನನಗೆ ಸುದ್ದೀನೆ ಕೊಡಲಿಲ್ಲ. ನಾನು ನಿಮಗೇನೂ ಅಲ್ಲವಾ? ನನ್ನನ್ನೇನು ಸತ್ತಿದ್ದಾಳೆ ಅಂತ ತಿಳಿದಿದ್ದೀರೋ ಅಥವಾ ಬದುಕಿದ್ದಾಳೆ ಅಂತ ತಿಳಿದಿದ್ದೀರೋ?"

ಈ ಹೊತ್ತು ಅವರು ಅನೇಕಸಲ ಅಮ್ಮನ ತಲೆಯನ್ನು ಮುದ್ದಿಸಿದ್ದಾರೆ. ಈ ಹೊತ್ತು ಬಹುಶಃ ಅವರು ನನ್ನನ್ನೂ ಮುದ್ದುಮಾಡಬಹುದು.

ಅವರು ಕರ್ಚೀಫಿನಲ್ಲಿ ಗಂಟುಕಟ್ಟಿದ್ದೇನನ್ನೋ ಹಿಡಿದುಕೊಳ್ಳಲು ಅಮ್ಮನಿಗೆ ಹೇಳಿದರು.

"ಇದೇನು?" ಎಂದು ಅಮ್ಮ ಕೇಳಿದರು.

"ಇದು ಒಂದು ತಾಯಿತ. ಹುಡುಗನ ಕುತ್ತಿಗೆಗೆ ಕಟ್ಟೋಣ. ಇದನ್ನು ಮಾಡಿಸಲು ಎರಡುದಿನ ಹಿಡಿಯಿತು. ಇಡೀ ದಿನವೆಲ್ಲಾ ಆಚಾರಿಹತ್ತಿರ ಕೂತಿದ್ದೆ. ಹಾಗಿಲ್ಲದೆ ಇದ್ದರೆ ಸುದ್ದಿ ತಿಳಿದಕೂಡಲೇ ಹಾರಿಬಂದುಬಿಡುತ್ತಿದ್ದೆ."

ಬಾಗಿಲಹತ್ತಿರ ನಿಂತಿದ್ದೆ. ನಗುಬಂದುಬಿಟ್ಟಿತು. ಇಷ್ಟೊಂದು ದಪ್ಪಕ್ಕಿರುವ ಅಜ್ಜಿ ಕೋಲೂರಿಕೊಂಡು ಓಡಾಡುತ್ತಾರೆ. ಎಲ್ಲಾದರೂ ಹಾರಿಹೋಗಿಬಿಡಲು ಇವರೇನು ಹಕ್ಕೀನೆ?

ಅಮ್ಮ ಕರ್ಚೀಫು ಬಿಚ್ಚಿನೋಡಿದರು–ಕರೀದಾರದಲ್ಲಿ ಹಳದಿಯದು ಏನೋ ಒಂದು ಫಳಫಳ ಹೊಳೀತಾ ಇತ್ತು.

"ಇದು ಚಿನ್ನದ ತಗಡಿನೊಳಗೆ ಸಿಂಹದ ಉಗುರನ್ನು ಸೇರಿಸಿ ಮಾಡಿಸಿರುವ ತಾಯಿತ. ಇದರಿಂದ ನಿನ್ನ ಮಗನ ಏಳು ಬಾಧೆಗಳು ದೂರವಾಗುತ್ತವೆ".

ಅಜ್ಜಿ ನನಗೋಸ್ಕರ ಯಾವತ್ತೂ ಏನೂ ತರುತ್ತಿರಲಿಲ್ಲ. ಅಮ್ಮಮ್ಮ ಬಂದಾಗಲೆಲ್ಲ ನನಗೋಸ್ಕರ ಒಳ್ಳೊಳ್ಳೆ ವಸ್ತುಗಳನ್ನು ತರುತ್ತಾರೆ.

ಅಜ್ಜಿಯ ತಟ್ಟೆಗೆ ನಾನು ಮತ್ತೆ ಕೈಹಾಕಿದರೆ ನನ್ನದೇನು ಹೋಗುತ್ತೆ? ಅಜ್ಜಿ ರೊಟ್ಟಿ ಎಸೆದುಬಿಡುತ್ತಾರೆ ಮತ್ತು ತಾನು ಕೂಡ ಹಸಿದುಕೊಂಡೇ ಇದ್ದುಬಿಡುತ್ತಾರೆ.

ಬೈಗಳ ಬಗ್ಗೆ ಹೇಳಬೇಕಾದ್ದೇ ಇಲ್ಲ. ಬೈಯುತ್ತಲೇ ಇರುತ್ತಾರೆ. ತಮ್ಮ ನಾಲಿಗೆ ಸವೆಸುತ್ತಾರೆ.

9

ಅಮ್ಮಮ್ಮ ಕೂಡ ಬರುವವರಿದ್ದರು. ನಿನ್ನೆಯಿಂದಲೂ ಬರಬಹುದು ಎಂದು ಕಾಯುತ್ತಲೇ ಇದ್ದೆವು. ಆದರೆ ಬಂದದ್ದು ಮಾತ್ರ ಇವತ್ತು. ಅಜ್ಜಿನೂ ಇವತ್ತೇ ಬಂದರು. ಇಬ್ಬರಿಗೂ ಎರಡು ಗಂಟೆ ವ್ಯತ್ಯಾಸ ಇತ್ತು.

ಅಮ್ಮಮ್ಮ ಬರುತ್ತಿದ್ದ ಹಾಗೇ ನನ್ನನ್ನು ಮುದ್ದಿಸಿದರು. ಅಜ್ಜಿ ದೂರದಿಂದಲೇ ಎಲ್ಲವನ್ನೂ ನೋಡುತ್ತಿದ್ದರು. ನಾನು ಕೂಡ ಅಮ್ಮಮ್ಮನನ್ನು ಬಹಳ ಮುದ್ದಿಸಿದೆ. ಅಜ್ಜಿಯನ್ನು ರೇಗಿಸುವುದಕ್ಕರ್ಥ ಹಾಗೆ ಮಾಡಿದೆ.

ಆದರೆ ಇವತ್ತು ಅಜ್ಜಿ ಸಿಟ್ಟುಕೊಳ್ಳಲಿಲ್ಲ. ಅವರು ಅಮ್ಮಮ್ಮನನ್ನು ತಬ್ಬಿಕೊಂಡರು. ಇನ್ನೇನು ಇಬ್ಬರೂ ಅತ್ತುಬಿಡುತ್ತಾರೇನೊ ಅಂತ ಇದ್ದರೆ ಇಬ್ಬರೂ ಸೇರಿಕೊಂಡು ನಗತೊಡಗಿದರು. ಒಬ್ಬರು ಇನ್ನೊಬ್ಬರನ್ನು ಅಭಿನಂದಿಸತೊಡಗಿದರು. ಇಬ್ಬರೂ ಒಟ್ಟಾಗಿ– "ನೋಡಿ ನಮ್ಮ ಹುರಿದ ಬೀಜಗಳು ಮೊಳೆತುಬಿಟ್ಟವು" ಎಂದು ಹೇಳತೊಡಗಿದರು.

ಯಾರಿಗೂ ಏನೂಂತ ಗೊತ್ತಾಗಲಿಲ್ಲ. ಒಂದುಸಲ ನಾನು ಹೂವಿನ ಕುಂಡದಲ್ಲಿ ಮಣ್ಣು ಮತ್ತು ಎಲೆಯನ್ನು ಊರತೊಡಗಿದ್ದೆ. ಆಗ ಅಮ್ಮ "ಮಣ್ಣು ಮತ್ತು ಎಲೆ ಮೊಳಕೆ ಬರಲ್ಲ" ಎಂದು ನಕ್ಕಿದ್ದರು. ಆದರೆ ಇವತ್ತು ನೋಡಿದರೆ ಅಮ್ಮಮ್ಮ, ಅಜ್ಜಿ ಇಬ್ಬರೂ ಅವರು ಹುರಿದಿರುವ ಬೀಜಗಳು ಮೊಳಕೆಬಂದವು ಅಂತ ಹೇಳುತ್ತಾ ಇದ್ದಾರೆ. ಆದರೆ ಅವರ ಹೊಲ ಎಲ್ಲಿದೆ?

ಯಾವೊತ್ತಾದರೂ ಭಟ್ಟಿಯವನ ಕಡೆಯಿಂದ ಬೀಜ ಹುರಿಸಿಕೊಂಡುಬಂದು ಕೊಡಲು

ನಾನು ದಯಾಲಿಗೆ ಹೇಳುತ್ತೀನಿ. ಆಮೇಲೆ ಅದನ್ನು ಮಣ್ಣಿನಲ್ಲಿ ಹೂತು ನೋಡುತ್ತೀನಿ.

ಪಪ್ಪ ಬಂದುಬಿಟ್ಟರು. ಅಮ್ಮಮ್ಮ ತಂದಿದ್ದ ಸಾಮಾನುಗಳನ್ನು ಅಜ್ಜಿ ಚೀಲದಿಂದ ಒಂದೊಂದಾಗಿ ತೆಗೆದು ತೆಗೆದು ನೋಡುತ್ತಿದ್ದರು. ಪುಟ್ಟನ ಅಂಗಿಗಳನ್ನು ಒಂದೊಂದಾಗಿ ಚುಂಬಿಸಿ ಜೋರಾಗಿ ನಗುತ್ತಿದ್ದರು. ಪಪ್ಪ ಬಂದಕೂಡಲೇ ಎಲ್ಲ ಅಲ್ಲೇ ಬಿಟ್ಟು ಅವರ ತಲೆಯನ್ನು ಚುಂಬಿಸತೊಡಗಿದರು. ಜೊತೆಯಲ್ಲೇ ಅಳತೊಡಗಿದರು. "ಇಂಥ ದಿನಕ್ಕೋಸ್ಕರ ಜೀವಮಾನ ಪರ್ಯಂತ ನಾನು ಹಂಬಲಿಸುತ್ತ ಇದ್ದೆ. ನಾನು ನಿನ್ನ ಅಮ್ಮ ಕಣೋ. ಅಮ್ಮ ಏನು ನಿನಗೆ ಶತ್ರುವೇ? ನೀನು ನನಗೆ ಇದರ ಸುದ್ದೀನೆ ಕೊಡಲಿಲ್ಲ. ಕಂಡೋರಿಗೆಲ್ಲಾ ಸುದ್ದಿ ತಿಳಿದಿತ್ತು. ನಾನು ಬೇರೆ ಜನರ ಬಾಯಿಂದ ಸುದ್ದಿ ತಿಳಿದುಕೊಂಡೆ. ಆದರೆ ನೀನು ನನಗೆ ಎರಡು ಪೈಸೆ ಕಾರ್ಡ್ ಸಹ ಹಾಕಲಿಲ್ಲ."

ಪಪ್ಪ ಹೇಳುತ್ತಿದ್ದರು–"ಬಹಳ ಒಳ್ಳೆಯದು. ಅಳಬೇಡ. ನಿನ್ನ ಮೊಮ್ಮಗನನ್ನು ಕರೆದುಕೊಂಡು ನಾವೇ ಊರಿಗೆ ಬಂದುಬಿಡೋಣ ಮತು ನಿನ್ನ ಜೊತೆ ಹಬ್ಬ ಮಾಡೋಣ ಅಂತ ಅಂದುಕೊಂಡಿದ್ದೆ."

"ಅಯ್ಯೋ! ನಾನೇನು ಕೋಪಮಾಡಿಕೊಂಡಿದ್ದೆನೇನು? ಆ ದೇವರು ಕೋಪಮಾಡಿಕೊಂಡಿದ್ದ"

ಇಂದಿನ ಅಜ್ಜಿ ಬೇರೆಯೇ ಅಜ್ಜಿಯಂತೆ ಕಂಡುಬರುತ್ತಿದ್ದರು. ಕಳೆದ ಸಲ ಅಷ್ಟೊಂದು ಸಿಟ್ಟುಮಾಡಿಕೊಂಡಿದ್ದರು. ಈಗ ನೋಡಿದರೆ ನಾನು ಕೋಪಮಾಡಿಕೊಂಡಿರಲಿಲ್ಲ, ಆ ದೇವರೇ ಕೋಪಮಾಡಿಕೊಂಡಿದ್ದ ಅಂತ ಹೇಳುತ್ತಾ ಇದ್ದಾರೆ. ದೇವರೂ ಕೋಪಮಾಡಿಕೊಳ್ಳುತ್ತಾನೇನು?

ಖಂಡಿತಾ ಕೋಪಮಾಡಿಕೊಂಡಿರಬೇಕು. ಅದಕ್ಕೇ ನಮಗೆ ತಮ್ಮನನ್ನು ಕೊಡುತ್ತಾ ಇರಲಿಲ್ಲ, ಆದರೆ ಪಪ್ಪ ಅವರಿಗೆ ಹೇಳಿ ಒಪ್ಪಿಸಿದ್ದಾರೆ.

ಈಗ ಅಜ್ಜಿ ರೊಟ್ಟಿ ತಿನ್ನಲು ಶುರುಮಾಡಿದಾಗ, ನಾನು ಅವರ ತಟ್ಟೆ ಮುಟ್ಟುತ್ತೇನೆ. ಅಜ್ಜಿ ರೊಟ್ಟೀನೆಲ್ಲಾ ತೆಗೆದು ಹೊರಕ್ಕೆ ಎಸೆದುಬಿಡುತ್ತಾರೆ. ಆಮೇಲೆ ಹಸಿದುಕೊಂಡೇ ಇರುತ್ತಾರೆ ಅಂತ ಯೋಚನೆಮಾಡಿದ್ದೆ. ಈ ಹೊತ್ತು ಅಜ್ಜಿಗೆ ಎಂದೂ ಇಲ್ಲದೆ ಇರುವಷ್ಟು ಖುಷಿಯಾಗಿದೆ. ಅದರಿಂದ ಈಹೊತ್ತು ಅವರ ತಟ್ಟೆಯನ್ನು ನಾನು ಮುಟ್ಟಲ್ಲ....ಹೋಗಲಿ.

ಅವರೂ ಮನಃಪೂರ್ತಿಯಾಗಿ ರೊಟ್ಟಿ ತಿನ್ನಲಿ.........

ರೊಟ್ಟಿ ಒಲೆ ಮೇಲೆ ಬೇಯುತ್ತ ಇತ್ತು. ಅಮ್ಮ ಮಂಚದ ಮೇಲೆ ಮಲಗಿದ್ದರು. ಅಜ್ಜಿ ಪಪ್ಪನ ಹತ್ತಿರ ಮಾತಾಡುತ್ತ ಮಾತಾಡುತ್ತ ಅವರನ್ನು ಮನೆಯ ಹಿಂಭಾಗದಲ್ಲಿರುವ

ಮರಗಳ ಹತ್ತಿರಕ್ಕೆ ಕರೆದುಕೊಂಡುಹೋಗು ಎಂದು ಪಪ್ಪನನ್ನು ಬಲವಂತಮಾಡುತ್ತಿದ್ದರು.

ಈಗ ಕತ್ತಲೆ ಕವಿದಿತ್ತು. "ಪಪ್ಪಾ ಮರಗಳ ಹತ್ತಿರ ಹೋಗಬೇಡಿ" ಎಂದು ನಾನು ಪಪ್ಪನಿಗೆ ಕೇಳಿಸುವ ಹಾಗೆ ಜೋರಾಗಿ ಕೂಗಿ ಹೇಳುತ್ತಿದ್ದೆ. ಆದರೆ ಪಪ್ಪನಿಗೆ ನನ್ನ ದನಿ ಕೇಳಿಸಲಿಲ್ಲ.

ಅವರಿಗೆ ಹೋಗಬೇಡಿ ಎಂದು ಹೇಳಬೇಕೆಂದು ಅವರ ಹಿಂದೆ ಹಿಂದೆಯೇ ಹೋದೆ. ಆದರೆ ಅಷ್ಟರಲ್ಲಿ ಪಪ್ಪ ಮರಗಳ ಸಮೀಪದಲ್ಲೇ ಸಾಗಿಹೋಗಿ ಚಿಕ್ಕಿಯ ಕೊಠಡಿಯನ್ನು ತೆರೆದು ಅಜ್ಜಿಯನ್ನು ಜೊತೆಯಲ್ಲಿ ಕರೆದುಕೊಂಡು ಅದರೊಳಹೊಕ್ಕರು.

ನಾನು ಕೊಠಡಿಯೊಗೆ ಹೋಗಲಿಲ್ಲ. ನಾನು ಅದರೊಳಕ್ಕೆ ಹೋಯಿತು ಅಂದರೆ ಅಜ್ಜಿ ಸಿಟ್ಟುಮಾಡಿಕೊಳ್ಳುತ್ತಾರೆ ಎಂದು ನನಗೆ ಅನ್ನಿಸಿತು. ಹೊರಗಡೆ ಕತ್ತಲೆ ಇತ್ತು. ಆದರೆ ನನಗೆ ಭಯ ಅನ್ನಿಸುತ್ತಿರಲಿಲ್ಲ. ನಾನು ಕಿಟಕಿಯ ಹತ್ತಿರ ಇದ್ದೆ. ಒಳಗಡೆ ಪಪ್ಪ ಎದುರಿನಲ್ಲಿ ನಿಂತಿದ್ದರು. ಅವರು ಚಿಕ್ಕಿಯ ಕೋಣೆಯಲ್ಲಿದ್ದ ಲಾಟೀನನ್ನು ಹೊತ್ತಿಸುತ್ತಿದ್ದರು.

"ಈ ಹೊತ್ತು ನಾನು ನಿನಗೊಂದು ಮಾತು ಹೇಳಬೇಕಾಗಿದೆ.ಅದಕ್ಕೊಸ್ಕರವೇ ನಿನ್ನನ್ನು ಇಲ್ಲಿಗೆ ಕರೆದುಕೊಂಡುಬಂದದ್ದು." ಪಪ್ಪ ಹೇಳುತ್ತಾ ಇದ್ದರು–"ಒಳ್ಳೆ ಸಂತೋಷದ ಸಮಯ ಈಗ. ಇಂಥ ಹೊತ್ತಿನಲ್ಲಿ ನೀನು ಏನಾದರೂ ಒಂದು ಅಬದ್ಧ ಆಡಿಬಿಡಬೇಡ. ಅದಕ್ಕೇ ನಿನಗೆ ಹೇಳುತ್ತಾ ಇದ್ದೀನಿ, ನೀನು ಹುಡುಗಿಗೆ ಯಾವಾಗಲೂ ಚಂಡಾಲಿ, ರಂಡೆ ಅಂತೆಲ್ಲ ಹೊಲಸುಮಾತು ಆಡುತ್ತಾ ಇರಬೇಡ."

ಓ ಇದು ನನ್ನ ವಿಷಯಾನೇ. ಅಜ್ಜಿ ಬೇರೆ ಯಾರಿಗೂ ಏನೂ ಹೇಳಲ್ಲ. ನನಗೆ ಮಾತ್ರ ಚಂಡಾಲಿ.ರಂಡೆ ಅಂತ ಹೇಳುವುದು.......

ಮಾತು ಮುಂದುವರೆಸಿ ಅಜ್ಜಿ ಹೇಳುತ್ತಾ ಇದ್ದರು– "ಹಾಗಾದರೆ ನಿನ್ನ ದುಃಖ ನನ್ನ ದುಃಖ ಅಲ್ಲವೇನು? ನನ್ನ ಕರುಳು ಕಿವುಚಿದಂತೆ ಆದಾಗ ಹಾಗೆ ಹೇಳುತ್ತೀನಿ........"

"ಆದರೆ ಅವಳು ನನ್ನ ಮಗಳು......." ಪಪ್ಪ ಅಜ್ಜಿಗೆ ಹೇಳುತ್ತಾ ಇದ್ದರು.

ಇದೇನು ಯಾರಿಗೂ ಗೊತ್ತಿಲ್ಲದೆ ಇರುವ ವಿಷಯವೇನಲ್ಲ ಇದು ನನಗೂ ಗೊತ್ತಿತ್ತು. ಎಲ್ಲರಿಗೂ. ಅಜ್ಜಿಗೂ........

ಅಜ್ಜಿ ಹೇಳುತ್ತಾ ಇದ್ದರು–"ಇದು ನನಗೂ ಗೊತ್ತು. ಆದರೆ ಬಾಯಿಂದ ಹೇಳುವುದರಿಂದ ಏನಾಗುತ್ತೆ........ರಕ್ತವಂತೂ ಪರಕೀಯರಕ್ತ. ಯಾವ ಮಾದಿಗರದೋ ಹೊಲೇರದೋ ಯಾರಿಗೆ ಗೊತ್ತು? ನೀನಂತೂ ಜಾತಿ ಗೀತಿ ಏನೂ ಕೇಳಲಿಲ್ಲ, ಮಾಡಲಿಲ್ಲ. ಸರಿ, ಜೋಳಿಗೆಯಲ್ಲಿ ಹಾಕಿಕೊಂಡುಬಿಟ್ಟೆ."

ಮರಗಳು ಸೊಂಯ್,ಸೊಂಯ್ ಎಂದು ಶಬ್ದಮಾಡುತ್ತಿದ್ದುವು–ಜೋರುಜೋರಾಗಿ ನನ್ನ ಕಿವಿಗಳಲ್ಲಿ.

ಪಪ್ಪ ಹೇಳುತ್ತಾ ಇದ್ದರು– "ನಿನ್ನ ಆ ಜಾತಿಪಾತಿ ಉಳಿಸುವುದಕ್ಕೋಸ್ಕರಾನೇ ನಾನು ತಪ್ಪುಮಾಡಿದೆ. ನಾನು ನಿನಗೆ ಹೇಳುವುದಿಷ್ಟೆ: ಇವಳು ನನ್ನ ಮಗಳು, ನನ್ನ ಸ್ವಂತ ರಕ್ತ........

"ನಿಜ ಹೇಳುತ್ತಾ ಇದ್ದೀ ತಾನೆ?" ಅಜ್ಜಿಯ ದನಿ ಬಹಳ ಎತ್ತರಕ್ಕೆ ಏರಿತ್ತು; ಅದರಲ್ಲಿ ಏನೋ ಭಾರೀ ಜೋರು ಬಂದುಬಿಟ್ಟಿರುವ ಹಾಗೆ.

ಪಪ್ಪಾ ಹೇಳುತ್ತಾ ಇದ್ದರು–"ನೀನು ನನ್ನ ಅಮ್ಮ. ಅಮ್ಮನ ಹತ್ತಿರ ಸುಳ್ಳು ಹೇಳಕ್ಕಾಗಲ್ಲ."

ಅಜ್ಜಿ ಹೇಳುತ್ತಾ ಇದ್ದರು–"ಇವಳಿಗೆ ಯಾರೋ ಜನ್ಮನೀಡಿ ಆಸ್ಪತ್ರೆಗೆ ಕೊಟ್ಟುಬಿಟ್ಟಿದ್ದರು ಅಂತ ನಿನು ಹೇಳುತ್ತಾ ಇದ್ದೆ......."

ಪಪ್ಪ ಹೇಳುತ್ತಾ ಇದ್ದರು– "ಇನ್ನೇನು ಹೇಳಲಿ? ಇವಳ ಅಮ್ಮನಿಗೆ ಏನು ಹೇಳಬೇಕಾಗಿತ್ತು? ಅವಳಿಗೆ ನಿಜ ಸಂಗತಿ ತಿಳಿಸಿದ್ದರೆ ಅವಳು ಇವಳನ್ನು ತನ್ನ ಮಗಳ ಥರಾ ಸಾಕುತ್ತಿದ್ದಳೇನು?

ನನಗೆ ಏನೊಂದೂ ಗೊತ್ತಾಗುತ್ತಿರಲಿಲ್ಲ. ಆದರೆ ಅಜ್ಜಿಗೆ ಗೊತ್ತಾಗುತ್ತಾ ಇದೆ ಎಂದು ಅನ್ನಿಸಿತು. ಅವರು ಹೇಳುತ್ತಾ ಇದ್ದರು–"ಒಂದುವೇಳೆ ವಿಷಯ ಇದೇ ಆಗಿದ್ದರೆ ನೀನು ಆಗಲೇ ನನ್ನ ಕಿವಿಯ ಮೇಲೆ ಹಾಕಬೇಕಾಗಿತ್ತು. ನಾನು ಹೀಗೇ ಏನೇನೋ ಸುಮ್ಮನೆ ಹಗಲೆಲ್ಲಾ ಹುಡುಗಿಯನ್ನು ಗದರಿಸಿ ಬೈಯುತ್ತಾ ಇದ್ದೆ."

ಪಪ್ಪ ಹೇಳುತ್ತಾ ಇದ್ದರು–"ನಿನ್ನ ಕಂಡರೆ ಹೆದರಿಕೆ ಆಗುತ್ತಿತ್ತು. ನಿನ್ನ ಬಾಯಲ್ಲಿ ಗುಟ್ಟು ನಿಲ್ಲುವುದಿಲ್ಲ ಅಂತ ಯೋಚಿಸುತ್ತಿದ್ದೆ..........ಮೊಮ್ಮಗ ಬರುತ್ತಾ ಇದ್ದಾನೆ ಎನ್ನುವ ಸಂತೋಷದಲ್ಲಿ ಇನ್ನುಮುಂದೆ ನಿನ್ನ ಬಾಯಲ್ಲಿ ಅಂಥ ಮಾತು ಬರುವುದಿಲ್ಲ ಅಂತ ಮಾತುಕೊಡು"

ಅಜ್ಜಿ ಅಳತೊಡಗಿದರು–"ಅಪ್ಪಾ ಬುದ್ಧಿವಂತ, ನೀನು ಆಗಲೇ ನನಗೆ ಹೇಳಿಬಿಟ್ಟಿದ್ದರೆ ಹುಡುಗಿಯನ್ನು ಉಯ್ಯಾಲೆಯಲ್ಲಿ ಕೂಡಿಸಿ ತೂಗುತ್ತಾ ಇದ್ದೆ. ನಾನು ಹೀಗೇ ಊರಿಗೆ ಹೋಗಿ ಅಲ್ಲಿ ಇಲ್ಲಿ ಅಲೆದಾಡಿಕೊಂಡಿದ್ದೆ. ಇಲ್ಲಿ ಕೂತುಕೊಂಡು ಏನು ರಾಜ್ಯ ಆಳಬೇಕಿತ್ತೇನು?"

ಪಪ್ಪ ಹೇಳುತ್ತಾ ಇದ್ದರು–"ಬಹಳಷ್ಟು ಸಲ ಹೇಳಿಬಿಡಬೇಕು ಅಂತ ಅಂದುಕೊಂಡೆ. ಆದರೆ ಧೈರ್ಯ ಬರಲಿಲ್ಲ....... ಇವಳ ಅಮ್ಮನಿಗೆ ಏನೂ ಗೊತ್ತಿಲ್ಲ........"

ಆಮೇಲೆ ಒಳಗೆ ಮತ್ತು ಹೊರಗೆ ಮೌನ ಕವಿದಂತಾಯಿತು.

ನನ್ನ ತಲೆ ತಿರುಗುತ್ತಾ ಇದೆ ಅನ್ನಿಸತೊಡಗಿತು. ನಾನು ಕಿಟಕಿಯ ಹತ್ತಿರ ನಿಂತಿದ್ದೆ. ಅಲ್ಲೇ ಕಾಲುಗಳಮೇಲೆ ಭಾರಹಾಕಿ ಗೋಡೆ ಹಿಡಿದುಕೊಂಡು ಕೂತುಬಿಟ್ಟೆ.

ನಾನು.......ನಾನು ಯಾರು? ಅಜ್ಜಿಗೂ ಗೊತ್ತಿಲ್ಲ. ಅಮ್ಮನಿಗೂ ಗೊತ್ತಿಲ್ಲ. ಮತ್ತೆ ದನಿ ಕೇಳಿಬಂತು. ಅಜ್ಜಿ ಕೇಳುತ್ತಾ ಇದ್ದರು–"ಈ ಹುಡುಗಿಯ ತಾಯಿ ಯಾರು?"

ಪಪ್ಪ ಹೇಳುತ್ತಾ ಇದ್ದರು–"ಸಾಕು. ಇನ್ನು ಈ ವಿಷಯ ಅತ್ತಲಾಗಿರಲಿ. ಇದನ್ನು ಕೇಳಬೇಡ. ಇದನ್ನು ನಾನು ಯಾರಿಗೂ ಹೇಳುವುದಿಲ್ಲ."

ನಾನು ನಡುಗಿಕೊಂಡೇ ಕಿಟಕಿಯ ಹತ್ತಿರ ನಿಂತುಕೊಂಡೆ. "ಇವಳ ತಾಯಿ ಬದುಕಿದ್ದಾಳೇನು?" ಎಂದು ಅಜ್ಜಿ ಕೇಳುತ್ತಿದ್ದರು.

ಪಪ್ಪ ಹೇಳುತ್ತಿದ್ದರು–"ಹೌದು ಬದುಕಿದ್ದಾಳೆ. ಆದರೆ ನನಗೆ ಅವಳ ಜೊತೆ ಯಾವ ಸಂಬಂಧವೂ ಇಲ್ಲ. ಅವಳು ಹೆಣ್ಣುಮಗುವಿಗೆ ಜನ್ಮನೀಡಿದಳು. ನಾನು ಅದನ್ನು ಮನೆಗೆ ಕರೆತಂದೆ. ಅವಳಿಗೆ ಖರ್ಚು ಕೊಡುತ್ತೀನಿ. ಎಲ್ಲಿಯವರೆಗೆ ಬದುಕಿರುತ್ತಾಳೋ ಅಲ್ಲಿಯವರೆಗೂ ಕೊಡುತ್ತೀನಿ. ಅವಳ ಜೊತೆ ಇದೇ ಒಪ್ಪಂದ ಮಾಡಿಕೊಂಡಿದ್ದೆ. ಒಪ್ಪಂದ ಪೂರೈಸುತ್ತೇನೆ."

ನನ್ನ ಅಮ್ಮ......?

ಸ್ವಲ್ಪ ಅರ್ಥವಾಗಲಿಲ್ಲ; ಆದರೆ ಆದರೆ ಸ್ವಲ್ಪ ಅರ್ಥವಾಯಿತು.

ಈಗ ಇಲ್ಲಿ ಇನ್ನು ನಿಂತುಕೊಂಡಿರಬಾರದು ಎಂದಂತೂ ಖಂಡಿತ ಅನ್ನಿಸಿತು.

ಇಲ್ಲ, ನಾನು ಏನಾದರೂ ಮಾತು ಕೇಳಿಸಿಕೊಂಡಿದ್ದೀನಿ ಅಂತ ಪಪ್ಪನಿಗೆ ಏನೂ ಹೇಳುವುದಿಲ್ಲ..........

ನಾನೊಬ್ಬಳೇ ಕತ್ತಲೆಯಲ್ಲಿ ವಾಪಸ್ ಬಂದುಬಿಟ್ಟೆ.

ಬಹುಶಃ ಅಳುತ್ತಾ ಇದ್ದೆ. ಅಮ್ಮಮ್ಮ–"ನಾನು ಸತ್ತುಹೋದೆನೇನು? ಏನಾಯಿತು?" ಎಂದು ಕೇಳಿದರು. ಅನಂತರ, ತಾವೇ ಸ್ವತಃ ನನ್ನ ಹತ್ತಿರ ಬಂದು ನನ್ನ ಹಣೆಮೇಲೆ ಕೈಯಾಡಿಸಿ–"ಮೈ ಬೆಚ್ಚಗಿರುವ ಹಾಗಿದೆ...." ಎಂದರು. "ಎಲ್ಲಿದ್ದೆ? ಮರಗಳ ಕೆಳಗೆ ಇದ್ದೆಯಾ?ಸಂಜೆಹೊತ್ತು ಮರಗಳ ಕೆಳಗೆ ನಿಂತುಕೊಳ್ಳಕೂಡದು ಅಂತ ಅದೆಷ್ಟು ಸಲ ಹೇಳಿಲ್ಲ ನಿನಗೆ?" ಎಂದರು.

ಆಮೇಲೆ ಅಮ್ಮಮ್ಮನೋ ಅಥವಾ ದಯಾಲೀನೋ ಯಾರು ಅಂತ ಗೊತ್ತಿಲ್ಲ– ನನ್ನ ಚಿಕ್ಕಮಂಚ ಹಾಕಿಕೊಟ್ಟರು.

ಮಂಚದ ತುದಿ ಕೂಡ ಬಿಸಿಯಾಗಿದೆ.......ಬ್ಲಾಂಕೆಟ್ ಕೂಡ.......ಅಜ್ಜಿ ನನ್ನನ್ನು ಯಾಕಾದರೂ ಎಬ್ಬಿಸುತ್ತಾರೋ? ನನಗೆ ನಿದ್ದೆಮಾಡಲು ಬಿಡುತ್ತಿಲ್ಲ. ಇಲ್ಲ......ಹಾಲು ಕುಡಿಯಲ್ಲ......ಹಾಲಿಗೆ ಸಕ್ಕರೆ ಜಾಸ್ತಿ ಬಿದ್ದುಬಿಟ್ಟಿದೆ ಪಪ್ಪ.......

10

ನಾನು ಈ ಮರದ ಮೇಲಕ್ಕೆ ಹೇಗೆ ಬಂದುಬಿಟ್ಟೆ.......ಎಷ್ಟು ದೊಡ್ಡಮರ....... ಮರಗಳಮೇಲೆ ಭೂತಗಳು ಇರುತ್ತವೆ......

ಪಪ್ಪ ನಾನು ಭೂತ....... ಅಲ್ಲ, ನನ್ನಮೇಲೆ ಕೈಹಾಕಬೇಡಿ........ಅಮ್ಮ ಎಲ್ಲಿ? ಬದುಕಿದ್ದಾಳೆಯೆ? ಮರದಲ್ಲಿ ಮಾವಿನಹಣ್ಣು ಬಿಟ್ಟಿವೆ........ಕೀಳಲೆ?.......ಈ ಮಾವು ಪಪ್ಪನದು........ಪಪ್ಪ ಈ ಪುಟ್ಟ ಎಲ್ಲಿಂದ ಬಂದ.....ಈ ಮಾವು

ಪುಟ್ಟನದು......ಹಾಯ್ ಪಪ್ಪ ನನ್ನ ಕೂದಲು ಕೊಂಬೆಯಲ್ಲಿ ಸಿಕ್ಕಿಕೊಂಡುಬಿಟ್ಟಿದೆ........ಜರಿ ಅಂಚಿನ ಸೀರೆ ಬೇರೆ.....ನೋಡಿ ಪಪ್ಪ ....ಮರದಮೇಲೆ ಕಾಗೆ ಕೂತಿದೆ. ಕಾಗೆ ಏನಿದ್ದರೂ ಪುಟ್ಟ ಆಗುತ್ತೆ. ನಾನು ಹಕ್ಕಿ ಆಗುತ್ತೀನಿ....

11

"ಈ ಹುಡುಗಿ ಎಂಟುದಿನ ಆದಮೇಲೆ ಕಣ್ಣುತೆರೆದಿದ್ದಾಳೆ.......ಬಹಳ ಜೋರು ಜ್ವರ ಇತ್ತು.." ಅಜ್ಜಿ ನಿಮಿಷ ನಿಮಿಷಕ್ಕೂ ನನ್ನ ಹತ್ತಿರ ಬರುತ್ತಾರೆ. ಒಂದುಸಲ ಕಾಲಮೇಲೆ ಹೊದಿಕೆ ಹೊದಿಸಿದರೆ, ಒಂದು ಸಲ ನೀರು ಕುಡಿಸುತ್ತಾರೆ, ಇನ್ನೊಂದು ಸಲ ಚಹಾ. ಮತ್ತೊಂದು ಸಲ ಔಷಧಿ ಹೀಗೆ.

ಅಮ್ಮಮ್ಮ ಎಲ್ಲಿಹೋದರು ಅಂತ ಗೊತ್ತಿಲ್ಲ.

ಪಪ್ಪ ಈಗ ತಾನೆ ಥರ್ಮಾಮೀಟರ್ ಇಟ್ಟುನೋಡಿದ್ದರು. ಈಗ ಜ್ವರ ಏನಿಲ್ಲ ಅಂತ ಹೇಳುತ್ತ ಇದ್ದರು. ಆದರೆ ಮಂಚಬಿಟ್ಟು ಏಳಕೂಡದು ಎಂದು ಹೇಳುತ್ತಿದ್ದರು.

ಅಮ್ಮ ಎಲ್ಲಿ?

ಆದಿನ ಪಪ್ಪ ಅಜ್ಜಿಯ ಹತ್ತಿರ ಒಂದು ಮಾತು ಹೇಳುತ್ತಾ ಇದ್ದರು.......ಯಾರಿಗೂ ಹೇಳಬೇಡ ಅಂತ......ನನಗೆ ಗೊತ್ತಿದೆ......ಪಪ್ಪ ನನ್ನ ಪಪ್ಪ......ಅಮ್ಮ ಎಲ್ಲಿ ಹೋದಳು? ಈ ಅಮ್ಮ ಅಲ್ಲ.... ಇನ್ನೊಬ್ಬ ಅಮ್ಮ......

ಆ ಹೊತ್ತು ಅಜ್ಜಿ "ಈ ಹುಡುಗಿಯ ತಾಯಿ ಬದುಕಿದ್ದಾಳೇನು?" ಎಂದು ಕೇಳಿದ್ದರು. "ಬದುಕಿದ್ದಾಳೆ "ಅಂತ ಪಪ್ಪ ಹೇಳುತ್ತಾ ಇದ್ದರು. ಆದರೆ ಹೇಗೆ ಗೊತ್ತು, ಈಗ ಸತ್ತುಹೋಗಿರಬಹುದು.......

ಒಂದು ವೇಳೆ ಬದುಕಿದ್ದರೆ ಇಲ್ಲಿಗೆ ಯಾಕೆ ಬರುತ್ತಿಲ್ಲ?

ಪಪ್ಪ ಹೇಳಲ್ಲ. ಅವರು ಯಾಕೆ ಹೇಳುತ್ತಾ ಇಲ್ಲ?

"ಇನ್ನೇನು ನನ್ನ ಮಗಳ ಜ್ವರ ಇಳಿದುಬಿಟ್ಟಿದೆ," ಪಪ್ಪ ಮತ್ತೆ ಬಂದಿದ್ದಾರೆ. "ಹಸಿವಾಗ್ತಾ ಇದೆಯಾ" ಅಂತ ಕೇಳುತ್ತಾ ಇದ್ದಾರೆ.

"ಇಲ್ಲ,ಪಪ್ಪ, ಅಮ್ಮ ಎಲ್ಲಿ?"

"ಅಮ್ಮ ಪುಟ್ಟನ ಹತ್ತಿರ ಇದ್ದಳೆ. ನಮ್ಮ ಪುಟ್ಟ ಬಂದುಬಿಟ್ಟಿದ್ದಾನೆ , ನಿನ್ನ ತಮ್ಮ......"

"ಪುಟ್ಟ ಬಂದು ಬಿಟ್ಟಿದ್ದಾನಾ ! ಎಲ್ಲಿ?"

ಮಂಚದಿಂದ ಎದ್ದು ಹೊರಡತೊಡಗಿದೆ. ಆಗ ಪಪ್ಪ ಮತ್ತೆ ಮಂಚದಮೇಲೆ ಮಲಗಿಸಿದರು. "ಈ ಹೊತ್ತು ಮೇಲಕ್ಕೆ ಎದ್ದರೆ ಮತ್ತೆ ಜ್ವರ ಬಂದುಬಿಡುತ್ತೆ. ಈ ಹೊತ್ತು ಬೇಡ. ನಾಳೆ.......

"ಪುಟ್ಟ ಮುದ್ದಾಗಿದ್ದಾನಾ?"

"ನಿನ್ನ ಥರ"

ಪಪ್ಪ ಹೊರಟುಹೋದರು. ಪಪ್ಪನನ್ನು ಕೇಳಬೇಕಾಗಿತ್ತು. ಆದರೆ ಕೇಳಲಿಲ್ಲ. ಪಪ್ಪನ್ನ ಕಂಡರೆ ಭಯವಾಗುತ್ತೆ.

ಇವರು ಪುಟ್ಟನ ಅಮ್ಮ. ನನ್ನ ಅಮ್ಮ.......?

12

ಪುಟ್ಟ ತುಂಬ ಮುದ್ದಾಗಿದ್ದಾನೆ. ತುಂಬ ಪುಟ್ಟದಾಗಿದ್ದಾನೆ. ನಾನು ಮುಟ್ಟಿನೋಡಿದ್ದೆ. ತುಂಬ ಮೃದು, ನಯ-ರೇಷ್ಮೆಥರ.

ಅಮ್ಮ ನನ್ನನ್ನು ಹತ್ತಿರ ಕರೆದು ಮುದ್ದುಮಾಡಿದರು. ಅನಂತರ ಪಪ್ಪನಿಗೆ "ನೋಡಿ ನೀವು ನನ್ನ ಮಗಳನ್ನು ಅದೆಷ್ಟು ಸಣ್ಣ ಮಾಡಿಬಿಟ್ಟೀದ್ದೀರಿ"......ಎಂದರು.

ನಾನು ಎಷ್ಟೋ ಹೊತ್ತು ಪಪ್ಪಾ ಕಡೆ ನೋಡುತ್ತಾ ಇದ್ದೆ. ಆ ಹೊತ್ತು ಅಜ್ಜಿಗೆ ಹೇಳಿದ್ದೆಲ್ಲಾ ಬರೀಸುಳ್ಳು ಎಂದು ಅನ್ನಿಸತೊಡಗಿತು. ನನ್ನ ಅಮ್ಮ ಬೇರೆ ಯಾರೋ ಅಂತ ಆ ಹೊತ್ತು ಹೇಳಿದ್ದರು. ಆದರೆ ಈ ಅಮ್ಮ ನನ್ನನ್ನು ಪಪ್ಪನಿಗಿಂತ ಹೆಚ್ಚಾಗಿ ಪ್ರೀತಿಸುತ್ತಾರೆ. ಪಪ್ಪ ಸುಳ್ಳು ಯಾಕೆ ಹೇಳುತ್ತಾರೆ? ನನ್ನ ಅಮ್ಮ ಅಲ್ಲದಿದ್ದರೆ ಯಾಕಾದರೂ ಪ್ರೀತಿಸುತ್ತಾರೆ......ಪಪ್ಪ ಯಾಕೆ ಸುಳ್ಳುಹೇಳುತ್ತಾರೆ?

ಆದರೆ ಅಜ್ಜಿ ಈಗ ಯಾತಕ್ಕೆ ನನ್ನನ್ನು ಪ್ರೀತಿಸುತ್ತಾರೆ? ಮುಂಚೆ ಯಾವೊತ್ತೂ ಪ್ರೀತಿಸುತ್ತಿರಲಿಲ್ಲ. ಈಹೊತ್ತು-"ನಿನಗೆ ಬೆಳ್ಳಿಕಾಲಂದಿಗೆ ತಂದುಕೊಡುತ್ತೀನಿ, ಚಿನ್ನದ

ಉಂಗುರ ತಂದುಕೊಡುತ್ತೀನಿ" ಅಂತೆಲ್ಲಾ ಹೇಳುತ್ತಾ ಇದ್ದರು.

13

ಇನ್ನು ಭೂತ ಬರಲ್ಲ ಅಂತ ಪಪ್ಪ ಹೇಳುತ್ತಾ ಇದ್ದರು....... ಹಾಯ್...... ಅಮ್ಮಾ...... ಪಪ್ಪಾ..... ಭೂತ.....

"ಅಯ್ಯೋ ದೇವರೆ ನನ್ನ ಕರುಳು ಕತ್ತರಿಸಿ ಹೋಗುತ್ತಾ ಇದೆ."

ಅಯ್ಯೋ ಇದಂತೂ ಅಮ್ಮಮ್ಮನ ದನಿ. ಅಮ್ಮಮ್ಮ ಅಳುತ್ತಾ ಇದ್ದಾರೆ. "ಅಮ್ಮಮ್ಮ ನಿಮ್ಮ ಹತ್ತಿರ ಭೂತ ಬಂದಿತ್ತಾ?"

"ನನ್ನ ಹೃದಯವನ್ನು ಚೂರುಚೂರು ಮಾಡಿದವರು ಯಾರು?" ಅಜ್ಜಿ ಚೀರಾಡುತ್ತಾ ಇದ್ದಾರೆ.

"ಅಜ್ಜಿ ನೀವು ಭೂತ ನೋಡಿದಿರಾ?"

ಪಪ್ಪ ಏನೂ ಮಾತಾಡುತ್ತಾ ಇಲ್ಲ. ಎದುರುಗಡೆ ನಿಂತಿದ್ದಾರೆ.

"ನಿಮಗೆ ಏನಾಗಿದೆ ಅಂತ ಹೇಳಲ್ಲವಾ ಪಪ್ಪಾ?"

"ಅಯ್ಯಯ್ಯೋ ಈ ಭಾರೀ ದೊಡ್ಡಮನೆ ನನ್ನ ಮಗಳನ್ನು ತಿಂದುಹಾಕಿಬಿಟ್ಟಿತು......." ಅಮ್ಮಮ್ಮ ಗೋಡೆಗೆ ತಲೆ ಗುದ್ದುತ್ತಾ ಇದ್ದಾರೆ.......

"ಪಪ್ಪಾ ನೀವು ಮಾತಾಡಲ್ಲವಾ.......ಅಯ್ಯೋ ಪಪ್ಪಾ ಪುಟ್ಟ ಅಳುತ್ತಾ ಇದೆ. ಪುಟ್ಟನಿಗೆ ಹಾಲುಕುಡಿಸು ಅಂತ ಅಮ್ಮನಿಗೆ ಹೇಳಿ......"

ಪಪ್ಪ ಪುಟ್ಟನನ್ನು ಎತ್ತಿಕೊಂಡು ಅಳುತ್ತಾ ಇದ್ದಾರೆ. ದಯಾಲಿ ನನ್ನ ತೋಳು ಹಿಡಿದುಕೊಂಡು ನನ್ನನ್ನು ಅಮ್ಮನ ಕೋಣೆಯಿಂದ ಹೊರಕ್ಕೆ ಎಳೀತಾ ಇದ್ದಾಳೆ.

"ಉರ್ಮಿ ನಿನ್ನ ಅಮ್ಮ ಸತ್ತುಹೋದರು ಕಣೇ.......ಪುಣ್ಯಾತ್ಮಳು ನಿದ್ದೆಮಾಡುತ್ತಾ ಇದ್ದಹಾಗೇ ಸತ್ತುಹೋದರು....." ದಯಾಲಿ ನನ್ನನ್ನು ಅಂಗಳಕ್ಕೆ ಕರೆದುಕೊಂಡುಹೋಗುತ್ತ ಹೇಳಿದಳು.

"ಅಮ್ಮಾ......" ನಾನು ದಯಾಲಿ ಕೈಯಿಂದ ನನ್ನ ತೋಳುಬಿಡಿಸಿಕೊಂಡು ಮಂಚದ ಕಡೆಗೆ ಓಡಿದೆ.

ಅಮ್ಮ ಮಾತಾಡ್ತಾ ಇಲ್ಲ, ನೋಡ್ತಾನೂ ಇಲ್ಲ........

14

"ಪಪ್ಪಾ ಅಮ್ಮ ಎಲ್ಲಿಹೋಗಿದ್ದಾಳೆ......?"

ಉರ್ಮಿ,ಈ ಔಷಧಿ ಕುಡಿ. ಈಗ ಮಲಗಿಕೊಂಡು ನಿದ್ದೆಮಾಡು. ನಿನಗೆ ಮತ್ತೆ ಜ್ವರ ಜಾಸ್ತಿಯಾಗಿದೆ."

"ಪಪ್ಪಾ ಪುಟ್ಟ ಎಲ್ಲಿ?"

"ನಿದ್ದೆ ಮಾಡುತ್ತಾ ಇದ್ದಾನೆ."

"ಅಮ್ಮ?"

ಪಪ್ಪ ಮತ್ತೆ ಮಾತಾಡಲಿಲ್ಲ.

"ಪಪ್ಪ ಇಲ್ಲಿ ದೊಡ್ಡೋರೆಲ್ಲ ಬಂದಿದ್ದರು. ಅಳುತ್ತಾ ಇದ್ದರು. ಎಲ್ಲಿಗೆ ಹೋದರು ಅವರೆಲ್ಲ?"

"ಅವರ ಮನೆಗಳಿಗೆ ಹೋದರು." "ಅವರು ಇಲ್ಲಿಗೆ ಬಂದು ಯಾಕೆ ಅಳುತ್ತಾ ಇದ್ದರು?"

"ನಿನ್ನ ಅಮ್ಮ......."

"ಪಪ್ಪಾ ಅಮ್ಮ ಸತ್ತುಹೋದಳು ಅಂತ ದಯಾಲಿ ಹೇಳುತ್ತಾ ಇದ್ದಳು"

ಪಪ್ಪ ಉತ್ತರಕೊಡಲಿಲ್ಲ. ನಿಂತುಕೊಂಡಿದ್ದವರು ಮಂಚದಮೇಲೆ ಕೂತುಕೊಂಡರು. ಆಮೇಲೆ ಅದೆಷ್ಟೋ ಹೊತ್ತು ನನ್ನಕಡೆ ನೋಡುತ್ತಲೇ ಇದ್ದರು. ಆಮೇಲೆ ಬಾಗಿಲಕಡೆಗೆ ನೋಡುತ್ತಿದ್ದರು.

"ಉರ್ಮಿ ನೀನು ಮೊನ್ನೆ ಭೂತವನ್ನು ನೋಡಿದೆ ಅಂತ ಚೆನ್ನಾಗಿ ನೆನಪಿದೆಯಾ?"– ಪಪ್ಪ ಒಮ್ಮೆಲೇ ನನ್ನನ್ನು ಕೇಳಿದರು.

"ಹೌದು ಪಪ್ಪಾ! ಆದರೆ ಈಗ ಭೂತ ಬರಲ್ಲ ಅಂತ ನೀವು ಹೇಳುತ್ತಾ ಇದ್ದಿರಿ."

"ಚೆನ್ನಾಗಿ ನೆನಪುಮಾಡಿಕೋ"

"ಹೌದು ಪಪ್ಪಾ. ನಾನು ನಿದ್ದೆಮಾಡುತ್ತಾ ಇದ್ದೆ. ಅದು ನನ್ನ ತಲೆಮೇಲೆ ಕೈಯಿಟ್ಟಿತ್ತು. ನನಗೆ ಎಚ್ಚರ ಆಗಿ ಎದ್ದುಬಿಟ್ಟೆ. ನಾನು ಜೋರಾಗಿ ಕಿರುಚಿಕೊಂಡುಬಿಟ್ಟೆ......."

"ನೀನು ಕಣ್ಣುಬಿಟ್ಟುಕೊಂಡಿದ್ದೆಯೋ ಅಥವಾ ಇಲ್ಲವೋ?"

"ಕಣ್ಣುಬಿಟ್ಟುಕೊಂಡಿದ್ದೆ......ತುಂಬಾ ಕತ್ತಲೆ ಇತ್ತು ಪಪ್ಪಾ."

"ನಿನಗೆ ಅದು ಕಾಣಿಸಿತ್ತೋ ಇಲ್ಲವೋ?"

"ಇಲ್ಲ ಪಪ್ಪಾ......"

ಪಪ್ಪ ಮತ್ತೆ ಸುಮ್ಮನಾಗಿಬಿಟ್ಟರು.

"ಪಪ್ಪಾ ಅದು ಅಮ್ಮನ ಕೋಣೇಲೂ ಬಂದಿತ್ತಾ?"

"ಹೂಂ".

"ನೀವು ನೋಡಿದ್ದಿರಾ?"

"ಇಲ್ಲ"

"ಅಮ್ಮನನ್ನು ಭೂತ ಸಾಯಿಸಿಬಿಟ್ಟಿತಾ?"

"ಹೂಂ"

"ಅದು ನನ್ನನ್ನು ಸಾಯಿಸಿಬಿಡುತ್ತಾ?"

"ಇಲ್ಲ."

ಪಪ್ಪನಿಗೆ ಏನೂ ಗೊತ್ತಿಲ್ಲ. ಒಂದೊಂದು ಸಲ ಹೌದು ಅನ್ನುತ್ತಾರೆ. ಇನ್ನೊಂದು ಸಲ ಇಲ್ಲ ಅನ್ನುತ್ತಾರೆ.

15

ಅಮ್ಮನ ಕೋಣೆಯಲ್ಲಿ ಈಗ ಅಮ್ಮ ಅಂತ ಯಾರೂ ಇಲ್ಲ. ಈಗ ಅಲ್ಲಿ ಕೇವಲ ಪುಟ್ಟ ಇದ್ದಾನೆ. ಅಮ್ಮಮ್ಮ ಮತ್ತು ಅಜ್ಜಿ ಇದ್ದಾರೆ.

ಪಪ್ಪ ಈಗ ನನ್ನ ಕೊಠಡಿಯಲ್ಲಿ ಮಲಗುತ್ತಾರೆ. ಇಡೀ ದಿನವೆಲ್ಲಾ ಇಲ್ಲೆ ಇರುತ್ತಾರೆ. ಆಫೀಸಿಗೆ ಹೋಗುತ್ತಾ ಇಲ್ಲ.

ಡಾಕ್ಟರ್ ಏನೋ ಉಲ್ಟಾ ಔಷಧಿ ಕೊಟ್ಟುಬಿಟ್ಟರು ಅಂತ ಅಮ್ಮಮ್ಮ ಹೇಳುತ್ತಾರೆ. ನಮಗೆ ಈಗ ಗ್ರಹಚಾರದ ಕಾಲ ಅಂತ ಅಜ್ಜಿ ಹೇಳುತ್ತಾರೆ.

ಡಾಕ್ಟರು ಪ್ರತಿದಿನವೂ ಬರುತ್ತಾರೆ. ಪುಟ್ಟನನ್ನು ನೋಡುತ್ತಾರೆ. ಈ ಹೊತ್ತು ದಯಾಲಿ ಪಪ್ಪನ ಹತ್ತಿರ–"ಯಜಮಾನರೆ ಇದೊಂದು ಭಾರೀ ದೊಡ್ಡಮನೆ. ನೀವು ಒಪ್ಪಿ, ಬಿಡಿ; ಇಲ್ಲಿ ಯಾವುದೋ ಒಂದು ಭೂತ ಸೇರಿಕೊಂಡಿದೆ. ಹುಡುಗಿಗೆ ನೋಡಿ ಎಷ್ಟು ವರ್ಷ. ಆದರೂ ರಾತ್ರಿಹೊತ್ತು ಜೋರಾಗಿ ಕಿರುಚುತ್ತಾಳೆ. ಅಮ್ಮಾವರು ಚೆನ್ನಾಗಿಯೇ ಇದ್ದರು. ನಿದ್ದೆಮಾಡುತ್ತಿದ್ದರು. ಅವರ ಪ್ರಾಣ ತೆಗೆದಿದೆ. ಇನ್ನು ಮಗನ ಯೋಗಕ್ಷೇಮ ನೋಡಿಕೊಳ್ಳಿ. ಈ ಮನೆ ಬಿಟ್ಟುಬಿಡಿ" ಎಂದು ಹೇಳುತ್ತಾ ಇದ್ದಳು. ಪಪ್ಪ "ಹೌದಾ" ಎಂದಿದ್ದರು.

ಅಮ್ಮ ಕೂಡ 'ನಾನು ಈ ಭಾರೀ ಬಂಗಲೆಯಲ್ಲಿ ಇರೋದಿಲ್ಲ' ಎಂದು ಹೇಳುತ್ತಲೇ ಇದ್ದರು. ಆದರೆ ಪಪ್ಪ ಅಮ್ಮನ ಮಾತನ್ನು ಒಪ್ಪಿರಲಿಲ್ಲ. "ನನಗೆ ಈ ಬಂಗಲೆಗಳು ಬೇಕಿಲ್ಲ. ಒಂದು ಹುಲ್ಲಿನ ಗುಡಿಸಿಲು ಹಾಕಿಸಿಕೊಡಿ" ಎಂದು ಅಮ್ಮ ಹೇಳುತ್ತಿದ್ದರು. ಅಮ್ಮಮ್ಮ ಕೂಡ–"ಈ ದೊಡ್ಡಮನೆ ನನ್ನ ಮಗಳನ್ನು ನುಂಗಿಬಿಟ್ಟಿತು." ಎಂದು

ಹೇಳುತ್ತಿದ್ದರು. ಆ ದಿನ ಪಪ್ಪ ಅಜ್ಜಿಯ ಹತ್ತಿರ, ನನ್ನ ಅಮ್ಮ ಇವಳಲ್ಲ, ಬೇರೆ ಯಾರೋ ಅಂತ ಹೇಳುತ್ತಾ ಇದ್ದರು.........ನನ್ನ ಅಮ್ಮ ಎಲ್ಲಿ ಹೋದರು? ಯಾರಿಗೆ ಗೊತ್ತು ಅವರನ್ನು ಈ ಬಂಗಲೆ ತಿಂದುಕೊಂಡುಬಿಟ್ಟಿತೋ ಏನೋ.

ಪಪ್ಪ ಮಲಗಿಕೊಂಡಿದ್ದಾರೆ. ಎಲ್ಲರೂ ಮಲಗಿ ನಿದ್ದೆಮಾಡುತ್ತಾ ಇದ್ದಾರೆ. ನನಗೆ ನಿದ್ದೆ ಬರುತ್ತಾ ಇಲ್ಲ........

ಪಪ್ಪ ಎಲ್ಲಿಹೋಗಿಬಿಟ್ಟರು? ಈಗಿನ್ನೂ ನಿದ್ದೆಮಾಡುತ್ತಾ ಇದ್ದರು......ಮಂಚದ ಮೇಲಿಂದ ಎದ್ದು ಅದೆಲ್ಲಿಗೆ ಹೋದರು?

ಇಷ್ಟೊಂದು ಕತ್ತಲಲ್ಲಿ.........

ನನಗೊಬ್ಬಳಿಗೇ ಭಯ ಜಾಸ್ತಿ ಆಗುತ್ತೆ. ಪಪ್ಪ ಎಲ್ಲಿಹೋದರು?

ಪಪ್ಪ ಬಾಗಿಲಿಂದ ಆಚೆಗೆ ಹೋದರು. ನನಗೆ ತುಂಬ ಭಯವಾಯಿತು. ಎದ್ದು ಮಂಚದ ಮೇಲೆ ಕುಳಿತುಕೊಂಡೆ. ಆಮೇಲೆ ಹೊರಕ್ಕೆ ಬಂದು ನೋಡಿದೆ. ಪಪ್ಪ ಕಾಣಿಸಲಿಲ್ಲ. ಪಪ್ಪ ಈಗಿನ್ನೂ ಇಲ್ಲೇ ಇದ್ದರು. ಎಲ್ಲಿ ಹೋಗಿಬಿಟ್ಟರು.?

ದಯಾಲಿಯ ಮಂಚದ ಕಡೆಯಿಂದ ಮೆಲ್ಲಗೆ ಹೆಜ್ಜೆ ಇಟ್ಟುಕೊಂಡು ಹೊರಗಡೆಗೆ ಬಂದೆ– ಯಾರೋ ಮರಗಳ ಕಡೆಗೆ ಹೋಗುತ್ತಾ ಇದ್ದರು. ಪಪ್ಪ ಮರಗಳ ಕಡೆಗೆ ಹೋಗುತ್ತಾ ಇದ್ದರು.........

ನಾನು ಎಷ್ಟೋ ಹೊತ್ತು ಅಲ್ಲೇ ನಿಂತಿದ್ದೆ.. ನೋಡುತ್ತಲೇ ಇದ್ದೆ–ಮರಗಳ ಮಧ್ಯದಿಂದ ಸಾಗಿ ಚಿಕ್ಕಿಯ ಕೊಠಡಿಯೊಳಕ್ಕೆ ಹೋಗಿಬಿಟ್ಟರು.

ನನ್ನ ಕಾಲುಗಳು ನಡುಗುತ್ತಾ ಇದ್ದುವು. ಹೆಜ್ಜೆಗಳೂ ಸಹ. ಆದರೂ ಪಪ್ಪಾನ ಹಿಂದೆ ಹೋಗಿಬಿಟ್ಟೆ.

ಚಿಕ್ಕಿಯ ಕೋಣೆಯಲ್ಲಿ ದೀಪ ಉರಿಯುತ್ತಿತ್ತು. ಬಾಗಿಲು ಹಾಕಿತ್ತು. ಅದರೆ ಪಪ್ಪ ಅಲ್ಲಿ ನಿಂತಿರುವುದು ಕಿಟಕಿಯಲ್ಲಿ ಕಾಣಿಸುತ್ತಿತ್ತು.

ಚಿಕ್ಕಿಯಂತೂ ಇಲ್ಲಿ ಇರಲೇ ಇಲ್ಲ. ಅದು ಯಾವಾಗ ಬಂದರೋ ಗೊತ್ತೇ ಇಲ್ಲ. ಪಪ್ಪನಿಗೆ ಅವರು "ಕೂತುಕೊಳ್ಳಿ" ಎಂದರು. ಪಪ್ಪ ಹಾಗೇ ನಿಂತೇ ಇದ್ದರು. ಮಾತಾಡಲೂ ಇಲ್ಲ, ಕೂರಲೂ ಇಲ್ಲ.

ಚಿಕ್ಕಮ್ಮ ಹೇಳುತ್ತಾ ಇದ್ದರು–"ನಿಮಗೆ ಗಂಡುಮಗು ಆದದ್ದಕ್ಕೆ ಅಭಿನಂದನೆ ಹೇಳಬೇಕಿತ್ತು. ಆದರೆ ಈಗ ಏನು ಹೇಳೋದು. ಮಾಲಿ ಕಡೆಯಿಂದ ಸುದ್ದಿ ಕೇಳಿದೆ."

ಪಪ್ಪ–"ಏನು ಆಗಬೇಕು ಅಂತ ಇತ್ತೋ ಅದಾಯಿತು." ಎಂದರು.

"ಒಳ್ಳೆಯದು. ಮಗು ಚಿರಂಜೀವಿಯಾಗಿ ಬಾಳಲಿ" ಎಂದು ಚಿಕ್ಕಿ ಹೇಳಿದರು.

ಪಪ್ಪ ನಗಲಾರಂಭಿಸಿದರು. ಅದೆಷ್ಟು ಜೋರಾಗಿ ಅಂದರೆ ನನಗೆ ಭಯವಾಗ ತೊಡಗಿತು. ಮತ್ತೆ ಹೇಳಿದರು– "ಮಗು ಚಿರಂಜೀವಿಯಾಗಿ ಬಾಳಲಿ ಎಂದು ನೀನು ಬಯಸುತ್ತೀಯಾ?"

"ನಾನೇನು ನಿಮ್ಮ ಶತ್ರುವೇನು?" ಚಿಕ್ಕಿ ಅಳತೊಡಗಿದರು.

ಪಪ್ಪ ಹೇಳುತ್ತಾ ಇದ್ದರು–"ನನ್ನ ಶತ್ರು ಅಲ್ಲ, ಆದರೆ ಮಗುವಿನ ಮತ್ತು ಮಗುವಿನ ತಾಯಿಯ ಶತ್ರು."

ಪಪ್ಪ ಚಿಕ್ಕಿಗೆ ಜೋರಾಗಿ ಒಂದು ಹೊಡೆತ ಕೊಟ್ಟರು. ಚಿಕ್ಕಿ ಚೀರುತ್ತ ನೆಲದಮೇಲೆ ಕೂತುಬಿಟ್ಟರು.

ಪಪ್ಪ ಹೇಳುತ್ತಾ ಇದ್ದರು–"ಯಾವತ್ತು ನೀನು ಅವಳ ಕೂದಲು ಕತ್ತರಿಸಿದೆಯೋ ಆ ಹೊತ್ತೇ ನನಗೆ ಗ್ಯಾರಂಟಿ ಆಗಿಬಿಟ್ಟಿತ್ತು."

ಅಯ್ಯೋ ದೇವರೇ! ಚಿಕ್ಕಿ ಅಮ್ಮನ ಕೂದಲು ಕತ್ತರಿಸಿದ್ದರೆ? ಪಪ್ಪ ಹೇಳುತ್ತಾ ಇದ್ದರು–"ಆಹೊತ್ತು ಕೊಟ್ಟ ಏಟಿನಿಂದ ನೀನು ಸರಿಹೋಗುತ್ತೀಯಾ ಅಂತ ನಾನು ಅಂದುಕೊಂಡಿದ್ದೆ."

ಏನು ಆ ಹೊತ್ತು ಪಪ್ಪ ಚಿಕ್ಕಿಗೆ ಹೊಡೆದಿದ್ದರಾ? ಅದಕ್ಕೇ ಆ ಹೊತ್ತು ಅವರ ಮುಖ ಸ್ವಲ್ಪ ನಿಲಿಬಣ್ಣಕ್ಕೆ ತಿರುಗಿತ್ತು. ಆದರೆ ಚಿಕ್ಕಿ ಹೇಳುತ್ತಾ ಇದ್ದದ್ದು ಭೂತ ಬಂದಿತ್ತು ಅಂತ.

ಪಪ್ಪ ಹೇಳುತ್ತಾ ಇದ್ದರು–"ರಾತ್ರಿಹೊತ್ತು ನೀನು ಉರ್ಮಿಯ ಕೋಣೆಗೆ ಹೋಗಕೂಡದು ಅಂತ ಅದೆಷ್ಟುಸಲ ನಾನು ನಿನಗೆ ಹೇಳಿರಲಿಲ್ಲ......."

ಅಯ್ಯೋ ದೇವರೇ! ಚಿಕ್ಕಮ್ಮ ನನ್ನ ಕೊಠಡಿಗೆ ಬಂದು ನನ್ನನ್ನು ಹೆದರಿಸುತ್ತಾ ಇದ್ದರಾ? ಹಾಗಾದರೆ ಚಿಕ್ಕೀನೇ ಭೂತಾನಾ?

ಚಿಕ್ಕಿ ಅಳುತ್ತಾ ಇದ್ದರು. ಹೇಳಿದರು–"ಇದು ನನ್ನ ಹತೋಟಿಗೆ ಮೀರಿದ್ದು. ರಾತ್ರಿ ಹೊತ್ತು ನನ್ನ ಎದೆ ವ್ಯಾಕುಲಗೊಳ್ಳತೊಡಗುತ್ತದೆ. ಅವಳನ್ನು ಎದೆಗೆ ಅಪ್ಪಿಕೊಂಡು ಮಲಗಬೇಕು ಅಂತ ಆಸೆಯಾಗುತ್ತೆ. ಕಾರಣ ಅವಳು ನನ್ನ ಹೊಟ್ಟೇಲಿ ಹುಟ್ಟಿದವಳು........"

ಓ ದೇವರೇ! ಈ ಚಿಕ್ಕಮ್ಮ ನನ್ನ ಅಮ್ಮ........

ನಾನು ನಡುನಡುಗುತ್ತ ನೆಲದಮೇಲೆ ಕೂತುಬಿಟ್ಟೆ.

ಬಹುಶಃ ಪಪ್ಪ ಚಿಕ್ಕಿಯನ್ನು ಇನ್ನೊಮ್ಮೆ ಹೊಡೆದಿರಬೇಕು. ಏನೋ ಶಬ್ದ ಕೇಳಿಸಿದ

ಹಾಗಾಯಿತು. ಏನು ಅಂತ ಗೊತ್ತಿಲ್ಲ. ಆಮೇಲೆ ಪಪ್ಪನ ಧ್ವನಿ ಕೇಳಿಬಂತು–"ಈಗ ಹೇಳು ನಿನಗೇನು ಬೇಕು?"

ಅವರು ಅಳುತ್ತಾ ಇದ್ದರು. "ನನಗೇನೂ ಬೇಡ" ಎಂದರು.

ಪಪ್ಪ ಹೇಳುತ್ತಾ ಇದ್ದರು–"ನಾನು ನಿನಗೆ ಯಾವತ್ತೂ ಏನೂ ಹೇಳಲಿಲ್ಲ. ನನಗೂ ನಿನಗೂ ಯಾವುದೇ ಸಂಬಂಧವಿಲ್ಲ ಅಂತ ಮೊದಲನೇ ದಿನವೇ ಹೇಳಿದ್ದೆ. ನನ್ನ ಮಗಳನ್ನು ನಾನು ನನ್ನ ಹತ್ತಿರ ಇಟ್ಟುಕೊಳ್ಳುತ್ತೇನೆ. ಅವಳು ನಿನ್ನ ಮಗಳು ಅಂತ ನೀನು ಯಾವತ್ತೂ ಅವಳಿಗೆ ಹೇಳಕೂಡದು ಅಂತ ಹೇಳಿದ್ದೆ."

"ನಾನು ಯಾವತ್ತೂ ಅವಳಿಗೆ ಹೇಳಲಿಲ್ಲ"–ಎಂದು ಚಿಕ್ಕಿ ಹೇಳಿದರು.

ಆದರೆ ಪಪ್ಪ ಹೇಳುತ್ತಾ ಇದ್ದರು–"ನೀನು ತಿಂಗಳಿಗೆ ಇನ್ನೂರು ರೂಪಾಯಿ ಕೊಡಿ ಅಂತ ಕೇಳಿದ್ದೆ. ಅಷ್ಟನ್ನು ನಾನು ಪ್ರತಿ ತಿಂಗಳೂ ನಿನಗೆ ಕೊಡುತ್ತಾ ಇದ್ದೆ. ಹಳ್ಳಿಯಲ್ಲಿರುವುದು ನಿನಗೆ ಇಷ್ಟವಿರಲಿಲ್ಲ. 'ನಾನು ಮಗಳನ್ನು ನೋಡುತ್ತಾ ಇರಬಹುದು' ಎನ್ನುವ ಕಾರಣಕ್ಕೆ ನೀನು ಇಲ್ಲಿ ಇರಬೇಕು ಅಂತ ಇಷ್ಟಪಡುತ್ತಿದ್ದೆ. ಅದಕ್ಕೇ ನಾನು ನಿನ್ನನ್ನು ತಂದು ಇಲ್ಲಿಟ್ಟೆ......."

ಚಿಕ್ಕಿ ಪಪ್ಪನ ಪಾದಗಳ ಮೇಲೆ ತಲೆಯಿಟ್ಟು ಹೇಳುತ್ತಿದ್ದರು–"ನಿಮ್ಮ ಕಾಲಿಗೆ ಬೀಳುತ್ತೀನಿ. ನಿವು ಕೊಟ್ಟಮಾತಿನಂತೆ ನಡೆದುಕೊಳ್ಳಲಿಲ್ಲ ಅಂತ ಯಾವಾಗ ಹೇಳಿದೆ.........ನಾನು ಏನೂ ಹೇಳಲ್ಲ, ಏನೂ ಕೇಳಲ್ಲ........ನನ್ನ ಮಾತನ್ನಾದರೂ ಸ್ವಲ್ಪ ಕೇಳಿಸಿಕೊಳ್ಳಿ. ...."

ಪಪ್ಪ ಹೇಳುತ್ತಾ ಇದ್ದರು–"ನೀನು ಏನೂ ಕೇಳಲ್ಲ, ಕೇವಲ ನನ್ನ ಮಗನ ಪ್ರಾಣ ಕೇಳುತ್ತೀಯ. ಅವನ ತಾಯಿಯ ಪ್ರಾಣ ಕೇಳುತ್ತೀಯ.......ಆದರೆ.........ನಾನು ನಿನ್ನ ಕೆಲಸಕ್ಕೆ ಬಾರದ ಮಾತನ್ನು ಕೇಳುವುದಕ್ಕೆ ಇಲ್ಲಿ ನಿಂತಿಲ್ಲ. ಮಾಲಿಯನ್ನು ಕಳಿಸಿಕೊಟ್ಟು ನಿನ್ನನ್ನು ಊರಿನಿಂದ ಕರೆಸಿಕೊಂಡದ್ದು ಯಾತಕ್ಕೆ ಅಂತ ಗೊತ್ತಿದೆಯೇನು?"

ಚಿಕ್ಕಿಯದು ಮಾತೇ ಇಲ್ಲ. ಪಪ್ಪ ಹೇಳುತ್ತಿದ್ದರು–"ನಿನ್ನನ್ನು ಪೋಲಿಸ್‌ಗೆ ಹ್ಯಾಂಡ್ ಓವರ್ ಮಾಡುವುದಕ್ಕೆ."

"ಪೋಲಿಸ್‌ಗಾ ಏಕೆ?......."

"ನೀನು ಅವಳಿಗೆ ವಿಷ ತಿನ್ನಿಸಿದ್ದೀಯ"

"ವಿಷ !......ನಾನು.......ನಾನು ಅವಳಿಗೆ ಅದುಹೇಗೆ ವಿಷ ತಿನ್ನಿಸಲು ಸಾಧ್ಯ?.......ನಾನು ಊರಿನಲ್ಲಿದ್ದೆ......ನೀವು ನನ್ನನ್ನು ಊರಿಗೆ ಕಳಿಸಿದ್ದಿರಿ......."

"ಊರಿಗೆ ಕಳಿಸಿ ನಾನೇನಾದರೂ ನಿನ್ನನ್ನು ಕಟ್ಟಿಹಾಕಿದ್ದೆನೆ? ಎಲ್ಲರ ಕಣ್ಣುತಪ್ಪಿಸಿ ನೀನು ಇಲ್ಲಿಗೆ ಬಂದಿದ್ದೆ......"

"ಇಲ್ಲವಲ್ಲ........."

ನೀನು ಅಡಿಗೆ ಮನೆಗೆ ಹೋಗಿದ್ದೆ. ಅವಳಿಗೋಸ್ಕರ ಒಲೆ ಮೇಲೆ ಬಡೇಸೋಪು ಮತ್ತು ಏಲಕ್ಕಿಯನ್ನು ಬೆರೆಸಿ ನೀರು ಕುದಿಸುವುದಕ್ಕೆ ಇಟ್ಟಿತ್ತಲ್ಲ, ನೀನು ಅದರಲ್ಲಿ.........."

"ಇಲ್ಲ.......ಇಲ್ಲ........ಇಲ್ಲ"

"ಆ ನೀರನ್ನು ಕುಡಿಯುವುದು ಅವಳೇ ಅಂತ ನಿನಗೆ ಗೊತ್ತಿತ್ತು."

"ಇಲ್ಲಾ........ಇಲ್ಲಾ........."

"ಆದರೆ ಆ ಉಳಿದಿರುವ ನೀರನ್ನು ನಾನು ಟೆಸ್ಟ್ ಮಾಡಿಸುತ್ತೀನಿ ಅಂತ ಬಹುಶಃ ನಿನಗೆ ಗೊತ್ತಿರಲಿಲ್ಲ........."

"ಚಿಕ್ಕಮ್ಮನ ಬಾಯಿಂದ ದನಿಯೇ ಹೊರಡಲಿಲ್ಲ. ಪಪ್ಪಾನ ಧ್ವನಿ ಹೊಮ್ಮಿತು–"ನಿನ್ನ ಕೈಲಿ ಸುಮ್ಮನೆ ಇರಲು ಆಗಲಿಲ್ಲ. ನೀನು ಆ ರಾತ್ರಿ ಉರ್ಮಿಯ ಕೋಣೆಗೂ ಹೋದೆ. ಅದಕ್ಕೆ ನನ್ನ ಹತ್ತಿರ ಸಾಕ್ಷ್ಯ ಇದೆ."

ಅಮ್ಮನಿಗೆ ವಿಷಾನೇ......?.......ಅದೂ ಚಿಕ್ಕಮ್ಮ.....?

ಇವರು ಚಿಕ್ಕಮ್ಮ ಅಲ್ಲ, ನನ್ನ ಅಮ್ಮ ಎಂದು ಯೋಚಿಸಬಯಸಿದೆ. ಆದರೆ ನನಗೆ ಅದಕ್ಕೆ ವಿರುದ್ಧವಾಗಿ ಅನ್ನಿಸತೊಡಗಿತು......ಇಲ್ಲ......ಈಕೆ ನನ್ನ ತಾಯಿ ಅಲ್ಲ.......ಇವರಲ್ಲ......ಬೇರೆ ಯಾರೋ......ಇವರಲ್ಲ

ಧ್ವನಿ ಹೊರಹೊಮ್ಮಿತು. ಅವರು ಅಳುತ್ತಾ ಇದ್ದರು– "ಹೊಡೆದುಬಿಡಿ. ನಿಮ್ಮ ಕೈಯಿಂದ ಹೊಡೆದುಬಿಡಿ. ಪೋಲೀಸರಿಗೆ ಮಾತ್ರ ನನ್ನನ್ನು ಒಪ್ಪಿಸಬೇಡಿ......."

ಪಪ್ಪ ಹೇಳುತ್ತಾ ಇದ್ದರು–– "ಸಾಯಬೇಕಾದವಳು ಸತ್ತುಹೋದಳು. ಈಗ ಅವಳ ಜಾಗದಲ್ಲಿ........ನೀನು......ಅಂತ ನೀನು ಅಂದುಕೊಂಡಿದ್ದೆ......" ಹಾಗೆಹೇಳಿ ಪಪ್ಪ ಜೋರಾಗಿ ನಗತೊಡಗಿದರು.

ಪಪ್ಪನ ನಗುವಿನಿಂದ ಬಹಳ ಭಯ ಅನ್ನಿಸುತ್ತೆ........

ನಾನು ಅಲ್ಲಿಂದ ಯಾವಾಗ ಎದ್ದುಹೊರಟೆ, ಎಷ್ಟುಹೊತ್ತಿಗೆ ನನ್ನ ಕೊಠಡಿಗೆ ವಾಪಸ್ ಬಂದೆ, ಎಷ್ಟುಹೊತ್ತಿಗೆ ಮಲಗಿಕೊಂಡೆ......ಯಾವುದೂ ನನಗೆ ಗೊತ್ತಿಲ್ಲ.

ಕಣ್ಣುತೆರೆದಾಗ.......ಸೂರ್ಯ ಆಗಲೇ ಮೇಲಕ್ಕೆ ಬಂದಿದ್ದ. ಪಪ್ಪ ನನ್ನ ಬಾಯಲ್ಲಿ ಥರ್ಮಾಮೀಟರ್ ಇಟ್ಟು– "ದಯಾಲಿ, ಮಾಲಿಗೆ ಹೇಳು. ಡಾಕ್ಟರನ್ನು

ಕರೆದುಕೊಂಡುಬರಲಿ. ಜ್ವರ ತುಂಬ ಜಾಸ್ತಿ ಇದೆ" ಎಂದು ಹೇಳುತ್ತಾ ಇದ್ದರು.

ಆಮೇಲೆ ಪೋಲಿಸ್ ಕಾನ್ ಸ್ಟೇಬಲ್‌ಗಳು ಬಂದರು. ಬಹಳ ಜನ ಕಾನ್ ಸ್ಟೇಬಲ್‌ಗಳು....... ಚಿಕ್ಕಮ್ಮ...... ಮುಂದೆ ಮುಂದೆ ಓಡುತ್ತಿದ್ದರು. ಪೋಲಿಸರು ಹಿಂದೆ ಹಿಂದೆ. ಚಿಕ್ಕಮ್ಮ, ಅಲ್ಲ ಅಮ್ಮ......ಅಲ್ಲ.....ಅಮ್ಮ ಅಲ್ಲ....ಆಮೇಲೆ ಅವಳು ಪುಟ್ಟನ ಬಳಿಗೆ ಬಂದಳು. ಮಂಚದಮೇಲಿದ್ದ ಪುಟ್ಟನನ್ನು ಎತ್ತಿಕೊಂಡು ಓಡಿಬಿಟ್ಟಳು.......

ಪುಟ್ಟ ಅಳುತ್ತಾ ಇದೆ......ಆಮೇಲೆ ಒಬ್ಬ ಪೋಲೀಸ್ ಅವಳ ಕಡೆಯಿಂದ ಪುಟ್ಟನನ್ನು ಕಿತ್ತುಕೊಂಡನು......ಪಪ್ಪ ಪುಟ್ಟನನ್ನು ಸಮಾಧಾನಮಾಡುತ್ತಾ ಇದ್ದಾರೆ.........

ಓಹ್ ! ನನ್ನ ತೋಳಿಗೆ ಸೂಜಿ ಚುಚ್ಚಬೇಡಿ......ಇಲ್ಲ......ನಾನು ಔಷಧಿ ಕುಡಿಯಲ್ಲ.......ಕಹಿ ವಿಷ.......ಇದರಲ್ಲಿ ವಿಷ ಇದೆ.......

16

ದಯಾಲಿ ಒದ್ದೆ ಬಟ್ಟೆಯಿಂದ ನನ್ನ ಮೈ ಒರೆಸಿದ್ದಾಳೆ. ಅಮ್ಮಮ್ಮ ಹೊಸ ಷರ್ಟ್ ಕೊಟ್ಟಿದ್ದಾರೆ.......ತೊಟ್ಟುಕೊಳ್ಳುತ್ತೇನೆ.

"ಹುಡುಗಿಗೇನೋ ಕೆಡುಕಾಗೋದಿತ್ತು.......ಉಳಿದುಕೊಂಡುಬಿಟ್ಟಳು........ಇಲ್ಲ ಅಂದರೆ ಏನೋ ಒಂದು ಆಗುತ್ತಿತ್ತು."......ಎಂದು ಅಜ್ಜಿ ಹೇಳುತ್ತಾ ಇದ್ದಾರೆ.

"ಅಮ್ಮನ ಚೆಹರೇನೆ ನುಂಗಿಬಿಟ್ಟಳು."–ಅಮ್ಮಮ್ಮ ಹೇಳುತ್ತಾ ಇದ್ದಾರೆ.

"ಪಪ್ಪ ಎಲ್ಲಿಗೆ ಹೋಗಿದ್ದಾರೆ?"–ಎಂದು ಒಂದುಸಲ ಕೇಳಿದೆ.

"ಈ ಹೊತ್ತು ಮೊದಲನೇಸಲ ಆಫೀಸಿಗೆ ಹೋಗಿದ್ದಾರೆ.......ಎಷ್ಟು ದಿನ ಅಂತ ನಿನ್ನ ತಲೆಬುಡದಲ್ಲಿ ಕುಳಿತಿರುತ್ತಾರೆ"–ಅಜ್ಜಿ ಹೇಳುತ್ತಾರೆ.

"ಪುಟ್ಟ ಎಲ್ಲಿ?" ಮತ್ತೆ ಕೇಳಿದೆ.

"ಈಗತಾನೆ ಹಾಲುಕುಡಿದು ಮಲಗಿದೆ. ಎದ್ದ ಮೇಲೆ ನಿನಗೆ ತೋರಿಸುತ್ತೇನೆ"– ಅಮ್ಮಮ್ಮ ಹೇಳುತ್ತಾರೆ.

ಇನ್ನೇನೋ ಕೇಳಬೇಕು ಅನ್ನಿಸುತ್ತೆ. ಏನು ಅಂತ ಗೊತ್ತಿಲ್ಲ. ಆದರೆ ಕೇಳಲ್ಲ.

"ಈ ಮಗೂನ ಒಂದನ್ನೇ ಬಿಟ್ಟಿರಬೇಡಿ. ಅದರ ಹತ್ತಿರ ಕೂತುಕೊಳ್ಳಿ"–ಅಜ್ಜಿ ಅಮ್ಮಮ್ಮನಿಗೆ ಹೇಳುತ್ತಿದ್ದಾರೆ. ಸ್ವತಃ ತಾವೇ ಅಲ್ಲಿಂದ ಹೊರಡುತ್ತಾರೆ. ಅಮ್ಮಮ್ಮ ಕೂಡ ಅವರ ಹಿಂದೆಯೇ ಹೊರಟುಹೋಗುತ್ತಾರೆ.

"ನಿನಗೆ ಜೋರು ಜ್ವರ ಇತ್ತು. ಜ್ವರದ ಕನವರಿಕೆಯ ಸ್ಥಿತಿಯಲ್ಲಿ ನಿನಗೆ ಪೋಲೀಸರು ಕಾಣಿಸುತ್ತ ಇದ್ದರು."........ಎಂದು ದಯಾಲಿ ಹೇಳುತ್ತಾಳೆ.

"ಇಲ್ಲಿಗೆ ಪೋಲಿಸ್ ಕಾನ್‌ಸ್ಟೇಬಲ್‌ಗಳು ಬಂದಿದ್ದರಾ" ಎಂದು ನಾನು ಕೇಳುತ್ತೇನೆ. "ಇಲ್ಲಿಗೆ ಯಾಕೆ ಬರುತ್ತಾರೆ?" ಎಂದು ದಯಾಲಿ ಹೇಳುತ್ತಾಳೆ.

"ಚಿಕ್ಕಮ್ಮ.....?"

ದಯಾಲಿ ಮೊದಲು ಸುಮ್ಮನೆ ಇರುತ್ತಾಳೆ. ಅನಂತರ–"ನಿನಗೆ ಒಂದು ಮಾತು ಹೇಳಲೇನು? ಅಲ್ಲಿ ಹಿಂದುಗಡೆ ಕೊಠಡಿಯಲ್ಲಿ ಚಿಕ್ಕಮ್ಮ ಇರುತ್ತಾ ಇದ್ದಳಲ್ಲ.......ಆಮೇಲೆ ಅವಳು ಊರಿಗೆ ಹೊರಟುಹೋಗಿದ್ದಳು......ಅವಳು ಅಲ್ಲಿಯ ಛಾನಲ್‌ನಲ್ಲಿ ಮುಳುಗಿಹೋದಳು ಅಂತ ಸುದ್ದಿ ಕೇಳಿದೆ......" ಎಂದಳು.

ನಾನು ಮಾತಿಲ್ಲದೆ ನಿಶ್ಶಬ್ದವಾಗಿ ಮಂಚದ ಮೇಲೆ ಮಲಗಿದ್ದೀನಿ........ಒಂದು ಸಲ ಯೋಚಿಸಿ ನೋಡಿದೆ– ರಾತ್ರಿ ಒಂದು ಭೂತ ಹೇಗೆ ನನ್ನ ತಲೆಮೇಲೆ ಕೈ ಇಟ್ಟಿತ್ತು, ನಾನು ಹೇಗೆ ಹೆದರಿಕೊಳ್ಳುತ್ತ ಇದ್ದೆ. ಆದರೆ ಈಗ ಯೋಚಿಸಿದರೂ ಹೆದರಿಕೆ ಆಗಲ್ಲ ....ಏನೂ ಆಗಲ್ಲ.......

ತಲೆಮೇಲೆ ಏನೋ ಒಂದು ಭಾರ ಇದ್ದಹಾಗೆ ಅನ್ನಿಸುತ್ತೆ. ಆದರೆ ಆಮೇಲೆ ನೋಡಿದರೆ, ನನ್ನ ತೋಳೇ ನನ್ನ ತಲೆಮೇಲಿದೆ.

❖

ಕರಗುತ್ತಿರುವ ಬಂಡೆ

ಪಂಜಾಬಿ ಮೂಲ: ಅಮೃತಾ ಪ್ರೀತಮ್

ರಾತ್ರಿಯ ನಾಲ್ಕನೇ ಪ್ರಹರ. ಸ್ವಯಂಭೂ ಪರ್ವತದ ಶಿಖರದ ಮೇಲೆ ಕಟ್ಟಿದ್ದ ದೇಗುಲದ ಪೂಜಾರಿಗಳು ನಾಲ್ಕನೇ ಪ್ರಹರದ ಸಮಯದಲ್ಲಿ ಈ ಹಾದಿಯಲ್ಲಿ ನಡೆದು ಹೋಗುತ್ತಿದ್ದರು. ಆದರೆ ಈಗ ಈ ಕಾಲುದಾರಿಯಲ್ಲಿ ರಾಜಶ್ರೀಯ ಹೊರತಾಗಿ ಬೇರೆ ಯಾರೊಬ್ಬರೂ ಇರಲಿಲ್ಲ.

ಕಲ್ಲುಬಂಡೆಗಳನ್ನು ಸೀಳಿಕೊಂಡು ಸಾಗುತ್ತಿರುವ ಈ ಕಾಲುದಾರಿ ಮತ್ತು ಈ ಕಾಲುದಾರಿಯೊಂದಿಗೆ ಮಾತಾಡುತ್ತಿರುವ ರಾಜಶ್ರೀಯಹೆಜ್ಜೆಗಳು........

ಈ ಕಾಲುದಾರಿಯ ಮತ್ತು ಅವಳ ಹೆಜ್ಜೆಗಳ ಮಾತು-ಕತೆ ತುಂಬಾ ದೀರ್ಘವಾದುದೆಂದು ಹಾಗೂ ತುಂಬ ಹಳೆಯದೆಂದು ಅವಳಿಗನ್ನಿಸಿತು.

ಪರ್ವತ ಶಿಖರದ ಮೇಲಿನ ದೇಗುಲದ ಕಣ್ಣು ಕೋರೈಸುವ ಕಾಂತಿ ರಾಜಶ್ರೀಯ ಕಣ್ಣುಗಳ ಮೇಲೆ ಬಿದ್ದಾಗ ಅವಳು ಕೂಡಲೇ ಕಣ್ಣುಮುಚ್ಚಿ ಬೇರೆ ಕಡೆಗೆ ಮುಖ ತಿರುಗಿಸಿದಳು.

ದೇಗುಲದ ಹಿಂಬದಿಯಿಂದ ಬಸೀಗಾ ನದಿಯ ಕಡೆಯಿಂದ ಪರ್ವತದ ಮೇಲಿನಿಂದ ಇಳಿಯುತ್ತ ಕಾಲುದಾರಿಯಲ್ಲಿ ಹೆಜ್ಜೆ ಹಾಕತೊಡಗಿದಳು..........

ಈಗಲೂ ಕಾಲ ಕೆಳಗೆ ಸ್ವಯಂಭೂ ಪರ್ವತದ ಕಾಲುದಾರಿ ಚಾಚಿತ್ತು. ಆದರೆ ಅದು ಏರುವ ದಾರಿಯ ಕಡೆಗೆ ಸಾಗುವಂಥದಲ್ಲ. ಇಳಿಯುವ ಕಡೆಗೆ ಸಾಗುವ ಹಾದಿ.

ಇದ್ದಕ್ಕಿದ್ದಂತೆ ರಾಜಶ್ರೀಯ ಹೆಜ್ಜೆಗಳು ಒಂದು ಬಂಡೆಯ ಹತ್ತಿರ ನಿಂತುಬಿಟ್ಟವು; ಆ ಬಂಡೆಯನ್ನು ಹಿಡಿದುಕೊಂಡು ನಿಂತುಬಿಟ್ಟವೇನೋ ಎಂಬಂತೆ.

"ನಾನು ಎಲ್ಲಿಗೆ ಹೋಗುತ್ತಾ ಇದ್ದೀನಿ?" ರಾಜಶ್ರೀಯ ಹೃದಯ ಜೋರಾಗಿ ಡವಗುಟ್ಟಿತು. ಈ ಪ್ರಶ್ನೆಯನ್ನು ಬಹುಶಃ ಅವಳು ತನ್ನ ಹೃದಯದೊಂದಿಗೇ ಕೇಳಿದ್ದಳು. ಹೃದಯ ಒಂದು ಸಲ ಬಸೀಗಾ ನದಿಯ ಆ ದಾರಿಯ ಕಡೆ ನೋಡಿತು.

ನದಿಯ ನೀರಿನ ಹರಿವು ಸದಾ ಸುಳಿಯೊಂದನ್ನು ನಿರ್ಮಿಸಿಕೊಂಡಿದ್ದ ತಿರುವು ಅದಾಗಿತ್ತು. ಮತ್ತೆ ನಕ್ಕು "ಇನ್ನೂರು ವರ್ಷಗಳ ಹಿಂದೆ ನಿನ್ನ ವಂಶದ ಒಬ್ಬ ಕುಮಾರಿಯಾಗಿದ್ದ ರತ್ನ ರಾಜಲಕ್ಷ್ಮೀ ಸಾಗಿದ್ದು ಅದೇ ದಾರಿಯತ್ತ......"

ರಾಜಶ್ರೀಯು ಸ್ವಲ್ಪ ಗಾಬರಿಗೊಂಡು ಅಕ್ಕಪಕ್ಕದ ಬಂಡೆಗಳತ್ತ ನೋಡಿದಳು. ಮೇಲೆ ಕೆಳಗೆ ಎಲ್ಲ ಕಡೆ ಬಂಡೆಗಳಿದ್ದುವು–ಕಲ್ಲುಬಂಡೆಗಳು; ಅಲ್ಲದೆ ಈ ದಾರಿಯನ್ನು ಬಿಟ್ಟರೆ ಅಲ್ಲಿ ಇನ್ನಾವ ದಾರಿಯೂ ಇರಲಿಲ್ಲ.

ರಾಜಶ್ರೀಯ ಕಣ್ಣುಗಳಲ್ಲಿ ಒಂದು ರೀತಿಯ ಬಯಕೆ ತುಂಬಿ ಬಂದಿತು. ಹೆಜ್ಜೆಗಳಿಗೆ ಇರುವುದೊಂದೇ ದಾರಿ......

ಇನ್ನಾವ ದಾರಿಯೂ ಇಲ್ಲವೇಕೆ?.... ಈ ಪರ್ವತದ ಮೇಲೆ ಕೇವಲ ಒಂದೇ ದಾರಿಯನ್ನು ಏಕೆ ನಿರ್ಮಿಸಲಾಯಿತು?

ರಾಜಶ್ರೀಯ ತೆಳ್ಳನೆಯ ಬೆಳ್ಳನೆಯ ಕೈಗಳು ಒಂದು ಬಂಡೆಯನ್ನು ಸಹಸ್ರಾರು ವರ್ಷಗಳ ನಿದ್ರೆಯಿಂದ ಎಚ್ಚರಗೊಳಿಸಿ ಏನನ್ನೋ ಕೇಳುತ್ತಿರುವಂತೆ; ಆದರೆ ಆ ಬಂಡೆ ಅವಳ ತೋಳುಗಳನ್ನು ಆಲಿಂಗಿಸಿಯೂ ಅದರ ಹತ್ತಿರ ಯಾವ ಉತ್ತರವೂ ಇಲ್ಲವೇನೋ ಎಂಬಂತೆ ಮೌನವಾಗಿತ್ತು.

"ರಕಸೀ" ಕಲ್ಲುಗುಂಡುಗಳ ಪರ್ವತದೊಳಗಿನಿಂದ ಒಂದು ಮಿದು ದನಿ ಹೊಮ್ಮಿತು.

ರಾಜಶ್ರೀ ಹೂವಿನ ದಂಡದಂತೆ ಕಂಪಿಸುತ್ತ ನೋಡುತ್ತಾಳೆ–ತನ್ನಿಂದ ಸ್ವಲ್ಪ ದೂರದಲ್ಲಿ ಯಾರನ್ನು ತಾನು ಈ ಪರ್ವತದ ಪ್ರದಕ್ಷಿಣೆ ಮಾಡುವಾಗ ಕಳೆದ ನಲವತ್ತು ದಿನಗಳಿಂದಲೂ ನೋಡುತ್ತಿದ್ದಳೋ ಅವನೇ ಅಲ್ಲಿ ನಿಂತಿದ್ದನು.

"ರಕಸೀ ನನಗೆ ಎದುರು ಮತಾಡಲು ಅನುಮತಿ ಕೊಡು" ಬೇರೆಯಾಗಿ ನಿಂತಿದ್ದ

ಅವನು ಅಲ್ಲೇ ನಿಂತಿರುತ್ತಿದ್ದನು. ಅವನ ದನಿ ಮಾತ್ರ ನಿಧಾನವಾಗಿ ಚಲಿಸುತ್ತ ರಾಜಶ್ರೀಯನ್ನು ಸಮೀಪಿಸಿತು.

ರಾಜಶ್ರೀ ಉಟ್ಟಿದ್ದ ಧೋತರದ ಬಣ್ಣವು ರಾತ್ರಿಯ ನಾಲ್ಕನೇ ಪ್ರಹರದಲ್ಲೂ ಗುಲಾಬಿಯ ಹಾಗಾಯಿತು. ಆದರೆ ಅವಳು ಧೋತರದ ಬಿಳಿಯ ಬಣ್ಣದ ಹಾಗೆ ದುಃಖಭರಿತ ತಣ್ಣನೆಯ ದನಿಯಲ್ಲಿ–"ನನ್ನ ಹೆಸರು 'ರಕಸೀ' ಅಲ್ಲ ಎಂದು ಹೇಳಿದಳು.

"ನನಗೆ ನಿನ್ನ ಹೆಸರೇನೆಂದು ತಿಳಿಯಬೇಕಾದ್ದಿಲ್ಲ. ನಾನು ಇಲ್ಲಿಯ 'ರಕಸಿ' ಯನ್ನಷ್ಟೇ ಕುಡಿದಿದ್ದೇನೆ. ಮತ್ತು ನೀನು ಈ ಭೂಮಿಯ ರಕಸಿಗಿಂತಲೂ ಮಿಗಿಲಾದ ಏನೋ ಒಂದು ವಿಶೇಷ ವಸ್ತು"

"ರಕಸಿ ಕೇವಲ ಅಕ್ಕಿಯ ಮದ್ಯ ಅಷ್ಟೇ. ಒಂದು ವೇಳೆ ಈ ಭೂಮಿಯ ಮಣ್ಣಿನದೂ ಏನಾದರೂ ಮದ್ಯವಿರುತ್ತದೆ ಎಂದಾದರೆ ಅದು ನೀನು"

"ನಾನೆ.....?"

"ನಿನ್ನನ್ನು ನೋಡಿದೆ. ಆ ಮೇಲೆ ಈ ಭುಮಿಯಿಂದ ನಾನು ಮರಳಲಾಗಲಿಲ್ಲ."

"ನೀನು....." ರಾಜಶ್ರೀಯ ದನಿ ರಾತ್ರಿಯ ನಾಲ್ಕನೇ ಪ್ರಹರದ ಹವೆಯ ಹಾಗೆ ಇನ್ನಷ್ಟು ಮಿದುವಾಯಿತು. ತಣ್ಣಗೂ ಆಯಿತು. ಹೇಳತೊಡಗಿದಳು: "ನೀನು ಯಾವ ದೇಶದಿಂದ ಬಂದಿದ್ದೀಯೋ ಅಲ್ಲಿಗೆ ಹಿಂತಿರುಗಿ ಹೋಗಿಬಿಡು"

"ಇಲ್ಲ ಅಂದರೆ...."

"ಇಲ್ಲ ಅಂದರೆ?"

"...... ನಾನು ಪರದೇಸಿ!"

"ನನ್ನ ಹೆಸರು ಕುಮಾರ್"

"ಒಳ್ಳೆಯದು ರಾಜಕುಮಾರ"

"ನಾನು ರಾಜಕುಮಾರನಲ್ಲ. ಕೇವಲ ಒಬ್ಬ ಸಾಧಾರಣ ಕುಮಾರ"

"ಆದರೆ ಇತಿಹಾಸ....." ರಾಜಶ್ರೀ ಏನೋ ಹೇಳುತ್ತ ಅಲ್ಲಿಗೇ ನಿಲ್ಲಿಸಿದಳು. ಆದರೆ ಬೆಳಗಿನ ಹವೆಯಂಥ ದನಿಯಲ್ಲಿ "ನಾನು ಯಾರು ಗೊತ್ತೇನು ನಿನಗೆ?" ಎಂದು ಕೇಳಿದಳು.

ಕುಮಾರನು ಅರಳುತ್ತಿರುವ ಹೂವಿನ ಮೊದಲ ಎಲೆಯ ಹಾಗೆ "ಈ ಮಣ್ಣಿನ ಮಗಳು ಈ ಮಣ್ಣಿನ ಮದಿರೆ ಎಂದನು.

ರಾಜಶ್ರೀಯು ತನ್ನ ಬೆನ್ನನ್ನು ಬಂಡೆಗೆ ಒರಗಿಸಿಕೊಂಡಿದ್ದಳು. ಈ ಕ್ಷಣದಲ್ಲಿ ಪ್ರತಿಯೊಂದು ಆಧಾರವನ್ನೂ ಬಿಟ್ಟುಕೊಡಬೇಕೆಂದು ಅವಳಿಗೆ ಅನ್ನಿಸಿತು. ನೇರವಾಗಿ

ನಿಂತುಕೊಂಡು ಸೆಟೆದುಕೊಂಡಂತಾಗಿ ಹೇಳಿದಳು–"ನಾನು ಕುಮಾರಿ. ನಮ್ಮ ದೇಶದಲ್ಲಿ ಕುಮಾರಿಯಾಗಿರೋದು ಅಂದರೆ ಏನು ಅಂತ ನಿನಗೆ ಗೊತ್ತಿದೆಯಾ?"

"ಇಲ್ಲ"

"ಕೆಳಗಡೆ ಕಠ್ಮಂಡೂ ಹತ್ತಿರ ವಾದಿಗೆ ಹೋಗಿ ಯಾರನ್ನಾದರೂ ಕೇಳು"

"ಯಾರನ್ನೂ ಏನೂ ಕೇಳೋದಿಲ್ಲ. ಕೇಳೋದೇನಿದ್ದರೂ ನಿನ್ನನ್ನು ಮಾತ್ರ."

"ನಾನು ಶಾಕ್ಯ ವಂಶೀಯಳು. ಬೋಧಿಗಳ ಪೂಜ್ಯ ವಂಶದವಳು. ಬಾಂಡಿಯವರ ಪೈಕಿ."

"ಆಮೇಲೆ?"

"ನನ್ನ ವಂಶದಲ್ಲಿ ಯಾವ ಹುಡುಗಿಯಲ್ಲಿ ಮೂವತ್ತೆರಡು ಲಕ್ಷಣಗಳಿವೆಯೋ......"

"ಅದನ್ನು ನಾನು ನೋಡುತ್ತಾ ಇದ್ದೀನಿ. ನೀನು ನನ್ನ ಕನಸುಗಳಿಗಿಂತಲೂ ಸುಂದರ"

"ಆದರೆ ನನ್ನ ವಂಶದಲ್ಲಿ ಇಂಥ ಹುಡುಗಿ ಏಳು ವರ್ಷದವಳಿದ್ದಾಗ ಅವಳನ್ನು ಕುಮಾರಿಯಾಗಿ ಆಯ್ಕೆಮಾಡಲಾಗುತ್ತದೆ."

"ಅಂದರೆ ಅದರರ್ಥ?"

"ನಿನಗೆ ಬಹುಶಃ ನನ್ನ ನೆಲದ ಇತಿಹಾಸ ಗೊತ್ತಿರಲಿಕ್ಕಿಲ್ಲ. ಇಲ್ಲಿಯ ರಾಜ ಕೇವಲ ಆಡಳಿತದ ಪ್ರತಿನಿಧಿಯಾಗಿರುತ್ತಿದ್ದ. ರಾಜ ವಾಸ್ತವದಲ್ಲಿ ಕುಮಾರಿಯವನಾಗಿರುತ್ತಿದ್ದ. ಆ ಕುಮಾರಿ ಮನೆಯಲ್ಲಿರುತ್ತಿದ್ದಳು. ರಾಜನು ಅವಳನ್ನು ಪೂಜಿಸಿ ರಾಜ್ಯಾಡಳಿತವನ್ನು ನಿಭಾಯಿಸುತ್ತಿದ್ದನು."

"ಆದರೆ ಅದು ಹಿಂದಿನ ಕಾಲದ ಸಂಗತಿಯಾಗಿದ್ದಿರಬಹುದು........"

"ಹೌದು. ಆದರೆ ಒಂದು ರೀತಿಯಲ್ಲಿ ಅದು ಈಗಲೂ ಇದೆ. ನನ್ನ ವಂಶದ ಹುಡುಗಿ ಯೌವನಕ್ಕೆ ಬರುವವರೆಗೂ ಕುಮಾರಿಯಾಗಿರುತ್ತಾಳೆ."

"ಆ ಮೇಲೆ?"

"ಅವಳು ಯೌವನಕ್ಕೆ ಬಂದ ಮೇಲೆ ಕುಮಾರಿಯಾಗಿರುವುದಿಲ್ಲ. ಅವಳ ಸ್ಥಾನದಲ್ಲಿ ಇನ್ನೊಬ್ಬ ಕುಮಾರಿಯನ್ನು ಆಯ್ಕೆಮಾಡಲಾಗುವುದು. ದೇಶದ ಪ್ರಭು ಈಗಲೂ ಅವಳನ್ನು ಪೂಜಿಸುವನು. ಕುಮಾರಿ ಅವನ ಹಣೆಯ ಮೇಲೆ ತಿಲಕವಿಡುತ್ತಾಳೆ."

"ಆದರೆ ನೀನು..... ಈಗ......"

"ನಾನೀಗ ಕುಮಾರಿ ಅಲ್ಲ. ಆದರೆ ಕುಮಾರಿ ಆಗಿದ್ದೆ"

"ನನ್ನ ಪ್ರೀತಿಗೆ ನಿನ್ನ ಭೂತ ಕಾಲದೊಂದಿಗೆ ಯಾವ ಸಂಬಂಧವೂ ಇಲ್ಲ. ನೀನು ಹಿಂದೆ ಏನಾದರೂ ಆಗಿರು."

"ಆದರೆ ನಿನಗೆ ಗೊತ್ತಿಲ್ಲ...... ಒಂದು ಮಾತು ಹೇಳಲೆ?..... ನಾನು ಇಂದು ಇಂಥ ಅಪರಾತ್ರಿಯಲ್ಲಿ ಈ ದೇಗುಲದಲ್ಲಿ ಪೂಜೆಮಾಡಲು ಬಂದಿದ್ದೆ. ಆದರೆ ಮಾಡಲಾಗಲಿಲ್ಲ......."

"ಏಕೆ"?

"ನಾನು ನನ್ನ ಶಾಕ್ಯ ವಂಶದ ಬುದ್ಧನೊಂದಿಗೆ...... ನಾನೇ ಸ್ವತಃ ಬೇಡಲು ಬಂದಿದ್ದೆ. ಸ್ವತಃ ನಾನೇ....." ರಾಜಶ್ರೀಯು ಬಂಡೆಯ ಕಡೆ ನೋಡುತ್ತ ಹೇಳಿದಳು– "ಕುಮಾರಿಯಾದವಳು ಒಂದು ಕರಗದ ಬಂಡೆ. ಆದರೆ ನಿನ್ನನ್ನು ನೋಡಿ ನಾನು ಕರಗುತ್ತಿದ್ದೇನೇನೋ ಎಂದು ಕೆಲವು ದಿನಗಳಿಂದ ಅನಿಸತೊಡಗಿದೆ....... ಈ ಪರ್ವತದ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದಾಗ ನೋಡುತ್ತಿದ್ದೆ......"

ಬೆಳಗಾಗುವುದಕ್ಕೆ ಮುನ್ನ ಕತ್ತಲೆ ಇನ್ನಷ್ಟು ಗಾಢವಾಗುವಂತೆ ರಾಜಶ್ರೀಯು ದುಃಖಿತಳಾದಳು. "ತನಗೆ ತಾನೇ ನನ್ನ ಕೈಗಳಿಂದ ಬಿಟ್ಟುಹೋಗುತ್ತಿದೆ....... ಆದರೆ ದೇಗುಲದ ಬಳಿಗೆ ಬಂದೂ ಒಳಕ್ಕೆ ಹೋಗಲಿಲ್ಲ..... ನನ್ನನ್ನು ನಾನೇ ನನ್ನ ಕೈಗಳಲ್ಲಿ ಹಿಡಿದಿಟ್ಟುಕೊಂಡರೆ ತಾನೆ ಏನು ಮಾಡಲಿ?"

ಕುಮಾರನ ಹೆಜ್ಜೆಗಳು ಅವನ ಹೃದಯದಂತೆ ಕಂಪಿಸತೊಡಗಿದವು. ಅವನು ಸ್ವಲ್ಪ ಮುಂದೆ ನಡೆದು ರಾಜಶ್ರೀಯ ಸಮೀಪದಲ್ಲಿ ನಿಂತನು. ಹೂವಿನಿಂದ ಹೊರಹೊಮ್ಮುತ್ತಿರುವ ಕಂಪಿನಂತೆ ನಿಧಾನವಾಗಿ ಹೇಳತೊಡಗಿದನು– "ಕುಮಾರೀ!"

"ಕುಮಾರಿಯಾದವಳು ಇಡೀ ಜೀವಮಾನ ಪರ್ಯಂತ ಕುಮಾರಿಯಾಗಿಯೇ ಇರಬೇಕಾಗುತ್ತದೆ......" ಪುರುಷನ ವಾಸನೆಯಲ್ಲಿ ಉಸಿರಾಡಲು ಹೆದರುತ್ತಿದ್ದಾಳೇನೋ ಎನ್ನುವಂತೆ ರಾಜಶ್ರೀ ತನ್ನೆರಡೂ ಅಂಗೈಗಳಿಂದ ಒಮ್ಮಿಂದೊಮ್ಮೆಗೇ ಮುಖವನ್ನು ಮುಚ್ಚಿಕೊಂಡುಬಿಟ್ಟಳು.

"ಇದು ಕುಮಾರಿ ರಾಜ್ಯದ ಕಾನೂನಲ್ಲ. ಆದರೆ ಯಾರಾದರೂ ಯಾವುದಾದರೊಬ್ಬ ಕುಮಾರಿಯನ್ನು ಮದುವೆಯಾಗುವಂತಿಲ್ಲ. ಒಂದು ವೇಳೆ ಆದರೆ ಸತ್ತುಹೋಗುತ್ತಾನೆ"

"ನನಗೆ ಸಾಯಲು ಒಪ್ಪಿಗೆ ಇದೆ....." ಕುಮಾರನು ತನ್ನೆರಡೂ ಅಂಗೈಗಳನ್ನು ಹೂವನ್ನರ್ಪಿಸುವಂತೆ ರಾಜಶ್ರೀಯ ಅಂಗೈಗಳಲ್ಲಿ ಅರ್ಪಿಸಿದನು.

ರಾಜಶ್ರೀ ಕಂಪಿಸುತ್ತ ತನ್ನ ಮುಖದ ಮೇಲಿನಿಂದ ಅಂಗೈಗಳನ್ನು ಸರಿಸಿ ಹೇಳತೊಡಗಿದಳು–

"ಈ ಭೂಮಿಯ ಮೇಲೆ ಮೊದಲು ಶಕ್ತಿ ರಾಜನು ಇರುತ್ತಿದ್ದನು. ಇದರ ಮೇಲೆ ಆಕ್ರಮಣ ನಡೆದಾಗ ಶ್ವೇತಕಾಳಿಯು ಈ ಭೂಮಿಯ ರಾಣಿಯಾಗಿದ್ದಳು. ಶ್ವೇತಕಾಳಿಯ

ಮಗಳು ಕುಮಾರಿಯ ಕೈಗಳಿಂದ ಒಂದು ವೇಳೆ ಶತ್ರುವಿನ ಯುವಪುತ್ರನ ಹತ್ಯೆಯಾಯಿತೆಂದರೆ ಆಗ ಈ ಭೂಮಿಯ ಗೆಲುವಾಗುವುದು ಎಂದು ಜ್ಯೋತಿಷಿಗಳು ಹೇಳಿದ್ದರು. ಆದರೆ ಕುಮಾರಿಯು ಆ ಆಕ್ರಮಣಕಾರಿಯನ್ನು ನೋಡಿದಾಗ ಅವನನ್ನು..... ಅವನನ್ನು... ..." ಕುಮಾರನ ಮೊಗದತ್ತ ನೋಡಿದಳು. ಅನಂತರ ಒಂದು ಬಂಡೆಯ ಪಕ್ಕಕ್ಕೆ ಹೋಗಿ ಹೇಳತೊಡಗಿದಳು- "ಪ್ರೀತಿ ಮತ್ತು ದ್ವೇಷಗಳ ನಡುವೆ ಗೆರೆ ಎಳೆಯಲಾಗುತ್ತಿರಲಿಲ್ಲ.

ಆದರೆ ಶ್ವೇತಕಾಳಿಯು ಅವಳ ಹತ್ಯೆ ಮಾಡಲು ತನ್ನ ಮಗನಿಗೆ ಆಜ್ಞಾಪಿಸಿದಳು. ಅವನು ಹತ್ಯೆ ಮಾಡಿದನು. ಆಕ್ರಮಣಕಾರರು ಸೋತುಹೋದರು. ಕುಮಾರಿಯನ್ನು ದೇಶದ ರಾಣಿಯನ್ನಾಗಿ ಮಾಡಲಾಯಿತು. ಅವಳು ಪ್ರೀತಿಸಿದ್ದ ಆ ಮನುಷ್ಯನ ಕೈಗಳು, ಕಾಲುಗಳು ಹಾಗೂ ಅವನ ಖಡ್ಗವನ್ನು ಹೂತಿದ್ದ ಜಾಗದ ಮೇಲೆ ಅವಳ ಸಿಂಹಾಸನವನ್ನು ವಿರಚಿಸಲಾಯಿತು"

ಕುಮಾರನು ನಿಧಾನವಾಗಿ ರಾಜಶ್ರೀಯ ಪಾದಗಳ ಸಮೀಪದಲ್ಲಿ ನೆಲದ ಮೇಲೆ ಕೂರುತ್ತ ತನ್ನರಡೂ ಕೈಗಳನ್ನು ನೆಲದ ಮೇಲೆ ಚಾಚಿ ಹೇಳಿದನು-"ಒಂದು ವೇಳೆ ಪ್ರತಿಯೊಬ್ಬ ಕುಮಾರಿಯ ಷರತ್ತು ಇದೇ ಆದರೆ......?"

ರಾಜಶ್ರೀಯು ಬಾಗಿ ಕುಮಾರನ ಎರಡೂ ಕೈಗಳನ್ನು ಸ್ಪರ್ಶಿಸಿ ತನ್ನ ಕೈಗಳ ಆಧಾರ ನೀಡಿ ಅವುಗಳನ್ನು ಮೇಲೆತ್ತಿ ಹೇಳತೊಡಗಿದಳು-"ಆದರೆ ಹೆಣ್ಣಿನ ಪ್ರೀತಿಯು ರಾಜನ ಸಿಂಹಾಸನಕ್ಕಿಂತಲೂ ದೊಡ್ಡದು. ಆ ಕುಮಾರಿಯು ರಾಜ್ಯವಾಳಿದಳು. ಆದರೆ ವಿವಾಹವಾಗಲಿಲ್ಲ. ಯಾರನ್ನು ಹತ್ಯೆಮಾಡಿದ್ದಳೋ ಅವನನ್ನೇ ನೆನೆಯುತ್ತಿದ್ದಳು. ಆಗಿನಿಂದಲೇ ಕುಮಾರಿಯ ಮನೆಯಾಯಿತು. ಆಗಿನಿಂದಲೇ ಯಾರೇ ಕುಮಾರಿಯು ಯಾರೊಂದಿಗೇ ಮದುವೆಯಾದರೂ ಅವನು ಜೀವಂತವಾಗುಳಿಯುವುದಿಲ್ಲ ಎಂಬ ನಂಬಿಕೆ ಬೆಳೆಯಿತು....."

"ಆದರೆ ಕುಮಾರೀ! ಒಂದು ಕಾಲದ ಸತ್ಯ ಎಲ್ಲ ಕಾಲದ ಸತ್ಯವಾಗುವುದಿಲ್ಲ......"

"ಗೊತ್ತಿಲ್ಲ...... "ರಾಜಶ್ರೀಯು ಪರ್ವತದ ಹಿಂಬದಿಯ ಬಸೀಗಾ ನದಿಯ ಕಡೆಗೆ ಕೆಳಗೆ ಸಾಗಿಹೋಗುತ್ತಿದ್ದ ಹಾದಿಯ ಕಡೆ ನೋಡಿ ಹೇಳತೊಡಗಿದಳು- "ನನ್ನ ವಂಶದಲ್ಲಿ ನನ್ನ ಹಾಗೆಯೇ ಒಬ್ಬ ರತ್ನ ರಾಜಲಕ್ಷ್ಮಿ ಆಗಿಹೋಗಿದ್ದಳು....

ನನ್ನ ಹಾಗೆಯೇ ಕುಮಾರಿಯಾಗಿ ಆಯ್ಕೆಯಾದಳು. ರಾಜನು ಕಳಿಸಿಕೊಟ್ಟ ಬಳೆಯನ್ನು ಕೈಗಳಲ್ಲಿ ತೊಟ್ಟುಕೊಂಡಳು. ಕೆಂಪುಬಣ್ಣದ ಕುಪ್ಪಸ ಮತ್ತು ಕೆಂಪು ಬಣ್ಣದ ಲಂಗವನ್ನು

ಧರಿಸಿದಳು. ಹಣೆಯ ಮೇಲೆ ಸಿಂಧೂರದ ಲೇಪ ಹಚ್ಚಿಕೊಂಡಳು. ನನ್ನಂತೆಯೇ ಯೌವನಕ್ಕೆ ಕಾಲಿಟ್ಟಾಗ ಅವಳನ್ನು ಕುಮಾರಿ ನಿವಾಸದಿಂದ ಅವರ ಅಮ್ಮನ ಮನೆಗೆ ವಾಪಸ್ ಕಳಿಸಿಕೊಡಲಾಯಿತು. ಅನೇಕ ವರ್ಷಗಳವರೆಗೆ ಈ ಸ್ವಯಂಭೂ ಪರ್ವತದ ಮೇಲೆ ತಿರುಗಾಡುತ್ತಿದ್ದಳು. ಮತ್ತೆ ಒಂದು ದಿನ ಈ ಪರ್ವತದ ಹಿಂಬದಿಯಲ್ಲಿರುವ ನದಿಯಲ್ಲಿ ಮುಳುಗಿಕೊಂಡಳು."

"ಏಕೆ"? ಕುಮಾರನು ಹಿಂದೆ ಮುಂದೆ ಆಡುತ್ತಿರುವ ಬೆರಳುಗಳಿಂದ ರಾಜಶ್ರೀಯ ಹೆಗಲನ್ನು ಸ್ಪರ್ಶಿಸಿದನು.

"ಬಹುಶಃ......ಬಹುಶಃ ಅವಳಿಗೂ ಯಾವನೋ ಕುಮಾರ ಹಿಡಿಸಿದ್ದಿರಬೇಕು....." ಎಂದು ರಾಜಶ್ರೀ ಹೇಳಿದಳು. ಅನಂತರ ಸ್ವಲ್ಪ ಸರಿದು ಪರ್ವತದ ಕೆಳಕ್ಕೆ ಇಳಿದುಹೋಗುವ ದಾರಿಯತ್ತ ನೋಡತೊಡಗಿದಳು. ಆ ಮೇಲೆ ಹೇಳಿದಳು–""ಇನ್ನೂರು ವರ್ಷಗಳಿಂದ ನಮ್ಮ ಪಾದಗಳಿಗೆ ಇದೇ ರಸ್ತೆಯಾಗಿಬಿಟ್ಟಿದೆ......"

"ಇಲ್ಲ.....ಇಲ್ಲ......" ಕುಮಾರನು ಮುಂದೆ ನಡೆದು ರಾಜಶ್ರೀಯ ಕೈ ಹಿಡಿದುಕೊಂಡನು.

ರಾಜಶ್ರೀಯು ಒಂದು ನದಿಯ ಹಾಗೆ ಆಳವಾಗಿ ಉಸಿರೆಳೆದುಕೊಂಡು ಮತ್ತೆ ಹೇಳತೊಡಗಿದಳು–"ಯಾರಾದರೂ ಹುಡುಗಿಯನ್ನು ಕುಮಾರಿ ಮಾಡಿದಾಗ ಅವಳ ಹಣೆಯ ಮೇಲೆ ಚಿನ್ನ– ಬೆಳ್ಳಿಯದೊಂದು ಕಣ್ಣನ್ನು ಅಳವಡಿಸಲಾಗುತ್ತದೆ. ಅದು ಮೂರನೇ ಕಣ್ಣು. ಅದನ್ನು ನಾವು ದೃಷ್ಟಿ ಎನ್ನುತ್ತೇವೆ. ಅದರಲ್ಲಿ ನಿಜಕ್ಕೂ ಯಾರಾದರೊಬ್ಬ ಶಾಕ್ತಳಿರುತ್ತಾಳೆ. ಅದರಿಂದಾಗಿ ಯಾವತ್ತೂ ಮನಸ್ಸಿನ ಶಕ್ತಿ ಚಂಚಲಗೊಳ್ಳುವುದಿಲ್ಲ. ಆದರೆ ಈಗ ಈ ಎರಡೂ ಸಾಧಾರಣ ಕಣ್ಣುಗಳಿಂದಾಗಿ ಯಾವುದೇ ದಾರಿ ಕಾಣಿಸುತ್ತಿಲ್ಲ......"

ಕುಮಾರನು ಮುಂದೆಬಂದು ರಾಜಶ್ರೀಯನ್ನು ವಾಸ್ತವವಾಗಿ ತನ್ನತ್ತ ಎಳೆದುಕೊಂಡು ಅವಳ ಹಣೆಯನ್ನು ಮುತ್ತಿಟ್ಟನು. "ಇದು ಒಬ್ಬ ಪುರುಷನ ಸಕಲ ಸ್ವೀಕೃತಿ.... ಮೂರನೇ ಕಣ್ಣು". ಆ ಮೇಲೆ ಕುಮಾರನು ರಾಜಶ್ರೀಯನ್ನು ನದಿಯ ಕಡೆಯಿಂದ ಅತ್ತ ಸರಿಸುತ್ತ ಹೇಳಿದನು– "ಏನು ಈ ಮೂರನೇ ಕಣ್ಣಿನಿಂದಲೂ ಬೇರಾವ ದಾರಿಯೂ ಕಾಣಿಸುತ್ತಿಲ್ಲವೆ? ಬದುಕುವ ದಾರಿ.....?"

ರಾಜಶ್ರೀಯು ತನ್ನ ಎದುರುಗಡೆ ಪರ್ವತದಂಥ ಪುರುಷನೊಬ್ಬನನ್ನು ಕಂಡಳು. ಮತ್ತೆ ಅಂಗೈಯಿಂದ ಬದುಕುವ ದಾರಿಯನ್ನು ಹುಡುಕುತ್ತಿದ್ದಾಳೇನೋ ಎನ್ನುವಂತೆ ಅವನ ಎದೆಯನ್ನು ಸ್ಪರ್ಶಿಸಿದಳು. ಹೇಳತೊಡಗಿದಳು– "ಏಳು ವರ್ಷದ ಬಾಲೆಯನ್ನು

ಕುಮಾರಿಯಾಗಿ ಆರಿಸಿದಾಗ ಮೊದಲಿಗೆ ರಾತ್ರಿಯಿಡೀ ಒಂದು ಕೊಠಡಿಯಲ್ಲಿ ಪ್ರಾಣಿಗಳ ಶಿರಸ್ಸನ್ನು ಇಟ್ಟು ಆ ಬಾಲೆಯನ್ನು ಅದರಲ್ಲಿ ಕೂಡಿಹಾಕಲಾಗುತ್ತದೆ. ಯಾರು ರಾತ್ರಿ ಹೆದರುವುದಿಲ್ಲವೋ ಅವಳನ್ನು ಕುಮಾರಿಯಾಗಿ ಆರಿಸಲಾಗುತ್ತದೆ. ...... ಆದರೆ ವಯೋಮಾನಕ್ಕನುಗುಣವಾಗಿ ಅದೇ ಕುಮಾರಿ ತಾನಾಗಿಯೇ ಹೆದರುವ ಕಾಲವೂ ಬರುತ್ತದೆ."

ಕುಮಾರನು ರಾಜಶ್ರೀಯನ್ನು ಬಿಗಿಯಾಗಿ ಅಪ್ಪಿಕೊಂಡನು. ಮತ್ತೆ ಬೆಳಗಿನ ಮೊದಲ ಹೊಂಬೆಳಕಿನಲ್ಲಿ ಸಹಸ್ರಾರು ಬಂಡೆಗಳ ನಡುವೆ ಕರಗುತ್ತಿರುವ ಬಂಡೆಯೊಂದು ನಿಂತಿರುವುದನ್ನು ನೋಡತೊಡಗಿದನು...

❖

ನರಭಕ್ಷಕ

ಹಿಂದಿ ಮೂಲ: ಗೌತಮ್ ಸಚ್ ದೇವ್

ಕೊಠಡಿಯ ಬಣ್ಣ ಇದ್ದಕ್ಕಿದ್ದಂತೆ ಬದಲಾಗಿಬಿಟ್ಟಿದೆ. ಹೇಗೆಂದರೆ ಚಿತ್ರಕಲಾವಿದನೊಬ್ಬ ಈ ನಾಲ್ಕು ಗೋಡೆಗಳ ಕೊಠಡಿಯೆಂಬ ಪಾತ್ರೆಯಲ್ಲಿ ತನ್ನ ಬ್ರಷ್ ಅನ್ನು ತೊಳೆಯಲು ಹಾಕಿಬಿಟ್ಟಿದ್ದಾನೇನೋ ಅನ್ನುವ ಹಾಗೆ ಹಾಗೂ ಇದುವರೆಗೂ ಸ್ವಚ್ಛ ನೀರಿನಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದ್ದ ವಸ್ತುಗಳು ಮಸುಕು ಮಸುಕಾಗಿಬಿಟ್ಟಿವೆಯೇನೋ ಅನ್ನುವ ಹಾಗೆ. ಹೊರಗೆ ಒಮ್ಮೆಗೇ ಸಂಜೆ ಆವರಿಸಿದಂತೆ ಆಗಿದೆ. ನಾನೇ ಕಷ್ಟಪಟ್ಟು ಎದ್ದು ಎರಡು ದೊಡ್ಡ ದಿಂಬುಗಳಿಗೆ ಒರಗಿಕೊಂಡಿದ್ದೇನೆ. ಈಗ ಕಿಟಕಿಯ ಕ್ಯಾನ್‌ವಾಸಿನಲ್ಲಿ ತೂಗಾಡುತ್ತಿರುವ ಆಕಾಶ ಟಿ. ವಿ. ಸ್ಕ್ರೀನ್ ನಂತೆ ತೋರುತ್ತಿದೆ. ಕ್ಯಾನ್‌ವಾಸ್‌ನ ಬಣ್ಣ ಕಿತ್ತಳೆಯಾಗಿದ್ದದ್ದು ಕುಂಕುಮ ವರ್ಣ ತಾಳುತ್ತಿದೆ. ಪಕ್ಷಿಗಳು ಸದ್ದಿಲ್ಲದೆ ಫ್ರೇಮ್‌ನ ಒಳಕ್ಕೆ ಬರುತ್ತಿವೆ ಮತ್ತು ಹೊರಕ್ಕೆ ಹೋಗುತ್ತಿವೆ. ಮತ್ತೆ ಮತ್ತೆ ನನ್ನನ್ನೇ ನಾನು ಈ ಜೀವಂತ ಚಿತ್ರದಲ್ಲಿ ಗುರುತಿಸಿಕೊಳ್ಳಲೆತ್ನಿಸುತ್ತೇನೆ. ಅದರೆ ಮತ್ತೆ ಬಂದು ಇದೇ ಹಾಸಿಗೆಯ ಮೇಲೆ ಬಿದ್ದುಕೊಳ್ಳುತ್ತೇನೆ.

ಎರಡು ವಾರಗಳಿಂದ ಈ ಹಾಸಿಗೆ ನಾನು ಇಲ್ಲಿಂದ ತೊಲಗಿಹೋಗುತ್ತೇನೆಂದು ನಿರೀಕ್ಷಿಸುತ್ತಿದೆ. ತನ್ನನ್ನು ಶಾಶ್ವತವಾಗಿ ಬಳಸಿಕೊಳ್ಳುವಂಥ ಹೃದ್ರೋಗಿ ಯಾರೂ ಇರುವುದಿಲ್ಲ ಎಂದು ಅದಕ್ಕೆ ಸ್ಪಷ್ಟವಾಗಿ ತಿಳಿದಿದೆ. ಆಸ್ಪತ್ರೆಯ ಎಮರ್ಜೆನ್ಸಿ ವಾರ್ಡಿನ ಈ ಹಾಸಿಗೆಯ ಮೇಲೆ ನನಗಿಂತ ಮುಂಚೆ ಅದೆಷ್ಟು ಜನರ ಹೃದಯದ ಮಿಡಿತ ನಿಂತುಹೋಗಿದೆಯೋ ಏನೋ ! ಅದೆಷ್ಟು ಮೃತ ಹೃದಯಗಳನ್ನು ವೇಸ್ಟ್ ಪೇಪರ್ ಎಂದು ಭಾವಿಸಿ ಇಲ್ಲಿಂದ ತೆಗೆದುಹಾಕಿದ್ದಾರೋ ಮತ್ತು ಅದರ ಜಾಗದಲ್ಲಿ ಇನ್ಯಾವುದೋ ಮೃತನ ಬದುಕಿಸಬಹುದಾದ ಹೃದಯವನ್ನು ಅಳವಡಿಸಿದ್ದಾರೋ ಗೊತ್ತಿಲ್ಲ.

ನಾನು ಯಾರದ್ದೋ ಸಾವಿನ ನಿರೀಕ್ಷೆಯಲ್ಲಿದ್ದೇನೆ. ಆತ ಯಾರಾದರೂ ಆಗಿರಲಿ ಹಾಗೂ ಆಕ್ಸಿಡೆಂಟಿನಿಂದಲೋ ಕಾಯಿಲೆಯಿಂದಲೋ ಅಥವಾ ಅತ್ಮಹತ್ಯೆಯಿಂದಲೋ ಯಾವ ರೀತಿಯಿಂದಲಾದರೂ ಸತ್ತಿರಲಿ, ಆದರೆ ಅವರ ಹೃದಯ ಮಾತ್ರ ಸುಸ್ಥಿತಿಯಲ್ಲಿದ್ದರೆ ಆಯಿತು. ಆತನ ಹೃದಯ ನನಗೆ ಅಗತ್ಯವಾಗಿ ಬೇಕಾಗಿದೆ. ಕಾರಣ ನನ್ನ ನಿರ್ಮಾಣವಾದಾಗಲೇ ನಿರ್ಮಿತವಾದ, ನಾನು ಹುಟ್ಟಿದಾಗ ನನ್ನೊಂದಿಗೆ ಅಸ್ತಿತ್ವಕ್ಕೆ ಬಂದ ಹೃದಯ ಈಗ ನನ್ನ ಶರೀರವನ್ನು ಜೀವಂತವಾಗಿ ಇರಿಸಲು ಸಿದ್ಧವಿಲ್ಲ. ಆದರೆ ನನಗೆ ಬದುಕುವ ಇಚ್ಛೆ ಇದೆ.......

ಕಿಟಕಿಯ ಫ್ರೇಮಿಗೇ ಹೂವಿನ ಕುಂಡದ ಆಕಾರ ಕೊಟ್ಟು ಅದರಲ್ಲಿ ಅನೇಕ ಥರದ ಗಿಡಗಂಟಿಗಳನ್ನು ಬೆಳೆಸಿದ್ದಾರೆ. ಅವು ಚಳಿಗಾಲ, ಹಿಮಗಾಲ, ಮಳೆಗಾಲ ಹಾಗೂ ಬೇಸಿಗೆಯ ಸ್ವಲ್ಪ ಸಮಯದಲ್ಲೂ ನಗುತ್ತಾ ನಳನಳಿಸುತ್ತಾ ಇರುತ್ತವೆ. ಐ. ವಿ(i.v)ಯ ಒಂದು ಬಳ್ಳಿ ಮತ್ತೆ ಮತ್ತೆ ಗಾಳಿಯೊಂದಿಗೆ ತಲೆ ಎತ್ತಿ ನನ್ನನ್ನು ನೋಡಲು ಧಾವಿಸುತ್ತಿದೆ. ಅದನ್ನು ಹೀಗೆ ಪರಿಚಯಿಸಿಕೊಳ್ಳುವುದು ನನಗೆ ತುಂಬ ಹಿಡಿಸುತ್ತದೆ. ಗಾಳಿಯ ಒಂದು ಹೊಡೆತಕ್ಕೆ ಅದು ಕುಂಡದ ಈಕಡೆ ನೇತುಬಿದ್ದಿದೆ. "ಹಲ್ಲೋ !" ಎಂದು ಸ್ವಾಗತಿಸುತ್ತೇನೆ. ಬಾಗಿಲು ದಾಟಿ ಒಳಕ್ಕೆ ಬರುತ್ತಿರುವ ನರ್ಸ್–'ಹಲೋ' ಎಂದು ಉತ್ತರಿಸಿದಳು.

ಅವಳು ಮುಗುಳ್ನಗುತ್ತ "ಗುಡ್ ಆಫ್ಟರ್ ನೂನ್" ಎಂದಳು. ಆದರೆ ನನ್ನ "ಗುಡ್ ಆಫ್......" ಎಂಬ ಮಾತುಗಳು ಪೂರ್ತಿಯಾಗುವುದಕ್ಕೆ ಮುಂಚೆಯೇ ಅವಳ ಮುಖ ಬಿಗಿದುಕೊಳ್ಳುತ್ತದೆ. ಅವಳು ಶುಷ್ಕ ಸ್ವರದಿಂದ ಕೇಳುತ್ತಾಳೆ.

ಅದರಲ್ಲಿ ಪ್ರಶ್ನೆಗಿಂತ ಹೆಚ್ಚಾಗಿ ಗದರಿಕೆ ಇದೆ. ನನ್ನ ತೀರಾ ಸಮೀಪಕ್ಕೆ ಬಂದು ಹೇಳುತ್ತಾಳೆ–"ಹಾಸಿಗೆಯಿಂದ ಏಳಕೂಡದು ಅಂತ ಡಾಕ್ಟ್ರ ಹೇಳಿರೋದು ನಿಮಗೆ ಗೊತ್ತಿಲ್ಲವೆ? ಈ ಡ್ರಿಪ್ ಹಾಕಿದೆಯಲ್ಲ ಅದೇನಾದರೂ ಕಳಚಿಕೊಂಡರೆ ಏನು ಗತಿ?"

ಒಮ್ಮೆಲೇ ನನ್ನ ಗಮನ ನನ್ನ ತೋಳಿಗೆ ಚುಚ್ಚಿದ್ದ ಸೂಜಿಯ ಕಡೆ ಹೋಗುತ್ತದೆ. ನನ್ನ ತೋಳಿಗೆ ಅದನ್ನು ಶಾಶ್ವತವಾಗಿ ಚುಚ್ಚಿ ಅದರ ಮೇಲೆ ಪ್ಲಾಸ್ಟರ್ ಹಾಕಲಾಗಿದೆ. ಆ ಸೂಜಿಗೆ ತಗಲಿಸಿರುವ ರಬ್ಬರ್ ನಳಿಕೆಯನ್ನು ಮೇಲೆ ಎಡ ಭಾಗದಲ್ಲಿ ನೇತಾಡುತ್ತಿರುವ ಬಾಟಲ್‌ಗೆ ಜೋಡಿಸಲಾಗಿದೆ. ನಾನು ಮೌನವಾಗಿ ಮೇಲಿರುವ ಬಾಟಲ್ ಕಡೆ ನೋಡತೊಡಗುತ್ತೇನೆ. ಆ ಬಾಟಲ್‌ನಿಂದ ಒಂದೊಂದೇ ತೊಟ್ಟು ಗ್ಲೂಕೋಸ್ ನನ್ನ ನರಗಳಲ್ಲಿ ಇಳಿಯುತ್ತಿದೆ. ನಾನು ಯೋಚಿಸತೊಡಗುತ್ತೇನೆ– ಈ ಜೀವವೂ ಒಂದು ವಿಚಿತ್ರ ಸಸ್ಯ. ಇದರ ಬೇರುಗಳು ಎಲ್ಲಿವೆಯೋ ಗೊತ್ತಿಲ್ಲ. ಯಾವ ಗೊಬ್ಬರ ಇದರ ಆಹಾರವೋ. ವಿಷವೋ? ನರ್ಸ್ ನನ್ನ ಕುತ್ತಿಗೆಯ ಬಳಿ ಇದ್ದ ದಿಂಬನ್ನು ತೆಗೆದುಬಿಟ್ಟಿದ್ದಾಳೆ. ಈಗ ಅವಳು ಸಹಾನುಭೂತಿಯಿಂದ ನನಗೆ ತಿಳಿಯ ಹೇಳುತ್ತಿದ್ದಾಳೆ–"ನೋಡಿ ಬಹಳ ದಿನದಿಂದ ಕಾಯುತ್ತಾ ಇದ್ದೀರಿ. ಆದರೆ ಡೋಂಟ್ ಲೂಸ್ ಹಾರ್ಟ್."

"ಲೂಸ್ ಹಾರ್ಟ್. ದಟ್ ಈಸ್ ವಾಟ್ ಐ ನೀಡ್"– ಶಬ್ದಗಳ ಜೊತೆ ನಾನು ಅಟವಾಡುವುದನ್ನು ನೋಡಿ ನರ್ಸ್ ನಗುತ್ತಾಳೆ........" ಯೂ ರಿಯಲೀ ಹ್ಯಾವ್ ಟು ಲೂಸ್ ಹಾರ್ಟ್. ಆದರೆ ನಿಮಗೆ ಇದಕ್ಕಿಂತ ಒಳ್ಳೆಯ ಸದೃಢವಾದ ಹೊಸ ಹೃದಯ ಸಿಕ್ಕಿದಾಗ ಅದನ್ನು ಜೋಪಾನವಾಗಿ ಇಟ್ಟುಕೊಳ್ಳಬೇಕು ಅಷ್ಟೆ."

"ನೀವು ಕೇಳಿದರೆ ನಿಮಗೂ ನಾನು ಕೊಡಲ್ಲ"– ಎಂದು ಅವಳನ್ನು ಛೇಡಿಸುತ್ತೇನೆ. ಅವಳು ಹೋಗುತ್ತಾ ಹೋಗುತ್ತಾ ಬಾಗಿಲ ಹತ್ತಿರ–"ನಿಮ್ಮ ಸೆಕೆಂಡ್ ಹ್ಯಾಂಡ್ ಹೃದಯ ತಗೊಂಡು ನಾನೇನು ಮಾಡಲಿ" ಎಂದಳು.

ಹೃದಯ ಓಹ್ ! ನಿಜವಾಗಿಯೂ ಈ ಹೃದಯ ಕೂಡ ಅದೆಂಥ ವಸ್ತು ! ನಮ್ಮದೇ ಆಗಿದ್ದರೂ ಯಾವ ಯಾವ ರೂಪದಲ್ಲಿ ಬೇರೆಯವರದ್ದಾಗುತ್ತಾ ಹೋಗುತ್ತೋ ಗೊತ್ತಿಲ್ಲ. ನನಗೂ ಯಾವುದಾದರೂ ಬೇರೆಯವರದ್ದಾಗಿಬಿಡುವಂಥ ಹೃದಯ ಬೇಕಾಗಿದೆ. ನನ್ನ ಧಮನಿಗಳೊಂದಿಗೆ ಕಸಿಮಾಡಲು ಸಾಧ್ಯವಾಗುವಂಥ ಹೃದಯ ಬೇಕಾಗಿದೆ. ಒಂದೊಂದೇ ತೊಟ್ಟು ಗ್ಲೂಕೋಸನ್ನು ತೊಟಕಿಸುತ್ತಿರುವ, ತಲೆಕೆಳಕಾಗಿ ನೇತುಹಾಕಿರುವ ಬಾಟಲ್ ಅನ್ನು ನೋಡುತ್ತೇನೆ. ಈ ಗ್ಲೂಕೋಸ್ ನೀರು ನನ್ನ ಒಣಗುತ್ತಿರುವ ಸಸಿಗೆ ನೀರೆರೆಯುತ್ತದೋ ಇಲ್ಲವೋ ಎಂದು ಯೋಚಿಸುತ್ತ ಖಿನ್ನನಾಗುತ್ತೇನೆ. ಎಲ್ಲೋ ಒಂದು ಹನಿ ತೊಟ್ಟಿಕ್ಕಿದರೆ ಹೊಸ ಜೀವನ ಶುರುವಾಗುತ್ತದೆ. ಇಲ್ಲಿ ಹಲವಾರು ದಿನಗಳಿಂದ ನನ್ನೊಳಕ್ಕೂ ಹನಿಗಳು ಇಳಿಯುತ್ತಿವೆ. ಹೊಸದು ಹಾಗಿರಲಿ, ಹಳೆಯ ಜೀವನವೂ ಮುಂದೆ ಸಾಗಲು ಸಿದ್ಧವಿಲ್ಲ. ನನ್ನ ತೋಳಿಗೆ ಚುಚ್ಚಿರುವ ಸೂಜಿಯ

ಸುತ್ತಲಿನ ಮಾಂಸಖಂಡವೆಲ್ಲ ನೀಲಿಗಟ್ಟಿದೆ. ಬಹುಶಃ ಅನುಭವದ ಹೊರ ರೂಪ ಇದೇ ರೀತಿ ಇರಬಹುದೋ ಏನೋ.

ಈಗ ಕಿಟಕಿಯಿಂದ ಇಣುಕುತ್ತಿರುವ ಐ.ವಿ. ಯ ಕವಲು ನನ್ನ ಕಣ್ಣ ನೋಟಕ್ಕಿಂತ ಕೆಳಗೆ ಬಂದುಬಿಟ್ಟಿದೆ. ಕಿಟಕಿಯ ಫ್ರೇಮ್ ಥರ ಇದ್ದ ಟಿ. ವಿ. ಸ್ಕ್ರೀನ್ ಈಗ ಅರ್ಧಕ್ಕಿಂತ ಕಡಿಮೆ ಕಾಣುತ್ತಿದೆ. ಹೊರಗಿನ ಕುಂಕುಮ ವರ್ಣ ಕಡು ನೀಲಿ ಬಣ್ಣಕ್ಕೆ ತಿರುಗಿದೆ. ಅಲ್ಲದೆ ಹಕ್ಕಿಗಳು ಆಚೆಗೆ ಹಾರಿಹೋಗುವುದು ಕೂಡ ಕಡಮೆಯಾಗಿದೆ. ನನ್ನ ಎದೆಯ ಎಡಭಾಗದಲ್ಲಿ ಮತ್ತೆ ಮತ್ತೆ ನೋವು ಬರುತ್ತಿದೆ. ನನ್ನ ಹೃದಯ ನಿಂತುಹೋಗಲು ಚಡಪಡಿಸುತ್ತಿದೆ. ಆದರೆ ಎದೆಯ ಮಿಡಿತವನ್ನು ಕಂಡುಕೊಳ್ಳಲಾಗಲಿ. ಎದೆಯನ್ನು ಒತ್ತಿಕೊಳ್ಳಲಾಗಲಿ ನನ್ನ ಕೈಗಳನ್ನು ನಾನು ಬಳಸುವಂತಿಲ್ಲ. ಅವುಗಳನ್ನು ಕಟ್ಟಲಾಗಿದೆ. ನನ್ನನ್ನು ಆಸ್ಪತ್ರೆಗೆ ಕರೆತಂದಾಗ ನನಗೆ ಎಚ್ಚರವಿರಲಿಲ್ಲ ಎಂದು ನರ್ಸ್ ತಿಳಿಸಿದ್ದಳು. ಸಾಕಷ್ಟು ಯಾತನೆಯನ್ನು ಅನುಭವಿಸಿದಾಗ್ಯೂ ನನಗೆ ಪ್ರಜ್ಞೆ ಇತ್ತು. ನಾನು ಎಲ್ಲಿ ಮತ್ತು ಹೇಗೆ ಪ್ರಜ್ಞೆ ತಪ್ಪಿದೆ ನನಗೆ ನೆನಪಿಲ್ಲ. ಆ ದಿನ ಬೆಳಿಗ್ಗೆ ನನಗೆ ಮೇಲುಸಿರು ಬರುತ್ತಿತ್ತು ಎಂಬುದು ನೆನಪಾಗುತ್ತಿದೆ. ಎದೆಯಲ್ಲಿ ಭಯಂಕರ ನೋವುಂಟಾಗುತ್ತಿತ್ತು. ನನ್ನ ಕೈಕಾಲು ನೀಲಿಗಟ್ಟಿದ್ದವು. ಹೃದಯದ ಈ ತೊಂದರೆ ನನಗೆ ಅನೇಕ ವರ್ಷಗಳಿಂದ ಇದೆ. ನಾನು ಬೈಪಾಸ್ ಸರ್ಜರಿ ಕೂಡ ಮಾಡಿಸಿಕೊಂಡಿದ್ದೇನೆ. ಈಗ ಬದಲಿ ಹೃದಯ ಶಸ್ತ್ರ ಚಿಕಿತ್ಸೆ (ಹಾರ್ಟ್ ಟ್ರಾನ್ಸ್‌ಪ್ಲಾಂಟೇಷನ್) ಮಾಡಿಸಿಕೊಳ್ಳದೆ ಬೇರೆ ಉಪಾಯವೇ ಇಲ್ಲ ಎಂದು ಕೆಲವು ತಿಂಗಳ ಹಿಂದೆ ನನಗೆ ತಿಳಿಸಿದ್ದರು. ಅನಂತರ ನನಗೆ ಹಲವಾರು ಟೆಸ್ಟ್‌ಗಳನ್ನು ಮಾಡಲಾಯಿತು. ನಾನು ಡಯಾಬಿಟಿಕ್ ಅಂತೂ ಅಲ್ಲವಲ್ಲ? ನನಗೆ ಬೇರೆ ರೋಗ ಇಲ್ಲವಲ್ಲ? ನನ್ನ ಬ್ಲಡ್ ಗ್ರೂಪ್ ಅನ್ನು ಮತ್ತೊಮ್ಮೆ ಚೆಕ್‌ಮಾಡಿ ನೋಡಿದ್ದಾಯಿತು. ಟಿಷ್ಯೂ ಟೆಸ್ಟಿಂಗ್ ಅನ್ನೂ ಮಾಡಿಸಿದ್ದಾಯಿತು. ಇದ್ದಕ್ಕಿದ್ದಂತೆ ಹಾರ್ಟ್ ಫೇಲ್ ಆಗುವುದನ್ನು ತಡೆಯುವಂಥ ಔಷಧಿಗಳನ್ನು ನೀಡಲಾಯಿತು.

ಆ ದಿನ ಬೆಳಿಗ್ಗೆ ಬಹುಶಃ ಲೈಬ್ರರಿಗೆ ಹೋಗಿ ಕೂರುವ ಸಲುವಾಗಿ ಹೊರಟಿದ್ದೆ ಎನ್ನುವುದಷ್ಟು ಮಾತ್ರ ನೆನಪಿದೆ. ರಸ್ತೆ ದಾಟುತ್ತಿದ್ದಂತೆ ನಡುವೆಯೇ ಕುಸಿದು ಬಿದ್ದಿದ್ದೆ ಎಂದು ನರ್ಸ್ ನನಗೆ ಹೇಳಿದಳು. ಅದೃಷ್ಟವಶಾತ್ ಆ ರಸ್ತೆ ನನ್ನ ಮನೆಯಿಂದ ಸ್ವಲ್ಪವೇ ದೂರದಲ್ಲಿ ಕೊನೆಗೊಳ್ಳುತ್ತಿತ್ತು. ಕುಲ್–ಡಿ–ಸಾಕ್‌ನಲ್ಲಿ ಯಾವುದೂ ಟ್ರಾಫಿಕ್ ಇಲ್ಲ. ಬಹುಶಃ ನನ್ನ ನೆರೆಮನೆಯ ಜಿಮ್ ನಾನು ರಸ್ತೆಯ ಮೇಲೆ ಬಿದ್ದಿರುವುದನ್ನು ನೋಡಿ ಆಂಬುಲೆನ್ಸ್‌ಗೆ ಹೇಳಿಕಳಿಸಿ ನನ್ನನ್ನು ಆಸ್ಪತ್ರೆಗೆ ಸಾಗಿಸಿರಬೇಕು. ನರ್ಸ್‌ಳನ್ನು

ಕೇಳಿದಾಗ– "ಹೌದು, ಅದು ಬಹುಶಃ ಜಿಮ್ಮೀ ಇರಬೇಕು. ಆತನ ಜೊತೆ ನಿಮ್ಮ ಮಗಳೂ ಇದ್ದಳು" ಎಂದಳು.

ಮರುದಿನ ನನಗೆ ಪ್ರಜ್ಞೆ ಬಂದಿತ್ತು. ನನ್ನ ಹೆಂಡತಿ ಚಿಂತೆ, ನಿರಾಶೆಗಳಿಂದ ತಲೆದಿಂಬಿನ ಬಳಿ ಕಲ್ಲಾಗಿ ಕುಳಿತಿದ್ದಳು. ನನಗೆ ಅವಳ ನಿಷ್ಠೆ ಮತ್ತು ಪ್ರೀತಿಯನ್ನು ಕಂಡು ಎಷ್ಟು ಹಿತವೆನಿಸಿತೋ ಅಷ್ಟೇ ಗಾಬರಿಯೂ ಆಯಿತು. ನನಗೊಂದು ವೇಳೆ ಪ್ರಜ್ಞೆ ಬರದೆ ಹೋಗಿದ್ದರೆ, ಆ ಬಡಪಾಯಿಯ ಗತಿ ಏನಾಗುತ್ತಿತ್ತು? ನಾನು ಎಚ್ಚರದಲ್ಲಿದ್ದದ್ದು ನೋಡಿ, ಅವಳು ತನ್ನ ಕೋಮಲ ಮತ್ತು ಬೆಚ್ಚನೆಯ ಕೈಗಳಲ್ಲಿ ನನ್ನ ಕೈಯನ್ನು ಹಿಡಿದುಕೊಂಡಳು. ಅವಳು ತನ್ನ ಆದರ್ಶ ಪ್ರೇಮದ ಈ ಬಂಧನದಿಂದ ನಾನು ಆ ದಡಕ್ಕೆ ಸಾಗಿಹೋಗುವುದನ್ನು ತಡೆಯ ಬಯಸಿದ್ದಳು. ಕಂಪಿಸುತ್ತಿರುವ ಟ್ರೇನಲ್ಲಿ ತುಂಬಿ ತುಳುಕುತ್ತಿರುವ ಗ್ಲಾಸ್‌ನ ಹಾಗೆ ಅವಳ ಕಣ್ಣುಗಳಲ್ಲಿ ಕಂಬನಿ ತುಳುಕುತ್ತಿತ್ತು.

"ನನಗೆ ಕೈಕೊಟ್ಟು ಹೋಗುತ್ತಿದ್ದೀರಿ ಅಲ್ಲವೆ ! ಕೊನೆಯ ತನಕ ಜೊತೆಯಲ್ಲಿರುತ್ತೇನೆಂದು ಮಾತುಕೊಟ್ಟದ್ದು ಎಲ್ಲಿ ಹೋಯಿತು?"– ಎನ್ನುತ್ತ ಅವಳು ಬಿಕ್ಕಿ ಬಿಕ್ಕಿ ಅಳತೊಡಗಿದಳು. ನಾನೂ ಅಳಬೇಕೆನ್ನುವಷ್ಟರಲ್ಲಿ ನರ್ಸ್‌ಗಳು ಅವಳನ್ನು ವಾರ್ಡ್‌ನಿಂದ ಹೊರಗೆ ಕರೆದೊಯ್ದಿದ್ದರು. ನನ್ನ ಮಗಳು ಮಾತ್ರ ನನ್ನ ಬಳಿ ಉಳಿದಳು. ಬಣ್ಣಗೆಟ್ಟಿರುವ ಬಾಗಿಲಿಗೆ ಹೊಸ ಬಣ್ಣವನ್ನು ಬಳಿದು ಅದನ್ನು ಹೊಳೆಯುವಂತೆ ಮಾಡುವ ಹಾಗೆ ಅವಳು ತನ್ನ ಮುಖದ ಮೇಲೆ ಒಂದು ಮುಗುಳ್ನಗೆಯನ್ನು ತಂದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಳು. ನನಗೆ ನನ್ನ ಮೇಲೇ ಸಿಟ್ಟು ಬರತೊಡಗಿತು. ನನ್ನ ಹೆಂಡತಿ ಮತ್ತು ಮಗಳಿಗೆ ಇಷ್ಟೊಂದು ದುಃಖವನ್ನುಂಟುಮಾಡಲು ನನಗೆ ಏನು ಹಕ್ಕಿದೆ? ಅವರ ಆಸೆ ಆಕಾಂಕ್ಷೆಗಳನ್ನು ಮುರಿಯಲು ನನಗೆ ಯಾವ ಅಧಿಕಾರವಿದೆ? ಆದರೆ ನಾನೇನು ಮಾಡಬಲ್ಲೆ? ನನ್ನದೇ ಒಂದು ಅಂಗ ನನಗೆ ಕೈಕೊಟ್ಟು, ನನ್ನ ದೇಹ ಕುಸಿಯುವ ಮೊದಲೇ ನನ್ನನ್ನು ಬಿಟ್ಟುಹೊರಟಿದೆ. ನನ್ನ ಹೃದಯಕ್ಕೆ ಇಂಥ ಸ್ಥಿತಿ ಬರುವುದಕ್ಕೆ ಏನೆಲ್ಲ ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದೆ. ಚಿಂತೆಗಳು, ವ್ಯಥೆಗಳು, ಎಲ್ಲ ವಿಷಯಗಳನ್ನೂ ಬಹಳ ಗಂಭೀರವಾಗಿ ತೆಗೆದುಕೊಳ್ಳುವುದು, ಅನಗತ್ಯವಾಗಿ ರೇಗುತ್ತಾ ಸಿಡುಕುತ್ತಾ ಇರುವುದು, ನನಗೆ ಪಿತ್ರಾರ್ಜಿತವಾಗಿ ಏನೂ ಸಿಕ್ಕಲಿಲ್ಲ ಎಂದು ನನ್ನ ಅದೃಷ್ಟವನ್ನು ಹಳಿದುಕೊಳ್ಳುವುದು, ಅಪ್ಪ– ಅಮ್ಮ ಮತ್ತು ಒಡಹುಟ್ಟಿದವರೊಂದಿಗೆ ಕಾಲುಕೆರೆದುಕೊಂಡು ಜಗಳಕ್ಕಿಳಿದು ಎಲ್ಲರ ಜೊತೆ ಸಂಬಂಧವನ್ನು ಕಡಿದುಕೊಳ್ಳುವುದು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ನನ್ನ ಹೃದಯದಲ್ಲಿ ಹುದುಗಿದ್ದವಳು ಹೃದ್ರೋಗಕ್ಕೆ

ಕಾರಣವಾದದ್ದು, ಹಿಂದುಮುಂದು ಯೋಚನೆ ಮಾಡದೆ ಬೇರೆ ಯಾರನ್ನೋ ಪ್ರೀತಿಸಿದ್ದು ತಿಳಿಯದೆ ನಾನು ಅವಳಿಗೆ ನನ್ನ ಹೃದಯವನ್ನು ಸಮರ್ಪಿಸಿದ್ದು. ಬಹಳ ಗೋಳಾಡಿಸಿತ್ತು ಈ ಪ್ರೇಮ ನನ್ನನ್ನು. ಎಲ್ಲರೂ ಮೊದಲೇ ಗ್ರಹಿಸಿದ ಆ ವಂಚನೆ ನನಗೆ ಮಾತ್ರ ತುಂಬ ತಡವಾಗಿ ಅರ್ಥವಾಯಿತು. ಕೊನೆಗೆ ಏನಾಗಬೇಕಾಗಿತ್ತೋ ಅದೇ ಆಯಿತು.

ಈ ಘಾಸಿಗೊಂಡ ಹೃದಯವನ್ನು ಜೋಡಿಸಲು ನಾನು ಎಲ್ಲ ರೀತಿಯ ಉಪಾಯ ಮಾಡಿದೆ. ಹೊಸ ಹೊಸ ಹವ್ಯಾಸಗಳನ್ನು, ಹೊಸ ಆಸಕ್ತಿಗಳನ್ನು ರೂಢಿಸಿಕೊಂಡೆ. ಮದುವೆ ಮಾಡಿಕೊಂಡೆ. ಹೆಂಡತಿಗೆ ಮೊದಲಿನ ಎಲ್ಲ ಸಂಗತಿಗಳನ್ನೂ ತಿಳಿಸಿ ಮನಸ್ಸನ್ನು ಹಗುರ ಮಾಡಿಕೊಂಡೆ. ಹೃದಯದ ಬಿರುಕುಬಿಟ್ಟ ಈ ಪಾತ್ರೆ, ಈ ಅಮೂಲ್ಯವಾದ ಆಂಟಿಕ್, ಈ ಮುಲಾಮಿನಿಂದ ಕೂಡಿಕೊಂಡಿದೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಬಹಳ ಬೇಗ ಈ ಬಿರುಕು ಕಣ್ಣಿಗೆ ಬೀಳತೊಡಗಿತ್ತು.

ನನಗೆ ಮುಕೇಶನ ಹಾಡುಗಳು ಬಹಳ ಇಷ್ಟ. ನನ್ನ ಹೆಂಡತಿ ಒಳ್ಳೆಯ ಮೂಡ್‌ನಲ್ಲಿದ್ದಾಗ ನನಗೆ ಇಷ್ಟವಾದ ಹಾಡುಗಳನ್ನು ಹಾಡಿ, ನನ್ನ ಹಿಂದಿನದನ್ನು ದೂರಮಾಡುತ್ತಾಳೆ ಮತ್ತು ಆಗಾಗ್ಗೆ ಛೇಡಿಸುತ್ತಾಳೆ. ಒಂದು ದಿನ ಅವಳು ವಿನೋದದ ಮೂಡ್‌ನಲ್ಲೇ ಇದ್ದರೂ ಛೇಡಿಸುತ್ತ ಛೇಡಿಸುತ್ತ ಬಹಳ ಗಂಭೀರಳಾಗಿ ಈ ಪಂಕ್ತಿಗಳನ್ನು ಪಲುಕಿದಳು:

"ದಿಲ್ ತುಝೆ ದಿಯಾಥ ರಖನೇ ಕೋ
ತೂನೆ ದಿಲ್ ಕೋ ಜಲಾಕರ್ ರಖ್ ದಿಯಾ"

ಆ ದಿನ ನಾನು ರೇಗುವ ಮತ್ತು ಸಿಡುಕುವ ಬದಲು ವಿನೋದಶೀಲನಾಗಿಬಿಟ್ಟೆ. ನನ್ನ ಹೆಂಡತಿ ಈ ಪಂಕ್ತಿಯನ್ನು ಹಾಡಿ ಮುಗಿಸುತ್ತಿದ್ದಂತೆಯೇ ಸಿನಿಮಾದ ಎರಡು ಹಾಡುಗಳನ್ನು ಊಹಿಸಿ, ಎರಡನೇ ಸಾಲನ್ನು ಹಾಡಿದೆ:

"ಕಿಸ್ಮತ್ ನೆ ದೇಕೆ ಪ್ಯಾರ್ ಮುಝೆ
ಮೇರಾ ದಿಲ್ ತಡಪಾಕೆ ರಖ್ ದಿಯಾ"

ಮುಕೇಶ್ ಈ ಹಾಡಿನಲ್ಲಿ "ದಿಯಾ" ನಂತರ ಆ–ಆ ಎಂದು ಆಲಾಪ ಮಾಡುತ್ತಾನೆ. ನಾವಿಬ್ಬರೂ ಅವನನ್ನು ಅನುಕರಿಸುತ್ತ ಆ–ಆ ಎಂದು ರಾಗ ಎಳೆಯುತ್ತ ಒಬ್ಬರನ್ನೊಬ್ಬರು ಪೀಡಿಸಿದೆವು. ಎಂಥ ದಿನಗಳು ಅವು ! ನಾನು ನನ್ನ ಹಿಂದಿನದನೆಲ್ಲ ಮರೆಯತೊಡಗಿದ್ದೆ.

ಆಮೇಲೆ ನನ್ನ ಮಗಳು ಹುಟ್ಟಿದಳು ಮತ್ತು ನಾನು ವಾತ್ಸಲ್ಯದಲ್ಲಿ ಮಿಂದೆ.

ಒಂದು ದಿನ ಒಂದು ಪಾರ್ಟಿಯಲ್ಲಿ ಇದ್ದಕ್ಕಿದ್ದಂತೆ ನನ್ನೆದುರು ತನ್ನ ಗಂಡನ ತೋಳಿನಲ್ಲಿ ತೋಳು ಸೇರಿಸಿ ನನ್ನ ಮೊದಲ ಪ್ರೇಯಸಿ ಚೆನ್ನಾಗಿ ಅಲಂಕರಿಸಿಕೊಂಡು

ನನ್ನೆದುರು ನಿಂತಿದ್ದಳು. ಅವಳು ಸುಖವಾಗಿರುವುದನ್ನು ನೋಡಿ ನನಗೇನೂ ಅಸೂಯೆಯಾಗಲಿಲ್ಲ. ಬದಲಿಗೆ ಸಂತೋಷವೇ ಆಯಿತು. ಒಂದು ಕ್ಷಣ ಕೈ ಮುಂದೆ ಚಾಚಿ ಅವಳ ಗಂಡನನ್ನು ಪರಿಚಯ ಮಾಡಿಕೊಳ್ಳಬೇಕೆನಿಸಿತು. "ಹಲೋ ! ನಾನು ದೇವೇಶ್" ಎಂದು ಹೇಳುತ್ತ ಕೈ ಮುಂದೆ ಚಾಚಿದೆ. ಆದರೆ ಇದೇನು ! ರಜನಿ ತನ್ನ ಗಂಡನನ್ನು ಅಲ್ಲಿಂದ ದೂರಕ್ಕೆ ತಳ್ಳಿಕೊಂಡು ಹೋಗುತ್ತಿದ್ದಾಳೆ ! "ಇವನು ಅದೇ ಹುಚ್ಚ" ಎಂದು ಅವಳು ತನ್ನ ಗಂಡನಿಗೆ ಹೇಳಿದ್ದು ಕೇಳಿಸಿತು.

ಅವರಿಬ್ಬರೂ ವೇಗವಾಗಿ ಹೆಜ್ಜೆ ಹಾಕುತ್ತ ಅಲ್ಲಿಂದ ಕದಲಿದರು. ಅಷ್ಟೇ ಅಲ್ಲ, ಆ ಪಾರ್ಟಿಯಿಂದಲೇ ಹೊರನಡೆದರು. ನಾನು ಕಲ್ಲಾಗಿ ನಿಂತೇ ಇದ್ದೆ. ಓಹ್ ! ಅ ರಾತ್ರಿ ಮನೆಗೆ ಹಿಂತಿರುಗಿದ ಮೇಲೆ ಮೊದಲ ಹೃದಯಾಘಾತವಾಗಿತ್ತು. ಅನಂತರ ಒಂದರ ನಂತರ ಇನ್ನೊಂದು ಎರಡು ಸಲ ಅಟ್ಯಾಕ್ ಆಯಿತು.

ಅನಂತರದಲ್ಲಿ ಆ ಪ್ರಸಂಗದಿಂದ ವ್ಯಥೆಯೂ ಆಯಿತು. ಬಹುಶಃ ಅದೂ ನನ್ನ ದೌರ್ಭಾಗ್ಯದಿಂದಾಗಿಯೇ ಆದದ್ದು. ಹೃದಯ ಕುಸಿಯುವುದೇ ನನ್ನ ಹಣೆಯಲ್ಲಿ ಬರೆದಿತ್ತೇನೋ !

ನರ್ಸ್ ಓಡುತ್ತ ಕೊಠಡಿಯೊಳಕ್ಕೆ ಬಂದಳು. "ಒಳ್ಳೆ ಸಂತೋಷದ ಸುದ್ದಿ"– ಅವಳು ತುಂಬಾ ಉತ್ಸಾಹದಿಂದ ಹೇಳುತ್ತಿದ್ದಾಳೆ–"ನಿಮಗೆ ಹೃದಯ ಸಿಕ್ಕಿಬಿಟ್ಟಿತು"

ನಾನು ಅವಳ ಕಡೆ ನೋಡುತ್ತೇನೆ. ಸರಿ ನೋಡುತ್ತಲೇ ಇರುತ್ತೇನೆ. ಅವಳು ಮತ್ತೆ ಹೇಳಿದಳು–"ಅರೆ, ಸಂತೋಷಪಡಿ ಬ್ರದರ್. ನಿಮಗೆ ಹೃದಯ ಸಿಕ್ಕಿಬಿಟ್ಟಿದೆ. ಇದೀಗ ಕೆಲವೇ ನಿಮಿಷಗಳ ಹಿಂದೆ ಆದ ಆಕ್ಸಿಡೆಂಟ್ ನಲ್ಲಿ ಒಬ್ಬ ಪೇಷಂಟ್ ಸತ್ತುಹೋಗಿದ್ದಾನೆ. ಅವನ ಹೃದಯ ಪೂರ್ತಿ ಆರೋಗ್ಯಪೂರ್ಣವಾಗಿದೆ. ಒಳ್ಳೆ ಯುವಕನದು. ಅವನ ಬ್ಲಡ್ ಗ್ರೂಪ್ ನಿಮ್ಮದಕ್ಕೆ ಹೊಂದಿಕೊಳ್ಳುತ್ತೆ. ಅವನು ತೀರಿಕೊಂಡಿರುವ ಆಸ್ಪತ್ರೆ ಕೂಡ ಇಲ್ಲಿಂದ ತುಂಬ ದೂರವೇನಿಲ್ಲ. ನಿಮಗೋಸ್ಕರವೇ ವಿಶೇಷವಾಗಿ ಇನ್ನರ್ಧ ಗಂಟೆಯಲ್ಲಿ ಇಲ್ಲಿಗೆ ತರುತ್ತಾ ಇದ್ದಾರೆ. ರೆಡಿಯಾಗಿ"

ಅವಳು ಒಂದೇ ಉಸಿರಿಗೆ ಎಲ್ಲ ವಿವರಗಳನ್ನೂ ಹೇಳಿಬಿಟ್ಟಳು. ಆದರೆ ನಾನು ದುಃಖಿತನಾದೆ. ನನಗೆ ನನ್ನ ನಿಷ್ಪ್ರಯೋಜಕ ಹೃದಯದ ಮೇಲೆ ಸಿಟ್ಟು ಬರುತ್ತಿದೆ. ದೌರ್ಭಾಗ್ಯಶಾಲಿ ಇದೆಷ್ಟು ಅಮಂಗಳದ ಹೃದಯ. ಹೋಗುತ್ತಾ ಹೋಗುತ್ತಾ ಇನ್ನೊಂದು ಪ್ರಾಣವನ್ನು ಕೊಂಡೊಯ್ದಿದೆ. ಯಾರಿಗೆ ಗೊತ್ತು; ಈ ಹೊಸ ಹೃದಯವನ್ನು ನನ್ನ ದೇಹ ರಿಜೆಕ್ಟೇ ಮಾಡುತ್ತೋ ಏನೋ!

"ಬೇಡ! ಬೇಡ! ಯಾವುದೋ ಹೆಣದ ಹೃದಯ ನನಗೆ ಬೇಕಾಗಿಲ್ಲ!" ಎಂದು ನಾನು ಮನಸ್ಸಿನಲ್ಲೇ ಜೋರಾಗಿ ಹೇಳಿಕೊಳ್ಳುತ್ತೇನೆ. ಮತ್ತೆ ಒಮ್ಮೆಲೇ ನಾನು ಪೂರ್ಣವಾಗಿ ವಿರೋಧವನ್ನು ವ್ಯಕ್ತಪಡಿಸುತ್ತಾ ಹೇಳಿದೆ– "ಬೇರೆ ಯಾವುದೇ ಹೃದಯ ನನಗೆ ಬೇಕಗಿಲ್ಲ. ನನಗೆ ಟ್ರಾನ್ಸ್ ಪ್ಲಾಂಟ್ ಮಾಡಿಸಿಕೊಳ್ಳುವುದು ಬೇಕಾಗಿಲ್ಲ. ನಾನು ಕ್ಯಾನಿಬಾಲ್ ಅಲ್ಲ(ನರಭಕ್ಷಕ)."

ಅಷ್ಟು ಹೊತ್ತಿಗೆ ಕೊಠಡಿಯೊಳಕ್ಕೆ ನಾಲ್ಕು ಜನ ನರ್ಸ್‌ಗಳು ಪ್ರವೇಶಿದ್ದರು. ಮೊದಲಿಗೆ ಅವರು ಸದ್ದಿಲ್ಲದೆ ನಿಂತುಬಿಡುತ್ತಾರೆ. ಆದರೆ ತಮ್ಮ ಜೊತೆಯಲ್ಲಿ ಬಂದ ಡಾಕ್ಟರು "ರೋಗಿಗೆ ಜ್ಞಾನ ತಪ್ಪಿಸುವ ತಯಾರಿ ಮಾಡಿ"– ಎಂದು ಆದೇಶಿದ ಕೂಡಲೇ ಅನಸ್ತೇಷಿಯಾದ ಯಂತ್ರವನ್ನು ಚಾಲೂ ಮಾಡತೊಡಗುತ್ತಾರೆ.

❖

(ಕೃಪೆ: 'ಮಿಟ್ಟಿ ಕೀ ಸುಗಂಧ್')

ಶೀತಲರಾತ್ರಿಯ ನೀರವತೆ

ಹಿಂದಿ ಮೂಲ: ತೋಷಿ ಅಮೃತಾ

ನೇಹಾ ಹಾಸಿಗೆಯ ಮೇಲೆ ಮಲಗಿಕೊಂಡೇ ಮಗ್ಗುಲು ಬದಲಿಸುತ್ತಿದ್ದಳು. ನಿದ್ರೆಗೆ ಅವಳ ಬಗ್ಗೆ ಏನು ತಕರಾರಿತ್ತೋ ಏನೋ ಅವಳ ಹತ್ತಿರಕ್ಕೂ ಸುಳಿಯುತ್ತಿರಲಿಲ್ಲ. ಜನವರಿ ತಿಂಗಳ ಗಾಢ ರಾತ್ರಿ. ಸಾಕಷ್ಟು ಥಂಡಿ ಇತ್ತು. ಬೆಳಗಿನಿಂದಲೇ ಹತ್ತಿಯಂಥ ಕೋಮಲವಾದ ಮಂಜು ಒಂದೇ ಸಮನೆ ಬೀಳುತ್ತ ರಸ್ತೆಯ ಮೇಲೆಲ್ಲ ಹರಡಿಕೊಳ್ಳುತ್ತಿತ್ತು. ಸ್ಕಾಟ್ಲೆಂಡಿನ ಪರ್ವತಗಳು ಹಿಮದಿಂದ ಆವೃತವಾಗಿದ್ದುವು. ಅಪ್ಸರೆಯೊಬ್ಬಳು ಬಿಳಿಯ ಉಡುಪನ್ನು ಹೊದ್ದುಕೊಂಡಿದ್ದಂತೆ ಭಾಸವಾಗುತ್ತಿತ್ತು. ಮನೆಯ ನೆಲದ ಮೇಲೂ ಹಿಮದ ತೆಳುವಾದ ಪದರವೊಂದು ಹೆಪ್ಪುಗಟ್ಟಿದ್ದು ಅದು ದಿನವೆಲ್ಲಾ ಹೀಟಂಗ್ ಚಾಲೂ ಇಟ್ಟಿದ್ದರೂ ಕರಗಲು ಇಷ್ಟವಿಲ್ಲವೆನ್ನುವಷ್ಟು ಥಂಡಿ ಇತ್ತು. ಹೀಗೆ ಮನಸ್ಸನ್ನು ವಿಕ್ಷಿಪ್ತಗೊಳಿಸಲು ಏಕಾಂತವೇ ಸಾಕು. ಜೊತೆಗೆ ನೀರವ ನಿಸ್ತಬ್ಧತೆಯ ಬಾಹುಗಳಲ್ಲಿ ಸಿಲುಕಿರುವ ಶೀತಲ ಕತ್ತಲ ರಾತ್ರಿ..........

ಪರೇಶನ ಚಹರೆ ಮತ್ತೆ ಮತ್ತೆ ಅವಳ ಕಣ್ಣೆದುರು ಬಂದು ಅವಳನ್ನು ಅಲುಗಾಡಿಸಿಬಿಡುತ್ತಿತ್ತು. ಅವಳು ಅವನನ್ನು ಮರೆಯಲು ಪ್ರಯತ್ನಿಸಿದಷ್ಟೂ ಅವನ ಚಹರೆ ಅವಳ ಮನಸ್ಸೆಂಬ ಸರೋವರದಲ್ಲಿ ಬಿರುಗಾಳಿಯನ್ನೆಬ್ಬಿಸಿಬಿಡುತ್ತಿತ್ತು. ಅವನಿಗಾಗಿ ಅವಳೇಕೆ ಯೋಚಿಸುತ್ತಿದ್ದಾಳೆ? ಅವನ ಹಿಡಿತದಿಂದ ಅವಳೇಕೆ ಹೊರಬರಬಾರದು? ಆ ಅಪರಿಚಿತನೊಂದಿಗೆ ನೇಹಾಳ ಸಂಬಂಧವಾದರೂ ಏನು? ಹೌದು, ಅವನಂತೂ ಈಗ ಅಪರಿಚಿತನೇ ಆಗಿದ್ದ. ಸಂಬಂಧವಿದ್ದಾಗ ಆಪ್ತತೆ ಇತ್ತು-ಆಪ್ತತೆಯ ಅನುಭವದ ಕಂಪಿತ್ತು........ಸಂಬಂಧದ ಬಿಸಿ ಇತ್ತು...... ಆದರೆ ಈಗ.... ಇಂದು.....?

ಯಾವಾಗ, ಹೇಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಪರೇಶನು ಅವಳ ಹೃದಯದ ಪದರುಗಳಲ್ಲಿ ಇಳಿಯುತ್ತಾ ಹೋದನೋ , ಹುಚ್ಚಿ ನೇಹಾ ತಿಳಿಯದಾದಳು. ಯಾವಾಗ ಅವನು ಇದ್ದಕ್ಕಿದ್ದಂತೆ ಅವಳ ಕಣ್ಣರೆಪ್ಪೆಗಳಲ್ಲಿ ಬಂದಿಯಾದನೋ ಅವಳಿಗೆ ಅದರ ಸುಳಿವೇ ಸಿಗಲಿಲ್ಲ. ಅವಳ ನೆನಪಿನ ಸಾಗರದಲ್ಲಿ ಉಬ್ಬರವಿಳಿತಗಳಾದಂತೆ ಹಾಸಿಗೆಯ ಮೇಲೆ ಮಲಗಿಕೊಂಡು ನೇಹಾ ಅಶಾಂತಳಾಗಿ ಆ ಸಾಗರದಲ್ಲಿ ಮುಳುಗೇಳ ತೊಡಗಿದಳು.

ನೇಹಾ ಭಾರತದಿಂದ ಆಗತಾನೆ ಬಂದಿದ್ದಳು. ಕೆಮಿಸ್ಟ್ರಿ ಎಂ. ಎಸ್ಸಿ ಯಲ್ಲಿ ಅವಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಗ ಅವಳ ತಂದೆ ತಾಯಿಗಳ ಸಂತೋಷಕ್ಕೆ ಪಾರವೇ ಇರಲಿಲ್ಲ ಎನ್ನುವುದು ನೆನಪಾಯಿತು. ಮಗಳನ್ನು ಅಪ್ಪಿಕೊಂಡು "ಶಹಬ್ಬಾಶ್ ನೇಹಾ ! ನಮ್ಮಿಂದ ನಿನ್ನ ಬಗ್ಗೆ ಇದೇ ನಿರೀಕ್ಷೆ ಇತ್ತು. ದೇವ್ರು ಗಂಡು ಮಗನನ್ನು ಕೊಡದಿದ್ದರೇನಂತೆ –ನಿನ್ನ ಯೋಗ್ಯತೆ, ಸಾಧನೆ ಯಾವ ಗಂಡು ಮಗನಿಗಿಂತ ಕಡಿಮೆ ಇದೆ" ಎಂದಿದ್ದರು.

ಪ್ರೊ. ಆನಂದರ ಕಣ್ಣು ಹರ್ಷಾತಿರೇಕದಿಂದ ತೇವಗೊಂಡವು. ನೇಹಾ ಅವರ ಅಚ್ಚುಮೆಚಿನ ಶಿಷ್ಯೆ. ಆತ್ಮೀಯತೆ ಮತ್ತು ಸ್ನೇಹದಿಂದ ನೇಹಾಳನ್ನು ಹುರಿದುಂಬಿಸುತ್ತ– "ನೇಹಾ ನನ್ನದೊಂದು ಸಲಹೆ ಇದೆ. ಎಡಿನ್‌ಬರೋ ವಿಶ್ವವಿದ್ಯಾಲಯ ತನ್ನ ಮೆಡಿಕಲ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ನಾನೂ ನನ್ನ ಇಂಜಿನಿಯರಿಂಗ್ ಡಿಗ್ರಿಯನ್ನು ಅಲ್ಲಿಂದಲೇ ಪಡೆದುಕೊಂಡಿದ್ದೆ. ಯು. ಜಿ. ಸಿ. ಯಲ್ಲಿ ಸ್ಕಾಲರ್ಷಿಪ್‌ಗೆ ಅರ್ಜಿ ಕೊಟ್ಟುಬಿಡು. ಬಹುಶಃ ಹೊರಗಡೆ ಹೋಗಿ ರಿಸರ್ಚ್ ಮಾಡಲು ಅವಕಾಶ ಸಿಕ್ಕಬಹುದು. ನಾನು ನನ್ನ ಕಡೆಯಿಂದ ಎಲ್ಲ ರೀತಿಯ ಸಹಕಾರ ಕೊಡುತ್ತೇನೆ. ಸರಿ, ಇನ್ನು ನೀನು ತಡಮಾಡಬೇಡ ಈಗ.........." ಎಂದರು.

ನೇಹಾ ಕೂಡಲೇ ಅರ್ಜಿ ಕೊಟ್ಟಳು. ದೆಹಲಿಗೆ ಹೋಗಿ ಒಂದೆರಡು ಇಂಟರ್ವ್ಯೂಗಳಿಗೆ ಹಾಜರಾದಳು. ಹೇಗೂ ಮೇಧಾವಿ ವಿದ್ಯಾರ್ಥಿ ಆಗೇ ಇದ್ದಳು. ಉತ್ತೀರ್ಣಳಾದಳು. ಅವಳಿಗೆ ಎಡಿನ್ ಬರೋ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡಲು ಅವಕಾಶ ಸಿಕ್ಕೇಬಿಟ್ಟಿತು.

ನೇಹಾಳಿಗಂತೂ ಏಳನೇ ಸ್ವರ್ಗದಲ್ಲಿದ್ದ ಹಾಗೆ ಅನ್ನಿಸಿತು. ಬಾಲ್ಯದಿಂದಲೇ ಅವಳಿಗೆ ತಾನು ವಿದೇಶಕ್ಕೆ ಹೋಗಿ ಓದಬೇಕು, ಅಲ್ಲಿಯ ಸಂಸ್ಕೃತಿ ನಾಗರಿಕತೆಗಳನ್ನು ನೋಡಬೇಕು ತಿಳಿದುಕೊಳ್ಳಬೇಕು, ಅಲ್ಲಿಯ ಮುಕ್ತ ವಾತಾವರಣದಲ್ಲಿ ಉಸಿರಾಡಬೇಕು ಎಂಬ ಆಸೆ ಇತ್ತು. ಭಾರತದಲ್ಲಿ ಹೆಜ್ಜೆಹೆಜ್ಜೆಗೂ ಇದು ಮಾಡಬೇಡ, ಅದು ಮಾಡಬೇಡ, ಇವರನ್ನು ಭೇಟಿಮಾಡಬೇಡ, ಅವರ ಹತ್ತಿರ ಹೋದಿಗೀದೀಯ ಇತ್ಯಾದಿ ಇರುತ್ತಿತ್ತು. ಎಲ್ಲಾ ಕಡೆ ಅಡ್ಡಿ. ಎಲ್ಲಿಯೂ ನಿರಾಳವಾಗಿ ಉಸಿರಾಡೋ ಹಾಗೇ ಇಲ್ಲ. ಅವಳ ಜೀವನದಲ್ಲಿ ಇದೆಂಥ ಪವಾಡ ನಡೆದುಹೋಯಿತು. ಹೇಗೆ ತನ್ನ ಕನಸು ನನಸಾಗಿಬಿಟ್ಟಿತು! ಎಂದೆಲ್ಲ ಯೋಚಿಸುತ್ತಿದ್ದ ನೇಹಾಳ ಸಂತೋಷಕ್ಕೆ ಪಾರವೇ ಇರಲಿಲ್ಲ.

ಅವಳ ತಂದೆ ಹೆಚ್ಚು ವಿರೋಧಿಸಲಿಲ್ಲ. ಆದರೆ ತಾಯಿ ವಿದೇಶಕ್ಕೆ ಹೋಗುವ ವಿಷಯದಲ್ಲಿ ಕೋಪಿಸಿಕೊಂಡಂತೆ ಕಂಡಳು. "ಹುಡುಗಿ ಒಬ್ಬಳನ್ನೇ ಎಲ್ಲಿ ವಿದೇಶಕ್ಕೆ ಕಳಿಸೋದು. ಇಲ್ಲೂ ಪಿಎಚ್. ಡಿ ಸಾಧ್ಯ ಇದೆಯಲ್ಲ. ಅಲ್ಲೇನಂಥ ವಿಶೇಷ?" ಇತ್ಯಾದಿ ಇತ್ಯಾದಿ....... ಆದರೆ ಭಾರತೀಯ ಕುಟುಂಬಗಳಲ್ಲಿ ಸಣ್ಣಪುಟ್ಟ ಘಟನೆಗಳು ನಡೆದಾಗಲೆಲ್ಲ ಇಂಥ ಬಿರುಗಾಳಿಗಳು ಏಳುತ್ತಲೇ ಇರುತ್ತವೆ.

ಬಹಳಷ್ಟು ಬುದ್ಧಿವಾದ ಮತ್ತು ಉಪದೇಶ ನೀಡಿ ಗಾಢವಾಗಿ ಆಲಿಂಗಿಸಿಕೊಂಡು ಅವಳನ್ನು ಬೀಳ್ಕೊಟ್ಟರು. ತಂಗಿ ತನೂ ಅಪ್ಪಿಕೊಂಡು ಬಿಕ್ಕಳಿಸತೊಡಗಿದಳು. "ಅಕ್ಕ, ನೀನಿಲ್ಲದೆ ಇದ್ದರೆ ನನಗೆ ತುಂಬ ಒಂಟಿ ಒಂಟಿ ಅನ್ನಿಸುತ್ತೆ ಬೇಗ ಕಾಗದ ಬರಿ. ಫೋನ್ ಮಾಡುತ್ತಾ ಇರು." ಇದನ್ನು ಕೇಳಿ ನೇಹಾಳ ಕಣ್ಣುಗಳು ತುಂಬಿಬಂದುವು.

ವಿಮಾನದಲ್ಲಿ ಕುಳಿತು ನೇಹಾ ಯೋಚಿಸುತ್ತಿದ್ದಳು. ಹೇಗಿರುತ್ತೆ ವಿದೇಶ......ಅಲ್ಲಿಯ ಜನ ಹೇಗಿರುತ್ತಾರೆ. ಸ್ಕಾಟ್ಲೆಂಡಿನ ಹವೆ ಬಹಳಷ್ಟು ಥಂಡಿಯಿಂದ ಕೂಡಿರುತ್ತೆ ಹಾಗೂ ಪಶ್ಚಿಮದ ಜನರು ಅವರ ದೇಶದ ಹವೆಯ ಹಾಗೆ ತಣ್ಣಗಿರುತ್ತಾರೆ ಅಂತ ಕೇಳಿದ್ದೀನಿ. ಒಂದೆಡೆ ವಿದೇಶಕ್ಕೆ ಹೋಗುವ ಉತ್ಸುಕತೆ ಮತ್ತು ಉಲ್ಲಾಸ ಇದ್ದರೆ ಇನ್ನೊಂದೆಡೆ ಅಪ್ಪ ಅಮ್ಮ , ತನು ಮತ್ತು ಗೆಳತಿಯರನ್ನು ಬಿಟ್ಟುಬಂದದ್ದಕ್ಕೆ ದುಃಖ ಇತ್ತು.

ಸ್ಕಾಟ್ಲೆಂಡಿನ ನಿಸರ್ಗ ಸೌಂದರ್ಯವನ್ನು ನೋಡಿ ನೇಹ ಮುಗ್ಧಳಾದಳು. ನೀಲ ವರ್ಣದ ಎತ್ತರ ಪರ್ವತಗಳು, ಸಂಜೆಯ ಮಸುಕು ಕತ್ತಲೆಯಲ್ಲಿ ಇನ್ನಷ್ಟು ದಟ್ಟ

ನೀಲಿಯಾಗಿ ಕಾಣುತ್ತಿದ್ದವು. ಪರ್ವತದ ಪಾದವನ್ನು ಸ್ಪರ್ಶಿಸುತ್ತಿರುವ ಆಳವಾದ ಸರೋವರಗಳು, ಇತಿಹಾಸದ ಭವ್ಯತೆಯನ್ನು ಅಡಗಿಸಿಕೊಂಡಿರುವ ವಿಶಾಲ ಕೋಟೆಗಳು, ಅಂಕುಡೊಂಕಾದ ಉತ್ಸಾಹಪೂರಿತ ಚಿಕ್ಕ ಚಿಕ್ಕ ಕಾಲುದಾರಿಗಳು ಎತ್ತ ನೋಡಿದರತ್ತ ಮನಮೋಹಕ ದೃಶ್ಯಗಳ ದಟ್ಟಣೆ ಕಂಡುಬರುತ್ತಿತ್ತು. ನೇಹಾಳ ಮನಸ್ಸಂತೂ ಅವುಗಳಲ್ಲೇ ಮುಳುಗಿಹೋಯಿತು.

ನೇಹಾ ಡಾ. ಮ್ಯಾಕ್‌ಮಿಲನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಬೇಕಾಗಿತ್ತು. ಡಾ. ಮ್ಯಾಕ್ಮಿಲನ್ ತುಂಬ ಸಜ್ಜನ ಸ್ವಭಾವದ ವ್ಯಕ್ತಿಯಾಗಿದ್ದರು. ನೇಹಾಳೊಂದಿಗೆ ಅವರು ಅತ್ಯಂತ ಸ್ನೇಹ ಮತ್ತು ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದರು. ಮೊದಮೊದಲು ತನ್ನ ಸುತ್ತಮುತ್ತ ಅಪರಿಚಿತ ಆಕೃತಿಯನ್ನು ನೋಡಿದ್ದೇ ಆದರೆ ನೇಹಾಳಿಗೆ ಮನೆಯ ನೆನಪು ಬಂದು ಮನಸ್ಸು ಅದರಲ್ಲಿ ತೊಯ್ದುಹೋಗುತ್ತಿತ್ತು.

ಆಗ್ನೆಸ್, ಬ್ರೂಸ್, ಹ್ಯಾಮಿಶ್ ಎಲ್ಲವೂ ವಿದೇಶೀ ಹೆಸರುಗಳು, ವಿದೇಶೀ ಮುಖಗಳು, ವಿದೇಶೀ ಭಾಷೆ....... ಅನೇಕ ವೇಳೆ ಸ್ಕಾಟಿಷ್ ಉಚ್ಚಾರಣೆ ಅವಳಗೆ ಅರ್ಥವಾಗುತ್ತಿರಲಿಲ್ಲ. ಮನಸ್ಸು ಉದ್ವಿಗ್ನಗೊಳ್ಳುತ್ತಿತ್ತು. ಒಮ್ಮೊಮ್ಮೆ ಅವಳಿಗೆ ಪ್ರಪಂಚದಲ್ಲಿ ತನ್ನ ದೇಶದಂಥ ದೇಶ ಇನ್ನೊಂದಿಲ್ಲ ಅನ್ನಿಸುತ್ತಿತ್ತು. ಮಮ್ಮಿ ಕೈನ ಬಿಸಿಬಿಸಿ ರೊಟ್ಟಿ, ಪಪ್ಪ ಮಾಡಿಕೊಡುತ್ತಿದ್ದ ಬೆಳಗಿನ ಬೆಡ್ ಟೀ, ರಾತ್ರಿ ಬಹಳ ಹೊತ್ತಿನವರೆಗೆ ತನು ಜೊತೆ ಆತ್ಮೀಯವಾಗಿ ಮಾತನಾಡುವುದು, ಮಾತು ಮಾತಿಗೂ ನಗುವುದು, ಇಡೀ ದಿನದ ವಿವರ ನೀಡುವುದು, ತೆಗೆದುಕೊಳ್ಳುವುದು, ಇದೆಲ್ಲದಕ್ಕೆ ನೇಹಾಳ ಮನಸ್ಸು ತೀವ್ರವಾಗಿ ಹಂಬಲಿಸುತ್ತಿತ್ತು. ಒಂಟಿತನದ ಬೇಸರದಿಂದ ಪಾರಾಗಲು ಬಹಳ ಹೊತ್ತಿನವರೆಗೂ ನೇಹಾ ಅನ್ಯ ಮನಸ್ಕಳಾಗಿ ಲೈಬ್ರರಿಯಲ್ಲಿ ಕುಳಿತಿರುತ್ತಿದ್ದಳು. ಎದುರುಗಡೆ ಪುಸ್ತಕ ತೆರೆದಿರುತ್ತಿತ್ತು. ಮನಸ್ಸು ಎಲ್ಲೋ ತನ್ನವರಲ್ಲಿ ಮುಳುಗಿಹೋಗಿರಲು ತುಡಿಯುತ್ತಿತ್ತು. ವ್ಯಾಕುಲ ನೋಟಗಳು ಸ್ವಲ್ಪ ಅತ್ತ ಇತ್ತ ಹುಡುಕಾಡುತ್ತಿದ್ದವು.

ಇಂಥದೇ ಒಂದು ಕತ್ತಲೆ ತುಂಬಿದ ಸಂಜೆಹೊತ್ತು. ಸಾಯಂಕಾಲ ನೇಹಾ ಲೈಬ್ರರಿಯಲ್ಲಿ ಕುಳಿತಿದ್ದಾಗಲೇ ತನ್ನ ಭಾಷೆಯನ್ನು ಕೇಳಿ ಅಚ್ಚರಿಗೊಂಡಳು. “ಹೊಸದಾಗಿ ಬಂದಿದ್ದೀರೇನು? ನಿಮ್ಮನ್ನು ಈ ಮುಂಚೆ ನೋಡಿಲ್ಲವೆ? ನಾನು ಪರೇಶ್. ನನ್ನ ಸ್ನೇಹಿತನನ್ನೊಬ್ಬನನ್ನು ಭೇಟಿಮಾಡಲು ಇಲ್ಲಿ ಲೈಬ್ರರಿಗೆ ಬಂದಿದ್ದೆ. ಸ್ನೇಹಿತನಂತೂ ಬರಲಿಲ್ಲ. ಹಾಂ ! ನಿಮ್ಮ ಪರಿಚಯ ಮಡಿಕೊಳ್ಳಲು ಬಂದೆ”

“ನಮಸ್ಕಾರ, ನಾನು ನೇಹಾ. ಇಂಜಿನಿಯರಿಂಗ್ ಸೈನ್ಸ್ ನಲ್ಲಿ ಪಿಎಚ್. ಡಿ. ಮಾಡಲು ಭಾರತದಿಂದ ಇಲ್ಲಿಗೆ ಬಂದಿದ್ದೇನೆ.”

"ನಿಮ್ಮನ್ನು ಭೇಟಿಯಾದದ್ದು ಬಹಳ ಸಂತೋಷ"– ಇಬ್ಬರೂ ಒಂದೇ ಸಲ ಹೇಳಿದರು.

ಇದು ಪರೇಶನೊಂದಿಗೆ ಅವಳ ಮೊದಲ ಪರಿಚಯ. ಶ್ಯಾಮಲ ವರ್ಣ, ಎತ್ತರದ ನಿಲುವು, ವಿಶಾಲವಾದ ಹೆಗಲು, ಗುಂಗುರು ಕೂದಲು, ಚಿತ್ತಾಕರ್ಷಕ ಮುಗುಳ್ನಗೆ, ಒಟ್ಟಾರೆ ಪರೇಶನದು ಆಕರ್ಷಕ ವ್ಯಕ್ತಿತ್ವ. ಅವನನ್ನು ಭೇಟಿಮಾಡಿದ ಮೇಲೆ ನೇಹಾಳ ಒಂಟಿತನ ಸ್ವಲ್ಪಮಟ್ಟಿಗೆ ಕಡಿಮೆಯಾಗತೊಡಗಿತು. ಬರುಬರುತ್ತಾ ಈ ಮೊದಲ ಔಪಚಾರಿಕ ಭೇಟಿ ಸ್ನೇಹದಲ್ಲಿ ಪರಿವರ್ತಿತವಾಯಿತು. ಪರೇಶ್ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ. ಅವನ ಅಣ್ಣ–ತಂಗಿ, ಎಲ್ಲರೂ ಗ್ಲಾಸ್ಗೋನಲ್ಲಿ ಇರುತ್ತಿದ್ದರು. ಒಂದೆರಡು ಸಲ ಪರೇಶ್ ಅವಳನ್ನು ತಮ್ಮ ಮನೆಗೂ ಕರೆದುಕೊಂಡು ಹೋದನು. ನೇಹಾಳಿಗೆ ಇಷ್ಟು ದಿನಗಳ ನಂತರ ಒಂದು ಭಾರತೀಯ ಕುಟುಂಬದೊಂದಿಗೆ ಒಡನಾಡುವುದು , ಊಟ–ತಿಂಡಿಮಾಡುವುದು, ನಗುವುದು– ಮಾತನಾಡುವುದು ಬಹಳ ಹಿಡಿಸಿತು.

ನೇಹಾ ಯೋಚಿಸಿ ಯೋಚಿಸಿ ದಣಿದಳು. ತನ್ನ ಕಳೆದುಹೋದ ಈ ಕಹಿ ಸಂಗತಿಗಳನ್ನು ನೆನೆಸಿಕೊಂಡು ದುಃಖಿಸುವುದು ಅವಳಿಗೆ ಬೇಕಿರಲಿಲ್ಲ. ಆದರೆ ಉಡಾಳ ಮೋಡಗಳಂತೆ ವಿಚಾರಗಳು ಹತೋಟಿಮೀರಿ ಹೋಗುತ್ತಿದ್ದವು.

ನೇಹಾಳಿಗೆ ಮಳೆಗಾಲದ ಆ ಆರ್ದ್ರ ಸಂಜೆ ನೆನಪಾಯಿತು. ಆ ದಿನ ಅದೆಷ್ಟೊಂದು ಮಳೆ. ಇಂದು ಭೂಮಿ ಬಾಯಾರಿಕೆ ನೀಗಿಸಿಕೊಂಡೇ ತೀರುತ್ತೆ.......ಕೇವಲ ಭೂಮಿ ಮಾತ್ರ ಬಾಯಾರಿತ್ತೆ, ಮತ್ತೆ ಅವಳು? ಲೆಕ್ಚರ್ ಮುಗಿಯುತ್ತಾ ಇದ್ದಹಾಗೆ, ನೇಹಾ ಎಂದಿನಂತೆ ಬಸ್ ಸ್ಟಾಪ್ ಕಡೆ ಹೋಗುತ್ತಾ ಇದ್ದಳು. ಆ ಸಮಯಕ್ಕೆ ಸರಿಯಾಗಿ ಪರೇಶ್ ಅವಳ ಹತ್ತಿರ ಬಂದು ಕಾರ್ ನಿಲ್ಲಿಸಿ ಹೇಳಿದ–"ನೇಹಾ ಹವೆ ತುಂಬಾ ಕೆಟ್ಟದಾಗಿದೆ. ಇಲ್ಲಿ ಮಳೆ ಶುರುವಾಯಿತು ಅಂದರೆ ನಿಲ್ಲುವ ಪ್ರಶ್ನೆನೇ ಇಲ್ಲ. ಕಾರಿನಲ್ಲಿ ಕೂತುಕೋ. ನಿನ್ನನ್ನು ಮನೆಗೆ ತಲುಪಿಸುತ್ತೇನೆ. ಆದರೆ ಒಂದೇ ಒಂದು ಷರತ್ತು......ಬಿಸಿಬಿಸಿ ಕಾಫಿ ಕುಡಿಸಬೇಕಾಗುತ್ತೆ." ಮತ್ತಿನ್ನೇನೂ ಉಭ–ಶುಭ ಅನ್ನದೆ ನೇಹಾ ಕಾರಿನಲ್ಲಿ ಕುಳಿತುಕೊಂಡುಬಿಟ್ಟಳು. ಸಣ್ಣಪುಟ್ಟ ಅನುಕೂಲಗಳು ಎಷ್ಟೊಂದು ಚೆನ್ನಾಗಿರುತ್ತವೆ. ತನ್ನತನದ ಅರಿವು ಆಯಿತು ಅಂದರೆ ಜೀವನ ತನ್ನಷ್ಟಕ್ಕೆ ತಾನೆ ಸುರಳೀತವಾಗಿಬಿಡುತ್ತದೆ.

"ತುಂಬಾ ನೆಂದುಬಿಟ್ಟಿದ್ದೀಯ ನೇಹಾ. ಫ್ಲೂ ಆಗಿಬಿಡುತ್ತೆ. ನೀನು ಬಟ್ಟೆ ಬದಲಾಯಿಸು. ಅಷ್ಟುಹೊತ್ತಿಗೆ ನಾನು ಕಾಫಿ ಮಾಡಿಬಿಡುತ್ತೀನಿ."

"ಬಹಳ ದಿನಗಳಿಂದ ಏನೋ ಹೇಳಬೇಕೂಂತ ಇದ್ದೀನಿ ನೇಹಾ". ಹೇಳಬೇಕೋ ಬೇಡವೋ ಎಂದು ತೀರ್ಮಾನಿಸುತ್ತಿರುವ ಹಾಗೆ ಪರೇಶನು ಹುಡುಕುನೋಟದಿಂದ

ಅವಳನ್ನು ನೋಡಿದನು. "ನಾವಿಬ್ಬರೂ ಬಹಳ ಒಳ್ಳೆಯ ಸ್ನೇಹಿತರು. ಒಬ್ಬರು ಇನ್ನೊಬ್ಬರ ಸುಖ ದುಃಖಗಳಲ್ಲಿ ಭಾಗಿಗಳಾಗಿದ್ದೇವೆ. ನಮ್ಮ ಏಕಾಂತವನ್ನು ಪರಸ್ಪರ ಹಂಚಿಕೊಳ್ಳಬಹುದು. ಆದರೆ ಈ ಸಂಬಂಧದ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸ ಬಯಸುತ್ತೇನೆ. ನೀನೂ ಎಂದಾದರೂ ಹೀಗೆ ಯೋಚಿಸಿದ್ದೀಯಾ? ನೀನಂತೂ ಯಾವತ್ತೂ ಏನೂ ಹೇಳಲಿಲ್ಲ, ತಿಳಿಯಪಡಿಸಲೂ ಇಲ್ಲ." ನೇಹಾಳಿಗೆ ಪರೇಶನ ಹಗುರವಾದ ಸ್ಪರ್ಶದ ಅನುಭವವಾಯಿತು. ಅದು ಅವಳ ಕಣ್ಣುಗಳಲ್ಲಿ ತನ್ನ ಪ್ರಶ್ನೆಯ ಉತ್ತರವನ್ನು ಹುಡುಕುತ್ತಿತ್ತು.

ಕೆಲಹೊತ್ತು ನೇಹಾಳ ಮನಸ್ಸು ಪರೇಶನ ಎದೆಯಲ್ಲಿ ತನ್ನ ಮುಖ ಹುದುಗಿಸಿ ಅವನ ಬಾಹುಗಳಲ್ಲಿ ಬಂಧಿತಳಾಗ ಬಯಸಿತು. ಅವನ ಉಸಿರಿನ ಬಿಸಿಯಲ್ಲಿ ಕರಗಿಹೋಗಲು, ಯಾವುದೇ ಹಿಂಜರಿಕೆಯಿಲ್ಲದೆ ಅವನನ್ನು ಇಡಿಯಾಗಿ ಪಡೆದುಕೊಂಡುಬಿಡಲು, ತನ್ನ ಪ್ರತ್ಯೇಕ ಅಸ್ತಿತ್ವವನ್ನು ನೀಗಿಕೊಂಡು ಪರೇಶನೊಂದಿಗೆ ಒಂದಾಗಿಬಿಡಲು ಬಯಸಿತು. ಆದರೆ ವಿಚಾರಗಳ ಒಂದು ಅಲೆ ಮತ್ತೆ ವೇಗವಾಗಿ ಚಿಮ್ಮಿತು. ಆ ರಾತ್ರಿ ತನ್ನನ್ನು ಪರೇಶನಿಗೆ ಸಮರ್ಪಿಸಿಕೊಂಡಿದ್ದರೆ, ಅಕಸ್ಮಾತ್ ನಡೆದುಹೋದ ಆ ಅದು ನಡೆಯುವ ಸಾಧ್ಯತೆ ಇತ್ತೆ?........

ಆಗಲೇ ಮಮ್ಮಿ ಹೇಳಿದ ಮಾತುಗಳು ಮಿಂಚಿನಂತೆ ಫಳಕ್ಕನೆ ಹೊಳೆದವು– "ನೇಹಾ ಬಹಳ ನಂಬಿಕೆ ಇಟ್ಟು ನಿನ್ನನ್ನು ನಾವು ಕಳಿಸುತ್ತಿದ್ದೇವೆ. ನಮ್ಮ ಆದರ್ಶ, ನಮ್ಮ ಸಂಸ್ಕೃತಿ, ಮತ್ತು ನಮ್ಮ ಸಭ್ಯತೆಯನ್ನು ಮರೆಯಬೇಡ. ವಿದೇಶೀಯರ ಸ್ವಚ್ಛಂದತೆ, ಅಗತ್ಯಕ್ಕಿಂತ ಹೆಚ್ಚಿನ ಸ್ವಾತಂತ್ರ ಮತ್ತು ರೀತಿನೀತಿಗಳು ಭಾರತೀಯರಾದ ನಮಗೆ ಶೋಭಿಸುವುದಿಲ್ಲ. ಮೂರ್ಖತನದಿಂದ ಮತ್ತೆ ಹಿಂತಿರುಗಿ ಬರಲು ಸಾಧ್ಯವಿಲ್ಲದೆ ಇರುವಂಥ ಹಾಗೂ ಅದರಿಂದಾಗಿ ನೀನು, ನಾವು ಇಬ್ಬರೂ ಜೀವಮಾನ ಪರ್ಯಂತ ದುಃಖ ಪಡಬೇಕಾಗಿ ಬರುವಂಥ ದಾರಿಯಲ್ಲಿ ಹೋದಿಗೀದೀಯ........"

"ಪರೇಶ್ ನನಗೆ ಸ್ವಲ್ಪ ಟೈಂ ಬೇಕು. ಈಗಿನಿಂದಲೇ ನನ್ನನ್ನು ಈ ಕೆಸರಿಗೆ ಎಳೆಯಬೇಡ. ಮತ್ತೆ ಹೊರಕ್ಕೆ ಬರುವುದಕ್ಕೆ ಸಾಧ್ಯವೇ ಆಗದಿರುವಂಥ ಆಳಕ್ಕೆ ಇಳಿಯಲು ನನಗೆ ಇಷ್ಟವಿಲ್ಲ. ಸದ್ಯಕ್ಕೆ ನಾವು ಒಳ್ಳೆಯ ಸ್ನೇಹಿತರಾಗಿದ್ದೆವೆ. ಇಬ್ಬರೂ ನಮ್ಮ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದರಲ್ಲಿ ತೊಡಗಿದ್ದೇವೆ. ಆಮೇಲೆ ಅಪ್ಪ– ಅಮ್ಮನ ಅನುಮತಿ, ಅವರ ಸಲಹೆ ಚರ್ಚೆ ಹೀಗೆ ನಾನಾ ತೊಡಕುಗಳಿವೆ. ಈಗಲೇ ಸದ್ಯಕ್ಕೆ ನಿನಗೆ ನಾನು ಯಾವುದೇ ಆಶ್ವಾಸನೆ ನಿಡಲಾರೆ. ಯಾವುದೇ ಮಾತು ಕೊಡಲು ಸಾಧ್ಯವಿಲ್ಲ". ನೇಹಾಳ ಕಂಠ ಗದ್ಗದಗೊಂಡಿತು.

"ಆಶ್ವಾಸನೆಯ ವಿಷಯ, ಮಾತು ಕೊಡುವ ವಿಷಯ ಯಾರು ಹೇಳಿದರು? ನಿನ್ನ ಜೀವನದಲ್ಲಿ ನನಗಾಗಿ ವಿಶೇಷ ಸ್ಥಾನವಿದೆಯೋ ಹೇಗೆ ಅಂತ ನಿನ್ನ ಬಾಯಿಂದ ಕೇಳಲು ಇಷ್ಟಪಡುತ್ತೇನೆ ನಾನು. ನೀನೂ ನನ್ನನ್ನು ಪ್ರೀತಿಸುತ್ತೀಯೋ ಅಥವಾ ನನ್ನ ಆಸೆ, ಆಕರ್ಷಣೆ ಕೇವಲ ಏಕಮುಖವೋ ಅನ್ನುವುದನ್ನು ತಿಳಿದುಕೊಳ್ಳ ಬಯಸುತ್ತೇನೆ."

ಪರೇಶನ ಈ ಮಾತು ನೇಹಾಳ ಗಂಟಲಲ್ಲಿ ಮುಳ್ಳಿನ ಹಾಗೆ ಸಿಕ್ಕಿಕೊಂಡುಬಿಟ್ಟಿತು. "ನೀನು ಇವತ್ತು ಏನು ಹೇಳಿದೆ, ನಾನಂತೂ ಅದೆಷ್ಟು ದಿವಸದಿಂದ ಹೇಳಬೇಕೆಂದಿದ್ದೆನೋ ಗೊತ್ತಿಲ್ಲ. ನಿಜ ಹೇಳ ಬೇಕೆಂದರೆ ಮೊದಲು ನಿನ್ನ ಬಾಯಿಂದ ಕೇಳಬೇಕೆಂದು ಬಯಸಿದ್ದೆ. ತನ್ನ ತೋಳುಗಳಲ್ಲಿ ಹುದುಗಿಸಿಕೊಳ್ಳಲು ಪುರುಷನು ಮೊದಲು ಆಹ್ವಾನಿಸಲಿ ಎಂಬ ಹೆಣ್ಣಿನ ಆಸೆಯನ್ನು ಹತ್ತಿಕ್ಕದಾದೆ"–ಎಂದು ಹೇಳಿಬಿಡಲೆ ಎಂದು ಮನಸ್ಸಾಯಿತು. ಆದರೆ ಮತ್ತೆ ಮತ್ತೆ ಸಂಶಯದ ಸುಳಿಯಲ್ಲಿ ಸಿಲುಕುವವಳು ನಾನು ತಾನೆ?– ನಾವು ಒಬ್ಬರನ್ನೊಬ್ಬರು ಸಂಭಾಳಿಸ ಬಲ್ಲೆವೆ? ಒಂದು ದಡದಿಂದ ಇನ್ನೊಂದು ದಡಕ್ಕೆ ತುಳುಕುತ್ತ , ತೀವ್ರವಾಗಿ ಉಕ್ಕುತ್ತ, ರಭಸದಿಂದ ಹರಿಯುವ ಪ್ರೀತಿಯ ಪ್ರವಾಹವೇ ಬೇರೆ, ವೈವಾಹಿಕ ಜೀವನದ ಸಮಸ್ಯೆಗಳು ಚಿಂತೆಗಳು, ಹೊಣೆಗಾರಿಕೆಗಳು, ಇವೆಲ್ಲವುಗಳನ್ನು ನಿಭಾಯಿಸುತ್ತ ಅವುಗಳೊಂದಿಗೆ ಬದುಕುವುದೇ ಬೇರೆ. ಮತ್ತೆ ಇದೆಲ್ಲವೂ ಹಗಲೂ ರಾತ್ರಿ ಒಬ್ಬರು ಇನ್ನೊಬ್ಬರನ್ನು ಸಹಿಸುವ ಅನಿವಾರ್ಯತೆ ಆಗಬಾರದಲ್ಲವೆ? ನೇಹಾ ಏನನ್ನೂ ನಿರ್ಣಯಿಸದಾದಳು.........

ಜೀವನದಲ್ಲಿ ಅವಳು ಯಾವುದೇ ಸ್ವತಂತ್ರ ನಿರ್ಣಯ ಏಕೆ ತೆಗೆದುಕೊಳ್ಳಲಾರಳು? ಹೌದು, ಇದಕ್ಕೆ ಸಮಾಜವೇ ತಪ್ಪಿತಸ್ಥ. ನಮ್ಮ ಸಮಾಜ ಹೆಣ್ಣಿಗೆ ತನಗೆ ಬೇಕಾದ ರೀತಿಯಲ್ಲಿ ಬದುಕುವಂಥ ಹಕ್ಕನ್ನು ಯಾವಾಗ ತಾನೆ ಕೊಟ್ಟಿದೆ.?

ಮೊದಲಿಗೆ ತಂದೆ ತಾಯಿಗಳು, ಆಮೇಲೆ ಅಣ್ಣ ತಮ್ಮಂದಿರು ಅನಂತರ ಗಂಡ ಮಕ್ಕಳು–ಇವರುಗಳ ಮೂಲಕವೇ ಸ್ತ್ರೀಯರು ತಮ್ಮ ಬದುಕು ಬದುಕುತ್ತಾರೆ. ನಾನೇಕೆ ಪರೇಶನೊಡನೆ ಏನನ್ನೂ ಹೇಳಲಾರದಾದೆ? ಪರೇಶ್ ಅವಳ ಮೌನವನ್ನು ಏನೆಂದು ತಿಳಿದನೋ–ಸ್ವೀಕೃತಿಯೋ, ನಿರಾಕರಣೆಯೋ.........?

ತನುವಿನ ಪತ್ರ ಬಂದಿತ್ತು– "ಅಕ್ಕ ನನ್ನನ್ನೂ ಒಂದಷ್ಟು ದಿವಸ ಕರೆಸಿಕೊಳ್ಳಬಾರದೆ? ಮನೆಯಲ್ಲಿ ಮನದ ಮಾತನ್ನು ಹೇಳುವವರು. ಕೇಳುವವರು ಯಾರೂ ಇಲ್ಲ. ನೀನಿಲ್ಲದೆ, ನಿನ್ನಿಂದ ಅಗಲಿ ತುಂಬ ಖಾಲಿ ಖಾಲಿ ಅನ್ನಿಸುತ್ತೆ. ಒಮ್ಮೆಲೇ ಏಕಾಂಗಿಯಾಗಿಬಿಟ್ಟಿದ್ದೀನಿ. ಮಮ್ಮಿ ಪಾಪ ಇಬ್ಬರೂ ಚೆನ್ನಾಗಿದ್ದಾರೆ. ನಿನ್ನ ಯಶಸ್ಸಿನ ಮಾತನ್ನು ಮತ್ತೆ ಮತ್ತೆ ಆಡಿ ದಣಿಯರು ಅವರು. ಆ ಹತ್ತನೇ ನಂಬರಿನ ಮನೆಯ ಬಿಂದು ಅಂತ ಇದ್ದಳಲ್ಲ,

ಅವಳ ಮದುವೆ ಆಗಿಹೋಯಿತು. ನಮ್ಮ ಎದುರು ಮನೆಯ ಕೊಠಡಿಯಲ್ಲಿರುತ್ತಿದ್ದಳಲ್ಲ, ಮಿಸೆಸ್ ಗರ್ಗ್ ಅವಳಿಗೆ ಕ್ಯಾನ್ಸರ್ ಆಗಿಬಿಟ್ಟಿದೆ. ಕಾರ್ಖಾನೆಯ ಚಿಮಣಿಯ ಹಾಗೆ ಹೊಗೆ ಬಿಡುತ್ತಿದ್ದಳಲ್ಲವೆ" ಇತ್ಯಾದಿ ಇತ್ಯಾದಿ.

ನೇಹಾ ಸಾಯಂಕಾಲದ ಹೊತ್ತು ಏರ್ ಪೋರ್ಟ್, ಪೋಲಿಸ್ ಸ್ಟೇಷನ್ ಮತ್ತು ಆಸ್ಪತ್ರೆಯಲ್ಲಿ ಬಾಂಗ್ಲಾದೇಶ್, ಪಾಕಿಸ್ತಾನ್ ಹಾಗೂ ಪಂಜಾಬ್ ಇತ್ಯಾದಿ ಕಡೆಗಳಿಂದ ಬಂದಿದ್ದ ಕಾನೂನು ಬಾಹಿರರಾದ ಇಮ್ಮಿಗ್ರೆಂಟ್ಸ್‌ಗಳಿಗೆ ದುಭಾಷಿ ಕೆಲಸ ಮಾಡತೊಡಗಿದಳು. ಆಮೇಲೆ ಸ್ವಲ್ಪ ಹಣ ಒಟ್ಟುಗೂಡಿಸಿ ತನೂಗೆ ಒಂದು ಟಿಕೆಟ್ ಕಳಿಸಿಕೊಟ್ಟಳು. ತನೂಗಾಗಿ ಏನನ್ನು ಮಾಡಿದರೂ ಅದು ಅವಳನ್ನು ಸಂತಸದ ಪರಾಕಾಷ್ಠೆಗೆ ಒಯ್ಯುತ್ತಿತ್ತು. ಅವಳಿಗಿಂತಲೂ ಇನ್ಯಾರೂ ಅವಳಿಗೆ ಹೆಚ್ಚು ಅನ್ನಿಸುತ್ತಿರಲಿಲ್ಲ.

ಆ ಹೊತ್ತು ತನು ಬಂದಾಗ, ಆ ಚಂಚಲ, ತುಂಟ ಹುಡುಗಿಯೊಂದಿಗೆ ಪರಿಚಯ ಮಾಡಿಸುತ್ತ ಹೇಳಿದಳು–"ತನೂ ಇವನು ನನ್ನ ಆತ್ಮೀಯ ಮಿತ್ರ ಪರೇಶ್. ಇಲ್ಲಿ ಮೆಡಿಸಿನ್ ನಲ್ಲಿ ಡಿಗ್ರಿ........ ತನು ಅವಳು ಹೇಳಿದ ವಾಕ್ಯವನ್ನು ಪೂರ್ತಿ ಕೇಳಿಸಿಕೊಳ್ಳದೆ ಒಂದು ಚಿನಕುರಳಿ ಪಟಾಕಿ ಹಚ್ಚಿದಳು–"ನೇಹಾ ಇನ್ನೂ ಗೆಳೆತನದವರೆಗೆ ಮಾತ್ರ ತಲುಪಿದ್ದೀಯಾ ಅಂದರೆ, ಇಲ್ಲಿಗೆ ಬಂದೂ ಭಾರತದಲ್ಲಿ ಎಷ್ಟು ಪುಕ್ಕಲಿ ಆಗಿದ್ದೆಯೋ ಅಷ್ಟೇ ಪುಕ್ಕಲಿ. ಅಲ್ಲಾ, ಅಕ್ಕ, ಸ್ವಲ್ಪ ತೆರೆದ ಹವೆಯಲ್ಲಿ ಉಸಿರಾಡಲ್ಲ...... ನೀನು ಸ್ವಾತಂತ್ರ್ಯದ ಅನುಭವ ಪಡಿ. ಅದೇ ಮಮ್ಮಿ– ಪಾಪ ಮತ್ತು ಆರ್ಯ ಸಮಾಜದ ಮಾತುಗಳು ಈಗ ಬೇಡ." ಅನಂತರ ಪರೇಶನ ಕಡೆ ನೋಡುತ್ತ ಹೇಳಿದಳು– "ಹಲ್ಲೋ ಪರೇಶ್ ಪ್ಲೀಸ್ಡ್ ಟು ಮೀಟ್ ಯೂ". ಚಿರಪರಿಚಿತ ವ್ಯಕ್ತಿಯೋ ಎಂಬಷ್ಟು ಸಹಜವಾಗಿ ತನು ಈ ಮಾತುಗಳನ್ನು ಹೇಳಿದಳು.

"ತನು ಈಗ ಸುಮ್ಮನಿರು ! ಮತ್ತಿನ್ನೇನೂ ನೀನು ಮಾತಾಡಬೇಡ, ಗೊತ್ತಾಯಿತೇನು?" ಆಮೇಲೆ ಪರೇಶನ ಕಡೆ ತಿರುಗಿ–"ಪರೇಶ್, ಇವಳು ನನ್ನ ಪ್ರೀತಿಯ ತಂಗಿ. ತುಂಟತನ ಅನ್ನುವುದು ಇವಳ ನರನಾಡಿಗಳಲ್ಲಿದೆ. ಮಾತಾಡೋಕೆ ಶುರು ಮಾಡಿದರೆ ತಡೆಯೇ ಇಲ್ಲದೆ ಮಾತಾಡುತ್ತಲೇ ಇರುತ್ತಾಳೆ. ಆದರೂ ಪ್ರೀತಿಗಿಂತ ಪ್ರೀತಿಯವಳಾಗಿ ಕಾಣುತ್ತಾಳೆ. ಇವಳ ಯಾವುದೇ ಮಾತನ್ನು ತಪ್ಪು ತಿಳಿಯಬೇಡ."

ಸಮಯ ಅನ್ನುವುದು ರೆಕ್ಕೆ ಕಟ್ಟಿಕೊಂಡು ಹಾರುತ್ತಹೋಯಿತು. ಮೂರೂ ಜನ ವಿದೇಶೀ ಪ್ರವಾಸಿಗರ ಹಾಗೆ ಪೂರಾ ಸ್ಕಾಟ್ಲೆಂಡ್ ಮತ್ತು ಲೇಕ್ ಡಿಸ್ಟ್ರಿಕ್ಟ್‌ನಲ್ಲೆಲ್ಲ ಚೆನ್ನಾಗಿ ಸುತ್ತಾಡಿದರು. ಇನ್ನು ಎರಡು ವಾರಗಳ ನಂತರ ತನು ಊರಿಗೆ ಹಿಂತಿರುಗುವುದಿತ್ತು. ಸೋದರಿಯರಿಬ್ಬರೂ ಕೆಫೆಯಲ್ಲಿ ಕುಳಿತು ಮಾತಾಡುತ್ತಿದ್ದರು. "ಅಕ್ಕಾ, ಪರೇಶ್ ನಿನ್ನನ್ನು

ಬಹಳ ಇಷ್ಟಪಡುತ್ತಾರಲ್ಲವೆ ! ನಿನ್ನ ಕಡೆಗಿನ ಅವರ ಒಂದೊಂದು ನೋಟವೂ ಪ್ರೀತಿ ತುಂಬಿದ ನೋಟ. ನನ್ನ ಭಾವನಾಗುವ ಎಲ್ಲ ಗುಣಗಳೂ ಅವರಲ್ಲಿವೆ. ಈಗ ನಾನು ಭಾರತಕ್ಕೆ ಹೋಗುತ್ತಾ ಇದ್ದೀನಿ. ಒಂದು ವೇಳೆ ನೀನು ಉಚಿತ ಎಂದು ಭಾವಿಸುವುದಾದರೆ, ಈ ವಿಷಯದಲ್ಲಿ ಮಮ್ಮಿ-ಪಾಪ ಅವರ ಹತ್ತಿರ ಏನಾದರೂ ಹೇಳಲೆ?"

"ತನೂ ಒಂದು ಸೆಮಿನಾರಿನಲ್ಲಿ ಭಾಗವಹಿಸುವ ಸಲುವಾಗಿ ನಾನು ಮೂರು ನಾಲ್ಕು ದಿನ ಲಂಡನ್‌ಗೆ ಹೋಗುತ್ತಾ ಇದ್ದೀನಿ. ಅಲ್ಲಿಂದ ವಾಪಸ್ ಬಂದ ಮೇಲೆ ಈ ವಿಷಯದ ಬಗ್ಗೆ ಆರಾಮವಾಗಿ ಕೂತು ಯೋಚನೆ ಮಾಡೋಣ. ಪರೇಶ್ ನಾಳೆ ಗ್ಲಾಸ್ಗೋಗೆ ಹೋಗುತ್ತಾ ಇದ್ದಾರೆ. ಒಂದೆರಡು ದಿನದಲ್ಲಿ ವಾಪಸಾಗುತ್ತಾರೆ. ಹೆದರಿಕೊಳ್ಳಬೇಡ. ಏನಾದರೂ ಪ್ರಾಬ್ಲೆಂ ಆದರೆ ಪಕ್ಕದಲ್ಲಿರುವ ಮಿಸೆಸ್ ಹ್ಯಾಮಿಲ್ಟನ್ ಅವರ ಹತ್ತಿರ ಹೋಗಿಬಿಡು. ಅಡಿಗೆಗೆ ಬೇಕಾದ ಪದಾರ್ಥಗಳನ್ನೆಲ್ಲ ನಾವು ನಿನ್ನೆಯೇ ಖರೀದಿ ಮಾಡಿದ್ದೀವಿ. ಇನ್ನೇನಿಲ್ಲ. ನಾನು ಹೀಗೆ ಹೋಗಿ ಹಾಗೆ ಬಂದುಬಿಡುತ್ತೀನಿ". ಅಕ್ಕನ ಪ್ರೀತಿ ಮತ್ತು ಮನದಾಳದ ಈ ಮಾತುಗಳೆಲ್ಲ ತನುವನ್ನು ಆಳದವರೆಗೂ ತಟ್ಟಿದುವು.

ಲಂಡನ್‌ಗೆ ತನ್ನದೇ ಆದೊಂದು ಬೆಡಗಿದೆ. ವೇಗವಾಗಿ ಓಡುತ್ತಾ ಧಾವಿಸುತ್ತಾ ಇರುವ ಈ ಊರು ಯಾವತ್ತೂ ನಿದ್ರಿಸುವುದೇ ಇಲ್ಲ. ಲಂಡನ್ ನಲ್ಲಿ ನೋಡುವುದು ಬಹಳಷ್ಟಿದೆ. ನಿಮ್ಮ ಅಭಿರುಚಿ ಎಂಥದೇ ಆಗಿರಲಿ, ಲಂಡನ್ ನಲ್ಲಿ ಅದೆಲ್ಲವೂ ಲಭ್ಯ. 'ಯಾರಿಗಾದರೂ ಲಂಡನ್ ಸಾಕಾಗಿ ಹೋಗಿದೆ ಅಂದರೆ ಅವರಿಗೆ ಜೀವನವೇ ಸಾಕಾಗಿ ಹೋಗಿದೆ ಅಂತ ಅರ್ಥ'- ಎಂಬ ಸ್ಯಾಮ್ಯುಯಲ್ ಜಾನ್ಸನ್‌ನ ಮಾತುಗಳು ಎಷ್ಟು ಸತ್ಯ! ಜೀವನಕ್ಕೆ ಏನೇನು ಬೇಕೋ ಅದೆಲ್ಲವೂ ಲಂಡನ್ ನಲ್ಲಿ ಲಭ್ಯ. ಎರಡೇ ದಿನದಲ್ಲಿ ಸೆಮಿನಾರ್ ಮುಗಿದುಹೋಯಿತು. ಮೂರನೇ ದಿನ ಎಲ್ಲ ವಿದ್ಯಾರ್ಥಿಗಳಿಗೂ ಅವರವರ ಇಚ್ಛೆಗೆ ಬಿಟ್ಟದ್ದು. ಲಂಡನ್ ತಿರುಗಾಡುವುದು, ಶಾಪಿಂಗ್ ಮಾಡುವುದು ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದು, ಯಾರಿಗೆ ಏನುಬೇಕೋ ಅದು ಮಾಡಬಹುದು. ಮುಂದಿನ ವಾರ ತನುವನ್ನು ಯಾತಕ್ಕೆ ಕರೆದುಕೊಂಡು ಬರಬಾರದು ಎಂದು ಯೋಚಿಸಿದಳು. ತನು ಬಾರದೆ ಹೋದರೆ ಅವಳು ಲಂಡನ್ ಅನ್ನು ಹೇಗೆ ತಾನೆ ನೋಡಿಯಾಳು? ಪರೇಶನ ಕಾರಿನಲ್ಲಿ ಕುಳಿತು ಮೂರೂ ಜನ ಒಟ್ಟಾಗಿ ಪಿಕ್ನಿಕ್ ಮಾಡಿಕೊಂಡು ಬರಬಹುದು. ಒಳ್ಳೆ ಮಜಾ ತಗೊಳ್ಳಬಹುದು. ತನು ಊರಿಗೆ ಹೋಗುವ ಕೊನೇ ವಾರ ಸ್ವಲ್ಪ ಧಾಮ್ ಧೂಮ್ ಆಗಲಿ. ನೇಹಾ ಹಿಂತಿರುಗಿದಳು. ಲಂಡನ್‌ಗೆ

ಹೋಲಿಸಿದರೆ ಎಡಿನ್ ಬರೋದಲ್ಲಿ ಈಗಲೂ ಸಾಕಷ್ಟು ಥಂಡಿ ಇತ್ತು. ಆದರೆ ಬೆಳಗಿನ ಎಳೆ ಬಿಸಿಲಿನಲ್ಲಿ ಹತ್ತಿರದ ಸರೋವರ ಬೆಳುದಿಂಗಳಿನ ಚಾದರದ ಹಾಗೆ ಹೊಳೆಯುತ್ತಿತ್ತು. ತನೂಗೆ ಡಿಸ್ಟರ್ಬ್ ಆಗದೆ ಇರಲಿ ಎಂದು ನೇಹಾ ಮೆಲ್ಲಗೆ ಬಾಗಿಲು ತೆಗೆದಳು. ಬಾಲ್ಯದಿಂದಲೂ ತನು ಕುಂಭಕರ್ಣನ ಹಾಗೆ ನಿದ್ರೆ ಮಾಡುತ್ತಿದ್ದಳು. ನೇರವಾಗಿ ಅಡಿಗೆ ಮನೆಗೆ ಹೋಗಿ ಒಂದು ಕಪ್ ಕಾಫಿ ಮಾಡಿದಳು ಮತ್ತು ಬಟ್ಟೆ ಬದಲಿಸಲು ಬೆಡ್ ರೂಂಗೆ ಹೋದಳು.

ಆದರೆ ಇದೇನು ನೋಡ್ತಾ ಇದ್ದಾಳೆ ನೇಹಾ ! ಅವಳಿಗೆ ತನ್ನ ಕಾಲುಗಳು ಜಡವಾದಂತೆನಿಸಿಬಿಟಿತು ಮತ್ತು ತನ್ನ ಕಾಲ ಕೆಳಗಿನ ನೆಲ ತೀವ್ರವಾಗಿ ಕುಸಿಯತೊಡಗಿದೆ ಎನಿಸಿತು. ಅವಳ ಶರೀರವೆಲ್ಲಾ ಹಿಂಡಿದಂತಾಗಿ ರಕ್ತವೆಲ್ಲಾ ಹನಿಗಳ ರೂಪದಲ್ಲಿ ಬಸಿಯುತ್ತಿದೆ ಎಂದು ಅನಿಸತೊಡಗಿತು. ಅವಳ ಒಂದು ಭಾಗವೇ ಮೃತವಾದಂತೆ, ನಿರ್ಜೀವವಾದಂತೆ ಅನ್ನಿಸತೊಡಗಿತು..........

ತನು ಮತ್ತು ಪರೇಶ್ ಒಬ್ಬರಿಗೊಬ್ಬರು ಅಂಟಿಕೊಂಡು ಗಾಢ ನಿದ್ರೆಯಲ್ಲಿ ಮುಳುಗಿದ್ದರು. ತನುವಿನ ಉದ್ದನೆಯ ಕಪ್ಪು ಮುಂಗುರುಳು ಪರೇಶನ ಹೆಗಲ ಮೇಲೆ ಅಸ್ತವ್ಯಸ್ತವಾಗಿ ಹರಡಿತ್ತು. ನಿಶ್ಚಲನಾದ ಕಾಮದೂತನಂಥ ಕಾಂತಿಯನ್ನು ತಳೆದ ಪರೇಶನ ಮುಖದ ಮೇಲೆ ಗಾಢವಾದ ಸಂತೃಪ್ತಿಯ ಕಳೆ ರಾರಾಜಿಸುತ್ತಿತ್ತು. ತನುವಿನ ಒಂದೆರಡು ಗುಂಗುರು ಗುಂಗುರಾದ ಮುಂಗುರುಳು ಅವನ ಹಣೆಗೆ ಅಂಟಿಕೊಂಡಿತ್ತು. ಅವನ ಬಲಿಷ್ಠ ಬಾಹುಗಳಲ್ಲಿ ತನುವಿನ ತೆಳ್ಳನೆಯ ನೀಳ ಕಾಯ ಹುದುಗಿತ್ತು. .... ಇಬ್ಬರೂ ಅದೆಷ್ಟು ಮುದ್ದಾಗಿ ಮುಗ್ಧರಾಗಿ ತೋರುತ್ತಿದ್ದರು !

ಒಮ್ಮೆಲೇ ನೇಹಾ ಮಾತಿಲ್ಲದೆ ನಿಶ್ಚೇಷ್ಟಳಾಗಿ ನಿಂತುಬಿಟ್ಟಳು. ನೇಹಾಳ ಕೈಯಿಂದ ಕಾಫಿಯ ಮಗ್ಗು ಹೇಗೋ ಕೆಳಗೆ ಬೀಳದೆ ಹಾಗೆಯೇ ಉಳಿದುಕೊಂಡಿತ್ತು. ಜಡವಾಗಿದ್ದ ಚೇತನ ಅವಳಲ್ಲಿ ಮತ್ತೆ ಮರುಕಳಿಸಿದಾಗ, ತನುವನ್ನು ಹಾಸಿಗೆಯಿಂದ ಈಚೆಗೆಳೆದುಹಾಕಿ ನಾಲ್ಕು ಬಿಗಿದು ಮನೆಯಿಂದ ಹೊರಗೆ ಅಟ್ಟಿಬಿಡಬೇಕೆಂದು ಮನಸ್ಸಿಗೆ ಅನ್ನಿಸಿತು. ಆದರೆ ಕೇವಲ ತನುವನ್ನಷ್ಟೇ ಏಕೆ ಪರೇಶನನ್ನು ಯಾಕೆ ಬೇಡ? ಇಬ್ಬರೂ ಪರಸ್ಪರ ಒಪ್ಪಿಯೇ ಇದೆಲ್ಲ ಆಗಿರಲಿಕ್ಕೆ ಸಾಕಲ್ಲ? ....

ಕಾಮವಾಸನೆಯ ಈ ಪರಾಕಾಷ್ಠ ಸ್ಥಿತಿಯನ್ನು ತಲುಪಲು ಇಬ್ಬರ ಉಸಿರು ಮತ್ತು ದೇಹಗಳು ವ್ಯಾಕುಲಗೊಂಡಿರಬೇಕಲ್ಲ? ಈ ಒಂದು ಸ್ಥಿತಿಗೆ ಅವರಿಬ್ಬರೂ ಸಮಾನ ದೋಷಿಗಳು. ಅಂದಮೇಲೆ ತನುವಿಗೆ ಮಾತ್ರ ಏಕೆ ಶಿಕ್ಷೆಯಾಗಬೇಕು?

ನೇಹಾ, ತನು ನಿನ್ನ ತಂಗಿ. ನಿನ್ನ ವಿಚಾರದಲ್ಲಿ ಅವಳು ಇಷ್ಟೊಂದು ಎಚ್ಚರಗೇಡಿ ಹೇಗಾದಳು? ಅವಳು ನಿನಗೆ ನಂಬಿಕೆ ದ್ರೋಹ ಮಾಡಿದ್ದಾಳೆ. ಮೂಕ ಪ್ರೀತಿ, ಮೌನ ಸಮ್ಮತಿ, ಮೌನ ಒಪ್ಪಂದ ಇದೆಲ್ಲ ನನ್ನ ಮತ್ತು ಪರೇಶನ ನಡುವೆ ಇತ್ತು.......ದೃಢವಾದ ತೀರ್ಮಾನ ತೆಗೆದುಕೊಳ್ಳಲು ಕೆಲವು ಕ್ಷಣಗಳು ಕಾಯಬೇಕಿತ್ತು. ಹಾಗಿದ್ದ ಮೇಲೆ ಪರೇಶನು ನಂಬಿಕೆ ದ್ರೋಹ ಮಾಡಲಿಲ್ಲವೆ? ತನ್ನ ಅಂತರಾಳದಿಂದ ಒಮ್ಮೆಲೇ ಎದ್ದ ಹಲವು ದನಿಗಳು ತನ್ನನ್ನು ಹುಚ್ಚಳನ್ನಾಗಿಸುತ್ತಿವೆ ಎಂದು ನೇಹಾಳಿಗೆ ಅನ್ನಿಸಿತು. ನೇಹಾಳಿಗೆ ತಾನೀಗ ಏನು ಮಾಡಬೇಕೆಂದು, ಏನು ಹೇಳಬೇಕೆಂದು ನಿರ್ಣಯಿಸಲಾಗಲಿಲ್ಲ. ಅಲ್ಲಿಂದ ಹೊರಡಲೆಂದು ಇನ್ನೇನು ತಿರುಗುವವಳಿದ್ದಳು. ಅಷ್ಟರಲ್ಲಿ ತನು ದಡಬಡಿಸುತ್ತ ಎದ್ದು ಕುಳಿತಳು.

ಎದುರಿನಲ್ಲಿ ಅಕ್ಕನನ್ನು ನೋಡಿ ಭಯಭೀತ ಹರಿಣಿಯ ಹಾಗೆ ಅವಳು ಮತ್ತೊಮ್ಮೆ ಕಣ್ಣು ಮುಚ್ಚಿಕೊಳ್ಳಲು ಪ್ರಯತ್ನಿಸಿದಳು. ಆದರೆ ನಗ್ನ ಸತ್ಯದ ಆ ಒಂದು ಸ್ಥಿತಿಯನ್ನು ಹೇಗೆ ತಾನೆ ಅಲ್ಲಗಳೆದಾಳು? "ಅಕ್ಕ ಪ್ಲೀಸ್ ಕೇಳು....

ನೋಡು ಇದೆಲ್ಲ ಆಕಸ್ಮಿಕ.......ನಾನು ನಿನಗೆ ಎಲ್ಲ ಹೇಳ್ತೀನಿ.....ನಿಲ್ಲು....." ಶಬ್ದಗಳನ್ನು ಹೊಂದಿಸಿ ಹೇಳಬೇಕೆಂದರೂ ತನುವಿಗೆ ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ಪರೇಶನಿಗೂ ಎಚ್ಚರವಾಯಿತು. ಪರೇಶನ ಕಣ್ಣುಗಳಲ್ಲಿ ಅಪರಾಧಿ ಭಾವ ಇತ್ತೋ ಇಲ್ಲವೋ ಎಂಬುದನ್ನು ನೇಹಾಳಿಗೆ ನಿರ್ಣಯಿಸಲಾಗಲಿಲ್ಲ. ಅವನ ತುಟಿಗಳ ಕಂಪನದಿಂದ ಅವನು ಏನನ್ನೋ ಹೇಳಲು ಶಬ್ದಗಳಿಗಾಗಿ ತಡಕಡುತ್ತಿದ್ದಾನೆಂಬುದನ್ನಷ್ಟೇ ಅಂದಾಜಿಸಲು ಸಾಧ್ಯವಾಯಿತು ನೇಹಾಳಿಗೆ.

ಹೃದಯಲ್ಲೇಳುತ್ತಿದ್ದ ಬಿರುಗಾಳಿಯನ್ನು ಹತೋಟಿಗೆ ತಂದುಕೊಳ್ಳುತ್ತಾ ಅಸ್ಥಿರಳೆಂಬಂತೆ "ಬಟ್ಟೆಯನ್ನಾದರೂ ಹಾಕಿಕೋ ತನು" ಎಂದಷ್ಟೇ ಹೇಳಲು ಸಾಧ್ಯವಾಯಿತು ನೇಹಾಳಿಗೆ. ಹಾಗೆ ಹೇಳಿ ಕೊಠಡಿಯಿಂದ ಹೊರನಡೆದಳು.

ಇದನ್ನೆಲ್ಲಾ ಯಾಕೆ ಮಾಡಿದೆ ತನು? ಬಾಲ್ಯದಿಂದ ಇವತ್ತಿನವರೆಗೂ ನಾನು ನಿನ್ನ ಎಲ್ಲ ಇಚ್ಛೆಗಳನ್ನೂ ಈಡೇರಿಸಿದ್ದೆ. ಸಾಯಂಕಾಲದ ಹೊತ್ತು ಟ್ಯೂಷನ್ ಹೇಳಿ ನಿನ್ನ ಕಾಲೇಜಿನ ಫೀಸ್ ಕೊಟ್ಟಿದ್ದೆ. ಮಮ್ಮಿ ಪಾಪರಿಗೆ ಕೊಡಿಸಲು ಸಾಧ್ಯವಿಲ್ಲದೆ ಇರುವಂಥ

ಪ್ರತಿ ರಾತ್ರಿಯೂ ಅವಳ ನಿದ್ದೆ ಕಡಿಮೆಯಾಗುತ್ತಾ ಹೋಯಿತು. ಇಂದಿನ ನೀರವ ರಾತ್ರಿಯೂ ಇಂಥದೇ ಆಗಿತ್ತು. ಎಂದಿನಂತೆ ಅವಳು ಮಗ್ಗುಲು ಬದಲಾಯಿಸುತ್ತಿದ್ದಳು. ಕಣ್ಣುಗಳು ಆಯಾಸದಿಂದ ಭಾರವಾಗಿದ್ದವು ನಿದ್ರೆ ರೆಪ್ಪೆಗಳಲ್ಲಿ ಬಂದಿಯಾಗಲು

ನಿರಾಕರಿಸುತ್ತಿತ್ತು. ಹೃದಯ, ಮೆದುಳು ಮತ್ತು ದೇಹ ಎಲ್ಲವೂ ದಣಿದಿರುವಾಗ ನಿದ್ದೆ ತನಗೆ ತಾನೆ ಬರುತ್ತದೆ ಎಂದು ಕೇಳಿದ್ದಳು. ಆದರೆ ನೇಹಾಳ ವಿಷಯದಲ್ಲಿ ಹೀಗೆ ಯಾಕೆ ಆಗುತ್ತಿಲ್ಲ?

ಬಾಗಿಲ ಹೊರಗೆ ಕರೆಗಂಟೆಯ ಸದ್ದಾಗುತ್ತಿದೆ ಎಂದು ಅವಳಿಗೆ ಅನ್ನಿಸಿತು. ಇಲ್ಲ, ಇಂಥ ಅಪರಾತ್ರಿಯಲ್ಲಿ ಯಾರು ತಾನೆ ಬೆಲ್ ಮಾಡುತ್ತಾರೆ?... ನಿನ್ನದೇ ಮೆದುಳಿನ ಕರೆಂಟೆಗಳು ಸದ್ದುಮಾಡುತ್ತಿವೆ ನೇಹಾ. ನಿದ್ರಿಸುವ ಪ್ರಯತ್ನ ಮಾಡು. ವಿಧಿಯೊಂದಿಗೆ ಹೋರಾಡಿ ಯಾರಾದರೂ ಗೆಲುವು ಸಾಧಿಸಿದ್ದಾರೇನು? ಈಗ ಒಂದೇ ಸಮನೆ

ಗಂಟಯ ಶಬ್ದ ಕೇಳತೊಡಗಿತು. ಲೈಟ್ ಹಾಕಿ, ಸ್ಲಿಪ್ಪರ್ ಮತ್ತು ಗೌನ್ ಧರಿಸಿ ಬಾಗಿಲಿನ ಚೈನ್ ಹಾಕಿ ನೇಹಾ ಬಾಗಿಲು ತೆರೆದು ಕೇಳಿದಳು?–"ಯಾರು"

"ಅಕ್ಕಾ ನಾನು ತನು. ಪ್ಲೀಜ್, ಬಾಗಿಲು ತೆಗಿ. ನಮ್ಮ ಕಾರ್‌ಗೆ ಆಕ್ಸಿಡೆಂಟಾಗಿದೆ. ಕಾರು ಪೂರ್ತಿ ಕ್ರಾಶ್ ಆಗಿದೆ. ಆಸ್ಪತ್ರೆಗೆ ಹೋಗುವ ದಾರಿಯಲ್ಲಿ ಪರೇಶ್ ಕೊನೆಯುಸಿರೆಳೆದಿದ್ದಾನೆ. ಅಕ್ಕಾ ಪರೇಶ್ ಇನ್ನಿಲ್ಲ. ಬದುಕಿಲ್ಲ. ಅಕ್ಕಾ ನಾನೊಬ್ಬಳೇ. ನಿನ್ನ ಬಿಟ್ಟರೆ ನನಗಿನ್ಯಾರೂ ಇಲ್ಲ......." ಅಳುತ್ತಳುತ್ತಾ ತನು ನಿಸ್ತೇಜಳಾದಳು.

"ತನು ನಿನ್ನವಳಾಗಿ ನಾನಿದ್ದೆನಲ್ಲವೆ? ಆದರೆ ನಾನು ಜೀವಂತವಾಗಿದ್ದಾಗಲೇ ನನ್ನ ಅಸ್ತಿತ್ವವನ್ನು ಅಲ್ಲಗಳೆದು ನೀನು ನಿನ್ನ ಪ್ರತ್ಯೇಕ ಅಸ್ಮಿತೆಯನ್ನು ಮಾಡಿಕೊಂಡೆ. ಬೇರೊಂದು ದಿಕ್ಕನ್ನು ಆರಿಸಿಕೊಂಡೆ. ನನ್ನನ್ನು ಪರಕೀಯಳನ್ನಾಗಿ ಮಾಡಿದೆ. ನನ್ನ ಮುಗುಳ್ನಗುತ್ತಿರುವ ಜೀವನದ ಸುಖವನ್ನು ನೀನು ಸಹಿಸದಾದೆ. ಜೀವಂತವಾಗಿ ಉಸಿರಾಡುತ್ತಿದ್ದ ನನ್ನ ಕುತ್ತಿಗೆ ಹಿಸುಕಿ ನನ್ನನ್ನು ಜೀವಚ್ಛವವಾಗಿ ಮಾಡಿಬಿಟ್ಟೆ. ಈಗ ನನ್ನ ಜೀವನ ಯಾವ ರೀತಿ ಇದೆ ಎಂದರೆ ಉಸಿರಂತೂ ಆಡುತ್ತಾ ಇದೆ, ಆದರೆ ಜೀವವಿಲ್ಲ. ಇನ್ನು ಪರೇಶನ ವಿಚಾರ. ಯಾವತ್ತು ನನ್ನ ಯೌವನದ ಭಾವನೆಗಳನ್ನು ತುಳಿದುಹಾಕಿ ನಿನ್ನ ತೋಳುಗಳಲ್ಲಿ ತೃಪ್ತಿಯನ್ನು ಹುಡುಕತೊಡಗಿದನೋ ಅಂದಿನಿಂದಲೇ ಅವನು ನನ್ನ ಪಾಲಿಗೆ ಇರಲಿಲ್ಲ......" ಎಂದು ನೇಹಾ ಬಾಗಿಲು ಹಾಕಿಬಿಟ್ಟಳು ತನ್ನ ತಣ್ಣನೆಯ ದನಿಗೆ ಸ್ವಯಂ ನೇಹಾಳೇ ಬೆಚ್ಚಿಬಿದ್ದಳು. ಯಾವ ದೇಶದ ಮಣ್ಣಿನ ಸುವಾಸನೆ, ಪ್ರೀತಿ ಮತ್ತು ಪ್ರೇಮದ ಸಂದೇಶವನ್ನು ನೀಡುತ್ತದೋ ಆ ಮಹಾನ್ ದೇಶಕ್ಕೆ ಸೇರಿದವಳು ತಾನು ಎಂಬುದನ್ನು ಮರೆತುಬಿಟ್ಟಳು.ಅಲ್ಲಿ ಇಷ್ಟ ಪಡುವುದೆಂದರೆ ಅದರ ಅರ್ಥ ಯಾವುದೇ ಶರತ್ತಿಲ್ಲದೆ, ಯಾವುದೇ ಸ್ವಾರ್ಥವಿಲ್ಲದೆ ಬಯಸುವುದು ಮತ್ತು ಬಯಸುತ್ತಿರುವುದು. ಅವಳ ಕ್ಷಮಾಶೀಲತೆ ಮತ್ತು ಸಹಿಷ್ಣುತೆಯ ಆ ಸಂಸ್ಕಾರ ಎಲ್ಲಿ ಮಾಯವಾದುವು? ವಿಚಾರಗಳ ಬಿರುಗಾಳಿಗೆ ಸಿಲುಕಿದ್ದ ನೇಹಾ ಯೋಚಿಸತೊಡಗಿದಳು. ..... ಅವಳೂ ಇಲ್ಲಿಗೆ ಬಂದು

ಇಲ್ಲಿಯ ಜನಗಳ ಹಾಗೆಯೇ ತಣ್ಣಗಾಗಿಬಿಟ್ಟಿದ್ದಾಳೆಯೆ? ಈ ಹಿಮದ ನಾಡಿನ ಹಿಮಾಚ್ಛಾದಿತ ಪರ್ವತಶಿಖರದ ಒಂದು ಅಂಗವಾಗಿಬಿಟ್ಟಿದ್ದಾಳೇನು? ಅಸಾಮಾನ್ಯಳಾಗಿದ್ದೂ ತನ್ನ ಅಸ್ಮಿತೆಗಳನ್ನವಳು ಮರೆಯುತ್ತಿದ್ದಾಳೇನು? ಹೊರಗೆ ಬೀಳುತ್ತಿರುವ ಮಂಜು ಹೊರಗೆ ಮಾತ್ರವಲ್ಲ, ಅವಳ ಒಳಗಡೆಯೂ ಪದರ ಪದರಗಳ ರೂಪದಲ್ಲಿ ಹೆಪ್ಪುಗಟ್ಟುತ್ತಿದೆಯೇನು?

❖

ಇನ್ನು ಮುಂದಿನ ಕಥೆ...

ಹಿಂದಿ ಮೂಲ : ಉಷಾ ವರ್ಮ

ಆ ದಿನ ಮನೆಯಲ್ಲಿ ಮಹಾಭಾರತವೇ ನಡೆದು ಹೋಯಿತು. “ಮಗು, ನನ್ನ ತಲೆ ಸ್ವಲ್ಪ ಬಾಚಿಬಿಡು. ನನ್ನ ಕೈಗಳಂತೂ ಮೇಲೆ ಏಳ್ತಾನೇ ಇಲ್ಲ”ಎಂದು ಅಜ್ಜಿ(=ತಂದೆಯ ತಾಯಿ) ನನ್ನ ಹತ್ತಿರ ಹೇಳಿದರು. ಇಷ್ಟೇ ವಿಷಯ. ಆದರೆ ಮಮ್ಮಿಗೆ ಏನಾದರೂ ಒಂದು ನೆಪ ಬೇಕು. ಹಾಗಲ್ಲದೆ ಇದ್ದರೆ ಅದು ಅಂಥ ದೊಡ್ಡ ವಿಷಯವೇನೂ ಅಲ್ಲ. ಇಷ್ಟು ಕೆಲಸ ಮಾಡಲು ಹತ್ತು ನಿಮಿಷ ಕೂಡ ಬೇಕಿರರಲಿಲ್ಲ. ಆದರೆ ಮಮ್ಮಿಯನ್ನು ಯಾರೂ ಒಪ್ಪಿಸೋದಕ್ಕೆ ಆಗಲ್ಲ. ಮನಸೋಇಚ್ಛೆ ಮಾಡುವ ಅಭ್ಯಾಸ ಯಾರಿಗೆ ಇರುತ್ತೆ, ಅವರು ಅದೇ ರೀತಿ ಮಾಡಿ ತಮ್ಮನ್ನು ತಾವು ದೊಡ್ಡವರು ಅಂತ ತಿಳಿದುಕೊಳ್ಳುತ್ತಾರೆ. ನಾನು ಬಾಚಣಿಗೆ ತಂದು ಅಜ್ಜಿಯ ಕೂದಲುಗಳನ್ನು ಸ್ವಲ್ಪ ಕಟ್ಟಿ ಅವರ ಮುಖ ತೊಳೆಸಿ ಅವರ ಹಾಸಿಗೆಯ ಮೇಲುಹೊದಿಕೆಯನ್ನು ತೆಗೀತಾ ಇದ್ದೆ ಅಷ್ಟೆ. ಮಮ್ಮಿ ನನ್ನನ್ನು ಕೂದಲು ಹಿಡಿದು ದರದರ ಎಳೆದರು. “ಇದನ್ನೇ ಮಾಡಬೇಕೇನು? ಓದು–ಬರಹದ ಕಡೆ ಲಕ್ಷ್ಯ ಇಲ್ಲ; ಮೋರೆ ಮುಸುಡಿ ಅಂತೂ ದೇವರು ಕೊಟ್ಟಿರುವ ಹಾಗೆ. ಏನು

ಮಾಡಿಯಾಳು ಈ ಹುಡುಗಿ. ಇವಳ ಕುತ್ತಿಗೆ ಹಿಸುಕಿಬಿಡಲೆ ಅನ್ನಿಸುತ್ತೆ ನನಗೆ". ಪಾಪ ಬಡಪಾಯಿ ಅಜ್ಜಿ ಅಳತೊಡಗಿದರು.

ನಾನು ಒಂದು ವೇಳೆ ಹೇಳದೆ ಹೋಗಿದ್ದರೆ , ಈ ಹುಡುಗಿಗೆ ಇದನ್ನೆಲ್ಲ ಅನುಭವಿಸಬೇಕಾಗಿ ಬರುತ್ತಿರಲಿಲ್ಲ ಎಂಬ ಅಪರಾಧಿ ಭಾವ ಅವರನ್ನು ಕಾಡುತ್ತಿತ್ತು. ನನ್ನ ಮುಖ ನೋಡಲು ಚೆನ್ನಾಗಿಲ್ಲ. ಆದ್ದರಿಂದ ಅದರ ಕೊರತೆಯನ್ನು ಓದಿ ತುಂಬಿಸಬೇಕು ಎನ್ನುವುದು ಅಮ್ಮನ ಕೊನೆಯ ಅಸ್ತ್ರ. ನಾನ್ಯಾಕೆ ಮಾಡಲಿ? ತಾನು ಮಾತ್ರ ತಿರುಗುತ್ತಾ ಇರುತ್ತಾರೆ. ನನಗೇನು ಅರ್ಥವಾಗುವುದಿಲ್ಲವೇನು? ಅಜ್ಜಿ ಅಳುತ್ತಾ ಇರುವುದನ್ನು ನೋಡಿ ಅವರ ಕೋಪ ಕೆರಳಿತು. ಜೋರಾಗಿ ಚೀರಿ ಹೇಳಿದರು.–"ಈ ನಾಟಕ ನಿಲ್ಲಿಸಿ. ಅವಳನ್ನು ಕರೀಬೇಡಿ ಅಂತ ಅದೆಷ್ಟು ಸಲ ಹೇಳಿದ್ದೀನಿ. ಆದರೆ ನಮ್ಮದೆಲ್ಲ ಪೂರ್ತಿ ಹಾಳಾಗಬೇಕು ಅನ್ನುವುದೇ ನಿಮ್ಮ ಇಷ್ಟ."

ಅಜ್ಜಿ ಕಣ್ಣೀರು ಒರೆಸಿಕೊಂಡರು. ಆದರೆ ಅವರ ಹೃದಯ ಅಳುತ್ತಾ ಇತ್ತು. ಅಪ್ಪ ಇನ್ನೊಂದು ರೂಮಿನಲ್ಲಿ ಕುಳಿತಿದ್ದರು. ಅವರು ಹೆಚ್ಚು ಮಾತಾಡಲ್ಲ. ಅವರಿಗೆ ಬಿ, ಪಿ. ಇದೆ. ಯಾವಾಗಲೂ ಅದು ಹೈ ಬಿ. ಪಿ.ನೇ. ಅಪ್ಪ ಸುಮ್ಮನೇನೇ ಇರುತ್ತಾರೆ. ಅಕಸ್ಮಾತ್ ಮರೆತು ಏನಾದರೂ ಹೇಳಿದರು ಅಂದರೆ ಸರಿ ಇನ್ನೇನು ಐದು ದಿನದ ರಜೆ ಆಗಿಹೋಯಿತು ಅಂತಲೇ. ಎಲ್ಲರ ಉಸಿರು ನಿಂತುಹೋಗುತ್ತೆ. ಎಲ್ಲರೂ ಹೆದರಿಕೊಂಡೇ ಇದ್ದುಬಿಡುತ್ತಾರೆ. ಅಮ್ಮ ಮೂರು ನಾಲ್ಕು ಬಾರಿ ಅಮ್ಮಮ್ಮನ (=ತಾಯಿಯ ತಾಯಿ) ಕಡೆ ಹೋಗಿ ಇದ್ದು ಬಂದರು ಅಂದರೆ ಅವರ ಬುದ್ದಿ ಇನ್ನಷ್ಟು ಕೆಟ್ಟುಹೋಗುತ್ತೆ. "ನಿಮ್ಮ ಅತ್ತೆಯನ್ನು ಇಲ್ಲಿಂದ ತೊಲಗಿಸು. ಮನೆಯಲ್ಲಿ ದುರದೃಷ್ಟ ಕವಿದುಕೊಂಡಿರುತ್ತೆ"– ಅಂತ ಅಮ್ಮಮ್ಮ ಹೇಳುತ್ತಾರೆ. "ಕಾಯಿಲೆ ಮನುಷ್ಯರ ಸೇವೆ ಮಾಡೋಕೆ ನೀನು ಮಾತ್ರ ಇದ್ದೀಯೇನು? ನಿನ್ನ ಬಗ್ಗೇನೂ ನೀನು ಯೋಚನೆ ಮಾಡಬೇಕು".– ಮಮ್ಮಿ ಯೋಚನೆ ಮಾಡೋದೇ ತನಗಾಗಿ. ಮೊನ್ನೆ ಮಮ್ಮಿ ಅಮ್ಮಮ್ಮನ ಹತ್ತಿರ ಹೋಗಿ ಅಲ್ಲಿಂದ ವಾಪಸ್ ಬಂದ ಮೇಲೆ– "ಈಗ ನಿಮ್ಮ ಅಮ್ಮ ಬಂದು ಬಹಳ ದಿನ ಆಯಿತು. ಈಗ ನೀವು ನಿಮ್ಮ ತಾಯಿಯನ್ನು ಇಲ್ಲಿಂದ ಹೊರಡಿಸಿ"– ಎಂದು ಅಪ್ಪನ ಹತ್ತಿರ ಹೇಳಿದರು. ಅಪ್ಪ ಅದನ್ನು ತಳ್ಳಿಹಾಕಲು ಯತ್ನಿಸಿದರು. ಆದರೆ ಅಮ್ಮ ಒಂದೇ ಸಮ ಹಟ ಹಿಡಿದುಬಿಟ್ಟರು. ಅಜ್ಜಿ ಒಮ್ಮೆಗೇ ಸ್ತಬ್ಧರಾದರು. ಮುಖದ ಮೇಲೆ ಎಂಥ ಅಸಹಾಯಕ ಹಾಗೂ ದಿಕ್ಕುತೋಚದ ಭಾವ ಕವಿದುಕೊಂಡಿತೆಂದರೆ ಅವರ ಮುಖ ನೋಡಲಾಗಲಿಲ್ಲ. "ನಿಮ್ಮ ಮನಸ್ಸಿಗೆ ಇಲ್ಲಿ ಹಿಡಿಸಲ್ಲ. ಇಲ್ಲಿ ನಿಮಗೆ ಕಷ್ಟವಾಗುತ್ತೆ"

ಎಂದೆಲ್ಲ ಅಮ್ಮ ಅಜ್ಜಿಗೆ ಹೇಳುತ್ತಲೇ ಇದ್ದರೂ "ನಿಮ್ಮ ಮನಸ್ಸೆಲ್ಲ ಚಿಕ್ಕಮಗನ ಹತ್ತಿರ ಇರುತ್ತೆ. ಇಲ್ಲಿ ಆಗದೆ ಇದ್ದರೆ ಅಲ್ಲೇ ಇರಲು ಹೋಗಿಬಿಡಿ" ಎಂದು ಅಮ್ಮಮ್ಮ ಕೂಡ ಹೇಳಿದರು.

ಅಜ್ಜಿಗೆ ಎಲ್ಲ ಅರ್ಥವಾಗುತ್ತೆ. ಆದರೆ ಈ ಸಲ ಇದ್ದಕ್ಕಿದ್ದ ಹಾಗೆ ಮೌನ ತಾಳಿಬಿಟ್ಟಿದ್ದಾರೆ. ಮಮ್ಮಿ ಕೆಲವು ಸಲ ಹೇಗೆ ಮಾತು ಆಡುತ್ತಾರೆ ಅಂದರೆ ಅಜ್ಜಿ ಅದಕ್ಕೆ ಮನಸ್ಸು ಕೆಡಿಸಿಕೊಳ್ಳುವುದು, ಮತ್ತು ಅದಕ್ಕೆ "ನನಗೆ ಚಿಕ್ಕ ಮಗನನ್ನು ನೋಡಬೇಕು ಅಂತ ಅನ್ನಿಸುತ್ತಿದೆ ಮಗು. ನನ್ನನ್ನು ಅಲ್ಲಿಗೆ ಕರೆದುಕೊಂಡುಹೋಗಿಬಿಡಪ್ಪ" ಎಂದು ಅಪ್ಪನ ಹತ್ತಿರ ಹೇಳುವುದು ಇದೆಲ್ಲ ಬಹಳ ಸಲ ಆಗುತ್ತಾ ಇದೆ. ಸರಿ ಆಮೇಲೆ ಮೂರು–ನಾಲ್ಕು ದಿನ, ಬೇಡ, ಹೋಗುವುದು ಬೇಡ ಅಂತೆಲ್ಲ ಹೇಳಿದ ಮೇಲೆ ಅಪ್ಪ ಅಜ್ಜಿಯನ್ನು ಅಲ್ಲಿಗೇ ಕರೆದುಕೊಂಡುಹೋಗಿ ಬಿಡುತ್ತಾರೆ. ಪ್ರತಿ ಸಲವೂ ಅಮ್ಮ ಮನೆಗೆ ಬಂದವರ ಹತ್ತಿರವೆಲ್ಲ "ಅಯ್ಯೋ! ನಮಗೇನೋ ಅವರು ಇಲ್ಲೇ ಇರಲಿ ಅಂತ ಇಷ್ಟ. ಆದರೆ ಅವರ ಮನಸ್ಸು ಇಲ್ಲಿ ಇರುತ್ತಿರಲಿಲ್ಲ. ಪ್ರತಿಸಲವೂ ಅವರಿಗೆ ಅಲ್ಲಿಯದೇ ಚಿಂತೆ ಇರುತ್ತಿತ್ತು. ಹೇಗೆ ಅಂದರೆ ನಮ್ಮ ಮಕ್ಕಳದು ಏನೂ ಲೆಕ್ಕವೇ ಇಲ್ಲವೇನೋ ಎನ್ನುವ ಹಾಗೆ." ಎಂದೇ ಹೇಳುತ್ತಿದ್ದರು. ನಾನು ಕೇಳಿಸಿಕೊಳ್ಳುತ್ತಿದ್ದೆ ಮತ್ತು "ಮಮ್ಮಿ, ಇದೆಲ್ಲಾ ಪೂರ್ತಿ ಸುಳ್ಳು ! ನೀವೇ ಚಾಲಾಕುತನದಿಂದ ಅಜ್ಜಿಯನ್ನು ಓಡಿಸಿದ್ದೀರಿ. ಅಷ್ಟೇ ಅಲ್ಲ, ಈ ಅಪಮಾನದ ಬಾಸಿಂಗವನ್ನು ಅವರ ತಲೆಗೆ ಕಟ್ಟಿದ್ದೀರಿ. ನಿಮಗೆ ಸ್ವಲ್ಪಾನೂ ಕೆಟ್ ಅಂತ ಅನ್ನಿಸುವುದಿಲ್ಲವೆ?" ಎಂದು ಜೋರಾಗಿ ಹೇಳಬೇಕು ಅಂತ ಮನಸ್ಸಿಗೆ ಅನ್ನಿಸುತ್ತೆ. ಆದರೆ ನಾನು ಏನೂ ಹೇಳುವುದಿಲ್ಲ. ಅಜ್ಜಿ ತಮ್ಮ ಸೋತ ಕೈಯನ್ನು ನನ್ನ ತಲೆ ಮೇಲೆ ಇಟ್ಟುಬಿಟ್ಟುಹೇಳುತ್ತಾರೆ–" ಮಗೂ ನೀನು ಬೇಜಾರು ಮಾಡಿಕೊಳ್ಳಬೇಡ. ನನಗೆಲ್ಲಾ ಅರ್ಥವಾಗುತ್ತೆ".

ಮಮ್ಮಿ ಅಮ್ಮಮ್ಮನ ಹತ್ತಿರ ಹೋಗಿದ್ದಾಗ ನಾನು ಅಜ್ಜಿ ಹತ್ತಿರ ಸ್ವಲ್ಪಹೊತ್ತು ಕುಳಿತುಕೊಳ್ಳುತ್ತೇನೆ. ನನ್ನ ಮನಸ್ಸಿಗೆ ಪೂರ್ತಿಯಾಗಿ ಒಂದು ವಿಚಿತ್ರ ಸಮಾಧಾನ ಸಿಗುತ್ತೆ. ಅಜ್ಜಿ ಅಂತೂ ನಾನು ಹೇಗಿದ್ದೀನೋ ಹಾಗೇ ನನ್ನನ್ನು ಒಪ್ಪಿಕೊಂಡು ಪ್ರೀತಿಸುತ್ತಾರೆ. ಯಾರ ಜೊತೆಯಲ್ಲೂ ಹೋಲಿಸುವುದೂ ಇಲ್ಲ ಅಥವಾ ನಿಷ್ಪ್ರಯೋಜಕಿ ಅಂತ ಹೇಳುವುದೂ ಇಲ್ಲ. "ಅಜ್ಜೀ ನೀವು ನನಗೋಸ್ಕರ ಇನ್ನೂ ತುಂಬಾ ತುಂಬಾ ದಿನ ಇರಬೇಕು. ನಾನು ಏನಾದರೂ ಒಂದು ಹಂತಕ್ಕೆ ಬಂದರೆ ನಿಮ್ಮನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತೇನೆ. ಅಜ್ಜಿ ಅಲ್ಲಿಯವರೆಗೆ ಇರ್ತೀರಿ ಅಲ್ಲವಾ" ಅಂತ ನನಗೆ ನಾನೇ

ಕೇಳಿಕೊಳ್ಳುತ್ತೀನಿ. ಯಾರಿಗೆ ಗೊತ್ತು, ಈ ಮರುಭೂಮಿಯ ಬೇಗೆಯಲ್ಲಿ ಒಬ್ಬಳೇ ನಡೆಯಬೇಕಾಗುತ್ತೋ ಏನೋ!

ಅಪಮಾನ ಅಂದರೆ ಏನು ಅಂತ ಅವರಿಗೂ ಗೊತ್ತಾಗುವ ಹಾಗೆ ನಾನೂ ಏನಾದರೂ ಒಂದು ಮಾಡಿಬಿಡಲೆ ಎಂದು ಒಂದೊಂದು ಸಲ ಮನಸ್ಸಿಗೆ ಅನ್ನಿಸುತ್ತೆ. ಈ ಸಲ ಅಜ್ಜಿ ಇಲ್ಲಿಂದ ಹೊರಟುಹೋಗುವುದರ ಬಗ್ಗೆ ಮಮ್ಮಿ ಚರ್ಚೆ ಶುರು ಮಾಡಿದಾಗ ಅಜ್ಜಿ ಏನೂ ಹೇಳಲಿಲ್ಲ. ಅವರ ಮುಖದ ಮೇಲಿನ ದೃಢತೆ ಹೇಗಿತ್ತು ಅಂದರೆ ನನಗೆ ಸ್ವಲ್ಪ ಹೆದರಿಕೆ ಆಯಿತು. ಎಂಥಾ ಒಂದು ಭಯಂಕರ ವಿಷಾದವೆಂದರೆ, ಈಗ ಇದೆಲ್ಲ ಬಹಳ ಜಾಸ್ತಿ ಆಯಿತು, ಈಗ ಬಹುಶಃ ನನಗೆ ಯಾರೂ ಏನೂ ಮಾಡಕ್ಕಾಗಲ್ಲ ಎಂದು ಹೇಳುತ್ತಿದ್ದಾರೇನೋ ಎನ್ನುವ ಹಾಗೆ ಇತ್ತು. ಈ ಸಲ ನನಗೆ ಚಿಕ್ಕವನನ್ನು ನೋಡಬೇಕು ಅಂತ ಅನ್ನಿಸ್ತಾ ಇದೆ ಎಂದು ಇನ್ನೆಂದಿಗೂ ಹೇಳುವುದಿಲ್ಲ ಎಂದು ಮನಸ್ಸಿನಲ್ಲೇ ತೀರ್ಮಾನ ಮಾಡಿಬಿಟ್ಟಿದ್ದರು. ಸರಿಯಾಗೇ ಇದೆ. ಈ ಸಲ ಮಮ್ಮಿ ಮನೆಯಿಂದ ಹೊರಕ್ಕೆ ಕಳಿಸಿದರೆ ಕನಿಷ್ಠ ಪಕ್ಷ ಇಲ್ಲಿಂದ ಹೋಗುವ ಜವಾಬ್ದಾರಿ ಅಜ್ಜಿಯದಾಗಿರುವುದಿಲ್ಲ. ಅಪಮಾನ ಮತ್ತು ಸಿಟ್ಟಿನಿಂದ ಮಗ್ಗುಲು ಬದಲಾಯಿಸುತ್ತ ಇದ್ದರು. ಅವರು ಊಟ ಮಾಡಲಿಲ್ಲ. ಪ್ರೀತಿಯಿಂದ ಊಟ ಮಾಡಿಸುವವರು ತಾನೆ ಯಾರು?

ಬೆಳಿಗ್ಗೆ ನಾನು ಚಹಾ ಮಾಡಿದಾಗ ಅಜ್ಜಿಗೂ ಒಂದು ಕಪ್ಪು ಹಿಡಿದುಕೊಂಡು ಬಂದೆ. ಅಜ್ಜಿಯ ಕಣ್ಣಿನಿಂದ ನೀರು ಸುರಿಯುತ್ತಿತ್ತು. ಒಂದೊಂದೇ ಗುಟುಕು ಚಹಾ ಕುಡಿಯತೊಡಗಿದರು.

ದುರ್ಬಲರಾದವರು ಏನಾಗಿರುತ್ತಾರೆ ! ನಾನು ದುರ್ಬಲಳು, ಅಜ್ಜಿ ದುರ್ಬಲರು. ಪ್ರತಿಯೊಬ್ಬ ದುರ್ಬಲ ಮನುಷ್ಯನೂ ಅಸಹಾಯಕನಾಗಿರುತ್ತಾನೆ. ನನ್ನ ಅಸಹಾಯಕತೆ ಏನು? ನಾನು ಎಲ್ಲಿಗೆ ಬೇಕಾದರೂ ಹೋಗಬಲ್ಲೆ. ಆದರೆ ಎಲ್ಲಿಗೆ? ಒಂದು ಮುಖ ನನ್ನ ಕಣ್ಣುಗಳ ಮುಂದೆ ಸುಳಿಯುತ್ತದೆ. ಆದರೆ ಅದು ಯಾಕೋ ಏನೋ ಅದನ್ನು ನೋಡುತ್ತಲೇ ಅಜ್ಜಿ ಸುಮ್ಮನಾಗಿಬಿಡುತ್ತಾರೆ. ಅದರ ಜೊತೆ ಮಾತನಾಡಬೇಕು ಅಂತ ಮನಸ್ಸಾಗುತ್ತೆ. ದಿನವೂ ಅದಕ್ಕೆ ಬರಲಿಕ್ಕೆ ಹೇಳಬೇಕು ಅಂತ ಅನ್ನಿಸುತ್ತೆ. ಆದರೆ ಅದರ ಕಣ್ಣುಗಳಲ್ಲಿ ಒಂದು ವಿಚಿತ್ರ ರೀತಿಯ ದುರಾಸೆ ಕಾಣಿಸುತ್ತೆ. ಆದರೆ ಅದು ನಾನು ದೂರದೂರದವರೆಗೆ ಹಾರಬಹುದಾದ ತೆರೆದ ಆಗಸ. ಒಂದೊಂದು ಸಲ ಬೆಂಕಿ ಬಿದ್ದಿದೆಯೇನೋ ಅನ್ನುವ ಹಾಗೂ ಅನ್ನಿಸುತ್ತೆ. ನನ್ನೆಲ್ಲಾ ರೆಕ್ಕೆಗಳು ಸುಟ್ಟುಹೋಗಿವೆ

ಮತ್ತು ನಾನು ಕೆಳ ಕೆಳಗೆ ಬೀಳುತ್ತಾ ಇದ್ದೀನಿ. ಇಲ್ಲ, ನನಗೂ ಎಲ್ಲೂ ಹೋಗಬೇಕಾದ್ದಿಲ್ಲ ಅನ್ನಿಸುತ್ತದೆ.

ಇದ್ದಕ್ಕಿದ್ದಂತೆ ಅಮ್ಮಮ್ಮ ಎಲ್ಲರ ಜೊತೆಯಲ್ಲೂ ಸುತ್ತಾಡಿಕೊಂಡು ಬರುವಂಥ ಒಂದು ಪ್ರೋಗ್ರಾಂ ಹಾಕಿದರು. ನನಗೆ ಓದಿಕೊಳ್ಳುವುದಿದೆ ಅಂತ ನಾನು ಮೊದಲೇ ಹೇಳಿಬಿಟ್ಟೆ. ಇನ್ನೇನು ಎಲ್ಲರೂ ಹೊರಡುವುದಕ್ಕೆ ಸಿದ್ಧವಾದರು. ಅಪ್ಪ ಯಾಕೆ ಸಿದ್ಧವಾದರು ಅಂತ ನನಗೆ ಅನ್ನಿಸುವುದಕ್ಕೆ ಶುರುವಾಗಿ ನನಗೆ ಅಪ್ಪನ ಮೇಲೆ ಬಹಳ ಕೋಪ ಬರುತ್ತೆ. ಅಮ್ಮಮ್ಮ ಬಂದರು ಅಂದರೆ ಅಪ್ಪ ಇನ್ನೂ ಮೌನವಾಗಿಬಿಡುತ್ತಾರೆ. "ಹಾಗಾದರೆ ಅಮ್ಮ?" "ಇದರಲ್ಲಿ ಹಾಗಾದರೆ ಏನು ಬಂತು" ಅಂತ ಹೇಳುತ್ತಾ ಇದ್ದಾರೇನೋ ಎನ್ನುವ ಹಾಗೆ ಮಮ್ಮಿ ಉರಿಯುವ ಕಣ್ಣುಗಳಿಂದ ಅಪ್ಪನ ಕಡೆ ನೋಡಿದರು. ಬಹುಶಃ ಅಜ್ಜಿ –ನನ್ನನ್ನು ಅಲ್ಲಿಗೆ ತಲುಪಿಸಿಬಿಡು" ಎಂದು ಹೇಳುವರೆಂದು ಅಪ್ಪ ಯೋಚಿಸುತ್ತಿದ್ದರು. ಮಮ್ಮಿ ಪಪ್ಪ ಇಬ್ಬರೂ ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುತ್ತಿದ್ದರು. ಆದರೆ ಅಪ್ಪನಿಗೆ ಅಜ್ಜಿಯ ಹತ್ತಿರ ಏನೂ ಹೇಳಲಾಗುತ್ತಿರಲಿಲ್ಲ. ಯಾವಾಗ ಈ ಸಲ ಮಾತು ಸಾಧ್ಯವಾಗ್ತಾ ಇಲ್ಲ ಅಂತ ಕಂಡುಕೊಂಡರೋ ಆಗ ಅಪ್ಪ ಅಜ್ಜಿಯನ್ನು–"ಅಮ್ಮಾ ನಾವುಗಳು ಹೊರಗಡೆ ಹೋಗ್ತಾ ಇದ್ದೀವಿ. ನಿನಗೇನು ಏರ್ಪಾಟು ಮಾಡೋಣ?"–ಎಂದು ಕೇಳಿದರು. "ಮಕ್ಕಳನ್ನು ನೋಡಬೇಕು ಅಂತ ಮನಸ್ಸಿಗೆ ಅನ್ನಿಸಿದೆ. ನನ್ನನ್ನು ಅಲ್ಲಿಗೆ ತಲುಪಿಸಿಬಿಡು"– ಅಂತ ಅಜ್ಜಿ ಹೇಳ್ತಾರೆ ಅಂತ ಅಪ್ಪನಿಗೆ ಪೂರ್ತಿ ಭರವಸೆ ಇತ್ತು. ಆದರೆ ಅಜ್ಜಿ ಅತ್ಯಂತ ಕ್ಷೀಣ ದನಿಯಲ್ಲಿ–"ನಿನಗೆ ತಿಳಿದಹಾಗೆ ಮಾಡು"–ಎಂದರು.

ಅಜ್ಜಿಗೆ ಮನಸ್ಸು ಎನ್ನುವುದು ಎಲ್ಲಿತ್ತು ಈಗ? ಮುಖದ ಮೇಲೆ ಶ್ಮಶಾನಶಾಂತಿ. ಈಗ ಲಗಾಮನ್ನು ಮಮ್ಮಿ ತಮ್ಮ ಕೈಗಳಿಗೆ ತೆಗೆದುಕೊಂಡರು. ಅಪ್ಪನಿಗೆ ಹೇಳಿದರು– "ನಿಮ್ಮಿಂದ ಏನೂ ಆಗಲ್ಲ. ನೇರವಾಗಿ ಏನನ್ನೂ ಹೇಳುವ ಧೈರ್ಯ ಇಲ್ಲ." ಮತ್ತೆ ಉದ್ವೇಗದಿಂದ ಅಲ್ಲಿಂದ ಎದ್ದು ಹೊರಟುಹೋದರು. ಅಲ್ಲಿಂದ ಹೋಗಿ ಕೋಪದಿಂದ ಚಿಕ್ಕಪ್ಪನಿಗೆ ಫೋನು ಮಾಡಿದರು–"ನಾವೆಲ್ಲರೂ ಸುತ್ತಾಡಿಕೊಂಡು ಬರುವುದಕ್ಕೆ ಹೊರಟಿದ್ದೀವಿ. ನೀವು ಬಂದು ತಾಯಿಯವರನ್ನು ಕರೆದುಕೊಂಡುಹೋಗಿ." ಆ ಕಡೆಯಿಂದ ಕೋಪದ ಮಾತುಗಳು ಕೇಳಿಬಂದವು–"ನಿಮ್ಮ ಹತ್ತಿರ ವೆಹಿಕಲ್ ಇದೆ. ಇಲ್ಲಿಗೆ ಕಳಿಸಿಬಿಡಿ". ಕಾಲಿನಿಂದ ನೆಲವನ್ನು ಝಾಡಿಸುತ್ತ ಅಮ್ಮ ಅಪ್ಪನಿಗೆ ಹೇಳಿದರು– "ವೆಹಿಕಲ್ ತರಿಸಿ ಅಲ್ಲಿಗೆ ಕಳಿಸಿಕೊಡಿ".

ಈ ಸಲ ಅಜ್ಜಿ ಅಲ್ಲಿಗೇ ಹೋಗಿಬಿಟ್ಟರು. ಹೇಗೇ ಆದರೂ ಸರಿ ಅಲ್ಲೇ ಅವರು

ಖುಶಿಯಾಗಿರುವುದು ಅಂತ ಅಪ್ಪ ಯೋಚಿಸಿರಬೇಕು. ಮಮ್ಮಿಯ ಹೊಸ ಅಸ್ತ್ರ ಕೆಲಸ ಮಾಡಿಬಿಟ್ಟಿತು. ನನಗೂ ತುಂಬ ದುಃಖವಾಯಿತು. ನಾನೂ ಅಮ್ಮನ ಜೊತೆ ತಿರುಗಾಡಬೇಕು, ಫೇಲಾಗಬೇಕು ಅಂದುಕೊಂಡೆ. ಎಲ್ಲರಿಗೂ ಪೆಟ್ಟುತಾಗಲಿ ಎಂದು ನನ್ನ ಆಸೆ. ನನ್ನದೂ ಒಂದು ಆಕಾಶವಿದೆ. ಅಲ್ಲಿ ಎಲ್ಲ ಪಕ್ಷಿಗಳೂ ಹಾರಾಡುತ್ತವೆ. ರೆಕ್ಕೆಯನ್ನು ಕೆದರುತ್ತ ಕೆಳಕ್ಕೆ ಬಿದ್ದುಬಿಡುತ್ತವೆ. ನನಗೆ ಉಸಿರುಗಟ್ಟುತ್ತಿದೆ. ನಾನು ಈ ನೀರವತೆಯನ್ನು ಮುರಿಯಲಿಚ್ಛಿಸುತ್ತೇನೆ. ಆದರೆ ನನ್ನ ಸ್ಥಿತಿ ಕಟ್ಟಿಹಾಕಿರುವ ಅಪ್ಪನ ನಾಯಿಯ ಹಾಗಿದೆ ಅಂತ ಅನ್ನಿಸುತ್ತಾ ಇದೆ. ಸುಮ್ಮನೆ ಬೊಗಳುತ್ತೆ, ಮತ್ತೆ ತಲೆಯನ್ನು ಕೆಳಕ್ಕೆ ಮಾಡಿಕೊಂಡುಬಿಡುತ್ತೆ.

ಮಮ್ಮಿಯ ತಯಾರಿ ನಡೆಯುತ್ತಾ ಇತ್ತು. ಆಮೇಲೆ ಇದ್ದಕ್ಕಿದ್ದಂತೆ ಮಮ್ಮಿಯ ಆರೋಗ್ಯ ಹಾಳಾಗಿಬಿಟ್ಟು ಪ್ರೋಗ್ರಾಮೆಲ್ಲ ಕ್ಯಾನ್ಸಲ್ಲಾಗಿಬಿಟ್ಟಿತು. "ನನ್ನ ಆರೋಗ್ಯವಂತೂ ಚೆನ್ನಾಗಿಲ್ಲ. ಈಗ ಎಲ್ಲಿಗೂ ಹೋಗಲ್ಲ....."– ಅಮ್ಮಮ್ಮ ಮಮ್ಮಿಯೊಂದಿಗೆ ಮಾತಾಡುತ್ತಿದ್ದರು– "ಈಗಬಿಡು. ಈಗಂತೂ ನಿನ್ನ ಅತ್ತೆ ಹೊರಟುಹೋದರು." ಮಮ್ಮಿಯ ಆರೋಗ್ಯ ಹಾಳಾಗಿದೆ ಎನ್ನುವುದನ್ನು ನೆಪಮಾಡಿಕೊಂಡು ಅಮ್ಮಮ್ಮ ಬಂದಿರತೊಡಗಿದರು. ಇದೆಲ್ಲವೂ ಅಜ್ಜಿಯನ್ನು ತೊಲಗಿಸುವ ನೆಪವಾಗಿತ್ತು. ಅಮ್ಮಮ್ಮ ಬಂದರೆಂದರೆ ಭಾರಿ ಭಾರಿ ಸಾಮಾನುಗಳನ್ನು ತರುತ್ತಾರೆ, ಹಣ ಖರ್ಚುಮಾಡುತ್ತಾರೆ. ಅಮ್ಮಮ್ಮ ಶ್ರೀಮಂತರ ಹಾಗೆ ಭಾರೀ ದರ್ಪ ತೋರಿಸುತ್ತಾರೆ. ಇನ್ನು ಆ ಅಜ್ಜಿ..........ಅವರ ಹತ್ತಿರ ಏನಿದೆ; ಅವರ ಕಣ್ಣುಗಳಲ್ಲಿ ಎಂಥ ಕರುಣೆ, ಎಂಥ ದಯೆ ಸೂಸುತ್ತದೆ ಎಂದರೆ ಪೊರೆಬಂದು ಕೊಳಕಾಗಿರುವ ಕಣ್ಣಗಳು ಕೂಡ ಅವರ ಈ ಕರುಣೆಯನ್ನು ಅಡಗಿಸಿಡಲಾರವು. ಅಲ್ಲದೆ ಇವುಗಳ ಹಿಂದೆ ಇರುವ ಅಪಾರ ಮಮತೆಯನ್ನು ಯಾರೂ ಏಕೆ ನೋಡುತ್ತಿಲ್ಲ?

ಆಮೇಲೆ ಒಂದು ದಿನ ಚಿಕ್ಕಪ್ಪನ ಮನೆಗೆ ಹೋಗಲು ನನಗೆ ಮನಸ್ಸಾಯಿತು. "ಅಜ್ಜಿ ನಿನ್ನನ್ನು ನೆನೆಸಿಕೊಳ್ಳುತ್ತಿರುತ್ತಾರೆ. ನೀನು ಬಾ" ಎಂದು ಚಿಕ್ಕಪ್ಪ ಹೇಳಿಹೋಗಿದ್ದರು.

"ಹೋಗಿಬಿಡಲೆ ಹೋಗಿಬಿಡಲೆ –ಓಡಿಹೋಗಿ ಅಜ್ಜಿಯ ಹತ್ತಿರ ಅಡಗಿಕೊಂಡುಬಿಡಲೆ" ಎಂದು ಮನಸ್ಸಿಗೆ ಅನ್ನಿಸುತ್ತಿತ್ತು. ಆಮೇಲೆ ಯಾಕೆ ಹೋಗಲಿ, ಮಮ್ಮಿ ಅಜ್ಜಿಗೆ ಏನೋ ಉಪಕಾರ ಹೊರಿಸಿದಹಾಗೆ ಮಾಡ್ತಾರೆ ಎಂದು ಅಂದುಕೊಳ್ಳುತ್ತಿದ್ದೆ. ಆದರೆ ಆಮೇಲೆ ನಾನು ಹೊರಟುಹೋದೆ. ಅಜ್ಜಿ ನನ್ನ ಕೈಹಿಡಿದುಕೊಂಡು–"ನೋಡು ನಿನ್ನ ರಿಸಲ್ಟ್ ತುಂಬಾ ಚೆನ್ನಾಗಿ ಬರುತ್ತೆ ಅಂತ ನನ್ನ ಮನಸ್ಸು ಹೇಳುತ್ತಾ ಇದೆ. ಯಾವಾಗ ಬರುತ್ತೆ"? ಎಂದು ಕೇಳಿದರು.

ನಾನು ಕಂಪಿಸತೊಡಗುತ್ತೇನೆ. "ಅಜ್ಜಿ ನೀವು ಕೂಡಾ ನನ್ನನ್ನು ನನ್ನ ಯಶಸ್ಸಿನಿಂದ ಅಳೆಯುವುದಾದರೆ ನಾನು ಏನು ಮಾಡಲಿ?"- ಗಾಬರಿಯಿಂದ ನಾನು ಕೈಬಿಡಿಸಿಕೊಂಡೆ. ಅನಂತರ ನನಗೆ ನಾನೇ ಸಮಾಧಾನ ಹೇಳಿಕೊಂಡೆ-ಪೇಪರ್ ಚೆನ್ನಾಗಿ ಆಗಿದೆ. ಆದರೆ ಒಳ್ಳೆ ಅಂಕಗಳು ಬರದೆಹೋದರೆ?

ಮಮ್ಮಿ ಹೊರಗಡೆ ಹೋಗಿದ್ದಾಗ ನಾನು ಅಜ್ಜಿ ಹತ್ತಿರ ಕೂತುಕೊಂಡು ಏನೆಲ್ಲಾ ಓದಿಕೊಳ್ಳುತ್ತಿದ್ದೆ ಅದೆಲ್ಲವೂ ನನಗೆ ಜ್ಞಾಪಕಕ್ಕೆ ಬರುತ್ತಿತ್ತು. ನನ್ನ ತಂಗಿ ನೋಡಲು ಎಷ್ಟು ಸುಂದರವಾಗಿದ್ದಾಳೋ ಓದುವುದರಲ್ಲೂ ಅಷ್ಟೇ ಚುರುಕಾಗಿದ್ದಾಳೆ. ನಾನು ಅವಳನ್ನು ಎಷ್ಟೊಂದು ಪ್ರೀತಿಸುತ್ತೀನಿ. ಅವಳು ಯಾವಾಗಲಾದರೂ ನನ್ನನ್ನು ಬ್ಲಾಕೀ, ಫೈಟೀ(ಜಗಳಗಂಟಿ) ಎಂದು ಹೇಳಿಬಿಟ್ಟು ಓಡಿಹೋಗ್ತಾಳೆ. ನಾನು ಗೊತ್ತಿದ್ದೂ ಗೊತ್ತಿದ್ದು ಮೂರ್ಖಳಾಗಿದ್ದೇನೆಂದು ಅವಳು ತಿಳಿದಿದ್ದಾಳೆ. ಆದರೂ ನಾನು ಅವಳನ್ನು ಪ್ರೀತಿಸುತ್ತೇನೆ.ಅವಳು ಚಿಕ್ಕವಳಾಗಿದ್ದಾಗ ನನ್ನ ಹೊದಿಕೆಯನ್ನೂ ಅವಳಿಗೆ ಹೊದಿಸುತ್ತಿದ್ದುದು ನನಗೆ ನೆನಪಿದೆ. ಅವಳ ಸಣ್ಣ ಪುಟ್ಟ ಮುನಿಸಿಗೆ ನಾನು ಅವಳ ತಲೆ ಸವರುತ್ತ ತಲೆ ತಟ್ಟುತ್ತಿದ್ದುದು ನನಗೆ ತುಂಬ ಹಿಡಿಸುತ್ತಿತ್ತು. ಅಂಥ ಅವಳೇ ಈಗ ನನ್ನನ್ನು ನೋಡಿ ನಗುತ್ತಾಳೆ, ಹೋಗಲಿ, ಬಿಡು. ಏನು ಆಗಬೇಕು ಅಂತ ಇದೆ, ಅದೇ ಆಗುತ್ತೆ. ನಾನು ಯಾವುದನ್ನೂ ಬದಲಾಯಿಸೋಕೆ ಆಗಲ್ಲ.

ಆ ದಿನವೂ ಬಂದಿತು. ಚಿಕ್ಕಪ್ಪ ಜೋರಾಗಿ ನಗುತ್ತಾ ಬಂದು -"ನೋಡು ನಿನ್ನ ರಿಸಲ್ಟ್ ಬಂದಿದೆ" ಎಂದು ಹೇಳಿದರು.

ನನಗಂತೂ ಉಸಿರೇ ನಿಂತುಹೋದಹಾಗೆ ಆಯಿತು. ಸರಿ, ಅಜ್ಜಿಯೂ ಚಿಕ್ಕಪ್ಪನ ಮುಖ ನೋಡುತ್ತಿದ್ದರು. ನಾನು ಫೇಲೇ ಆಗಿರೋದು. ಇಲ್ಲದೆ ಹೋಗಿದ್ದರೆ ಚಿಕ್ಕಪ್ಪ ತಕ್ಷಣ ಹೇಳಿಬಿಡುತ್ತಿದ್ದರು. ಚಿಕ್ಕಪ್ಪ ನ್ಯೂಸ್ ಪೇಪರ್ ಮುಂದಿಟ್ಟರು. "ನೋಡು ಫಸ್ಟ್ ಬಂದಿದ್ದಾಳೆ" ಎಂದು ಹೇಳಿದರು. ಎಲ್ಲರಿಗೂ ಖುಶಿಯಾಯಿತು. ಚಿಕ್ಕಪ್ಪ ಎಲ್ಲರಿಗೂ ಸ್ವೀಟ್ ಕೊಟ್ಟರು. ಕಡುಗಪ್ಪು ಬಣ್ಣದ ಹುಡುಗಿ ಫಸ್ಟ್ ಡಿವಿಜನ್ ನಲ್ಲಿ ಪಾಸ್ ಆಗ್ತಾಳೆ ಅಂತ ಯಾರಿಗೆ ಗೊತ್ತಿತ್ತು. ಅಜ್ಜಿಯ ಕಣ್ಣುಗಳಲ್ಲಿ ಕಾಣಿಸಿದ ಆ ಸಂತಸ ಬೇರೆಲ್ಲೂ ಕಾಣಿಸಲಿಲ್ಲ. ಅಜ್ಜಿ ನನ್ನ ಕೈ ಹಿಡಿದುಕೊಂಡು-"ನೀನು ನನ್ನ ಹಣೆಮೇಲೆ ತಿಲಕ ಇಟ್ಟುಬಿಟ್ಟಿದ್ದೀ. ನಿನ್ನ ಹಣೆಯ ಮೇಲಂತೂ ಇಟ್ಟುಕೊಂಡೇ ಇದ್ದೀ" ಎಂದು ಹೇಳಿದರು. ನನ್ನ ರಿಸಲ್ಟ್ ನಿಂದ ಮಮ್ಮಿಗೂ ತುಂಬ ಖುಶಿಯಾಯಿತು.

ಮಾರನೇ ದಿನ ಚಿಕ್ಕಮ್ಮನ ಇಡೀ ಕುಟುಂಬ ಬಂದಿತು. ಅಜ್ಜಿಯಂತೂ ಅಲ್ಲಿಯೇ ಇದ್ದರು. ಚಿಕ್ಕಮ್ಮ ನನಗೆ ಅಭಿನಂದನೆ ಹೇಳಿದಾಗ ಮಮ್ಮಿ ಹೇಳಿದರು-"ಅಯ್ಯೋ!

ಇವಳಿಗಂತೂ ಅಜ್ಜಿಯ ಸೇವೇನೇ ಆಗಿತ್ತು. ಇವಳನ್ನು ಓದಲು ಕಳಿಸುತ್ತಿದ್ದದ್ದು ನನ್ನದೇ ಪ್ರಯತ್ನದಿಂದ. ಮಕ್ಕಳನ್ನು ಓದಿಸಿ ಬೆಳೆಸುವುದು ಅಂದರೆ ಬಹಳ ಕಷ್ಟಪಡಬೇಕಾಗುತ್ತೆ; ಏನು ಸುಲಭವಾದ ಕೆಲಸ ಅಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೀನಿ. ನಾನೊಂದು ವೇಳೆ ನಡುವೆ ಇಲ್ಲದೆ ಹೋಗಿದ್ದರೆ ಇವಳು ಫೇಲ್ ಆಗಿಬಿಡುತ್ತಿದ್ದಳು".

ಮಮ್ಮಿ ಈ ನಾಟಕ ಸಾಕು ನಿಲ್ಲಿಸಿ ಎಂದು ಜೋರಾಗಿ ಕೂಗಿ ಹೇಳಬೇಕು ಅನ್ನಿಸುತ್ತದೆ. ನಿಮ್ಮ ಯಾವ ಉಪಕಾರವೂ ನನಗೆ ಬೇಕಾಗಿಲ್ಲ. ನಿಮ್ಮ ಸುಳ್ಳು ಹೊಗಳಿಕೆ ಬೇಕಿಲ್ಲ, ಮಮ್ಮಿ ನಿಮಗೆ ಕೆಟ್ಟದ್ದು ಅನ್ನಿಸಿದ್ದನ್ನೇ ಮಾಡಬೇಕು ಅನ್ನಿಸುತ್ತೆ. ನೀವು ಹೊರಗಡೆ ರೂಮ್ ನಲ್ಲಿ ಕುಳಿತುಕೊಂಡು ನಿಮ್ಮನ್ನು ಎಷ್ಟು ಬೇಕಾದರೂ ಹೊಗಳಿಕೊಳ್ಳಿ, ಆದರೆ ನಿಜ ಏನು ಅಂತ ನನಗೆ ಗೊತ್ತು ಅಂತಲೂ ಹೇಳಬೇಕು ಅನ್ನಿಸುತ್ತೆ.

ನನಗೆ ಮೆಡಿಕಲ್‌ನಲ್ಲಿ ಪ್ರವೇಶ ದೊರಕಿತು. ನನಗೆ ಅಜ್ಜಿಯನ್ನು ಬಿಟ್ಟುಹೋಗುವುದು ಇಷ್ಟವಿರಲಿಲ್ಲ. ಆದರೆ ಹೋಗಲೇಬೇಕಾಗಿತ್ತು. ನನ್ನ ಎಲ್ಲಾ ಸಿದ್ಧತೆ ಆಯಿತು. ಅಜ್ಜಿಯ ಮ್ಲಾನ ಮುಖವನ್ನು ಕಣ್ಣುಗಳಲ್ಲಿ ತುಂಬಿಕೊಂಡು ನಾನು ಹೊರಟುಹೋದೆ. ಸಮಯ ಹೇಗೆ ಕಳೆಯಿತು ಅಂತ ಗೊತ್ತೇ ಆಗಲಿಲ್ಲ. ಲೈಬ್ರರಿ ಕಾರ್ಡ್, ಐಡೆಂಟಿಟಿ ಕಾರ್ಡ್ ಇವುಗಳಲ್ಲೇ ಮನಸ್ಸು ಎಷ್ಟೊಂದು ಮುಳುಗಿಹೋಯಿತೆಂದರೆ ಅಜ್ಜಿಯ ವಿಚಾರದ ಕಡೆ ಗಮನವೇ ಹೋಗಲಿಲ್ಲ. ಮೂರನೇ ದಿನ ರೂಮಿಗೆ ಆಗತಾನೆ ಬಂದು ಕುಳಿತಿದ್ದೆ. ನನ್ನ ರೂಂ ಮೇಟ್ ಒಂದು ಪತ್ರವನ್ನು ತಂದುಕೊಟ್ಟಳು. ಎರಡು ಸಾಲುಗಳ ಪತ್ರ ಅದು–

"ಅಜ್ಜಿ ಸಾಯುವ ಮುನ್ನ ನಿನ್ನನ್ನು ನೆನಪಿಸಿಕೊಳ್ಳುತ್ತಿದ್ದಳು. ಹೆಚ್ಚು ಕಾಯಿಲೆಯೇನೂ ಇರಲಿಲ್ಲ. ಆದರೆ ಈ ಸಲ ಬದುಕುವ ಆಸೆ ಖಂಡಿತ ಇರಲಿಲ್ಲ!....

ಚಿಕ್ಕಪ್ಪ

❖

(ಕೃಪೆ: ಟೈಮ್ಸ್)

ಇಬ್ಬರು ವಿಧವೆಯರು

ಇಂಗ್ಲಿಷ್ : ನೆಥೋನಿಯಲ್ ಹೊಥಾರ್ನ್ (1804–1864)

ಶರದೃತುವಿನ ಸುರಿಯುವ ಮಳೆಯ ಮಬ್ಬಿನಿಂದ ಕೂಡಿದ ಸಂಜೆ. ಬಂದರಿನ ತಟದಲ್ಲಿದ್ದ ಒಂದು ಚಿಕ್ಕ ಮನೆಯ ಎರಡನೇ ಮಹಡಿಯು ಒಂದು ಕೊಠಡಿ. ಅದರಲ್ಲಿ ವಾಸ ಮಾಡುತ್ತಿದ್ದವರಂತೆಯೇಅದರಲ್ಲಿದ್ದ ಕುರ್ಚಿ ಮೇಜುಗಳು ತೀರ ಸರಳವಾಗಿದ್ದವು. ಅಲ್ಲಿಯ ಸಲಕರಣೆಗಳು ತೀರಾ ಸ್ವಲ್ಪವೇ ಆಗಿದ್ದುವು. ಆ ಸ್ಥಳ ಮತ್ತು ವಾತಾವರಣದ ಬಗ್ಗೆ ಇಷ್ಟು ಹೇಳಿದರೆ ಸಾಕು. ಅಗ್ಗಿಷ್ಟಿಕೆಯ ಬಳಿ ಇಬ್ಬರು ಆಕರ್ಷಕ ಯುವ ಮಹಿಳೆಯರು ಕುಳಿತಿದ್ದರು. ಪರಸ್ಪರರ ದುಃಖದಲ್ಲಿ ಒಬ್ಬರಿಗೊಬ್ಬರು ಸಾಂತ್ವನ ಹೇಳಿಕೊಳ್ಳುತ್ತಿದ್ದರು. ಇವರು ಆ ಇಬ್ಬರು ಸೋದರರ ಹೊಸದಾಗಿ ಮದುವೆಯಾದ ವಧುಗಳು. ಆ ಸೋದರರಲ್ಲಿ ಒಬ್ಬ ಸೈನಿಕನಾದರೆ ಇನ್ನೊಬ್ಬ ನಾವಿಕ. ಇಬ್ಬರ ಸಾವಿನ ಸುದ್ದಿಯೂ ಒಂದಾದ ಮೇಲೊಂದು ಬಂದಿತ್ತು. ಅವರಿಬ್ಬರ ಸಾವು ಕೆನಡಾದ ಯುದ್ಧ ಮತ್ತು ಅಟ್ಲಾಂಟಿಕ್ ಬಿರುಗಾಳಿಯಿಂದಾಗಿ ಆಗಿತ್ತು. ಈ ದುಃಖದ ಸುದ್ದಿಯಿಂದಾಗಿ ಎಲ್ಲ ಕಡೆಯಿಂದಲೂ ಅವರನ್ನು ಕುರಿತ ಸಹಾನುಭೂತಿ ಉಕ್ಕಿ ಹರಿದಿತ್ತು. ಬಹಳಷ್ಟು ಜನ ಅತಿಥಿಗಳು

ಈ ವಿಧವೆ ಸೋದರಿಯರಿಗೆ ತಮ್ಮ ಸಹಾನುಭೂತಿ ಸೂಚಿಸಲು ಬಂದರು. ಅವರಲ್ಲಿ ಒಬ್ಬ ಮಂತ್ರಿಯೂ ಇದ್ದ. ಸಂಜೆಯವರೆಗೂ ಇವರೆಲ್ಲರೂ ಅವರುಗಳ ಬಳಿಯೇ ಕುಳಿತಿದ್ದು ನಂತರ ಒಬ್ಬೊಬ್ಬರಾಗಿ ಅವರಿಗೆ ತಮ್ಮ ಸಹಾನುಭೂತಿ ಸೂಚಿಸಿ ತಮ್ಮ ಸುಖೀ ಮನೆಗಳತ್ತ ತೆರಳಿದರು. ಶೋಕತಪ್ತ ಸೋದರಿಯರು ತಮ್ಮ ಮಿತ್ರರ ಸಹಾನುಭೂತಿಯ ಬಗ್ಗೆ ಅಲಕ್ಷ್ಯ ತೋರದೆ ಇದ್ದರೂ ಅವರಿಗೆ ಇವರೆಲ್ಲರೂ ತಮ್ಮ ಪಾಡಿಗೆ ತಮನ್ನು ಬಿಟ್ಟುಹೋದರೆ ಸಾಕು ಎಂಬುದು ಅವರ ಬಯಕೆಯಾಗಿತ್ತು. ಗಂಡಂದಿರು ಬದುಕಿದ್ದಾಗ ಅವರಿಬ್ಬರ ನಡುವೆ ಇದ್ದ ಸಂಬಂಧದಿಂದಾಗಿ ಅವರು ಒಬ್ಬರಿಗೊಬ್ಬರು ಕೂಡಿಕೊಂಡೇ ಇದ್ದರು. ಆದರೆ ಈಗ ಈ ಸಾವಿನ ನಂತರದಲ್ಲಿ ಒಬ್ಬರು ಇನ್ನೊಬ್ಬರಿಗೆ ಹೆಚ್ಚು ಹತ್ತಿರವೆನಿಸತೊಡಗಿದ್ದರು. ಒಬ್ಬರು ಇನ್ನೊಬ್ಬರ ಪಕ್ಕದಲ್ಲಿ ಇರುವುದರಿಂದಲೇ ನಿಜವಾದ ಧೈರ್ಯ ಸಿಗುವುದು ಎಂದು ಅವರಿಗೆ ಅನ್ನಿಸಿತ್ತು. ಅವರುಗಳು ಒಬ್ಬರು ಇನ್ನೊಬ್ಬರ ಮನಸ್ಸನ್ನು ಅರ್ಥಮಡಿಕೊಂಡಿದ್ದರಿಂದ ನೀರವವಾಗಿ ರೋದಿಸುತ್ತಿದ್ದರು. ಹೀಗೆ ಒಂದು ಗಂಟೆಯ ತನಕ ಅತ್ತಮೇಲೆ ಅವರಲ್ಲಿ ತನ್ನ ಮೃದು ಮತ್ತು ಶಾಂತ ಸ್ವಭಾವದಿಂದ ಕೂಡಿದ್ದರೂ ದುರ್ಬಲಳಲ್ಲದ ಆದರೆ ಧರ್ಮಪರಾಯಣಳಾದ ಸೋದರಿಗೆ ಧಾರ್ಮಿಕ ಶಿಕ್ಷಣದಿಂದ ದೊರೆಯುವ ಸಹನಶೀಲತೆ ಮತ್ತು ತ್ಯಾಗದ ಗುಣಗಳು ಕೂಡಲೇ ನೆನಪಾದವು. ಎಂಥ ವಿಪತ್ತೇ ಬರಲಿ, ಬದುಕು ಇರುವುದು ಬಾಳುವುದಕ್ಕೆ ಎಂದು ಅನಿಸಿತು. ಅಗ್ಗಿಷ್ಟಿಕೆಯ ಎದುರು ಟೀಪಾಯಿಯನ್ನು ಇಟ್ಟು ಅವಳು ಹೇಗೋ ಏನೋ ಒಂದೆರಡು ತುತ್ತು ಗಂಟಲಿನಿಂದ ಒಳಕ್ಕೆ ನೂಕಿ ತನ್ನ ಸೋದರಿಯ ಸಮೀಪಕ್ಕೆ ಬಂದಳು.

ಅವಳ ಕೈ ಹಿಡಿದುಕೊಂಡು “ತಂಗಿ ನೀನು ಏನೂ ತಿಂದೇ ಇಲ್ಲ. ಈಗ ಜೀವನ ಹೇಗಿದೆಯೋ ಅದರಲ್ಲೇ ಭಗವಂತನ ಕೃಪೆ ಇರಲಿ” ಎಂದಳು.

ಅವಳ ಓರಗಿತ್ತಿ ಹೆಚ್ಚು ಭಾವುಕಳು ಮತ್ತು ಶೀಘ್ರಕೋಪಿ. ಇದುವರೆಗೂ ಒಂದೇ ಸಮನೆ ಬಿಕ್ಕಿಬಿಕ್ಕಿ ಅಳುತ್ತಿದ್ದಳು. ಮೇರಿಯ ದನಿ ಕೇಳಿ ಅವಳಿಗಾಗಿದ್ದ ಗಾಯವನ್ನು ಮತ್ತೆ ಬಗೆದುಬಿಟ್ಟರೇನೋ ಎಂಬಂತೆ ಒಮ್ಮೆಲೇ ವಿಚಲಿತಗೊಂಡಳು.

“ಈಗ ನನ್ನ ಪಾಲಿಗೆ ಉಳಿದಿರೋದರೂ ಏನು. ನನಗೆ ಭಗವಂತನ ಕೃಪೆ ಬೇಕಿಲ್ಲ” ಎಂದು ಮಾರ್ಗರೆಟ್ ಚೀರಿಬಿಟ್ಟಳು. ಅವಳ ಬಿಕ್ಕಳಿಕೆಗಳು ನಿಂತುಹೋದವು.. “ಭಗವಂತನ ಇಚ್ಛೆ ಇದೇ ಆಗಿದ್ದರೆ ನಾನು ಅನ್ನ ನೀರು ಮುಟ್ಟೋದೂ ಇಲ್ಲ” ಎಂದುಬಿಟ್ಟಳು.

ಹೀಗೆ ಹೇಳುತ್ತ ಮೇರಿ ಕಂಪಿಸಿದಳು. ನಿಧಾನವಾಗಿ ಮೇರಿ ತನ್ನ ಓರಗಿತ್ತಿಯನ್ನು ಸಮಾಧಾನ ಪಡಿಸುವಲ್ಲಿ ಯಶಸ್ವಿಯಾದಳು. ಹೀಗೇ ಸಂಜೆಯಾಯಿತು. ಕತ್ತಲೆ ದಟ್ಟವಾಗತೊಡಗಿತು. ಅವರು ಮಲಗುವ ಸಮಯವಾಯಿತು. ಮದುವೆಯ ಸಮಯದಲ್ಲಿ ಇವರುಗಳ ಹತ್ತಿರ ಅಷ್ಟೊಂದು ಸಾಧನ ಸಲಕರಣೆಗಳಿರಲಿಲ್ಲ. ಒಂದು ಸಣ್ಣ ಸಂಸಾರ. ಒಂದೇ ಪಡಸಾಲೆ. ಅದರ ಎರಡೂ ಕಡೆ ಇವರ ಮಲಗುವ ಕೋಣೆಗಳು ಇದ್ದವು. ಅಗ್ಗಿಷ್ಟಿಕೆಯ ಬೆಂಕಿ ಆರಿಸಿ ಇಬ್ಬರೂ ವಿಧವೆಯರು ಎದ್ದು ಅಲ್ಲಿ ಒಂದು ಲ್ಯಾಂಪ್ ಇಟ್ಟರು. ಎರಡೂ ಕೋಣೆಗಳ ಬಾಗಿಲನ್ನು ಮುಚ್ಚದೆ ಹಾಗೆಯೇ ತೆರೆದಿಟ್ಟರು. ಒಂದು ಕೊಠಡಿಯೊಳಗಿಂದ ಇನ್ನೊಂದು ಕೊಠಡಿಯ ಒಳಭಾಗ , ಅಲ್ಲಿದ್ದ ಮಂಚ, ಪರದೆ ಕಾಣುತ್ತಿದ್ದುವು. ಮಲಗಿದ ಕೂಡಲೇ ಇಬ್ಬರು ಸೋದರಿಯರಿಗೂ ನಿದ್ದೆಬಂತೆಂದು ಹೇಳಲಾಗದು. ಒಳಗೊಳಗೇ ದುಃಖ ಸಹಿಸಿಕೊಳ್ಳುವುದರ ಪ್ರಭಾವವನ್ನು ಮೇರಿ ಕಂಡುಕೊಳ್ಳುತ್ತಿದ್ದಳು. ಕೆಲವೇ ಕ್ಷಣಗಳಲ್ಲಿ ಅವಳಿಗೆ ಜೊಂಪು ಬಂದಂತಾಯಿತು. ರಾತ್ರಿಯ ಕತ್ತಲೆ ಮತ್ತು ನಿಶ್ಶಬ್ದತೆ ಗಾಢವಾಗುತ್ತಿದ್ದಂತೆ ಮಾರ್ಗರೆಟ್‌ಗೆ ಇನ್ನಷ್ಟು ವಿಚಲಿತಗೊಂಡಂಥ ಮತ್ತು ಆಯಾಸಗೊಂಡಂಥ ಅನುಭವವಾಗುತ್ತಿತ್ತು. ಹೊರಗಡೆ ಮಳೆ ಸುರಿಯುತ್ತಿತ್ತು. ಅವಳಿಗೆ ಮಳೆಹನಿಗಳ ಹಿತಕರ ದನಿ ಕೇಳಿಸುತ್ತಿತ್ತು. ಗಾಳಿಯ ಹೊಡೆತ ಕೂಡ ಅದನ್ನು ತಪ್ಪಿಸಲಾಗಲಿಲ್ಲ. ಮನಸ್ಸಿನಲ್ಲಿ ಒಂದು ವಿಚಿತ್ರ ಬಗೆಯ ಅಶಾಂತಿ ಮನೆಮಾಡಿತ್ತು. ದಿಂಬಿನಿಂದ ಮತ್ತೆಮತ್ತೆ ತಲೆಯೆತ್ತಿ ಮೇರಿಯ ಕೋಣೆಯ ಕಡೆಗೆ ನೋಡುತ್ತಿದ್ದಳು. ದೀಪದ ಮಬ್ಬು ಬೆಳಕಿನಲ್ಲಿ ಗೋಡೆಯ ಮೇಲಿನ ಕುರ್ಚಿ ಮೇಜುಗಳ ಪ್ರತಿಬಿಂಬಗಳು ಸ್ಥಿರವಾಗಿದ್ದುವು. ಎಲ್ಲೋ ಒಮ್ಮೊಮ್ಮೆ ದೀಪದ ಕುಡಿ ಮಿನುಗುಟ್ಟಿದಾಗ ನಡುಗುತ್ತಿದ್ದಳು. ಅಗ್ಗಿಷ್ಟಿಕೆಯ ಬಳಿ ಎರಡು ಖಾಲಿ ಕುರ್ಚಿಗಳು ತಮ್ಮ ಎಂದಿನ ಸ್ಥಳದಲ್ಲಿದ್ದುವು. ಸೋದರರಿಬ್ಬರೂ ಕುಟುಂಬದ ಯಜಮಾನರಂತೆ ಘನತೆಯಿಂದ ಕುಳಿತುಕೊಂಡು ಹರಟೆ ಹೊಡೆಯುತ್ತಿದ್ದರು. ಪಕ್ಕದಲ್ಲೇ ಎರಡು ಚಿಕ್ಕ ಕುರ್ಚಿಗಳಿದ್ದುವು. ಅವರ ಈ ಚಿಕ್ಕ ಸಾಮ್ರಾಜ್ಯದಲ್ಲಿ ಪ್ರೀತಿಯೇ ಪ್ರೀತಿ ತುಂಬಿ ತುಳುಕಾಡುತ್ತಿದ್ದ ಸಂತಸದ ಆ ದಿನಗಳಲ್ಲಿ ಮೇರಿ ಮತ್ತು ಅವಳು ಅವುಗಳ ಮೇಲೆ ಕುಳಿತುಕೊಳ್ಳುತ್ತಿದ್ದರು. ಇಂದು ದೀಪದ ಪ್ರಕಾಶ ಈ ವಿಧವೆಯರಂತೆಯೇ ತನ್ನ ಪ್ರಖರತೆಯನ್ನು ಕಳೆದುಕೊಂಡು ಬಿಟ್ಟಿತ್ತು. ಮಾರ್ಗರೆಟ್ ದುಃಖದ ಬೇಗೆಯಲ್ಲಿ ಮುಳುಗಿದ್ದಾಗ ಹೊರಗಡೆ ಬಾಗಿಲ ಮೇಲೆ ಯಾರೋ ಮೆಲ್ಲಗೆ ತಟ್ಟಿದ ಶಬ್ದ ಕೇಳಿಸಿತು.

"ಇನ್ನೂ ಇದು ನಿನ್ನೆಯ ವಿಷಯ. ಇಂಥದೊಂದು ಶಬ್ದ ಕೇಳಿಸಿದ ಕೂಡಲೇ ನನ್ನ ಹೃದಯ ಕುಣಿದು ಕುಪ್ಪಳಿಸುತ್ತಿತ್ತು." ಅದೆಷ್ಟು ಕಾತರಳಾಗಿ ತನ್ನ ಪತಿಯ ಆಗಮನವನ್ನು ನಿರೀಕ್ಷಿಸುತ್ತ ಕುಳಿತಿರುತ್ತಿದ್ದಳು ಎಂಬುದು ಅವಳಿಗೆ ನೆನಪಾಯಿತು. "ಈಗ ಇದನ್ನು ಕಟ್ಟಿಕೊಂಡು ಮಾಡೋದೇನು, ಹಾಳಾಗಿಹೋಗಲಿ. ನಾನು ಈ ಜಾಗಬಿಟ್ಟು ಏಳಲ್ಲ" ಎಂದು ಯೋಚಿಸಿದಳು.

ಮಕ್ಕಳು ರಚ್ಚೆಹಿಡಿಯುವ ಹಾಗೆ ಒಂದು ಕಡೆ ಹೃದಯ ರಚ್ಚೆ ಹಿಡಿಯುತ್ತಿದ್ದರೆ ಇನ್ನೊಂದು ಕಡೆ ಅವಳ ಹೃದಯ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಜೊತೆಗೆ ಕಿವಿ ಬಾಗಿಲ ಕಡೆಗೇ ನೆಟ್ಟಿತ್ತು. ನಾನು ಇಷ್ಟೊಂದು ಪ್ರೀತಿಸಿದ ಈ ಮನುಷ್ಯ ಇದ್ದಕ್ಕಿದ್ದಂತೆ ಹೀಗೆ ಸಾಯಲು ಸಾಧ್ಯವೆ ಎಂಬ ಬಗ್ಗೆ ಅವಳಿಗೆ ಅಂತರಂಗದಲ್ಲಿ ನಂಬಿಕೆ ಇರಲಿಲ್ಲ.ಅದೇ ಹೊತ್ತಿಗೆ ಎರಡು ಸಲ ಬಾಗಿಲು ತಟ್ಟಿದ ಶಬ್ದವಾಯಿತು. ಈ ಸಲ ಸದ್ದು ಸಣ್ಣದಿತ್ತು; ಆದರೆ ಯಾರೋ ಮೆಲು ದನಿಯಲ್ಲಿ ಕರೆಯುತ್ತಿದ್ದಾರೇನೋ ಎನ್ನುವಂತೆ ಬಾಗಿಲು ಬಡಿಯುವ ಶಬ್ದ ನಿರಂತರವಾಗಿ ನಡೆದೇ ಇತ್ತು. ಸದ್ದು ಹಲವು ಗೋಡೆಗಳೊಳಗಿನಿಂದ ಒಳಕ್ಕೆ ಬರುತ್ತಿತ್ತು. ಮಾರ್ಗರೆಟ್ ತನ್ನ ಅಕ್ಕನ ಕೋಣೆಯ ಕಡೆ ನೋಡಿದಳು. ಅವಳು ಗಾಢ ನಿದ್ರಯಲ್ಲಿ ಮುಳುಗಿದ್ದಳು. ಮಾರ್ಗರೆಟ್ ಎದ್ದು ನೆಲದ ಮೇಲೆ ಕಾಲಿಟ್ಟು ತನ್ನನ್ನು ಸಂಭಾಳಿಸಿಕೊಂಡಳು. ಭಯ ಮತ್ತು ಉದ್ವೇಗದಿಂದ ಅವಳು ನಡುಗುತ್ತಿದ್ದಾಳೇನೋ ಎನ್ನುವಂತಿತ್ತು.

"ಹೇ ದೇವರೆ, ನನಗೆ ನೆರವಾಗು" ಎಂದು ಅಸ್ಫುಟ ದನಿಯಿಂದ ಹೇಳುತ್ತ–"ಈಗ ನಾನು ಹೆದರುವ ಮಾತೇ ಇಲ್ಲ; ಆದರೂ ಮೊದಲಿಗಿಂತ ಹೆಚ್ಚು ಹೆದರುತ್ತಿರುವುದೇಕೆ?"

ಅಗ್ಗಿಷ್ಟಿಕೆಯಿಂದ ದೀಪವನ್ನು ಎತ್ತಿಕೊಂಡು ವೇಗವಾಗಿ ಕಿಟಕಿಯ ಸಮೀಪಕ್ಕೆ ಬಂದು ಕೆಳಗಡೆ ಬೀದಿಯ ಕಡೆಗೊಮ್ಮೆ ದೃಷ್ಟಿಹಾಯಿಸಿದಳು. ಮನೆಯ ಮುಂದೆ ಮಸಕು ಮಸಕಾದ ಪ್ರಕಾಶವುಳ್ಳ ಲಾಟೀನು ಉರಿಯುತ್ತಿತ್ತು. ಅದರ ಬೆಳಕಿಗೆ ಆಕಾಶದ ನಕ್ಷತ್ರಗಳು ಕರಗುತ್ತಿರುವಂತೆ ಕಂಡಿತು. ಉಳಿದೆಲ್ಲವೂ ಒಂದು ಗಾಢಾಂಧಕಾರದಲ್ಲಿ ಮುಳುಗಿದ್ದುವು. ಕಿಟಕಿಯ ಬಾಗಿಲು ತೆರೆದ ಶಬ್ದ ಕೇಳಿ ಪಕ್ಕದ ಕಟ್ಟಡದ ಮರೆಯಿಂದ ಒಬ್ಬ ಮನುಷ್ಯ ಪ್ರತ್ಯಕ್ಷನಾದ. ಅವನು ಅಗಲವಾದ ಟೋಪಿ ಮತ್ತು ಕಂಬಳಿ ಹೊದೆದಿದ್ದ. ತಾನು ಬಾಗಿಲು ತಟ್ಟಿದ ಸದ್ದು ಕೇಳಿ ಯಾರು ಎದ್ದುಬಂದಿರುವರೋ ಎಂದು ನೋಡಲು ಮುಂದೆ ಬಂದ. ಮಾರ್ಗರೆಟ್ ಅವನನ್ನು ನೋಡಿದ ಕೂಡಲೇ ಗುರುತಿಸಿದಳು. ಅವನು ಛತ್ರದಲ್ಲಿ ಕೆಲಸ ಮಾಡುತ್ತಿದ್ದ.

"ಏನು ಸಮಾಚಾರ ಗುಡ್ ಮೆನ್ ಪಾರ್ಕರ್?" ಎಂದು ಆ ವಿಧವೆ ಗಟ್ಟಿ

ದನಿಯಲ್ಲಿ ಕೇಳಿದಳು. "ಮೇಡಮ್ ಮಾರ್ಗರೆಟ್ ಅಂದರೆ ನೀವೇ ಅಲ್ಲವೆ? "ಛತ್ರದವನು ಹಾಗೆ ಕೇಳಿ "ಕಿಟಕಿಯ ಬಳಿ ತಮ್ಮ ಸೋದರಿ ಇಲ್ಲವೇನೋ ಅಂತ ಅಂದುಕೊಂಡಿದ್ದೆ" ಎಂದನು. "ಅವರನ್ನು ನೋಡಿ ನನಗೆ ತೀರಾ ಸಂಕೋಚ ಆಗ್ತಾ ಇತ್ತು. ಕಾರಣ ಅವರ ದುಃಖವನ್ನು ಹಂಚಿಕೊಳ್ಳಲು ನನ್ನಲ್ಲಿ ಶಬ್ದಗಳೇ ಇಲ್ಲ," ಎಂದ.

"ಒಳ್ಳೇದು ಹೇಳು ಏನು ಸಮಾಚಾರ?"ಮಾರ್ಗರೆಟ್ ಉತ್ಸುಕತೆಯಿಂದ ಕೇಳಿದಳು.

"ಈಗ ಅರ್ಧ ಗಂಟೆ ಮುಂಚೆ ಒಬ್ಬ ಅಂಚೆಯಾಳು(ಸಂದೇಶ ವಾಹಕ) ನಗರದ ಮೂಲಕವೇ ಹಾದುಹೋಗಿದ್ದಾನೆ. ಅವನು ಪೂರ್ವದ ಕಡೆಯಿಂದ ಗವರ್ನರ್‌ನ ಮತ್ತು ಕೌನ್ಸಿಲ್‌ನ ಕೆಲವು ಪತ್ರಗಳನ್ನು ತಂದಿದ್ದ. ಸ್ವಲ್ಪ ಮೈ ಬೆಚ್ಚಗೆ ಮಾಡಿಕೊಳ್ಳಲು ಅವನು ನನ್ನ ಬಳಿ ಸ್ವಲ್ಪ ಹೊತ್ತು ತಂಗಿದ್ದ. ನಾನು ಗಡಿನಾಡಿನ ಸುದ್ದಿ ಬಗ್ಗೆ ಕೇಳಿದೆ. ಆಗ ಅವನು ಯುದ್ಧದಲ್ಲಿ ನಮ್ಮ ಕಡೆಯವರ ಪರಿಸ್ಥಿತಿ ಉತ್ತಮವಾಗಿದೆ ಎಂದು ಹೇಳಿದ. ಸತ್ತಿದ್ದಾರೆಂದು ಘೋಷಿಸಲಾಗಿದ್ದ ಹದಿಮೂರು ಜನ ಆರಾಮವಾಗಿದ್ದಾರೆ. ಅವರಲ್ಲಿ ನಿಮ್ಮ ಯಜಮಾನರೂ ಒಬ್ಬರು. ಫ್ರಾಂಸಿನ ಮತ್ತು ಇಂಡಿಯಾದವರನ್ನು ಅಲ್ಲಿಂದ ಪ್ರಾಂತೀಯ ಜೈಲಿಗೆ ಕರೆತರುವ ಕೆಲಸವನ್ನೂ ಅವರಿಗೆ ವಹಿಸಲಾಗಿದೆ. ಈ ಸುದ್ದಿ ಕೇಳಿ ನೀವು ತುಂಬ ಸಂತೋಷ ಪಡುತ್ತೀರಿ ಅಂತ ನನಗೆ ನಂಬಿಕೆ ಇತ್ತು. ಹಾಗಾಗಿ ನಾನು ಈ ಅಪರಾತ್ರಿಯಲ್ಲಿ ನಿಮ್ಮ ಶಾಂತಿಗೆ ಭಂಗ ತರಲು ಓಡಿ ಬಂದೆ. ತಮಗೆ ಶುಭ ರಾತ್ರಿ"

ಹೀಗೆ ಹೇಳಿ ಆ ಸಜ್ಜನ ವ್ಯಕ್ತಿ ಹೊರಟುನಿಂತ. ಹೋಗುವಾಗ ಕತ್ತಲಿನಲ್ಲಿ ಅವನ ಲಾಟೀನು ಅಲುಗಾಡುತ್ತಿತ್ತು. ಅದರ ಬೆಳಕಿನಲ್ಲಿ ಎಲ್ಲವೂ ತೀರ ಅಸ್ಪಷ್ಟವಾಗಿ ಕಾಣುತ್ತಿದ್ದುವು. ಅಲ್ಲೋಲ ಕಲ್ಲೋಲದ ನಡುವಿನಿಂದ ಆಕೃತಿಗಳ ಒಂದು ಜಗತ್ತೇ ಮೇಲೆ ಮೂಡಿ ಬರುತ್ತಿರುವಂತೆ ಅಥವಾ ನೆನಪುಗಳು ಭೂತಕಾಲದತ್ತ ಇಣುಕಿ ನೋಡುತ್ತಿರುವಂತೆ ಅನ್ನಿಸಿತು. ಆದರೆ ಈ ಸುಂದರವಾದ ದೃಶ್ಯವನ್ನು ನೋಡಲು ಅಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಈ ಪ್ರಕಾಶದಿಂದಾಗಿ ಅವಳ ಮನಸ್ಸಿನಲ್ಲಿ ಹರ್ಷ ಉಜ್ವಲಗೊಂಡು ಉಸಿರು ಸಿಕ್ಕಿಹಾಕಿಕೊಂಡಂತೆನಿಸಿತು. ಅವಳು ತನ್ನ ಸೋದರಿಯ ಮಂಚದ ಬಳಿಗೆ ಗರಿಗೆದರಿ ಹಾರಿಕೊಂಡು ಬಂದಂತೆ ಬಂದಳು. ಆದರೆ ಇದ್ದಕ್ಕಿದ್ದಂತೆ ಹೊಸ್ತಿಲ ಮೇಲೆ ಗಕ್ಕನೆ ನಿಂತುಬಿಟ್ಟಳು. ಅವಳ ಒಳಗೆ ನೋವಿನಂಥದೇನೋ ಉಕ್ಕಿಬಂದಿತು.

"ಬಡಪಾಯಿ ಮೇರಿ! ನನ್ನ ಸಂತಸದಿಂದ ಅವಳ ದುಃಖ ಇನ್ನಷ್ಟು ಉಲ್ಬಣಗೊಳ್ಳುವುದನ್ನು ನೋಡುವುದಕ್ಕೋಸ್ಕರ ನಾನು ಅವಳನ್ನು ಎಬ್ಬಿಸಲೆ?? ಇಲ್ಲ, ನಾನು ಈ ವಿಷಯವನ್ನು ಈಗ ನನ್ನೊಳಗೇ ಇಟ್ಟುಕೊಳ್ಳುವೆ" ಎಂದು ಮನಸ್ಸಿನಲ್ಲೇ

ಯೋಚಿಸಿದಳು.

ಅವಳು ಹಾಸಿಗೆಯ ಹತ್ತಿರಕ್ಕೆ ಬಂದಳು. ನೋಡಿದರೆ ಮೇರಿ ನೆಮ್ಮದಿಯಾಗಿ ನಿದ್ರಿಸುತ್ತಿದ್ದಳು. ಅಳುವ ಸಲುವಾಗಿ ಮುಖ ಮುಚ್ಚಿಕೊಂಡಿದ್ದಾಳೇನೋ ಎನ್ನುವಂತೆ ಅವಳ ಮುಖದ ಅರ್ಧಭಾಗ ದಿಂಬಿನೊಂದಿಗೆ ಸೇರಿಕೊಂಡು ಬಿಟ್ಟಿದೆ.. ಅವಳ ಹೃದಯ ಎಲ್ಲವನ್ನೂ ತನ್ನಲ್ಲಿ ಹುದುಗಿಸಿಕೊಂಡು ಮೇಲೆ ಶಾಂತವಾಗಿರುವ ಆಳವಾದ ಸರೋವರವೇನೋ ಎಂಬಂತೆ ಮುಖದ ಮೇಲೆ ಸ್ಥಿರವಾದ ಶಾಂತಿ ನೆಲೆಸಿತ್ತು. ದುಃಖ ಹಗುರಾಗಿ ಕನಸಿನ ರೂಪ ತಾಳಿಬಿಡುವುದು ಎಂಥ ಅಚ್ಚರಿ!. ಮಾರ್ಗರೆಟ್ ತನ್ನ ಸೋದರಿಯನ್ನು ಎಬ್ಬಿಸಬೇಕೆಂಬ ತನ್ನ ಆಸೆಯನ್ನು ಪೂರ್ತಿಯಾಗಿ ಹತ್ತಿಕ್ಕಲು ಸಮರ್ಥಳಾದಳು. ತನಗೆ ಈಗ ಒದಗಿಬಂದಿರುವ ಈ ಅದೃಷ್ಟದಿಂದ ತನಗೇ ತಿಳಿಯದಂತೆ ತನ್ನ ಸೋದರಿಯ ವಿಚಾರಕ್ಕೆ ತಾನು ಪ್ರಾಮಾಣಿಕಳಾಗಿರುವುದಿಲ್ಲ ಅಷ್ಟೇ ಅಲ್ಲ, ಒಮ್ಮೆಗೆ ಈ ಸತ್ಯ ಸಂಗತಿಯನ್ನು ತಿಳಿಸಿದ ನಂತರದಲ್ಲಿ ತನ್ನ ವಿಷಯಕ್ಕೆ ತನ್ನ ಸೋದರಿಯ ಪ್ರೀತಿ ಕಡಿಮೆಯಾಗಿಬಿಡುತ್ತದೆಂದು ಅನ್ನಿಸಿತು. ಕೂಡಲೇ ಅಲ್ಲಿಂದ ತನ್ನ ಕೋಣೆಗೆ ಬಂದುಬಿಟ್ಟಳು. ಈ ಸಂತಸ ಎಂಥದೆಂದರೆ ಮರು ಕ್ಷಣವೇ ಯಾರಿಗೆ ದುಃಖವುಂಟಾದರೂ ಸರಿಯೆ ಅದರ ಮೇಲೆ ನಿಯಂತ್ರಣ ಸಾಧಿಸುವುದು ಕಷ್ಟವೆಂದು ಅವಳಿಗೆ ತೋಚಿತು. ಅವಳ ಮನಸ್ಸಿನಲ್ಲಿ ಸಂತಸದ ವಿಚಾರಗಳೇ ಉಕ್ಕಿಬರುತ್ತಿದ್ದುವು. ಆದರೆ ನಿದ್ರೆ ಅವುಗಳನ್ನೆಲ್ಲ ಅಪಹರಿಸಿ ಕನಸಿನ ರೂಪಕ್ಕೆ ಪರಿವರ್ತಿಸಿಬಿಟ್ಟಿತು. ಚಳಿಗಾಲದಲ್ಲಿ ಕಿಟಕಿಯ ಗಾಜಿನ ಮೇಲೆ ಬಾಯಿಂದ ಬಿಟ್ಟ ಗಾಢ ಉಸಿರಿನಿಂದ ವಿಚಿತ್ರವಾದೊಂದು ಆಕೃತಿ ಮೂಡಿನಿಲ್ಲುವಂತೆ ಕನಸುಗಳು ಹೆಚ್ಚು ಸಂತಸಕರ ಮತ್ತು ದೀರ್ಘವಾಗಿರುತ್ತವೆ.(ಆದರೆ ಇದೆಂಥ ನಿರ್ಜೀವ ಹೋಲಿಕೆ!).

ರಾತ್ರಿ ಸಾಕಷ್ಟು ಕಳೆದಿತ್ತು. ಮೇರಿ ಗಡಬಡಿಸಿ ಎದ್ದಳು. ಅವಳು ಒಂದು ಜೀವಂತ ಸ್ವಪ್ನವನ್ನು ಕಂಡಿದ್ದಳು. ಆದರೆ ಅದು ಅತ್ಯಂತ ಅಸಹಜವಾಗಿತ್ತು. ಒಂದು ಅತ್ಯಂತ ರೋಚಕ ತಿರುವಿನಲ್ಲಿ ತಾನು ನಿದ್ದೆಯಿಂದ ಎಚ್ಚತ್ತಿದ್ದೆನೆಂಬುದಷ್ಟು ಮಾತ್ರ ಅವಳಿಗೆ ನೆನಪಿತ್ತು. ಬೆಳಗಿನ ಇಬ್ಬನಿಯಂತೆ ಸ್ವಲ್ಪ ಹೊತ್ತು ನಿದ್ರೆಯ ಜೊಂಪು ಇತ್ತು. ಆ ಜೊಂಪಿನಲ್ಲಿ ಅವಳು ತನ್ನ ಸ್ಥಿತಿಯ ವಾಸ್ತವಿಕತೆಯನ್ನು ತಿಳಿಯಲು ಅಸಮರ್ಥಳಾಗಿದ್ದಳು. ಅರೆ ಪ್ರಜ್ಞಾವಸ್ಥೆಯಲ್ಲಿ ಅವಳಿಗೆ ಯಾರೋ ಜೋರುಜೋರಾಗಿ ಬಾಗಿಲು ತಟ್ಟುತ್ತಿರುವ ಸದ್ದು ಮೂರು ಬಾರಿ ಕೇಳಿಸಿತು. ಮೊದಲಿಗೆ ಅಂಥದೇನೂ ಇಲ್ಲವೇನೋ ಎಂದು ಅನಿಸಿತು. ಆಮೇಲೆ ಕೊಡುಕೊಳ್ಳುವುದೇನೂ ತನಗಿಲ್ಲವೆಂದು ಅನಿಸಿತು. ಕೊನೆಗೆ ಯಾರೋ ಕೂಗುತ್ತಿದ್ದಾರೆ ಮತ್ತು ಅದು ಅವಳನ್ನೇ ಕುರಿತದ್ದು ಎನಿಸಿತು. ಆ ಕ್ಷಣವೇ

ಅವಳಿಗೆ ಎಲ್ಲವೂ ನೆನಪಾಗತೊಡಗಿತು. ನಿದ್ರೆಯ ಮಂಪರು ಅವಳ ಶೋಕತಪ್ತ ಮುಖದಿಂದ ತೊಲಗತೊಡಗಿತು. ಕಣ್ಣು ತೆರೆಯುತ್ತಿದ್ದಂತೆ ಸ್ವಚ್ಛ ಬೆಳಕಿನಲ್ಲಿ ಕೊಠಡಿಯ ಎಲ್ಲ ವಸ್ತುಗಳೂ ಸ್ಪಷ್ಟವಾಗಿ ಕಾಣತೊಡಗಿದವು. ಬಾಗಿಲ ಹೊರಗೆ ಯಾರೋ ಜೋರಾಗಿ ಕರೆಯುತ್ತಿದ್ದರು. ಸೋದರಿ ಎದ್ದುಬಿಟ್ಟಾಳೆಂದು ಬೇಗನೆ ಶಾಲು ಹೊದೆದುಕೊಂಡು ಕಿಟಕಿಯತ್ತ ಇಣುಕಿದಳು. ಆಕಸ್ಮಿಕದ ಸಂಗತಿಯೆಂದರೆ ಅದು ಮೊದಲೇ ತೆರೆದಿತ್ತು.

"ಯಾರದು" ಎಂದು ಮೇರಿ ಕಂಪಿಸುತ್ತ ಕೆಳಗೆ ಇಣುಕಿ ಕೂಗಿದಳು.

ಬಿರುಗಾಳಿ ಶಾಂತವಾಗಿತ್ತು. ಚಂದ್ರ ಮೇಲೆ ಬಂದಿದ್ದ. ಚೆದುರಿದ ಮೋಡಗಳ ಮಧ್ಯದಿಂದ ಅವನು ಇಣುಕಿನೋಡುತ್ತಿದ್ದನು. ಕೆಳಗೆ ಮನೆಯ ನೆರಳಿಂದ ಕತ್ತಲೆ ಉಂಟಾಗಿತ್ತು. ಕಿಟಕಿಯ ಕೆಳಗೆ ಒಬ್ಬ ನಾವಿಕ ತನ್ನ ಸಮವಸ್ತ್ರದಲ್ಲಿ ನಿಂತಿದ್ದ. ಸಮುದ್ರದ ಆಳದಿಂದ ಈಗತಾನೆ ಎದ್ದುಬಂದಿದ್ದಾನೇನೋ ಎಂಬಂತೆ ಅವನು ನೀರಿನಿಂದ ಪೂರ್ತಿ ನೆನೆದಿದ್ದ. ಮೇರಿಗೆ ಅವನ ಗುರುತು ಹತ್ತಿತು. ಸಮುದ್ರ ತೀರದಿಂದ ಸಣ್ಣ ಪುಟ್ಟ ಸಮುದ್ರಯಾನ ಮಾಡಿ ಜೀವನ ಸಾಗಿಸುತ್ತಿದ್ದವನೇ ಅವನು. ಮದುವೆಗೆ ಮುಂಚೆ ಇದೇ ಮನುಷ್ಯ ಮೇರಿಗೆ ತನ್ನ ಪ್ರೇಮವನ್ನು ನಿವೇದಿಸಿದ್ದು ಮತ್ತು ಅದನ್ನು ಅವಳು ತಿರಸ್ಕರಿಸಿದ್ದು ಎರಡೂ ನೆನಪಾಯಿತು.

"ಏನು ಸಮಾಚಾರ ಸ್ಟೀಫನ್! ನೀನು ಈ ಹೊತ್ತಿನಲ್ಲಿ ಇಲ್ಲಿ ಹೇಗೆ? ಎಂದು ಕೇಳಿದಳು

"ಅರೆ. ಸಂತೋಷ ಪಡು ಮೇರಿ! ನಿನಗೆ ನಾನು ಅಮೂಲ್ಯವಾದ ಸುದ್ದಿ ತಂದಿದ್ದೀನಿ"– ಎಂದು ಆ ವಿಫಲ ಪ್ರೇಮಿ ಹೇಳಿದ. "ನಿನಗೆ ಗೊತ್ತಿದೆಯಾ ಮೇರಿ ಹತ್ತು ನಿಮಿಷದ ಹಿಂದೆ ನಾನು ಮನೆಗೆ ಬಂದೆ. ಬರುತ್ತಿದ್ದ ಹಾಗೇ ನಮ್ಮ ತಾಯಿ ನಿನ್ನ ಯಜಮಾನರ ಬಗ್ಗೆ ಹೇಳಿದಳು. ಅಮ್ಮನ ಹತ್ತಿರ ಏನೊಂದು ಶಬ್ದಾನು ಮಾತಾಡದೆ ನಾನು ಹ್ಯಾಟ್ ಹಾಕಿಕೊಂಡು ನಿನ್ನ ಮನೆ ಕಡೆ ಓಡೋಡಿ ಬಂದೆ. ಮೇರಿ ನಿನ್ನ ಹತ್ತಿರ ಮಾತಾಡದೆ ಒಂದೇ ಒಂದು ಕ್ಷಣ ಕೂಡ ನನಗೆ ಇರಕ್ಕಾಗಲಿಲ್ಲ. ಹೇಗೂ ನಮ್ಮದು ಹಳೇ ಸಂಬಂಧ ತಾನೆ?"

"ಓಹ್ ಸ್ಟೀಫನ್ ನಾನು ನೀನು ಒಳ್ಳೇ ಮನುಷ್ಯ ಅಂತ ತಿಳಿದುಕೊಂಡಿದ್ದೆ." ಹಾಗೆ ಹೇಳುತ್ತ ಆ ವಿಧವೆಯ ಕಣ್ಣಿಂದ ಮುಖದ ಮೇಲೆ ನೀರು ಉರುಳತೊಡಗಿತು. ಅವಳು ಕಿಟಕಿ ಹಾಕತೊಡಗಿದಳು.

"ಅರೆ ಕಿಟಕಿಯ ಬಾಗಿಲು ಹಾಕಬೇಡ ಮೇರಿ. ಮೊದಲು ನನ್ನ ಮಾತನ್ನು

ಪೂರ್ತಿ ಕೇಳಿಸಿಕೋ"– ಎಂದು ಆ ಯುವ ನಾವಿಕ ಚೀರಿದ. ನಿನ್ನೆ ನಾನು ಹಳೇ ಇಂಗ್ಲೆಂಡಿನಿಂದ ಬರುತ್ತಿರುವ ಒಂದು ಒಂದು ದೋಣಿ ನೋಡಿದೆ. ದೋಣಿಯ ಛಾವಣಿ ಮೇಲೆ ನಾನು ಯಾರನ್ನು ನೋಡಿದೆ ಅಂತ ನಿನಗೆ ಗೊತ್ತೇನು? ಆರೋಗ್ಯಪೂರ್ಣವಾಗಿ ಕ್ಷೇಮವಾಗಿರುವವನನ್ನು. ಐದು ತಿಂಗಳ ಹಿಂದೆ ನೋಡಿದಾಗ ಇದ್ದದ್ದಕ್ಕಿಂತ ಸ್ವಲ್ಪ ತೆಳ್ಳಗೆ ಕಾಣುತ್ತಿದ್ದ."

ಮೇರಿ ಕಿಟಕಿಯಿಂದ ನೋಡುತ್ತಿದ್ದಳು ಆದರೆ ಏನೊಂದೂ ಮಾತಾಡಲಿಲ್ಲ.

"ಅರೆ, ಅದು ಬೇರೆ ಇನ್ಯಾರೂ ಅಲ್ಲ ನಿನ್ನ ಗಂಡಾನೇ"–ಎಂದು ಆ ವಿಶಾಲ ಹೃದಯದ ನಾವಿಕ ಹೇಳಿದ. "ನಿನ್ನ ಗಂಡ ಮತ್ತು ಅವನ ಮೂರು ಜನ ಗೆಳೆಯರು ದೋಣಿ ಮಗುಚಿಕೊಂಡಿದ್ದರಿಂದ ಹುಟ್ಟಿನ ನೆರವಿನಿಂದ ತಮ್ಮನ್ನು ರಕ್ಷಿಸಿಕೊಂಡಿದ್ದರು. ಗಾಳಿ ಹೀಗೇ ಬೀಸುತ್ತಾ ಇದ್ದರೆ ಬೆಳಿಗಾಗೋ ಹೊತ್ತಿಗೆ ಇಲ್ಲಿಗೆ ಬಂದು ತಲುಪುತ್ತೆ. ಈ ವಿಷಯ ತಿಳಿಸಿ ನಿನಗೆ ಸಂತೋಷ ಉಂಟುಮಾಡೋಣ ಅಂತ ಬಂದೆ. ಒಳ್ಳೇದು ಗುಡ್ ನೇಟ್".

ಸ್ಟೀಫನ್ ಮುಖ ತಿರುಗಿಸಿಕೊಂಡು ವೇಗವಾಗಿ ಹೆಜ್ಜೆಹಾಕುತ್ತ ಹೋಗಿಬಿಟ್ಟ. ಮೇರಿ ಬಹಳ ಹೊತ್ತಿನ ತನಕ ಅವನನ್ನು ನಂಬದವಳಂತೆ ನೋಡುತ್ತಲೇ ಇದ್ದಳು. ಈ ಮಾತನ್ನು ನಿಜವೆಂದು ತಿಳಿಯಬೇಕೆ ಅಥವಾ ಸುಳ್ಳೆಂದು ತಿಳಿಯಬೇಕೆ ಎಂಬುದು ಅವಳಿಗೆ ಗೊತ್ತಾಗಲಿಲ್ಲ. ನಿಧಿ ನಿಧಾನವಾಗಿ ನಂಬಿಕೆಯ ಶಕ್ತಿ ಅವಳಲ್ಲಿ ಹೊಮ್ಮತೊಡಗಿತು. ಅವಳ ಮನಸ್ಸಿನಲ್ಲಿ ಎಲ್ಲಕ್ಕಿಂತ ಮೊದಲು ಸೋದರಿಯನ್ನು ಎಬ್ಬಿಸಿ ಈಗ ತಾನೆ ತಿಳಿದುಬಂದ ಈ ಸಿಹಿ ಸುದ್ದಿಯನ್ನು ಅವಳಿಗೆ ಹೇಳಿಬಿಡಬೇಕೆಂದು ಅನಿಸಿತು. ಕೊಠಡಿಯ ಬಾಗಿಲು ಅದು ಯಾವಾಗಲೋ ಮುಚ್ಚಿಕೊಂಡುಬಿಟ್ಟಿತ್ತು. ಬಾಗಿಲು ತಳ್ಳಿಕೊಂಡು ಮಂಚದ ಸಮೀಪಕ್ಕೆ ಬಂದಳು. ನಿದ್ರಿಸುತ್ತಿರುವ ಸೋದರಿಯ ಹೆಗಲ ಮೇಲೆ ಇನ್ನೇನು ಕೈ ಇಡಬೇಕೆಂದಿದ್ದಳು. ಅಷ್ಟರಲ್ಲಿ ಮಾರ್ಗರೆಟ್ ಎಚ್ಚರಗೊಳ್ಳುತ್ತಿದ್ದ ಹಾಗೆಯೇ ಸಾವಿನ ಮತ್ತು ಶೋಕದ ಭಾವನೆಯಿಂದ ಕೂಡಿರುತ್ತಾಳೆ. ನನ್ನ ಸಂತಸದೊಂದಿಗೆ ತನಗಾಗಿರುವ ದುಃಖವನ್ನು ಹೋಲಿಸಿಕೊಂಡು ಕಹಿಯಿಂದ ತುಂಬಿಹೋಗುತ್ತಾಳೆ. ದೀಪದ ಬೆಳಕು ಶೋಕದಲ್ಲಿ ಮುಳುಗಿ, ಮೈಮೇಲೆ ಎಚ್ಚರವಿಲ್ಲದೆ ಮಲಗಿದ್ದ ಅವಳ ದೇಹದ ಮೇಲೆ ಬೀಳುತ್ತಿರುವುದನ್ನು ಅವಳು ಗಮನಿಸಿದಳು. ಮಾರ್ಗರೆಟ್ ನೆಮ್ಮದಿಯಿಲ್ಲದ ನಿದ್ರೆಯಲ್ಲಿ ಮುಳುಗಿದ್ದಳು. ಅವಳ ವಸ್ತ್ರಗಳು ಅಸ್ತವ್ಯಸ್ತವಾಗಿದ್ದುವು. ಅವಳ ಸುಂದರವಾದ ಕೆನ್ನೆ ಕೆಂಪಾಗಿತ್ತು. ಒಂದು ಜೀವಂತ ಮುಗುಳುನಗೆಯಿಂದ ಅವಳ ತುಟಿಗಳು ಅರೆಬಿರಿದಿದ್ದುವು.

ಅವುಗಳಿಂದ ಸಂತಸದ ಭಾವ ಹೊರಹೊಮ್ಮುತ್ತಿತ್ತು. ಅವಳ ರೆಪ್ಪೆಗಳು ಮುಚ್ಚಿದ್ದುವಾದರೂ ಅವಳ ಮೊಗದಲ್ಲಿ ಸಂತಸವೆಂಬುದು ಉಕ್ಕಿ ಹೊರಹೊಮ್ಮಲು ಬಯಸುತ್ತಿತ್ತು.

"ನನ್ನ ಅದೃಷ್ಟಹೀನ ಸೋದರಿ! ಶೀಘ್ರದಲ್ಲೇ ನಿನ್ನ ಈ ಸುಂದರ ಕನಸು ಭಂಗವಾಗುತ್ತದೆ"-ಎಂದು ಮೇರಿ ತನ್ನಲ್ಲೇ ಅಂದುಕೊಂಡಳು.

ಹಿಂತಿರುಗುವ ಮುನ್ನ ಅವಳು ದೀಪವನ್ನು ಆರಿಸಿದಳು. ತಣ್ಣನೆಯ ಗಾಳಿಯಿಂದ ಅವಳಿಗೆ ಎಚ್ಚರವಾಗದಿರಲೆಂದು ಬೆಡ್ ಶೀಟನ್ನು ಅವಳ ಮೈಮೇಲೆ ಹೊದಿಸತೊಡಗಿದಳು. ಆದರೆ ಮಾರ್ಗರೆಟ್ಟಳ ಕುತ್ತಿಗೆಯ ಬಳಿ ಅವಳ ಕೈ ನಡುಗಿತು. ಒಂದು ಹನಿ ಕಣ್ಣೀರು ಅವಳ ಕೆನ್ನೆಯ ಮೇಲೆ ಬಿತ್ತು. ಅದೇ ಕ್ಷಣ ಮಾರ್ಗರೆಟ್ ನಿದ್ರೆ ಹಾರಿತು.

❖

ಮುದಿ ವೇಟರ್

ಇಂಗ್ಲಿಷ್ : ಅರ್ನೆಸ್ಟ್ ಹೆಮಿಂಗ್ ವೇ

ರಾತ್ರಿ ತುಂಬಾ ಹೊತ್ತು ಆಗಿಬಿಟ್ಟಿತ್ತು. ಎಲ್ಲರೂ ಕೆಫೆಯಿಂದ ಹೊರಟುಹೋಗಿದ್ದರು. ಆದರೆ ಈ ಮುದುಕ ವಿದ್ಯುತ್ ಕಂಬದ ಪಕ್ಕ ಇದ್ದ ಮರದ ನೆರಳಿನಲ್ಲಿ ಇನ್ನೂ ಕುಳಿತಿದ್ದ. ಹಗಲಿನಲ್ಲಿ ಆ ಜಾಗ ಧೂಳಿನಿಂದ ತುಂಬಿರುತ್ತಿತ್ತು. ಆದರೆ ರಾತ್ರಿ ಹೊತ್ತು ಮಂಜಿನಿಂದಾಗಿ ಧೂಳು ಕೂತುಕೊಳ್ಳುತ್ತಿತ್ತು. ಮುದುಕನಿಗೆ ಇಲ್ಲಿ ಕುಳಿತುಕೊಳ್ಳುವುದೆಂದರೆ ತುಂಬಾ ಇಷ್ಟ. ಕಾರಣ ಇವನು ಕಿವುಡ. ರಾತ್ರಿಯ ಶಾಂತಿಯಲ್ಲಿ ಅವನಿಗೆ ವಾತಾವರಣದಲ್ಲಿ ಒಂದು ಸ್ವಲ್ಪ ವ್ಯತ್ಯಾಸ ಕಂಡು ಬರುತ್ತಿತ್ತು. ಕೆಫೆಯಲ್ಲಿದ್ದ ಇಬ್ಬರು ವೇಟರ್‌ಗಳಿಗೂ ಮುದುಕ ಸ್ವಲ್ಪ ನಶೆಯಲ್ಲಿದ್ದಾನೆಂದು ಗೊತ್ತಿತ್ತು. ಮುದುಕ ಒಬ್ಬ ಒಳ್ಳೆಯ ಗಿರಾಕಿ ಅಂತ ಗೊತ್ತಿತ್ತು. ಆದರೆ ಅವನು ನಶೆಯಲ್ಲಿದ್ದಾನೆ ಅಂತ ಆದರೆ ಹಣ ಕೊಡದೆ ಹೊರಟುಹೋಗುತ್ತಾನೆ ಅಂತಲೂ ಗೊತ್ತಿತ್ತು. ಹಾಗಾಗಿ ಅವರುಗಳು ಅವನ ಮೇಲೆ ಕಣ್ಣಿಟ್ಟಿದ್ದರು.

"ಹಿಂದಿನ ವಾರ ಇವನು ಆತ್ಮ ಹತ್ಯೆಗೆ ಪ್ರಯತ್ನಿಸಿದ್ದ", ಒಬ್ಬ ವೇಟರ್ ಹೇಳಿದ.

'ಯಾತಕ್ಕೆ?'

"ಇವನು ಬಹಳ ದುಃಖಿತನಾಗಿದ್ದ."

"ಇವನ ಹತ್ತಿರ ಬಹಳ ದುಡ್ಡಿದೆ."

ಇವರಿಬ್ಬರೂ ಕೆಫೆಯ ಹತ್ತಿರ ಇದ್ದ ಗೋಡೆಗೆ ಲಗತ್ತಾಗಿದ್ದ ಮೇಜಿನ ಮೇಲೆ ಕುಳಿತು ಹೊರಗಿನ ಛಜ್ಜಾ ಕಡೆ ನೋಡುತ್ತಾ ಇದ್ದರು. ಅಲ್ಲಿ ಒಂದು ಟೇಬಲ್ ಬಿಟ್ಟು ಇನ್ನೆಲ್ಲ ಟೇಬಲ್‌ಗಳು ಖಾಲಿ ಇದ್ದವು. ಗಾಳಿಗೆ ಅಲುಗಾಡುತ್ತಿದ್ದ ಎಲೆಗಳ ನೆರಳಿನಲ್ಲಿ ಆ ಮುದುಕ ಈಗಲೂ ಅಲ್ಲೇ ಕೂತಿದ್ದ . ಕೆಫೆಯ ಹೊರಗಡೆ ಬೀದಿಯಲ್ಲಿ ಒಬ್ಬ ಸೈನಿಕ ಒಂದು ಹುಡುಗಿಯ ಜೊತೆ ಹೋಗುತ್ತಿದ್ದ.

"ಇವನನ್ನು ಗಾರ್ಡ್‌ಗಳು ಹಿಡಿದುಕೊಳ್ಳುತ್ತಾರೆ" ಎಂದು ಒಬ್ಬ ವೇಟರ್ ಹೇಳಿದ.

"ಇವನು ಏನು ಬಯಸುತ್ತಾನೋ ಅದು ಸಿಕ್ಕಿದ ಮೇಲೆ ಅದರಿಂದ ಅವನಿಗೆ ಏನು ವ್ಯತ್ಯಾಸವಾಗುತ್ತೆ?"

ಇದೇ ಬೀದಿಯಿಂದ ಹೊರಟುಹೋಗಬೇಕು, ಇಲ್ಲದೆ ಇದ್ದರೆ ಇವನನ್ನು ಗಾರ್ಡ್‌ಗಳು ಹಿಡಿದುಕೊಳ್ಳುತ್ತಾರೆ. ಈಗಿನ್ನೂ ಐದೇ ನಿಮಿಷಕ್ಕೆ ಮುಂಚೆ ಇಲ್ಲಿಂದ ಹೋಗಿದ್ದಾರೆ. ನೆರಳಿನಲ್ಲಿ ಕುಳಿತಿರುವ ಮುದುಕ ತನ್ನ ಗ್ಲಾಸಿನಿಂದ ಪ್ಲೇಟಿಗೆ ಹೊಡೆದು ಸದ್ದು ಮಾಡಿದ. ಯುವಕ ವೇಟರ್ ಅವನ ಹತ್ತಿರ ಹೋಗಿ–"ಏನು ಬೇಕು ನಿನಗೆ" ಅಂದ.

ಮುದುಕ ಅವನ ಕಡೆ ನೋಡಿದ.

–"ಇನ್ನೊಂದು ಗ್ಲಾಸ್ ಬ್ರಾಂದಿ" ಅವನು ಹೇಳಿದ

"ನಿನಗೆ ನಶೆ ಏರುತ್ತೆ"– ವೇಟರ್ ಹೇಳಿದ.

–ಮುದುಕ ಅವನ ಮಾತಿಗೆ ಉತ್ತರಿಸದೆ ಸುಮ್ಮನೆ ಅವನ ಕಡೆ ನೋಡಿದ.

–"ಇವನು ಇಡೀ ರಾತ್ರಿ ಇಲ್ಲೇ ಇರುತ್ತಾನೆ"– ಎಂದು ತನ್ನ ಜೊತೆಗಾರನಿಗೆ ಹೇಳಿದ.

–"ಆದರೆ ನನಗೆ ನಿದ್ದೆ ಬರುತ್ತಾ ಇದೆ. ನನಗೆ ಯಾವತ್ತೂ ಮೂರು ಗಂಟೆಗೆ ಮುಂಚೆ ನಿದ್ದೆ ನನ್ನ ಹಣೇಲಿ ಬರೆದಿಲ್ಲ.. ಇವನು ಹೋದ ವಾರಾನೇ ಆತ್ಮ ಹತ್ಯೆ ಮಾಡಿಕೊಳ್ಳ ಬೇಕಿತ್ತು."

ವೇಟರ್ ಕೌಂಟರ್‌ನಿಂದ ಬ್ರಾಂದಿ ಬಾಟಲ್ ಮತ್ತು ಒಂದು ಪ್ಲೇಟ್ ಎತ್ತಿಕೊಂಡು ಆ ಮುದುಕನ ಕಡೆಗೆ ನಡೆದ. ಪ್ಲೇಟ್ ಕೆಳಗಿಟ್ಟು ಗ್ಲಾಸ್ ತುಂಬ ಬ್ರಾಂದಿ ಸುರಿದ.

–"ನೀನು ಹೋದ ವಾರಾನೇ ಆತ್ಮ ಹತ್ಯೆ ಮಾಡಿಕೋಬೇಕಾಗಿತ್ತು".

ಮುದುಕ ತನ್ನ ಬೆರಳು ಆಡಿಸಿ ಹೇಳಿದ–"ಇನ್ನು ಸ್ವಲ್ಪ!" ವೇಟರ್ ಇನ್ನು ಸ್ವಲ್ಪ

ಸುರಿದ. ಅದು ಹರಿದು ಕೆಳಗಡೆ ಇಟ್ಟಿದ್ದ ಪ್ಲೇಟ್‌ನಲ್ಲಿ ಬೀಳತೊಡಗಿತು. ವೇಟರ್ ತನ್ನ ಜೊತೆಗಾರನೊಂದಿಗೆ ಮೇಜಿನ ಮೇಲೆ ಬಂದು ಕುಳಿತ.

–"ಈಗ ಇವನು ನಶೆಯಲ್ಲಿದ್ದಾನೆ" ಅವನು ಹೇಳಿದ.

"ಇವನಂತೂ ಪ್ರತಿ ರಾತ್ರಿಯಲ್ಲೂ ನಶೆಯಲ್ಲಿರುತ್ತಾನೆ."

"ಏಕೆ ಆತ್ಮ ಹತ್ಯೆ ಮಾಡಿಕೊಳ್ಳಬೇಕು ಅಂತ ಬಯಸುತ್ತಾನೆ?"

– "ನನಗೇನು ಗೊತ್ತು!"

– "ಯಾವ ಥರದ ಪ್ರಯತ್ನ ಮಾಡಿದ್ದ ಇವನು?"

––"ಹಗ್ಗಕ್ಕೆ ತನಗೆ ತಾನೇ ನೇತುಹಾಕಿಕೊಂಡಿದ್ದ."

– "ಇವನ ಹಗ್ಗಾನ ಯಾರು ಕತ್ತರಿಸಿದರು?"

–"ಇವನ ಸೋದರಳಿಯ."

–"ಆದರೆ ಇವನು ಯಾಕೆ ಹೀಗೆ ಮಾಡಿಕೊಂಡ?"

–"ಬಹುಶಃ ಆತ್ಮ ಹತ್ಯೆಯ ಭಯದಿಂದ.."

"ಇವನ ಹತ್ತಿರ ಎಷ್ಟು ದುಡ್ಡಿದೆ?"

–"ಸಾಕಷ್ಟಿದೆ."

"ಇವನಿಗೆ ಖಂಡಿತಾ ಎಂಬತ್ತು ವರ್ಷವಂತೂ ಆಗಿರಲೇ ಬೇಕಲ್ಲವೆ?"

"ಇವನು ಈಗ ಮನೆಗೆ ಹೋಗಿಬಿಡಲಿ ಅಂತ ನನ್ನ ಆಸೆ. ನಾನು ಯಾವಾಗಲೂ ಮೂರಕ್ಕೆ ಮುಂಚೆ ನಿದ್ದೆ ಹೋಗಲ್ಲ. ಈಗ ಇವನೂ ನಿದ್ದೆ ಮಾಡೋ ಹೊತ್ತು."

–"ಇವನು ಕೂತಿರುತ್ತಾನೆ. ಇವನಿಗೆ ಈ ಜಾಗ ತುಂಬ ಇಷ್ಟ."

–"ಇವನು ಒಬ್ಬಂಟಿ. ಆದರೆ ನಾನು ಹಾಗಲ್ಲ. ನನ್ನ ಹೆಂಡತಿ ನನ್ನ ನಿರೀಕ್ಷೆಯಲ್ಲಿರುತ್ತಾಳೆ."

"ಅವನಿಗೂ ಹೆಂಡತಿ ಇದ್ದಾಳೇನು?'

–"ಹೂಂ ಇದ್ದಾಳೆ. ಆದರೆ ಇವನ ಸೋದರಳಿಯನೇ ಇವನನ್ನು ನೋಡಿಕೊಳ್ತಿರೋದು"

–"ನನಗೆ ಗೊತ್ತಿದೆ. ಅವನೇ ಇವನ ನೇಣಿನ ಹಗ್ಗವನ್ನು ಕತ್ತರಿಸಿದ್ದ ಅಂತ ನೀನೇ ಹೇಳಿದ್ದೆ. ನಾನು ಯಾವತ್ತೂ ಇಷ್ಟೊಂದು ಮುದುಕನಾಗಕ್ಕೆ ಬಯಸಲ್ಲ. ಮುದಿತನ ತುಂಬ ದರಿದ್ರದ್ದು."

–"ನನಗೆ ಇವನನ್ನು ನೋಡಕ್ಕೆ ಇಷ್ಟವಿಲ್ಲ. ಇವನು ಮನೆಗೆ ಹೋಗಿಬಿಟ್ಟರೆ ಒಳ್ಳೆಯದು." ಮುದುಕ ಗ್ಲಾಸ್‌ನಿಂದ ತಲೆ ಮೇಲಕ್ಕೆ ಎತ್ತಿ ಮೊದಲು ಆಚೆಕಡೆ ನೋಡಿದ. ನಂತರ

ವೇಟರುಗಳ ಕಡೆ ನೋಡಿ –"ಇನ್ನೊಂದು ಬ್ರಾಂದಿ!" –ಎಂದು ಗ್ಲಾಸಿನ ಕಡೆಗೆ ಸನ್ನೆ ಮಾಡುತ್ತ ಹೇಳಿದ. ಬೇಗ ಹೋಗಬೇಕು ಅಂತಿದ್ದ ವೇಟರ್ ಅವನ ಹತ್ತಿರ ಬಂದ.

––"ಮುಗಿದು ಹೋಯಿತು!"–ಅವನು ತೀವ್ರ ನಶೆಯಲ್ಲಿ ಹೇಳಿದ.

–"ಈ ರಾತ್ರಿ ಮತ್ತೆ ಕೊಡಲ್ಲ. ಈಗ ಬಂದಾಗುತ್ತೆ"

––"ಇನ್ನೊಂದು!" ಮುದುಕ ಹೇಳಿದ

–"ಇಲ್ಲ. ಆಗಿಹೋಯಿತು!' ವೇಟರ್ ಮೇಜನ್ನು ಕ್ಲೀನ್ ಮಾಡುತ್ತ ಹೇಳಿದ.

ನಿಧಾನವಾಗಿ ಪ್ಲೇಟುಗಳನ್ನು ಎಣಿಸುತ್ತ ಮುದುಕ ಎದ್ದು ನಿಂತ. ನಂತರ ಪರ್ಸ್ ತೆಗೆದು ಹಣ ಕೊಟ್ಟುಬಿಟ್ಟ. ಅರ್ಧ ಪೇಸ್ಟಾ ಟಿಪ್ಸ್ ಕೂಡ ಬಿಟ್ಟ. ವೇಟರ್ ಅವನು ಹೋಗುತ್ತಾ ಇದ್ದದ್ದು ನೋಡಿದ. ಮುದುಕನ ನಡಿಗೆ ಅಸ್ಥಿರವಾಗಿತ್ತು; ಆದರೆ ಅದರಲ್ಲಿ ಒಂದು ಠೀವಿ ಇತ್ತು.

–"ನೀನು ಅವನಿಗೆ ಕೂತುಕೊಂಡು ಕುಡಿಯೋದಕ್ಕೆ ಏಕೆ ಬಿಡಲಿಲ್ಲ?" ಯಾರಿಗೆ ಹೋಗುವ ಅವಸರ ಇರಲಿಲ್ಲವೋ ಆ ವೇಟರ್ ಕೇಳಿದ.– "ಇನ್ನೂ ಎರಡೂವರೆ ಗಂಟೆ ಕೂಡ ಆಗಿಲ್ಲ"

– "ನಾನು ಮಲಗಲು ಮನೆಗೆ ಹೋಗುತ್ತೇನೆ"

– "ಒಂದು ಗಂಟೆಯಲ್ಲಿ ಅಂಥ ಏನು ವ್ಯತ್ಯಾಸ ಆಗುತ್ತೆ?"

– "ನನಗೆ ಅದು ತುಂಬ ವ್ಯತ್ಯಾಸ ಉಂಟುಮಾಡುತ್ತೆ."

– "ಆದರೆ ಒಂದು ಗಂಟೆ ಒಂದು ಗಂಟೇನೆ."

– "ನೀನೇ ಒಬ್ಬ ಮುದುಕನ ಥರ ಮಾತಾಡ್ತಾ ಇದ್ದೀಯ. ಅವನು ಬಾಟಲ್ ಕೊಂಡುಕೊಂಡು ಮನೇಲಿ ಕುಡೀ ಬಹುದು"

–"ಮನೆಯಲ್ಲಿ ಕುಡಿಯೋ ಮಾತಲ್ಲ"

– "ನಿಜ. ಆ ಮಾತಲ್ಲ." ..... ವಿವಾಹಿತ ವೇಟರ್ ಹೇಳಿದ.

– "ಇನ್ನು ನೀನು, ನಿನಗೆ ಬೇಗ ಮನೆಗೆ ಹೋಗಕ್ಕೆ ಹೆದರಿಕೆ ಆಗಲ್ಲ ತಾನೆ?"

– "ನೀನು ನನಗೆ ಅವಮಾನ ಮಾಡಬೇಕು ಅಂತ ಇದ್ದೀಯಾ?"

– "ಇಲ್ಲ, ನಾನು ತಮಾಷೆ ಮಾಡ್ದೆ ಅಷ್ಟೆ."

– "ಇಲ್ಲ"– ಷಟರ್ ಕೆಳಕ್ಕೆ ಎಳೆಯುತ್ತ ಆ ವೇಟರ್ ಹೇಳಿದ. ಆ ಮೇಲೆ ಬೇಗ ಹೋಗಬೇಕು ಅಂತ ಇದ್ದವನು, ಮತ್ತೆ ಅವನು ಅವನಿಗೆ ಹೇಳಿದಸ– "ನನಗೆ ಪೂರಾ ನಂಬಿಕೆ ಇದೆ."

–"ನಿನ್ನ ಹತ್ತಿರ ಎಲ್ಲಾ ಇದೆ......"

––"ನಿನಗೇನು ಕೊರತೆ ಆಗಿರೋದು?"

–"ಈ ಕೆಲಸ ಒಂದು ಬಿಟ್ಟು ಇನ್ನೆಲ್ಲದರದೂ"

–"ನನ್ನ ಹತ್ತಿರ ಇರೋದೆಲ್ಲ ನಿನ್ನ ಹತ್ತಿರಾನೂ ಇದೆ."

–"ಇಲ್ಲ, ನಂಬಿಕೆ ಅನ್ನುವುದು ನನ್ನಲ್ಲಿ ಯಾವತ್ತೂ ಇರಲೇ ಇಲ್ಲ. ಇನ್ನು ಈಗಂತೂ ಯುವಕನೂ ಅಲ್ಲ."

–"ಈ ಹರಟೆ ಸಾಕಿನ್ನು. ಲಾಕ್ ಮಾಡು."

–"ರಾತ್ರಿ ಬಹಳ ಹೊತ್ತಿನ ವರೆಗೆ ಕೆಫೆಯಲ್ಲಿರಬೇಕೆಂದು ಇಚ್ಛಿಸುವವರ, ರಾತ್ರಿಯ ಹೊತ್ತು ಬೆಳಕು ಬೇಕೆಂದು ಬಯಸುವವರ ಪೈಕಿ ನಾನು"

–"ನಾನಂತೂ ಮನೆಗೆ ಹೋಗಿ ನಿದ್ದೆಮಾಡಲಿಚ್ಛಿಸುವವನು"

––"ಈ ಕೆಫೆಯ ಅಗತ್ಯ ಇರುವಂಥ ಯಾರಾದರೂ ವ್ಯಕ್ತಿ ಇರಬಹುದೇನೋ ಎನ್ನುವ ಯೋಚನೆಯಿಂದ ಪ್ರತಿ ರಾತ್ರಿ ಕೆಫೆ ಮುಚ್ಚಲು ನಾನು ಹಿಂದುಮುಂದು ನೋಡುತ್ತೇನೆ."

–"ಬಹಳಷ್ಟು ಮದ್ಯದ ಅಂಗಡಿಗಳು ರಾತ್ರಿಯೆಲ್ಲಾ ತೆರೆದಿರುತ್ತವೆ".

–"ನಿನಗೆ ಗೊತ್ತಿಲ್ಲ, ಇದೊಂದು ಸ್ವಚ್ಛವಾದ ಕೆಫೆ. ಇಲ್ಲಿ ಬೆಳಕೂ ಸಾಕಷ್ಟಿದೆ. ಜೊತೆಗೆ ಎಲೆಗಳ ನೆರಳೂ ಇದೆ."

ಅವನು ವಿದ್ಯುದ್ದೀಪಗಳನ್ನು ಆರಿಸುತ್ತ ತನಗೆ ತಾನೆ ಮಾತಾಡಿಕೊಳ್ಳತೊಡಗಿದ. "ಬೆಳಕು ತೀರಾ ಇರಲೇ ಬೇಕು. ಜೊತೆಗೆ ಜಾಗವೂ ಸ್ವಚ್ಛವಾಗಿ ಮತ್ತು ಚೆನ್ನಾಗಿರಬೇಕು. ಸಂಗೀತವಂತೂ ಖಂಡಿತ ಇರಲೇಬಾರದು........ಸಂಗೀತದ ಆವಶ್ಯಕತೆ ಖಂಡಿತಾ ಇಲ್ಲ. ಅಲ್ಲದೆ ಬಾರ್ ಎದುರುಗಡೆ ಯಾರೂ ಮರ್ಯಾದೆಯಿಂದ ನಿಂತುಕೊಳ್ಳೋಕಂತೂ ಆಗಲ್ಲ. ಆದ್ದರಿಂದಲೇ ರಾತ್ರಿಯ ಈ ಸಮಯದಲ್ಲಿ ಇಲ್ಲಿ ಬಾರ್‌ಗಳು ತೆರೆದಿರುತ್ತವೆ. ಅವನಿಗೆ ಯಾವ ವಿಷಯಕ್ಕೆ ಭಯ ಇತ್ತು? ಇದು ಭಯವಂತೂ ಆಗಿರಲಿಲ್ಲ. ಇದೊಂದು ಬಗೆಯ ಶೂನ್ಯತೆ. ತಾನೇ ಒಂದು ಶೂನ್ಯವಾಗಿದ್ದ ಅವನಿಗೆ ಇದು ಚೆನ್ನಾಗಿ ಗೊತ್ತಿತ್ತು. ಎಷ್ಟು ಬೇಕೋ ಅಷ್ಟು ಬೆಳಕು ಮತ್ತು ಸ್ವಲ್ಪ ಮಟ್ಟಿನ ಸ್ವಚ್ಛತೆ ಇತ್ತು. ಕೆಲವರಂತೂ ಇದನ್ನೆಲ್ಲ ಅನುಭವಕ್ಕೆ ತಂದುಕೊಳ್ಳದೆಯೇ ಶೂನ್ಯತೆಯಲ್ಲಿರುತ್ತಾರೆ. ಆದರೆ ಇದು ಕೇವಲ ಶೂನ್ಯತೆ ಎಂಬುದು ಅವನಿಗೆ ಗೊತ್ತಿತ್ತು."

– "ಹೇ ನಮ್ಮ ಶೂನ್ಯತೆಯೆ ನಮಗೆ ನಮ್ಮ ಪ್ರತಿದಿನದ ಶೂನ್ಯತೆಯನ್ನು ಕೊಟ್ಟುಬಿಡು! ಶೂನ್ಯರಾದ ನಮಗೆ ನಮ್ಮ ಶೂನ್ಯತೆಯನ್ನು ಕೊಟ್ಟುಬಿಡು. ಕಾರಣ ನಾವು ನಮ್ಮ

ಶೂನ್ಯತೆಯನ್ನು ಶೂನ್ಯವೆಂದು ಭಾವಿಸುತ್ತೇವೆ. ಶೂನ್ಯತೆಯಲ್ಲಿ ನಮ್ಮನ್ನು ಶೂನ್ಯರನ್ನಾಗಿಸಬೇಡ. ಆದರೆ ಈ ಶೂನ್ಯತೆಯಿಂದ ಬಿಡುಗಡೆ ಕೊಡಿಸು. ಹೇ ಶೂನ್ಯತೆಯೇ ನಿನಗೆ ಸ್ವಾಗತ, ಏಕೆಂದರೆ ನಿನ್ನ ಬಳಿ ಏನೇನೂ ಇಲ್ಲ."

ಚೆನ್ನಾಗಿ ಹೊಳೆಹೊಳೆಯುವ ಒಂದು ಕಾಫಿಯ ಬಾರ್ ಮುಂದೆ ಅವನು ನಿಂತ.

–"ಏನು ಬೇಕು?" ಬಾರ್‌ನವನುಕೇಳಿದ.

–ಮೌನ.

"ಒಂದು ಸಣ್ಣ ಕಪ್ ಬೇಕಾ."? ಬಾರ್‌ಮನ್ ಹೇಳಿದ.

–ಹೌದು ಒಂದು ಸಣ್ಣ ಕಪ್, ವೇಟರ್ ಹೇಳಿದ.

"ಬೆಳಕಂತೂ ಬಹಳ ಹೊಳೀತಾ ಇದೆ, ಮತ್ತು ತುಂಬಾ ಚೆನ್ನಾಗಿದೆ. ಆದರೆ ಬಾರ್ ಸ್ವಚ್ಛವಾಗಿಲ್ಲ"– ವೇಟರ್ ಹೇಳಿದ.

–"ನಿನಗೆ ಇನ್ನೊಂದು ಕೋಪಿರಾ(ಕಾಫಿ?)"

–"ಬೇಡ. ಥ್ಯಾಂಕ್ ಯು." ವೇಟರ್ ಹೇಳಿದ. ಹಾಗೆ ಹೇಳಿ ಹೊರ ನಡೆದ. ಅವನಿಗೆ ಬಾರ್ ಮತ್ತು ಪಡಖಾನೆಗಳೆಂದರೆ ತಿರಸ್ಕಾರ. ಆದರೆ ಒಂದು ಸ್ವಚ್ಛವಾದ ಮತ್ತು ಬೆಳಕಿನಿಂದ ಝಗಮಗಿಸುತ್ತಿರುವ ಕೆಫೆಯ ವಿಷಯ ಬೇರೆ. ಈಗ ಅವನು ಬೇರೆ ಇನ್ನೇನನ್ನೂ ಯೋಚಿಸದೆ ತನ್ನ ಮನೆಗೆ, ತನ್ನ ರೂಮಿಗೆ ಹೋಗಿಬಿಡುತ್ತಾನೆ. ತನ್ನ ಹಾಸಿಗೆಯಲ್ಲಿ ಮಲಗಿದ್ದು ಕೊನೆಯಲ್ಲಿ ಸೂರ್ಯೋದಯದೊಂದಿಗೆ ನಿದ್ರಿಸಿಬಿಡುವನು.

–ಬಹುಶಃ ಇದು ನಿದ್ರಾಹೀನತೆಯ ರೋಗ. ಬಹಳಷ್ಟು ಜನ ಇದರ ಬಲಿಪಶುಗಳಾಗಿರುತ್ತಾರೆ ಎಂದು ಯೋಚಿಸಿದ.

❖

ಎದೆಯ ದನಿ

ಇಂಗ್ಲಿಷ್ ಮೂಲ : ಎಡ್ಗರ್ ಅಲೆನ್ ಪೋ

ನಿಜ. ನಾನು ತುಂಬಾ ಗಾಬರಿಗೊಂಡುಬಿಟ್ಟಿದ್ದೆ. ಈಗಲೂ ಗಾಬರಿಗೊಳ್ಳುತ್ತಿದ್ದೇನೆ. ಆದರೆ ನೀವು ನನಗೆ ಹುಚ್ಚನೆಂಬ ಪಟ್ಟ ಕಟ್ಟಲಿದ್ದೀರಾ? ಈ ರೋಗ ನನ್ನ ಚೇತನವನ್ನು ನಾಶಮಾಡಲೂ ಇಲ್ಲ; ಕ್ಷೀಣಗೊಳಿಸಲೂ ಇಲ್ಲ. ಬದಲಿಗೆ ಇದರಿಂದಾಗಿ ನನ್ನ ಚೇತನ ಇನ್ನಷ್ಟು ಚುರುಕುಗೊಂಡಿದೆ. ಕೇಳಿಸಿಕೊಳ್ಳುವ ಶಕ್ತಿ ಪೂರ್ಣ ರೀತಿಯಲ್ಲಿ ದೃಢವಾಗಿತ್ತು. ಪರಲೋಕದ ಮತ್ತು ಈ ಲೋಕದ ಎಲ್ಲ ಸಂಗತಿಗಳನ್ನೂ ನಾನು ಕೇಳಿಸಿಕೊಳ್ಳಬಲ್ಲವನಾಗಿದ್ದೆ.

ಹಾಗಿದ್ದ ಮೇಲೆ ನಾನು ಹುಚ್ಚ ಹೇಗಾಗುತ್ತೀನಿ? ಗಮನವಿಟ್ಟು ಕೇಳಿ. ನೀವೇ ನೋಡಿ, ಅದೆಷ್ಟು ಸಹಜವಾಗಿ ಆರಾಮವಾಗಿ ನಿಮಗೆ ನನ್ನ ಪೂರ್ತಿ ಕತೆ ಹೇಳ್ತಾ ಇದ್ದೀನಿ.

ಎಲ್ಲಕ್ಕಿಂತ ಮೊದಲು ನನ್ನ ಬುದ್ಧಿಯಲ್ಲಿ ಈ ಒಂದು ವಿಕೃತಿ ಯಾವಾಗ ಹುಟ್ಟಿಕೊಂಡಿತು ಎಂದು ಹೇಳಲು ಸಾಧ್ಯವಿಲ್ಲ. ಆದರೆ ಒಂದು ಸಲ ಇದು ನನ್ನ ಮನಸ್ಸಿಗೆ ಬಂತು ಅಂದರೆ ಹಗಲು ರಾತ್ರಿ ಅದು ನನ್ನನ್ನು ಪೀಡಿಸುತ್ತಿತ್ತು

ಬೇರೆ ಏನೂ ಉದ್ದೇಶ ಇರುತ್ತಿರಲಿಲ್ಲ. ಹುಚ್ಚು ಇರಲಿಲ್ಲ. ನಾನು ಆ ಮುದುಕನನ್ನು ಇಷ್ಟಪಡುತ್ತಿದ್ದೆ.

ನನಗೇನೂ ಕೆಟ್ಟದ್ದು ಮಾಡಿರಲಿಲ್ಲ ಅವನು. ಯಾವತ್ತೂ ನನಗೆ ಅಪಮಾನವನ್ನೂ ಮಾಡಿರಲಿಲ್ಲ. ಅವನ ಸಂಪತ್ತನ್ನು ದಕ್ಕಿಹಾಕಿಕೊಳ್ಳುವ ದುರಾಸೆಯೇನೂ ನನಗಿರಲಿಲ್ಲ. ನನ್ನ ಲೆಕ್ಕದಲ್ಲಿ ಅವನ ಕಣ್ಣು-ಹೌದು ಅವನ ಕಣ್ಣೇ ಇದಕ್ಕೆ ಕಾರಣವಾಗಿತ್ತೆ? ಅವನ ಒಂದು ಕಣ್ಣು ಥೇಟು ಹದ್ದಿನ ಕಣ್ಣಿನ ಹಾಗಿತ್ತು, ಕಾಂತಿಹೀನ ಮತ್ತು ನೀಲಿ ಕಣ್ಣು-ಪೊರೆ ಮುಸುಕಿದ ಕಣ್ಣು. ಅವನ ದೃಷ್ಟಿ ನನ್ನ ಮೇಲೆ ಬಿದ್ದರೆ ಸಾಕು, ನನ್ನ ರಕ್ತ ಹೆಪ್ಪುಗಟ್ಟುತ್ತಿತ್ತು. ಕ್ರಮೇಣ ಈ ವಿಷಯ ಎಲ್ಲಿಯವರೆಗೂ ಹೋಯಿತಪ್ಪ ಅಂದರೆ ಈ ಕಣ್ಣಿನಿಂದ ಶಾಶ್ವತವಾಗಿ ಬಿಡುಗಡೆ ಪಡೆಯಬೇಕು ಅಂದರೆ ಆ ಮುದುಕನ ಪ್ರಾಣ ತೆಗೆದುಬಿಡಬೇಕು ಅಂತ ನಾನು ನಿಶ್ಚಯಿಸುವ ತನಕ ಹೋಗಿಬಿಟ್ಟಿತು. ವಾಸ್ತವ ಸಂಗತಿ ಇಷ್ಟೇ. ಇದೆಲ್ಲ ಕೇಳಿದ ಮೇಲೆ ಬಹುಶಃ ನೀವು ನನ್ನನ್ನು ಹುಚ್ಚ ಅಂತ ಕರೆಯಬಹುದು. ಆದರೆ ಹುಚ್ಚನಾದವವನಿಗೆ ಏನೇನೂ ತಿಳುವಳಿಕೆ ಇರಲ್ಲ. ಓಹ್! ಅದೆಷ್ಟು ಬುದ್ಧಿವಂತಿಕೆಯಿಂದ ನಾನು ನನ್ನ ಯೋಜನೆಯನ್ನು ಸಿದ್ಧಪಡಿಸಿದೆ ಅಂತ ನೀವು ನನ್ನನ್ನು ನೋಡಬೇಕಿತ್ತು! ಎಷ್ಟು ಎಚ್ಚರಿಕೆಯಿಂದ, ಎಷ್ಟು ದೂರದರ್ಶಿತನದಿಂದ, ಯಾರಿಗೂ ಸುಳಿವು ಸಿಗದ ಹಾಗೆ ಗುಟ್ಟಾಗಿ ನಾನು ನನ್ನ ಕೆಲಸ ಶುರು ಮಾಡಿದೆ.

ಆ ಮುದುಕನ ಕೊಲೆ ಮಾಡುವುದಕ್ಕೆ ಮುಂಚೆ ಈ ವಾರದಲ್ಲಿ ನಾನು ದಯಾಳು ಆಗಿದ್ದಷ್ಟು ಅವನ ವಿಷಯದಲ್ಲಿ ಯಾವತ್ತೂ ದಯಾಳು ಆಗಿರಲಿಲ್ಲ. ಪ್ರತಿ ದಿನ ಸುಮಾರು ಅರ್ಧ ರಾತ್ರಿಯ ಹೊತ್ತಿಗೆ ನಾನು ಅವನ ಬಾಗಿಲಿನ ಅಗಳಿ ತಿರುಗಿಸಿ ನಿಧಾನವಾಗಿ ಬಾಗಿಲು ತೆಗೆಯುತ್ತಿದ್ದೆ. ನನ್ನ ತಲೆ ಅದರ ಒಳಗೆ ತೂರಿಸುವಷ್ಟು ಬಾಗಿಲು ಸರಿಸಿದ ಮೇಲೆ ಆರಿದ ಲಾಟೀನನ್ನು ಒಳಗಡೆ ಇಡುತ್ತಿದ್ದೆ. ಒಂದು ಚೂರೂ ಬೆಳಕು ಇರಬಾರದು ಅನ್ನುವ ಕಾರಣಕ್ಕೆ ಪೂರ್ತಿ ಆರಿಹೋಗಿರುವ ಲಾಟೀನು. ಆಮೇಲೆ ನಿಧಾನವಾಗಿ ನನ್ನ ತಲೆಯನ್ನು ಅದರಲ್ಲಿ ತೂರಿಸುತ್ತಿದ್ದೆ. ಓಹ್! ನಾನು ಅದೆಷ್ಟು ಚಾತುರ್ಯದಿಂದ ನನ್ನ ತಲೆಯನ್ನು ಅದರಲ್ಲಿ ತೂರಿಸುತ್ತಿದ್ದೆ ಅಂತ ನೀವು ನೋಡಿದ್ದರೆ ಬಹುಶಃ ನಕ್ಕು ಬಿಡುತ್ತಿದ್ದಿರಿ. ನಾನು ಅದನ್ನು ತೂರಿಸುತ್ತಿದ್ದೆ-ಆ ಮುದುಕ ಎಚ್ಚರಗೊಂಡು ಬಿಟ್ಟಾನೆಂದು ತುಂಬ ನಿಧಾನವಾಗಿ ತೂರಿಸುತ್ತಿದ್ದೆ. ಹೀಗೆ ಮಾಡಕ್ಕೆ ನನಗೆ ಪೂರಾ ಒಂದು ಗಂಟೆ ಬೇಕಾಗುತ್ತಿತ್ತು. ಮತ್ತೆ ಹೇಗೋ ಮಾಡಿ ಕಿಂಚಿತ್ ತೆರೆದ ಬಾಗಿಲಿನಿಂದ ನನ್ನ ತಲೆಯನ್ನು ಪೂರ್ತಿಯಾಗಿ ತೂರಿಸಿದ ಮೇಲೆ ಆ ಮುದುಕ ಹಾಸಿಗೆಯ ಮೇಲೆ ಮಲಗಿರೋದನ್ನು ನೋಡಲು ಸಾಧ್ಯವಾಗುತ್ತಿತ್ತು. ಈಗ ನೀವೇ

ಹೇಳಿ ಹುಚ್ಚನಾದವನು ಹೀಗೆಲ್ಲಾದರೂ ಇಷ್ಟೊಂದು ಚಾತುರ್ಯ ತೋರಿಸುತ್ತಾನಾ? ಹೀಗೆ ನನ್ನ ತಲೆಯನ್ನು ಪೂರ್ತಿಯಾಗಿ ಒಳಕ್ಕೆ ತೂರಿಸಿದ ಮೇಲೆ ನಿಧಾನವಾಗಿ ಲಾಟೀನು ಹತ್ತಿಸುತ್ತಿದ್ದೆ.–ಬಹಳ ಎಚ್ಚರಿಕೆಯಿಂದ.(ಕಾರಣ ಹಾಗೆ ಮಾಡುವಾಗಲೂ ಸರಪರ ಸದ್ದು ಆಗುತ್ತಿತ್ತು.)ಅದೆಷ್ಟೊಂದು ನಿಧಾನವಾಗಿ ಲಾಟೀನು ಹಚ್ಚುತ್ತಿದ್ದೆ ಅಂದರೆ ತೀರಾ ಮಸುಕಾದ ಒಂದು ಕ್ಷೀಣವಾದ ಬೆಳಕು ಮಾತ್ರ ಅವನ ಹದ್ದಿನ ಕಣ್ಣಿನ ಮೇಲೆ ಬೀಳಬೇಕು ಹಾಗೆ ಹಚ್ಚುತ್ತಿದ್ದೆ. ನಾನು ಈ ಕೆಲಸವನ್ನು ಏಳು ದಟ್ಟ ಕತ್ತಲೆಯ ರಾತ್ರಿಗಳ ತನಕ ಮಾಡುತ್ತಿದ್ದೆ. ಪ್ರತಿ ದಿನ ಅರ್ಧರಾತ್ರಿಗೆ. ಆದರೆ ಆ ಕಣ್ಣು ಸದಾ ಮುಚ್ಚಿರುವ ಹಾಗೇ ಕಾಣಿಸುತ್ತಿತ್ತು. ಇಂಥ ಸ್ಥಿತಿಯಲ್ಲಿ ಈ ಕೆಲಸ ಮಾಡುವುದು ನನಗೆ ಸಾಧ್ಯವೇ ಆಗುತ್ತಿರಲಿಲ್ಲ. ಕಾರಣ ಮುದುಕನ ಬಗ್ಗೆ ನನಗೇನೂ ತಕರಾರು ಇರಲಿಲ್ಲ. ಅವನ ಬರೀ ಈ ದುಷ್ಟ ಕಣ್ಣಷ್ಟೆ ನನಗೆ ಕಷ್ಟ ಕೊಡುತ್ತಾ ಇದ್ದದ್ದು. ಪ್ರತಿ ದಿನ ಬೆಳಿಗ್ಗೆ ನಿರ್ಭಯವಾಗಿ ಆ ಮುದುಕನ ಕೊಠಡಿಗೆ ಹೋಗಿ ಬಹಳ ಧೈರ್ಯವಾಗಿ ಅವನ ಜೊತೆ ಹರಟೆಹೊಡೆಯುತ್ತಿದ್ದೆ. ಬಹಳ ಪ್ರೀತಿಯಿಂದ ಅವನ ಹೆಸರನ್ನು ಹೇಳುತ್ತ ರಾತ್ರಿ ಹೇಗೆ ಕಳೀತು ಅಂತ ಕೇಳುತ್ತಾ ಇದ್ದೆ. ಪ್ರತಿ ದಿನ ಹನ್ನೆರಡು ಗಂಟೆ ರಾತ್ರೀಲಿ ನಾನು ಅವನ ಕೊಠಡಿಯಲ್ಲಿ ಇಣುಕಿ ನೋಡುತ್ತೀನಿ ಅಂತ ಅವನಿಗೆ ಸಂದೇಹವೇ ಬರುತ್ತಿರಲಿಲ್ಲ ನೋಡಿ!

ಎಂಟನೇ ದಿನ ಬಾಗಿಲು ತೆಗೆಯುತ್ತಿರುವಾಗ ಎಂದಿಗಿಂತ ಸ್ವಲ್ಪ ಹೆಚ್ಚಾಗಿಯೇ ಜಾಗರೂಕನಾಗಿದ್ದೆ. ಗಡಿಯಾರದ ನಿಮಿಷದ ಮುಳ್ಳು ಯಾವ ಗತಿಯಲ್ಲಿ ಚಲಿಸುತ್ತದೆಯೋ ಅದಕ್ಕಿಂತಲೂ ನಿಧಾನವಾಗಿ ನಾನು ಬಾಗಿಲು ತೆಗೆದೆ. ಇದಕ್ಕೆ ಮೊದಲು ಎಂದೂ ನನಗೆ ನನ್ನ ಶಕ್ತಿಯ, ಚಾತುರ್ಯದ ಇಂಥ ಅನುಭವ ಆಗಿರಲಿಲ್ಲ. ಬಹಳ ಕಷ್ಟದಿಂದ ನಾನು ಗೆಲುವಿನ ಸಂತಸವನ್ನು ಹಿಂಡಿ ತೆಗೆದುಕೊಳ್ಳುತ್ತಿದ್ದೆ. ನಾನು ಹೇಗೆ ನಿಧಾನವಾಗಿ ಬಾಗಿಲು ತೆಗೆದೆ ಎಂಬುದನ್ನು ನೆನಪಿಸಿಕೊಳ್ಳುತ್ತಿದ್ದೆ. ಅವನಿಗೆ ಕನಸಿನಲ್ಲೂ ನನ್ನ ಒಳಗಡೆ ಅಡಗಿರುವ ವಿಚಾರಗಳ ಸುಳಿವು ಇರಲಿಲ್ಲ. ನನ್ನ ಈ ಗೆಲುವಿನ ವಿಚಾರದಿಂದ ನನ್ನ ಅದುಮಿಟ್ಟಿದ್ದ ನಗೆ ಹೊರಹೊಮ್ಮಿತು. ಬಹುಶಃ ಅವನು ಇದನ್ನು ಕೇಳಿಸಿಕೊಂಡಿದ್ದ. ಕಾರಣ ಒಮ್ಮೆಲೇ ಅವನು ಬೆಚ್ಚಿಬಿದ್ದವನಂತೆ ಮಗ್ಗುಲು ಬದಲಾಯಿಸಿದ. ನಾನು ಹಿಮ್ಮೆಟ್ಟಿರಬಹುದೆಂದು ನೀವು ಯೋಚಿಸುತ್ತಿರಬಹುದು. ಆದರೆ ಇಲ್ಲ; ಹಿಂದೆ ಸರಿಯಲಿಲ್ಲ. ಅವನ ಕೊಠಡಿ ಗಾಢಾಂಧಕಾರದಲ್ಲಿ ಮುಳುಗಿತ್ತು. ಕಳ್ಳರ ಭಯದಿಂದ ಎಲ್ಲ ಬಾಗಿಲುಗಳನ್ನೂ ಎಚ್ಚರಿಕೆಯಿಂದ ಮುಚ್ಚಲಾಗಿತ್ತು. ಹಾಗಾಗಿ ನಾನು ಬಾಗಿಲು

ತೆಗೆಯುತ್ತಿದ್ದುದನ್ನು ಅವನು ನೋಡಲು ಸಾಧ್ಯವಾಗಿರಲಿಲ್ಲ ಎಂದು ನನಗೆ ಗೊತ್ತಿತ್ತು. ನಾನು ನಿರಂತರವಾಗಿ ಬಾಗಿಲು ತೆಗೆಯುತ್ತಲೇ ಹೋದೆ.

ನನ್ನ ತಲೆಯನ್ನು ಪೂರ್ತಿಯಾಗಿ ತೂರಿಸಿಬಿಟ್ಟಿದ್ದೆ. ಇನ್ನೇನು ಲಾಟೀನು ಹಚ್ಚುವವನಿದ್ದೆ. ಆ ಸಮಯಕ್ಕೆ ನನ್ನ ಹೆಬ್ಬೆರಳು ಲಾಟೀನಿನ ಕೆಳಗಡೆಯಿಂದ ಜಾರಿಬಿಟ್ಟಿತು. ಮುದುಕ ಹಾಸಿಗೆಯಲ್ಲಿ ಜಿಗಿದ. "ಯಾರು?" ಎಂದು ಜೋರಾಗಿ ಚೀರುತ್ತ ಕೇಳಿದ.

ನಾನು ಒಮ್ಮೆಲೇ ಅಲ್ಲಾಡದೆ ಸ್ಥಿರವಾಗಿ ನಿಂತೆ. ಏನೂ ಮಾತಾಡಲಿಲ್ಲ. ಸರಿಯಾಗಿ ಒಂದು ಗಂಟೆಯ ತನಕ ನಾನು ಏನೂ ಸದ್ದು ಮಾಡಲಿಲ್ಲ. ಈ ಮಧ್ಯೆ ಅವನು ಮಲಗಿದ ಅಥವಾ ಅಲುಗಾಡಿದ ಏನೊಂದು ಸದ್ದೂ ಕೇಳಿಸಲಿಲ್ಲ. ಅಷ್ಟರ ತನಕ ಅವನು ಹಾಸಿಗೆಯ ಮೇಲೆ ಕುಳಿತುಕೊಂಡು ತಡಕಾಡುತ್ತಿದ್ದ. ಅದು ನಾನು ಪ್ರತಿ ರಾತ್ರಿಯಲ್ಲೂ ಮೃತ್ಯುವಿನ ಮೌನವನ್ನು ಆಲಿಸುತ್ತಿದ್ದೇನೇನೋ ಎನ್ನುವಂತಿತ್ತು.

ಅದೇ ಹೊತ್ತಿಗೆ ಅವನು ಮೆಲ್ಲಗೆ ನರಳುತ್ತಿರುವ ಶಬ್ದ ಕೇಳಿಸಿತು. ಸಾವಿನ ಅಂಚಿನಲ್ಲಿರುವ ವ್ಯಕ್ತಿಯೊಬ್ಬನ ಮರಣದ ಭಯದಿಂದ ಹುಟ್ಟಿದ ನರಳಿಕೆ ಇದು ಎಂಬುದು ನನಗೆ ಗೊತ್ತಿತ್ತು. ಇದು ಯಾವುದೇ ನೋವಿನಿಂದ ಹುಟ್ಟಿದ ನರಳಿಕೆ ಅಲ್ಲ; ಅಲ್ಲವೇ ಅಲ್ಲ! ಇದು ಆತ್ಮದ ಅಂತರಾಳದಿಂದ ಹುಟ್ಟಿದ ಒಂದು ಕ್ಷೀಣ ದನಿ. ಮನುಷ್ಯನನ್ನು ಭಯ ಪೂರ್ಣವಾಗಿ ಆವರಿಸಿದಾಗ ಹುಟ್ಟುವ ದನಿ. ಈ ದನಿಯನ್ನು ನಾನು ಚೆನ್ನಾಗಿ ಬಲ್ಲವನಾಗಿದ್ದೆ. ಬಹಳ ಮಟ್ಟಿಗೆ ಸರಿಯಾಗಿ ಅರ್ಧ ರಾತ್ರಿಯ ಹೊತ್ತಿನಲ್ಲಿ ಇಡೀ ಜಗತ್ತು ನಿದ್ರೆಯಲ್ಲಿ ಮುಳುಗಿದ್ದಾಗ ನನ್ನ ಎದೆಯಿಂದಲೇ ಈ ದನಿ ಹೊರಟಿದೆ. ತನ್ನ ಭಯಂಕರವಾದ ಪ್ರತಿಧ್ವನಿಯೊಂದಿಗೆ ಇದು ಭಯವಾಗಿ ಮಾರ್ಪಟ್ಟು ನನ್ನನ್ನು ವಿಚಲಿತಗೊಳಿಸುತ್ತಿದೆ. ಈ ದನಿ ನನಗೆ ಚೆನ್ನಾಗಿ ಗೊತ್ತಿದೆ ಎಂದು ಮತ್ತೆ ಹೇಳುತ್ತಿದ್ದೇನೆ. ಈ ಮುದುಕ ಅನುಭವಿಸುತ್ತಿರುವುದೇನು ಎಂಬುದು ನನಗೆ ಗೊತ್ತಿತ್ತು. ನನಗೆ ಅವನ ಮೇಲೆ ಕರುಣೆ ಉಂಟಾಯಿತು. ಅದಾಗ್ಯೂ ಒಳಗೊಳಗೇ ನನಗೆ ಖುಷಿಯಾಗುತ್ತಿತ್ತು. ಯಾವಾಗ ಅವನು ಕ್ಷೀಣ ದನಿಯೊಂದನ್ನು ಕೇಳಿದನೋ, ಮತ್ತು ಯಾವಾಗ ಮಗ್ಗುಲು ಬದಲಾಯಿಸಿದನೋ ಆಗಲೇ ಅವನ ನಿದ್ರೆ ಹಾರಿಹೋಯಿತು ಅಂತ ನನಗೆ ಗೊತ್ತಿತ್ತು. ಆ ಕ್ಷಣದಿಂದಲೇ ಒಂದೊಂದು ಕ್ಷಣ ಕಳೆಯುತ್ತಿದ್ದ ಹಾಗೆಯೇ ಅದರ ಜೊತೆ ಜೊತೆಯಲ್ಲೇ ಭಯ ಅವನನ್ನು ಆವರಿಸಿಕೊಳ್ಳುತ್ತಿತ್ತು. ಒಳಗಿನ ಭಯದಿಂದ ಬಿಡಿಸಿಕೊಳ್ಳಬೇಕೆಂದು ಒಂದೇ ಸಮನೆ ಅವನು ಪ್ರಯತ್ನಿಸುತ್ತಿದ್ದರೂ ಅದು ಸಾಧ್ಯವಾಗುತ್ತಿರಲಿಲ್ಲ. ಇದು ಏನೂ ಅಲ್ಲ. ಚಿಮಣಿಯಲ್ಲಿ ಗಾಳಿ ನುಗ್ಗಿದ್ದರ ಶಬ್ದ ಆಗಿರಬಹುದು,–ಅಥವಾ ಇಲಿ ನೆಲದ ಮೇಲೆ ಓಡಿದ ಸದ್ದು ಆಗಿರಬಹುದು, ಚೀಂ ಚೀಂ ಎಂದು ಶಬ್ದ ಮಾಡುವ

ಜೀರುಂಡೆಯ ಶಬ್ದ ಆಗಿರಬಹುದು ಎಂದೆಲ್ಲ ತನಗೆ ತಾನೇ ಮಾತಾಡಿಕೊಳ್ಳುತ್ತಿದ್ದ. ತನಗೆ ತಾನೆ ಧೈರ್ಯ ಹೇಳಿಕೊಳ್ಳುತ್ತಿದ್ದ. ಆದರೆ ಇದೆಲ್ಲ ವ್ಯರ್ಥ ಅಂತಲೂ ಅನ್ನಿಸುತ್ತಿತ್ತು. ಪೂರ್ತಿ ನಿಷ್ಪ್ರಯೋಜಕವಾಗಿತ್ತು . ಕಾರಣ ಸಾವು ಅವನತ್ತ ನುಗ್ಗುತ್ತಿತ್ತು. ಒಂದು ಬಗೆಯ ಕಪ್ಪು ಛಾಯೆ ಅವನ ಸುತ್ತಲೂ ಆವರಿಸಿಕೊಳ್ಳತೊಡಗಿತ್ತು. ನಮ್ಮ ತಿಳಿವಿಗೆ ನಿಲುಕದ ಕಪ್ಪು ಛಾಯೆ ಅದಾಗಿತ್ತು. ಅದರ ಶೋಕಾಕುಲ ಪ್ರಭಾವ ಅವನನ್ನು ಭಯಭೀತನನ್ನಾಗಿ ಮಾಡಿತ್ತು. ಏನೊಂದನ್ನೂ ನೋಡಿರದೆ ಇದ್ದರೂ, ಏನೊಂದನ್ನೂ ಕೇಳಿಸಿಕೊಂಡಿರದೆ ಇದ್ದರೂ ಕೊಠಡಿಯಲ್ಲಿ ನಾನು ಇಣುಕು ಹಾಕಿದ್ದು ಅವನ ಅನುಭವಕ್ಕೆ ಬರುತ್ತಿತ್ತು.

ಬಹಳ ಹೊತ್ತು ಧೈರ್ಯದಿಂದ ಕಾಯುತ್ತಾ ಇದ್ದೆ. ಅವನು ಮಲಗಿದ ಯಾವ ಸದ್ದೂ ಕೇಳಿಬರಲಿಲ್ಲ. ಆಗ ನಾನು ಬಹಳ ನಿಧಾನವಾಗಿ, ಮೆಲ್ಲಗೆ ಲಾಟೀನಿನ ಬೆಳಕನ್ನು ಸ್ವಲ್ಪ ಸ್ವಲ್ಪವೇ ಹೆಚ್ಚು ಮಾಡಲಾರಂಭಿಸಿದೆ. ಅದೆಷ್ಟು ನಿಧಾನವಾಗಿ ಮತ್ತು ಅದೆಷ್ಟು ನಿಶ್ಶಬ್ದವಾಗಿ ನಾನು ಲಾಟೀನಿನ ಬೆಳಕನ್ನು ಹೆಚ್ಚಿಸಿದೆನೆಂದರೆ ಜೇಡರ ನೂಲಿನಷ್ಟು ತೆಳ್ಳನೆಯ ಕಿರಣ ಲಾಟೀನಿನಿಂದ ನೇರವಾಗಿ ಮುದುಕನ ಹದ್ದಿನ ಕಣ್ಣಿನಂಥ ಕಣ್ಣಿನ ಮೇಲೆ ಬಿದ್ದುಬಿಟ್ಟಿತು.

ಆ ಕಣ್ಣು ತೆರೆದಿತ್ತು.–ಪೂರ್ತಿಯಾಗಿ ತೆರೆದಿತ್ತು. ಸಿಟ್ಟಿನಲ್ಲಿ ನಾನು ಹುಚ್ಚನಾದೆ. ಎವೆಯಿಕ್ಕದೆ ಆ ಕಣ್ಣನ್ನು ದುರುಗುಟ್ಟಿಕೊಂಡು ನೋಡಿದೆ. ಮಸಕುಮಸಕಾದ, ಪರೆಗಟ್ಟಿದ ನೀಲಿಯಾದ– ಆ ಶೈತಾನೀ ಕಣ್ಣಿನ ವೈಚಿತ್ರ್ಯವನ್ನು ಸ್ಪಷ್ಟವಾಗಿ ನೋಡಿದೆ. ಅದನ್ನು ನೋಡಿ ನನ್ನ ಮೂಳೆಗಳು ಒಳಗೇ ಒಣಗಿಹೋದವು. ಅದರ ಹೊರತಾಗಿ ನನಗೆ ಮುದುಕನ ಮುಖ ಅಥವಾ ಶರೀರದ ಯಾವ ಭಾಗವೂ ಕಾಣಲಿಲ್ಲ. ಕಾರಣ ಯಾವುದೋ ಒಂದು ದುಷ್ಟ ಭಾವನೆಯ ಆವೇಶಕ್ಕೊಳಗಾಗಿ ಬೆಳಕಿನ ಕಿರಣವನ್ನು ಕೇವಲ ಆ ಶೈತಾನಿ ಕಣ್ಣಿನ ಮೇಲೆಯೇ ನೆಟ್ಟಗೆ ನಿಲ್ಲಿಸಿದ್ದೆ.

ಆಮೇಲೆ ಯಾವುದನ್ನು ನೀವು ಹುಚ್ಚು ಅಂತ ಹೇಳ್ತೀರಿ ಅದು ವಾಸ್ತವದಲ್ಲಿ ಬೇರೆ ಏನೂ ಅಲ್ಲ; ಇಂದ್ರಿಯಗಳು ಮಿತಿಯನ್ನು ಮೀರಿ ತೀಕ್ಷ್ಣವಾಗುವುದೇ ಹುಚ್ಚು ಅಂತ ನಾನು ನಿಮಗೆ ಹೇಳಲಿಲ್ಲವೆ? ಈಗ ನಾನು ಹೇಳ್ತೀನಿ– ನನ್ನ ಕಿವಿಯಲ್ಲಿ ಒಂದು ನಿಧಾನ ಗತಿಯ, ದುರ್ಬಲವಾದ , ಬಟ್ಟೆಯಲ್ಲಿ ಸುತ್ತಿಟ್ಟಿರುವ ಗಡಿಯಾರದಿಂದ ಬರುವಂತೆ ಶಬ್ದವೊಂದು (ದನಿಯೊಂದು) ಬರತೊಡಗಿತು. ನನಗೆ ಈ ಶಬ್ದ ಕೂಡ ಚೆನ್ನಾಗಿ ಗೊತ್ತು. ಇದು ಆ ಮುದುಕನ ಹೃದಯದ ಬಡಿತದ ಶಬ್ದ. ನಗಾರಿಯ

ಶಬ್ದದಿಂದ ಸೈನಿಕನ ಉತ್ಸಾಹ ಹೆಚ್ಚಾಗುತ್ತ ಹೋಗುವಂತೆ ಇದರಿಂದ ನನ್ನ ಹುಚ್ಚು ಹೆಚ್ಚಾಗುತ್ತ ಹೋಯಿತು.

ಇಷ್ಟಾದರೂ ನನ್ನನ್ನು ನಾನೇ ಹತೋಟಿಗೆ ತಂದುಕೊಂಡು ಸದ್ದಿಲ್ಲದೆ ನಿಂತಿದ್ದೆ. ನಾನು ಬಹಳ ಕಷ್ಟಪಟ್ಟು ಉಸಿರಾಡುತ್ತಿದ್ದೆ. ಲಾಟೀನ್ ಅನ್ನು ಒಮ್ಮಲೇ ಗಟ್ಟಿಯಾಗಿ ಹಿಡಿದುಕೊಂಡಿದ್ದೆ. ಬೆಳಕಿನ ಕಿರಣ ಪೂರ್ತಿಯಾಗಿ ಕಣ್ಣಿನ ಮೇಲೆಯೇ ಸ್ಥಿರವಾಗಿ ನೆಟ್ಟಿರುವಂತೆ ಮಾಡಿದ್ದೆ. ಈ ಮಧ್ಯೆ ಕಷ್ಟಕೊಡುವ ಹೃದಯದ ಬಡಿತ ಹೆಚ್ಚುತ್ತಲೇ ಹೋಯಿತು. ಪ್ರತಿ ಕ್ಷಣವೂ ಅದು ಮತ್ತಷ್ಟು ವೇಗವಾಗಿ ಬಡಿದುಕೊಳ್ಳುತ್ತಲೇ ಹೋಯಿತು. ಬಹುಶಃ ಮುದುಕನ ಹೆದರಿಕೆಗಂತೂ ಕೊನೆಯೇ ಇರಲಿಲ್ಲ. ಅವನ ಭಯ ಪ್ರತಿ ಕ್ಷಣವೂ ಹೆಚ್ಚು ಏರುತ್ತಲೇ ಇತ್ತು. ನನ್ನ ಮಾತನ್ನು ನೀವು ಗಮನಿಸುತ್ತಾ ಇದ್ದೀರಾ? ನಾನು ಭಯ ಪೀಡಿತನಾಗಿದ್ದೇನೆಂದು ಹೇಳಿದೆನಲ್ಲವೆ? ಈಗಲೂ ಬಹುಶಃ ಅದೇ ಸ್ಥಿತಿ. ರಾತ್ರಿಯ ನಿಸ್ತಬ್ಧ ಕ್ಷಣದಲ್ಲಿ, ಆ ಹಳೇ ಮನೆಯ ಭೀಕರ ನೀರವತೆಯಲ್ಲಿ ಇಂಥ ವಿಚಿತ್ರ ಶಬ್ದ ನನ್ನಲ್ಲಿ ಎಲ್ಲಿಲ್ಲದ ಭಯ ಉಂಟುಮಾಡಿತು. ಹಾಗಾದರೂ ಕೆಲ ನಿಮಿಷಗಳ ವರೆಗೆ ನಾನು ನನ್ನನ್ನು ಹತೋಟಿಗೆ ತಂದುಕೊಂಡು ಕದಲದೆ ನಿಂತಿದ್ದೆ. ಆದರೆ ಡವಗುಟ್ಟುವಿಕೆ(ಬಡಿತ) ಮೇಲಿಂದ ಮೇಲೆ ತೀವ್ರಗೊಳ್ಳುತ್ತಲೇ ಹೋಯಿತು. ನನ್ನ ಹೃದಯ ಈಗ ಒಮ್ಮೆಗೇ ಒಡೆದುಹೋಗುತ್ತದೆನಿಸಿತು. ಈಗ ಇನ್ನೊಂದು ಆತಂಕ ನನ್ನನ್ನು ಕಾಡತೊಡಗಿತು. ಈ ಶಬ್ದ ನೆರೆಯವನ ತನಕ ಕೇಳಿಸಿಬಿಡಬಹುದೆನಿಸಿತು. ಮುದುಕನನ್ನು ಕೊಲ್ಲುವ ಗಳಿಗೆ ಹತ್ತಿರ ಬಂದಿತ್ತು. ಒಂದು ಅಸಭ್ಯ ಚೀತ್ಕಾರದೊಂದಿಗೆ ನಾನು ಲಾಟೀನಿನ ಬೆಳಕನ್ನು ದೊಡ್ಡದು ಮಾಡಿ ಕೊಠಡಿಯೊಳಕ್ಕೆ ನುಗ್ಗಿದೆ. ಅವನು ಒಮ್ಮೆ ಮಾತ್ರ ಚೀರಿದ್ದ. ಒಂದು ಕ್ಷಣದಲ್ಲಿ ಅವನನ್ನು ಕೆಡವಿಕೊಂಡು ಆ ಭಾರೀ ಹಾಸಿಗೆಯನ್ನು ಅವನ ಮೇಲೆ ಕವುಚಿಬಿಟ್ಟೆ. ಇಲ್ಲಿಯ ವರೆಗಿನ ಹಂಚಿಕೆ ಸಫಲವಾದ್ದು ನೋಡಿ ನಾನು ಸಂತಸದಿಂದ ಉಬ್ಬಿಹೋದೆ. ಕೆಲವು ನಿಮಿಷಗಳ ವರೆಗೆ ಅವನ ತಡೆ ತಡೆದು ಬರುವ ಶಬ್ದ ಕೇಳಿಸುತ್ತಿತ್ತು. ಆದರೆ ನಾನು ಕಿಂಚಿತ್ತೂ ವಿಚಲಿತಗೊಳ್ಳಲಿಲ್ಲ. ಈ ಶಬ್ದ ಗೋಡೆಯಿಂದಾಚೆಗೆ ಹೋಗಿರಲಾರದೆಂದು ತಿಳಿದಿದ್ದೆ. ಕ್ರಮೇಣ ಆ ಶಬ್ದ ನಿಂತುಹೋಯಿತು. ಮುದುಕ ಸತ್ತುಹೋಗಿದ್ದ. ಹಾಸಿಗೆ ತೆಗೆದು ಹೆಣವನ್ನು ಗಮನವಿಟ್ಟು ನೋಡಿದೆ. ಹೌದು, ಅದು ಒಮ್ಮೆಗೇ ತಣ್ಣಗಾಗಿಬಿಟ್ಟಿತ್ತು. ಅವನ ಎದೆಯ ಮೇಲೆ ಕೈ ಇಟ್ಟೆ. ಬಹಳ ಹೊತ್ತಿನ ತನಕ ಅವನ ಎದೆ ಬಡಿಯುತ್ತಿದೆಯೋ ಹೇಗೆ ಎಂದು ತಿಳಿಯುವ ಯತ್ನ ಮಾಡಿದೆ. ಎದೆ ಬಡಿಯುತ್ತಿರಲಿಲ್ಲ. ಅವನು ಸತ್ತಿದ್ದ. ಈಗ ಅವನ ಕಣ್ಣು ಎಂದೆಂದಿಗೂ ನನಗೆ ಕಷ್ಟಕೊಡುವುದಿಲ್ಲ.

ನೀವು ಈಗಲೂ ನನ್ನನ್ನು ಹುಚ್ಚ ಎಂದು ತಿಳಿದುಕೊಂಡಿದ್ದರೆ, ಅವನ ಹೆಣವನ್ನು ಅಡಗಿಸಿಡಲು ನಾನು ಅದೆಷ್ಟು ಎಚ್ಚರಿಕೆಯಿಂದ ಕೆಲಸ ಮಾಡಿದ್ದೆ ಎಂಬುದನ್ನು ಹೇಳಿದರೆ ಬಹುಶಃ ನೀವು ನನ್ನನ್ನು ಹುಚ್ಚ ಎಂದು ತಿಳಿಯಲಾರಿರಿ. ರಾತ್ರಿ ಮುಗಿದಿತ್ತು. ಬಹಳ ಬೇಗನೆ ಮುಂದಿನ ಕೆಲಸ ಮುಗಿಸಿದೆ. ಸ್ವಲ್ಪವೂ ಸದ್ದಾಗದಂತೆ ನಾನು ಹೆಣವನ್ನು ತುಂಡು ತುಂಡು ಮಾಡಿದೆ. ರುಂಡವನ್ನು ಮುಂಡದಿಂದ ಬೇರ್ಪಡಿಸಿದೆ. ಕೈ ಕಾಲುಗಳನ್ನು ಕತ್ತರಿಸಿಹಾಕಿದೆ.

ಕೊಠಡಿಯ ನೆಲದಿಂದ ಮೂರು ಚಪ್ಪಡಿ ಕಲ್ಲುಗಳನ್ನು ಕಿತ್ತು ಆ ಜಾಗದಲ್ಲಿ ಹೆಣದ ತುಂಡುಗಳನ್ನು ಹೂತುಹಾಕಿದೆ. ಮತ್ತೆ ಆ ಚಪ್ಪಡಿ ಕಲ್ಲುಗಳನ್ನು ಅದೆಷ್ಟು ಎಚ್ಚರಿಕೆಯಿಂದ ಮೊದಲಿನಂತೆ ಜೋಡಿಸಿದೆನೆಂದರೆ ಯಾವ ಮನುಷ್ಯನ ಕಣ್ಣುಗಳು ಕೂಡ– ಅಷ್ಟೇ ಏಕೆ ಆ ಮುದುಕನ ಕಣ್ಣೂ ಕೂಡ ಏನೊಂದು ವ್ಯತ್ಯಾಸವನ್ನೂ ಪತ್ತೆ ಹಚ್ಚಲು ಸಾಧ್ಯವಿರಲಿಲ್ಲ. ತೊಳೆಯಲು ಏನೂ ಇರಲಿಲ್ಲ. ನಾನು ಯಾವುದೇ ಥರದ ಕಲೆಗಿಲೆ ಬಿಟ್ಟಿರಲಿಲ್ಲ. ಈ ವಿಷಯದಲ್ಲಿ ನಾನು ತುಂಬ ಎಚ್ಚರ ವಹಿಸಿದ್ದೆ. ಇಷ್ಟೆಲ್ಲ ಕೆಲಸಕ್ಕೆ ನಾನು ಟಬ್ ಬಳಕೆ ಮಾಡಿಕೊಂಡಿದ್ದೆ.

ನನ್ನ ಕೆಲಸ ಎಲ್ಲ ಮಾಡಿ ಮುಗಿಸುವ ಹೊತ್ತಿಗೆ ಬೆಳಗಿಜಾವ ನಾಲ್ಕು ಗಂಟೆ ಆಗಿತ್ತು. ಆಗಲೂ ಅರ್ಧರಾತ್ರಿಯೇನೋ ಎನ್ನುವಷ್ಟು ದಟ್ಟವಾದ ಕತ್ತಲೆ ಇತ್ತು. ಗಡಿಯಾರ ನಾಲ್ಕು ಗಂಟೆ ಹೊಡೆಯುತ್ತಿದ್ದ ಹಾಗೇ ಹೊರಗಡೆ ಬಾಗಿಲನ್ನು ತಟ್ಟಿದ ಸದ್ದಾಯಿತು. ನಾನು ಒಹಳ ಸಹಜವಾಗಿ ಬಾಗಿಲು ತೆಗೆಯಲು ಕೆಳಗೆ ಹೋಗಿದ್ದೆ. ಈಗ ಹೆದರುವಂಥದ್ದು ಏನಾದರೂ ಇದ್ದರೆ ತಾನೆ? ಮೂರು ಜನ ಹೊಸ್ತಿಲ ಮೇಲೆ ನಿಂತಿದ್ದರು. ತಾವು ಪೋಲಿಸ್ ಅಧಿಕಾರಿಗಳೆಂದು ಅವರು ಹೇಳಿದರು. ಅವರ ದನಿ ಬಹಳ ಗಾಂಭೀರ್ಯದಿಂದ ಕೂಡಿತ್ತು. ನೆರೆಯವನು ರಾತ್ರಿ ಯಾವುದೋ ಚೀತ್ಕಾರದ ಸದ್ದು ಕೇಳಿದ್ದನೆಂದು ಹೇಳಿದರು. ಏನೋ ಒಂದು ಗಡಿಬಿಡಿಯ ಆತಂಕದಲ್ಲಿ ಅವನು ಪೋಲೀಸರಿಗೆ ಸುದ್ದಿ ಮುಟ್ಟಿಸಿದ್ದನು. ಈಗ ಈ ಅಧಿಕಾರಿಗಳು ಮನೆಯಲ್ಲಿ ತನಿಖೆ ನಡೆಸಬೇಕಾಗಿತ್ತು.

ನಾನು ಮುಗುಳ್ನಕ್ಕೆ. ನಾನು ಯಾವ ವಿಷಯಕ್ಕೆ ತಾನೆ ಹೆದರಬೇಕಾಗಿತ್ತು. ಈ ಒಳ್ಳೆಯ ವ್ಯಕ್ತಿಗಳು ಮನೆಯೊಳಗೆ ಪ್ರವೇಶಿಸಲು ಅವಕಾಶ ಮಾಡಿಕೊಟ್ಟೆ. ಚೀರಿದ್ದು ಬಹುಶಃ ನಾನೇ ಇರಬೇಕು. ಕಾರಣ ಕನಸಿನಲ್ಲಿ ನಾನೇ ಚೀರಿದ್ದೆ ಎಂದೆ. ಆ ಮುದುಕ ನಗರದಿಂದ ಹೊರಗೆ ಹೋಗಿದ್ದಾನೆ. ನಾನು ಆ ಆಗಂತುಕರಿಗೆ ಇಡೀ ಮನೇನೆಲ್ಲ

ತೋರಿಸಿದೆ. ಮನೆಯ ಇಂಚಿಂಚೂ ನೋಡಲು ಅನುಮತಿ ನೀಡಿದೆ. ಮುದುಕನ ಕೊಠಡಿಗೂ ಅವರನ್ನು ಕರೆದೊಯ್ದೆ. ಅಲ್ಲಿ ಬಹಳಷ್ಟು ಹೊತ್ತು ಜೋಪಾನವಾಗಿ ಇಟ್ಟಿದ್ದ ಮುದುಕನ ಸಂಪತ್ತು, ಒಡವೆ ಇತ್ಯಾದಿ ಎಲ್ಲ ತೋರಿಸುತ್ತ ಇದ್ದೆ. ನನ್ನ ಆತ್ಮ ವಿಶ್ವಾಸ ಹೆಚ್ಚುತ್ತಾ ಹೋಗುತ್ತಿತ್ತು. ಅದೇ ಉತ್ಸಾಹದಲ್ಲಿ ಕೊಠಡಿಯಲ್ಲಿ ಕುರ್ಚಿಗಳನ್ನು ತಂದು ಸ್ವಲ್ಪ ಹೊತ್ತು ಕೂತುಕೊಂಡು ಆಯಾಸ ಪರಿಹರಿಸಿಕೊಳ್ಳಲು ವಿನಂತಿಸಿದೆ. ನನ್ನ ಈ ಹಂಚಿಕೆ ಸಫಲವಾದದ್ದು ಕಂಡು ನನ್ನ ಸಾಹಸ ನನ್ನ ಕುರ್ಚಿಯನ್ನು ಸಹ ಹೆಣವನ್ನು ತುಂಡು ತುಂಡು ಮಾಡಿ ಹೂಳಿದ್ದ ಜಾಗದ ಮೇಲೆಯೇ ಹಾಕುವ ಮಟ್ಟದವರೆಗೂ ಹೋಯಿತು.

ಪೋಲೀಸ್ ಅಧಿಕಾರಿಗಳು ತುಂಬ ಸಂತೋಷಪಟ್ಟರು. ನನ್ನ ನಡವಳಿಕೆಯಿಂದ ಅವರು ಭರವಸೆಯನ್ನೂ ತಾಳಿಬಿಟ್ಟಿದ್ದರು. ನಾನು ಹೆಚ್ಚುಕಡಮೆ ನಿಶ್ಚಿಂತನಾಗಿಬಿಟ್ಟೆ. ಅವರು ಕೂತಿದ್ದರು ಮತ್ತು ಅವರು ಕೇಳಿದ ಪ್ರಶ್ನೆಗಳಿಗೆಲ್ಲ ನಾನು ಸಂತಸದಿಂದಲೇ ಉತ್ತರಿಸುತ್ತ ಹೋದೆ. ಅವರು ಸ್ನೇಹದ ಲೆಕ್ಕದಲ್ಲಿ ಹರಟೆ ಹೊಡೆಯುತ್ತ ಇದ್ದರು. ಆದರೆ ಬಹಳ ಬೇಗನೆ ನನ್ನ ಮುಖ ಬಣ್ಣಗುಂದುತ್ತಿದೆ ಎಂದು ನನಗೆ ಅರ್ಥವಾಗತೊಡಗಿತು. ಇವರು ಬೇಗ ತೊಲಗಿ ಹೋದರೆ ಸಾಕು ಎನ್ನಿಸತೊಡಗಿತು. ನನ್ನ ತಲೆ ಸುತ್ತತೊಡಗಿತ್ತು. ನನ್ನ ಕಿವಿಯಲ್ಲಿ ಏನೋ ಪ್ರತಿಧ್ವನಿಸುತ್ತಾ ಇದೆ ಎಂದು ಅನಿಸತೊಡಗಿತು. ಅವರು ಮಾತ್ರ ಕೂತು ಹರಟೆ ಹೊಡೆಯುತ್ತಲೇ ಇದ್ದರು. ಈಗ ಈ ಪ್ರತಿಧ್ವನಿ ಏನು ಅಂತ ಸ್ಪಷ್ಟವಾಗತೊಡಗಿತು. ಇದು ಮತ್ತೂ ಹೆಚ್ಚಾಗುತ್ತ ಹೋಯಿತು. ಕ್ರಮೇಣ ಹೆಚ್ಚು ಸ್ಪಷ್ಟವಾಗತೊಡಗಿತು. ಈ ಅನುಭವದಿಂದ ಬಿಡುಗಡೆ ಪಡೆಯಲು ಇನ್ನಷ್ಟು ಸಹಜವಾಗಿ ಹರಟೆಹೊಡೆಯಲು ಶುರುಮಾಡಿದೆ. ಆದರೆ ಆ ಶಬ್ದ ಮಾತ್ರ ಹೆಚ್ಚಾಗುತ್ತಲೇ ಇತ್ತು. ಈಗ ಅದು ಏನೆಂದು ಒಮ್ಮೆಗೇ ಸ್ಪಷ್ಟವಾಗಿಬಿಟ್ಟಿತ್ತು. ಈ ಶಬ್ದ ಬರುತ್ತಿರುವುದು ನನ್ನ ಕಿವಿಯ ಒಳಗಿನಿಂದಲ್ಲ, ಹೊರಗಿನಿಂದ ಎಂದು ನಿಧಾನವಾಗಿ ಅನಿಸತೊಡಗಿತು.

ನಿಸ್ಸಂದೇಹವಾಗಿ ಈಗ ನನ್ನ ಮುಖದ ಬಣ್ಣ ಇಳಿದುಹೋಗಿತ್ತು. ಆದರೆ ನಾನು ಒಂದೇ ಸಮನೆ ಉಚ್ಚಕಂಠದಲ್ಲಿ ಮಾತಾಡುತ್ತಲೇ ಇದ್ದೆ. ಈಗ ಆ ಶಬ್ದ ಅದೆಷ್ಟು ಹೆಚ್ಚಾಗಿಬಿಟ್ಟಿತ್ತೆಂದರೆ ನಾನು ಅಸಹಾಯಕನೆಂಬ ಭಾವ ಬರತೊಡಗಿತು. ಇದು ನಿಧಾನವಾದ, ಜೀವವಿಲ್ಲದ, ಆದರೆ ವೇಗದ ಗತಿಯ ಶಬ್ದವಾಗಿತ್ತು. ಬಟ್ಟೆಯಲ್ಲಿ ಸುತ್ತಿಟ್ಟ ಗಡಿಯಾರದಿಂದ ಬರುವ ಶಬ್ದದಂತೆ. ನನ್ನ ಶ್ವಾಸ ಕಿತ್ತುಬರುತ್ತಿತ್ತು. ಆದರೂ

ಪೋಲೀಸ್ ಅಧಿಕಾರಿಗಳು ಅತ್ತ ಗಮನವನ್ನೇ ಕೊಡಲಿಲ್ಲ. ನಾನು ಇನ್ನಷ್ಟು ವೇಗವಾಗಿ ಮತ್ತು ಗಟ್ಟಿಯಾಗಿ ಮಾತಾಡತೊಡಗಿದೆ. ಆದರೆ ಆ ಶಬ್ದ ಒಂದೇ ಸಮನೆ ಹೆಚ್ಚುತ್ತಲೇ ಹೋಗುತ್ತಿತ್ತು. ಇವರುಗಳು ಯಾಕಿನ್ನೂ ಹೋಗುತ್ತಾ ಇಲ್ಲ? ನಾನು ಎದ್ದು ಚಡಪಡಿಕೆಯಿಂದ ಶತಪಥ ಹಾಕತೊಡಗಿದೆ. ಅವರುಗಳ ಹಾವಭಾವದಿಂದ ನಾನು ಉತ್ತೇಜಿತನಾಗುತ್ತಿದ್ದೇನೇನೋ ಎನಿಸತೊಡಗಿತು. ಆದರೆ ಸದ್ದಂತೂ ಒಂದೇ ಸಮನೆ ಹೆಚ್ಚುತ್ತಲೇ ಇತ್ತು. ದೇವರೇ ನಾನು ಏನು ಮಾಡಲಿ? ನನ್ನ ಬಾಯಿಂದ ನೊರೆ ಬರುವುದಕ್ಕೆ ಪ್ರಾರಂಭವಾಯಿತು. ನಾನು ಅಳಲಾರಂಭಿಸಿದೆ. ಆಣೆ, ಪ್ರಮಾಣ ಮಾಡತೊಡಗಿದೆ. ನಾನು ಕುಳಿತಿದ್ದ ಕುರ್ಚಿಯನ್ನು ಅಲುಗಾಡಿಸತೊಡಗಿದೆ. ಕೆಳಗಿನ ಇಟ್ಟಿಗೆಗಳ ಮೇಲೆ ಅದನ್ನು ಟಕ್ ಟಕ್ ಎಂದು ಕುಟ್ಟತೊಡಗಿದೆ. ಆದರೆ ಶಬ್ದವಂತೂ ನಿಲ್ಲುತ್ತಲೇ ಇರಲಿಲ್ಲ. ಇನ್ನಷ್ಟು ತೀಕ್ಷ್ಣವಾಗುತ್ತ ಹೋಗುತ್ತಿತ್ತಾದರೂ ಇವರುಗಳು ಮಾತ್ರ ನಗು–ತಮಾಷೆ, ಹರಟೆಗಳಲ್ಲಿ ತೊಡಗಿದ್ದರು. ಮುಗುಳ್ನಗುತ್ತಿದ್ದರು. ಅವರಿಗೆ ಏನೂ ಕೇಳಿಸದೆ ಇರುವ ಸಂಭವ ಸಾಧ್ಯವೆ? ಹೇ ದಯಾನಿಧಿ! ಇಲ್ಲ, ಇಲ್ಲವೆ? ಅವರುಗಳಿಗೆ ಖಂಡಿತಕ್ಕೂ ಕೇಳಿಸಿದೆ. ಅವರುಗಳಿಗೆ ಸಂದೇಹವಿದೆ. ಅವರಿಗೆಲ್ಲವೂ ಗೊತ್ತಿದೆ. ಇವರುಗಳು ನನ್ನ ಭಯ ನೋಡಿ ಮಜಾ ತೆಗೆದುಕೊಳ್ಳುತ್ತಿದ್ದಾರೆ. ಈ ವಿಷಯ ಮನಸ್ಸಿನಲ್ಲಿ ಕೂತುಬಿಟ್ಟಿದೆ. ಈ ಯಾತನೆಗಿಂತ ಬೇರೆ ಯಾವುದೇ ಆದರೂ ಅದು ಉತ್ತಮವೇ. ಬೇರೆ ಏನನ್ನು ಬೇಕಾದರೂ ಸಹಿಸಿಕೊಳ್ಳಬಹುದು. ಆದರೆ ಇದನ್ನಲ್ಲ. ಈ ಧೂರ್ತತೆ ಸಹಿಸಲಸಾಧ್ಯವಾದ್ದು. ನನ್ನ ಶಕ್ತಿಯೆಲ್ಲಾ ಬಿಟ್ಟು ಚೀರಿಬಿಡಲು ಮನಸ್ಸಾಯಿತು. ಸತ್ತು ಬಿಡಲೆ ಎನಿಸಿತು. ಮತ್ತೆ ಅದೇ ತೀಕ್ಷ್ಣ! ತೀಕ್ಷ್ಣ! ತೀಕ್ಷ್ಣವಾಗಿ ಕೊಲ್ಲುತ್ತಿರುವ ಶಬ್ದ!

"ಮೂರ್ಖರೇ!' –ನಾನು ಚೀರಿದೆ. ಇನ್ನು ಹೆಚ್ಚು ಡೋಂಗೀತನ ಬೇಡ. ನಾನು ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಇಟ್ಟಿಗೆಗಳನ್ನು ಅತ್ತ ತಳ್ಳಿ! ಹೌದು, ಇಲ್ಲೇ ಇದೇ ಸ್ಥಳದಲ್ಲೇ ದುಷ್ಟ ಹೃದಯ ಉಸಿರಾಡುತ್ತಿರುವ ಸದ್ದು ಕೇಳಿಸುತ್ತಿದೆ."

❖

ಕ್ರಿಸ್ ಮಸ್ ಟ್ರೀ ಮತ್ತು ವಿವಾಹದ ಸಂಜೆ

ರಷ್ಯನ್ ಮೂಲ : ಡಾಸ್ಟೋವೆಸ್ಕಿ

ಆ ದಿನ ನಾನೊಂದು ವಿವಾಹ ಸಮಾರಂಭವನ್ನು ನೋಡಿದೆ..... ಆದರೆ ತಡೀರಿ, ನಿಮಗೆ ನಾನು ಮದುವೆಯ ಬಗ್ಗೆ ಅಲ್ಲ, ಕ್ರಿಸ್ ಮಸ್ ಟ್ರೀ ಬಗ್ಗೆ ಹೇಳ ಬಯಸುತ್ತೇನೆ. ವಿವಾಹ ಸಮಾರಂಭ ಅತ್ಯಂತ ಘನತೆಯಿಂದ ಕೂಡಿತ್ತು. ನನಗಂತೂ ತುಂಬಾ ಹಿಡಿಸಿತು. ಆದರೆ ಅದಕ್ಕಿಂತಲೂ ಒಂದು ಘಟನೆ ಹೆಚ್ಚು ಮಜ ನೀಡುವಂಥದಾಗಿತ್ತು. ಅದು ಯಾಕೋ ಏನೋ ಗೊತ್ತಿಲ್ಲ; ವಿವಾಹ ಸಮಾರಂಭ ನೋಡಿದ ಕೂಡಲೇ ಕ್ರಿಸ್ ಮಸ್ ಟ್ರೀಯ ನೆನಪು ಬಂದುಬಿಡ್ತು. ಆ ಘಟನೆ ಸ್ವಲ್ಪ ಹೆಚ್ಚು ಕಡಮೆ ಈ ರೀತಿ ನಡೆಯಿತು–

ಸರಿಯಾಗಿ ಐದು ವರ್ಷಗಳ ಹಿಂದೆ ಹೊಸ ವರ್ಷದ ಹಿಂದಿನ ದಿನದ ಸಾಯಂಕಾಲ ಮಕ್ಕಳ ನೃತ್ಯ ಕಾರ್ಯಕ್ರಮವೊಂದನ್ನು ನೋಡಲು ನನ್ನನ್ನು ಒಬ್ಬ ವ್ಯಕ್ತಿ ಆಹ್ವಾನಿಸಿದ. ಅವನು ವ್ಯಾಪಾರ ಜಗತ್ತಿನಲ್ಲಿ ಒಂದು ಉನ್ನತ ಸ್ಥಾನದಲ್ಲಿದ್ದ. ಅವನಿಗೆ ಅವನದೇ ಆದ ಸಂಪರ್ಕಗಳಿದ್ದುವು. ಗುರುತು ಪರಿಚಯದವರ, ಸ್ನೇಹಿತರ ಒಂದು ದೊಡ್ಡ ಸರ್ಕಲ್ ಇತ್ತು. ಹಾಗಾಗಿ ಈ ಮಕ್ಕಳ ಕಾರ್ಯಕ್ರಮ ಅನ್ನುವುದೊಂದು

ನೆಪ ಅಷ್ಟೆ ಅನ್ನಿಸಿತು. ಈ ನೆಪದಲ್ಲಿ ಮಕ್ಕಳ ಅಪ್ಪ ಅಮ್ಮಂದಿರು ಪರಸ್ಪರ ಭೇಟಿಯಾಗಿ ಪರಸ್ಪರರ ಹಿತಾಸಕ್ತಿಯ ವಿಷಯಗಳನ್ನು ಕುರಿತು ಮಾತನಾಡಿಕೊಳ್ಳತೊಡಗಿದರು.

ನಾನೊಬ್ಬ ಹೊರಗಿನ ವ್ಯಕ್ತಿ. ಮಾತು-ಕತೆ ನಡೆಸಲು ನನ್ನ ಹತ್ತಿರ ಸ್ವಂತದ್ದು ಅನ್ನುವಂಥದ್ದು ಏನೂ ಇರಲಿಲ್ಲ. ಹಾಗಾಗಿ ನಾನು ಬೇರೆ ಎಲ್ಲರಿಂದ ಪ್ರತ್ಯೇಕವಾಗಿ ಆ ಸಂಜೆಯನ್ನು ನನ್ನದೇ ಆದ ರೀತಿಯಲ್ಲಿ ಕಳೆಯಬಹುದಾಗಿತ್ತು. ಅಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದ. ಅವನು ನನ್ನ ಹಾಗೆಯೇ ತಪ್ಪಿ ಈ ಕುಟುಂಬದ ಸಮಾರಂಭಕ್ಕೆ ಬಂದಿದ್ದ. ನನ್ನ ಗಮನ ಎಲ್ಲಕ್ಕಿಂತ ಮೊದಲು ಆ ಮನುಷ್ಯನ ಕಡೆಗೇ ಹೋಯಿತು. ನೋಡುವುದಕ್ಕೆ ಅವನು ಕುಲೀನ ಇಲ್ಲವೆ ಪ್ರತಿಷ್ಠಿತ ಮನೆತನಕ್ಕೆ ಸೇರಿದವನಂತೆ ಅನ್ನಿಸುತ್ತಿರಲಿಲ್ಲ. ಹಾಗೆ ನೋಡಿದರೆ ಅವನು ಎತ್ತರದ, ತೆಳ್ಳನೆಯ, ಬಹಳ ಗಂಭೀರ ವ್ಯಕ್ತಿಯಂತೆ ಕಾಣುತ್ತಿದ್ದ. ಅವನು ಒಳ್ಳೆಯ ಬಟ್ಟೆಗಳನ್ನು ಧರಿಸಿದ್ದ. ಈ ಕೌಟುಂಬಿಕ ಸಮಾರಂಭದಲ್ಲಿ ಅವನಿಗೆ ಆಸಕ್ತಿ ಇರಲಿಲ್ಲ ಎನ್ನುವುದು ಅವನನ್ನು ನೋಡಿದರೇನೇ ಗೊತ್ತಾಗುತ್ತಿತ್ತು. ಅವನು ಒಂದು ಏಕಾಂತ ಕೊಠಡಿಗೆ ಹೋದ ಕೂಡಲೇ ಅವನ ಮುಖದ ಮೇಲಿನ ಮುಗುಳುನಗೆ ಮಾಯವಾಯಿತು. ಹುಬ್ಬು ಗಂಟಿಕ್ಕಿದುವು. ಆತಿಥೇಯನ ಹೊರತಾಗಿ ಅವನಿಗೆ ಬೇರೆ ಯಾರದ್ದೂ ಗುರುತು-ಪರಿಚಯ ಇರಲಿಲ್ಲ. ಅವನಿಗೆ ಕೆಟ್ಟ ಬೇಸರ ಬಂದಿತ್ತು. ಆದರೆ ತನ್ನ ಸಂತಸವನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತಲೂ ಇದ್ದ. ನನಗೆ ಅನಂತರ ಗೊತ್ತಾಗಿದ್ದೆಂದರೆ ಅವನು ಯಾವುದೋ ಒಂದು ಅತ್ಯಂತ ಅಗತ್ಯವಾದ ಹಾಗೂ ತೊಡಕಿನ ಕೆಲಸದ ಮೇಲೆ ಹಳ್ಳಿಯಿಂದ ರಾಜಧಾನಿಗೆ ಬಂದಿದ್ದ. ನಮ್ಮ ಆತಿಥೇಯನ ಹೆಸರಿಗೆ ಯಾರಿಂದಲೋ ಒಂದು ಶಿಫಾರಸು ಪತ್ರ ತಂದಿದ್ದ. ಕೇವಲ ಶಿಷ್ಟಾಚಾರದ ಸಲುವಾಗಿ ಈ ಮನುಷ್ಯನನ್ನೂ ತನ್ನ ಮಕ್ಕಳ ಈ ಮದುವೆಯ ಸಮಾರಂಭಕ್ಕೆ ಆಹ್ವಾನಿಸಿದ್ದ.

ಅವರುಗಳು ಇವನೊಂದಿಗೆ ಇಸ್ಪೀಟು ಆಡಲಿಲ್ಲ. ಯಾರೊಬ್ಬರೂ ಅವನಿಗೆ ಸಿಗಾರನ್ನೂ ಕೊಡಮಾಡಲಿಲ್ಲ. ಯಾರೂ ಅವನೊಂದಿಗೆ ಹರಟೆ ಹೊಡೆಯಲಿಲ್ಲ. ಬಹುಶಃ ಎಲ್ಲರೂ ದೂರದಿಂದಲೇ ರೆಕ್ಕೆ ನೋಡಿ ಪಕ್ಷಿಯನ್ನು ಗುರುತಿಸುವ ಹಾಗೆ ಇವನು ಅಪರಿಚಿತನೆಂದು ಅರ್ಥಮಾಡಿಕೊಂಡುಬಿಟ್ಟಿದ್ದರು. ಹೀಗಾಗಿ ಈ ಸಭ್ಯ ಮನುಷ್ಯನಿಗೆ ತನ್ನ ಕೈಗಳಿಗೆ ಏನು ಕೆಲಸ ಕೊಡುವುದು ಎಂದು ಹೊಳೆಯುತ್ತಿರಲಿಲ್ಲ. ವಿಧಿಯಿಲ್ಲದೆ ಅವನು ಆ ಸಾಯಂಕಾಲವೆಲ್ಲ ತನ್ನ ಮೀಸೆಯ ಮೇಲೆ ಕೈಯಾಡಿಸಿಕೊಂಡು ಕೂತಿದ್ದ. ಅವನ ಮೀಸೆಯೇನೋ ನಿಜಕ್ಕೂ ಘನತೆಯಿಂದ ಕೂಡಿತ್ತು. ನಿರಂತರವಾಗಿ

ಅವನು ತನ್ನ ಮೀಸೆಯ ಮೇಲೆ ಕೈಯಾಡಿಸುತ್ತಾ ಇದ್ದ. ಅದು ಹೇಗಿರುತ್ತಿತ್ತು ಅಂದರೆ ಈ ಪ್ರಪಂಚದಲ್ಲಿ ಅವನ ಮೀಸೇನೇ ಮೊದಲು ಕಾಣಿಸಿಕೊಂಡದ್ದು ಆ ಮೇಲೆ ಅದರ ಮೇಲೆ ಕೈಯಾಡಿಸುವುದಕ್ಕೋಸ್ಕರವೇ ಅವನು ಜನ್ಮ ತಾಳಿದ್ದು ಅನ್ನುವ ಹಾಗೆ.

ನನ್ನ ಗಮನ ಸೆಳೆದ ಇನ್ನೊಬ್ಬ ಅತಿಥಿ ಇದ್ದ. ಅವನು ಪೂರ್ತಿ ಬೇರೆ ಥರದ ಮನುಷ್ಯ. ಅವನೊಬ್ಬ ಗಾಬರಿಗೊಂಡ ವ್ಯಕ್ತಿ. ಜನ ಅವನನ್ನು ಜೂಲಿಯನ್ ಮಸ್ತಕೋವಿಚ್ ಅಂತ ಕರೆಯುತ್ತಿದ್ದರು. ಅವನೊಬ್ಬ ವಿಶೇಷ ಅತಿಥಿ ಎಂಬುದು ಅವನನ್ನು ನೋಡಿದ ಕೂಡಲೇ ಗೊತ್ತಾಗುತ್ತಿತ್ತು. ಮೀಸೆಯ ಮೇಲೆ ಕೈಯಾಡಿಸಿಕೊಂಡು ಕೂತಿದ್ದ ಮನುಷ್ಯನೊಂದಿಗೆ ಆತಿಥೇಯನ ಸಂಬಂಧ ಯಾವ ರೀತಿಯದೋ ಇವನೊಂದಿಗಿನ ಆತಿಥೇಯನ ಸಂಬಂಧವೂ ಅದೇ ರೀತಿಯದಾಗಿತ್ತು. ಆತಿಥೇಯ ಮತ್ತು ಆತನ ಹೆಂಡತಿ ನಿರಂತರವಾಗಿ ಇವನ ಹತ್ತಿರ ಬಂದು ನಗುನಗುತ್ತಾ ಮಾತಾಡಿಸಿಕೊಂಡು ಹೋಗುತ್ತಾ ಇದ್ದರು. ಎಲ್ಲರಿಗಿಂತ ಹೆಚ್ಚಿನ ಗಮನವನ್ನು ಅವನಿಗೆ ಕೊಡುತ್ತಿದ್ದರು. ಹೇಗಾದರೂ ಅವನ ಮನಸ್ಸನ್ನು ಗೆಲ್ಲಬೇಕೆಂದಿದ್ದರು. ಅವನ ಸುತ್ತ-ಮುತ್ತಾನೇ ಸುಳಿದಾಡುತ್ತ ಇದ್ದರು. ಬಂದಿರುವ ಪ್ರತಿಯೊಬ್ಬ ಅತಿಥಿಯನ್ನೂ ಇವನ ಹತ್ತಿರ ಕರೆದುಕೊಂಡುಬಂದು ಇವನ ಭೇಟಿ ಮಾಡಿಸುವುದೇ ಅವರ ಕೆಲಸವಾಗಿತ್ತು. ಈ ಮನುಷ್ಯನನ್ನು ಅವರ ಹತ್ತಿರ ಕರೆದುಕೊಂಡು ಹೋಗುತ್ತಿರಲಿಲ್ಲ. ಇದಕ್ಕಿಂತ ಮೊದಲು ಎಂದೂ ಇಷ್ಟೊಂದು ಸಂತಸಕರವಾದ ಸಂಜೆಯನ್ನು ತಾನು ಕಳೆದೇ ಇಲ್ಲ ಎಂದು ಜೂಲಿಯನ್ ಮಸ್ತಕೋವಿಚ್ ಹೇಳಿದಾಗ ಸಂತಸದಿಂದ ನಮ್ಮ ಆತಿಥೇಯರ ಕಣ್ಣು ತಂಬಿ ಬಂದಿತ್ತು. ಈ ಗಾಬರಿಗೊಂಡ ವ್ಯಕ್ತಿಯ ಉಪಸ್ಥಿತಿಯಿಂದ ಅದು ಯಾಕೋ ಗೊತ್ತಿಲ್ಲ ನನಗೆ ಒಂದು ರೀತಿಯ ವ್ಯಾಕುಲತೆ ಶುರುವಾಯಿತು. ಅದರಿಂದ ಮಕ್ಕಳ ಜೊತೆ ಸ್ವಲ್ಪಹೊತ್ತು ಕಾಲ ಕಳೆದು ಉಲ್ಲಾಸಗೊಂಡು ನಾನು ಪಕ್ಕದ ಒಂದು ಚಿಕ್ಕ ಕೊಠಡಿಗೆ ಹೋಗಿಬಿಟ್ಟೆ. ಈ ಕೊಠಡಿ ಪೂರ್ತಿ ಖಾಲಿ ಬಿದ್ದಿತ್ತು. ಇದರ ಒಂದು ಮೂಲೆಯಲ್ಲಿ ಅಲಂಕರಿಸುವುದಕ್ಕೋಸ್ಕರ ಹೂ ಬಳ್ಳಿಗಳನ್ನಿಟ್ಟಿದ್ದ ಜಾಗದಲ್ಲಿ ಸ್ವಲ್ಪ ಮರೆಯಾಗಿ ಕುಳಿತುಕೊಂಡೆ. ಕೊಠಡಿಯಲ್ಲಿ ಆಡುತ್ತಿದ್ದ ಮಕ್ಕಳು ಬಹಳ ಮುದ್ದಾಗಿದ್ದವು. ದೊಡ್ಡವರಿಗಿಂತ ಬೇರೆಯಾದ ಅವರದೇ ಆದ ಒಂದು ಪ್ರಪಂಚವಿತ್ತು. ದೊಡ್ಡವರ ಹಾಗೆ ವರ್ತಿಸುವುದನ್ನು ಅವರು ಪೂರ್ತಿಯಾಗಿ ಬಿಟ್ಟಿದ್ದರು. ಅವರ ತಾಯಂದಿರು ಮತ್ತು ಗವರ್ನೆಸ್‌ಗಳ ಪ್ರಯತ್ನಗಳ ಹೊರತಾಗಿಯೂ ಅವರಲ್ಲಿ ಪರಸ್ಪರರಲ್ಲಿ ಯಾವುದೇ ಭೇದಭಾವ ಇರಲಿಲ್ಲ. ಒಂದೇ ಕ್ಷಣದಲ್ಲಿ ಮಕ್ಕಳು ಕ್ರಿಸ್‌ಮಸ್ ಟ್ರೀಯ ಟೋಫಿಗಳು

ಮತ್ತು ಸ್ವೀಟ್‌ಗಳನ್ನೆಲ್ಲಾ ಇಳಿಸಿಕೊಂಡುಬಿಟ್ಟಿದ್ದರು. ಅಲ್ಲದೆ ಯಾರ ಆಟದ ಸಾಮಾನು ಯಾರದ್ದು ಅಂತ ಗೊತ್ತಾಗುವುದಕ್ಕಿಂತ ಮುಂಚೇನೆ ಅರ್ಧಕ್ಕಿಂತ ಹೆಚ್ಚು ಆಟದ ಸಾಮಾನನ್ನು ಮುರಿದುಹಾಕಿಬಿಟ್ಟಿದ್ದರು. ಈ ಮಕ್ಕಳಲ್ಲಿ ಒಬ್ಬ ತುಂಬಾನೇ ಮದ್ದಾಗಿದ್ದ. ಕಪ್ಪು ಕಣ್ಣುಗಳು, ಗುಂಗುರು ಕೂದಲುಗಳ ಆ ಬಾಲಕ ತನ್ನ ಕಟ್ಟಿಗೆಯ ಬಂದೂಕಿಗೆ ಬಲವಂತವಾಗಿ ನನ್ನನ್ನು ಗುರಿಯಾಗಿ ಮಾಡಿಕೊಂಡಿದ್ದ. ಆದರೆ ಎಲ್ಲರ ಗಮನ ಸೆಳೆದದ್ದು ಆ ಬಾಲಕನ ಸೋದರಿ. ಸುಮಾರು ಹನ್ನೊಂದು ವರ್ಷದ ಆ ಬಾಲಕಿ ತುಂಬಾ ಸುಂದರವಾಗಿದ್ದಳು. ದೊಡ್ಡ ದೊಡ್ಡ ಕನಸಿನ ಕಣ್ಣುಗಳಂಥ ಕಣ್ಣುಗಳ ಆ ಬಾಲಕಿ ತುಂಬ ಶಾಂತಳು ಮತ್ತು ತಿಳುವಳಿಕಸ್ಥಳಂತೆ ಕಾಣುತ್ತಿದ್ದಳು. ಮಕ್ಕಳು ಅದು ಯಾಕೆ ಅವಳನ್ನು ಸಿಟ್ಟಿಗೆಬ್ಬಿಸಿದ್ದರೋ ಗೊತ್ತಿಲ್ಲ. ಆ ಕಾರಣಕ್ಕೆ ಅವಳು ಅವರನ್ನೆಲ್ಲ ಬಿಟ್ಟು ನಾನು ಬಚ್ಚಿಟ್ಟುಕೊಂಡವನಂತೆ ಕುಳಿತಿದ್ದ ಇದೇ ಕೊಠಡಿಗೆ ಬಂದುಬಿಟ್ಟಿದ್ದಳು. ಈ ಬಾಲಕಿ ಅಲ್ಲಿ ಒಂದು ಮೂಲೆಯಲ್ಲಿ ತನ್ನ ಬೊಂಬೆಯೊಂದಿಗೆ ಕುಳಿತುಕೊಂಡಳು.

"ಇವರ ತಂದೆ ಬಹಳ ದೊಡ್ಡ ಬಿಸಿನೆಸ್ ಮನ್" ಎಂದು ಅತಿಥಿಗಳು ಸ್ವಲ್ಪ ಆಶ್ಚರ್ಯವೆಂಬಂತೆ ಒಬ್ಬರು ಇನ್ನೊಬ್ಬರಿಗೆ ಹೇಳಿದರು. "ಅವಳ ಮದುವೆಯ ವರದಕ್ಷಿಣೆಯ ಸಲುವಾಗಿ ಮೂರು ಸಾವಿರ ರೂಬಲ್‌ಗಳನ್ನು ಈಗಲೇ ಪ್ರತ್ಯೇಕವಾಗಿ ತೆಗೆದಿಟ್ಟುಬಿಟ್ಟಿದ್ದಾರೆ."

ಹೀಗೆ ಮಾತಾಡ್ತಾ ಇರೋದು ಯಾರು ಎಂದು ನೋಡಲು ನಾನು ತಿರುಗುತ್ತಿದ್ದಾಗ ನನ್ನ ನೋಟ ಜೂಲಿಯನ್ ಮಸ್ತಕೋವಿಚ್ ಅವರ ಮೇಲೆ ಬಿತ್ತು. ಅವನು ಈ ನೀರಸ ಮಾತುಕತೆಯನ್ನು ಅತ್ಯಂತ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದನು. ಅವನ ಕೈ ಹಿಂದುಗಡೆ ಅವನ ಸೊಂಟದ ಮೇಲಿತ್ತು. ಕುತ್ತಿಗೆ ಒಂದು ಕಡೆಗೆ ಸ್ವಲ್ಪ ವಾಲಿತ್ತು.

ಅಷ್ಟೂ ಹೊತ್ತು ಮಕ್ಕಳಿಗೆ ಉಪಾಯದಿಂದ ಪ್ರೆಸೆಂಟ್‌ಗಳನ್ನು ಹಂಚುತ್ತಿದ್ದ ಆತಿಥೇಯನನ್ನೇ ಅತ್ಯಂತ ಗಮನವಿಟ್ಟು ನೋಡುತ್ತಿದ್ದ. ಆ ಮುಗ್ಧ ಶ್ರೀಮಂತಬಾಲಕಿಗೇ ಎಲ್ಲರದಕ್ಕಿಂತ ಹೆಚ್ಚು ಬೆಲೆಬಾಳುವ ಸಾವಿರಾರು ರೂಬಲ್‌ಗಳ ಮತ್ತು ಸುಂದರವಾದ ಬೊಂಬೆ ಸಿಕ್ಕಿತು. ಉಳಿದೆಲ್ಲ ಆಟಿಕೆಗಳನ್ನೂ ಪ್ರತಿ ಮಗುವಿನ ತಂದೆ-ತಾಯಿಯ ಶ್ರೀಮಂತಿಕೆಗೆ ತಕ್ಕಂತೆ ಹಂಚಲಾಯಿತು. ಎಲ್ಲರಿಗಿಂತ ಕಡೆಯ ಸರದಿ ಚಿಕ್ಕ, ತೆಳ್ಳನೆಯ ಕೆಂಪು ಕಣ್ಣಿನ ಹುಡುಗನದಾಗಿತ್ತು. ಅವನಿಗೆ ಪ್ರಕೃತಿ ಕಥೆಗಳನ್ನೊಳಗೊಂಡ ಪುಸ್ತಕ ಸಿಕ್ಕಿತು. ಅದರಲ್ಲಿ ಚಿತ್ರವಾಗಲಿ ರೇಖಾಚಿತ್ರವಾಗಲಿ ಇರಲಿಲ್ಲ. ಈ ಹುಡುಗ ಮನೆಯ ಆಯಾನ ಮಗ. ಅವಳೊಬ್ಬ ಬಡಪಾಯಿ ಬಡ ವಿಧವೆ. ಅವಳ ಆ ಬಾಲಕ ಒಂದು

ಚಿಕ್ಕದಾದ ಹಳೆಯ ಜಾಕೆಟ್ ಧರಿಸಿದ್ದ. ಬಾಲಕ ತುಂಬ ಹೆದರಿಬಿಟ್ಟಿದ್ದ. ಅವನು ಅವರು ನೀಡಿದ ಕಥೆ ಪುಸ್ತಕ ತೆಗೆದುಕೊಂಡು ಮಕ್ಕಳ ಆಟದ ಸಾಮಾನುಗಳ ಹಿಂದೆ ಮುಂದೆ ಸುತ್ತತೊಡಗಿದ. ಅವರ ಜೊತೆ ಆಟವಾಡಲು ತನ್ನದೇನನ್ನು ಬೇಕಾದರೂ ಕೊಡಲು ಸಿದ್ಧನಿದ್ದ. ಆದರೆ ಅವನು ಹೇಗೆತಾನೆ ಹಾಗೆ ಮಾಡಲು ಸಾಧ್ಯ? ಈಗಷ್ಟೇ ಈ ಹುಡುಗನಿಗೆ ತನ್ನ ಅಂತಸ್ತು ಏನು ಅನ್ನುವುದು ಗೊತ್ತಾಗಿದೆ ಎಂದು ನೀವು ಹೇಳಬಹುದು.

ಮಕ್ಕಳನ್ನು ನೋಡುವುದು ಅಂದರೆ ನನಗೆ ತುಂಬಾ ಇಷ್ಟ. ಪ್ರತಿಯೊಂದು ಮಗುವಿನ ಒಳಗೂ ಹೊರಗೆ ಬರಬೇಕೆಂದಿಚ್ಛಿಸುವ ಒಂದು ವ್ಯಕ್ತಿತ್ವವಿರುತ್ತದೆ ಎನ್ನುವುದನ್ನು ನೋಡುವುದು ಒಂದು ಅದ್ಭುತವೇ ಸರಿ. ಕೆಂಪು ಕೂದಲಿನ ಬಾಲಕ ಬೇರೆ ಮಕ್ಕಳ ಪ್ರತಿಯೊಂದು ವಸ್ತುವನ್ನೂ ತೀವ್ರ ಲಾಲಸೆಯಿಂದ ನೋಡುತ್ತಿದ್ದ– ಅದರಲ್ಲೂ ವಿಶೇಷವಾಗಿ ಅವರ ಆಟದಲ್ಲಿ ಸೇರಿಕೊಳ್ಳಬೇಕೆಂದು ಬಯಸಿದ್ದ ಎಂಬುದು ನನಗೆ ಕಾಣುತ್ತಿತ್ತು. ಅವರ ಜೊತೆ ಆಡಲು ಅದೆಷ್ಟು ವ್ಯಾಕುಲಗೊಂಡಿದ್ದನೆಂದರೆ ಅವನು ಈ ಮಕ್ಕಳನ್ನು ಖುಷಿಪಡಿಸಲಾರಂಭಿಸಿದ. ಅವನು ಮುಗುಳ್ನಕ್ಕು ಅವರೊಂದಿಗೆ ಆಡತೊಡಗಿದ. ಅವನ ಹತ್ತಿರ ಇದ್ದ ಒಂದೇ ಒಂದು ಸೇಬನ್ನು ಒಬ್ಬ ಠೊಣೆಯ ತುಂಟ ಹುಡುಗನಿಗೆ ಕೊಟ್ಟುಬಿಟ್ಟ. ಆ ಹುಡುಗನ ಜೇಬಾದರೋ ಮೊದಲೇ ತುರುಕಿಕೊಂಡಿದ್ದ ರಾಶಿ ರಾಶಿ ಟೋಫಿಗಳಿಂದ ತುಂಬಿಹೋಗಿತ್ತು. ಒಬ್ಬ ಪುಟ್ಟ ಮುಗ್ಧ ಬಾಲಕನನ್ನು ಬೆನ್ನಿನ ಮೇಲೆ ಕೂಡಿಸಿಕೊಂಡ. ತನ್ನನ್ನೂ ಆ ಮಕ್ಕಳು ತಾವು ಆಡುತ್ತಿದ್ದ ಆಟದಲ್ಲಿ ಸೇರಿಸಿಕೊಳ್ಳಲಿ ಎಂದೇ ಇಷ್ಟೆಲ್ಲಾ ಮಾಡಿದ.

ಆದರೆ ಸ್ವಲ್ಪೇ ಹೊತ್ತಿನಲ್ಲಿ ಒಬ್ಬ ಜಂಬದ ಹುಡುಗ ಅವನ ಮೇಲೆ ಬಿದ್ದುಬಿಟ್ಟ. ಅವನಿಗೆ ಒಂದು ಗುದ್ದೂ ಕೊಟ್ಟುಬಿಟ್ಟ. ಈ ಬಡಪಾಯಿ ಹುಡುಗನಿಗೆ ಅಳುವ ಧೈರ್ಯವೂ ಇರಲಿಲ್ಲ. ಅಷ್ಟರಲ್ಲಿ ಆಯಾ ಅಲ್ಲಿಗೆ ಬಂದು ತನ್ನ ಮಗನಿಗೆ ಅಲ್ಲಿಂದ ಹೊರಟುಹೋಗಲು ಹೇಳಿದಳು. ನಾನು ಮತ್ತು ಆ ಪುಟ್ಟ ಬಾಲಕಿ ಇದ್ದ ಕೊಠಡಿಗೆ ಆ ಬಾಲಕ ಅಲ್ಲಿಂದ ಜಾರಿಕೊಂಡು ಬಂದ. ಆ ಬಾಲಕಿ ತನ್ನ ಪಕ್ಕ ಕುಳಿತುಕೊಳ್ಳಲು ಅವಕಾಶ ನೀಡಿದಳು. ಆಮೇಲೆ ಅವರಿಬ್ಬರೂ ಸೇರಿಕೊಂಡು ಆ ಬೆಲೆಬಾಳುವ ಬೊಂಬೆಯನ್ನು ಅಲಂಕರಿಸತೊಡಗಿದರು.

ಸುಮಾರು ಅರ್ಧ ಗಂಟೆ ಕಳೆದಿರಬಹುದು. ನನಗೆ ಜೊಂಪು ಹತ್ತಿದಂತಾಯಿತು. ನಿದ್ರೆಯ ನಶೆಯಲ್ಲೂ ಆ ಇಬ್ಬರೂ ಮಕ್ಕಳ ಅರ್ಧಂಬರ್ಧ ಮಾತುಗಳನ್ನು

ಕೇಳಿಸಿಕೊಳ್ಳುತ್ತಿದ್ದೆ. ಆಗಲೇ ಇದ್ದಕ್ಕಿದ್ದಂತೆ ಜೂಲಿಯನ್ ಮಸ್ತಕೋವಿಚ್ ಅಲ್ಲಿಗೆ ಬಂದ. ಮಕ್ಕಳ ಸದ್ದುಗದ್ದಲದ ನಡುವೆ ಎಲ್ಲರ ಕಣ್ಣು ತಪ್ಪಿಸಿ ಡ್ರಾಯಿಂಗ್ ರೂಮಿನಿಂದ ಜಾರಿಕೊಂಡು ಇಲ್ಲಿಗೆ ಬಂದಿದ್ದ. ಸ್ವಲ್ಪ ಹೊತ್ತಿಗೆ ಮುಂಚೆ ತನಗೆ ಒಂದು ಕ್ಷಣದ ಹಿಂದೆ ಪರಿಚಯಿಸಲಾಗಿದ್ದ ಆ ಹುಡುಗಿಯ ಆ ಶ್ರೀಮಂತ ತಂದೆಯೊಂದಿಗೆ ಅವನು ಬಹಳ ಉತ್ಸುಕತೆಯಿಂದ ಹರಟೆ ಹೊಡೆಯುತ್ತಿದ್ದುದನ್ನು ಈ ಏಕಾಂತ ಕೊಠಡಿಯಲ್ಲಿ ಕುಳಿತು ನೋಡಿದ್ದೆ.

ಸ್ವಲ್ಪ ಹೊತ್ತು ಅವನು ಅಲ್ಲಿ ಮೌನವಾಗಿ ನಿಂತುಕೊಂಡ. ತನ್ನ ಬೆರಳುಗಳಿಂದ ಏನೋ ಲೆಕ್ಕ ಹಾಕುತ್ತಿದ್ದಾನೇನೋ ಎಂಬಂತೆ ಏನೋ ಗೊಣಗುಟ್ಟುತ್ತಿದ್ದ. "ಮುನ್ನೂರು...... ಮೂರು ಸಾವಿರ..... ಹನ್ನೊಂದು.... ಹನ್ನೆರಡು....... ಹದಿಮೂರು...... ಹದಿನಾರು...... ಐದು ವರ್ಷದಲ್ಲಿ ಶೇಕಡಾ ನಾಲ್ಕು ಅಂತ ಇಟ್ಟುಕೋ–ಹನ್ನೆರಡೈದಲ–ಅರುವತ್ತು ಇದರ ಮೇಲೆ ಅರುವತ್ತು– ಐದು ವರ್ಷದಲ್ಲಿ ಇದು ನಾನ್ನೂರು ಆಗುತ್ತೆ ಅಂತ ಅಂದುಕೊಳ್ಳೋಣ. ಹೂಂ! ಆದರೆ ಈ ಮನೆಹಾಳ ಮುದುಕ ಶೇಕಡಾ ನಾಲ್ಕಕ್ಕೆ ತೃಪ್ತನಾಗೋಂಥೋನಲ್ಲ. ಬಹುಶಃ ಅವನಿಗೆ ಶೇಕಡಾ ಎಂಟು ಅಥವಾ ಹತ್ತು ಸಿಗಬಹುದು. ಐನೂರು ಅಂತ ಅಂದುಕೊಳ್ಳೋಣ, ಐನೂರು ಸಾವಿರ. ಕಮ್ಮಿ ಅಂದರೆ ಇದಂತೂ ಪಕ್ಕಾ. ಇದಕ್ಕಿಂತ ಹೆಚ್ಚಿನದಿದ್ದರೆ ಅದು ಪಾಕೆಟ್ ಎಕ್ಸ್ ಪೆಂಡಿಚರ್"–

ಅವನು ಮೂಗು ಸವರಿಕೊಂಡು ಇನ್ನೇನು ಹೊರಕ್ಕೆ ಹೋಗುವವನೇ ಇದ್ದ. ಅಷ್ಟರಲ್ಲಿ ಅವನ ದೃಷ್ಟಿ ಆ ಬಾಲಕಿಯ ಮೇಲೆ ಬಿದ್ದು ಗಾಬರಿಗೊಂಡುಬಿಟ್ಟ. ನಾನು ಗಿಡಗಳ ಹಿಂದೆ ಕುಳಿತಿದ್ದೆನಾದ್ದರಿಂದ ನನ್ನ ಕಡೆಗೆ ಅವನ ಗಮನ ಹೋಗಲಿಲ್ಲ. ಅವನು ಉದ್ವೇಗದಲ್ಲಿ ನಡುಗುತ್ತಿದ್ದುದನ್ನು ಕಂಡೆ. ಈಗ ತಾನೆ ಅವನು ಏನು ಲೆಕ್ಕ ಹಾಕಿದ್ದ ಅದರಿಂದ ಅವನು ವಿಚಲಿತಗೊಂಡವನಂತಾಗಿದ್ದ. ತನ್ನ ಕೈಗಳನ್ನು ಉಜ್ಜತೊಡಗಿದ. ಕೊಠಡಿಯಲ್ಲಿ ಅತ್ತಿಂದಿತ್ತ ಶತಪಥ ಹಾಕತೊಡಗಿದ. ಅವನ ಉದ್ವೇಗ ಹೆಚ್ಚುತ್ತಾ ಹೋಗುತ್ತಿತ್ತು. ಕೊನೆಗೆ ತನ್ನ ಭಾವನೆಗಳನ್ನು ಹತೋಟಿಗೆ ತಂದುಕೊಂಡು ಸ್ವಲ್ಪ ದೃಢನಾದ. ತನ್ನ ಭಾವೀ ವಧುವಿನ ಮೇಲೆ ಆಳ ನೋಟ ಬೀರಿದ. ಅವಳ ಕಡೆಗೆ ನುಗ್ಗಬೇಕೆಂದಿದ್ದ. ಮತ್ತೆ ನಿಂತು ರೆಪ್ಪೆ ಮಿಟುಕಿಸದೆ ಅವಳನ್ನು ನೋಡತೊಡಗಿದ. ಬಹುಶಃ ಅವನಲ್ಲಿ ಅಪರಾಧಿ ಪ್ರಜ್ಞೆ ಮೂಡಿ ಮುಗುಳ್ನಗುತ್ತ ಭರದಿಂದ ಹುಡುಗಿಯ ಕಡೆಗೆ ಬಂದು ಬಾಗಿ ಅವಳ ಹಣೆಯನ್ನು ಚುಂಬಿಸಿದ.

ಬಾಲಕಿಯ ಹತ್ತಿರ ಅವನು ಬಂದದ್ದು ಅದೆಷ್ಟು ಆಕಸ್ಮಿಕವಾಗಿತ್ತೆಂದರೆ ಅವಳು ಭಯದಿಂದ ಚೀರಿಕೊಂಡಳು. "ಪ್ರೀತಿಯ ಮಗು ನೀನು ಇಲ್ಲಿ ಏನು ಮಾಡ್ತಾ

ಇದ್ದೀಯ?" ಎಂದು ಅವಳ ಕಿವಿಯಲ್ಲಿ ಮೆಲ್ಲಗೆ ಪಿಸುಗುಟ್ಟಿದ. ಅತ್ತ ಒಮ್ಮೆ ಕಣ್ಣು ಹಾಯಿಸಿ ಅವಳ ಕೆನ್ನೆಯನ್ನು ಚಿವುಟತೊಡಗಿದ.

"ನಾವು ಆಟ ಆಡ್ತಾ ಇದ್ದೀವಿ"

"ಅಯ್ಯೋ! ಇವನ ಜೊತೇಲಾ?" ಒಂದು ತೀಕ್ಷ್ಣವಾದ ನೋಟವನ್ನು ಆಯಾನ ಮಗನ ಮೇಲೆ ಹಾಯಿಸಿದ. "ಮಗು ನೀನು ಹೊರಗಡೆ ಇರೋ ಕೊಠಡಿಯಲ್ಲಿ ಹೋಗಿ ಕೂತುಕೋ ಬೇಕು"–ಎಂದು ಆ ಹುಡುಗನಿಗೆ ಹೇಳಿದ.

ಹುಡುಗ ಸುಮ್ಮನಿದ್ದ, ಕಣ್ಣರಳಿಸಿ ಅವರನ್ನು ನೋಡತೊಡಗಿದ. ಜೂಲಿಯನ್ ಮಸ್ತಕೋವಿಚ್ ಒಂದು ಸಲ ಅಕ್ಕ ಪಕ್ಕ ನೋಡಿ ಹುಡುಗಿಯ ಕಡೆಗೆ ಬಾಗಿದ.

"ನನ್ನ ಮುದ್ದು ಮಗುವೆ, ನಿನ್ನ ಹತ್ತಿರ ಏನಿದೆ, ಬೊಂಬೆ ಇದೆಯೇನು?"

"ಹೂಂ ಇದೆ". ಆ ಬಾಲಕಿ ಸ್ವಲ್ಪ ಬೆದರಿದಂತಾದಳು. ಅವಳ ಮುಖದಲ್ಲಿ ಅಸಂತೋಷ ಕಾಣಿಸಿಕೊಂಡಿತು.

"ಓ ಹಾಗಾದರೆ ಬೊಂಬೆ ಇದೆ ಅನ್ನು? ಬೊಂಬೇನ ಯಾವುದರಿಂದ ಮಾಡ್ತಾರೆ ಗೊತ್ತೇನು?"

"ಇಲ್ಲ" ಅವಳು ಮೆಲ್ಲಗೆ ಹೇಳಿ ತಲೆ ತಗ್ಗಿಸಿದಳು.

"ನನ್ನ ಮುದ್ದೇ, ಬೊಂಬೆಯನ್ನು ಮಾಡೋದು ಚಿಂದಿಗಳಿಂದ. ಏ ಹುಡುಗ ನೀನು ಬೇರೆ ಹುಡುಗರ ಹತ್ತಿರ ಹೊರಗಡೆ ಕೊಠಡಿಗೆ ಯಾಕೆ ಹೋಗಬಾರದು?" ಎಂದು ಹುಡುಗನನ್ನು ದುರುಗುಟ್ಟಿ ನೋಡುತ್ತ ಹೇಳಿದ.

ಮಕ್ಕಳಿಬ್ಬರಿಗೂ ತುಂಬ ಕೋಪ ಬಂತು. ಏನೇ ಆದರೂ ಒಬ್ಬರನ್ನೊಬ್ಬರು ಬಿಟ್ಟಿರುವುದಿಲ್ಲವೆನ್ನುವಂತೆ ಇಬ್ಬರೂ ಗಟ್ಟಿಯಾಗಿ ಒಬ್ಬರನ್ನೊಬ್ಬರು ಹಿಡಿದುಕೊಂಡರು.

"ಅವರು ನಿನಗೆ ಬೊಂಬೆಯನ್ನು ಯಾಕೆ ಕೊಟ್ಟರು ಅಂತ ಗೊತ್ತೇನು?" ಎಂದು ಬಾಲಕಿಯನ್ನು ತುಂಬ ಮೃದುವಾಗಿ ಕೇಳಿದ. "ಇಲ್ಲ"

"ಯಾಕೆ ಅಂದರೆ ಈ ವಾರ ಪೂರ್ತಿ ನೀನು ತುಂಬಾ ಮುದ್ದು ಮುದ್ದು ಹುಡುಗಿ ಆಗ್ತಾ ಇದ್ದೀಯ"

ಹಾಗೆ ಹೇಳುತ್ತ ಹೇಳುತ್ತ ಮಸ್ತಕೋವಿಚ್‌ಗೆ ಆವೇಶ ಬಂದಂತಾಯಿತು. ಅವನು ಅಕ್ಕ ಪಕ್ಕ ನೋಡಿ ಉದ್ವೇಗ ಮತ್ತು ವ್ಯಾಕುಲ ಸ್ವರದಿಂದ ಮೆಲ್ಲಗೆ ಅಸ್ಪಷ್ಟವಾದ ರೀತಿಯಲ್ಲಿ "ನಿಮ್ಮ ಅಪ್ಪ ಅಮ್ಮನನ್ನು ಭೇಟಿ ಮಾಡೋದಕ್ಕೆ ನಾನು ಬಂದರೆ ನನ್ನನ್ನು ನೀನು ಪ್ರೀತಿಸುತ್ತೀ ಅಲ್ಲವೆ?"

ಅವನು ಆ ಮುಗ್ಧ ಬಾಲೆಯನ್ನು ಚುಂಬಿಸಲೆತ್ನಿಸಿದ. ಬಾಲಕಿಗೆ ಅಳುಬರುವಂತಾಗಿತ್ತೆಂಬುದು ಆ ಕೆಂಪು ಕೂದಲಿನ ಹುಡುಗನ ಕಣ್ಣಿಗೆ ಬಿತ್ತು. ಅವಳಿಗೆ ಸಹಾನುಭೂತಿ ತೋರಿಸುವ ರೀತಿಯಲ್ಲಿ ಅವನೂ ಜೋರು ಜೋರಾಗಿ ಬಿಕ್ಕತೊಡಗಿದ. ಇದನ್ನು ನೋಡಿ ಆ ಮನುಷ್ಯ ಉರಿದುಬಿದ್ದ. "ನಡೀ ನೀನು, ಹೊರಡು! ಆ ಇನ್ನೊಂದು ಕೊಠಡಿಗೆ ನೀನು ಹೊರಟೋಗು. ಹೋಗಿ ಅಲ್ಲಿ ಬೇರೆ ಹುಡುಗರ ಜೊತೆ ಆಟ ಆಡು"

"ಇಲ್ಲ ನಾನು ಇವನನ್ನು ಹೋಗೋಕ್ಕೆ ಬಿಡಲ್ಲ. ಬಿಡಲ್ಲ ನಾನು ಇವನನ್ನು ಹೋಗಕ್ಕೆ. ನೀವು ಹೊರಡಿ ಇಲ್ಲಿಂದ" ಎಂದು ಬಾಲಕಿ ಚೀರಿದಳು. "ಅವನ ಪಾಡಿಗೆ ಅವನನ್ನು ಬಿಟ್ಟುಬಿಡಿ! ಬಿಡಿ ಅವನಷ್ಟಕ್ಕೆ ಅವನನ್ನು" ಎಂದು ಹೇಳುತ್ತ ಅವಳು ಹೆಚ್ಚುಕಡಿಮೆ ಅಳುವುದಕ್ಕೆ ಆರಂಭಿಸಿದಳು. ಬಾಗಿಲ ಹತ್ತಿರ ಯಾರದ್ದೋ ಹೆಜ್ಜೆ ಸದ್ದು ಕೇಳಿಸಿತು. ಜೂಲಿಯನ್ ಮಸ್ತಕೋವಿಚ್ ಸೆಟೆದು ನಿಂತ. ಕೆಂಪುಕೂದಲಿನ ಹುಡುಗ ತುಂಬ ಗಾಬರಿಯಲ್ಲಿದ್ದ. ಹುಡುಗಿಯ ಕೈಯಿಂದ ತನ್ನ ಕೈ ಬಿಡಿಸಿಕೊಂಡು ಗೋಡೆಗೆ ಅಂಟಿಕೊಂಡು ನಿಂತ. ಮೆಲ್ಲ ಮೆಲ್ಲಗೆ ಬಿಕ್ಕುತ್ತ ಡೈನಿಂಗ್ ರೂಮಿಗೆ ಹೊರಟುಹೋದ.

ಈ ಕಡೆ ಯಾರೂ ಗಮನಿಸದೆ ಇರಲಿ ಅಂತ ಜೂಲಿಯನ್ ಮಸ್ತಕೋವಿಚ್ ಕೂಡ ಡೈನಿಂಗ್ ರೂಮಿನತ್ತ ತಿರುಗಿದ. ಗುಂಗೆ ಹುಳುವಿನಂತೆ ಅವನು ಕೆಂಪಾಗಿಬಿಟ್ಟಿದ್ದ. ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಂಡಾಗ ತುಂಬ ನಾಚಿಕೆಯಾಯಿತು. ಬಹುಶಃ ತನ್ನ ಉದ್ವೇಗವನ್ನು ನೆನಪಿಸಿಕೊಂಡು ಅವನ ಮನಸ್ಸು ಖಿನ್ನಗೊಂಡಿತ್ತು. ತನ್ನ ಅಂತಸ್ತು ಮತ್ತು ಗೌರವವನ್ನು ಗಮನಕ್ಕೆ ತಂದುಕೊಳ್ಳದೆ ಅವನು ಹಾಕಿದ್ದ ಲೆಕ್ಕಾಚಾರದಿಂದಾಗಿ, ಏನಾದರೊಂದು ವಸ್ತುವನ್ನು ಪಡೆದುಕೊಳ್ಳಲು ಯಾವುದಕ್ಕೂ ಹಿಂದೆ ಮುಂದೆ ನೋಡದ ಒಬ್ಬ ಪಡ್ಡೆ ಹುಡುಗನ ಹಾಗೆ ಉತ್ತೇಜಿತಗೊಂಡಿದ್ದ. ಇನ್ನು ಈಗಂತೂ ಪಡೆದುಕೊಳ್ಳಲು ವಸ್ತು ಇರಲೇ ಇಲ್ಲ. ಆದರೆ ಇನ್ನೈದು ವರ್ಷಗಳ ನಂತರ ಖಂಡಿತ ಇವಳೊಂದು 'ವಸ್ತು' ಆಗುತ್ತಾಳೆಂಬುದು ಅವನಿಗೆ ಗೊತ್ತಿತ್ತು.ಆ ಶ್ರೀಮಂತನ ಹಿಂದೆಹಿಂದೆಯೇ ನಾನೂ ಹೊರಗಿನ ಕೊಠಡಿಯ ತನಕ ಬಂದೆ. ಅಲ್ಲಿ ನಾನೊಂದು ಮಜವಾದ ಆಟ ನೋಡಿದೆ.

ಸಿಟ್ಟು ಕೋಪಗಳಿಂದ ತುಂಬಿದ್ದ ಜೂಲಿಯನ್ ಮಸ್ತಕೋವಿಚ್ ಆ ಕೆಂಪು ಕೂದಲಿನ ಹುಡುಗನನ್ನು ಹೆದರಿಸಿ–ಬೆದರಿಸಿ ಮಾಡುತ್ತಿದ್ದ. ಕಣ್ಣಿನಿಂದ ಕೆಂಡ ಕಾರುತ್ತಿದ್ದ. ಬಡಪಾಯಿ ಹುಡುಗ ಹಿಂದು ಹಿಂದಕ್ಕೆ ಸರಿದುಕೊಳ್ಳುತ್ತಾ ಇದ್ದ. ಕೊನೆಗೆ ಹೋಗಿ ಗೋಡೆಗೆ ತಾಗಿಕೊಂಡ. ಇನ್ನೂ ಮುಂದೆ ಸರಿಯಲು ಸಾಧ್ಯವಿರಲಿಲ್ಲ. ಗಾಬರಿಯಲ್ಲಿ ಈಗ ಇನ್ನೆಲ್ಲಿಗೆ ಹೋಗುವುದು ಅನ್ನುವುದು ಅವನಿಗೆ ಹೊಳೆಯುತ್ತಿರಲಿಲ್ಲ.

"ಹೊರಡು ಇಲ್ಲಿಂದ! ನೀನು ಇಲ್ಲೇನು ಮಾಡ್ತಾ ಇದ್ದೀಯ? ಹೇಳ್ತಾ ಇದ್ದೀನಿ ತೊಲಗಿ ಹೋಗು ಅಯೋಗ್ಯ. ಹಣ್ಣು ಕದೀತಾ ಇದ್ದೆ ತಾನೆ ನೀನು? ನಡಿ, ಓಡ್ತಾ ಇರು ಇಲ್ಲಿಂದ. ಹೋಗಿ ನಿನ್ನ ಥರದ ಜನಗಳ ಜೊತೆ ಕೂತುಕೋ".

ಹೆದರಿದ ಹುಡುಗ ಬೇರೆ ಏನೂ ಉಪಾಯವಿಲ್ಲದೆ ವೇಗವಾಗಿ ಸರಿಯುತ್ತ ಟೇಬಲ್ ಕೆಳಗಡೆ ಸೇರಿಕೊಂಡ. ಸಿಟ್ಟಿನಲ್ಲಿ ಕನಲಿ ಕೆಂಡವಾಗಿದ್ದ ಆ ದುಷ್ಟ ಮನುಷ್ಯ ಜೇಬಿನಿಂದ ರೇಶ್ಮೆಯ ದೊಡ್ಡ ಕರ್ಚೀಫ್ ಹೊರ ತೆಗೆದು ಹುಡುಗನನ್ನು ಹೊರಕ್ಕೆ ಹೊರಡಿಸಲು ಅದನ್ನು ಕೊಡವತೊಡಗಿದ.

ಜೂಲಿಯನ್ ಮಸ್ತಕೋವಿಚ್‌ನ ದೇಹ ತುಂಬ ಧಡೂತಿ ದೇಹ. ಅವನ ಕೆನ್ನೆಗಳು ಊದಿದ್ದುವು. ಹೊಟ್ಟೆ ಉಬ್ಬಿಕೊಂಡಿತ್ತು. ಅವನು ಏದುಸಿರು ಬಿಡುತ್ತ ಮೈಯೆಲ್ಲಾ ಬೆವರಿದ. ಹುಡುಗನ ವಿಷಯಕ್ಕೆ ತಿರಸ್ಕಾರ(ಅಥವಾ ಬಹುಶಃ ಅಸೂಯೆ) ಎಷ್ಟಿತ್ತೆಂದರೆ ನಿಜಕ್ಕೂ ಹುಚ್ಚನೇ ಎನ್ನುವ ಹಾಗೆ ರ್ತಿಸತೊಡಗಿದ.

ನನಗೆ ಜೋರಾಗಿ ನಗು ಬಂದುಬಿಟ್ಟಿತು. ಜೂಲಿಯನ್ ಮಸ್ತಕೋವಿಚ್ ತಿರುಗಿದ. ಅವನು ತುಂಬಾ ಗಾಬರಿಗೊಂಡಿದ್ದ. ಒಂದು ಕ್ಷಣಕಾಲ ತನ್ನ ಅಂತಸ್ತನ್ನೂ ಸ್ಪಷ್ಟವಾಗಿ ಮರೆತುಬಿಟ್ಟಿದ್ದ. ಇದೇ ಹೊತ್ತಿಗೆ ಎದುರು ಬಾಗಿಲಿನಿಂದ ಆತಿಥೇಯನೂ ಪ್ರತ್ಯಕ್ಷನಾದ. ಹುಡುಗ ಟೇಬಲ್ ಕೆಳಗಿನಿಂದ ಜರುಗಿಕೊಂಡು ಹೊರಕ್ಕೆ ಬಂದ. ತನ್ನ ಮೊಳಕೈ ಮತ್ತು ಮಣಿಕಟ್ಟುಗಳನ್ನು ಒರೆಸಿಕೊಳ್ಳತೊಡಗಿದ. ಹುಡುಗನನ್ನು ಹೊರಕ್ಕೆ ಹೊರಡಿಸಲು ಆಡಿಸಿದ ತನ್ನ ಕರ್ಚೀಫನ್ನು ಜೂಲಿಯನ್ ಮಸ್ತಕೋವಿಚ್ ಎಚ್ಚರಿಕೆಯಿಂದ ಎತ್ತಿಕೊಂಡ. ಅದರಿಂದ ಮೂಗು ಒರೆಸಿಕೊಳ್ಳತೊಡಗಿದ. ಲೋಕ ಅರಿತ ಒಬ್ಬ ಚತುರ ವ್ಯಕ್ತಿಯಂತೆ ಕೂಡಲೇ ತನ್ನನ್ನು ಸಂಭಾಳಿಸಿಕೊಂಡು ಈ ಸಂದರ್ಭದ ಸಂಪೂರ್ಣ ಪ್ರಯೋಜನ ಪಡೆದುಕೊಂಡು ತನ್ನ ವ್ಯವಹಾರದ ವಿಷಯ ಮಾತಾಡತೊಡಗಿದ–

"ನಿಮ್ಮ ಹತ್ತಿರ ನಾನು ಮಾತಾಡಬೇಕು ಅಂತ ಇದ್ದದ್ದು ಇದೇ ಹುಡುಗನ ವಿಷಯ"– ಎಂದು ಕೆಂಪು ಕೂದಲಿನ ಹುಡುಗನ ಕಡೆ ಕೈ ತೋರಿಸುತ್ತ ಹೇಳಿದರು.

ಜೂಲಿಯನ್ ಮಸ್ತಕೋವಿಚ್ "ಓಹ್" ಎಂದು ಉದ್ಗರಿಸಿದ. ಇದು ಇನ್ನೂ ಪೂರ್ತಿ ಸರಿಹೋಗಿರಲಿಲ್ಲ.

ನಮ್ಮ ಆತಿಥೇಯ "ಇವನು ನನ್ನ ಗವರ್ನೆಸ್‌ಳ ಮಗ" ಎಂದು ಆಢ್ಯತೆಯಿಂದ ಹೇಳಿದರು. "ಆ ಬಡವೆ ಒಬ್ಬ ಪ್ರಾಮಾಣಿಕ ಅಧಿಕಾರಿಯ ವಿಧವೆ. ಹಾಗಾಗಿ ತಮಗೆ ಯೋಗ್ಯ ಅಂತ ಕಂಡುಬಂದರೆ–"

"ಇಲ್ಲ, ಖಂಡಿತಾ ಸಾಧ್ಯವಿಲ್ಲ" ಜೂಲಿಯನ್ ಅವಸರದಲ್ಲಿ ಚೀರಿದ. "ನೀವು ನನ್ನನ್ನು ಕ್ಷಮಿಸಿ, ಫಿಲಿಪ್ ಅಲೆಕ್ಸೆವಿಚ್ ನಾನು ಏನೂ ಮಾಡಕ್ಕೆ ಸಾಧ್ಯವಿಲ್ಲ. ನಾನು ತಲಾಶ್ ಮಾಡಿ ನೋಡಿದ್ದೀನಿ. ಆದರೆ ಯಾವುದೂ ಜಾಗ ಖಾಲಿ ಇಲ್ಲ. ಮೊದಲೇ ಹತ್ತು ಜನರ ಅರ್ಜಿಗಳು ಬಂದುಬಿಟ್ಟಿವೆ. ಅವರ ಹಕ್ಕು ಮೊದಲಿರುತ್ತೆ. ತಾವು ನನ್ನನ್ನು ಕ್ಷಮಿಸಿಬಿಡಿ"

"ಓಹ್ ತುಂಬಾ ಕೆಟ್ಟನಿಸುತ್ತಾ ಇದೆ" ಆತಿಥೇಯ ಹೇಳಿದ. "ಈ ಹುಡುಗ ತುಂಬಾ ನಾಚಿಕೆಯ ಸ್ವಭಾವದವನು"

"ಅವನು ಬಹಳ ಬದ್ಮಾಶ್ ಮತ್ತು ಧೂರ್ತ ಬಾಲಕ". ಮುಖ ಸಿಂಡರಿಸಿ ಹೇಳಿದ– "ಹೋಗು ಹುಡುಗ, ನೀನು ಇಷ್ಟುಹೊತ್ತೂ ಇಲ್ಲೇ ಯಾಕೆ ನಿಂತಿದ್ದೀಯ? ಹೋಗು ಬೇರೆ ಹುಡುಗರ ಜೊತೆ ಆಟ ಆಡಿಕೋ ಹೋಗು".

ಅವನಿಗೆ ತನ್ನನ್ನು ತಾನು ನಿಯಂತ್ರಿಸಿಕೊಳ್ಳಲಾಗಲಿಲ್ಲ. ಅವನು ವಕ್ರನೋಟದಿಂದ ನನ್ನನ್ನು ನೋಡಿದ. ನನಗೂ ತಡೆದುಕೊಳ್ಳೋದು ಕಷ್ಟವಾಗುತ್ತಾ ಇತ್ತು. ನಾನು ಅವನಿಗೆ ಕಾಣೋ ಹಾಗೆ ನೋಡಿ ನಕ್ಕುಬಿಟ್ಟೆ. ಅವನು ಅತ್ತ ತಿರುಗಿ ನನಗೆ ಕೇಳಿಸುವ ಹಾಗೆ ಆತಿಥೇಯನನ್ನು ಕೇಳಿದ–"ಈ ವಿಲಕ್ಷಣ ಯುವಕ ಯಾರು?" ಎಂದು ಕೇಳಿದ. ಇಬ್ಬರೂ ಪರಸ್ಪರ ಪಿಸುಗುಟ್ಟುತ್ತ ನನ್ನ ಕಡೆ ನೋಡದೇನೇ ಕೊಠಡಿಯಿಂದ ಹೊರಕ್ಕೆ ಹೋದರು. ನಾನು ತುಂಬಾ ಜೋರಾಗಿ ನಕ್ಕೆ. ಅನಂತರ ನಾನೂ ಹೊರಗಿನ ಕೋಣೆಗೆ ಬಂದೆ. ಅಲ್ಲಿ ಈ ನಮ್ಮ ವಿಶೇಷ ಅತಿಥಿ ಮಕ್ಕಳ ತಾಯಿ ತಂದೆಗಳಿಂದ ಸುತ್ತುವರಿಯಲ್ಪಟ್ಟಿದ್ದ. ಆತಿಥೇಯ ಮತ್ತು ಆತನ ಹೆಂಡತಿ ಕೂಡ ಅವನ ಸಮೀಪವೇ ಸುತ್ತಾಡುತ್ತ ಇದ್ದರು. ಅವನು ಆಗತಾನೆ ಪರಿಚಯವಾದ ಒಬ್ಬ ಮಹಿಳೆಯೊಂದಿಗೆ ಬಹಳ ಉತ್ಸುಕತೆಯಿಂದ ಹರಟೆ ಶುರು ಮಾಡಿದ್ದ. ಈ ಮಹಿಳೆ ಶ್ರೀಮಂತ ಮುಗ್ಧ ಬಾಲಕಿಯ ಕೈಯನ್ನು ಹಿಡಿದುಕೊಂಡಿದ್ದಳು. ಜೂಲಿಯನ್ ಮಸ್ತಕೋವಿಚ್ ಒಂದೇ ಸಮನೆ ಬಾಲಕಿಯ ಪ್ರಶಂಸೆ ಮಾಡ್ತಾನೇ ಇದ್ದ. ಅವನು ಬಾಲಕಿಯ ಸೌಂದರ್ಯ, ಪ್ರತಿಭೆ, ಬುದ್ಧಿವಂತಿಕೆ, ಲಾವಣ್ಯ, ಅವಳ ಉಚ್ಚ ಕುಲ ಇದರ ಬಗ್ಗೆಯೆಲ್ಲ ಭಾರಿ ಭಾರಿ ಪ್ರಶಂಸೆಯ ಮಾತುಗಳಲ್ಲಿ ಮುಳುಗಿ ಹೋದ. ಈ ಎಲ್ಲದರ ಹಿಂದಿನ ಅವನ ಉದ್ದೇಶ ಹುಡುಗಿಯ ತಾಯಿಯನ್ನು ಸುಳ್ಳೇ ಹೊಗಳಿ ಅಟ್ಟಕ್ಕೇರಿಸುವುದು. ತಾಯಿ ಕೂಡ ಅವನ ಮಾತುಗಳನ್ನು ಗಮನವಿಟ್ಟು ಕೇಳಿ ತನಗಾದ ಸಂತೋಷಾತಿರೇಕದಿಂದ ಆನಂದ ಬಾಷ್ಪ ಸುರಿಸುವುದನ್ನು ಬಹಳ ಕಷ್ಟದಿಂದ ತಡೆದಳು. ತಂದೆಯೂ ಕೃತಜ್ಞತೆ ಸೂಚಿಸುವ ಮುಗುಳ್ನಗೆ ನಕ್ಕು ತನ್ನ ಸಂತಸವನ್ನು ವ್ಯಕ್ತಪಡಿಸಿದ.

ಸಂತೋಷ ಎನ್ನುವುದು ಒಂದು ಸಾಂಕ್ರಾಮಿಕ ರೋಗದ ಹಾಗೆ. ಪ್ರತಿಯೊಬ್ಬನೂ ಈ ಸಂತೋಷದಲ್ಲಿ ಭಾಗಿಯಾದ. ಮಾತು-ಕತೆಗೆ ಏನೂ ಅಡ್ಡಿಯಾಗದಿರಲೆಂದು ಮಕ್ಕಳು ಆಟವಾಡುವುದನ್ನೂ ತಡೆಯಲಾಯಿತು. ಇಡೀ ವಾತಾವರಣವೆಲ್ಲ ವಿಸ್ಮಯಭರಿತವಾಯಿತು. ಅತ್ಯಂತ ಪ್ರಭಾವಕ್ಕೊಳಗಾಗಿದ್ದ ಆ ಮುಗ್ಧ ಬಾಲಕಿಯ ತಾಯಿ ಅತ್ಯಂತ ಘನತೆ ಮತ್ತು ವಿನಯಪೂರ್ವಕವಾಗಿ ಜೂಲಿಯನ್ ಮಸ್ತಕೋವಿಚ್‌ನನ್ನು ತಾವು ನಮ್ಮ ಮನೆಗೆ ಎಂದು ದಯಮಾಡಿಸುವ ಕೃಪೆ ಮಾಡುವಿರಿ ಎಂದು ಕೋರುತ್ತಿದ್ದದುದನ್ನು ಕೇಳಿಸಿಕೊಂಡೆ. ಅವನು ಸಂತೋಷದಿಂದ ಆಕೆಯ ಆಹ್ವಾನವನ್ನು ಅಂಗೀಕರಿಸಿದ. ಸರಿ ಅತಿಥಿಗಳು ಕೊಠಡಿಯ ಸುತ್ತಲೂ ಚೆದುರಿದರು. ಅವರೆಲ್ಲ ಅತ್ಯಂತ ಶ್ರದ್ಧೆಯಿಂದ ಆ ಉದ್ಯಮಿ, ಅವನ ಹೆಂಡತಿ ಮತ್ತು ಮಗಳ, ಅದರಲ್ಲೂ ವಿಶೇಷವಾಗಿ ಜೂಲಿಯನ್ ಮಸ್ತಕೋವಿಚ್‌ನ ಗುಣಗಾನ ಮಾಡುತ್ತಿದ್ದರು.

"ಈ ಮನುಷ್ಯನ ಮದುವೆ ಆಗಿದೆಯೆ?" ಎಂದು ನಾನು ಜೂಲಿಯನ್ ಮಸ್ತಕೋವಿಚ್‌ನ ಹತ್ತಿರ ನಿಂತಿದ್ದ ಒಬ್ಬ ಪರಿಚಿತ ವ್ಯಕ್ತಿಯನ್ನು ಗಟ್ಟಿಯಾಗಿ ಕೇಳಿದೆ.

"ಇಲ್ಲ" ಎಂದು ಆ ಪರಿಚಿತ ವ್ಯಕ್ತಿ ಉತ್ತರಿಸಿದ. ಗೊತ್ತಿದ್ದೂ ಗೊತ್ತಿದ್ದೂ ನಾನು ತೋರಿದ ಅನಾಗರಿಕ ವರ್ತನೆಗೆ ಅವನು ತುಂಬ ಚಕಿತಗೊಂಡ.

ಈಗ್ಗೆ ಸ್ವಲ್ಪ ಸಮಯದ ಹಿಂದಿನ ಸಂಗತಿ. ನಾನು ಚರ್ಚ್ ಹತ್ತಿರ ನಡೆದು ಹೋಗುತ್ತಿದ್ದೆ. ಯಾವುದೋ ವಿವಾಹ ಸಮಾರಂಭದಲ್ಲಿ ಒಟ್ಟು ಸೇರಿದ ಜನರ ಗುಂಪು ನೋಡಿ ನನ್ನ ಗಮನ ಅತ್ತ ಹೋಯಿತು. ಅದೊಂದು ವಿಷಾದದ ದಿನ. ತುಂತುರು ಮಳೆ ಇನ್ನೇನು ಬರುವುದರಲ್ಲಿತ್ತು. ನಾನು ಗುಂಪನ್ನು ಸೀಳಿಕೊಂಡು ಚರ್ಚ್ ಒಳಗೆ ನುಗ್ಗಿದೆ. ವರ ಗಿಡ್ಡನೆಯ ಸ್ಥೂಲಕಾಯದ ಹೃಷ್ಟಪುಷ್ಟನಾದ ಹೊಟ್ಟೆ ಮುಂದಕ್ಕೆ ಬಂದಿರುವ ವ್ಯಕ್ತಿ. ಅವನು ಬಹಳ ಬೆಲೆ ಬಾಳುವ ವಸ್ತ್ರಗಳನ್ನು ಧರಿಸಿದ್ದನು. ಅತ್ತ-ಇತ್ತ ಓಡಾಡುತ್ತ ಇಡೀ ವ್ಯವಸ್ಥೆಯ ಉಸ್ತುವಾರಿ ನೋಡುತ್ತಿದ್ದ. ಕಡೆಗೆ ವಧು ಬರುತ್ತಿದ್ದಾಳೆಂಬ ಸುದ್ದಿ ಬಂತು. ನಾನು ಗುಂಪಿನಲ್ಲಿ ದಾರಿ ಮಾಡಿಕೊಂಡು ಮುಂದೆ ಹೋಗಿ ಮದುಮಗಳ ಅದ್ಭುತ ಸೌಂದರ್ಯ ನೋಡಿ ಬೆರಗಾದೆ. ಆದರೆ ಹುಡುಗಿಯ ಮುಖ ಬಣ್ಣಗೆಟ್ಟು ವಿಷಾದದಿಂದ ಕೂಡಿತ್ತು. ಅವಳು ಬಹಳ ವ್ಯಾಕುಲಗೊಂಡವಳಂತೆ ಕಂಡಳು. ಅವಳನ್ನು ನೋಡಿದರೆ ಈಗ ತಾನೆ ಅತ್ತು ಬಂದಿರುವಂತಿತ್ತು. ಕಣ್ಣುಗಳು ಕೆಂಪಾಗಿದ್ದುವು. ಅವಳ ಮುಖದ ಒಂದೊಂದು ರೇಖಾಕೃತಿಯಲ್ಲೂ ಕ್ಲಾಸಿಕ್ ತೀಕ್ಷ್ಣತೆ ಇತ್ತು. ಅದು ಅವಳ ಚೆಲುವಿಗೊಂದು ವಿಶೇಷ ಗರಿಮೆ ಮತ್ತು ಪಾವಿತ್ರ್ಯವನ್ನು ತಂದುಕೊಟ್ಟಿತ್ತು. ಆದರೆ ಆ

ತೀಕ್ಷ್ಣತೆ, ಪಾವಿತ್ರ್ಯ ಮತ್ತು ವಿಷಾದದ ಹಿಂದೆ ಒಬ್ಬ ಹುಡುಗಿಯ ಉದ್ಧಟತನದ ಸುಳಿವಿತ್ತು. ಅವಳ ಮುಖದ ಮೇಲೆ ನೆಲೆಸಿದ್ದ ವರ್ಣನೆಗೆ ನಿಲುಕದ ಭೋಳೇತನ, ಮುಗ್ಧತೆ, ಮತ್ತು ಅಶಾಂತಿಗಳು ಕರುಣೆಯ ಮೂಕ ಯಾಚನೆ ಮಾಡುತ್ತಿರುವಂತಿತ್ತು.

ಅವಳು ಇನ್ನೂ ಹದಿನಾರು ವರ್ಷದವಳು ಎಂದು ಜನ ಹೇಳುತ್ತಿದ್ದರು. ನಾನು ವರ ಮಹಾಶಯನನ್ನು ಗಮನವಿಟ್ಟು ನೋಡಿದೆ. ಒಮ್ಮೆಲೇ ಗುರುತು ಹತ್ತಿತು. ಅರೆ! ಇವನು ಐದು ವರ್ಷದ ಹಿಂದೆ ನೋಡಿದ್ದು ಬಿಟ್ಟರೆ ಆ ಮೇಲೆ ಮತ್ತೆ ನೋಡದ ಅದೇ ಜೂಲಿಯನ್ ಮಸ್ತಕೋವಿಚ್! ಮತ್ತೊಮ್ಮೆ ನಾನು ಮದುಮಗಳನ್ನು ನೋಡಿದೆ. ಓ ದೇವರೆ! ಬೇಗ ಬೇಗನೆ ನಾನು ಚರ್ಚಿನಿಂದ ಹೊರಕ್ಕೆ ಓಡಿದೆ. ಆ ಗುಂಪಿನಿಂದ ಮದುಮಗಳ ಸಂಪತ್ತು, ಅಂತಸ್ತು, ಐದು ಸಾವಿರ ರೂಬಲ್ ವರದಕ್ಷಿಣೆ, ಅವಳ ಪಾಕೆಟ್ ಮನಿ ಇತ್ಯಾದಿ ಸಂಗತಿಗಳಿಗೆ ಸಂಬಂಧಿಸಿದ ಮಾತುಗಳು ಕೇಳಿಸುತ್ತಿದ್ದುವು.

"ನಿಜ ಅವನ ಲೆಕ್ಕಾಚಾರ ಬಿಲ್ಕುಲ್ ಸರಿಯಾಗಿತ್ತು"– ಎಂದು ಆ ಬೀದಿಯಿಂದ ಹೊರಕ್ಕೆ ಹೋಗುತ್ತ ಯೋಚಿಸಿದೆ.

❖

ಆ ಬಲಗೈ

ರಷ್ಯನ್ ಮೂಲ : ಅಲೆಕ್ಸಾಂಡರ್ ಸೋಲ್ಜೆ ನಿಟ್ಸನ್

ನಾನು ಆ ಚಳಿಗಾಲದಲ್ಲಿ ಹೆಚ್ಚುಕಡಮೆ ಸಾಯುವ ಸ್ಥಿತಿಯಲ್ಲಿ ತಾಶ್ಕೆಂಟ್ ತಲುಪಿಬಿಟ್ಟಿದ್ದೆ. ಸಾಯುವ ಸಲುವಾಗಿಯೇ ಅಲ್ಲಿಗೆ ಬಂದಿದ್ದೆ.

ಆದರೆ ಇದ್ದಕ್ಕಿದ್ದಂತೆ ನನಗೊಂದು ಹೊಸ ಬದುಕು ಸಿಕ್ಕಿಬಿಟ್ಟಿತು.

ಒಂದು ತಿಂಗಳು ಕಳೆಯಿತು. ಮತ್ತೊಂದು ತಿಂಗಳು ಕಳೆಯಿತು. ಮತ್ತೂ ಒಂದು ತಿಂಗಳು. ತಾಶ್ಕೆಂಟ್‌ನ ಸುಂದರವಾದ ವಸಂತ ನನ್ನ ಕಿಟಕಿಯೊಳಗಿನಿಂದ ಹೊಮ್ಮಿ ಬೇಸಗೆ ಕಾಲಿಟ್ಟಿತು. ಎಷ್ಟರ ಮಟ್ಟಿಗೆ ಅಂದರೆ ನಾನು ತಟ್ಟಾಡುತ್ತ ಅಸ್ಥಿರ ಹೆಜ್ಜೆಗಳನ್ನು ಇಡುತ್ತ ಹೊರಹೋಗಲು ಶುರುಮಾಡಿದಾಗ ಹೊರಗೆ ಹಸಿರು ಮತ್ತು ಬೇಸಗೆ ಬಂದಾಗಿತ್ತು.

ನಾನು ಸುಧಾರಿಸುತ್ತಿದ್ದೇನೆಂದು ಒಪ್ಪಿಕೊಳ್ಳುವ ಧೈರ್ಯವೇ ನನಗಿರಲಿಲ್ಲ. ಹೆಚ್ಚೆಂದರೆ ನನಗೆ ಬದುಕುವ ಅವಕಾಶ ಏನು ಸಿಕ್ಕಿದೆ ಅದು ಕೇವಲ ಕೆಲವು ತಿಂಗಳುಗಳ ಅವಧಿಯದೇ ಹೊರತು ವರ್ಷಗಳದ್ದಲ್ಲ ಎಂದೇ ಎನಿಸಿತ್ತು. ಆಸ್ಪತ್ರೆಯ

ಎರಡು ವಿಭಾಗಗಳ ನಡುವೆ ಹಬ್ಬಿದ್ದ ಪಾರ್ಕ್‌ನಲ್ಲಿ ಸಣ್ಣ ಸಣ್ಣ ಕಲ್ಲುಹರಳುಗಳು ತುಂಬಿದ್ದ ಕಪ್ಪು ರಸ್ತೆಯ ಮೇಲೆ ನಿಧಾನವಾಗಿ ನಡೆದಾಡಲು ಪ್ರಾರಂಭಿಸಿದೆ. ಆಗಾಗ್ಗೆ ಕುಳಿತುಕೊಳ್ಳಬೇಕಾಗುತ್ತಿತ್ತು ಮತ್ತು ವಿಶ್ರಾಂತಿ ತೆಗೆದುಕೊಳ್ಳಬೇಕಾಗುತ್ತಿತ್ತು. ನಿಶ್ಶಕ್ತಗೊಳಿಸುವ ರೇಡಿಯೋ ಥೆರಪಿಯ ಪ್ರಭಾವದಿಂದಾಗಿ ಮಲಗಿಬಿಡಬೇಕಾಗುತ್ತಿತ್ತು. ನನ್ನ ತಲೆಯು ದೇಹದಿಂದ ಕೆಳಕ್ಕೆ ಜೋತುಬೀಳುತ್ತಿತ್ತು.

ಒಂದು ರೀತಿಯಲ್ಲಿ ನಾನು ಇತರೆ ರೋಗಿಗಳ ಹಾಗೆಯೇ ಇದ್ದೆ. ಆದರೂ ಅವರಿಗಿಂತ ಕೊಂಚ ಭಿನ್ನನಾಗಿದ್ದೆ. ನನ್ನ ಮೇಲಿನ ನಿಯಂತ್ರಣ ತೀವ್ರವಾಗಿಯೇ ಇತ್ತು. ನಾನು ನನ್ನಷ್ಟಕ್ಕೇ ಸೀಮಿತಗೊಳಿಸಿಕೊಳ್ಳಬೇಕಾಗುತ್ತಿತ್ತು. ಇತರೆಯವರ ಸಂಬಂಧಿಕರು ಬರುತ್ತಿದ್ದರು ಮತ್ತು ಅವರ ಬಂಧುಗಳ ವಿಷಯಕ್ಕೆ ಕಣ್ಣೀರು ಕರೆಯುತ್ತಿದ್ದರು. ಅವರಿಗಿದ್ದ ಒಂದೇ ಒಂದು ಚಿಂತೆಯೆಂದರೆ ಚೆನ್ನಾಗಿ ಆಗಬೇಕೆಂಬುದು. ಚೆನ್ನಾಗಿ ಆಗಲು ನನ್ನ ಬಳಿ ಬಹುಮಟ್ಟಿಗೆ ಏನೂ ಇರಲಿಲ್ಲ. ಆ ವಸಂತದಲ್ಲಿ ನಾನು ಮೂವತ್ತೈದು ವರ್ಷದವನಾಗಿದ್ದೆ. ಇಡೀ ಪ್ರಪಂಚದಲ್ಲಿ ನನ್ನ ಬಗ್ಗೆ ಚಿಂತೆ ಮಾಡುವವರು ಯಾರೂ ಇರಲಿಲ್ಲ. ನನ್ನ ಹತ್ತಿರ ಪಾಸ್ ಪೋರ್ಟ್ ಕೂಡ ಇರಲಿಲ್ಲ. ಒಂದು ವೇಳೆ ನಾನು ಚೆನ್ನಾಗಿ ಆಗಿಬಿಟ್ಟರೆ ಹಚ್ಚ ಹಸಿರಿನ ಫಲವತ್ತಾದ ಜಾಗ ಬಿಟ್ಟು ಅಲ್ಲಿ ಆಜೀವ ಗಡೀಪಾರಿಗೆ ಗುರಿಮಾಡಿ ಕಳಿಸಲಾಗಿದ್ದ ಅದೇ ಭಯಂಕರವಾದ ಆ ಹಾಳು ಕ್ಯಾಂಪಿಗೆ ಹೋಗಬೇಕಾಗುತ್ತಿತ್ತು. ಅಲ್ಲಿ ನನ್ನ ಮೇಲೆ ನಿಗಾ ಇಡಲಾಗುತ್ತಿತ್ತು. ಪ್ರತಿ ಹದಿನೈದು ದಿನಕ್ಕೊಮ್ಮೆ ರಿಜಿಸ್ಟ್ರೇಷನ್ ಸಲುವಾಗಿ ಹೋಗಬೇಕಾಗುತ್ತಿತ್ತು. ಅಲ್ಲಿಯ ಕಮಾಂಡೆಂಟ್‌ಗೆ ಸಾಯುತ್ತಿರುವ ಮನುಷ್ಯನಾದ ನನಗೆ ಉಚಿತ ಚಿಕಿತ್ಸೆ ಕೊಡಿಸಲು ಹೊರಗೆ ಕಳಿಸಿಕೊಡಬೇಕೋ ಬೇಡವೋ ಎಂದು ನಿರ್ಣಯಿಸಲು ಬಹಳ ಸಮಯ ತಗಲುತ್ತಿತ್ತು. ಇದೆಲ್ಲವನ್ನೂ ನಾನು ನನ್ನ ಜೊತೆಯ ರೋಗಿಗಳಿಗೆ ಹೇಳಲು ಸಾಧ್ಯವಿರಲಿಲ್ಲ. ಒಂದು ವೇಳೆ ನಾನು ಹೇಳಿದ್ದರೂ ಅವರು ನನ್ನನ್ನು ಅರ್ಥಮಾಡಿಕೊಳ್ಳುತ್ತಿರಲಿಲ್ಲ.

ಆದರೂ ಕಳೆದ ಹತ್ತು ವರ್ಷಗಳಲ್ಲಿ ಕೇವಲ ಯೋಚಿಸುತ್ತಿದ್ದುದರಿಂದಾಗಿಯೇ ನಾನು ಕಂಡುಕೊಂಡದ್ದೇನೆಂದರೆ ನನ್ನ ಹೊಯ್ದಾಡುವ ಕಾಲುಗಳಿಂದ ನಡೆದಾಡುವುದು, ಎದೆಯ ನೋವನ್ನು ಅದುಮಿಟ್ಟು ಉಸಿರು ತೆಗೆದುಕೊಳ್ಳುವುದು, ಅಥವಾ ಸೂಪಿನ ಬಟ್ಟಲಿನಲ್ಲಿ ಒಂದು ದೊಡ್ಡ ಆಲೂಗೆಡ್ಡೆಯ ತುಣುಕು ಸಿಗುವುದು ಇವೇ ಮೊದಲಾದ ಚಿಕ್ಕ ಚಿಕ್ಕ ವಿಷಯಗಳೇ ಜೀವನದ ಸ್ವಾದವನ್ನು ಹೆಚ್ಚಿಸುವಂಥವಾಗಿರುತ್ತವೆ ಎನ್ನುವುದು.

ಆ ವಸಂತದ ಕಾಲವು ನನ್ನ ಜೀವನದ ಅತ್ಯಂತ ಕಷ್ಟದಾಯಕವಾದ, ಆದರೆ ಎಲ್ಲಕ್ಕಿಂತ ಹೆಚ್ಚು ಸುಂದರವಾದ ಕಾಲವಾಗಿತ್ತು. ಸಕಲ ವಸ್ತುಗಳೂ ನನ್ನ ಗಮನ

ಸೆಳೆಯುತ್ತಿದ್ದುವು. ಐಸ್ ಕ್ರೀಮ್ ತುಂಬಿಕೊಂಡು ಸಾಗುವ ಗಾಡಿ, ತೋಟಕ್ಕೆ ನೀರು ಸಿಂಪಡಿಸುವ ಪೈಪನ್ನು ಹಿಡಿದುಕೊಂಡು ತೋಟವನ್ನು ಸ್ವಚ್ಛಗೊಳಿಸುತ್ತಿದ್ದ ಕೆಲಸಗಾರರು, ಕ್ಯಾರೆಟ್‌ನ ಗುಡ್ಡೆಗಳನ್ನು ಮಾರುತ್ತಿರುವ ಬೀದಿ ವ್ಯಾಪಾರಿಗಳು, ಇದಕ್ಕಿಂತಲೂ ಹೆಚ್ಚಾಗಿ ಬಿರುಕುಬಿಟ್ಟ ಗೋಡೆಯಲ್ಲಿ ಮುಖ ಹುದುಗಿಸಿ ಹುಲ್ಲು ಮೇಯುತ್ತಿರುವ ಕುದುರೆ ಮರಿಗಳು. ಒಂದೋ ನಾನು ಎಲ್ಲವನ್ನೂ ಮರೆತುಬಿಟ್ಟಿದ್ದೆ ಇಲ್ಲವೆ ಇದೆಲ್ಲವನ್ನೂ ನಾನು ಎಂದೂ ನೋಡಿಯೇ ಇರಲಿಲ್ಲ.

ಪ್ರತಿದಿನ ಹಿಂದಿನ ದಿನಕ್ಕೆ ಹೋಲಿಸಿದರೆ ನಾನು ಇದ್ದ ಆಸ್ಪತ್ರೆಯಿಂದ ಇನ್ನಷ್ಟು ಮುಂದಕ್ಕೆ ಮತ್ತಷ್ಟು ಮುಂದಕ್ಕೆ ಸಾಗಿರುತ್ತಿದ್ದೆ, ಪಾರ್ಕಿನಲ್ಲಿ ಇನ್ನಷ್ಟು ದೂರ ಹೋಗುತ್ತಿದ್ದೆ. ಈ ಆಸ್ಪತ್ರೆ ಖಂಡಿತವಾಗಿಯೂ ಕಳೆದ ಶತಮಾನದ ಕೊನೆಯಲ್ಲಿ ಕಟ್ಟಿಸಿದ್ದಾಗಿರಬೇಕು. ಕಾರಣ ಇದರಲ್ಲಿ ತೆರೆದ ಸಂದುಗಳುಳ್ಳ ಇಟ್ಟಿಗೆ ಕೆಲಸದ ಮಜಬೂತಾದ ಕಟ್ಟಡಗಳು ಇದ್ದುವು. ಪಾರ್ಕು ಹೊಳೆವ ಸೂರ್ಯೋದಯದಿಂದ ತೊಡಗಿ ಬೆಳಕು ತುಂಬಿದ ಸಂಜೆಯ ವರೆಗಿನ ನಾನಾ ಬಗೆಯ ಜೀವನದ ಚಟುವಟಿಕೆಗಳಿಂದ ತುಂಬಿರುತ್ತಿತ್ತು. ಆರೋಗ್ಯವಂತ ಮನುಷ್ಯರು ಇದರಲ್ಲಿ ಉತ್ಸಾಹದಿಂದ ನಡೆದಾಡುತ್ತಿದ್ದರು. ಅದೇ ರೋಗಿಗಳಿಗೆ ಹೆಚ್ಚು ಸಮಯ ತಗಲುತ್ತಿತ್ತು.

ಪಾರ್ಕಿನ ರಸ್ತೆಗಳು ಸೇರುವ ಮತ್ತು ಮೆಯಿನ್ ಗೇಟ್ ಅನ್ನು ತಲುಪುವ ರಸ್ತೆ ಪ್ರಾರಂಭವಾಗುತ್ತಿದ್ದ ಆ ಜಾಗದಲ್ಲಿ ಸ್ಟಾಲಿನ್ನನ ಅಮೃತಶಿಲೆಯ ಮೂರ್ತಿ ನಿಂತಿತ್ತು. ಅದರಲ್ಲಿ ತನ್ನ ಕಲ್ಲಿನ ಮೀಸೆಗಳಲ್ಲಿ ಸ್ಟಾಲಿನ್ ನಗುತ್ತಿದ್ದ. ಅದೇ ರಸ್ತೆಯಲ್ಲಿ ಮುಂದೆ ಇನ್ನಷ್ಟು ಮುಖಂಡರ ಚಿಕ್ಕ ಮೂರ್ತಿಗಳಿದ್ದುವು.

ಅದರ ನಂತರ ಸ್ಟೇಷನರಿ ಸಾಮಾನುಗಳ ಸ್ಟಾಲ್ ಸ್ಟಾಲ್ ಇತ್ತು. ಅದರಲ್ಲಿ ಪ್ಲಾಸ್ಟಿಕ್ ಪೆನ್ಸಿಲ್‌ಗಳು ಮತ್ತು ಚಿಕ್ಕ ಚಿಕ್ಕ ಸುಂದರವಾದ ಕಾಪಿ ಪುಸ್ತಕಗಳು ದೊರೆಯುತ್ತಿದ್ದುವು. ನಾನು ನನ್ನ ಈಗಿನ ಸ್ಥಿತಿಯಲ್ಲಿ ಅಸಹಾಯಕನಾಗಿದ್ದದ್ದಂತೂ ನಿಜ. ಆದರೆ ನಿಜವಾದ ಕಷ್ಟವೆಂದರೆ ಇದಕ್ಕಿಂತ ಮೊದಲಿನ ನನ್ನೆಲ್ಲ ಕಾಪಿಗಳೂ ತಲುಪಬಾರದ ಜಾಗಕ್ಕೆ ತಲುಪಿಬಿಡುತ್ತಿದ್ದುದು. ಆದ್ದರಿಂದ ಅದನ್ನು ಪಡೆದುಕೊಳ್ಳದಿರುವುದೇ ಒಳ್ಳೆಯದೆನಿಸಿತ್ತು.

ಮುಖ್ಯ ದ್ವಾರದ ಹತ್ತಿರ ಹಣ್ಣುಗಳ ಒಂದು ಸ್ಟಾಲ್ ಮತ್ತು ಸ್ಪೆಷಲ್ ಚಹಾದ ಅಂಗಡಿ ಇತ್ತು. ಪಟಾಪಟಿ ಪೈಜಾಮಾಗಳನ್ನು ಧರಿಸಿದ್ದ ರೋಗಿಗಳಾದ ನಮಗೆ ಅಲ್ಲಿಗೆ ಹೋಗಲು ಅನುಮತಿ ಇರಲಿಲ್ಲ. ಆದರೆ ಈ ಜಾಗ ಬಹಳ ಮುಕ್ತವಾಗಿ ಮತ್ತು ಚೆನ್ನಾಗಿ ಕಾಣುತ್ತಿತ್ತು. ಗ್ರೀನ್ ಟೀ ಮತ್ತು ಬ್ಲಾಕ್ ಟೀ ಗೆ ಪ್ರತ್ಯೇಕವಾದ ಕೆಟಲ್‌ಗಳು ಇರುವಂಥ ಹಾಗೂ ಒಳ್ಳೊಳ್ಳೆಯ ಮೇಜುಗಳು ಇರುವಂಥ ಒಂದು ಯೋರೋಪಿಯನ್

ಮಾದರಿಯ ಇಂಥ ಸ್ಪೆಷಲ್ ಟೀ ಸ್ಟಾಲ್ ಅನ್ನು ಇದಕ್ಕಿಂತ ಮುಂಚೆ ನಾನು ನೋಡಿರಲಿಲ್ಲ. ಇದರಲ್ಲಿ ಮಜಬೂತಾದ ಒಂದು ಉಜ್‌ಬೆಯ ನೆಲಗಟ್ಟಿನ ಭಾಗವೂ ಇತ್ತು. ಟೇಬಲ್ ಗಳ ಮೇಲೆ ಜನರು ಬೇಗ ಬೇಗ ತಮ್ಮ ಕುಡಿಯೋದು ತಿನ್ನೋದು ಮುಗಿಸಿಕೊಂಡು ಖಾಲಿ ಪ್ಲೇಟುಗಳಲ್ಲಿ ತಮ್ಮ ಟಿಪ್ಸ್ ಗಳನ್ನು ಇಟ್ಟು ಹೋಗಿಬಿಡುತ್ತಿದ್ದರು. ಉಜಬೆ ಭಾಗದಲ್ಲಿ ಇರುವಂಥ ಚಾಪೆಗಳು ಮತ್ತು ಬಿಸಿಲಿನಿಂದ ರಕ್ಷಣೆ ಪಡೆದುಕೊಳ್ಳಲು ಬೆತ್ತದ ಛಜ್ಜಾಗಳನ್ನು ಸಜ್ಜುಗೊಳಿಸಿರುವುದೇ ಮೊದಲಾದುವು ಇಲ್ಲಿ ಇರುತ್ತಿರಲಿಲ್ಲ. ಅಲ್ಲಿ ಜನ ಗಂಟೆಗಟ್ಟಲೆ ಕುಳಿತುಕೊಳ್ಳುವುದೋ ಇಲ್ಲವೇ ಮಲಗಿಕೊಳ್ಳುವುದೋ ಮಾಡುತ್ತಿದ್ದರು. ಕೆಲವೊಮ್ಮೆ ದಿನಗಟ್ಟಲೆ ಚಹಾದ ಒಂದು ಗಡಿಗೆಯನ್ನು ಮುಗಿಸಿ ಇನ್ನೊಂದನ್ನು ಆಸ್ವಾದಿಸುತ್ತಿದ್ದರು ಮತ್ತು ಬೇರೇನೂ ಕೆಲಸವಿಲ್ಲವೆಂಬಂತೆ ಚೆಸ್ ಆಡುತ್ತಿದ್ದರು.

ಆದರೆ ಹಣ್ಣುಗಳ ಸ್ಟಾಲ್ ರೋಗಿಗಳ ಸಲುವಾಗಿಯೂ ಇತ್ತು. ಆದರೆ ಹೆಸರಿಗೆ ಮಾತ್ರ 'ಗಡೀಪಾರು ಮಾಡಲಾಗಿದ್ದವರಿಗೆ ದೊರೆಯುತ್ತಿದ್ದ ನನ್ನ +ವೇತನ' ಹಣ್ಣುಗಳ ಬೆಲೆಯನ್ನು ನೋಡಿ ನಾನು ದೂರವೇ ಉಳಿಯುವಂತೆ ಮಾಡಿತ್ತು. ಒಣಗಿಸಿದ ಕರ್ಜೂರ, ಒಣದ್ರಾಕ್ಷಿ, ಮತ್ತು ಚೆರಿ ಹಣ್ಣುಗಳ ರಾಶಿಯನ್ನು ನಾನು ಗಮನವಿಟ್ಟು ನೋಡಿ ದೂರವೇ ಇರುತ್ತಿದ್ದೆ.

ಅದಕ್ಕಂತಲೂ ಮುಂದೆ ಒಂದು ಎತ್ತರವಾದ ಗೋಡೆ ಇತ್ತು. ರೋಗಿಗಳಿಗೆ ಮುಖ್ಯ ಗೇಟ್ ನಿಂದ ಹೊರಗೆ ಹೋಗಲು ಅನುಮತಿ ಇರಲಿಲ್ಲ. ಗೋಡೆಯ ಹೊರಗಿನಿಂದ ಹಗಲಿನಲ್ಲಿ ಎರಡು ಮೂರು ಬಾರಿ ಶವಯಾತ್ರೆಯ ಬ್ಯಾಂಡ್ ನ ಸದ್ದು ಕೇಳಿಸುತ್ತಿತ್ತು. (ಹತ್ತು ಲಕ್ಷ ಜನಸಂಖ್ಯೆ ಉಳ್ಳ ಈ ನಗರದ ಶ್ಮಶಾನ ಅಲ್ಲೇ ಎಲ್ಲೋ ಹತ್ತಿರದಲ್ಲೇ ಇತ್ತು.) ಶವಯಾತ್ರೆ ದೂರಹೋಗದೆ ಇರುವ ತನಕ ಸುಮಾರು ಹತ್ತು ನಿಮಿಷಗಳ ವರೆಗೆ ಶೋಕ ಸೂಚಕ ಹಾಡಿನ ಧಾಟಿ ಕೇಳಿಸುತ್ತಿತ್ತು. ಮತ್ತು ಡ್ರಮ್ ನ ಶಬ್ದ ಒಂದೇ ಧಾಟಿಯಲ್ಲಿ ಪ್ರತಿಧ್ವನಿಸುತ್ತಲೇ ಇರುತ್ತಿತ್ತು. ಅದರ ಲಯದ ಪ್ರಭಾವ ವೃತ್ತಾಕಾರ ಮಾಡಿಕೊಂಡು ಬದಲಾಯಿಸಿಕೊಂಡು ಹೋಗುತ್ತಿದ್ದ ಗುಂಪಿನ ಮೇಲೇನೂ ಆಗುತ್ತಿರಲಿಲ್ಲ. ಯಾರ ಮೇಲೆ ಅದರ ಪ್ರಭಾವ ಬೀಳುತ್ತಿತ್ತೋ ಅವರು ತಲೆಯನ್ನು ಸ್ವಲ್ಪಮಟ್ಟಿಗೆ ತಿರುಗಿಸಿಕೊಂಡು ತಮ್ಮ ತಮ್ಮ ಕೆಲಸಗಳಿಗೆ ಹೋಗಿಬಿಡುತ್ತಿದ್ದರು. (ಆ ಕೆಲಸ ಏನು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು). ಇನ್ನೊಂದು ಕಡೆ ರೋಗಿಗಳು ನಿಂತು ಶೋಕಸೂಚಕ ಸಂಗೀತವನ್ನು ಕೇಳಿಸಿಕೊಳ್ಳುತ್ತಿದ್ದರು. ಅದೂ

ಬಹಳ ಹೊತ್ತಿನ ವರೆಗೆ ಕೇಳಿಸಿಕೊಳ್ಳುತ್ತಿದ್ದರು ಅಷ್ಟೇ ಅಲ್ಲ ಕಿಟಕಿಗಳ ಹೊರಗೂ ನೋಡುತ್ತ ಇರುತ್ತಿದ್ದರು.

ನನ್ನ ಆರೋಗ್ಯ ಸರಿಹೋಗುತ್ತಾ ಇದೆ ಮತ್ತು ನಾನು ಬದುಕಿರುತ್ತೇನೆ ಎಂಬುದು ಸ್ಪಷ್ಟವಾಗುತ್ತ ಹೋದಂತೆ ಅಲ್ಲಿಯ ವಾತಾವರಣ ಅಷ್ಟೇ ಭಾರವೆನಿಸತೊಡಗಿತು. ಆ ಜಾಗವನ್ನು ಬಿಟ್ಟುಹೋಗುವುದಕ್ಕೆ ಈಗಿನಿಂದಲೇ ದುಃಖವಾಗುತ್ತಿತ್ತು.

ಆಸ್ಪತ್ರೆಯಲ್ಲಿಯ ಚಿಕಿತ್ಸಾ ಸಿಬ್ಬಂದಿಗಳ ಸ್ಟೇಡಿಯಮ್‌ನಲ್ಲಿ ದೂರದಲ್ಲಿ ಬಿಳಿಯ ಆಕೃತಿಗಳು ಟೆನಿಸ್ ಆಡುವುದು ಇರುತ್ತಿತ್ತು. ಜೀವನಪೂರ್ತಿ ಆಟವಾಡಬೇಕೆಂಬ ಇಚ್ಛೆಯಂತೂ ಇತ್ತು. ಆದರೆ ಯಾವುದೇ ಅವಕಾಶ ದೊರೆಯಲಿಲ್ಲ. ತನ್ನ ತೀಕ್ಷ್ಣ ದಡಗಳ ನಡುವೆ ಹೊಲಸಾದ ಸೋಲಾರ್ ನದಿ ಅಬ್ಬರಿಸುತ್ತ ಹರಿಯುತ್ತಿತ್ತು. ನೆರಳು ನೀಡುವ ಆ ಕೊಂಬೆಗಳಿಂದ ಇಡಿಕಿರಿದ ಅಶೋಕ ವೃಕ್ಷಗಳು ಮತ್ತು ಕೋಮಲವಾದ ಜಪಾನೀ ಅಕೇಶಿಯಾ ವೃಕ್ಷಗಳಿಂದ ಪಾರ್ಕ್ ಜೀವ ತುಂಬಿದಂತಿತ್ತು. ಎಂಟು ಬಾಯಿಗಳ ಚಿಲುಮೆಗಳಿಂದ ನೀರಿನ ಧಾರೆ ತೆಳ್ಳನೆಯ ರಜತ ಧಾರೆಯಂತೆ ಗಾಳಿಯಲ್ಲಿ ಮೇಲಕ್ಕೆ ಹಾರುತ್ತಿತ್ತು. ಇನ್ನು ಮೈದಾನದ ಮೇಲೆ ಬೆಳೆದಿದ್ದ ಹುಲ್ಲು! ಅದರ ಸ್ವಾದವನ್ನು ಬಹಳ ಹಿಂದೆಯೇ ನಾನು ಮರೆತುಬಿಟ್ಟಿದ್ದೆ. (ಕ್ಯಾಂಪಿನ ಆದೇಶಗಳ ಅಡಿಯಲ್ಲಿ ಹುಲ್ಲನ್ನು ಶತ್ರುವಿನಂತೆ ನೆಲದಿಂದ ಕಿತ್ತು ಎಸೆಯಲಾಗುತ್ತಿತ್ತು.. ಆ ಕಾರಣದಿಂದಾಗಿಯೇ ನನ್ನನ್ನು ಗಡೀಪಾರು ಮಾಡಿ ಇಟ್ಟಿದ್ದ ಜಾಗದಲ್ಲಿ ಹುಲ್ಲು ಇರಲಿಲ್ಲ.). ಅಂಗಾತನಾಗಿ ಮಲಗಿ ಹುಲ್ಲಿನ ಸುವಾಸನಾ ಭರಿತ ಬೆಚ್ಚಗಿನ ಗಾಳಿಯನ್ನು ಮೂಗಿನ ಹೊಳ್ಳೆಗಳಿಂದ ಸೇವಿಸುತ್ತಿರುವುದರಲ್ಲಿ ಒಂದು ಬಗೆಯ ಅನಿರ್ವಚನೀಯ ಆನಂದವಿರುತ್ತಿತ್ತು.

ಹುಲ್ಲಿನ ಮೇಲೆ ನಾನೊಬ್ಬನೇ ಇರಲಿಲ್ಲ. ಎಲ್ಲೆಂದರಲ್ಲಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಪುಸ್ತಕಗಳನ್ನು ಹಿಡಿದುಕೊಂಡು ಪರೀಕ್ಷೆಗಳ ಬಗ್ಗೆ ಜೋರಾಗಿ ಮಾತನಾಡುತ್ತ ಮೈದಾನದಲ್ಲಿ ತಿರುಗಾಡಿಕೊಂಡು ಬರುತ್ತಿದ್ದರು. ಸ್ಟೇಡಿಯಮ್‌ನ ಸ್ನಾನ ಗೃಹಗಳಲ್ಲಿ ತೆಳ್ಳನೆಯ ಆಟಗಾರರು ತಮ್ಮ ಆಟದ ಬ್ಯಾಗ್ ಅನ್ನು ತಗಲು ಹಾಕಿ ಹೊರಡುತ್ತಿದ್ದರು. ಸಾಯಂಕಾಲದ ಹೊತ್ತಿನಲ್ಲಿ ಹುಡುಗಿಯರು ತಮ್ಮ ಯೋಗ್ಯ ಉಡುಪಿನಲ್ಲಿ ಚಿಲುಮೆಗಳ ದಡಗಳಲ್ಲಿ ತಿರುಗಾಡುತ್ತಿದ್ದರು. ಸಂಜೆಯ ಮಂದ ಪ್ರಕಾಶದಲ್ಲಿ ಅವರು ಅಷ್ಟು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ ಆ ಕಾರಣದಿಂದ ಇನ್ನಷ್ಟು ಮೋಹಕವಾಗಿ ಕಾಣಿಸುತ್ತಿದ್ದರು, ಅವರು ತೊಟ್ಟಿದ್ದ ಉಡುಪಿನ ಸರಸರ ಗುಂಡನೆಯ ಕಲ್ಲುಗಳಿಂದ ಕೂಡಿದ ರಸ್ತೆಯ ಹತ್ತಿರ ಕೇಳಿಬರುತ್ತಿತ್ತು.

ಒಂದು ಹೃದಯಭೇದಕವಾದ ಕರುಣೆ ನನ್ನ ಮನಸ್ಸಿನಲ್ಲಿ ತುಂಬಿಬಿಡುತ್ತಿತ್ತು. ಬಹಶಃ ದಮ್ಯಾನ್ಸಕ್ ನಲ್ಲಿ ಚಳಿಯಿಂದ ನಡುಗುತ್ತಿದ್ದ ತಮ್ಮ ಪೀಳಿಗೆಯ ಅವರೆಲ್ಲರು, ಆಸ್ವಿತಾಜ್ ನಲ್ಲಿ ಸುಡಲ್ಪಡುತ್ತಿದ್ದವರು, ಝೀಝುಕಾಜಗನ್ ನಲ್ಲಿ ಸಾಯಿಸಲ್ಪಡುತ್ತಿದ್ದವರು ಇಲ್ಲವೆ ತಾಡಗಾದಲ್ಲಿ ತಮ್ಮ ಜೀವನದ ಅಂತಿಮ ಕ್ಷಣಗಳನ್ನು ಎಣಿಸುತ್ತಿದ್ದವರು– ಈ ಹುಡುಗಿಯರನ್ನು ತಮ್ಮವರೆಂದು ಎಂದಿಗೂ ಹೇಳಿಕೊಳ್ಳಲಾರರು. ಅಥವಾ ಬಹುಶಃ ನಾನು ಅವರಿಗೆ ಏನನ್ನು ಹೇಳಲಾಗಲಿಲ್ಲವೆಂಬುದನ್ನು ಎಂದಿಗೂ ತಿಳಿಯಲಾರರೆ?

ಇಡೀ ದಿನ ಆ ದುಂಡಾದ ಕಲ್ಲುಗಳು ಮತ್ತು ಕಪ್ಪು ರಸ್ತೆಗಳಲ್ಲಿ ಅದೆಷ್ಟು ಜನ ಹುಡುಗಿಯರು ಮತ್ತು ಹೆಂಗಸರು ಕಂಡು ಬರುತ್ತಿದ್ದರು! ಯುವ ವೈದ್ಯರು, ನರ್ಸ್‌ಗಳು, ಲ್ಯಾಬ್ ಗಳಲ್ಲಿ ಕೆಲಸ ಮಾಡುವ ಸಹಾಯಕಿಯರು, ಬಟ್ಟೆ ಒಗೆಯುವವರು, ಔಷಧಿಗಳನ್ನು ವಿತರಿಸುವವರು, ಅವರು ಮಾತ್ರ ಅಲ್ಲದೆ ರೋಗಿಗಳ ಸಂಬಂಧಿಕರು. ದಕ್ಷಿಣ ವಿಭಾಗದ ಇಲ್ಲವೆ ತಮ್ಮ ಬೆಳ್ಳನೆಯ ಮಿರ ಮಿರ ಮಿಂಚುವ , ಬಹುಮಟ್ಟಿಗೆ ಪಾರದರ್ಶಕವೇ ಆದ ದಿರಸುಗಳಲ್ಲಿ ನನ್ನ ಸಮೀಪದಲ್ಲಿ ಹಾದುಹೋಗುತ್ತಿದ್ದರು. ಅವರುಗಳಲ್ಲಿ ತುಂಬಾ ಶ್ರೀಮಂತರಾದವರ ಕೈಗಳಲ್ಲಿ ಬಿದಿರಿನ ಹ್ಯಾಂಡಲ್ ಉಳ್ಳ ಹಳದಿ, ನೀಲಿ ಇಲ್ಲವೆ ಗುಲಾಬಿ ಬಣ್ಣದ ಛತ್ರಿಗಳಿರುತ್ತಿದ್ದುವು. ವೇಗವಾಗಿ ನಡೆದು ಬರುತ್ತಿದ್ದ ಅವರುಗಳಲ್ಲಿ ಒಬ್ಬೊಬ್ಬರೂ ಒಂದು ಪೂರ್ಣ ಜೀವನದ ಕಥೆಯ ಪ್ಲಾಟ್ ಆಗಬಲ್ಲವರಾಗಿರುತ್ತಿದ್ದರು. ಆಕೆಯ ಪ್ರಾರಂಭದ ಜೀವನ ಮತ್ತು ಅನಂತರದ ನಮ್ಮ ಸಂಭವಿಸದ ಪರಿಚಯ.

ನಾನೊಂದು ದಯನೀಯ ದೃಶ್ಯವಾಗಿದ್ದೆ. ನನ್ನ ಒಣಗಿಹೋದ ಮುಖದ ಮೇಲೆ ನಾವು ಹಾದುಬಂದದ್ದರ ಗುರುತುಗಳಿದ್ದುವು. ಕ್ಯಾಂಪಿನ ದಿನಗಳು, ಕೋಪಭರಿತ ಮೌನದಿಂದಾದ ಗೆರೆಗಳು, ಋತುಗಳ ಹೊಡೆತದಿಂದಾದ ಹಳದಿ ಬೂದಿಯಂಥ ತೊಗಲು, ಸದ್ಯದಲ್ಲಿ ಕಾಯಿಲೆಯ ನಂತರ ಉಂಟಾದ ಹಳದಿ, ಮತ್ತು ಬಿರುಸಾದ ಗಾಳಿಯ ಪ್ರಭಾವದಿಂದ ಕೆನ್ನೆಗಳ ಮೇಲೆ ಬಿದ್ದಿದ್ದ ಹಸುರು ಪಡಿನೆಳಲು. ಆತ್ಮ ರಕ್ಷಣೆಯ ಸ್ವಭಾವ ಸಹಜ ಭಾವದಿಂದ ಮಾಡುತ್ತಿದ್ದ ಆಜ್ಞಾ ಪಾಲನೆ, ಹಾಗೂ ಅಡಗಿಕೊಂಡೇ ಇರುವ ಅಭ್ಯಾಸದ ಕಾರಣದಿಂದಾಗಿ ನನ್ನ ದೇಹ ಸ್ವಲ್ಪ ಮಟ್ಟಿಗೆ ಬಾಗಿಯೂ ಬಿಟ್ಟಿತ್ತು. ಪಟ್ಟೆಗಳಿಂದ ಕೂಡಿದ ನನ್ನ ಕೋಟು ವಿದೂಷಕನಂಥ ಹೊಟ್ಟೆೇ ಮುಗಿದುಹೋಗುತ್ತಿತ್ತು. ಪಟಾಪಟಿ ಪ್ಯಾಂಟು ಬಹಳ ಕಷ್ಟದಿಂದ ನನ್ನ ಹದಡನ್ನು ಸ್ಪರ್ಶಿಸುತ್ತಿತ್ತು. ನನ್ನ ಕುರೂಪಿ ಚಪ್ಪಲಿಗಳಿಂದ ಪಾದಗಳನ್ನು ಸುತ್ತುವರಿದಿದ್ದ ಚಿಂದಿ ಬಟ್ಟೆಗಳು ಹೊರಗೆ ಇಣುಕುತ್ತಿದ್ದುವು.

ಓಹ್! ಅವರಲ್ಲಿಯ ಅತ್ಯಂತ ಸಾಧಾರಣ ಹೆಂಗಸು ಕೂಡ ನನ್ನ ಜೊತೆ ನಡೆದು ಬರುವುದನ್ನು ಯೋಚಿಸಲೂ ಆರಳು. .....

ಇದು ನನಗೇ ಅರ್ಥವಾಗದಿದ್ದರೂ ಅವರ ಕಣ್ಣುಗಳು ಎಷ್ಟರ ಮಟ್ಟಿಗೆ ಜಗತ್ತೆಲ್ಲವನ್ನೂ ತೀಕ್ಷ್ಣವಾಗಿ ಅಡಗಿಸಿಕೊಳ್ಳಬಲ್ಲವಾಗಿದ್ದವೋ ನನ್ನ ಕಣ್ಣುಗಳು ಕೂಡಾ ಅಷ್ಟೇ ತೀಕ್ಷ್ಣವಾಗಿ ಇಡೀ ಜಗತ್ತನ್ನು ಅಡಗಿಸಿಕೊಳ್ಳಬಲ್ಲವಾಗಿದ್ದುವು.

ಒಮ್ಮೆ ಸಂಜೆಗೆ ಮುನ್ನ ನಾನು ಮುಖ್ಯ ಗೇಟಿನ ಬಳಿ ನಿಂತುಕೊಂಡು ಸುತ್ತ ಮುತ್ತ ನೋಡುತ್ತಿದ್ದೆ. ಎಂದಿನ ಹಾಗೆಯೇ ಜನರು ಬರುತ್ತಾ ಹೋಗುತ್ತಾ ಇದ್ದರು. ಒಲೆದಾಡುತ್ತಿರುವ ಕೊಡೆಗಳು, ರೇಶ್ಮೆ ಪೋಷಾಕುಗಳು, ತೆಳ್ಳನೆಯ ಬಣ್ಣದ ಬೆಲ್ಟುಗಳಿಂದ ಕೂಡಿದ ಪ್ಯಾಂಟುಗಳು, ಕಸೂತಿ ಹಾಕಿದ ಅಂಗಿಗಳು, ಮತ್ತು ಬಣ್ಣ ಬಣ್ಣದ ಟೋಪಿಗಳು, ಈ ಎಲ್ಲವೂ ಅನಂತ ಪ್ರವಾಹದಲ್ಲಿ ಹತ್ತಿರದಲ್ಲೇ ಹಾದುಹೋಗುತ್ತಿದ್ದುವು. ದನಿಗಳು ಒಂದರೊಳಗೊಂದು ಬೆರೆತು ಅಸ್ತವ್ಯಸ್ತಗೊಳ್ಳುತ್ತಿದ್ದುವು. ಹಣ್ಣುಗಳನ್ನು ಮಾರಲಾಗುತ್ತಿತ್ತು ಜನ ಟೀ ಕುಡಿಯುತ್ತಿದ್ದರು. ಆ ಜನರು ಸುತ್ತ ಸೇರಿಕೊಂಡು ಚೆಸ್ ಆಡುತ್ತಿದ್ದರು. ಈ ಎಲ್ಲ ಸದ್ದುಗದ್ದಲದ ನಡುವೆ ಅಂಚಿನಲ್ಲಿನ ಸಸಿಗಳ ಗುಂಪಿಗೆ ತಾಗಿಕೊಂಡಂಣತೆ ಒಬ್ಬ ಗಿಡ್ಡನೆಯ ವಿಚಿತ್ರ ವ್ಯಕ್ತಿ ನಿಂತಿದ್ದ . ತನ್ನ ಮೆಲು ದನಿಯಲ್ಲಿ ಭಿಕ್ಷುಕರ ಹಾಗೆ 'ಕಾಮರೇಡ್, ಕಾಮರೇಡ್ ' ಎಂದು ಹೇಳುತ್ತಿದ್ದನು.

ಹೋಗುತ್ತಾ– ಬರುತ್ತಾ ಇರುವ ಜನರ ಗುಂಪಿನಲ್ಲಿ ಯಾರೊಬ್ಬರೂ ಅತ್ತ ಗಮನ ಕೊಡುತ್ತಿರಲಿಲ್ಲ. ನಾನು ಅವನನ್ನು ಸಮೀಪಿಸಿದೆ.

"ಏನು ಸಮಾಚಾರ ತಮ್ಮಾ?"

ಆ ಮನುಷ್ಯನ ಹೊಟ್ಟೆ ಬಸುರಿ ಹೆಂಗಸಿನ ಹೊಟ್ಟೆಗಿಂತಲೂ ದೊಡ್ಡದಾಗಿ ಮುಂದಕ್ಕೆ ಬಂದಿತ್ತು. ಸಡಿಲವಾದ ಜುಬ್ಬದ ಹಾಗೆ ಅದು ಅವನ ಷರ್ಟಿನಿಂದ ಹೊರಗೆ ಇಣುಕುತ್ತಿತ್ತು. ಅವನ ಕಾಲುಗಳಲ್ಲಿ ಧೂಳು ತುಂಬಿದ, ಅಟ್ಟೆ ಕಟ್ಟಿಸಿದ ಚಪ್ಪಲಿಗಳಿದ್ದುವು. ನಾವಿಕರ ಥರದ ಕಾಲರ್ ಮತ್ತು ಜೀರ್ಣಶೀರ್ಣವಾದ ತೋಳುಗಳುಳ್ಳ ಒಂದು ದಪ್ಪನೆಯ ತೆರೆದ ಓವರ್ ಕೋಟ್ ದೇಹಕ್ಕೆ ಭಾರವೆಂಬಂತೆ ಅವನ ಹೆಗಲ ಮೇಲೆ ಇತ್ತು. ಆ ವಾತಾವರಣಕ್ಕೆ ಅದು ಕಿಂಚಿತ್ತೂ ಹೊಂದಿಕೆಯಾಗುತ್ತಿರಲಿಲ್ಲ. ಹೊಲ ಗದ್ದೆಗಳಲ್ಲಿ ಹಕ್ಕಿ ಪಕ್ಷಿಗಳನ್ನು ಓಡಿಸಲು ಬೆರ್ಚಪ್ಪನ ಮೇಲೆ ಹಾಕುವಂಥ ಹಳೆಯ ಸವೆದುಹೋದ ಒಂದು ಟೋಪಿ ಅವನ ತಲೆಯ ಮೆಲೆ ರಾರಾಜಿಸುತ್ತಿತ್ತು.

ಅವನ ಕಣ್ಣುಗಳು ಊದಿಕೊಂಡಿದ್ದುವು. (ಉಬ್ಬಿಕೊಂಡಿದ್ದುವು). ಅವುಗಳಲ್ಲಿ ಯಾವುದೇ ಕಾಂತಿ ಇರಲಿಲ್ಲ. ಬಹಳ ಕಷ್ಟದಿಂದ ಅವನು ತನ್ನ ಕೈಯನ್ನು ಮೇಲೆತ್ತಿದನು. ಅವನ ಬಿಗಿದ ಮುಷ್ಟಿಯಿಂದ ನಾನೊಂದು ಹರಕು ಮುರುಕು ಕಾಗದವನ್ನು ಹೊರ ತಗೆದೆ.

ಅದು ಬೋಬರೋವ ಎಂಬ ಹೆಸರಿನ ನಾಗರಿಕನೊಬ್ಬನು ಆಸ್ಪತ್ರೆಗೆ ಅಡ್ಮಿಟ್ ಆಗಲು ಭರ್ತಿ ಮಾಡಿದ ಅರ್ಜಿಯಾಗಿತ್ತು. ಅದರ ಮೇಲೆ ನೀಲಿ ಇಂಕಿನಲ್ಲಿ ಒಂದು, ಕೆಂಪು ಇಂಕಿನಲ್ಲಿ ಒಂದು ಹೀಗೆ ಎರಡು ಬೇರೆ ಬೇರೆ ಬಣ್ಣದ ಇಂಕಿನಲ್ಲಿ ಎರಡು ಬಗೆಯ ನೋಟ್(ಟಿಪ್ಪಣಿ) ಬರೆಯಲಾಗಿತ್ತು. ನೀಲಿ ಇಂಕಿನಲ್ಲಿ ಬರೆದದ್ದು ನಗರದ ಸಾರ್ವಜನಿಕ ಆರೋಗ್ಯ ವಿಭಾಗದವರು ಬರೆದ ಟಿಪ್ಪಣಿಯಾಗಿದ್ದು ವಿಚಾರಣೆಯ ನಂತರ ಈ ಅರ್ಜಿಯನ್ನು ತಿರಸ್ಕರಿಸಲಾಗಿತ್ತು. ಕೆಂಪು ಇಂಕಿನಲ್ಲಿ ಬರೆದಿದ್ದ ಟಿಪ್ಪಣಿ ಆ ಅರ್ಜಿದಾರನನ್ನು ಅಡ್ಮಿಟ್ ಮಾಡಿಕೊಳ್ಳಬೇಕೆಂದು ಮೆಡಿಕಲ್ ಇನ್ ಸ್ಟಿಟ್ಯೂಟ್ ನ ಆಸ್ಪತ್ರೆಗೆ ಬರೆದಿದ್ದ ಆದೇಶವಾಗಿತ್ತು. ನೀಲಿ ಟಿಪ್ಪಣಿಯ ಮೇಲೆ ನಿನ್ನೆಯ ತಾರೀಕು ಇದ್ದರೆ ಕೆಂಪು ಟಿಪ್ಪಣಿಯ ಮೇಲೆ ಇಂದಿನ ತಾರೀಕು ನಮೂದಾಗಿತ್ತು.

"ಓಹ್! ನೀನು ಆಸ್ಪತ್ರೆಗೆ ಅಡ್ಮಿಟ್ ಆಗಬೇಕಾದ ಸ್ಥಳಕ್ಕೆ ಹೋಗಬೇಕು ಅಂತ ಇದ್ದೀಯಾ?" ಅವನು ಕಿವುಡನೋ ಮೂಗನೋ ಎನ್ನುವಂತೆ ನಾನು ಗಟ್ಟಿಯಾಗಿ ಕೇಳಿ ಮನವರಿಕೆ ಮಾಡಿಕೊಂಡೆ. ಮೊದಲ ಭಾಗದಲ್ಲಿ ಈ ಪ್ರತಿಮೆಗಳಿವೆಯಲ್ಲ ಇವುಗಳ ಪಕ್ಕದಲ್ಲೇ ಹೋಗಿಬಿಡು ಎಂದು ಹೇಳಿದೆ.

ಆದರೆ ಈಗ ಅವನು ತಾನು ಹೋಗಬೇಕಾದ ಜಾಗದ ಸಮೀಪಕ್ಕೆ ಬಂದುಬಿಟ್ಟಿದ್ದ. ಅವನ ಶಕ್ತಿಯೇ ಉತ್ತರ ನೀಡಿತ್ತು. ಅವನು ಏನನ್ನೂ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ ಅಷ್ಟೇ ಅಲ್ಲ; ಕೈಯಲ್ಲಿ ಹಿಡಿದಿದ್ದ ಮೂರು ಪೌಂಡುಗಳ ಚೀಲವನ್ನು ಎತ್ತಿಕೊಂಡು ಹೋಗಲೂ ಅವನಿಂದ ಆಗುತ್ತಿರಲಿಲ್ಲ. ಆಗ ನಾನು– "ಏನೂ ಚಿಂತೆಯಿಲ್ಲ ಅಜ್ಜ, ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೀನಿ ಬಾ; ಎಲ್ಲಿ ನಿನ್ನ ಚೀಲ ಕೊಡಿಲ್ಲಿ" ಎಂದು ಹೇಳಿದೆ.

ಅವನಿಗೆ ಕಿವಿ ಚೆನ್ನಾಗೇ ಕೇಳಿಸುತ್ತಿತ್ತು. ಸದ್ಯ ನಿರಾಳವಾದವನಂತೆ ಅವನು ತನ್ನ ಕೈಯಲ್ಲಿ ಹಿಡಿದಿದ್ದ ಚೀಲವನ್ನು ನನಗೆ ಕೊಟ್ಟ. ನನ್ನ ತೋಳು ಹಿಡಿದುಕೊಂಡು, ಹೆಚ್ಚು ಕಡಿಮೆ ಕಾಲನ್ನು ಎಳೆದುಹಾಕುತ್ತ ಕಪ್ಪು ರಸ್ತೆ ಮೇಲೆ ನಡೆಯತೊಗಿದ. ಧೂಳಿನಿಂದ ಕೆಂಪಾಗುತ್ತಿದ್ದ ಅವನ ಓವರ್ ಕೋಟಿನ ತೋಳನ್ನು ತಡಕುತ್ತ ಮೊಳಕೈ ಸಂದನ್ನು ಹಿಡಿದುಕೊಂಡೆ. ಅವನ ಉಬ್ಬಿದ ಹೊಟ್ಟೆ ಅವನ ಉಳಿದ ದೇಹಕ್ಕಿಂತ ಭಾರೀ ಎನಿಸುತ್ತಿತ್ತು. ಅವನ ಬಾಯಿಂದ ಮತ್ತೆ ಮತ್ತೆ ಹುಶ್ ಹುಶ್ ಎಂಬ ಶಬ್ದ ಹೊಮ್ಮುತ್ತಿತ್ತು.

ತಾಷ್ಕೆಂಟಿನ ಅತ್ಯಂತ ಸುಂದರವಾದ ಅಪ್ಸರೆಯರ ಜೊತೆ ಸುತ್ತಾಡುತ್ತಿದ್ದ ನಾನು – ಈಗ ಈ ರೀತಿ ಕೊಳಕು ಕೊಳಕಾದ, ದರಿದ್ರ ಮತ್ತು ನಿಷ್ಪ್ರಯೋಜಕ ವ್ಯಕ್ತಿಗಳಾದ

ನಾವಿಬ್ಬರೂ ಹೆಜ್ಜೆಹಾಕತೊಡಗಿದೆವು. ಆ ನಿಷ್ಪ್ರಯೋಜಕ ಮೂರ್ತಿಗಳನ್ನು ದಾಟಿಹೋಗಲು ಸ್ವಲ್ಪ ಸಮಯ ಹಿಡಿಯಿತು.

ಕೊನೆಗೆ ನಾವು ಪಕ್ಕಕ್ಕೆ ಹೊರಳಿದೆವು. ಎದುರುಗಡೆ ಒಂದು ಬೆಂಚು ಕಾಣಿಸಿತು. ನನ್ನ ಸಂಗಾತಿಯು ಅದರ ಮೇಲೆ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳಬೇಕೆಂದು ಒತ್ತಾಯಿಸಿದ. ತುಂಬ ಹೊತ್ತು ನಿಂತಿದ್ದರಿಂದ ಮತ್ತು ನಡೆದು ಬಂದದ್ದರಿಂದ ನಾನೂ ದಣಿದಿದ್ದೆ. ನಾವಿಬ್ಬರೂ ಕುಳಿತುಕೊಂಡೆವು. ಎದುರುಗಡೆಯೇ ಆ ಫೌಂಟನ್ ಕಾಣುತ್ತಿತ್ತು.

ದಾರಿಯಲ್ಲಿ ನಡೆದು ಬರುವಾಗ ಆ ಮುದುಕ ಕೇವಲ ಕೆಲವೇ ಶಬ್ದಗಳನ್ನಷ್ಟೇ ಆಡಿದ್ದ. ಈಗ ಉಸಿರು ತೆಗೆದುಕೊಂಡ ಮೇಲೆ ಇನ್ನಷ್ಟು ವಿವರಣೆ ನೀಡಿದ. ಅವನು ಊರಾಳದ ಕಡೆ ಹೋಗುತ್ತಿದ್ದ. ಅಲ್ಲಿ ಇರಲು ಅನುಮತಿ ಪತ್ರ ಅವನ ಬಳಿ ಇತ್ತು. ಅದೇ ಅವನ ಕಷ್ಟಗಳ ಮೂಲವಾಗಿತ್ತು. ತಖಿಯಾತಾಶ್ ಹತ್ತಿರ(ಅಲ್ಲೇ ಅಲ್ಲೇ ಯಾವುದೋ ಕಾಲುವೆ ತೋಡುವ ಕೆಲಸ ನಡೀತಾ ಇತ್ತು ಅಂತ ನನ್ನ ನೆನಪು; ಆ ಮೇಲೆ ಅದನ್ನು ಕೈಬಿಡಲಾಯಿತು) ಎಲ್ಲೋ ಅವನು ಕಾಯಿಲೆ ಮಲಗಿದ. ಉರಗೆಂಚ್ ನಲ್ಲಿ ಒಂದು ತಿಂಗಳು ಆಸ್ಪತ್ರೆಯಲ್ಲಿ ಕಳೆದ. ಅಲ್ಲಿ ಹೊಟ್ಟೆಯಿಂದ ಮತ್ತು ಕಾಲಿನಿಂದ ಸಾಕಷ್ಟು ನೀರು ಹೋಗಿದ್ದರಿಂದ ಅವನ ಆರೋಗ್ಯ ಇನ್ನಷ್ಟು ಬಿಗಡಾಯಿಸಿತು. ಆದರೂ ಆ ಜನರು ಅವನಿಗೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿದರು. ಆಮೇಲೆ ಅವನು ಚಾರ್ ಝೂಊನಲ್ಲಿ ರೈಲಿನಿಂದ ಇಳಿದುಬಿಟ್ಟ. ಅಲ್ಲಿ ಅವನ ಚಿಕಿತ್ಸೆಗೇನೂ ಅವರು ಕರೆದುಕೊಂಡುಹೋಗುತ್ತಿರಲಿಲ್ಲ. ಹೋಗಿ ಇರಲು ಅನುಮತಿ ಪತ್ರವಿದ್ದ ಊರಾಲಿಗೆ ಹೋಗಿಬಿಡು ಎಂದು ಮತ್ತೆ ಮತ್ತೆ ಹೇಳುತ್ತಿದ್ದರು. ರೈಲು ಪ್ರಯಾಣ ಪೂರ್ತಿ ಮಾಡಿ ಮುಗಿಸುವ ಚೈತನ್ಯ ಅವನಲ್ಲಿರಲಿಲ್ಲ. ರೈಲ್ವೆ ಟಿಕೆಟ್ಟೂ ಅವನ ಬಳಿ ಇರಲಿಲ್ಲ. ಈಗ ತಾಷ್ಕೆಂಟಿನ ಆಸ್ಪತ್ರೆಗೆ ಅಡ್ಮಿಟ್ ಆಗಲು ಅನುಮತಿ ಪಡೆಯುವಲ್ಲಿ ಎರಡು ದಿನ ತಗುಲಿತ್ತು.

ದಕ್ಷಿಣ ಭಾಗದಲ್ಲಿ ಅವನು ಏನು ಮಾಡುತ್ತಿದ್ದ, ಏನು ಕೆಲಸಕ್ಕೆ ಅಂತ ಬಂದಿದ್ದ ಇದು ಯಾವುದನ್ನೂ ನಾನು ಅವನ ಹತ್ತಿರ ಕೇಳಲಿಲ್ಲ. ವೈದ್ಯರ ದಾಖಲೆಗಳ ಪ್ರಕಾರ ಅವನ ಕಾಯಿಲೆ ಸ್ವಲ್ಪ ವಿಚಿತ್ರವೂ ಗಂಭೀರ ಸ್ವರೂಪದ್ದೂ ಆಗಿತ್ತು. ಅವನ ಸ್ಥಿತಿ ನೋಡಿದರೆ ಇನ್ನೇನು ಕೊನೆಗಾಲವೂ ಬಂದಂತಿತ್ತು. ಸುಮಾರು ದಿನಗಳಿಂದ ನಾನು ಬಹಳಷ್ಟು ಜನ ರೋಗಿಗಳನ್ನು ನೋಡುತ್ತ ಬಂದಿದ್ದೆನಾಗಿ ಈಗ ಅವನಲ್ಲಿ ಇನ್ನೂ ಬಾಳುವ ಚೈತನ್ಯ ಇದೆ ಅಂತ ಅನ್ನಿಸುತ್ತಿರಲಿಲ್ಲ. ಅವನ ತುಟಿಗಳು ಅರಳಕೊಂಡಿದ್ದುವು. ಮಾತು ಸ್ಪಷ್ಟವಿರಲಿಲ್ಲ. ಕಣ್ಣುಗಳು ಮಂದವಾಗಿದ್ದುವು.

ಅವನಿಗೆ ಟೋಪಿ ಕೂಡ ಭಾರ ಅನ್ನಿಸುವಂತಿತ್ತು. ಬಹಳ ಪ್ರಯಾಸದಿಂದ ತನ್ನ ಕೈ ಚಾಚಿ ಟೋಪಿಯನ್ನು ಎಳೆದುಕೊಂಡು ತೊಡೆಯ ಮೇಲೆ ಇರಿಸಿಕೊಂಡ. ಬಹಳ ಪ್ರಯಾಸದಿಂದ ಒಮ್ಮೆ ತನ್ನ ತೋಳನ್ನು ಮೇಲೆತ್ತಿದ. ಕೊಳೆಯಾದ ಷರಟಿನ ತೋಳಿನಿಂದ ಹಣೆಯ ಮೇಲೆ ಬಂದ ಬೆವರನ್ನು ಒರೆಸಿಕೊಂಡ. ಅವನ ತಲೆಯ ಮೇಲುಭಾಗ ಬೋಳಾಗಿತ್ತು(ಬಾಲ್ಡ್). ಆ ಬೋಳು ಭಾಗದ ಅರ್ಧ ಭಾಗದಲ್ಲಿ ಕೊಳಕು ಕೂದಲು ಅಂಟಿಕೊಂಡಿದ್ದುವು. ವಾಸ್ತವಾಗಿ ಅವನು ಮುದುಕನಾಗಿರಲಿಲ್ಲ. ಕಾಯಿಲೆ ಅವನನ್ನು ಈ ಸ್ಥಿತಿಗೆ ದೂಡಿತ್ತು.

ಅವನ ಕುತ್ತಿಗೆ ಕೋಳಿಯ ಕುತ್ತಿಗೆಯ ಹಾಗೆ ಅತ್ಯಂತ ದಯನೀಯವಾಗಿ ಕೃಶವಾಗಿತ್ತು. ಅವನ ಚರ್ಮ ಇಳಿಬಿದ್ದು ಜೋತಾಡುತ್ತಿತ್ತು. ಅಲ್ಲೇ ಅವನ ಗೋಮಾಳೆ(ಗಂಟಲ ಮಣಿ) ತನಗೆ ತಾನೆ ಮೇಲೆ ಕೆಳಗೆ ಹೋಗುತ್ತಿತ್ತು.

ಅವನ ತಲೆಯನ್ನು ಹಾಗೆಯೇ ಎತ್ತಿ ನಿಲ್ಲಿಸಲು ಅಲ್ಲಿ ಏನು ತಾನೆ ಇತ್ತು? ನಾವು ಅಲ್ಲಿ ಕೂತಿದ್ದ ಹಾಗೆಯೇ ಅವನ ಎದೆಯ ಮೇಲೆ ತಲೆ ಕುಸಿಯಿತು. ಗದ್ದ ದೇಹಕ್ಕೆ ಅಂಟಿಕೊಂಡಿತು.

ಹೀಗೆ ಕಣ್ಣುಗಳನ್ನು ಮುಚ್ಚಿಕೊಂಡು ಅಲುಗಾಡದೆ ತೊಡೆಯ ಮೇಲೆ ಟೋಪಿ ಇಟ್ಟುಕೊಂಡು ಕುಳಿತಿದ್ದನು. ನಾವು ಅಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳಲಷ್ಟೇ ಕುಳಿತಿದ್ದೇವೆಂಬುದನ್ನು ಮತ್ತು ರೋಗಿಗಳನ್ನು ಅಡ್ಮಿಟ್ ಮಾಡುವ ವಾರ್ಡ್ ಕಡೆ ನಾವು ಹೋಗಬೇಕಾಗಿದೆಯೆಂಬುದನ್ನು ಅವನು ಮರೆತಂತೆ ಕಾಣುತ್ತಿತ್ತು.

ಹತ್ತಿರದಲ್ಲಿದ್ದ ಕಾರಂಜಿಯಲ್ಲಿ ಬೆಳುದಿಂಗಳಿನಂಥ ಧಾರೆ ಸದ್ದಿಲ್ಲದೆ ಹೊಮ್ಮುತ್ತಿತ್ತು. ಇನ್ನೊಂದು ಕಡೆಯಿಂದ ಇಬ್ಬರು ಹುಡುಗಿಯರು ಹೊರ ಹೊರಟರು. ಅವರ ಹಿಂದೆ ನಾನು ಬಲು ದೂರದವರೆಗೂ ನೋಡುತ್ತಿದ್ದೆ. ಒಬ್ಬಳು ಕಿತ್ತಿಳೆ ಬಣ್ಣದ ಸ್ಕರ್ಟ್ ಧರಿಸಿದ್ದಳು. ಇನ್ನೊಬ್ಬಳು ಕಡು ಕೆಂಪು ಬಣ್ಣದ ಸ್ಕರ್ಟ್ ಧರಿಸಿದ್ದಳು. ನನಗೆ ಇಬ್ಬರೂ ಚೆನ್ನಾಗಿದ್ದಾರೆನಿಸಿತ್ತು.

ನನ್ನ ಪಕ್ಕದ್ದಲ್ಲಿದ್ದನು ಒಂದು ನರಳಿಕೆಯ ದನಿ ಹೊಮ್ಮಿಸಿದನು. ಎದೆಯ ಬಳಿ ಇದ್ದ ತಲೆ ಅತ್ತಿತ್ತ ಅಲ್ಲಾಡಿಸಿದನು. ಹಳದಿ ಬೂದಿಯಂಥ ತನ್ನರೆಪ್ಪೆಗಳನ್ನುಅರಳಿಸಿ ನನ್ನ ಕಡೆಗೊಂದು ವಕ್ರನೋಟ ಬೀರಿ–"ನಿನ್ನ ಹತ್ತಿರ ಒಂದು ಸಿಗರೇಟು ಇಲ್ಲವೇನು?" ಎಂದು ಕೇಳಿದನು.

"ಅಯ್ಯಾ ಮುದುಕ ಅದೆಲ್ಲಾ ಮರೆತುಬಿಡು." ಎಂದು ನಾನು ಅವನ ಮೇಲೆ ಗುರಾಯಿಸಿದೆ. ನಾನು ನೀನು ಇಬ್ಬರೂ ಸಿಗರೇಟ್ ಸೇದದೇನೆ ನವೆದು ಹೋಗೋದೇ

ಹೆಚ್ಚು. ನಿನ್ನನ್ನು ನೀನೇ ನೋಡಿಕೋ. ಸಿಗರೇಟ್ ಸೇದೋಣ. (ಸ್ವತಃ ನಾನು ಒಂದು ತಿಂಗಳು ಹಿಂದೇನೇ ಸಿಗರೇಟ್ ಬಿಟ್ಟಿದ್ದೆ, ಅವನೂ ಬಹಳ ಕಷ್ಟದಿಂದ ಬಿಟ್ಟಿದ್ದ).

ಅವನ ಉಸಿರಾಟ ತುಂಬ ತೀವ್ರಗತಿಯಲ್ಲಿ ಸಾಗಿತ್ತು. ತನ್ನ ಹಳದಿ ರೆಪ್ಪೆಗಳ ಕೆಳಗಿನಿಂದ ನನ್ನ ಕಡೆ ನಾಯಿಯ ಹಾಗೆ ನೋಡಿದ. "ಆಯಿತು, ನೀನು ನನಗೆ ಮೂರು ರೂಬಲ್ ಕೊಡಕ್ಕಾಗುತ್ತಾ?"

ಅವನಿಗೆ ಹಣ ಕೊಡೋದೋ ಬೇಡವೋ ಅಂತ ಯೋಚಿಸತೊಡಗಿದೆ., ನಾನು ಇನ್ನೂ ಸಜೆಯನ್ನು ಕಳೆಯುತ್ತಾ ಇರುವವನು. ಅವನಾದರೆ ಒಬ್ಬ ಸ್ವತಂತ್ರ ವ್ಯಕ್ತಿಯಾಗಿದ್ದ. ಅಲ್ಲಿ ನಾನು ಸಂಬಳವೇ ಇಲ್ಲದೆ ಹಲವು ವರ್ಷಗಳ ಕಾಲ ಕೆಲಸ ಮಾಡಿದ್ದೆ. ಅವರು ಹಣ ಕೊಡೋಕೆ ಶುರು ಮಾಡಿದರಾದರೂ ಅದರಲ್ಲಿ ಅನೇಕ ಕಡಿತಗಳಿದ್ದುವು: ಗಾರ್ಡುಗಳಿಗೆ, ವಿದ್ಯುತ್ ನಾಯಿಯ ಸಲುವಾಗಿ, ಗವರ್ನರ್ ಮತ್ತು ಊಟದ ಸಲುವಾಗಿ ಹೀಗೆ.

ನಾನು ನನ್ನ ಷರಟಿನ ಜೇಬಿನಿಂದ ಎಣ್ಣೆಯ ಗಪ್ಪು ಹಿಡಿದಿದ್ದ ಒಂದು ಗುಂಡನೆಯ ಚೀಲ ಹೊರತೆಗೆದು ಅದರ ಒಳಗೆ ನೋಡಿದೆ. ಒಂದು ಆಳವಾದ ನಿಟ್ಟುಸಿರು ಬಿಟ್ಟು ಮೂರು ರೂಬಲ್ ಗಳ ಒಂದು ನೋಟು ಅವನ ಕೈಗಿಟ್ಟೆ.

"ಧನ್ಯವಾದ" ಎಂದು ಅವನು ತೊದಲಿದ. ಕೈಯನ್ನು ಕಷ್ಟದಿಂದ ಮೇಲೆತ್ತುತ್ತ ನೋಟನ್ನು ಈಸಿಕೊಂಡು ಜೇಬಿಗೆ ತುರುಕಿಕೊಂಡ. ಆ ನಂತರ ಅವನ ಕೈ ನಿರ್ಜೀವವಾಗಿ ತೊಡೆಯ ಮೇಲೆ ಬಿದ್ದುಬಿಟ್ಟಿತು. ಎದೆ ಗದ್ದಕ್ಕೆ ತಾಗಿಕೊಂಡಿತು.

ನಾವು ಮೌನವಾಗಿ ಕುಳಿತೆವು.

ಒಬ್ಬ ಹೆಂಗಸು ಮತ್ತು ಅವಳ ಹಿಂದೆ ಇಬ್ಬರು ಹುಡುಗಿಯರು ಹಾದು ಹೋದರು. ಆ ಮೂರೂ ಜನ ಚೆನ್ನಾಗಿದ್ದರೆನಿಸಿತು.

ಯಾವುದೇ ಹೆಣ್ಣಿನ ದನಿಯನ್ನಾಗಲಿ ಅಥವಾ ಅವರ ಚಪ್ಪಲಿಯ ಸದ್ದನ್ನಾಗಲಿ ನಾನು ಕೇಳಿ ವರ್ಷಗಳೇ ಆಗಿ ಹೋಗಿದ್ದುವು.

"ನಿನ್ನ ಅರ್ಜಿಯನ್ನು ಅವರು ಮಾನ್ಯ ಮಾಡಿದ್ದು ತುಂಬಾ ಒಳ್ಳೆಯದಾಯಿತು. ಇಲ್ಲದೆ ಹೋಗಿದ್ದರೆ ವಾರಗಟ್ಟಲೆ ಇಲ್ಲಿ ಬಿದ್ದಿರಬೇಕಾಗಿತ್ತು. ಇದು ಮಾಮೂಲಿ ಸಂಗತಿ. ಬಹಳ ಜನಕ್ಕೆ ಈ ಸಮಸ್ಯೆ ಉಂಟಾಗುತ್ತೆ."

ಅವನು ತನ್ನ ಗದ್ದವನ್ನು ಎದೆಯಿಂದ ಮೇಲಕ್ಕೆ ಎತ್ತಿ ನನ್ನ ಕಡೆ ತಿರುಗಿದ. ಅವನ ಕಣ್ಣುಗಳಲ್ಲಿ ಅರ್ಥಮಾಡಿಕೊಳ್ಳುವ ಭಾವ ಸ್ಫುರಿಸಿತು. ದನಿಯಲ್ಲಿ ನಡುಕ ಉಂಟಾಯಿತು. ಅವನ ಮಾತಿನಲ್ಲಿ ಒಂದು ಕ್ರಮ ಬಂತು.

"ಮಗು ಅವರು ನನ್ನ ಗುಣಗಳಿಗಾಗಿ ನನ್ನನ್ನು ಅಡ್ಮಿಟ್ ಮಾಡಿಕೊಳ್ಳುತ್ತಿದ್ದಾರೆ. ನಾನು ಕ್ರಾಂತಿ ಯೋಧ. ನಿನಗೆ ಗೊತ್ತೇನು ಜಾರಿತ್ಸಿನ್ ನಲ್ಲಿ ಸ್ವಯಂ ಸೆರ್ಗೇಯಿ ಕಿಓವ್ ನನ್ನೊಂದಿಗೆ ಕೈಕುಲುಕಿದ್ದ. ನನಗೆ ವಿಶೇಷ ಪೆನ್‌ಷನ್ ಸಿಗಲಿದೆ.

ಅವನ ಕೆನ್ನೆಗಳು ಮತ್ತು ತುಟಿಗಳು ಮಿನುಗಿದವು. ಅವನ ಗಡ್ಡದಿಂದ ಆವೃತವಾದ ಮುಖದ ಮೇಲೆ ಕ್ಷೀಣವಾದ ಹೆಮ್ಮೆಯ ಮುಗುಳು ನಗೆ ಸುಳಿದಾಡಿತು.

ಅವನ ಹರಿದ ಉಡುಪನ್ನು ನೋಡಿದೆ. ಆ ಮೇಲೆ ಅವನ ಇಡೀ ಶರೀರವನ್ನೊಮ್ಮೆ ನನ್ನ ಕಣ್ಣುಗಳಲ್ಲಿ ತುಂಬಿಕೊಂಡು ಹೇಳಿದೆ–"ಹಾಗಿದ್ದ ಮೇಲೆ ಅವರುಗಳು ಯಾಕೆ ಅದನ್ನು ಕೊಡುತ್ತಾ ಇಲ್ಲ?"

"ಇದೇ ಜೀವನ ಅಂದರೆ" ದೀರ್ಘವಾದ ನಿಟ್ಟುಸಿರು ಬಿಟ್ಟು ಹೇಳಿದ. "ಅವರು ಇದನ್ನು ಒಪ್ಪಲು ಬಯಸುವುದಿಲ್ಲ. ದಾಖಲೆಗಳು ಇದ್ದ ಕೆಲವು ಸಂಗ್ರಹಾಲಯಗಳು ಸುಟ್ಟುಹೋದವು. ಈಗ ಆ ಕಾಲದ ಸಾಕ್ಷಿಗಳನ್ನು ಹುಡುಕುವುದು ಅಸಾಧ್ಯ. ಅಲ್ಲದೆ ಕಿರೋವ್ ಕೊಲೆಯಾಯಿತು......ಈಗ ಉಳಿದಿರೋನು ಒಬ್ಬನೇ ....."

ಅವನ ಬೆರಳುಗಳ ನಡುವಣ ಸಂದು ಉಬ್ಬಿಕೊಂಡಿದ್ದುವು. ಅದರಿಂದ ಬೆರಳುಗಳನ್ನು ಆಡಿಸುವುದಕ್ಕೆ ಕಷ್ಟ ಆಗುತ್ತಿತ್ತು. ಅವನ ಬಲಗೈ ಜೇಬಿನ ಕಡೆಗೆ ಹೋಯಿತು. ಆ ಜೇಬಿನಿಂದ ಏನನ್ನೋ ಹೊರ ತೆಗೆಯಲು ಪ್ರಯತ್ನಿಸುತ್ತಿದ್ದ. ಆ ಮೇಲೆ ಎರಡೂ ಕೈಗಳನ್ನು ಇಳಿಬಿಟ್ಟ. ಹಾಗೆಯೇ ತಲೆಯನ್ನೂ ಇಳಿಬಿಟ್ಟ. ಅವನ ಆ ಕ್ಷಣಿಕ ಚೇತನ(ಪ್ರಜ್ಞೆ) ಹೋಗತೊಡಗಿತು.

ಸೂರ್ಯ ಕಟ್ಟಡಗಳ ಹಿಂದೆ ಅಡಗಿಕೊಳ್ಳಲಾರಂಭಿಸಿದ್ದ. ನಾವು ಗಾಯಾಳುಗಳಗಳನ್ನು ಅಡ್ಮಿಟ್ ಮಾಡಿಕೊಳ್ಳುವ ವಾರ್ಡ್ ಕಡೆಗೆ ಧಾವಿಸ ಬೇಕಾಗಿತ್ತು. (ಅದು ಕೇವಲ ನೂರು ಹೆಜ್ಜೆ ದೂರದಲ್ಲಿತ್ತು.) ವಾರ್ಡ್‌ನಲ್ಲಿ ಯಾವಾಗಲೋ ಒಮ್ಮೆ ಜಾಗ ಖಾಲಿ ಇರುತ್ತಿತ್ತು.

ನಾನು ಆ ಮುದುಕನ ಹೆಗಲನ್ನು ಅಲುಗಾಡಿಸಿದೆ. "ನಡಿ, ಹೊರಡು. ಎಚ್ಚರ ಮಾಡಿಕೋ. ಅಲ್ಲಿ ಎದುರುಗಡೆ ಬಾಗಿಲು ಕಾಣಿಸ್ತಿದೆ ಅಲ್ವಾ. ನಿನಗೆ ಕಾಣಿಸ್ತಾ ಇದೆ ತಾನೆ? ನಾನು ಮುಂದಾಗಿ ಹೋಗಿ ನೀನು ಬರುತ್ತಾ ಇದ್ದೀ ಅಂತ ಅವರಿಗೆ ಹೇಳಿರ್ತೀನಿ. ನೀನು ಹೇಗಾದರೂ ಪ್ರಯತ್ನ ಮಾಡಿ ಅಲ್ಲಿವರೆಗೂ ಬಂದುಬಿಡು. ಆಗದೆ ಹೋದರೆ ನಾನು ಬರೋವರೆಗೂ ಕಾಯಿ. ನಿನ್ನ ಚೀಲ ತಗೊಂಡು ಹೋಗಿರ್ತೀನಿ." ಎಂದು ಹೇಳಿದೆ.

ಅವನು ತಲೆ ಆಡಿಸಿದ. ನನ್ನ ಮಾತು ಅವನಿಗೆ ಅರ್ಥವಾಗಿದೆ ಅಂತ ಅನ್ನಿಸಿತು. ಗಾಯಾಳುಗಳ ವಾರ್ಡ್, ಒಂದು ಹಳೆಯ ವಿಶಾಲವಾದ ಹಾಲ್ ಅನ್ನು ಸುತ್ತುವರಿದಿದ್ದ ಭಾಗವಾಗಿತ್ತು. (ಅದರಲ್ಲಿ ಮನೆ, ಬಾತ್ ರೂಂ, ಬಟ್ಟೆಗಳನ್ನು ಬದಲಾಯಿಸುವ ಕೊಠಡಿ ಮತ್ತು ಕ್ಷೌರಿಕನ ಕೊಠಡಿ ಕೂಡ ಇತ್ತು). ವಾರ್ಡ್‌ಗೆ ಅಡ್ಮಿಟ್ ಆಗಲು ಗಂಟೆಗಟ್ಟಲೆ ಕಾದು ಕೂತಿದ್ದ ರೋಗಿಗಳಿಂದ ಅದು ಇಡಿಕಿರಿದಿತ್ತು. ಆದರೆ ಆಶ್ಚರ್ಯವೆಂದರೆ ಇಂದು ಅಲ್ಲಿ ಯಾರೂ ಇರಲಿಲ್ಲ. ನಾನು ಕೌಂಟರಿನ ಕಿಟಕಿಯನ್ನು ತಟ್ಟಿದೆ. ಒಬ್ಬ ಉದ್ದ ಮೂಗಿನ, ಬದನೆಯ ಬಣ್ಣದ ತುಟಿಗಳ ಯುವ ನರ್ಸ್ ಕಿಟಕಿ ತೆಗೆದಳು.

"ಏನಾಗಬೇಕಿತ್ತು?" ಒಂದು ಟೇಬಲ್ ನ ಹತ್ತಿರ ಅವಳು ಕುಳಿತಿದ್ದಳು. ಎಂಥದೋ ಕಾಮಿಕ್ ನಂಥ ಪುಸ್ತಕ ಓದುತ್ತಿದ್ದಳು

ಅವಳ ಕಣ್ಣುಗಳು ಖಂಡಿತವಾಗಿಯೂ ದುಷ್ಟ ಕಣ್ಣುಗಳ ಥರಾ ಇದ್ದುವು.

ಅವಳ ಕೈಗೆ ಆ ಅರ್ಜಿಯನ್ನು ಕೊಟ್ಟು ಹೇಳಿದೆ–"ಅವನು ಬಹಳ ಕಷ್ಟದಿಂದ ನಡೆದಾಡುತ್ತಾನೆ. ನಾನು ಈಗಲೇ ಅವನನ್ನು ಕರೆದುಕೊಂಡು ಬರುತ್ತೇನೆ".

ಆ ಕಾಗದದ ಕಡೆ ನೋಡದೆ ತನ್ನ ಕರ್ಕಶ ದನಿಯಲ್ಲಿ ಹೇಳಿದಳು–"ನೀವು ಯಾರನ್ನೂ ಇಲ್ಲಿಗೆ ಕರೆದುಕೊಂಡು ಬರ್ತಾ ಇಲ್ಲ ಅಷ್ಟೆ. ನಿಮಗೆ ನಿಯಮ ಗೊತ್ತಿಲ್ಲವೇನು? ರೋಗಿಗಳನ್ನು ಅಡ್ಮಿಟ್ ಮಾಡೋದು ಏನಿದ್ದರೂ ಬೆಳಿಗ್ಗೆ ಒಂಬತ್ತು ಗಂಟೆಗೆ"

ಆದರೆ 'ನಿಯಮ' ಅವನಿಗೇ ಗೊತ್ತಿರಲಿಲ್ಲ. ಅವಳು ಕೌಂಟರ್ ನ ಕಿಟಕಿ ಮುಚ್ಚದೆ ಇರಲೆಂದು ನನ್ನ ತಲೆ ಮತ್ತು ತೋಳುಗಳನ್ನು ಕಿಟಕಿಯೊಳಕ್ಕೆ ನುಗ್ಗಿಸಿದೆ. ಮತ್ತೆ ನನ್ನ ಕೆಳ ತುಟಿಯನ್ನು ವ್ಯಂಗ್ಯವಾಗಿ ತಿರುಚಿ ಮುಖವನ್ನು ಗೊರಿಲ್ಲಾ ಥರ ಮಾಡಿಕೊಂಡು ಅಪರಾಧಿಗಳಿಗೆ ಸಹಜವಾದ ದನಿಯಲ್ಲಿ–"ಇಲ್ಲಿ ನೋಡಿ, ನಾನು ಗುಪ್ತಚರ(ಮಫ್ತಿ) ಪೋಲೀಸರ ಪೈಕಿ ಅಲ್ಲ" ಎಂದೆ.

ಅವಳ ಮುಖದ ಮೇಲೆ ಭಯದ ಚಿಹ್ನೆ ಸುಳಿದಾಡಿತು. ತನ್ನ ಕುರ್ಚಿಯನ್ನು ಕಿಟಕಿಯಿಂದ ಹಿಂದಕ್ಕೆ ಸರಿಸಿ ಸ್ವಲ್ಪ ನಿಧಾನವಾಗಿ–"ಈಗ ಭರ್ತಿ ಮಾಡಲ್ಲ. ನಾಳೆ ಒಂಬತ್ತು ಗಂಟೆಗೆ" ಎಂದು ಹೇಳಿದಳು.

"ಮೊದಲು ನೀವು ಇದನ್ನು ಓದಿ" ಎಂದು ಅವಳಿಗೆ ನಿಧಾನವಾಗಿ ಆದರೆ ಗಡಸು ದನಿಯಲ್ಲಿ ಹೇಳಿದೆ.

ಅವಳು ಓದಿದಳು.

"ಇದರಿಂದ ಏನಾಯಿತು! ನಿಯಮ ಎಲ್ಲರಿಗೂ ಒಂದೇ . ಅಲ್ಲದೆ ಬೆಡ್ ಯಾವುದೂ ಖಾಲಿ ಇಲ್ಲ. ಬೆಳಿಗ್ಗೆ ಯಾವುದೂ ಜಾಗ ಇರಲಿಲ್ಲ."

ಯಾವುದೂ ಜಾಗ ಇಲ್ಲ ಅಂತ ಹೇಳಲು ಅವಳಿಗೆ ತುಂಬ ಆನಂದವಾಗುತ್ತಾ ಇತ್ತು. ನನಗೆ ತಲೆನೋವು ಕೊಡಲು ಅವಳು ತುದಿಗಾಲ ಮೇಲೆ ನಿಂತತ್ತಿತ್ತು.

"ಆದರೆ ಆ ಮನುಷ್ಯ ಇಲ್ಲಿಗೆ ಬರುವ ದಾರಿಯ ಮಧ್ಯದಲ್ಲಿದ್ದಾನೆ. ಬೇರೆ ಎಲ್ಲಿಗಾದರೂ ಹೋಗಲು ಅವನಿಗೆ ಸ್ಥಳವಿಲ್ಲ."

ನಾನು ಕಿಟಕಿಯಿಂದ ಹಿಂದೆ ಸರಿದು ಮೊದಲಿನ ಸಹಜ ದನಿಯಲ್ಲಿ ಹೇಳಿದ ಕೂಡಲೇ ಅವಳು ಮೊದಲಿನಂತೆಯೇ ಹುಬ್ಬು ಗಂಟಿಕ್ಕಿದಳು.

"ನೀವು ರೋಗಿಗಳೆಲ್ಲರೂ ಬೇರೆ ಊರಿನಿಂದ ಬಂದವರೇ ಆಗಿರುತ್ತೀರಿ. ಈಗ ನಾವು ಏನು ಮಾಡಬೇಕು? ಎಲ್ಲರನ್ನೂ ಅಡ್ಮಿಟ್ ಮಾಡಿಕೊಂಡು ಬಿಡೋಣವಾ? ಅವನು ಕಾಯಬೇಕಾಗುತ್ತೆ. ಎಲ್ಲರೂ ಇಲ್ಲಿ ಹೀಗೇ ಮಾಡುತ್ತಾರೆ. ಅವನು ರಾತ್ರಿಯಿಡೀ ಬೇರೆ ಯಾರ ಜೊತೆಯಲ್ಲಾದರೂ ಕಳೀಲಿ ಬಿಡಿ"

"ನೀವು ಸ್ವಲ್ಪ ಹೊರಗಡೆ ಬಂದು ಅವರನ್ನು ಒಂದು ಸಲ ನೋಡಿ"

"ನಾನು ಯಾಕೆ ಬರಬೇಕು? ಇನ್ನು ಮೇಲೆ ಎಲ್ಲರನ್ನೂ ನೋಡಿಕೊಂಡು ಅಲೆದಾಡಲೆ? ನಾನು ಯಾರಮನೆ ಆಳೂ ಅಲ್ಲ."

ಅವಳು ಈಗ ತನ್ನ ಮೂಗನ್ನು ಇನ್ನಷ್ಟು ಮೇಲೆ ಮಾಡಿದಳು. ಒಳಗಡೆ ಯಾವುದೋ ಕಾಲುವೆ ಒಡೆದುಕೊಂಡುಬಿಟ್ಟಿದೆಯೇನೋ ಅನ್ನುವ ಹಾಗೆ ಈಗ ಒಂದೇ ಸಮನೆ ಲೊಟಗುಟ್ಟುತ್ತಾ ಇದ್ದಳು.

"ಹಾಗಾದರೆ ನೀವು ಯಾಕೆ ಇಲ್ಲಿದ್ದೀರಿ?" ಎಂದು ಹೇಳುತ್ತ ನಾನು ಆ ಕಾರ್ಡ್‌ಬೋರ್ಡಿನ ಗೋಡೆಯ ಮೇಲೆ ಜೋರಾಗಿ ಕೈಯಿಂದ ಗುದ್ದಿದೆ. ಅದರಿಂದ ಅವಳ ಬಿಳಿಯ ಬಣ್ಣದ ರಾಶಿ ಗಾಳಿಯಲ್ಲಿ ಹಾರಿಹೋಯಿತು. ಕೇಳಿದೆ–"ನೀವು ಬೀಗ ಹಾಕಿಕೊಂಡು ಒಳಗೇ ಯಾಕೆ ಇದ್ದುಬಿಡಬಾರದು?". ಹಾರಿ ಕ್ಯಾಬಿನ್ ನಿಂದ ಹೊರಕ್ಕೆ ಬಂದು –"ಓಹೋ ನಾನು ಕೇಳೋದೇ ಮರೆತುಬಿಟ್ಟಿದ್ದೆ .ಅವನ ಬಾಲ ಅನ್ನಿಸಿಕೊಂಡಿರೋ ನೀನು ಯಾರು?" ಎಂದು ಅವಳು ಉರಿದುಬಿದ್ದಳು. "ನಾನು ಏನು ಮಾಡಬೇಕು ಅಂತ ನೀನು ನನಗೆ ಹೇಳಿಕೊಡಬೇಕಾಗಿಲ್ಲ. ಇನ್ನೇನು ಈಗ ಆಸ್ಪತ್ರೆ ಗಾಡಿ ಬರುತ್ತೆ"

ಒಂದು ವೇಳೆ ಅವಳು ತನ್ನ ತುಟಿಗಳು ಮತ್ತು ಉಗುರುಗಳಿಗೆ ಕೆಟ್ಟ ಬದನೆ ಬಣ್ಣ ಹಚ್ಚಿಕೊಳ್ಳದೆ ಹೋಗಿದ್ದರೆ ನೋಡೋದಕ್ಕೆ ಅವಳೇನು ಅಷ್ಟು ಕೆಟ್ಟದಾಗಿ ಇರಲಿಲ್ಲ.

ಅವಳ ಮೂಗು ತುಂಬಾ ಚೆನ್ನಾಗಿತ್ತು. ಅವಳ ಹುಬ್ಬುಗಳೂ ಸಾಕಷ್ಟು ಆಕರ್ಷಕವಾಗಿದ್ದುವು. ಸೆಖೆ ಇದ್ದುದರಿಂದಾಗಿ ಅವಳ ಬಿಳಿ ಕೋಟು ತೆರೆದೇ ಇತ್ತು. ಅದರೊಳಗಿನ ಗುಲಾಬಿ ಬಣ್ಣದ ಸ್ಕಾರ್ಫ್ ಮತ್ತು 'ಯುವ ಕಮ್ಯುನಿಸ್ಟ್ ಲೀಗ್' ಎಂಬ ಬ್ಯಾಡ್ಜ್ ಎರಡೂ ಕಣ್ಣಿಗೆ ಕಾಣುತ್ತಿದ್ದುವು.

"ಅಂದರೆ ನೀವು ಹೇಳೋದು ಒಂದು ವೇಳೆ ಅವನು ತಾನೇ ಇಲ್ಲಿಗೆ ಬರದೆ ಆಸ್ಪತ್ರೆಯ ವಾಹನದಲ್ಲಿ ಕರೆತಂದಿದ್ದರೆ ಅವನನ್ನು ನೀವು ಭರ್ತಿಮಾಡಿಕೊಳ್ಳುತ್ತಿದ್ದಿರಿ ಅಂತಲಾ ಇದೇನೇನು ನಿಮ್ಮ ನಿಯಮ?"

ಅವಳು ನನ್ನ ವಿಚಿತ್ರವಾದ ಬಣ್ಣ, ರೂಪು ಮತ್ತು ಇಡೀ ದೇಹದ ಮೇಲೆ ತಿರಸ್ಕಾರದ ಒಂದು ನೋಟವನ್ನು ಬೀರಿದಳು. ನಾನೂ ಅವಳನ್ನು ಒಮ್ಮೆ ಮೇಲಿನಿಂದ ಕೆಳತನಕ ನೋಡಿದೆ. ನನ್ನ ಚಪ್ಪಲಿಯ ಪಟ್ಟಿ ಕಿತ್ತುಹೋಗಿ ಹೊರಕ್ಕೆ ಬಂದುಬಿಟ್ಟಿದೆ ಎಂಬುದನ್ನು ನಾನು ಮರೆತುಬಿಟ್ಟಿದ್ದೆ. ಅವಳು ಬುಸುಗುಡುತ್ತ ಮಂದ ದನಿಯಲ್ಲಿ – "ಹೌದು ಮಿಸ್ಟರ್ ಪೇಷಂಟ್! ಇದೇ ನಿಯಮ!" –ಎಂದು ಹೇಳಿ ಕ್ಯಾಬಿನ್ನಿನ ಒಳಕ್ಕೆ ನುಸುಳಿಕೊಂಡಳು.

ನನ್ನ ಹಿಂದುಗಡೆ ದನಿ ಕೇಳಿಸಿ ತಿರುಗಿ ನೋಡಿದೆ. ಇಷ್ಟೆಲ್ಲಾ ನಡೆಯೋ ಹೊತ್ತಿಗೆ ನನ್ನ ಜೊತೆಗಾರ ಅಲ್ಲಿಗೆ ಬಂದೇಬಿಟ್ಟಿದ್ದ. ಅವನು ಎಲ್ಲ ಮಾತುಗಳನ್ನೂ ಕೇಳಿ ಅರ್ಥಮಾಡಿಕೊಂಡಿದ್ದ. ಗೋಡೆ ಹಿಡಿದುಕೊಂಡು ನಿಧಾನಕ್ಕೆ ನಡೆಯುತ್ತ ರೋಗಿಗಳು ಕುಳಿತುಕೊಳ್ಳಲೆಂದು ಅಲ್ಲಿ ಇರಿಸಿದ್ದ ಬೆಂಚಿನ ಹತ್ತಿರಕ್ಕೆ ಬರಲು ಯತ್ನಿಸಿದ. ಜೀರ್ಣವಾಗಿದ್ದ ಕೈಚೀಲವನ್ನು ಹಿಡಿದಿದ್ದ ತನ್ನ ಬಲಗೈಯನ್ನು ಅಲ್ಲಾಡಿಸುತ್ತಿದ್ದ.

'ಇದನ್ನು ತಗೋ' ಎಂದು ಕಷ್ಟದಿಂದ ಹೇಳುತ್ತಾ ಇದ್ದ ...... "ಇದನ್ನ ಆಕೆಗೆ ತೋರಿಸು. ಇದನ್ನು ನೋಡಲಿ ಅವರು."

ನಾನು ಸಮಯಕ್ಕೆ ಸರಿಯಾಗಿ ಅವನನ್ನು ಹಿಡಿದುಕೊಂಡು ಮೆಲ್ಲಗೆ ಬೆಂಚಿನ ಮೇಲೆ ಕೂಡಿಸಿದೆ. ಅವನ ಅಸಹಾಯಕ ಬೆರಳುಗಳು ಅವನ ಅಂತಿಮ ಕಾಗದ-ಪತ್ರಗಳನ್ನು ಹೊರತೆಗೆದು ತೋರಿಸಲು ಬಯಸಿದ್ದುವು; ಆದರೆ ಆಗಲಿಲ್ಲ.

ಮಡಿಚಿಕೊಂಡು ಜೀರ್ಣ ಶೀರ್ಣವಾಗಿದ್ದ ಕಾಗದ ಪತ್ರಗಳನ್ನು ಹೊರತೆಗೆದೆ. ಸೊಟ್ಟ ಸೊಟ್ಟಾದ ಸಾಲುಗಳಲ್ಲಿ ಅದರಲ್ಲಿ ಟೈಪು ಮಾಡಿದ ಬರಹವನ್ನು ಇಣುಕಿ ನೋಡುತ್ತಿದ್ದಳು–

'ಜಗತ್ತಿನ ಕಾರ್ಮಿಕರೇ ಒಂದಾಗಿ!

ಪ್ರಮಾಣ–ಪತ್ರ–

ಕಾಮರೇಡ್ ಎನ್. ಕೆ. ಬೋಬರೋವ್ ಅವರು 1921ರಲ್ಲಿ ನಡೆದ ಆ ವಿಶ್ವ ಕ್ರಾಂತಿಯ ಸುಪ್ರಸಿದ್ಧ ಎನ್ ಎನ್–ಕ್ಷೇತ್ರದ ಸೇವಾ ತುಕಡಿಯ ಸದಸ್ಯರಾಗಿದ್ದರು ಮತ್ತು ಇವರು ತನ್ನ ಕೈಗಳಿಂದ ಸಮಾಜದ ವೈರಸ್ ಗಳನ್ನು ಕೊನೆಯವರೆಗೂ ತೊಡೆದು ಹಾಕಿ ಸ್ವಚ್ಛಗೊಳಿಸಿದ್ದರು ಎಂದು ಈ ಮೂಲಕ ಪ್ರಮಾಣೀಕರಿಸಲಾಗುತ್ತಿದೆ.

ಕಮೀಷನರ್ ....(ಸಹಿ)'

ಇದರ ಕೆಳಗೆ ಒಂದು ಮಾಸಿಹೋದ ಸೀಲು ಹಾಕಲಾಗಿತ್ತು.

ನನ್ನ ಎದೆಯನ್ನು ಉಜ್ಜಿಕೊಳ್ಳುತ್ತ ನಾನು – 'ವಿಶೇಷ ಸೇವಾ ತುಕಡಿ, ಇದು ಸರಿ ತಾನೆ?' ಎಂದು ಅವನನ್ನು ಕೇಳಿದೆ.

ಬಹಳ ಕಷ್ಟದಿಂದ ತನ್ನ ಕಣ್ಣು ತೆರೆದು– 'ಹೌದು. ಇದನ್ನು ಅವರಿಗೆ ತೋರಿಸು' ಎಂದು ಹೇಳಿದ.

ನಾನು ಅವನ ಬಲಗೈಯನ್ನು ನೋಡಿದೆ. ಅದರ ಮುಷ್ಟಿಯ ಮೇಲಿನ ಕಪ್ಪು ನರಗಳು ಉಬ್ಬಿದ್ದುವು. ಬೆರಳುಗಳ ನಡುವಣ ಸಂದನ್ನು ಹೊಲಿಯಲಾಗಿತ್ತು. ಅವುಗಳ ಮೂಲಕ ಚೀಲದೊಳಗಿಂದ ಒಂದು ಕಾಗದವನ್ನೂ ಹೊರ ತೆಗೆಯಲಾರದಷ್ಟು ಅವು ಅಸಮರ್ಥವಾಗಿದ್ದುವು. ಆ ದಿನಗಳಲ್ಲಿ ಪ್ರಚಲಿತವಾಗಿದ್ದ ಪದ್ಧತಿಗಳು ನನ್ನ ಮನಸ್ಸಿನಲ್ಲಿ ಸುಳಿದುಹೋದುವು– ದಾಳಿಯ ಕುದುರೆಗಳನ್ನೇರಿ ಜನರನ್ನು ತಲೆಯಿಂದ ಹೊಟ್ಟೆಯವರೆಗೆ ಕತ್ತರಿಸುತ್ತ, ಸೀಳುತ್ತ ಸಾಗುತ್ತಿರುವ ಸವಾರ (ಚಿತ್ರ).

ಎಷ್ಟೊಂದು ವಿಚಿತ್ರ.......... ಇದೇ ಬಲಗೈಯಲ್ಲಿ ಒಂದು ಕಾಲದಲ್ಲಿ ಕತ್ತಿ ಇರುತ್ತಿತ್ತು. ಯಾವುದೋ ತಲೆಯನ್ನು, ಹೆಗಲನ್ನು, ಕುತ್ತಿಗೆಯನ್ನು ಮುಂಡದಿಂದ ಅದು ಬೇರ್ಪಡಿಸುತ್ತಿತ್ತು–ಇಂದು ಅದೇ ಕೈ ಒಂದು ಸಣ್ಣ ಚೀಲವನ್ನೂ ಮೇಲೆತ್ತಲಸಮರ್ಥ!

ನಾನು ಕೌಂಟರ್ ನ ಕಿಟಕಿಯ ಸಮೀಪಕ್ಕೆ ಹೋಗಿ ಅಲ್ಲಿಯ ಕೋಲನ್ನು ತಟ್ಟಿ ಖಟಪಟ ಸದ್ದು ಮಾಡಿದೆ. ಆ ಕ್ಲರ್ಕ್ ಅಥವಾ ನರ್ಸ್ ತನ್ನ ಕಾಮಿಕ್ ಚಿತ್ರಗಳಿರುವ ಪುಸ್ತಕವನ್ನು ಓದುತ್ತಿದ್ದಳು. ಅವಳ ಹಿಂದಿದ್ದ ಕಿಟಕಿಯ ಮೇಲೆ ಅಂಟಿಸಿದ್ದ ಹಾಳೆಯಲ್ಲಿ ಕೈಯಲ್ಲಿ ಪಿಸ್ತೂಲು ಹಿಡಿದ (ಒಂದು ಸೋವಿಯತ್ ಗುಪ್ತಚರ ವಿಭಾಗದ) ಆಫೀಸರ್‌ನ ಒಂದು ಚಿತ್ರವಿತ್ತು.

ಆ ಜೀರ್ಣಶೀರ್ಣವಾದ ಪ್ರಮಾಣ ಪತ್ರವನ್ನು ಅವಳ ಹಾಳೆಯ ಮೇಲೆ ಮೆಲ್ಲಗೆ ಇರಿಸಿ ಹಿಂದಕ್ಕೆ ಹೆಜ್ಜೆ ಹಾಕುತ್ತ ನೋವು ಕಡಿಮೆ ಮಾಡಿಕೊಳ್ಳಲು ಎದೆಯ ಮೇಲೆ

ಒತ್ತಿಕೊಳ್ಳುತ್ತ ಬಾಗಿಲಿನ ಕಡೆಗೆ ನಡೆದೆ. ಈಗ ತಲೆ ನೆಲದ ಮೇಲಿಟ್ಟು ಮಲಗುವುದಷ್ಟೇ ನನಗುಳಿದಿರುವುದು ಎಂಬುದು ಗೊತ್ತಿತ್ತು. ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ಇದನ್ನು ಮಾಡಬೇಕಿತ್ತು.

"ಇದೇನಿದು, ಕಾಗದ ಪತ್ರಗಳನ್ನು ಎಲ್ಲಿ ಅಂದರೆ ಅಲ್ಲಿ ಎಸೆದು ಹೋಗಿ ಬಿಡೋದಾ? ತಗೊಂಡು ಹೋಗು ಇದನ್ನು"– ಎಂಬ ನರ್ಸ್‌ಳ ಕೋಪದ ದನಿ ಕೇಳಿಬಂತು.

ಕ್ರಾಂತಿಯ ಯೋಧ ಬೆಂಚಿನ ಮೇಲೆ ಇನ್ನಷ್ಟು ಬಗ್ಗಿದ್ದ. ಅವನ ತಲೆ ಮತ್ತು ಹೆಗಲು ಕೂಡ ಅವನ ಶರೀರದಲ್ಲಿ ತಿರುಗಿಕೊಂಡಿವೆಯೇನೋ ಎನಿಸುತ್ತಿತ್ತು. ಅವನ ಅಸಹಾಯಕ ಬೆರಳುಗಳು, ಅವನ ತೆರೆದ ಓವರ್ ಕೋಟಿನಂತೆಯೇ ಪಕ್ಕದಲ್ಲಿ ಜೀವ ಹೋದಂತೆ ಅತ್ತಿತ್ತ ತೂಗಾಡುತ್ತಿದ್ದುವು. ಅವನ ತೊಡೆಯ ಮೇಲೆ ಒರಗಿದ್ದ ಉಬ್ಬಿದ ಹೊಟ್ಟೆ ನಂಬಲು ಸಾಧ್ಯವಿಲ್ಲದಂತೆ ತೋರುತ್ತಿತ್ತು.

❖

ಒಂದು ಅದ್ಭುತ ಮಧ್ಯಾಹ್ನ

ಫ್ರೆಂಚ್ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೇಜ್

ಪಂಜರವನ್ನು ತಯಾರಿಸಿ ಆಗಿತ್ತು. ಬಾಲ್ತಜರ್ ಎಂದಿನಂತೆ ಅಭ್ಯಾಸ ಬಲದಿಂದ ಅದನ್ನು ಛಜ್ಜೆಯ ಮೇಲೆ ನೇತುಹಾಕಿದ. ಊಟ ಮುಗಿಸಿ ಆಗ ತಾನೆ ಮೇಲಕ್ಕೆ ಎದ್ದಿದ್ದ. ಎಲ್ಲರೂ ಈಗ ತಯಾರಿಸಿರುವ ಪಂಜರ ಪ್ರಪಂಚದ ಅತ್ಯಂತ ಸುಂದರವಾದ ಪಂಜರ ಎಂದು ಹೇಳತೊಡಗಿದರು. ಅದನ್ನು ನೋಡಲು ಅದೆಷ್ಟೊಂದು ಜನ ಬಂದರು ಅಂದರೆ ಮನೆಯ ಮುಂದೆ ಹೊರಗಡೆ ಅದೇ ಒಂದು ದೊಡ್ಡ ಗುಂಪಾಯಿತು. ಬಾಲ್ತಜರ್ ಪಂಜರವನ್ನು ಕೆಳಕ್ಕಿಳಿಸಿ ಅಂಗಡಿ ಮುಚ್ಚಬೇಕಾಗಿ ಬಂತು.

"ನೀನು ಗಡ್ಡ ಬೋಳಿಸಿಕೊಳ್ಳಬೇಕು. ಇಲ್ಲದಿದ್ದರೆ ಥೇಟ್ ಕೈದಿ ಥರ ಕಾಣಿಸ್ತಿದ್ದೀ."–ಎಂದು ಅವನ ಹೆಂಡತಿ ಉರ್ಸುಲಾ ಹೇಳಿದಳು.ಊಟ ಆದ ಮೇಲೆ ಕ್ಷೌರ ಮಾಡಿಕೊಳ್ಳೋದು ಕಷ್ಟ ಅನ್ನಿಸುತ್ತೆ"

ಕಳೆದ ಎರಡು ವಾರಗಳಿಂದ ಅವನು ಷೇವಿಂಗ್ ಮಾಡಿಕೊಂಡಿರಲಿಲ್ಲ. ಗಡ್ಡದ ಸಣ್ಣ ಸಣ್ಣ ಕೂದಲುಗಳು ಬಿರುಸಾಗಿ ಒರಟಾಗಿ ಥೇಟು ಹೇಸರಗತ್ತೆ ಕುತ್ತಿಗೆಯ ಮೇಲಿನ

ಕೂದಲಿನ ತರಹ ಆಗಿಬಿಟ್ಟಿತ್ತು. ಮುಖದ ಮೇಲೆ ಒಬ್ಬ ದಿಕ್ಕೆಟ್ಟ ಯುವಕನ ಕಳೆ ಬಂದುಬಿಟ್ಟಿತ್ತು. ಆದರೆ ವಾಸ್ತವ ಇದಲ್ಲ. ಇದೇ ಫೆಬ್ರುವರಿಗೆ ಅವನಿಗೆ ಮೂವತ್ತು ವರ್ಷ ಆಗಿತ್ತು. ಮದುವೆಯಿಲ್ಲದೆ ಮಗುವಿನ ತಂದೆ ಆಗದೆ ಕಳೆದ ನಾಲ್ಕು ವರ್ಷದಿಂದ ಅವನು ಉರ್ಸುಲಾಳ ಜೊತೆ ಸಂಸಾರ ಮಾಡುತ್ತಿದ್ದ. ಜೀವನದಲ್ಲಿ ಎಚ್ಚರಿಕೆ ವಹಿಸಬೇಕಾದ ಅನೇಕ ಕಾರಣಗಳಿದ್ದುವು. ಆದರೆ ಗಾಬರಿ ಪಡುವಂಥದೇನೂ ಇರಲಿಲ್ಲ. ಈಗ ತಾನೆ ಅವನು ಕೆಲವರಿಗಾಗಿ ಸಿದ್ಧಪಡಿಸಿಟ್ಟಿರುವ ಆ ಪಂಜರ ಪ್ರಪಂಚದ ಅತ್ಯಂತ ಸುಂದರವಾದ ಪಂಜರ ಎಂಬುದು ಕೂಡ ಅವನಿಗೆ ಗೊತ್ತಿರಲಿಲ್ಲ. ಅವನಂತೂ ಬಾಲ್ಯದಿಂದಲೂ ಪಂಜರಗಳನ್ನು ತಯಾರಿಸುವುದರಲ್ಲಿ ಒಳ್ಳೆ ನಿಪುಣನಾಗಿದ್ದ. ಹಾಗಾಗಿ ಯಾವುದೇ ಥರದ ಪಂಜರ ತಯಾರಿಸುವುದು ಕೂಡ ಅವನಿಗೆ ಏನೇನೂ ಕಷ್ಟವಾಗಿರಲಿಲ್ಲ.

"ಈಗ ಸ್ವಲ್ಪ ಹೊತ್ತು ವಿಶ್ರಾಂತಿ ತೊಗೋ. ಅಲ್ಲದೆ ಈ ಗಡ್ಡ ಇಟ್ಟುಕೊಂಡು ನೀನು ಎಲ್ಲೂ ಹೋಗಕ್ಕೂ ಆಗಲ್ಲ" ಎಂದಳು.

ಅವನು ರೆಸ್ಟ್ ತೆಗೆದುಕೊಳ್ಳುತ್ತಿದ್ದಾಗ ನೆರೆಹೊರೆಯವರಿಗೆ ಪಂಜರ ತೋರಿಸುವ ಸಲುವಾಗಿ ಎಷ್ಟೋ ಸಲ ಹಾಸಿಗೆಯಿಂದ ಏಳಬೇಕಾಗುತ್ತಿತ್ತು. ಈಗಂತೂ ಉರ್ಸುಲಾ ಪಂಜರದ ಬಗ್ಗೆ ವಿಶೇಷ ಗಮನವನ್ನೇನೂ ಕೊಡಲಿಲ್ಲ. ಅವಳಿಗೆ ಗಂಡನ ಮೇಲೆ ಕೋಪ ಇತ್ತು. ಕಾರಣ ಕಳೆದ ಎರಡು ವಾರಗಳಿಂದ ಅವನು ಪಂಜರವನ್ನು ತಯಾರಿಸುವುದರಲ್ಲಿ ಅದೆಷ್ಟು ತಲ್ಲೀನನಾಗಿದ್ದನೆಂದರೆ ತನ್ನ ಕಾರ್ಪೆಂಟರಿ ಅಂಗಡಿಯನ್ನೂ ಬಿಟ್ಟುಬಿಟ್ಟಿದ್ದ. ಅವನಿಗೆ ಊಟದ ಯೋಚನೇನೂ ಇರಲಿಲ್ಲ, ನಿದ್ದೆಯೋಚನೇನೂ ಇರಲಿಲ್ಲ. ನಿದ್ರೆಯಲ್ಲೂ ಅತ್ತ ಇತ್ತ ಹೊರಳಾಡುತ್ತ ಏನೇನೋ ಬಡಬಡಿಸುತ್ತ ಇದ್ದ. ಷೇವಿಂಗ್ ಮಾಡಿಕೊಳ್ಳಬೇಕು ಅನ್ನುವ ಪರಿವೆಯೂ ಇರಲಿಲ್ಲ. ಆದರೆ ಸಿದ್ಧಪಡಿಸಲಾದ ಪಂಜರವನ್ನು ನೋಡಿದ ಮೇಲೆ ಉರ್ಸುಲಾಳ ಕೋಪವೆಲ್ಲಾ ಹಾರಿಹೋಯಿತು. ಬಾಲ್ತಜರ್ ಒಂದೆರಡು ಗಳಿಗೆ ಹೊತ್ತು ಕಣ್ಣುಮುಚ್ಚಿ ಏಳುವ ಹೊತ್ತಿಗೆ ಉರ್ಸುಲಾ ಅವನ ಪ್ಯಾಂಟು ಮತ್ತು ಷರ್ಟನ್ನು ಇಸ್ತ್ರಿ ಮಾಡಿ ಕುರ್ಚಿ ಮೇಲೆ ಮಡಿಸಿ ಇಟ್ಟಿದ್ದಳು. ಪಂಜರವನ್ನು ಡೈನಿಂಗ್ ಟೇಬಲ್ ಮೇಲೆ ಇಟ್ಟಿದ್ದಳು. ಸುಮ್ಮನೆ ಅದನ್ನೇ ನೋಡುತ್ತಾ ನಿಂತಳು.

"ಇದಕ್ಕೆ ಎಷ್ಟು ತಗೊಳ್ಳುತ್ತೀಯಾ?' ಎಂದು ಕೇಳಿದಳು

ಗೊತ್ತಿಲ್ಲ. ನಾನು ಮೂವತ್ತು ಪೇಸೋ(ಕೊಲಂಬಿಯಾ ಕರೆನ್ಸಿ) ಅಂತೂ ಕೇಳೇ ಕೇಳ್ತೀನಿ. ನೋಡೋಣ ಇಪ್ಪತ್ತಂತೂ ಸಿಕ್ಕೇ ಸಿಕ್ಕುತ್ತೇನೋ"

"ನೀನು ಐವತ್ತು ಕೇಳಬೇಕು. ಈ ಎರಡು ವಾರದಲ್ಲಿ ಅದೆಷ್ಟು ನಿದ್ದೆ ಬಿಟ್ಟಿದ್ದೀಯ.. ಅದೂ ಅಲ್ಲದೆ ಈ ಪಂಜರ ಎಷ್ಟೊಂದು ದೊಡ್ಡದಾಗಿದೆ. ನನ್ನ ಲೆಕ್ಕದಲ್ಲಿ ಇದುವರೆಗೆ ನನ್ನ ಜೀವಮಾನದಲ್ಲಿ ಇಷ್ಟೊಂದು ದೊಡ್ಡ ಪಂಜರ ನಾನೆಂದೂ ನೋಡಿಲ್ಲ" ಎಂದಳು ಉರ್ಸುಲಾ.

ಬಾಲ್ತಜರ್ ಷೇವ್ ಮಾಡಿಕೊಳ್ಳೋಕೆ ಶುರು ಮಾಡಿದ.

"ಇದಕ್ಕೆ ಅವರು ನನಗೆ ಐವತ್ತು ಕೊಡುತ್ತಾರೆ ಅಂತ ನಿನಗೆ ಅನ್ನಿಸುತ್ತಾ?"

"ಮಿಸ್ಟರ್ ಚೇಪೇ ಮಾಂಟಿಯಲ್‌ಗೆ ಇದು ಏನೇನೂ ಅಲ್ಲ. ಅದೂ ಅಲ್ಲದೆ ಪಂಜರ ಇದಕ್ಕಿಂತಲೂ ಹೆಚ್ಚು ಬೆಲೆ ಬಾಳುತ್ತೆ. ನೀನು ಅರುವತ್ತು ಕೇಳಬೇಕು".

ಮನೆ ಉಸಿರು ಕಟ್ಟುವಷ್ಟು ದಟ್ಟ ನೆರಳಿನಲ್ಲಿತ್ತು. ಅವು ಏಪ್ರಿಲ್ ತಿಂಗಳ ಪ್ರಾರಂಭದ ದಿನಗಳು. ಜೀರುಂಡೆಗಳ ಜೀಗುಟ್ಟುವಿಕೆಯಿಂದ ಸೆಕೆ ತಡೆಯುವುದು ಬಹಳ ಕಷ್ಟವಾಗಿತ್ತು. ಬಟ್ಟೆ ಧರಿಸಿದ ಕೂಡಲೇ ಮನ ಸ್ವಲ್ಪ ತಂಪಾಗಲೆಂದು ಅಂಗಳದ ಕಡೆಯ ಬಾಗಿಲನ್ನು ತೆರೆದನು. ಬಾಗಿಲು ತೆಗೆದ ಕೂಡಲೇ ಮಕ್ಕಳ ಒಂದು ಗುಂಪೇ ಡೈನಿಂಗ್ ರೂಮಿಗೆ ನುಗ್ಗಿತು.

ಸುದ್ದಿ ಆಗಲೇ ಎಲ್ಲ ಕಡೆ ಹಬ್ಬಿಬಿಟ್ಟಿತ್ತು. ಡಾ. ಆಕ್ಟೇವಿಯೋ ಗಿರಾಲ್ಡೊ ಎಂಬ ಒಬ್ಬ ಮುದಿ ವೈದ್ಯ ಸಂತೃಪ್ತ ಜೀವನವನ್ನು ನಡೆಸುತ್ತಿದ್ದರೂ ತನ್ನ ಉದ್ಯೋಗದಿಂದ ಬೇಸರಗೊಂಡಿದ್ದ. ಅಂಗವಿಕಲ ಹೆಂಡತಿಯ ಜೊತೆ ಮಧ್ಯಾಹ್ನದ ಭೋಜನ ಮಾಡುತ್ತಿದ್ದಾಗ ಪಂಜರದ ಬಗ್ಗೆ ಯೋಚಿಸತೊಡಗಿದ. ಬೇಸಗೆಯ ದಿನಗಳಲ್ಲಿ ಊಟದ ಟೇಬಲ್ ಅನ್ನು ಒಳಗಡೆಯ ಜಗುಲಿಯ ಮೇಲೆ ಹಾಕಿಕೊಳ್ಳುತ್ತಿದ್ದರು. ಮಾಳಿಗೆಯನ್ನು ಹೂವಿನ ಕುಂಡದಿಂದ ಅಲಂಕರಿಸಿದ್ದರು. ಅಲ್ಲಿ ಎರಡು ಪಂಜರಗಳೂ ಇದ್ದವು. ಅವುಗಳಲ್ಲಿ ಕನಾರೀ ಹಕ್ಕಿಗಳಿದ್ದವು. ಅವನ ಹೆಂಡತಿಗೆ ಹಕ್ಕಿಗಳೆಂದರೆ ತುಂಬ ಇಷ್ಟ. ಹಕ್ಕಿಗಳನ್ನು ತಿಂದುಬಿಡುತ್ತವೆಂಬ ಕಾರಣಕ್ಕೆ ಬೆಕ್ಕುಗಳನ್ನು ಕಂಡರೆ ಆಗುತ್ತಿರಲಿಲ್ಲ. ಇದೇ ಆಲೋಚನೆಗಳಲ್ಲಿ ಮುಳುಗಿಹೋಗಿದ್ದ ಡಾ. ಗಿರಾಲ್ಡೋ ಆ ಮಧ್ಯಾಹ್ನ ಒಬ್ಬ ರೋಗಿಯನ್ನು ನೋಡಲು ಹೋಗಿದ್ದ. ಅಲ್ಲಿಂದ ವಾಪಸ್ ಬರುವಾಗ ಪಂಜರವನ್ನು ನೋಡಲು ಬಾಲ್ತಜರ್‌ನ ಮನೆಗೆ ಹೋದ.

ಡೈನಿಂಗ್ ರೂಮಿನಲ್ಲಿ ಬಹಳಷ್ಟು ಜನ ಸೇರಿದ್ದರು. ಪ್ರದರ್ಶನಕ್ಕಾಗಿ ಪಂಜರವನ್ನು ಮೇಜಿನ ಮೇಲೆ ಇಡಲಾಗಿತ್ತು. ವಿಶಾಲವಾದ ಗೋಳಾಕಾರದ ತಂತಿಯಿಂದ ಮಾಡಲಾದ ಪಂಜರದ ಒಳಗಡೆ ಮೂರು ಭಾಗಗಳಿದ್ದುವು. ಅದರಲ್ಲಿ ಇಕ್ಕಟ್ಟಾದ ದಾರಿ ಅಲ್ಲದೆ ಉಣ್ಣುವುದಕ್ಕೆ ತಿನ್ನುವುದಕ್ಕೆ ಮತ್ತು ನಿದ್ದೆ ಮಾಡುವುದಕ್ಕೆ ಎಂದು ಮೂರು ಬೇರೆ ಬೇರೆ

ಭಾಗಗಳಿದ್ದವು. ಅಲ್ಲದೆ ಪಕ್ಷಿಗಳು ಕುಣಿದು ಕುಪ್ಪಳಿಸಿ ಮಾಡಲು ಅದರಲ್ಲಿ ಪ್ರತ್ಯೇಕವಾದ ಜಾಗ ಇತ್ತು. ಅಲ್ಲಿ ಜೋಕಾಲಿಗಳನ್ನು ನೇತುಹಾಕಲಾಗಿತ್ತು. ಅದು ಥೇಟು ಯಾವುದೋ ವಿಶಾಲವಾದ ಐಸ್ ಫ್ಯಾಕ್ಟರಿಯ ಒಂದು ಮಿನಿ ಆಕೃತಿಯಂತಿತ್ತು. ಆ ಪಂಜರವನ್ನು ಕೈಯಿಂದ ಮುಟ್ಟದೇನೆ ಡಾಕ್ಟರ್ ಗಮನವಿಟ್ಟು ನೋಡತೊಡಗಿದನು. ವಾಸ್ತವವಾಗಿ ಜನ ಇದನ್ನು ಹೊಗಳುವುದಕ್ಕಿಂತಲೂ ಎಷ್ಟೋ ಪಟ್ಟು ಪ್ರಶಂಸೆಗೆ ಇದು ಅರ್ಹವಾಗಿದೆ ಎಂದು ಮನಸ್ಸಿನಲ್ಲೇ ಯೋಚಿಸತೊಡಗಿದ. ತನ್ನ ಹೆಂಡತಿಗೆ ಇದು ನಿಜಕ್ಕೂ ಊಹಿಸಲೂ ಆಗದಂಥ ಸುಂದರ ಗಿಫ್ಟ್ ಆಗುತ್ತದೆ ಎಂದು ಅಂದುಕೊಂಡ.

ಜನಗಳ ಗುಂಪಿನಲ್ಲಿ ಬಾಲ್ತಜರ್‌ನನ್ನು ಹುಡುಕಿಕೊಂಡು ಹೋಗಿ–"ನಿಜಕ್ಕೂ ಇದು ನಿಮ್ಮ ಕಲ್ಪನೆಯ ಘನವಾದ ಔನ್ನತ್ಯ" ಎಂದು ಹೇಳಿದ. ಮತ್ತೆ ಅದರ ಮೇಲೆ ತಾಯ ನೋಟ ಹರಿಸಿ ಹೇಳಿದ–"ನೀವು ಒಬ್ಬ ಅಸಾಧಾರಣ ವಾಸ್ತು ಶಿಲ್ಪಿಯಾಗಬಹುದು" ಎಂದ.

ಬಾಲ್ತಜರ್‌ನ ಮುಖ ಕೆಂಪಾಯಿತು.

"ಧನ್ಯವಾದಗಳು" ಎಂದ.

"ಇದು ಖಂಡಿತಾ ನಿಜ" ಡಾಕ್ಟರ್ ಹೇಳಿದ.

ಅವನೊಬ್ಬ ಸುಕುಮಾರ ರೀತಿಯ ದುಂಡನೆಯ ಸ್ನಿಗ್ಧ ವ್ಯಕ್ತಿ. ತನ್ನ ಯೌವನದಲ್ಲಿ ಅತ್ಯಂತ ಸ್ಪುರದ್ರೂಪಿಯಾಗಿರಬಹುದಾದ ಹೆಣ್ಣನ್ನು ಹೋಲುವ ವ್ಯಕ್ತಿ. ಕೈಗಳು ಬಹಳ ಮೃದುವಾಗಿದ್ದವು. ಕಂಠವಂತೂ ಪಾದ್ರಿಯೊಬ್ಬ ಲ್ಯಾಟಿನ್‌ನಲ್ಲಿ ಮಾತಾಡುತ್ತಿರುವಂತಿತ್ತು. ಎಷ್ಟೊಂದು ಸುಂದರವಾಗಿದೆ. "ಇದರಲ್ಲಿ ಪಕ್ಷಿಗಳನ್ನು ಇರಿಸುವ ಅವಶ್ಯಕತೆಯೂ ಇಲ್ಲ." ಎಂದು ಅಲ್ಲಿ ಪಂಜರ ನೋಡಲು ಬಂದಿದ್ದವರ ಮುಂದೆ ಅದನ್ನು ಕೈಯಲ್ಲಿ ಹಿಡಿದು ಸುತ್ತ ತಿರುಗಿಸುತ್ತ ಹೇಳಿದ ರೀತಿ ಅವನು ಅದನ್ನು ಹರಾಜು ಹಾಕುತ್ತಿದ್ದಾನೇನೋ ಎನ್ನುವಂತಿತ್ತು. "ಇದನ್ನು ಏನಿದ್ದರೂ ನೋಡೋದಕ್ಕೆ ಬರುವವರ ಮುಂದೆ ಮರಕ್ಕೆ ನೇತು ಹಾಕಿದರೆ ಸಾಕು, ಅದರಷ್ಟಕ್ಕೆ ಅದು ಹಾರಿಬಿಡುತ್ತೆ" ಎಂದು ಹೇಳಿ ಪಂಜರವನ್ನು ಮೇಜಿನ ಮೇಲೆ ಇಟ್ಟುಬಿಟ್ಟ. ಮತ್ತೆ ಪಂಜರವನ್ನು ನೋಡುತ್ತ ಒಂದು ಕ್ಷಣ ಯೋಚಿಸಿ ಹೇಳಿದ–

"ಒಳ್ಳೇದು ನಾನು ಇದನ್ನು ತಗೊಳ್ತೀನಿ"

"ಇದು ಆಗಲೇ ಮಾರಾಟ ಆಗಿದೆ" –ಉರ್ಸುಲಾ ಹೇಳಿದಳು.

"ಇದು ಚೇಪೇ ಮಾಂಟಿಯಲ್‌ನ ಮಗನ ಸ್ವತ್ತು. ಅವನು ವಿಶೇಷವಾಗಿ ಹೇಳಿ ಮಾಡಿಸಿದ್ದಾನೆ"–ಬಾಲ್ತಜರ್ ಹೇಳಿದ.

ಡಾಕ್ಟರ್ ಈಗ ಒಬ್ಬ ಗೌರವಾನ್ವಿತನ ಮುಖಭಾವ ತಳೆದ.

"ಆತ ನಿಮಗೆ ಯಾವುದಾದರೂ ಡಿಸೈನ್ ಕೊಟ್ಟಿದ್ದನೇನು?"

"ಇಲ್ಲ. ಪಕ್ಷಿಗಳ ಜೋಡಿ ಇರಲು ಸಾಧ್ಯವಾಗುವಂಥ ಒಂದು ದೊಡ್ಡ ಪಂಜರ ತನಗೆ ಬೇಕು ಎಂದಷ್ಟೇ ಹೇಳಿದ್ದ"

ಡಾಕ್ಟರ್ ಪಂಜರವನ್ನು ಗಮನವಿಟ್ಟು ದಿಟ್ಟಿಸಿ ನೋಡಿದ.

"ಆದರೆ ಇದಂತೂ ಪಕ್ಷಿಗಳ ಜೋಡಿ ಇರುವುದಕ್ಕಲ್ಲ."

"ಯಾಕಲ್ಲ ಡಾಕ್ಟರ್ ಸಾಹೇಬರೆ"–ಎಂದು ಬಾಲ್ತಜರ್ ಮೇಜಿನ ಕಡೆಗೆ ಧಾವಿಸುತ್ತ ಹೇಳಿದ. ಮಕ್ಕಳು ಅವನ ಸುತ್ತ ಮುತ್ತಿಕೊಂಡಿದ್ದರು. "ಇದರಲ್ಲಿ ಪ್ರತಿಯೊಂದು ವಿಭಾಗವನ್ನೂ ಬಹಳ ಎಚ್ಚರಿಕೆಯಿಂದ ಅಳೆದು, ತೂಗಿ ಮಾಡಿದೆ." –ಬೇರೆ ಬೇರೆ ವಿಭಾಗಗಳ ಕಡೆಗೆ ಬೊಟ್ಟುಮಾಡಿ ತೋರಿಸುತ್ತ ಹೇಳಿದ. ಆಮೇಲೆ ಬೆರಳ ಗೆಣ್ಣುಗಳಿಂದ ಪಂಜರದ ಗೋಳವನ್ನು ಬಾರಿಸುತ್ತಿದ್ದಂತೆ ಪಂಜರದೊಳಗಿಂದ ವೀಣೆಯ ಮಧುರ ಸ್ವರ ಪ್ರತಿಧ್ವನಿಸಿತು.

"ಇದು ತುಂಬ ಮಜಬೂತಾದಂಥ ತಂತಿ. ಒಂದಂದು ಜೊತೆ ತಂತಿಯನ್ನೂ ಒಳಗಿನಿಂದ ಮತ್ತು ಹೊರಗಿನಿಂದ ಸೇರಿಸಿ ಬೆಸೆಯಲಾಗಿದೆ" ಎಂದು ಹೇಳಿದನು.

"ಇದು ಎಷ್ಟು ದೊಡ್ಡದಾಗಿದೆ ಅಂದರೆ ಇದರಲ್ಲಿ ಗಿಳಿ ಕೂಡ ಬರಬಹುದು." – ಒಬ್ಬ ಬಾಲಕ ಮಧ್ಯದಲ್ಲಿ ಹೇಳಿದ.

"ಓಹೋ ಖಂಡಿತಾ." –ಬಾಲ್ತಜರ್ ಹೇಳಿದ.

ಡಾಕ್ಟರ್ ಮತ್ತೆ ಅವನ ಕಡೆ ತಿರುಗಿ – "ಇದೆಲ್ಲ ಸರಿ. ಆದರೆ ಹಕ್ಕಿಗಳ ಜೋಡಿ ಇರಲು ಸಾಧ್ಯವಾಗುಷ್ಟು ದೊಡ್ಡದಾಗಿರಬೇಕು ಅಂತಲೂ ಹೇಳಿರಲಿಲ್ಲ. ಇದರ ಹೊತಾಗಿ ಅವನು ನಿಮಗೆ ಯಾವುದೇ ನಕ್ಷೆ ಅಥವಾ ಸೂಚನೆಯನ್ನೂ ನೀಡಿರಲಿಲ್ಲ; ಸರಿ ತಾನೆ?"– ಎಂದು ಕೇಳಿದರು.

"ಹೌದು" ಬಾಲ್ತಜರ್ ಅವನ ಮಾತಿಗೆ ಹೂಂ ಗುಟ್ಟಿದ.

"ಹಾಗಿದ್ದ ಮೇಲೆ ಏನು ತೊಂದರೆ– ಪಕ್ಷಿಗಳಿಗಾಗಿ ಒಂದು ದೊಡ್ಡ ಪಂಜರ ತಯಾರು ಮಾಡುವುದು ಬೇರೆ ಮತ್ತು ಈ ಪಂಜರ ತನ್ನಷ್ಟಕ್ಕೆ ತಾನು ಹಾಗಿರೋದು ಬೇರೆ. ಅವರು ನಿಮಗೆ ಮಾಡಿಕೊಡಲು ಹೇಳಿದ್ದು ಇದೇ ಪಂಜರ ಅನ್ನುವುದಕ್ಕೆ ಏನು ಸಾಕ್ಷಿ, ಪ್ರಮಾಣ?"

ಬಾಲ್ತಜರ್ ಸಮಸ್ಯೆಯ ತೊಡಕಿನಲ್ಲಿ ಸಿಲುಕಿಕೊಂಡ. ಹೇಳಿದ–"ನಿಸ್ಸಂದೇಹವಾಗಿ ಇದೇ ಆ ಪಂಜರ. ಅದಕ್ಕಾಗಿಯೇ ನಾನು ಮಾಡಿರೋದು."

ಡಾಕ್ಟರ್ ವ್ಯಾಕುಲಗೊಂಡ.

"ನೀನು ಇನ್ನೊಂದು ಪಂಜರ ಮಾಡಿಕೊಡಬಹುದು"– ಗಂಡನ ಕಡೆ ನೋಡುತ್ತ ಉರ್ಸುಲಾ ಹೇಳಿದಳು. ಆಮೇಲೆ ಡಾಕ್ಟರ್ ಕಡೆ ತಿರುಗಿ ಹೇಳಿದಳು–"ನಿಮಗೇನೂ ಅರ್ಜೆಂಟಿಲ್ಲವಲ್ಲ"

"ಇದೇ ಮಧ್ಯಾಹ್ನ ನಾನು ನನ್ನ ಹೆಂಡತಿಗೆ ಮಾತು ಕೊಟ್ಟಿದ್ದೆ"– ಡಾಕ್ಟರ್ ಹೇಳಿದ.

"ಸಾರಿ ಡಾಕ್ಟರ್. ಈಗಾಗಲೇ ಮಾರಾಟ ಆಗಿಬಿಟ್ಟಿರೋದನ್ನು ನಾನು ಹೇಗೆ ತಾನೆ ಮಾರೋಕ್ಕಾಗುತ್ತೆ?"

ಡಾಕ್ಟರ್ ಹೆಗಲು ಮೇಲೆ ಮಾಡಿಕೊಂಡು ಕುತ್ತಿಗೆಯ ಬೆವರು ಒರೆಸಿಕೊಳ್ಳುತ್ತ ,ನಿಧ ನಿಧಾನವಾಗಿ ದಡದಿಂದ ದೂರಕ್ಕೆ ಸರಿಯುತ್ತಿರುವ ಹಡಗನ್ನು ನೋಡುವ ವ್ಯಕ್ತಿಯಂತೆ ಆ ಪಂಜರವನ್ನು ಮಾತಿಲ್ಲದೆ ಸುಮ್ಮನೆ ಒಂದೇ ಸಮನೆ ನಿಟ್ಟಿಸಿ ನೋಡುತ್ತಾ ಇದ್ದ.

"ಅವರು ನಿನಗೆ ಇದಕ್ಕೆ ಎಷ್ಟು ಹಣ ಕೊಡುತ್ತಿದ್ದಾರೆ?"

ಉತ್ತರ ಕೊಡುವುದಕ್ಕೆ ಬದಲಾಗಿ ಬಾಲ್ತಜರ್ ಉರ್ಸುಲಾಳ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದ.

"ಅರುವತ್ತು ಪೇಸೋ"–ಅವಳು ಹೇಳಿದಳು.

ಪಂಜರವನ್ನು ನೋಡುತ್ತ ಇದ್ದ ಡಾಕ್ಟರ್–"ಇದು ಸುಂದರವಾಗಿದೆ. ನಿಜಕ್ಕೂ ತುಂಬ ಸುಂದರವಾಗಿದೆ," ಎಂದು ಹೇಳಿ ದೀರ್ಘ ನಿಟ್ಟುಸಿರೊಂದನ್ನು ಬಿಟ್ಟ. ಮತ್ತೆ ಮುಗುಳ್ನಗುತ್ತ ಕರ್ಚೀಫಿನಿಂದ ಗಾಳಿ ಹಾಕಿಕೊಳ್ಳುತ್ತ ಬಾಗಿಲ ಕಡೆಗೆ ಧಾವಿಸತೊಡಗಿದ.

ಮಾಂಟಿಯಲ್ ಬಹಳ ಶ್ರೀಮಂತ– ಎಂದು ಯೋಚಿಸಿದ.

ಜೋಸ್ ಮಾಂಟಿಯಲ್ ವಾಸ್ತವವಾಗಿ ಮೇಲೆ ಕಾಣುವಷ್ಟು ಶ್ರೀಮಂತನಾಗಿರಲಿಲ್ಲ. ಆದರೆ ಹಾಗಾಗಲು ಏನು ಮಾಡುವುದಕ್ಕೂ ಅವನು ಹಿಂಜರಿಯುತ್ತಿರಲಿಲ್ಲ. ಅಲ್ಲಿಂದ ಕೆಲವೇ ಮನೆಗಳಷ್ಟು ಅಂತರದಲ್ಲಿದ್ದ ಅಲಂಕಾರ ಸಾಮಗ್ರಿಗಳಿಂದ ಗಿಡಿದು ತುಂಬಲಾಗಿದ್ದ ಮನೆಯಲ್ಲಿ ಮಾರಲು ಸಾಧ್ಯವಿಲ್ಲ ಎನ್ನುವಂಥದಾವುದೂ ಇರಲೇ ಇಲ್ಲ. ತನ್ನ ಮನೆಗಾಗಿ ಒಂದು ಪಂಜರ ಸಿದ್ಧವಾಗಿದೆಯೆಂಬ ಸುದ್ದಿ ಅವನಿಗೆ ಸಿಕ್ಕೇ ಇರಲಿಲ್ಲ. ಸಾವಿನ ಶಬ್ದ ಕೇಳಿದರೇನೇ ಬೆಚ್ಚಿ ಬೀಳುವಂಥ ಅವನ ಹೆಂಡತಿ ಊಟ ಆದಮೇಲೆ ಬಾಗಿಲು ಕಿಟಕಿ ಮುಚ್ಚಿಕೊಂಡು ಕಳೆದ ಎರಡು ಗಂಟೆಯಿಂದ ಕೊಠಡಿಯ ಪ್ರತಿಬಿಂಬದ ಮೇಲೆ ಕಣ್ಣು ಕೀಲಿಸಿ ಮಲಗಿದ್ದಳು. ಜೋಸ್ ಮಾಂಟಿಯಲ್ ಊಟದ ನಂತರದಲ್ಲಿ ವಿಶ್ರಾಂತಿ

ತೆಗೆದುಕೊಳ್ಳುತ್ತಿದ್ದ. ಅನೇಕ ದನಿಗಳ ಕೋಲಾಹಲವನ್ನು ಕೇಳಿ ಅವಳು ಬೆಚ್ಚಿಬಿದ್ದಳು. ಬೈಠಕ್ ಕೋಣೆಯಿಂದ ನೋಡಿದರೆ ಮನೆಯ ಮುಂದೆ ಜನಗಳ ಭಾರೀ ಗುಂಪು ಸೇರಿದೆ. ಗುಂಪಿನ ನಡುವೆ ಒಳ್ಳೆ ಶುಭ್ರವಾದ ಉಡುಪಿನಲ್ಲಿ ಆಗತಾನೆ ಶೇವ್ ಮಾಡಿಕೊಂಡು ನಿಂತಿದ್ದ ಬಾಲ್ತಜರ್ ಪಂಜರ ಕೈಯಲ್ಲಿ ಹಿಡಿದು ನಿಂತಿದ್ದ. ಎಂದಾದರೂ ಶ್ರೀಮಂತನ ಮನೆಗೆ ಹೋದಾಗ ಸಾಮಾನ್ಯವಾಗಿ ಎಲ್ಲ ಬಡವರ ಮುಖದ ಮೇಲೆ ಕಂಡು ಬರುವಂಥ ನಮ್ರತೆ ಮತ್ತು ನಿಶ್ಚಲತೆಯ ಭಾವ ಅವನ ಮುಖದ ಮೇಲೆ ಇತ್ತು.

"ಓಹ್! ಎಂಥ ಘನವಾದ ವಸ್ತು" ಎಂದು ಮಾಂಟಿಯಲ್‌ನ ಹೆಂಡತಿ ಸಹಜ ಸ್ಫೂರ್ತವಾಗಿ ಉಲ್ಲಾಸದಿಂದ ಉದ್ಗರಿಸಿದಳು. ಬಾಲ್ತಜರ್‌ಗೆ ಒಳಕ್ಕೆ ಬರಲು ಹೇಳಿದಳು. "ನನ್ನ ಜೀವನದಲ್ಲಿ ಇದುವರೆಗೆ ಯಾವತ್ತೂ ಇಂಥ ಒಂದು ವಸ್ತುವನ್ನು ನೋಡಿಲ್ಲ" ಬಾಗಿಲ ಮುಂದೆ ಜನರ ಗುಂಪು ಜಮಾಯಿಸಿದ್ದು ನೋಡಿ ಸಿಡಿದೆದ್ದು- "ಈ ಕೊಠಡಿ ಕುಸ್ತಿ ಅಖಾಡ ಆಗೋಕ್ಕೆ ಮುಂಚೆ ಇದನ್ನು ನೀನು ಒಳಗಡೆಗೆ ತಗೊಂಡು ಬಾ" ಎಂದಳು.

ಬಾಲ್ತಜರ್ ಈ ಮನೆಗೆ ಅಪರಿಚಿತನೇನಲ್ಲ. ಅವನ ಕೆಲಸದ ಪ್ರಾಮಾಣಿಕತೆ ಮತ್ತು ವೃತ್ತಿ ಕೌಶಲದಿಂದಾಗಿ ಆಗಾಗ್ಗೆ ಸಣ್ಣ ಪುಟ್ಟ ಬಡಗಿ ಕೆಲಸಗಳಿಗೆ ಅವನಿಗೆ ಹೇಳಿಕಳಿಸಲಾಗುತ್ತಿತ್ತು. ಆದರೆ ಶ್ರೀಮಂತರ ನಡುವೆ ಅವನಿಗೆ ಯಾವತ್ತೂ ಸರಿಹೋಗುತ್ತಿರಲಿಲ್ಲ. ಅವರ ಜಗಳಗಂಟಿ ಹೆಂಡತಿಯರು ಮತ್ತು ಅವರ ಭಾರಿ ಭಾರಿ ಶಸ್ತ್ರ ಚಿಕಿತ್ಸೆಗಳ ಬಗ್ಗೆ ಯೋಚಿಸುತ್ತ ಅನೇಕ ಸಲ ಅವನಿಗೆ ಅವರ ವಿಷಯಕ್ಕೆ ಮರುಕ ಉಂಟಾಗುತ್ತಿತ್ತು. ಅವರ ಮನೆಗಳ ಒಳಗಡೆ ಹೋಗುತ್ತಿದ್ದ ಹಾಗೇ ಅವನ ಹೆಜ್ಜೆಗಳು ಬಹಳ ಕಷ್ಟದಿಂದ ಮುಂದೆ ಸಾಗುತ್ತಿದ್ದುವು.

"ಪಾಪು ಮನೇಲಿದ್ದಾರಾ"? ಎಂದು ಕೇಳಿದ.

ಪಂಜರವನ್ನು ಅವನು ಡೈನಿಂಗ್ ಹಾಲ್‌ನ ಮೇಜಿನ ಮೇಲೆ ಇಟ್ಟಿದ್ದ.

"ಅವನು ಸ್ಕೂಲ್‌ಗೆ ಹೋಗಿದ್ದಾನೆ. ಈಗ ಇನ್ನೇನು ಬಂದುಬಿಡ್ತಾನೆ"- ಮಾಂಟಿಯಲ್‌ನ ಹೆಂಡತಿ ಹೇಳಿದಳು. ಮತ್ತೆ-"ಮಾಂಟಿಯಲ್ ಸ್ನಾನ ಮಾಡ್ತಾ ಇದ್ದಾರೆ" ಎಂದಳು

ವಾಸ್ತವವಾಗಿ ಮಾಂಟಿಯಲ್ ಇನ್ನೂ ಸರಿಯಾಗಿ ಸ್ನಾನ ಮಾಡಿರಲಿಲ್ಲ. ಬೇಗ ಹೊರಗೆ ಹೋಗಿ ವಿಷಯ ಏನೆಂದು ತಿಳಿದುಕೊಳ್ಳಬೇಕೆಂದು ಅವಸರವಸರವಾಗಿ ಮೈ ಉಜ್ಜಿಕೊಂಡ. ಮನೆಯಲ್ಲಿ ಏನೇ ಸದ್ದಾದರೂ, ಯಾರದ್ದೇ ದನಿಯಾದರೂ

ತನಗೆ ಕೇಳಿಸಬೇಕು ಅನ್ನುವ ಕಾರಣಕ್ಕಾಗಿ ರಾತ್ರಿ ಹೊತ್ತು ಫ್ಯಾನ್ ಆರಿಸಿಕೊಂಡು ಮಲಗುವಷ್ಟು ಎಚ್ಚರಿಕೆ ವಹಿಸುವಂಥ ವ್ಯಕ್ತಿ ಅವನು.

ಒಳಗಿನಿಂದಲೇ– "ಎಡೆಲ್ಡಿ ಏನಾಗ್ತಾ ಇದೆ" ಎಂದು ಒಳಗಿನಿಂದಲೇ ಕಿರಿಚಿದ.

"ಹೊರಗಡೆ ಬಂದು ನೋಡು ಅದೆಂಥ ಅದ್ಭುತವಾದ ವಸ್ತು ಅಂತ"– ಅಂತ ಅವನ ಹೆಂಡತಿ ಕೂಗಿದಳು.

ಸ್ಥೂಲ ಕಾಯದ, ರೋಮಗಳು ಇಡಿಕಿರಿದ ದೇಹದ ಮಾಂಟಿಯಲ್ ಕುತ್ತಿಗೆ ಮೇಲೆ ಟೌಲು ಸುತ್ತಿಕೊಂಡು ಮಲಗುವ ಕೋಣೆಯ ಕಿಟಕಿಯಿಂದ ಇಣುಕಿ ಕೇಳಿದ–

"ಏನು ವಿಷಯ?"

"ಪಾಪೂನ ಪಂಜರ" ಬಾಲ್ತಜರ್ ಉತ್ತರ ಕೊಟ್ಟ.

ಅದು ಕೇಳಿ ಅವನ ಹೆಂಡತಿಗೆ ಇತ್ತ ಎಚ್ಚರ ಬಂತು.

"ಯಾರದ್ದು?"

"ಪಾಪುವಿನದು". ಬಾಲ್ತಜರ್ ಮತ್ತೆ ಹೇಳಿದ. ಮತ್ತೆ ಜೋಸ್ ಮಾಂಟಿಯಲ್ ಕಡೆ ತಿರುಗಿ–"ಪಾಪೂ ಇದರ ಆರ್ಡರ್ ಕೊಟ್ಟಿದ್ದರು"

ಒಂದು ಕ್ಷಣಕ್ಕೆ ಎಲ್ಲರಿಗೂ ಹಾವು ತುಳಿದಂತಾಯಿತು. ಬಾಲ್ತಜರ್‌ಗೆ ಯಾರೋ ಅವನ ಕಡೆಗೆ ಝುಟ್ ಅಂತ ಬಾತ್ ರೂಮಿನ ಬಾಗಿಲು ತೆರೆದರೇನೋ ಎನಿಸಿತು. ಜೋಸ್ ಮಾಂಟಿಯಲ್ ಚಡ್ಡೀಲೆ ಬೆಡ್ ರೂಮಿನಿಂದ ಹೊರಕ್ಕೆ ಬಂದ.

"ಪಾಪೂ" ಅವನು ಜೋರಾಗಿ ಚೀರಿದ.

"ಅವನಿನ್ನೂ ಬಂದಿಲ್ಲ" –ಎಂದು ಜಡಗೊಂಡ ಅವನ ಹೆಂಡತಿ ಪಿಸುಗುಟ್ಟುತ್ತ ಹೇಳಿದಳು.

ಅದೇ ಹೊತ್ತಿಗೆ ಪಾಪು ಬಾಗಿಲ ಹತ್ತಿರ ಕಾಣಿಸಿಕೊಂಡ. ಅವನು ಹನ್ನೆರಡು ವರ್ಷದ ಹುಡುಗ. ಅವನ ರೆಪ್ಪೆಗಳು ತಾಯಿಯ ಕಣ್ಣಿನ ರೆಪ್ಪೆಗಳ ಥರಾನೇ ವಕ್ರವಾಗಿದ್ದವು ಮತ್ತು ನೋಡಿದರೆ ಅವನ ಮುಖ ಅಯ್ಯೋ ಪಾಪ! ಎನ್ನುವಂತಿತ್ತು.

"ಇಲ್ಲಿ ಬಾ"– ಜೋಸ್ ಮಾಂಟಿಯಲ್ ಹೇಳಿದ. "ಇದನ್ನು ಮಾಡಿಕೊಡಲು ನೀನು ಆರ್ಡರ್ ಕೊಟ್ಟಿದ್ದೆಯಾ?"

ಹುಡುಗ ತಲೆ ತಗ್ಗಿಸಿದ. ಕೂದಲು ಹಿಡಿದು ಅವನ ತಲೆಯನ್ನು ಮೇಲೆತ್ತಿ ಮಾಂಟಿಯಲ್ ಕೇಳಿದ–

"ಉತ್ತರ ಕೊಡು"

ಏನೂ ಹೇಳದೆ ಹುಡುಗ ತನ್ನ ತುಟಿ ಕಚ್ಚುತ್ತ ನಿಂತ.

"ಮಾಂಟಿಯಲ್"– ಅವನ ಹೆಂಡತಿ ಬಡಬಡಿಸಿದಳು.

ಮಾಂಟಿಯಲ್ ಬಾಲಕನನ್ನು ಬಿಟ್ಟುಬಿಟ್ಟ. ಆಮೇಲೆ ಸಿಟ್ಟಿನಿಂದ ಬಾಲ್ತಜರ್ ಕಡೆ ತಿರುಗಿ– "ನನಗೆ ಬಾಲ್ತಜರ್ ಮೇಲೆ ತುಂಬಾ ಬೇಸರ ಇದೆ. ಇದನ್ನು ಮಾಡೋದಕ್ಕಿಂತ ಮುಂಚೆ ನೀನು ನನ್ನನ್ನು ಕೇಳಬೇಕಾಗಿತ್ತು. ಒಬ್ಬ ಹುಡುಗನ ಜೊತೆ ವ್ಯವಹಾರ ಮಾಡೋಂಥ ವಿಚಾರವನ್ನು ಅದು ಹ್ಯಾಗೆ ಯೋಚನೆ ಮಾಡ್ತೀಯಾ?" ಅವನು ಹಾಗೆ ಇನ್ನೂ ಹೇಳ್ತಾ ಇದ್ದಾಗ ನಿಧಾನವಾಗಿ ಅವನ ಮುಖದ ಮೇಲೆ ಶಾಂತಿ ಮರಳಿತು. ಅನಂತರ ಅವನು ಪಂಜರ ಕೈಯಲ್ಲಿ ಎತ್ತಿಕೊಂಡು ಅದರ ಕಡೆ ನೋಡದೆ ಬಾಲ್ತಜರ್‌ನ ಕೈಯಲ್ಲಿ ಅದನ್ನು ಇಟ್ಟ.

"ಇದನ್ನು ಈಗಲೇ ಈ ಕ್ಷಣವೇ ತಗೊಂಡು ಹೋಗ್ತಾ ಇರು. ನಿನಗೆ ಯಾರಿಗೆ ಬೇಕೋ ಅವರಿಗೆ ಮಾರಿಕೋ ಹೋಗು. ನಿನ್ನ ಹತ್ತಿರ ನನ್ನದು ಒಂದೇ ಪ್ರಾರ್ಥನೆ ಏನಪ್ಪಾ ಅಂದ್ರೆ ಈ ವಿಚಾರದಲ್ಲಿ ನನ್ನ ಹತ್ತಿರ ಯಾವ ಮಾತೂ ಆಡಬೇಡ."– ಎಂದು ಹೇಳಿ ಅವನ ಬೆನ್ನು ತಟ್ಟುತ್ತ ಸ್ಪಷ್ಟನೆ ನೀಡತೊಡಗಿದ– "ಡಾಕ್ಟ್ರು ನನಗೆ ಸಿಟ್ಟುಮಾಡಿಕೊಳ್ಳಬೇಡಿ ಅಂತ ಹೇಳಿದ್ದಾರೆ".

ಇಷ್ಟು ಹೊತ್ತಿನ ತನಕ ಬಾಲಕ ಅಲ್ಲಾಡದೆ, ರೆಪ್ಪೆ ಮಿಟುಕಿಸದೆ ಮೌನವಾಗಿ ನಿಂತಿದ್ದ. ಕೈಯಲ್ಲಿ ಪಂಜರವನ್ನು ಹಿಡಿದುಕೊಂಡು ಅನಿಶ್ಚಯದಿಂದ ಒಂದು ಸಲ ಅವನ ಕಡೆ ನೋಡಿದ. ಬಾಲಕನ ಗಂಟಲಿನಿಂದ ಒಮ್ಮೆಲೇ ನಾಯಿ ಗೊರಕೆ ಹೊಡೆಯುವಂಥ ಶಬ್ದ ಹೊಮ್ಮಿತು. ಅವನು ನೆಲದ ಮೇಲೆ ಬಿದ್ದು ಹೊರಳಿ ಬಿಕ್ಕತೊಡಗಿದ.

ಜೋಸ್ ಮಾಂಟಿಯಲ್ ಜಡನಂತೆ ಅವನನ್ನು ನೋಡುತ್ತಿದ್ದ. ತಾಯಿ ಅವನನ್ನು ಸಮಾಧಾನ ಪಡಿಸುವ ಪ್ರಯತ್ನ ಮಾಡುತ್ತಿದ್ದಳು.

"ಬಿಟ್ಟುಬಿಡು ಅವನನ್ನು. ರಕ್ತ ಸುರಿಸಿಕೊಂಡು ಬಿದ್ದಿರಲಿ ಅವನು. ಹೀಗೆ ತನ್ನ ಮನಸ್ಸಿಗೆ ಬಂದಂತೆ ಮಾಡಬಹುದು ಅಂತ ತಿಳಿದುಕೊಂಡಿದ್ದಾನೆ ಅವನು." ಬಾಲಕ ಒಂದೇ ಸಮನೆ ಅತ್ತು ಕರೆದು ಮಾಡ್ತಾ ಇದ್ದ. ತಾಯಿ ಅವನ ಮಣಿಕಟ್ಟಿಗೆ ಕೈ ಹಾಕಿ ಹಿಡಿದುಕೊಂಡಿದ್ದಳು.

"ನೀನು ಅವನನ್ನು ಯಾಕೆ ಬಿಡ್ತಾ ಇಲ್ಲ?" ಜೋಸ್ ಮಾಂಟಿಯಲ್ ಸಿಟ್ಟಿನಿಂದ ಅಬ್ಬರಿಸಿದ.

ಬಾಲ್ತಜರ್ ಬಾಲಕನನ್ನು ನೆಟ್ಟ ನೋಟದಿಂದ ನೋಡುತ್ತಿದ್ದ. ಆ ನೋಟ, ಹತೋಟಿಗೆ ಸಿಕ್ಕದೆ ಇರುವ ಒಂದು ಕ್ರೂರ ಪ್ರಾಣಿ ಸಾವಿನೊಂದಿಗೆ ಸೆಣಸುತ್ತಿರುವುದನ್ನು

ನೋಡುತ್ತಿರುವಂತಿತ್ತು. ಆಗ ಸಾಯಂಕಾಲ ನಾಲ್ಕು ಗಂಟೆ. ಆ ಹೊತ್ತಿನಲ್ಲಿ ಅವನ ಹೆಂಡತಿ ಉರ್ಸುಲಾ ಒಂದು ಹಳೇ ಹಾಡನ್ನು ಗುಣುಗುಣಿಸುತ್ತ ಈರುಳ್ಳಿ ಹೆಚ್ಚುತ್ತಿದ್ದಳು.

"ಪೇಪೆ" ಬಾಲ್ತಜರ್ ಕರೆದ.

ಮುಗುಳ್ನಗುತ್ತ ಅವನು ಬಾಲಕನ ಸಮೀಪಕ್ಕೆ ಬಂದ. ಪಂಜರವನ್ನು ಅವನ ಕೈಯಲ್ಲಿಟ್ಟ. ಪಂಜರ ಕೈಗೆ ಸಿಕ್ಕುತ್ತಲೇ ಬಾಲಕ ಕುಣಿದಾಡತೊಡಗಿದ. ಪಂಜರ ಅವನ ಹೆಗಲಿನ ಎತ್ತರಕ್ಕಿತ್ತು. ಅದನ್ನು ತೋಳುಗಳಿಂದ ತಬ್ಬಿಕೊಂಡು ನಂಬಲಾರದವನಂತೆ ಬಾಲ್ತಜರ್‌ನನ್ನು ನೋಡುತ್ತಲೇ ಇದ್ದ. ಏನು ಹೇಳಬೇಕೆಂದು ಅವನಿಗೆ ಗೊತ್ತಾಗಲಿಲ್ಲ. ಅವನ ಕಣ್ಣೀರು ನಿಂತಿತ್ತು.

"ಬಾಲ್ತಜರ್, ಇದನ್ನು ತಗೊಂಡುಹೋಗು ಅಂತ ನಿನಗೆ ಆಗಲೇ ಹೇಳಿದ್ದೀನಿ"– ಮಾಂಟಿಯಲ್ ಮೆಲುದನಿಯಲ್ಲಿ ಹೇಳಿದ.

"ಮಗು ಇದನ್ನು ವಾಪಸ್ ಕೊಟ್ಟುಬಿಡು"– ಅಮ್ಮ ಮಗನಿಗೆ ಆದೇಶಿಸಿದಳು.

"ಇದನ್ನು ನೀನೇ ಇಟ್ಟುಕೋ" ಎಂದು ಹೇಳಿ ಬಾಲ್ತಜರ್ ಮಾಂಟಿಯಲ್ ಕಡೆ ತಿರುಗಿ ಹೇಳಿದ– "ನಾನು ಇದನ್ನು ಮಾಡಿದ್ದು ಇವನಿಗೋಸ್ಕರವೇ"– ಎಂದ.

ಜೋಸ್ ಮಾಂಟಿಯಲ್ ಬೈಠಕ್‌ನವರೆಗೆ ಅವನ ಹಿಂದೆ ಹಿಂದೆಯೇ ಬಂದ. ಅವನಿಗೆ ಅಡ್ಡ ಬಂದು ಹೇಳಿದ–

"ಮೂರ್ಖನಾಗಬೇಡ ಬಾಲ್ತಜರ್. ಈ ಫರ್ನಿಚರ್‌ನ ಮಾಡಲ್ ಅನ್ನು ತೊಗೊಂಡು ಹೋಗು. ಮೂರ್ಖತನ ಮಾಡಬೇಡ. ಇದಕ್ಕೆ ನಾನು ನಿನಗೆ ಒಂದು ಕವಡೆ ಕಾಸೂ ಕೊಡಲ್ಲ".

"ಏನೂ ಪರವಾಗಿಲ್ಲ. ನಾನು ಪೇಪೇಗೆ ಗಿಫ್ಟ್ ಕೊಡುವುದಕ್ಕೋಸ್ಕರ ಇದನ್ನು ಮಾಡಿದೆ. ಇದರ ಬೆಲೆಯನ್ನು ವಸೂಲು ಮಾಡಿಕೊಳ್ಳುವ ಯಾವ ಉದ್ದೇಶವೂ ನನಗಿಲ್ಲ." ಬಾಲ್ತಜರ್ ಹೇಳಿದ.

ಬಾಲ್ತಜರ್ ಬಾಗಿಲ ಹತ್ತಿರ ಜಮಾಯಿಸಿದ್ದ ಜನರ ಗುಂಪಿನ ಮೂಲಕ ಹಾದುಹೋಗುತ್ತಿದ್ದಾಗ, ಜೋಸ್ ಮಾಂಟಿಯಲ್ ತನ್ನ ಕೊಠಡಿಯಲ್ಲಿ ನಿಂತು ಏನೇನೋ ಬಡಬಡಿಸುತ್ತಿದ್ದ. ಅವನ ಮುಖದ ಬಣ್ಣ ಇಳಿದುಹೋಗಿ ಕಣ್ಣುಗಳು ಕೆಂಪಾಗುತ್ತ ಇದ್ದವು.

"ಏ ಹಾಳಾದ ಮೂರ್ಖ! ಆ ದರಿದ್ರದ್ದನ್ನು ತೊಗೊಂಡು ಹೋಗ್ತಾ ಇರು ಇಲ್ಲಿಂದ. ಈ ಮನೇಲಿ ನಾವು ಯಾರಿಂದಲೂ ಬುದ್ಧಿ ಹೇಳಿಸಿಕೊಳ್ಳಬೇಕಾಗಿಲ್ಲ, ದರಿದ್ರ ಬಡ್ಡೀ ಮಗ ಎಲ್ಲೋ"–ಎಂದು ಕೂಗಾಡ್ತಾ ಇದ್ದ.

ಸಂಘದ ಹಾಲ್‌ನ ಮುಂದುಗಡೆ ಬಾಲ್ತಜರ್‌ಗೆ ಗೌರವ ತೋರಿಸುವ ಸಲುವಾಗಿ ಎಲ್ಲರೂ ಎದ್ದುನಿಂತು ಸ್ವಾಗತಿಸಿದರು. ಆ ಕ್ಷಣದವರೆಗೆ ಅವನು ಯೋಚಿಸುತ್ತ ಇದ್ದದ್ದು ಇಷ್ಟೆ: ಇದುವರೆಗೆ ತಾನು ಮಾಡಿದ ಪಂಜರಗಳಲ್ಲೆಲ್ಲ ಅತ್ಯುತ್ತಮವಾದ ಪಂಜರವನ್ನು ತಯಾರಿಸಿದ್ದು ಅದನ್ನು ಮಾಂಟಿಯಲ್‌ನ ಮಗ ಅಳುವುದನ್ನು ನಿಲ್ಲಿಸಲೆಂದು ಅವನಿಗೆ ಕೊಡುವುದೇ ಅತ್ಯಂತ ಉಚಿತವಾದ್ದು ಎಂದು ಭಾವಿಸಿದ್ದಾನೆ. ಅವನಿಗೆ ಇದಾವುದೂ ಅಷ್ಟೇನೂ ವಿಶೇಷ ಮಹತ್ವದ್ದಲ್ಲ. ಆದರೆ ಬಹಳಷ್ಟು ಜನರಿಗೆ ಇದು ಎಷ್ಟೊಂದು ಮಹತ್ವದ್ದೆನಿಸಿದೆ ಎಂಬುದು ಈಗ ಅವನಿಗೆ ಗೊತ್ತಾಯಿತು. ಅದರ ಬಗ್ಗೆ ಯೋಚಿಸಿ ಅವನಿಗೆ ಉತ್ಸಾಹ ಉಂಟಾಯಿತು.

"ಹೌದು ಅವರು ಇದಕ್ಕೆ ಐವತ್ತು ಪೇಸೋ ಕೊಟ್ಟರಾ?"

"ಇಲ್ಲ, ಅರುವತ್ತು" ಬಾಲ್ತಜರ್ ಹೇಳಿದ.

"ನಿನಗಂತೂ ನೂರಕ್ಕೆ ನೂರು ಮಾರ್ಕ್ಸ್ ಸಿಗಬೇಕು" ಎಂದು ಯಾರೋ ಹೇಳಿದರು. "ಮಿಸ್ಟರ್ ಚೇಪೇ ಮಾಂಟಿಯಲ್‌ನಿಂದ ಇಷ್ಟೊಂದು ದೊಡ್ಡ ಮೊತ್ತವನ್ನು ಗಿಟ್ಟಿಸೋದರಲ್ಲಿ ಯಶಸ್ವಿಯಾದವನು ನೀನೊಬ್ಬನೇ. ನಾವು ಇದನ್ನು ಸೆಲೆಬ್ರೇಟ್ ಮಾಡಬೇಕು"

ಯಾರೋ ಅವನಿಗೋಸ್ಕರ ಬಿಯರ್ ತಂದರು. ಅನಂತರ ಬಾಲ್ತಜರ್ ಕೂಡ ಎಲ್ಲರಿಗೂ ಬಿಯರ್ ಕುಡಿಸಿದ. ಇದು ಅವನು ಮೊದಲನೇ ಸಲ ಸಂಕೋಚದಿಂದ ಕುಡೀತಾ ಇರೋದು. ಸಂಜೆ ಆಗೋ ಹೊತ್ತಿಗೆ ಅವನಿಗೆ ನಶೆ ಏರಿಬಿಟ್ಟಿತ್ತು. ಬಾಯಿಗೆ ಬಂದದ್ದು ಆಡುವುದಕ್ಕೆ ಶುರೂ ಮಾಡಿದ. ಒಂದು ಸಾವಿರ ಪಂಜರಗಳನ್ನು ತಯಾರಿಸುವ ಅತ್ಯುತ್ತಮವಾದ ಆಲೋಚನೆಗಳು ಅವನಿಗೆ ಹೊಳೆಯತೊಡಗಿದವು. ಒಂದೊಂದು ಪಂಜರವೂ ಅರುವತ್ತು ಪೇಸೋಗಳದ್ದು. ಆಮೇಲೆ ಲಕ್ಷಾಂತರ ಪಂಜರಗಳು ಮತ್ತು ಲಕ್ಷಾಂತರ ರೂಪಾಯಿಗಳ ವ್ಯವಹಾರ. "ಈ ಸಾಹುಕಾರರು ಸಾಯೋದಕ್ಕೆ ಮುಂಚೆ ಇವರಿಗೆ ಮಾರುವ ಸಲುವಾಗಿಯೇ ನಾವು ಬಹಳಷ್ಟು ವಸ್ತುಗಳನ್ನು ಮಾಡಬೇಕಾಗುತ್ತೆ"– ನಶೆಯಲ್ಲಿ ಅವನು ಹೀಗೆಲ್ಲಾ ಆಡುತ್ತಲೇ ಇದ್ದ. "ಇವರೆಲ್ಲರೂ ರೋಗಿಷ್ಟರು. ಎಲ್ಲರೂ ಸಾವಿನ ಹೊಸ್ತಿಲ ಮೇಲೆ ನಿಂತಿದ್ದಾರೆ. ಇವರ ಮೆದುಳುಗಳು ಅದೆಷ್ಟೊಂದು ದಣಿದುಹೋಗಿವೆ ಅಂದರೆ ಸಿಟ್ಟು ಮಾಡಿಕೊಳ್ಳುವಷ್ಟು ಶಕ್ತಿನೂ ಇವರಲ್ಲಿ ಉಳಿದಿಲ್ಲ."

ಎರಡು ಗಂಟೆಯ ತನಕ ಅವನು ಜ್ಯೂಕ್ ಬಾಕ್ಸ್ ನಲ್ಲಿ(ಬಯಸಿದ ರೆಕಾರ್ಡನ್ನು ಬಾರಿಸುವ ಮಿಷನ್ನು) ಹಾಕುತ್ತಲೇ ಇದ್ದ. ಅದು ನಿಲ್ಲಿಸದೆ ಬಾರಿಸುತ್ತಲೇ ಇತ್ತು. ಎಲ್ಲರೂ ಬಾಲ್ತಜರ್‌ಗೆ ಆರೋಗ್ಯ, ಐಶ್ವರ್ಯ, ಸಮೃದ್ಧಿ ಮತ್ತು ನೆಮ್ಮದಿಯ ಜೀವನ

ದೊರೆಯುಲೆಂದು ಹಾರೈಸಿದರು. ಆದರೆ ಊಟದ ಹೊತ್ತಿಗೆ ಎಲ್ಲರೂ ಹೊರಟುಹೋದರು. ಹಾಲ್‌ನಲ್ಲಿ ಉಳಿದವನು ಅವನೊಬ್ಬನೇ.

ಮಾಂಸದ ಜೊತೆ ಈರುಳ್ಳಿಯ ತೆಳ್ಳನೆಯ ಚೂರುಗಳನ್ನು ತಟ್ಟೆಯಲ್ಲಿ ಇಟ್ಟುಕೊಂಡು ಉರ್ಸುಲಾ ಎಂಟು ಗಂಟೆಯ ತನಕ ಅವನ ದಾರಿ ಕಾಯುತ್ತಾ ಇದ್ದಳು. ಸಂತೋಷದಲ್ಲಿ ಮುಳುಗಿ ಹೋಗಿರುವ ಬಾಲ್ತಜರ್ ಎಲ್ಲರಿಗೂ ಬಿಯರ್ ಕುಡಿಸುತ್ತಾ ಇದ್ದಾನೆ ಅಂತ ಯಾರೋ ಸುದ್ದಿ ಕೊಟ್ಟರು. ಅವಳಿಗೆ ನಂಬಿಕೆ ಬರಲಿಲ್ಲ. ಕಾರಣ ಬಾಲ್ತಜರ್ ಎಂದೂ ನಶೆಯಲ್ಲಿ ಮುಳುಗಿದವನಲ್ಲ. ಅರ್ಧ ರಾತ್ರಿ ಹೊತ್ತಿಗೆ ಅವಳು ಮಲಗಲೆತ್ನಿಸುತ್ತಿದ್ದಾಗ ಬೆಳಕಿರುವ ಒಂದು ಕೊಠಡಿಯಲ್ಲಿ ಬಾಲ್ತಜರ್ ಇದ್ದ. ಅಲ್ಲಿ ನಾಲ್ಕೈದು ಸಣ್ಣ ಪುಟ್ಟ ಮೇಜುಗಳ ಅಕ್ಕ-ಪಕ್ಕ ನಾಲ್ಕು ನಾಲ್ಕು ಕುರ್ಚಿಗಳನ್ನು ಹಾಕಿತ್ತು. ಹೊರಗಡೆ ಒಂದು ಡಾನ್ಸ್ ಫ್ಲೋರ್ ಇತ್ತು. ಅಲ್ಲಿ ನೀರು ಹಕ್ಕಿಗಳು ಓಡಾಡ್ತಾ ಇದ್ದವು. ಅವನ ಮುಖ ಕಾಂತಿಹೀನವಾಗಿತ್ತು. ಒಂದು ಹೆಜ್ಜೆ ಮುಂದಕ್ಕೆ ಇಡುವುದೂ ಅಸಾಧ್ಯವಾಗಿತ್ತು. ಲಹರಿಯುಲ್ಲಿದ್ದಾಗ ಇಬ್ಬರು ಹೆಣ್ಣುಗಳೊಂದಿಗೆ ಮಲಗಬೇಕೆಂದು ತಾನು ಬಯಸುತ್ತಿರುವುದಾಗಿ ಅನ್ನಿಸಿತು. ತನ್ನ ಗಡಿಯಾರವನ್ನು ಅಡ ಇಟ್ಟು ಮಾರನೇ ದಿನ ಹಣ ಕೊಟ್ಟು ಅದನ್ನು ಬಿಡಿಸಿಕೊಳ್ಳುವುದಾಗಿ ಮಾತು ಕೊಡಬೇಕಾಗಿ ಬರುವಷ್ಟು ಹಣವನ್ನು ಖರ್ಚುಮಾಡಿಬಿಟ್ಟಿದ್ದ. ಹಾಗೆ ಹೇಳಿದ ಮರು ಕ್ಷಣವೇ ಕೈ ಕಾಲು ಚಾಚಿಕೊಂಡು ಬಿದ್ದುಬಿಟ್ಟಿದ್ದ. ತನ್ನ ಚಪ್ಪಲಿಗಳನ್ನು ಕಳಚಲಾಗುತ್ತಿದೆ ಎನಿಸಿತು. ಆದರೆ ತನ್ನ ಜೀವನದ ಈ ಅತ್ಯಂತ ಸುಂದರವಾದ ಕನಸನ್ನು ಕಳೆದುಕೊಳ್ಳಲು ಅವನಿಗೆ ಇಷ್ಟವಿರಲಿಲ್ಲ. ಬೆಳಗಿನ ಐದು ಗಂಟೆಯ ಪ್ರಾರ್ಥನೆಗಾಗಿ ಚರ್ಚಿಗೆ ಹೋಗುವ ಮಹಿಳೆಯರು ಅವನು ಸತ್ತಿದ್ದಾನೆಂದು ಅಂದುಕೊಂಡರು. ಹಾಗಾಗಿ ಅವನ ಕಡೆಗೆ ಕಣ್ಣೆತ್ತಿ ನೋಡುವ ಧೈರ್ಯ ಮಾಡಲಿಲ್ಲ.

❖

ಅವರು

ಇಟ್ಯಾಲಿಯನ್ : ಲೂಯಿ ಪಿರ್ರೆನೆಲಾ

ಅವರಿಬ್ಬರ ಮದುವೆ ನಿಶ್ಚಿತವಾದ ದಿನದಿಂದಲೂ ಅವನ ಭಾವೀ ಪತ್ನಿ ಲೀನಾ ಹೀಗೆ ಹೇಳುತ್ತಾ ಇದ್ದದ್ದು ಬರ್ತೊಲಿನ್ ಕಿವಿಗೆ ಬೀಳುತ್ತಿತ್ತು– "ನಿಮಗೆ ಗೊತ್ತೇನು ನನ್ನ ನಿಜವಾದ ಹೆಸರು ಲೀನಾ ಅಲ್ಲ. ನನ್ನ ಹೆಸರು ಕರೋಲೀನಾ. ಆದರೆ ಅವರು ನನ್ನನ್ನು ಲೀನಾ ಅಂತ ಕರೀತಾ ಇದ್ದರು. ಅದರಿಂದಲೇ ನನ್ನ ಹೆಸರು ಲೀನಾ ಅಂತಲೇ ಉಳಿದುಕೊಂಡು ಬಿಡ್ತು. ಓಹ್! ಅವರು ತುಂಬ ಒಳ್ಳೆ ಮನುಷ್ಯರು. "ಅಲ್ಲಿ ನೋಡಿ ಅವರ ಚಿತ್ರ" ಎಂದುಹೇಳಿ ಒಂದು ದೊಡ್ಡ ಫೋಟೋಗ್ರಾಫ್ ಕಡೆ ಬೊಟ್ಟುಮಾಡಿ ತೋರಿಸಿದಳು. ಅವನ ಭಾವೀ ಪತ್ನಿಯ ಮೊದಲ ಗಂಡ ಸಿನೋರ್ ಕೊಸಿಮೊ ಅವನತ್ತ ಮೃದು ಮುಗುಳ್ನಗೆ ಬೀರುತ್ತ ಹ್ಯಾಟ್ ತೆಗೆಯುತ್ತಿರುವುದು ಬರ್ತಲಿನೊ ಕಣ್ಣಿಗೆ ಬಿತ್ತು.

ತನಗೇ ಗೊತ್ತಿಲ್ಲದ ಹಾಗೆ ಬರ್ತಲಿನೊ ಗತಿಸಿದ ಸಜ್ಜನನ ನಮಸ್ಕಾರಕ್ಕೆ ಪ್ರತ್ಯುತ್ತರವಾಗಿ ತನ್ನ ತಲೆಯನ್ನು ಹೆಚ್ಚುಕಡಿಮೆ ಅರ್ಧ ಬಾಗಿಸಿದ್ದ. ತಾದ್ದೇಯಿ ಒಬ್ಬ ಹೆಸರಾಂತ ಶಿಲ್ಪಿ. ಅವರ ನಿಧನದ ನಂತರ ಗೋಡೆಗೆ ತಗುಲಿಹಾಕಿದ್ದ ಅವರ ಭಾವಚಿತ್ರವನ್ನು ತೆಗೆದುಹಾಕಬೇಕೆಂಬ ಆಲೋಚನೆ ಅವನ

ವಿಧವೆ ಹೆಂಡತಿ ಲೀನಾಳ ಮನಸ್ಸಿನಲ್ಲಿ ಒಮ್ಮೆಯೂ ಮೂಡಲಿಲ್ಲ. ಅಂಥ ಆಲೋಚನೆ ಏಕಾದರೂ ಬಂದೀತು? ಅವರ ವಿಷಯಕ್ಕೆ ಲೀನಾಳಿಗೆ ಇದ್ದ ಕೃತಜ್ಞತೆಯೇನೂ ಕಮ್ಮಿ ಅಲ್ಲ. ಅವಳ ಮಾನ ಮರ್ಯಾದೆ, ಮನೆ ಬಾಗಿಲು ಆ ಮನೆಯಲ್ಲಿನ ಎಲ್ಲ ಬೆಲೆಬಾಳುವ ಸಾಮಾನು ಸಮಸ್ತವೂ ಅವರದ್ದೇ ತಾನೆ?

ಭಾವೀ ಗಂಡನು ವ್ಯಗ್ರಗೊಂಡದ್ದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ ಲೀನಾ ಮಾತು ಮುಂದುವರೆಸಿ "ನಿಜ ಹೇಳಬೇಕು ಅಂದರೆ ಹೆಸರು ಬದಲಾಯಿಸಿಕೊಳ್ಳುವುದಕ್ಕೆ ನನಗೇನೂ ಇಷ್ಟವಿರಲಿಲ್ಲ, ಆದರೆ ಅವರು ಹೇಳಿದ್ದಕ್ಕೆ ನಾನು 'ಇಲ್ಲ' ಅಂತ ಹೇಳಕ್ಕಾಗ್ತಿರಲಿಲ್ಲ. ನೀವು ನನ್ನನ್ನು ಕೂಡ ಅದೇ ಹೆಸರಿಂದಲೇ ಕರೀಬೇಕು, ಗೊತ್ತಾಯಿತು ತಾನೆ? ತಪ್ಪು ತಿಳಿದುಕೊಳ್ಳುವುದಿಲ್ಲ ತಾನೆ?"

ಬರ್ತೊಲಿನ್ ತಡಬಡಾಯಿಸಿಕೊಂಡು ಹೇಳಿದ– "ಇಲ್ಲ, ಇಲ್ಲ......ಅವರದ್ದು ಸರೀನೇ." ಗೋಡೆಗೆ ನೇತುಹಾಕಿದ್ದ ದೊಡ್ಡ ಭಾವಚಿತ್ರದ ಮೇಲಿನಿಂದ ತನ್ನ ದೃಷ್ಟಿಯನ್ನು ಅತ್ತ ಸರಿಸದಾದ. ಆ ಸಜ್ಜನ ಮನುಷ್ಯ ಅವನತ್ತಲೇ ನೋಡುತ್ತ ಮುಗುಳ್ನಕ್ಕು ಹ್ಯಾಟ್ ತೆಗೆದು ನಮಸ್ಕರಿಸುತ್ತಿದ್ದರು.

ಮೂರು ತಿಂಗಳ ನಂತರ ನೆಂಟರು ಇಷ್ಟರು ಮತ್ತಿತರ ಮಿತ್ರರೆಲ್ಲರೂ ಲೀನಾ ಮತ್ತು ಅವಳ ಗಂಡನನ್ನು ಹನಿಮೂನ್ ಪ್ರವಾಸಕ್ಕೆ ಕಳಿಸಿಕೊಡಲು ಸ್ಟೇಷನ್ನಿಗೆ ಬಂದಿದ್ದರು. ಆಗ ಲೀನಾಳ ಪ್ರಿಯ ಗೆಳತಿ ಅರ್ತೆನ್ಸಿಯಾ ಮೋತ್ತ ತನ್ನ ಗಂಡನ ಕಡೆ ನೋಡುತ್ತ ಒಂದು ದೀರ್ಘ ನಿಟ್ಟುಸಿರೆಳೆದುಕೊಳ್ಳುತ್ತ ಹೇಳಿದಳು–"ಬಡಪಾಯಿ ಬರ್ತಲಿನೊ ಲೀನಾಳಂಥ ಹುಡುಗಿಯ ಜೊತೆ....."

"......ಏಕೆ, ಬಡಪಾಯಿ ಹೇಗೆ?" ಅವಳ ಗಂಡ ಕೇಳಿದರು.

ಈ ಮಹಾಶಯರಿಗೆ ಸಾಕಷ್ಟು ವಯಸ್ಸಾಗಿಬಿಟ್ಟಿದೆ. ಲೀನಾಳ ಎರಡನೇ ಮದುವೆಯ ವಿಷಯದ ಪ್ರಸ್ತಾಪ ಅವರೇ ಮಾಡಿದ್ದು. ಅದರಿಂದಲೇ ಈ ಮದುವೆ ಕುರಿತು ಯಾರು ಏನೇ ಟೀಕೆಮಾಡಿದರೂ ಅವರಿಗೆ ಕೂಡಲೇ ಸಿಟ್ಟು ಬಂದುಬಿಡುತ್ತಿತ್ತು.

"–ಬಡಪಾಯಿ ಅಂತ ಹೇಳೋ ಅಂಥದ್ದೇನು ಮಾತಾಯಿತು? ಬರ್ತಲಿನೋ ಮೂರ್ಖನಂತೂ ಅಲ್ಲ. ರಸಯನಶಾಸ್ತ್ರದ ಮೇಲೆ ಅವರಿಗಿರುವ ಪ್ರಭುತ್ವ ಅಸಾಧಾರಣವಾದ್ದು."

"–ನಿಜ. ರಸಯನಶಾಸ್ತ್ರದ ಮೇಲೇನೋ ಇದೆ." ಅರ್ತೆನ್ಸಿಯಾ ಹೇಳಿದಳು.

"ನೋಡ್ತಾ ಇರು ನೀನು, ಬರ್ತೊಲಿನೊ ಅವಳಿಗೆ ತಕ್ಕನಾದ ಗಂಡ ಅಂತ ಸಿದ್ಧವಾಗುತ್ತೆ. ಕೆಮಿಸ್ಟ್ರಿ ಅಂದರೇನು ಸುಮ್ಮನೆ ಆಯಿತೇನು? ಸ್ವಲ್ಪ ಶ್ರಮವಹಿಸಿ ಅವರು

ಸಂಶೋಧನಾ ಪ್ರಬಂಧವನ್ನು ಅಚ್ಚುಮಾಡಿಸಿದರು ಅಂದರೆ ಇಡೀ ದೇಶದಲ್ಲೇ ಅವರೊಬ್ಬ ಆದರ್ಶ ಶಿಕ್ಷಕರು ಅಂತ ಪರಿಗಣಿತವಾಗುತ್ತಾರೆ. ಅದೂ ಅಲ್ಲದೆ ಅವರೊಬ್ಬ ಪರಿಶುದ್ಧ ಮನಸ್ಸಿನ ಪ್ರಾಮಾಣಿಕ ವ್ಯಕ್ತಿ."

"ಸರಿಯಾಗಿ ಹೇಳಿದಿರಿ. ಅತ್ಯಂತ ಪರಿಶುದ್ಧ ಮನಸ್ಸಿನ ಪ್ರಾಮಾಣಿಕ ವ್ಯಕ್ತಿ." ಲೀನಾಳ ಈ ಎರಡನೇ ಹನಿಮೂನ್ ಬಗ್ಗೆ ಯೋಚಿಸಿದ ಅರ್ತೆನ್ಸಿಯಾಳಿಗೆ ಒಳಗೊಳಗೇ ನಗದೆ ಇರಲು ಸಾಧ್ಯವೇ ಆಗಲಿಲ್ಲ. ಮೊದಲನೇ ಸಲವೂ ಲೀನಾ ರೋಮ್‌ಗೆ ಹೋಗಿದ್ದಳು. ಈ ಸಲವೂ ರೋಮ್‌ಗೆ ಹೋಗುತ್ತಿದ್ದಾಳೆ. ಮೊದಲನೇ ಸಲ ಅವಳ ಜೊತೆ ಅತ್ಯಂತ ಚುರುಕಾದ, ಧೂರ್ತ ಹಾಗೂ ಉತ್ಸಾಹಶಾಲಿ (ಕೆಲವೊಮ್ಮೆ ಅತಿ ಉತ್ಸಾಹಶಾಲಿ) ಸಿನೋರ್ ತಾದ್ದೇಯಿ ಇದ್ದರೆ ಈ ಸಲ ಅವನ ಜಾಗದಲ್ಲಿ ಬೋಳು ತಲೆಯ ಮುಗ್ಧ ಮುಖದ ಹಾಗೂ ಅನುಭವದಲ್ಲಿ ತೀರಾ ಎಳಸಾದ ಈ ಹುಡುಗ ಬರ್ತೊಲಿನೊ ಇದ್ದಾನೆ.

ಟ್ರೈನ್ ಹೊರಡುವುದಕ್ಕೆ ಮುಂಚೆ ಅಂಕಲ್ ಅನಸೇಲಮೋ ತಮ್ಮ ಸೊಸೆಗೆ– "ಬರ್ತಲಿನೋನನ್ನು ಸ್ವಲ್ಪ ಚೆನ್ನಾಗಿ ನೋಡಿಕೋ. ಅವನ ಕಡೆ ಸ್ವಲ್ಪ ನಿಗಾ ಇಡು." ಎಂದು ಹೇಳಿದ್ದರು. ಲೀನಾ ಈಗಾಗಲೇ ತನ್ನ ಮೊದಲ ಹನಿಮೂನ್‌ಗೆ ಒಂದು ಸಲ ರೋಮ್‌ಗೆ ಹೇಗೂ ಬಂದಿದ್ದಳು. ಆ ದೇಶದಲ್ಲಿ ಎಲ್ಲೆಲ್ಲಿ ಹೇಗೆ ಹೇಗೆ ಸುತ್ತಾಡಬೇಕು ಅನ್ನುವುದೆಲ್ಲ ಅವಳಿಗೆ ಚೆನ್ನಾಗಿ ಗೊತ್ತಿತ್ತು. ಹಾಗಾಗಿ ಈ ಸಲದ ಇಡೀ ಸುತ್ತಾಟದಲ್ಲಿ ಬರ್ತೊಲಿನೋನನ್ನು ಹೆಚ್ಚು ಕಡಿಮೆ ಮಕ್ಕಳ ಥರ ಕೈಹಿಡಿದುಕೊಂಡು ಕರೆದುಕೊಂಡು ಹೋಗಿದ್ದಳು.

ಕೊನೆಗೆ ರೈಲು ರೋಮ್ ತಲುಪಿದಾಗ, "ನೀವು ಯಾವ ಚಿಂತೇನೂ ಮಾಡಬೇಡಿ. ನಾನು ಎಲ್ಲ ವ್ಯವಸ್ಥೆನೂ ಮಾಡುತ್ತೀನಿ" ಎಂದು ಗಂಡನಿಗೆ ಹೇಳಿದಳು. ಅವರ ಸಾಮಾನುಗಳನ್ನೆಲ್ಲ ಒಂದು ಕಡೆ ಗುಡ್ಡೆ ಹಾಕುತ್ತಿದ್ದ ಕೂಲಿಗೆ ಹೋಟೆಲ್ ವಿಕ್ಟೋರಿಯಾಕ್ಕೆ ಕರೆದುಕೊಂಡು ಹೋಗಲು ಹೇಳಿದಳು.

ಸ್ಟೇಷನ್ ಹೊರಗಡೇನೆ ಹೋಟೆಲ್ ವಿಕ್ಟೋರಿಯಾದ ಬಸ್ಸು ಇವರಿಗಾಗಿ ಕಾದಿತ್ತು. ಡ್ರೈವರ್‌ನನ್ನು ಗುರುತಿಸಿ ಅವನ ಕಡೆ ನೋಡಿ ಲೀನಾ ಸ್ವಲ್ಪ ತಲೆ ಅಲ್ಲಾಡಿಸಿದಳು.

"–ಅದು ತುಂಬಾ ಸುಂದರವಾದ ಹೋಟೆಲ್. ನೋಡಿ, ಅದು ಒಂದು ಚಿಕ್ಕ, ತುಂಬ ಚೊಕ್ಕಟವಾದ, ಕಾರ್ಯತತ್ಪರರಾದ ಕೆಲಸಗಾರರಿಂದ ಕೂಡಿದ ಹೋಟೆಲ್. ಅದು ಇರೋದು ನಗರದ ಮಧ್ಯಭಾಗದಲ್ಲಿ. ಖರ್ಚು ಕೂಡ ಅಷ್ಟೇನೂ ಹೆಚ್ಚಾಗಲ್ಲ.

ಆರು ವರ್ಷದ ಹಿಂದೆ ಮೊದಲ ಹನಿಮೂನ್‌ಗೆ ಅವರ ಜೊತೆ ಬಂದು ನಾನು ಇದೇ ಹೋಟೆಲ್ ನಲ್ಲಿ ತಂಗಿದ್ದೆ......ನೋಡ್ತಾ ಇರಿ, ನಿಮಗೂ ಇದುತುಂಬಾ ಹಿಡಿಸುತ್ತೆ."

ಆ ಹೋಟೆಲ್ ಲೀನಾಳಿಗೆ ಥೇಟ್ ಮನೆ ತರಹಾನೇ ಅನ್ನಿಸಿತು. ಯಾರೋ ತನ್ನನ್ನು ಗುರುತುಹಿಡಿದಿದ್ದಾರೆ ಎಂದು ಅನ್ನಿಸಲೇ ಇಲ್ಲ. ಆದರೆ ಅವಳಿಗೆ ಮಾತ್ರ ಎಲ್ಲರನ್ನೂ ಗುರುತಿಸಲು ಸಾಧ್ಯವಾಯಿತು. ಆ ಮುದುಕ, ಅದೇ ಪಿಪ್ಪೋ. ಆರು ವರ್ಷದ ಹಿಂದೆ ಇದೇ ಮನುಷ್ಯನೇ ಅವರ ಕೆಲಸ-ಬೊಗಸೆ ಎಲ್ಲ ನೋಡಿಕೊಂಡಿದ್ದ. ಅವನು ಅವರನ್ನು ಎರಡನೇ ಮಹಡಿಯ ಎನ್ 12ನೇ ನಂಬರಿನ ಕೊಠಡಿಗೆ ಕರೆದುಕೊಂಡು ಹೋದ. ಕೊಠಡಿಯೇನೋ ಸಾಕಷ್ಟು ದೊಡ್ಡದಾಗಿತ್ತು. ಚೆನ್ನಾಗಿ ಸಜ್ಜುಗೊಳಿಸಲಾಗಿತ್ತು. ಆದರೆ ಲೀನಾಳಿಗೆ ಆ ಕೊಠಡಿ ಇಷ್ಟವಾಗಲಿಲ್ಲ. "-ಪಿಪ್ಪೋ ಹತ್ತೊಂಬತ್ತನೇ ನಂಬರಿನ ಕೊಠಡಿ ಖಾಲಿ ಇದೆಯೇನು?" ಪಿಪ್ಪೊ, ಖಾಲಿ ಇದೆಯೇನೋ ಎನ್ನುವುದನ್ನು ಪತ್ತೆಮಾಡಿಕೊಂಡು ಬರಲು ಹೋದ. ಆಗ ಲೀನಾಳಿಗೆ ಆರು ವರ್ಷದ ಹಿಂದೆ 'ಅವರಿಬ್ಬರಿಗೂ' ಹೀಗೇ ಆಗಿತ್ತು. ಎನ್ನವುದು ನೆನಪಾಯಿತು. 'ಅವರಿಬ್ಬರಿಗೂ' ಎರಡನೇ ಮಹಡಿಯಲ್ಲಿ ಇವರುಗಳು ಒಂದು ಕೊಠಡಿ ರೆಡಿಮಾಡಿ ಇಟ್ಟಿದ್ದರು. ಆದರೆ 'ಅವರು' ಮೂರನೇ ಮಹಡಿಯ ಎನ್. 19 ನಂಬರಿನ ಕೊಠಡಿಯನ್ನು ಕೊಡಬೇಕೆಂದು ಕೇಳಿದ್ದರು.

"ಏನೂ ಅಂದರೆ, ನಾವು ಅಲ್ಲೇ ಇರೋಣ. ಗೌಜು-ಗದ್ದಲ ಬಹಳ ಕಡಿಮೆ. ಗಾಳೀನೂ ಚೆನ್ನಾಗಿ ಬೀಸುತ್ತೆ. ಅದೇ ಆ ಒಂದು ಕೊಠಡಿ".

ಪಿಪ್ಪೋ ಹಿಂತಿರುಗಿ ಬಂದು ಎನ್ 19ನೇ ನಂಬರಿನ ಕೊಠಡಿ ಖಾಲಿ ಇದೆ ಎಂದು ಹೇಳಿದಾಗ ಲೀನಾ ಮಕ್ಕಳ ಥರಾ ಚಪ್ಪಾಳೆ ತಟ್ಟುತ್ತ ನಗತೊಡಗಿದಳು. ಅದೇ ಕೊಠಡಿಯಲ್ಲೇ ಅವಳು ಈಗ ಮತ್ತೆ ಇರುತ್ತಾಳೆ. ಅದೇ ವಸ್ತುಗಳು, ಅದೇ ಥರ ಸಜ್ಜುಗೊಳಿಸಿರುವ, ಕಾಡಿನ ಹತ್ತಿರ ಇರುವ ಅದೇ ಸುಂದರ ಚಿಕ್ಕ ಗೂಡು. ಅದೆಷ್ಟೊಂದು ಮಜಾ ಅನ್ನಿಸುತ್ತೆ !

ಬರ್ತೊಲಿನೋಗೆ..... ಲಿನಾಳ ಸಂತೋಷದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ ಎಂದು ಹೇಳಬೇಕಾಗಿಯೇ ಇಲ್ಲ.

"-ಏನು ಈ ಕೊಠಡಿ ನಿಮಗೆ ಹಿಡಿಸಲಿಲ್ಲವೇನು"-ಎಂದು ಲೀನಾ ಕೇಳಿದಳು.

"ಅದರಲ್ಲಿ ತಪ್ಪೇನಿದೆ. ನಿನಗೆ ಹಿಡಿಸಿದೆ ಅಂದರೆ ಆಯಿತು."- ಎಂದು ಬರ್ತಲಿನೊ ವಿಷಾದ ಭಾವದಿಂದ ನುಡಿದನು. ಅನಂತರ ಲೀನಾ ಬಟ್ಟೆ ಬದಲಿಸಲು ಕರ್ಟನ್

ಹಿಂದೆ ಹೋದಳು. ಅಲ್ಲೇ ಇದ್ದ ಮಂಚದ ಕಡೆ ನೋಡುತ್ತ ಬರ್ತೊಲಿನೊ –ಇಲ್ಲೇ ಇದೇ ಹಾಸಿಗೆಯ ಮೇಲೆ ತನ್ನ ಪತ್ನಿ ಲೀನಾ ಅವಳ ಮೊದಲ ಪತಿಯೊಂದಿಗೆ ತನ್ನ ವಿವಾಹದ ಮೊದಲ ರಾತ್ರಿಯನ್ನು ಕಳೆದಿದ್ದಳಲ್ಲವೆ– ಎಂದು ಯೋಚಿಸತೊಡಗಿದ......ಬಹು ದೂರದಲ್ಲಿದ್ದ ತನ್ನ ಹೆಂಡತಿಯ ಮನೆಯ ಗೋಡೆಯಮೇಲೆ ತೂಗುಹಾಕಿದ್ದ ಫೋಟೋದೊಳಗಿಂದ ಸಿನೋರ್ ತಾದ್ದೇಯಿಯ ಚಿತ್ರ ಅವನ ಕಣ್ಣೆದುರು ತೇಲಿಬಂತು– ಹಾಸ್ಯಭರಿತ ಮುಗುಳ್ನಗೆಯೊಂದಿಗೆ ತಾದ್ದೇಯಿ ಅವನ ಕಡೆ ನೋಡುತ್ತ ತಲೆಯ ಮೇಲಿನ ಹ್ಯಾಟ್ ತೆಗೆಯುತ್ತಿದ್ದಾರೆ.

ಹನಿಮೂನ್ ಸಮಯದಲ್ಲಿ ಅವರಿಬ್ಬರೂ– ಆರು ವರ್ಷಗಳ ಹಿಂದೆ ಲೀನಾ ತನ್ನ 'ಅವರೊಂದಿಗೆ' ಹೋಗಿದ್ದಾಗಿನ ಕಾಲದ ಅದೇ ಹಾಸಿಗೆಯ ಮೇಲೆ ನಿದ್ರಿಸಿದರು. ಅದೇ ರೆಸ್ಟೊರೆಂಟಿನಲ್ಲಿ ಊಟ ಮಾಡಿದರು. ಅದೇ ಮಾಯಾ–ಮಂತ್ರ, ಕಲಾಭವನಗಳು, ಅದೇ ಚರ್ಚುಗಳು, ಅವೇ ಎಲ್ಲ ಉದ್ಯಾನವನಗಳಲ್ಲಿ ಸಂಚರಿಸಿದರು.

ಬರ್ತೊಲಿನೊ ತುಂಬ ನಾಚಿಕೆಯ ಸ್ವಭಾವದ ಮನುಷ್ಯ. ಲೀನಾಳು ಹೆಜ್ಜೆ ಹೆಜ್ಜೆಗು ತನ್ನ ಮೊದಲ ಗಂಡನ ಅನುಭವ, ಅಭಿರುಚಿ, ಇಷ್ಟಾನಿಷ್ಟಗಳು ಇವನ್ನೆಲ್ಲ ಅನುಸರಿಸುತ್ತ ತಿರುಗಾಡುವುದು ತನಗೆ ಎಷ್ಟೊಂದು ಕೆಟ್ಟನಿಸುತ್ತಿದೆ ಎಂದು ಯಾವ ರೀತಿಯಲ್ಲೂ ಬಾಯಿಬಿಟ್ಟು ಹೇಳಿಕೊಳ್ಳಲು ಅವನಿಗೆ ಆಗಲೇ ಇಲ್ಲ. ತನ್ನ ಈ ವರ್ತನೆಯಿಂದ ತನ್ನ ತರುಣ ಪತಿ ಒಳಗಿಂದೊಳಗೇ ಅದೆಷ್ಟು ಮರ್ಮಾಘಾತಕ್ಕೆ ಒಳಗಾಗಿದ್ದಾನೆಯೋ ಎಂಬುದರ ಕಡೆಗೆ ಲೀನಾ ಕೂಡ ಲಕ್ಷ್ಯ ಕೊಡಲೇ ಇಲ್ಲ. ಅವಳು ಹದಿನೆಂಟು ವರ್ಷದವಳಿದ್ದಾಗ ಅವಳ ಮದುವೆ ನಡೆದಿತ್ತು. ಆಗ ಅವಳು ಹೆಚ್ಚು–ಕಡಿಮೆ ಇನ್ನೂ ಚಿಕ್ಕಹುಡುಗಿ ಥರಾ. ಏನಂದರೆ ಏನೂ ಗೊತ್ತಾಗುತ್ತಿರಲಿಲ್ಲ. ಅರ್ಥವೂ ಆಗುತ್ತಿರಲಿಲ್ಲ. ಅದೇ ಒಳ್ಳೇ ಮನುಷ್ಯ ತಾದ್ದೇಯಿನೇ ಅವಳಿಗೆ ವಿದ್ಯಾ ಬುದ್ಧಿ ಕಲಿಸಿ ದೊಡ್ಡವಳನ್ನಾಗಿ ಮಾಡಿದ್ದ. ಲೀನಾಳಂತೂ ಅವಳ ಮೊದಲ ಗಂಡನ ಸೃಷ್ಟಿಯೇ ಆಗಿದ್ದಳು. ಅವಳ ಬಳಿ ಏನೆಲ್ಲ ಇದೆ, ಅದೆಲ್ಲವನ್ನೂ ಅವಳು 'ಅವರಿಂದ' ತಾನೆ ಪಡೆದಿರೋದು? ಎಷ್ಟರ ಮಟ್ಟಿಗೆ ಅಂದರೆ, 'ಅವರಿಂದ' ವಿಭಿನ್ನವಾಗಿ ಯೋಚನೆಮಾಡುವ ಇಲ್ಲವೆ ಅನುಭವಕ್ಕೆ ತಂದುಕೊಳ್ಳುವ ಸಾಮರ್ಥ್ಯವನ್ನೇ ಅವಳು ಕಳೆದುಕೊಂಡುಬಿಟ್ಟಿದ್ದಳು.

ಅವಳು ಈಗ ಮಾಡಿಕೊಂಡಿರುವ "ಮರುಮದುವೆ" ಕೂಡ ಸಿನೋರ್ ತಾದ್ದೇಯಿಯ ಸೂಚನೆಯ ಮೇರೆಗೇ. ಬರಿಯ ಕಣ್ಣೀರಿನಿಂದಲೇ ಬದುಕಿನ ಉಪಚಾರ ನಡೆಯುವುದಿಲ್ಲ; ಜೀವಂತ ವ್ಯಕ್ತಿಗೆ ಜೀವನದ ಮತ್ತು ಮೃತ ವ್ಯಕ್ತಿಗೆ ಮೃತ್ಯುವಿನ ಅಗತ್ಯವಿದೆ ಎಂದು

'ಅವರೇ' ಅವಳಿಗೆ ಕಲಿಸಿಕೊಟ್ಟಿದ್ದರು. ಬರ್ತೊಲಿನೋನನ್ನು ಅವಳು ಪತಿಯಾಗಿ ವರಿಸಿದ್ದು ಕೂಡ ಅವರ ಈ ಮಾತನ್ನು ನೆನಪಿಟ್ಟುಕೊಂಡದ್ದರಿಂದಲೇ ಹೊರತು ಬೇರಿನ್ನಾವ ಕಾರಣದಿಂದಲೂ ಅಲ್ಲ. ಬರ್ತೊಲಿನೋ ತನ್ನನ್ನು ಪ್ರೀತಿಸುತ್ತಾನೆ ಎಂದಾದರೆ ಖಂಡಿತವಾಗಿಯೂ ತನ್ನ ಇಷ್ಟಕ್ಕನುಸಾರವಾಗಿಯೇ ನಡೆದುಕೊಳ್ಳುತ್ತಾನೆ. ಅಂದರೆ ಇದರ ಅರ್ಥ, ತಾದ್ದೇಯಿಯ ಇಷ್ಟಾನಿಷ್ಟಗಳನ್ನು ಅನುಸರಿಸುವುದು. ಯಜಮಾನರು 'ಅವರೇ', ಜೀವನ ರಥದ ಸಾರಥಿ. ಆದರೆ ಯೌವನದ ಕುರುಡಿನ ಅಜ್ಞಾನವಶನಾಗಿ ಬರ್ತೊಲಿನೋ– 'ತೀರಾ ಸಾಮಾನ್ಯವಾದಂಥದ್ದನ್ನೂ ಲೀನಾ ತನಗೆ ಕೊಡಲಾರಳೆ?' ಅವಳ ಮೊದಲ ಗಂಡ ಕಲಿಸಿಕೊಟ್ಟಿರುವುದಕ್ಕಿಂತ ಭಿನ್ನವಾದ. ಒಂದು ಚುಂಬನ, ಕಿಂಚಿತ್ ಪ್ರೀತಿ, ಆ ಗತವ್ಯಕ್ತಿಯ ಒಡೆತನದಿಂದ ಸ್ವಲ್ಪ ಹೊತ್ತಿನ ಮಟ್ಟಿಗಾದರೂ ಅವಳಿಗೆ ಬಿಡುಗಡೆ ಕೊಡಿಸುವಂಥದ್ದೇನನ್ನಾದರೂ ಅವಳು ತನಗೆ ನೀಡಲಾರಳೆ? ಎಂದು ಯೋಚಿಸುವನು. ಆದರೆ ಈ ಮಾತನ್ನು ಹೇಳಲೂ ಅವನಿಗೆ ನಾಚಿಕೆ ಎನಿಸುತ್ತಿತ್ತು. ಇನ್ನು ಬಂಡಾಯದ ಮಾತಂತೂ ದೂರವೇ ಉಳಿಯಿತು. ಅದನ್ನು ಅವನು ಯೋಚಿಸಲೂ ಆರ.

ಹನಿಮೂನ್ ಮುಗಿಸಿಕೊಂಡು ಬಂದಮೇಲೆ ಒಂದು ಅನಿರೀಕ್ಷಿತವಾದ ಕೆಟ್ಟ ಸುದ್ದಿಯನ್ನು ಅವರು ಕೇಳಬೇಕಾಗಿ ಬಂತು. ಅದೇಂದರೆ ಅವರಿಬ್ಬರ ಮದುವೆಯ ಪ್ರಸ್ತಾಪ ಮಾಡಿದ್ದ ಸಿನೋರ್ ಮೋತ್ತಾ ಆಕಸ್ಮಿಕವಾಗಿ ತೀರಿಕೊಂಡಿದ್ದರು.

ಗಂಡನನ್ನು ಕಳೆದುಕೊಂಡು ತಾನು ವಿಧವೆಯಾದ ಸಂದರ್ಭದಲ್ಲಿ ಇದೇ ಮೋತ್ತಾರ ಹೆಂಡತಿ ಅರ್ತೆನ್ಸಿಯಾ ಅವಳಿಗೆ ಎಷ್ಟೊಂದೆಲ್ಲಾ ಮಾಡಿದ್ದರು ಎಂಬುದನ್ನು ಲೀನಾ ಎಂದಾದರೂ ಮರೆಯಲು ಸಾಧ್ಯವಿತ್ತೆ? ತನ್ನ ಗೆಳತಿಗೆ ನೆರವು ನೀಡಲು, ಸಾಂತ್ವನ ಹೇಳಲು ಅವಳೂ ಧಾವಿಸಿದಳು.ಆದರೆ ಗಂಡ ತೀರಿಕೊಂಡ ಹತ್ತುದಿನಗಳ ನಂತರವೂ ಅರ್ತೆನ್ಸಿಯಾ ಇಷ್ಟೊದು ದುಃಖಭರಿತಳಾಗಿರುವುದೇಕೆಂದು ಅವಳಿಗೆ ಅರ್ಥವಾಗಲಿಲ್ಲ.

"–ಅವಳಿಗೇನಾಗಿದೆ ಹೇಳಿ" ಎಂದು ಮನೆಗೆ ಬಂದು ಗಂಡನನ್ನು ಕೇಳಿದಳು. ಹೆಂಡತಿಯ ಅಜ್ಞಾನವನ್ನು ಕಂಡು ಬರ್ತೊಲಿನೊ ನಾಚಿ ಕೆಂಪಾದ.

"–ಇದಕ್ಕೆ ನೀನು ಏನು ಬೇಕಾದರೂ ಅರ್ಥ ಹಚ್ಚು. ಅವಳ ಗಂಡನ ಸಾವಾಗಿದೆ.

"ಅವಳ ಗಂಡನೆ? ಅವರು ಸತ್ತುಹೋಗಿದ್ದರೆ ಏನಂತೆ?ಅವಳಿಗೆ ಅವರು ತಂದೆಯ ವಯಸ್ಸಿನ ಪತಿ.

"ಆದರೇನಂತೆ? ಅವಳಿಗೆ ದುಃಖವಾಗಬಾರದೇನು?"

ಲೀನಾ ತಕ್ಷಣ ಹೇಳಿದಳು. "ತಂದೆಯ ವಯಸ್ಸಿನವರು. ಆದರೆ ತಂದೆಯಂತೂ ಅಲ್ಲವಲ್ಲ?"

ಲೀನಾ ಹೇಳಿದ್ದೇ ಸರಿ. ಲೀನಾಳ ಬಾಯಿಂದ ಅವಳ ಗತಿಸಿದ ಪತಿಯ ಬಗ್ಗೆ ಕೇಳುತ್ತ ಕೇಳುತ್ತ ಬರ್ತೊಲಿನೋನ ಮನಸ್ಸಿನಲ್ಲಿ ತಿರಸ್ಕಾರ ತುಂಬಿಬಿಟ್ಟಿತ್ತು ಎನ್ನುವುದನ್ನು ಅರ್ತೆನ್ಸಿಯಾ ಗಮನಿಸಿದ್ದಳು. ಅದೇ ಕಾರಣದಿಂದಲೇ ಅರ್ತೆನ್ಸಿಯ ಗಾಢವಾದ ದುಃಖ ಮನಸ್ಸಿನಲ್ಲಿ ತುಂಬಿದ್ದರೂ ತನ್ನ ಮನಸ್ಸನ್ನು ಮರೆಸಲೆತ್ನಿಸಿದಳು. ಅವಳ ದುಃಖವು ಬರ್ತೊಲಿನೋನನ್ನು ಅದೆಷ್ಟು ಗಂಭೀರರೂಪದಲ್ಲಿ ವಿಚಲಿತನನ್ನಾಗಿಸಿತೆಂದರೆ ತನ್ನ ಹೆಂಡತಿಯ ವಿಷಯಕ್ಕೆ ಅವನು ಮೊದಲ ಬಾರಿಗೆ ಬಂಡಾಯವೆದ್ದನು.

"ನೀನು.... ನೀನು ಕೂಡ ಅತ್ತಿರಲಿಲ್ಲವೇನು?"

ಅವನು ಬಹುಶಃ ಇನ್ನೂ ಏನೋ ಹೇಳುತ್ತಾ ಇದ್ದನೇನೋ. ಆದರೆ ಲೀನಾ ಅವನ ಮಾತನ್ನು ಅಲ್ಲಿಗೇ ತಡೆದು ಹೇಳಿದಳು: "ಅವಳ ಜೊತೆ ನನ್ನನ್ನು ಹೋಲಿಸೋದಾ?. ಮೊದಲೇ ಹೇಳಬೇಕಾದ ಮಾತು ಅಂದರೆ 'ಅವರು' ಅವರಾಗಿದ್ದರು.

ಹೆಂಡತಿಯ ಬಾಯಿಂದ ಬರುತ್ತಿದ್ದ ಮಾತನ್ನು ಮಧ್ಯದಲ್ಲೇ ತುಂಡರಿಸುತ್ತ ಬರ್ತೊಲಿನೊ– "ಅವರು ಆಗ ಮುದುಕರಾಗಿರಲಿಲ್ಲ, ಇದನ್ನೇ ತಾನೆ ನೀನು ಹೇಳಬೇಕು ಅಂತ ಇದ್ದದ್ದು?" ಎಂದನು.

"ಅದಷ್ಟೇ ಅಲ್ಲ..... ನಾನೂ ಅತ್ತಿರಲಿಲ್ಲವೇನು? ಹೌದು, ಅತ್ತಿದ್ದೆ. ಎಷ್ಟು ಅತ್ತಿದ್ದೆ.....ಆದರೆ ಕೊನೆಯವರೆಗೂ ನನ್ನನ್ನು ನಾನು ಸಂಭಾಳಿಸಿಕೊಂಡಿದ್ದೆ. ಆದರೆ ಅರ್ತೆನ್ಸಿಯಾ ಮಾಡುತ್ತಾ ಇರೋದು ಏನು? ಬರೀ ಅಳುತ್ತಾ ಇದ್ದಾಳೆ ಮತ್ತು ಇಡೀ ಜೀವಮಾನ ಪರ್ಯಂತ ಅಳುತ್ತಲೇ ಇರುತ್ತಾಳೇನೋ ಎನ್ನುವ ಹಾಗೆ ಅಳುತ್ತಾ ಇದ್ದಾಳೆ. ನನಗೆಲ್ಲ ಗೊತ್ತಿದೆ. ಇದೆಲ್ಲ ಬರೀ ತೋರಿಕೆಯ ಅಳು ಎನ್ನುವುದು ನನಗೆಲ್ಲ ಗೊತ್ತು."

–ತೋರಿಕೆ! ಸಾಧ್ಯವೇ ಇಲ್ಲ !ಲೀನಾಳ ಮಾತು ಕೇಳುತ್ತಿದ್ದಂತೆಯೇ ಬರ್ತೊಲಿನೋ ಸಿಟ್ಟು ನೆತ್ತಿಗೇರಿತು. ಅವನಿಗೆ ತನ್ನ ಹೆಂಡತಿಯಮೇಲೆ ಎಷ್ಟು ಕೋಪ ಬಂದಿತೋ ಅದಕ್ಕಿಂತಲೂ ಹೆಚ್ಚು ಕೋಪ ಅವಳ ಗತಿಸಿದ ಗಂಡ ಆ ಸಿನೋರ್ ತಾದ್ದೇಯಿ ಮೇಲೆ ಬಂತು. ಆ ಮನುಷ್ಯ ಇಲ್ಲಿಯವರೆಗೂ ಅವನ ಕಡೆ ನೋಡುತ್ತ –ಮುಗುಳ್ನಗುತ್ತ ಹ್ಯಾಟ್ ಅನ್ನು ಮೇಲೆತ್ತಿ ಹಿಡಿದಿದ್ದಾನೋ ಎನ್ನುವಂತೆ. ಈ ಹೊತ್ತಿನ ತನಕವೂ ಆ ಮನುಷ್ಯ ತನ್ನ ಹೆಂಡತಿಯನ್ನು ಅವನ ಇಚ್ಛೆ ಮತ್ತು ಮರ್ಜಿಯ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ.

ಅದೇ ಚಿತ್ರ! ಅದೇ ಶಾಶ್ವತ ನಗೆ! ಇನ್ನು ಸಹಿಸಲು ಸಾಧ್ಯವಿಲ್ಲ. ತಾನು ಎಲ್ಲಿಗೆ ಹೋದರೆ ಅಲ್ಲಿಗೆ ತನ್ನ ಹಿಂದೆ ಭೂತದ ಹಾಗೆ ಬೆನ್ನುಹತ್ತಿರುತ್ತೆ ಇದು. ಅದು ಅವನ ಕಣ್ಣೆದುರು ನಗುನಗುತ್ತ ಟೋಪಿಯನ್ನು ತಲೆ ಮೇಲಿಂದ ಎತ್ತಿಹಿಡಿದು "ಈಗ ನಿನ್ನ ಸರದಿ. ಕೈ ಕಾಲು ಉದ್ದಕ್ಕೆ ಚಾಚಿಕೊಂಡು ಆರಾಮವಾಗಿರು. ಈ ಕೊಠಡಿ ಒಂದು ಕಾಲದಲ್ಲಿ ನನ್ನ ಆಫೀಸ್ ರೂಂ ಆಗಿತ್ತು. ಈಗ ನಿನ್ನ ಕೆಮಿಸ್ಟ್ರಿ ಲ್ಯಾಬ್ ಆಗಿದೆ. ಬದುಕಿರುವ ವ್ಯಕ್ತಿಗೆ ಬದುಕು., ಸತ್ತವನಿಗೆ ಸಾವು! ಸುಖವಾಗಿರು. ನೆಮ್ಮದಿಯಿಂದ ಕೆಲಸ ಮಾಡು."

ಬಹುಶಃ ಅವನು ಬೆಡ್ ರೂಮ್‌ಗೆ ಬಂದಿದ್ದಾನೆ. ಅಲ್ಲೂ ಸಹ ಸಿನೋರ್ ತಾದ್ದೇಯಿಯ ಮೂರ್ತಿ, ಮುಖದ ಮೇಲೆ ಕ್ರೂರ ನಗೆ ತಂದುಕೊಂಡು "ಬಾ, ಬಾ. ಹೇಗಿದ್ದೀ, ಚೆನ್ನಾಗಿದ್ದೀ ತಾನೆ? ನನ್ನ ಹೆಂಡತಿ ಹ್ಯಾಗೆ ಅನ್ನಿಸುತ್ತಾಳೆ ನಿನಗೆ? ನಾನು ಅವಳಿಗೆ ಒಳ್ಳೆಯ ಶಿಕ್ಷಣ ಕೊಟ್ಟಿದ್ದೀನೋ ಇಲ್ಲವೋ ಹೇಳು? ಬದುಕಿರುವವನಿಗೆ ಬದುಕು, ಸತ್ತಿರುವವನಿಗೆ ಸಾವು" ಎಂದು ಹೇಳುತ್ತ ಪ್ರತ್ಯಕ್ಷವಾಗುತ್ತದೆ.

"ಇಲ್ಲ, ಇಲ್ಲ, ಇನ್ನು ಸಹಿಸೋಕೆ ಸಾಧ್ಯವಿಲ್ಲ. ಮನೆಯ ಕೊಠಡಿಯಲ್ಲಿ ಆ ಮನುಷ್ಯ ವಿರಾಜಮಾನನಾಗಿದ್ದಾನೆ." ಬರ್ತೋಲಿನೊನಂಥ ಮುಗ್ಧ ಮನುಷ್ಯ ಅಸ್ಥಿರನಾದ. ಚಡಪಡಿಸತೊಡಗಿದ. ಹೆಂಡತಿಯ ಹತ್ತಿರ ತನ್ನ ಮಾನಸಿಕ ಸ್ಥಿತಿಯನ್ನು ಮುಚ್ಚಿಡುವ ಪ್ರಯತ್ನದಲ್ಲಿ ಅವನು ಯಶಸ್ವಿಯಾಗಲಿಲ್ಲ. ಕೊನೆಗೆ ತನ್ನ ಮನಸ್ಸಿನ ಭಾವನೆಯನ್ನು ಮುಚ್ಚಿಡುವ ಪ್ರಯತ್ನಮಾಡುವುದನ್ನೇ ಬಿಟ್ಟುಬಿಟ್ಟನು. ಹೆಂಡತಿಯ ಹಿಂದಿನ ನಡವಳಿಕೆಯಲ್ಲಿ ಗಲಿಬಿಲಿ ಉಂಟುಮಾಡುವ ಸಲುವಾಗಿ ವಿಕ್ಷಿಪ್ತನಾಗಲು ವಿಲಕ್ಷಣನೆನಿಸಲು ಯತ್ನಿಸಿದ. ಆದರೆ ಅದರಲ್ಲೂ ಯಶಸ್ವಿಯಾಗಲಿಲ್ಲ.

"ನಿಮ್ಮ ನಡವಳಿಕೆ ಥೇಟ್ 'ಇವರ' ಥರಾನೆ ಆಗ್ತಾ ಇದೆ"–ಸ್ವಲ್ಪ ಆಜ್ಞಾಪಿಸುವ ಧಾಟಿಯಲ್ಲಿ ಲೀನಾ ಹೇಳತೊಡಗಿದಳು. ಮುಂದುವರಿದು "ಅವರು ಕೂಡ ಕಿಂಚಿತ್ತೂ ಲೆಕ್ಕಾಚಾರದ ವ್ಯಕ್ತಿ ಅಗಿರಲಿಲ್ಲ; ಬಡಪಾಯಿ ತುಂಬಾ ಸಜ್ಜನರು!"ಎಂದಳು.

ತನ್ನ ಈ ಅವ್ಯವಸ್ಥಿತ ನಡೆವಳಿಯನ್ನು ಲೀನಾ ಒಳಗೊಳಗೇ ತುಂಬಾ ಪ್ರಶಂಸಿಸುತ್ತಾ ಇದ್ದಾಳೆ ಎಂದು ಬರ್ತೋಲಿನೋಗೆ ಬಹಳ ಬೇಗ ಗೊತ್ತಾಯಿತು. ತನ್ನ ಈ ಎಲ್ಲ ಕೃತ್ಯ, ಯಾರನ್ನು ತನ್ನ ಹೆಂಡತಿ ಲೀನಾಳ ಮನಸ್ಸಿನಿಂದಲೇ ತೊಲಗಿಸಿಬಿಡಲು ತಾನು ಬಯಸುತ್ತಿದ್ದಾನೋ ಅದೇ ವ್ಯಕ್ತಿಯ ನೆನಪನ್ನು ಅವಳಿಗೆ ತಂದುಕೊಡುತ್ತಿದೆ ಎಂದು ಅವನಿಗೆ ಅರ್ಥವಾಯಿತು.

ಅಂತಿಮವಾಗಿ ಒಂದು ಅತಿಕೆಟ್ಟ ಹಂಚಿಕೆ ಅವನ ಮನಸ್ಸಿನಲ್ಲಿ ಮೂಡಿತು.

ನಿಜ ಹೇಳಬೇಕೆಂದರೆ ಸೇಡು ತೀರಿಸಿಕೊಳ್ಳಬೇಕೆಂಬ ಉಮೇದು ಇದ್ದಷ್ಟು ಹೆಂಡತಿಗೆ ಮೋಸಮಾಡಬೇಕೆಂಬ ಇಚ್ಛೆ ಅವನಿಗೆ ಇರಲಿಲ್ಲ. ಅವನ ಆಕ್ರೋಶವಿದ್ದುದು ಅವನಿಗಿಂತ ಮೊದಲು ಅವನ ಹೆಂಡತಿಯ ಮೇಲೆ ತನ್ನ ಅಧಿಕಾರ ಸ್ಥಾಪಿಸಿದ್ದು ಸತ್ತ ನಂತರವೂ ಅವಳ ಮೇಲಿನ ತನ್ನ ಅಧಿಕಾರವನ್ನು ಬಿಟ್ಟುಕೊಡದ ಅದೇ ಆ ವ್ಯಕ್ತಿಯ ಮೇಲೆ. ಈ

ದುಷ್ಟ ಹಂಚಿಕೆಯೆಲ್ಲಾ ಅವನದೇ ಸೃಷ್ಟಿ ಎಂಬ ಭಾವ ಬರ್ತೊಲಿನೋನ ಮೂರ್ಖ ಮತ್ತು ಮುಗ್ಧ ಮನಸ್ಸಿಗೆ ಬಂದುಬಿಟ್ಟಿತು.

ಈ ಒಂದು ಕೆಟ್ಟ ಯೋಚನೆಯನ್ನು ಅವನ ಮನಸ್ಸಿನಲ್ಲಿ ಸ್ವಲ್ಪ ಸ್ವಲ್ಪವಾಗಿ ಹರಿಯಬಿಟ್ಟವಳು ಅರ್ತೆನ್ಸಿಯಾಳೇ ಎಂಬುದನ್ನು ಅವನು ಯೋಚಿಸದಾದ. ಅವನಿನ್ನೂ ಅವಿವಾಹಿತನಾಗಿದ್ದಾಗ ಓದಿನಿಂದ ಅವನ ಆಸಕ್ತಿಯನ್ನು ಕದಲಿಸಲು ಅರ್ತೆನ್ಸಿಯಾಳು ಅನೇಕ ಸಲ ಪ್ರಯತ್ನಿಸಿದ್ದಳು. ಆದರೆ ಅದರಲ್ಲಿ ಅವಳಿಗೆ ಯಶಸ್ಸು ಸಿಕ್ಕಿರಲಿಲ್ಲ.

ಕುತಂತ್ರಿ ಅರ್ತೆನ್ಸಿಯಾ ಈಗ ಸಂಚಿನ ಮೇಲೆ ಸಂಚು ಹೂಡುತ್ತಿದ್ದಳು. ಲೀನಾಳಂಥ ಪ್ರೀತಿಯ ಗೆಳತಿಗೆ ಮೋಸಮಾಡುತ್ತಿರುವುದಕ್ಕೆ ಅವಳ ಹೃದಯ ಒಡೆದುಹೋಗುತ್ತಿದೆ; ಆದರೆ ಲೀನಾಳನ್ನು ತಾನಿನ್ನೂ ನೋಡಿಯೇ ಇಲ್ಲದ ಸಮಯದಿಂದಲೇ ಬರ್ತೊಲಿನೋನನ್ನು ಪ್ರೀತಿಸುತ್ತಿರುವುದಾಗಿ ಹಾಗೂ ಹೀಗೂ ಸುತ್ತಿ ಬಳಸಿ ಬರ್ತೊಲಿನೋಗೆ ಮನದಟ್ಟುಮಾಡಿದಳು. ಆ ಪ್ರೀತಿಯೆಂಬುದು ವಿಧಿಯ ಹಾಗೆ ಮೀರಲು ಸಾಧ್ಯವೇ ಇಲ್ಲದ್ದು. ಆದರೆ ಇದರ ನಂತರ ಏನು ನಡೆಯಿತು ಅದರಲ್ಲಿ ವಿಧಿಯ ಕೈವಾಡ ಎಷ್ಟಿತ್ತೆಂಬುದನ್ನು ಬರ್ತೊಲಿನೋಗೆ ಯೋಚಿಸಲೂ ಸಾಧ್ಯವಾಗಲಿಲ್ಲ. ಬಡಪಾಯಿ ಒಳ್ಳೆ ಮನಸ್ಸಿನವನೇ! ಅವಳ ಗಾಢ ಸಂಚು ಇಷ್ಟು ಸುಲಭವಾಗಿ ಯಶಸ್ವಿಯಾದದ್ದರಿಂದ ಅವನು ಹತಾಶನೇ ಆದ. ತನ್ನನ್ನು ಮೋಸಗೊಳಿಸಲಾಗಿದೆ ಎಂದು ಅವನಿಗೆ ಅನ್ನಿಸಿತು. ಒಮ್ಮೆ ತನ್ನ ಹಳೆಯ ಮಿತ್ರ ಮೋತ್ತಾನ ಕೊಠಡಿಗೆ ಒಬ್ಬನೇ ಹೋದಾಗ ಸ್ವಲ್ಪ ಹೊತ್ತಿನಲ್ಲೇ ಅವನ ಮನಸ್ಸು ಪಶ್ಚಾತ್ತಾಪದಿಂದ ತುಂಬಿಹೋಯಿತು. ಒಮ್ಮೆಲೇ ಅವನ ದೃಷ್ಟಿ, ಹಾಸಿಗೆಯ ಅಂಚಿನಲ್ಲಿ ನೆಲದ ಮೇಲೆ ಬಿದ್ದಿದ್ದ ಯಾವುದೋ ಹೊಳೆಯುತ್ತಿದ್ದ ವಸ್ತುವೊಂದರ ಮೇಲೆ ಬಿದ್ದಿತು. ಅದು ಒಂದು ಸಣ್ಣ ಚಿನ್ನದ ಲಾಕೆಟ್. ಖಂಡಿತವಾಗಿಯೂ ಅರ್ತೆನ್ಸಿಯಾಳ ಕೊರಳಿನದೇ ಇರಬೇಕು. ಕೈಯಿಂದ ಎತ್ತಿಕೊಂಡು ಅರ್ತೆನ್ಸಿಯಾಳ ನಿರೀಕ್ಷೆಯಲ್ಲೇ ಇದ್ದ. ಅದನ್ನು ಸುಮ್ಮನೆ ಅತ್ತ ಇತ್ತ ಅಲ್ಲಾಡಿಸುತ್ತಿದ್ದಾಗ ಉತ್ಸುಕತೆಯಿಂದ ಬೆರಳಿಂದ ಅಮುಕಿದ್ದರಿಂದ ಇದ್ದಕ್ಕಿದ್ದಂತೆ ಲಾಕೆಟ್ ತೆರೆದುಕೊಂಡಿತು.

ಅವನಿಗೆ ತನ್ನ ಕಣ್ಣುಗಳನ್ನು ನಂಬಲೇ ಅಗಲಿಲ್ಲ. ಲಾಕೆಟ್‌ನ ಒಳಗಡೆ ಒಂದು ಚಿತ್ರದ ಕೆತ್ತನೆ ಇತ್ತು......ಸಿನೋರ್ ಕೊಸಿಮೋ ತಾದ್ದೇಯಿಯ ಅದೇ ಚಿತ್ರ!....ಅವರು ಮುಗುಳ್ನಗುತ್ತ ಅವನ ಕಡೆ ನೋಡುತ್ತ ತನ್ನ ತಲೆಯಮೇಲಿನ ಹ್ಯಾಟನ್ನು ತೆಗೆಯುತ್ತಿದ್ದಾರೆ.

❖

ಕ್ರಿಸ್ಮಸ್ ಹಬ್ಬ

ಫ್ರೆಂಚ್: ಗೈದೆ ಮೊಪಾಸ

"ಕ್ರಿಸ್ಮಸ್ ಹಬ್ಬದ ದಿನ ಹೊರಗಡೆ ಊಟ ಮಾಡೋದೆ? ಎಂದಿಗೂ ಸಾಧ್ಯವಿಲ್ಲ. ಆ ದಿನ ನಾನು ಯಾವ ಕಾರಣಕ್ಕೂ ಹೊರಗಡೆ ಊಟ ಮಾಡಕ್ಕೆ ಹೋಗಲ್ಲ." ಯಾವುದೋ ಒಂದು ಭಾರೀ ಅಪರಾಧ ಮಾಡೋದಕ್ಕೆ ಅವನಿಗೆ ಯಾರಾದರೂ ಹೇಳಿಬಿಟ್ಟಿದ್ದಾರೇನೋ ಅನ್ನುವ ಹಾಗೆ ಸ್ಥೂಲ ಕಾಯದ ಹೆನ್ರಿ ಟ್ರೆಂಪಾಲಿಯರ್ ಕೋಪದಲ್ಲಿ ಹೀಗೆ ತನಗೆ ತಾನೆ ಬಡಬಡಿಸುತ್ತಾ ಇದ್ದರೆ ಅವನ ಜೊತೆ ಇದ್ದ ಬಾಕಿ ಎಲ್ಲರೂ ಅವನ ಈ ಸಿಟ್ಟು ನೋಡಿ ನಗುತ್ತಾ ಇದ್ದರು. ಅವರಲ್ಲಿ ಒಬ್ಬ – "ಆಯಿತು, ಈ ಮಾತಿಗೆ ನೀನು ಇಷ್ಟೊಂದೆಲ್ಲ ಯಾಕೆ ಮುಖ ಕೆಂಪಗೆ ಮಾಡಿಕೊಳ್ಳುತ್ತಿದ್ದೀ?" ಎಂದು ಕೇಳಿದ.

"ಯಾಕೆ ಅಂದ್ರೆ, ಕ್ರಿಸ್ಮಸ್‌ನ ಒಂದು ಸಂಜೆ ಅತ್ಯಂತ ಕೆಟ್ಟ ಮತ್ತು ಕ್ರೂರ ರೀತಿಯಲ್ಲಿ ನನ್ನನ್ನು ನಗೆಪಾಟಲಿಗೆ ಗುರಿಮಾಡಿದೆ. ಆಗಿನಿಂದ ಸಂತೋಷ ಮತ್ತು ಸಡಗರದ ಈ ಹಬ್ಬದ ಹೆಸರು ಕೇಳಿದರೆ ಸಾಕು ನನಗೆ ಎಲ್ಲಿಲ್ಲದ ಭಯ ಶುರುವಾಗುತ್ತೆ. ನನ್ನ ಆತ್ಮ ಕಂಪಿಸುತ್ತೆ."

"ಹಾಗಾದರೆ ಇದರ ಬಗ್ಗೆ ನಮಗೆ ಸ್ವಲ್ಪ ಹೇಳಲ್ಲ"

ಒಂದು ಸಲ ನನಗೆ ಏನಾಗಿತ್ತು ಅಂತ ನಿಮಗೆಲ್ಲ ತಿಳಿದುಕೊಳ್ಳಬೇಕು ಅಂತ ಆಸೆ ಇದೆಯಾ?"

"ನಿಮಗೆಲ್ಲ ನೆನಪಿರಬಹುದು ಈಗ್ಗೆ ಎರಡು ವರ್ಷದ ಹಿಂದೆ ಕ್ರಿಸ್ ಮಸ್ ಹಬ್ಬದ ದಿನ ಭಯಂಕರ ಥಂಡಿ ಇತ್ತು. ಅದೆಷ್ಟು ಥಂಡಿ ಇತ್ತು ಅಂದರೆ ರಸ್ತೆಯಲ್ಲಿ ಓಡಾಡೋ ಜನ ಅಲ್ಲೇ ಹೆಣ ಆಗಿಬಿಡುತ್ತಾರೇನೋ ಅನ್ನುವಷ್ಟು ಥಂಡಿ ಇತ್ತು. ಸಿಯಾನೆ ನದಿ ಮೇಲೆ ಪೂರಾ ರಾಶಿ ರಾಶಿ ಮಂಜು ಹೆಪ್ಪುಗಟ್ಟಿತ್ತು. ರಸ್ತೆಯಂಚಿನ ಫುಟ್ ಪಾತ್‌ಗಳು ಕೂಡ ಭಯಂಕರ ಥಂಡಿ ಹಿಡಿದುಬಿಟ್ಟಿದ್ದವು. ಪುಟ್ ಪಾತ್ ಮೇಲೆ ಅದೆಷ್ಟು ಹಿಮದ ರಾಶಿ ಬಿದ್ದಿತ್ತು ಅಂದರೆ ಲೆದರ್ ಷೂಸ್‌ಗಳ ಅಟ್ಟೆಯನ್ನೂ ಭೇದಿಸಿಕೊಂಡು ಬಂದು ನೀವು ತಳಮಳಗೊಳ್ಳುವ ಮಟ್ಟಿಗೆ ಶೀತ ಏರತಾ ಇತ್ತು. ಇಡೀ ಜಗತ್ತೇ ಶೀತದಿಂದ ಜಡವಾಗಿಬಿಡುತ್ತೇನೋ ಎನ್ನುವಂಥ ಪರಿಸ್ಥಿತಿ ಇತ್ತು.

ಆ ಹೊತ್ತು ನನಗೆ ಬರೆಯುವ ಒಂದು ಭಾರೀ ಕೆಲಸ ಇತ್ತು. ಹೀಗಾಗಿ ಕ್ರಿಸ್‌ಮಸ್ ರಾತ್ರಿ ಹೊರಗಡೆ ಊಟ ಮಾಡಲು ಬಂದ ಎಲ್ಲ ಆಹ್ವಾನಗಳನ್ನೂ ನಾನು ತಳ್ಳಿಹಾಕಿದೆ. ನನ್ನ ರೈಟಿಂಗ್ ಟೇಬಲ್ ಬಳಿ ಕುಳಿತು ಓದೋದು– ಬರೆಯೋದನ್ನೇ ಬಹಳ ಇಷ್ಟ ಪಟ್ಟಿದ್ದೆ. ಆದರೆ ರಾತ್ರಿ ಸುಮಾರು ಹತ್ತು ಗಂಟೆ ಸುಮಾರಿನಲ್ಲಿ ಪ್ಯಾರಿಸ್‌ನ ಸುತ್ತ-ಮುತ್ತೆಲ್ಲ ಪ್ರತಿಯೊಂದು ಮನೆ, ಪ್ರತಿಯೊಂದು ರಸ್ತೆಗಳಲ್ಲಿ ಉಕ್ಕುತ್ತಿದ್ದ ಹರ್ಷ, ಉತ್ಸಾಹ, ಸಡಗರ, ಸಂಭ್ರಮ ಮತ್ತು ಗಡಿಬಿಡಿಗಳ ಬಗ್ಗೆ ಯೋಚಿಸುತ್ತ ಮನಸ್ಸು ಒಂದು ರೀತಿಯಲ್ಲಿ ಅಶಾಂತಗೊಂಡಿತ್ತು. ನಾನು ಅದೆಷ್ಟು ಪ್ರಯತ್ನ ಪಟ್ಟರೂ ಆ ಉತ್ಸವಕ್ಕೆ ಸಂಬಂಧಿಸಿದ ಹಾಗೆ ರಸ್ತೆಗಳಿಂದ ಕೇಳಿ ಬರುತ್ತಿದ್ದ ಸಡಗರ, ಸಂಭ್ರಮದ ಸದ್ದು-ಗದ್ದಲ ನನ್ನ ಕಿವಿಗೆ ಬಂದು ಬೀಳುತ್ತಲೇ ಇತ್ತು. ನನ್ನ ಪಕ್ಕದ ಮನೆಯಲ್ಲಿ ಆಗುತ್ತಿದ್ದ ಕ್ರಿಸ್‌ಮಸ್‌ನ ರಾತ್ರಿಊಟದ ಭಾರೀ ತಯಾರಿಯ ಸದ್ದು-ಗದ್ದಲ ಗೋಡೆಗಳನ್ನು ದಾಟಿ ನನ್ನವರೆಗೂ ಬರುತ್ತಲೇ ಇತ್ತು. ನಾನು ಏನು ಮಾಡ್ತಾ ಇದ್ದೀನಿ ಅನ್ನೋದೆ ನನಗೆ ಗೊತ್ತಾಗುತ್ತ ಇರಲಿಲ್ಲ. ನಾನು ಬರೀತಾ ಇದ್ದದ್ದು ಬರೀ ವ್ಯರ್ಥವಾದ್ದಾಗಿತ್ತು. ಕೊನೆಗೆ ಆ ಹೊತ್ತು ರಾತ್ರಿ ನಾನು ಯಾವುದೇ ಒಂದು ಒಳ್ಳೆ ಕೃತಿ ರಚನೆ ಮಾಡುವ ಭರವಸೆಯನ್ನೇ ಬಿಟ್ಟುಬಿಡಬೇಕು ಅನ್ನುವ ತೀರ್ಮಾನಕ್ಕೆ ಬಂದುಬಿಟ್ಟೆ.

ಸ್ವಲ್ಪ ಹೊತ್ತು ನಾನು ನನ್ನ ಕೊಠಡಿಯಲ್ಲಿ ಅತ್ತಿಂದಿತ್ತ ಶತಪಥ ಹಾಕುತ್ತಾ ಇದ್ದೆ. ಸ್ವಲ್ಪ ಸಮಯ ನಾನು ಒಂದು ಜಾಗದಲ್ಲಿ ಕುಳಿತೆ. ಆಮೇಲೆ ಸ್ವಲ್ಪ ಹೊತ್ತಿನ ನಂತರ ಮೇಲಕ್ಕೆ ಎದ್ದೆ. ನನ್ನ ಮನೆಯ ಹೊರಗಡೆ ಆಗ್ತಾ ಇರೋ ಸದ್ದು-ಗದ್ದಲ, ಅಮಲು

ಮತ್ತು ಹಬ್ಬದ ಉತ್ಸಾಹದ ಮಾಂತ್ರಿಕ ಪ್ರಭಾವದಿಂದ ಕೆಟ್ಟದಾಗಿ ಪ್ರಭಾವಿತನಾಗಿದ್ದೆ . ಹಾಗಾಗಿ ನಾನೂ ಅದರಲ್ಲಿ ಪಾಲ್ಗೊಳ್ಳಲು ತೀರ್ಮಾನಿಸಿದೆ.

ನಮ್ಮ ಮನೆಯ ಕೆಲಸದವಳನ್ನು ಕರೆಯುವ ಸಲುವಾಗಿ ಕಾಲಿಂಗ್ ಬೆಲ್ ಒತ್ತಿದೆ. ಅವಳಿಗೆ– "ಏಂಜೆಲಾ, ಬೇಗ ಇಬ್ಬರ ಊಟಕ್ಕೆ ಆಹಾರ ಸಿದ್ಧಪಡಿಸು"– ಎಂದು ಹೇಳಿದೆ. "ಕೆಲವು ಆಯಿಸ್ಟರ್‌ಗಳು, ಕೆಲವು ಮೀನು, ಹಂದಿಮಾಂಸ, ಸ್ವಲ್ಪ ಕೇಕ್ ಮತ್ತು ಪೇಸ್ಟ್ರೀ ಇದನ್ನೆಲ್ಲ ರೆಡಿ ಮಾಡು. ಜೊತೆಗೆ ಶಾಂಪೇನಿನ ಎರಡು ಬಾಟಲ್ ಕೂಡ ಇಟ್ಟುಬಿಡು. ಊಟದ ಟೇಬಲ್‌ನ ನೀಟಾಗಿ ರೆಡಿ ಮಾಡು. ಮತ್ತು ಇದೆಲ್ಲ ಮಾಡಿ ನೀನು ಹೋಗಿ ಮಲಗಿಕೋ"– ಎಂದು ತಿಳಿಸಿದೆ.

ಏಂಜೆಲಾ ವಿಸ್ಮಯ ಪಡುತ್ತ ನಾನು ಹೇಳಿದ್ದೆಲ್ಲ ಮಾಡಿದಳು. ಎಲ್ಲ ಸಿದ್ಧವಾದ ಮೇಲೆ ನಾನು ಓವರ್ ಕೋಟ್ ಧರಿಸಿ ಹೊರಗೆ ಹೊರಟೆ. ಊಟಕ್ಕೆ ನನಗೆ ಕಂಪನಿ ಕೊಡುವವರು ಯಾರು?ಎನ್ನುವುದು ಇನ್ನೂ ತೆರೆದ ಪ್ರಶ್ನೆಯಾಗಿಯೇ ಉಳಿದಿತ್ತು. ನನ್ನ ಗೆಳತಿಯರೆಲ್ಲರಿಗೂ ಒಂದಲ್ಲ ಒಂದು ಕಡೆಯಿಂದ ಆಹ್ವಾನ ಬಂದಿತ್ತು. ಅವರಲ್ಲಿ ಯಾರನ್ನಾದರೂ ಕರೆಯುವುದಿದ್ದರೂ ನಾನು ಮುಂಚೆಯೇ ಕರೆಯಬೇಕಾಗಿತ್ತು. ಹಾಗಾಗಿ ಒಂದು ತುಂಬ ಒಳ್ಳೆಯ ಕೆಲಸ ಮಾಡೋಣವೆಂದು ಮನಸ್ಸಿನಲ್ಲಿ ನನಗೆ ನಾನೇ ಹೇಳಿಕೊಂಡೆ.

"ಇಡೀ ಪ್ಯಾರಿಸ್ ಈ ಹೊತ್ತು ರಾತ್ರಿಗೆ ತಿನ್ನಲು ಏನೂ ಇಲ್ಲದ ಬಡ ಮತ್ತು ಗತಿಯಿಲ್ಲದ ಹುಡುಗಿಯರಿಂದ ತುಂಬಿದೆ. ಖಂಡಿತ ಯಾರಾದರೂ ದಿಲ್‌ದಾರ್ ವ್ಯಕ್ತಿಯನ್ನು ಹುಡುಕುತ್ತಾ ಇರೋಂಥೋರು ಇದ್ದೇ ಇರುತ್ತಾರೆ. ಈ ಹೊತ್ತು ರಾತ್ರಿ ಹೊತ್ತಿಗೆ ನಾನು ಯಾರ ಪಾಲಿಗಾದರೂ ಊಟಕೊಡಿಸುವ ಭಾಗ್ಯವಂತನಾಗುತ್ತೀನಿ. ಬೂದಿ ರಾಶಿಯನ್ನೆಲ್ಲ ತಡಕಾಡಿದರೆ ಯಾರಾದರೂ ಸಿಕ್ಕೇ ಸಿಗುತ್ತಾರೆ. ನನ್ನ ಅಂತಸ್ತಿಗೆ ತಕ್ಕನಾದವರು ಯಾರಾದರೂ ಸಿಕ್ಕೋವರೆಗೂ ಹುಡುಕುತ್ತೀನಿ. ಹೀಗೆ ಯೋಚಿಸಿ ಹುಡುಕಲು ಹೊರಟೆ.

ಆ ರಾತ್ರಿ ಯಾವುದಾದರೊಂದು ರೋಮಾನ್ಸ್‌ನ ಹುಡುಕಾಟದಲ್ಲಿದ್ದ ಹಲವು ಹುಡುಗಿಯರನ್ನು ಭೇಟಿಯಾದೆ. ಆದರೆ ಅವರಲ್ಲಿ ಬಹಳಷ್ಟು ಹುಡುಗಿಯರು ವಾಂತಿ ಬರಿಸುವಷ್ಟು ಕುರೂಪಿಗಳಾಗಿದ್ದರು. ಇಲ್ಲವೆ ಅದೆಷ್ಟೊಂದು ತೆಳ್ಳಗೆ ಕೃಶರಾಗಿದ್ದರು ಅಂದರೆ ಅವರೇನಾದರೂ ನಿಂತುಕೊಂಡರೆ ತಮ್ಮಲ್ಲಿ ತಾವೇ ಸೇರಿಕೊಂಡು ಬಿಡುತ್ತಾರೇನೋ ಎನ್ನುವಷ್ಟು. ಅಂದರೆ ದಪ್ಪನೆಯ, ದಷ್ಟ–ಪುಷ್ಟ ಹೆಣ್ಣುಗಳು ನನ್ನ

ದೌರ್ಬಲ್ಯ ಅನ್ನುವುದು ಎಲ್ಲರಿಗೂ ಗೊತ್ತೇ ಇದೆ. ಅವರ ಮೈಮೇಲೆ ಮಾಂಸ ಎಷ್ಟು ಜಾಸ್ತಿ ಇರುತ್ತೋ ಅಷ್ಟೂ ಅಷ್ಟೂ ನನಗೆ ಅವರು ಇಷ್ಟವಾಗುತ್ತಾರೆ. ಎತ್ತರವಾದ ಮತ್ತು ಸ್ಥೂಲ ದೇಹಿ ಮಹಿಳೆಯರೇ ನನಗೆ ಯಾವಾಗಲೂ ಆದರ್ಶ.

ಅಂತೂ ಕೊನೆಗೆ ವೆಕಿರೆಸ್ ಥಿಯೇಟರ್‌ನ ಹೊರಗಡೆ ನಾನು ಇಷ್ಟಪಡುವಂಥ ಒಂದು ಆಕೃತಿ ಕಾಣಿಸಿತು. ಹಿಗ್ಗಿನಿಂದ ನಾನು ಕಂಪಿಸಿದೆ. ನನಗೇ ಅರಿವಿಲ್ಲದಂತೆ-" ಓ ಭಗವಂತ ಏನು ಮಾಲ್ ಅಪ್ಪ ಇದು!" ಎಂಬ ಉದ್ಗಾರ ಹೊರಹೊಮ್ಮಿತು.

ಆ ಹುಡುಗಿಯ ಮುಖಾಕೃತಿ ಮಾತ್ರ ನೋಡುವಂತಿತ್ತು. ಕಾರಣ ಹೆಣ್ಣಿನ ಮುಖವೇ ಮುದ್ದು ಮುದ್ದು. ನಾನು ನನ್ನ ನಡಿಗೆಯ ವೇಗವನ್ನು ಹೆಚ್ಚಿಸಿ ಅವಳ ಮುಂದಿನಿಂದ ಹಾದು ಅವಳಿಗಿಂತ ಮುಂದೆ ಹೋಗಿಬಿಟ್ಟೆ. ಸ್ವಲ್ಪ ದೂರ ಸಾಗಿ ರಸ್ತೆ ಬದಿಯ ದೀಪದ ಕೆಳಗೆ ನಿಂತು ಒಮ್ಮೆಲೇ ಹಿಂದಕ್ಕೆ ತಿರುಗಿದೆ. ಅವಳು ಸಾಕಷ್ಟು ಆಕರ್ಷಕವಾಗಿದ್ದಳು. ಚಿಕ್ಕ ವಯಸ್ಸಿನ, ಸ್ವಲ್ಪ ಮಟ್ಟಿಗೆ ಶ್ಯಾಮಲ ವರ್ಣದ ವಿಶಾಲ ಕಣ್ಣುಗಳ ಹುಡುಗಿಯಾಗಿದ್ದಳು. ನಾನು ಕೂಡಲೆ ಅವಳ ಎದುರುಗಡೆ ಹೋಗಿ ನನ್ನ ಪ್ರಪೋಸಲ್ ಅನ್ನು ಮುಂದಿಟ್ಟೆ. ಅವಳು ಕಿಂಚಿತ್ತೂ ಆಗಲ್ಲ- ಗೀಗಲ್ಲ ಅಂತ ಹೇಳಲೇ ಇಲ್ಲ. ನನ್ನ ಪ್ರಪೋಸಲ್ ಅನ್ನು ತಕ್ಷಣವೇ ಒಪ್ಪಿಕೊಂಡುಬಿಟ್ಟಳು. ಹದಿನೈದು ನಿಮಿಷದ ಒಳಗೆ ನಾವಿಬ್ಬರೂ ನಮ್ಮ ಮನೆಯ ಡೈನಿಂಗ್ ಟೇಬಲ್ ಮೇಲೆ ಊಟ ಮಾಡುತ್ತಾ ಇದ್ದೆವು. ನನ್ನ ಮನೆಗೆ ಬರುತ್ತಿದ್ದ ಹಾಗೆಯೇ ಮನೆಯ ಸುತ್ತ ಒಂದುನೋಟ ಹರಿಸಿ ಕೇಳಿದಳು_ "ಇಲ್ಲಿಗೆ ಬರುವುದು ಅದೆಷ್ಟು ಆರಾಮ್ ಅನ್ನಿಸುತ್ತೆ!". ಈ ಹೊತ್ತು ರಾತ್ರಿಗೆ ಊಟಕ್ಕೆ ಇಷ್ಟು ಒಳ್ಳೆಯ ರುಚಿಕರವಾದ ಊಟ ಸಿಕ್ಕುತ್ತಾ ಇದೆ ಮತ್ತು ಮಲಗಲು ಆರಾಮದಾಯಕವಾದ ಮೆತ್ತನೆಯ ಹಾಗೂ ಬೆಚ್ಚನೆಯ ಹಾಸಿಗೆ ಸಿಕ್ಕುತ್ತಾ ಇದೆ ಎಂದು ಅವಳಿಗೆ ಅತೀವ ಸಂತಸವಾಗಿತ್ತು. ಅವಳು ಅದೆಷ್ಟು ಲವಲವಿಕೆಯ ಮನಸೆಳೆವ ಸುಂದರ ಹೆಣ್ಣಾಗಿದ್ದಳೆಂದರೆ ನನ್ನ ತಲೆ ಕೆಟ್ಟುಹೋಯಿತು. ಅಲ್ಲದೆ ಅವಳೆಂಥ ದಷ್ಟ-ಪುಷ್ಟ ಹೆಣ್ಣಾಗಿದ್ದಳೆಂದರೆ ನನ್ನನ್ನು ಪೂರಾ ಉನ್ಮತ್ತನನ್ನಾಗಿಸಿದಳು.

ಕೊಠಡಿಯ ಒಳಗೆ ಬಂದು ಅವಳು ತನ್ನ ಬೆಚ್ಚನೆಯ ಕೋಟು ಮತ್ತು ಹ್ಯಾಟು ಕಳಚಿಟ್ಟು ಸದ್ದಿಲ್ಲದೆ ಟೇಬಲ್ ಹತ್ತಿರ ಕುಳಿತು ಊಟಕ್ಕೆ ತೊಡಗಿಬಿಟ್ಟಳು. ಆದರೆ ಮೇಲು ನೋಟಕ್ಕೇನೆ ಅವಳು ತುಂಬ ಬಳಲಿದವಳಂತೆ ಕಂಡುಬಂದಳು. ಮುಂದೇನೋ ಭಾರೀ ಕಷ್ಟ ಆಗುತ್ತಿದೆಯೇನೋ ಎನ್ನುವ ಹಾಗೆ ಅವಳ ಹಳದಿಯ ನಿಸ್ತೇಜ; ಬಾಡಿದ ಮತ್ತು ಸೊರಗಿದ ಮುಖ ಅವಳನ್ನು ಸೆಡೆಯುತ್ತಿತ್ತು.

"ನಿನಗೇನಾದರೂ ಕಷ್ಟವಾಗುತ್ತಿದೆಯೆ?" ಎಂದು ನಾನು ಅವಳನ್ನು ಕೇಳಿದೆ.

"ಅಯ್ಯೋ ಬಿಡಿ, ಆ ಮಾತು ಅತ್ತಲಾ ಕಡೆ ಇಡಿ. ಈ ಸಮಯದಲ್ಲಿ ನಾವು ಯಾವುದೇ ಕಷ್ಟ, ತೊಂದರೆ, ನೋವು, ದುಃಖದ ಬಗ್ಗೆ ಮಾತಾಡೋದು ಬೇಡ." ಊಟ ಮಾಡುವುದರ ಜೊತೆ ಜೊತೆಯಲ್ಲೇ ಅವಳು ಕುಡಿಯಲೂ ಶುರು ಮಾಡಿದಳು. ಒಂದೇ ಗುಕ್ಕಿಗೆ ಅವಳು ತೀರಾ ಬಾಯಾರಿದವಳಂತೆ ತನ್ನ ಶಾಂಪೇನ್ ತುಂಬಿದ ಬಾಟಲ್ ಅನ್ನು ಖಾಲಿ ಮಾಡಿದಳು. ಮತ್ತೆ ಅದನ್ನು ತುಂಬಿಸಿ ಒಂದೇ ಸಮನೆ ಗಟಗಟನೆ ಕುಡಿದು ಖಾಲಿ ಮಾಡಿದಳು. ಆ ಮೇಲೆ ಸ್ವಲ್ಪ ಹೊತ್ತಿನಲ್ಲೇ ಅವಳ ಕೆನ್ನೆಗಳ ಮೇಲೆ ಕೆಂಪು ಬೊಬ್ಬೆ ಥರ ಹರಡಿಕೊಂಡಿತು. ಶಾಂಪೇನಿನ ನಶೆಯಿಂದ ಅವಳು ನಗತೊಡಗಿದಳು.

ಈ ಮಧ್ಯೆ ನಾನು ಅವಳನ್ನು ಚೆನ್ನಾಗಿ ಮುದ್ದಾಡಿದೆ ಮತ್ತು ಒಂದೇ ಸಮನೆ ಅವಳಿಗೆ ಮುತ್ತಿಡುತ್ತಿದ್ದೆ. ಅವಳು ಸಂತೆಯ ಹುಡುಗಿಯರಂತೆ ಮೂರ್ಖಳಾಗಲಿ, ತೀರ ಸಾಧಾರಣಳಾಗಲಿ, ಹೆಡ್ಡಳಾಗಲಿ ಅಲ್ಲವೆಂದು ನಾನು ಕಂಡುಕೊಂಡೆ. ಅವಳ ವೈಯಕ್ತಿಕ ಜೀವನದ ಬಗ್ಗೆ ತಿಳಿಸುವಂತೆ ನಾನು ಅವಳಿಗೆ ಹೇಳಿದೆ. "ನನ್ನ ಪ್ರಿಯ ಮಿತ್ರರೆ ಇದನ್ನು ಕಟ್ಟಿಕೊಂಡು ನಿಮಗೆ ಏನೂ ಆಗಬೇಕಾದ್ದಿಲ್ಲ" ಎಂದಳು. ಸರಿ ಒಂದು ಗಂಟೆಯ ನಂತರ ಕೊನೆಗೆ ನಿದ್ರಿಸುವ ಸಮಯವಾಯಿತು. ಡೈನಿಂಗ್ ಟೇಬಲ್ ಮೇಲಿದ್ದ ಪಾತ್ರೆಗಳನ್ನೆಲ್ಲ ನಾನು ಎತ್ತಿಡುತ್ತಲೇ ಅವಳು ತನ್ನೆಲ್ಲಾ ಉಡುಪನ್ನು ಕಳಚಿ ಹಾಕಿ ಹಾಸಿಗೆಯ ಬೆಚ್ಚನೆಯ ಹೊದಿಕೆಯೊಳಗೆ ನುಸುಳಿಕೊಂಡಳು. ನನ್ನ ನೆರೆಹೊರೆಯವರೆಲ್ಲ ಪೂರ್ತಿ ಜೋಶ್‌ನಿಂದ ಹುಚ್ಚರ ಹಾಗೆ ಉತ್ಸಾಹದಿಂದ ಉತ್ಸವವನ್ನು ಆಚರಿಸುತ್ತಿದ್ದರು. ಮನೆಯಿಂದ ಹೊರಗೆ ಹೋಗಿ ಆ ಹುಡುಗಿಯನ್ನು ಕರೆದುಕೊಂಡು ಬಂದು ನಾನು ಒಳ್ಳೆಯ ಕೆಲಸವನ್ನೇ ಮಾಡಿದೆ ಎಂದು ಮನಸ್ಸಿನಲ್ಲಿ ನನಗೆ ನಾನೇ ಹೇಳಿಕೊಂಡೆ. ಬಹುಶಃ ಇದಕ್ಕಿಂತ ಒಳ್ಳೆಯ ಕೆಲಸ ನಾನು ಮಾಡಲು ಸಾಧ್ಯವೇ ಇರಲಿಲ್ಲ.

ಅದೇ ಹೊತ್ತಿನಲ್ಲಿ ನಾನು ನನ್ನ ಪಕ್ಕದ ಹಾಸಿಗೆ ಕಡೆಯಿಂದ ವಿಚಿತ್ರವಾದೊಂದು ಚೀತ್ಕಾರ ಹೊಮ್ಮಿದ್ದು ಕೇಳಿದೆ. "ಏನು ಸಮಾಚಾರ?" ಎಂದು ಕೇಳಿದೆ. ನಿನಗೆ ಕಾಯಿಲೆ ಆಗಿದೆಯಾ, ನಿನಗೆ ತುಂಬಾ ಕಷ್ಟ ಆಗ್ತಾ ಇದೆಯಾ.?" ಎಂದೆಲ್ಲ ನಾನು ಕೇಳುತ್ತಲೇ ಇದ್ದೆ. ಆ ಕ್ಷಣದಲ್ಲೇ ಅವಳು ಎದೆ ನಡುಗಿಸುವ ಹಾಗೆ ಚೀರಿದಳು. ಕೈನಲ್ಲಿ ಒಂದು ಮೋಂಬತ್ತಿ ಹಿಡಿದು ನಾನು ಅವಳ ಹಾಸಿಗೆ ಸನಿಹಕ್ಕೆ ಹೋದೆ. ನೋವಿನಿಂದಾಗಿ

ಒದ್ದಾಡುತ್ತಾ ಇದ್ದಳು. ಅವಳ ಮುಖದ ಚೆಹರೆ ಕೆಡುತ್ತಾ ಇತ್ತು. ಅಲ್ಲದೆ ಅವಳು ತನ್ನ ಕೈಗಳನ್ನು ತಿರುಗಿಸುತ್ತಾ ಇದ್ದಳು. ಕುತ್ತಿಗೆ ಹಿಸುಕಿದಾಗ ಹೊಮ್ಮುವ ಹಾಗೆ ಅವಳ ಬಾಯಿಂದ ತಡೆತಡೆದು ಅಳು ಮತ್ತು ಮೆಲ್ಲ ಮೆಲ್ಲಗೆ ಚೀರಾಟ ಹೊಮ್ಮುತ್ತಿತ್ತು. ಅದನ್ನು ಕಿವಿಯಿಂದ ಕೇಳಿಸಿಕೊಳ್ಳುವುದು ಅತಿ ತ್ರಾಸಕರವಾಗಿತ್ತು. ಅವಳಿಗೆ ಧೈರ್ಯ ತುಂಬುತ್ತ– "ಏನಾಗಿದೆ ನಿನಗೆ? ದೇವರ ಮೇಲೆ ಆಣೆಯಿಟ್ಟು ನಿನಗೇನು ಕಷ್ಟ ಆಗ್ತಿದೆ ಅಂತ ಹೇಳು" ಎಂದು ಕೇಳಿದೆ.

"ಓಹ್! ನೋವು, ಭಯಂಕರ ನೋವು" ಅವಳೆಂದಳು. ಕೂಡಲೇ ಅವಳು ಹೊದೆದಿದ್ದ ಹೊದಿಕೆಯನ್ನು ಅತ್ತ ಸರಿಸಿ ನೊಡುತ್ತೀನಿ. ಮಿತ್ರರೆ, ಅವಳಿಗೆ ಹೆರಿಗೆಯ ಅಸಹನೀಯ ನೋವು ಪ್ರಾರಂಭವಾಗಿದೆ ಅಂತ ಗೊತ್ತಾಯಿತು. ಅವಳಿಗೆ ಆಗ್ತಿರೋದು ಪ್ರಸವ ಪೂರ್ವ ವೇದನೆ ಎಂದು ಗೊತ್ತಾದ ಮೇಲೆ ನಾನು ಹುಚ್ಚನಾಗಿಬಿಟ್ಟೆ.

ನಾನು ಓಡಿಹೋಗಿ ಗೋಡೆ ಗುದ್ದತೊಡಗಿದೆ. ಸಹಾಯಕ್ಕಾಗಿ ಜೋರು ಜೋರಾಗಿ ಕಿರುಚತೊಡಗಿದೆ.

ನನ್ನ ಮನೆಯ ಬಾಗಿಲು ಕೂಡಲೇ ತೆರೆದುಕೊಂಡಿತು. ನೋಡ ನೋಡುತ್ತಲೇ ನನ್ನ ಕೊಠಡಿ ಜನರಿಂದ ತುಂಬಿಹೋಯಿತು. ಆನರೆಲ್ಲ ನೈಟ್ ಡ್ರೆಸ್‌ನಲ್ಲಿದ್ದರು. ಹೆಂಗಸರು ಮೈತುಂಬ ಬಟ್ಟೆ ಧರಿಸಿದ್ದರು. ಅಕ್ಕ ಪಕ್ಕದ ನೆರೆಯವರು ಹಾಗಿರಲಿ, ರಸ್ತೆಯಲ್ಲಿ ಹೋಗುತ್ತಾ ಇದ್ದ ಜನ ಎಲ್ಲ ನನ್ನ ಮನೆ ಒಳಕ್ಕೆ ನುಗ್ಗಿ ವಿಚಿತ್ರ ರೀತಿಯಲ್ಲಿ ನನ್ನ ಕಡೆ ದಿಟ್ಟಿಸಿ ನೋಡುತ್ತಿದ್ದರು. ನನ್ನ ಮನೆಯಲ್ಲಿ ಏನೋ ಒಂದು ಭಾರೀ ದುರ್ಘಟನೆ ಆಗಿ ಹೋಗಿದೆ, ಇಲ್ಲ ಏನೋ ಅಪರಾಧ ನಡೆದಿದೆ ಎಂದು ಯೋಚಿಸುತ್ತಿದ್ದರು. ಅವರಿಗೆ ಏನೂಂತ ಸರಿಯಾಗಿ ಗೊತ್ತಾಗುತ್ತಿರಲಿಲ್ಲ. ಅಂತೂ ಕೊನೆಗೆ ಕಷ್ಟದಿಂದ "ಈ ಹೆಂಗಸಿಗೆ ಮಗು ಆಗಲಿದೆ" ಎಂದಷ್ಟು ಮಾತ್ರ ನನಗೆ ಹೇಳಲು ಸಾಧ್ಯವಾಯಿತು.

ಆ ನಂತರ ಅಲ್ಲಿದ್ದ ಜನರು ಅವಳ ಬಗ್ಗೆ ತಲಾ ತಟ್ಟಿ ಒಂದೊಂದು ಅಭಿಪ್ರಾಯ ನೀಡತೊಡಗಿದರು. ಒಬ್ಬ ಥೋಂಗಿ ಮನುಷ್ಯ ತನಗೆ ಈ ಕೆಲಸದ ಬಗ್ಗೆ ಎಲ್ಲ ಗೊತ್ತಿದೆ; ಈ ಪ್ರಕೃತಿ ಸಹಜವಾದ ಕಾರ್ಯದಲ್ಲಿ ತಾನು ಎಲ್ಲ ರೀತಿಯ ನೆರವು ನೀಡಲಿಚ್ಛಿಸುವುದಾಗಿ ವಿಶೇಷವಾಗಿ ಹೇಳಿದ. ಆದರೆ ಅವರೆಲ್ಲರೂ ಹಂದಿಗಳ ಹಾಗೆ ಕುಡಿದು ಬಿಟ್ಟಿದ್ದರು. ಅವರೆಲ್ಲಾದರೂ ಇವಳ ಪ್ರಾಣ ತೆಗೆದರೇನು ಗತಿ ಎಂದು ನನಗೆ ಭಯ ಆಯಿತು. ಸರಿ ನಾನು ತಲೆಗೆ ಹ್ಯಾಟನ್ನೂ ಹಾಕಿಕೊಳ್ಳದೆ ಹತ್ತಿರದ ಇನ್ನೊಂದು ಬೀದಿಯಲ್ಲಿ ವಾಸಿಸುತ್ತಿದ್ದ ಒಬ್ಬ ಅನುಭವೀ ವೃದ್ಧ ವೈದ್ಯನನ್ನು ಕರೆತರಲು ಓಡಿದೆ. ಆ

ವೈದ್ಯರನ್ನು ನಾನು ಕರೆತರುವ ಹೊತ್ತಿಗೆ ಸುತ್ತ ಮುತ್ತಿನ ಮನೆಗಳವರೆಲ್ಲರೂ ಹೊರಟುಹೋಗಿದ್ದರು. ಮನೆಗೆ ಹತ್ತಿ ಬರಲು ಇದ್ದ ಮೆಟ್ಟಿಲುಗಳ ಮೇಲಿನ ಆರಿಹೋಗಿದ್ದ ದೀಪವನ್ನು ಮತ್ತೆ ಹೊತ್ತಿಸಿ ಹೋಗಿದ್ದರು. ಮಹಡಿಯ ಮನೆಗಳಲ್ಲಿ ಫ್ಲಾಟ್‌ಗಳಲ್ಲಿದ್ದ ಜನರೆಲ್ಲರೂ ನನ್ನ ಮನೆಯಲ್ಲಿ ಗುಂಪು ಸೇರಿದ್ದರು. ನಾಲ್ಕು ಜನ ನಾವಿಕರು ನನ್ನ ಮನೆಯಲ್ಲಿ ಅಳಿದುಳಿದಿದ್ದ ಮೀನುಗಳು ಮತ್ತು ಶಾಂಪೇನ್ ಮೇಲೆ ಕೈಯಾಡಿಸುತ್ತಾ ಇದ್ದರು. ನನ್ನ ಮುಖ ನೋಡಿದ ಕೂಡಲೇ ಎಲ್ಲರೂ ಒಟ್ಟಾಗಿ ಕೂಗಿದರು.

ಒಬ್ಬ ಗೊಲ್ಲರವಳು ಸುಕ್ಕುಗಳುಳ್ಳ ಮಗುವೊಂದನ್ನು ನನ್ನ ಕೈಗೆ ನೀಡುತ್ತ ಇದು ಹೆಣ್ಣು ಮಗು ಎಂದಳು. ಅದು ಬೆಕ್ಕಿನ ಮರಿಯ ಹಾಗೆ ಗುರುಗುಟ್ಟುತ್ತಿತ್ತು.

ಡಾಕ್ಟರು ಆ ಹೆಂಗಸನ್ನು ಪರೀಕ್ಷಿಸಿ ನೋಡಿ ಈ ಹೆಂಗಸಿನ ಸ್ಥಿತಿ ತುಂಬಾ ಚಿಂತಾಜನಕವಾಗಿದೆಯೆಂದು ಹೇಳಿ ಅವಳ ಶುಶ್ರೂಷೆ ಮತ್ತು ಆರೈಕೆಯ ಸಲುವಾಗಿ ಒಬ್ಬ ನರ್ಸನ್ನು ಕಳಿಸಿಕೊಡುವುದಾಗಿ ಹೇಳಿದರು. ಅವರು ಹೇಳಿದಂತೆ ಒಂದು ಗಂಟೆಯ ನಂತರ ಇಬ್ಬರು ನರ್ಸ್‌ಗಳು ಅಗತ್ಯ ಸಾಮನು ಸರಂಜಾಮಿನೊಂದಿಗೆ ನನ್ನ ಮನೆಗೆ ಧಾವಿಸಿದರು.

ಇಡೀ ರಾತ್ರಿಯನ್ನು ನಾನು ನನ್ನ ಆರಾಮ ಕುರ್ಚಿಯ ಮೇಲೆ ಕುಳಿತೇ ಕಳೆದೆ. ಈ ಘಟನೆಯ ನಂತರದ ಪರಿಣಾಮಗಳ ಬಗ್ಗೆ ಯೋಚನೆ ಮಾಡಿ ಮಾಡಿ ನಾನು ಬಹಳ ಚಿಂತಿತನಾಗಿ ಬಿಟ್ಟಿದ್ದೆ. ಸ್ವಲ್ಪ ಬೆಳಕು ಹರಿಯುತ್ತಲೇ ಆ ಡಾಕ್ಟರ್ ಬಾಣಂತಿಯನ್ನು ನೋಡಲು ಮತ್ತೆ ಬಂದರು. ಅವಳಿನ್ನೂ ಚಿಂತಾಜನಕ ಪರಿಸ್ಥಿತಿಯಲ್ಲಿರುವುದನ್ನು ನೋಡಿ ನನ್ನೊಂದಿಗೆ–"ಮಿಸ್ಟರ್ ತಮ್ಮ ಧರ್ಮಪತ್ನಿಯವರು......" ನಾನು ಅವರ ಮಾತನ್ನು ಮಧ್ಯದಲ್ಲೇ ತಡೆದು– "ಈಕೆ ನನ್ನ ಹೆಂಡತಿ ಅಲ್ಲ" ಎಂದೆ.

"ಆಯಿತು, ನಿಮ್ಮ ಪತ್ನಿ ಅಥವಾ ಉಪಪತ್ನಿ ಯಾರಾದರೂ ಸರಿ, ನನಗೆ ಅದರ ಬಗ್ಗೆ ಆಕ್ಷೇಪ ಇಲ್ಲ." ಎನ್ನುತ್ತ ಆ ಹೆಂಗಸಿನ ವಿಷಯಕ್ಕೆ ಏನು ಮಾಡಬೇಕಾಗಿದೆ ಯೆಂಬುದನ್ನು ಹೇಳಿ ಔಷಧಗಳ ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟರು.

ನಾನೇನು ಮಾಡಬೇಕಾಗಿತ್ತು? ಈ ಅಸಹಾಯ, ಬಡ ಕಾಯಿಲೆ ಹೆಂಗಸನ್ನು ಆಸ್ಪತ್ರೆಗೆ ಕಳಿಸಿಬಿಡಲೆ? ಆಗ ನನ್ನ ಮನೆಯಲ್ಲೇ ನೆರೆಹೊರೆಯವರ ಕಣ್ಣಲ್ಲಿ ನಾನೊಬ್ಬ ನಿರ್ದಯಿ ಮತ್ತು ಕಾಡು ಪ್ರಾಣಿ ಎನಿಸಿಬಿಡುತ್ತಿದ್ದೆ. ಕೊನೆಗೆ ಅವಳನ್ನು ನನ್ನ ಕೊಠಡಿಯಲ್ಲೇ ಇಟ್ಟುಕೊಂಡೆ. ಮುಂದಿನ ಆರು ವಾರಗಳ ವರೆಗೆ ಅವಳು ನನ್ನ ಮಂಚದ ಮೇಲೆ ತನ್ನ ಅಧಿಕಾರ ಸ್ಥಾಪಿಸಿಬಿಟ್ಟಳು. ಆ ನವಜಾತ ಶಿಶುವಿನ ಸಂರಕ್ಷಣೆಯ ಸಲುವಾಗಿ

ಅದನ್ನು ಹತ್ತಿರದ ಹಳ್ಳಿಯ ಒಬ್ಬ ರೈತನ ಮನೆಗೆ ಕಳಿಸಿಕೊಟ್ಟೆ. ಅದರಿಂದಾಗಿ ನಾನು ಇಂದಿನ ವರೆಗೂ ಪ್ರತಿ ತಿಂಗಳು ಐವತ್ತು ಫ್ರಾಂಕ್ ಹಣ ಖರ್ಚು ಮಾಡಬೇಕಾಗಿ ಬಂದಿದೆ. ಹುಟ್ಟುತ್ತಿದ್ದ ಹಾಗೆಯೇ ಅದರ ಖರ್ಚನ್ನು ನಾನು ವಹಿಸಿಕೊಂಡಿರುವುದರಿಂದ ನಾನು ಬದುಕಿರುವವರೆಗೂ ಅದರ ಖರ್ಚು-ವೆಚ್ಚ ನಾನೇ ನಿಭಾಯಿಸಬೇಕಾಗುತ್ತೆ. ಆ ನಂತರದಲ್ಲಿ ಮುಂದೆ ನಾನೇ ಅವಳ ತಂದೆ ಎಂದೇ ಅವಳು ನಂಬುತ್ತಾಳೆ. ಆದರೆ ನನ್ನ ದೌರ್ಭಾಗ್ಯವನ್ನು ಇನ್ನಷ್ಟು ಹೆಚ್ಚಿಸಲೋ ಎಂಬಂತೆ ಆ ಹೆಂಗಸು ನನ್ನನ್ನು ಪ್ರೀತಿಸತೊಡಗಿದ್ದಾಳೆ. ನನ್ನ ಪ್ರೀತಿಯಲ್ಲಿ ಹುಚ್ಚಳಾಗಿದ್ದಾಳೆ. ಒಂದು ಬಲವಂತದ ಹೊರೆ ನನ್ನ ಪಾಲಿಗೆ.

ಸರಿ, ಕೆಲ ದಿನಗಳ ನಂತರ ಅವಳು ಮನೆ ತಪ್ಪಿದ ಬೆಕ್ಕಿನ ಹಾಗೆ ಒಣಗಿ ಕಡ್ಡಿಯಾಗಿಬಿಟ್ಟಿದ್ದಳು. ಆ ಮೂಳೆಯ ರಾಶಿಯನ್ನು ನಾನು ಮನೆಯಿಂದ ಆಚೆಗೆ ಅಟ್ಟಿದೆ. ಆದರೆ ರಸ್ತೆಯಲ್ಲಿ ಹೋಗುತ್ತಾ ಬರುತ್ತಾ ಅವಳು ನನ್ನನ್ನು ನೋಡುತ್ತಾ ಇರುತ್ತಾಳೆ ಮತ್ತು ನನ್ನನ್ನು ನೋಡುತ್ತಲೇ ಅಡಗಿಕೊಂಡುಬಿಡುತ್ತಾಳೆ. ರಸ್ತೆ ಮೇಲೆ ಹೋಗುತ್ತಾ- ಬರುತ್ತಾ ನೋಡಲಿ, ಆದರೆ ಸಂಜೆಗೆ ನನ್ನನ್ನು ರಸ್ತೆಯಲ್ಲಿ ತಡೆದು ನನ್ನ ಕೈಗೆ ಮುತ್ತಿಕ್ಕಲಿಚ್ಛಿಸುತ್ತಾಳೆ. ಅವಳ ಈ ಮುಗ್ಧತೆ ಅನ್ನಿ, ಇಲ್ಲ ನಿಸ್ವಾರ್ಥ ಪ್ರೇಮವೆನ್ನಿ , ಹುಚ್ಚು ಅನ್ನಿ ಅದು ನನ್ನನ್ನೂ ಹುಚ್ಚನನ್ನಾಗಿ ಮಾಡಿಬಿಡುತ್ತೆ. ಇದೇ ಕಾರಣದಿಂದಲೇ ನಾನು ಇನ್ನು ಮುಂದೆ ಎಂದೂ ಕ್ರಿಸ್ಮಸ್ ಹಬ್ಬವನ್ನು ಆಚರಿಸುವುದಿಲ್ಲ.

❖

ನಕಲಿ ರತ್ನಗಳು

ಫ್ರೆಂಚ್ : ಗೈದೆ ಮೊಪಾಸ

ಮಿಸ್ಟರ್ ಲೆಂಟಿನ್ ತನ್ನ ವಿಭಾಗದ ಉಪ ಮುಖ್ಯಾಧಿಕಾರಿಯ ಮನೆಯಲ್ಲಿ ಒಬ್ಬ ನವ ಯುವತಿಯನ್ನು ಭೇಟಿಮಾಡಿದ. ಮೊದಲ ನೋಟದಲ್ಲೇ ಅವಳ ಪ್ರೇಮದಲ್ಲಿ ಹುಚ್ಚನಾದ. ಅವಳು ಹಲವು ತಿಂಗಳುಗಳ ಹಿಂದೆ ತಾನೆ ಗತಿಸಿದ, ಹಳ್ಳಿಯ ವೈದ್ಯರೊಬ್ಬರ ಮಗಳು. ಅವಳು ತನ್ನ ತಾಯಿಯೊಂದಿಗೆ ಪ್ಯಾರಿಸ್‌ನಲ್ಲಿ ಇರಲು ಬಂದಿದ್ದಳು. ಅದರಲ್ಲಿ ತಾಯಿಯ ಉದ್ದೇಶ ತನ್ನ ಮಗಳಿಗೆ ಎಲ್ಲಾದರೂ ಒಳ್ಳೆಯ ವಿವಾಹ ಸಂಬಂಧ ಕೂಡಿಬಂದೀತೆಂದು. ಅದಕ್ಕಾಗಿ ತನಗೆ ಪರಿಚಯವಿರುವವರ ಮನೆಗಳಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದಳು. ಅವರು ತುಂಬಾ ಬಡವರು, ಆದರೆ ಪ್ರಾಮಾಣಿಕರು ಮತ್ತು ಅಸಹಾಯಕರು.

ಈ ನವ ಯುವತಿ ಒಬ್ಬ ಆದರ್ಶ ಚಾರಿತ್ರ ಸಂಪನ್ನೆಯಾದ ಹುಡುಗಿ. ಯಾರೇ ವಿವೇಕಿಯಾದ ಮನುಷ್ಯ ಯಾವಾಗ ಬೇಕಾದರೂ ತನ್ನ ಹೆಂಡತಿಯಾಗಿ ಪಡೆದುಕೊಳ್ಳುವ ಕನಸು ಕಾಣಬಹುದಾಗಿದ್ದಂಥ ಯುವತಿ ಅವಳು. ಅವಳ ಸ್ನಿಗ್ಧ ಸೌಂದರ್ಯದಲ್ಲಿ ಅಪ್ಸರೆಯರ ಮಾಧುರ್ಯವಿತ್ತು. ಅವಳ

ತುಟಿಗಳ ಮೇಲೆ ಯಾವಾಗಲೂ ಒಂದು ಮುಗುಳು ನಗೆ ಮಿನುಗುತ್ತಿತ್ತು. ಅದು ಅವಳ ಪವಿತ್ರವೂ ಪ್ರೇಮಲವೂ ಆದ ಸೌಂದರ್ಯವನ್ನು ಪರಿಚಯಿಸುವಂಥದಾಗಿತ್ತು. ಎಲ್ಲ ಕಡೆ ಅವಳ ಹೊಗಳಿಕೆ ವ್ಯಾಪಿಸತೊಡಗಿತ್ತು. "ಇವಳ ಪ್ರೀತಿಗೆ ಪಾತ್ರನಾಗುವವನು ಒಬ್ಬ ಅದೃಷ್ಟವಂತ ವ್ಯಕ್ತಿಯೇ ಆಗಿರುತ್ತಾನೆ. ಇವಳಿಗಿಂತ ಆದರ್ಶಳಾದ ಹೆಂಡತಿ ಅವನಿಗೆ ಸಿಗುವುದು ಸಾಧ್ಯವಿಲ್ಲ" ಎಂದು ಯಾವಾಗಲೂ ಹೇಳಲು ಜನರಿಗೆ ಆಯಾಸವೇ ಆಗುತ್ತಿರಲಿಲ್ಲ.

ಮಿಸ್ಟರ್ ಲೆಂಟಿನ್‌ಗೆ ಏಳುನೂರು ರೂಪಾಯಿಗಳ ವಾರ್ಷಿಕ ಆದಾಯವಿತ್ತು. ಈಗ ಅವನು ಅತ್ಯಂತ ವ್ಯವಸ್ಥಿತವಾಗಿ ಗೃಹಸ್ಥ ಜೀವನದ ಭಾರ ಹೊರುವ ಬಗ್ಗೆ ಯೋಚನೆ ಮಾಡಬಹುದಿತ್ತು. ಆ ಸುಂದರ ಯುವತಿಯಲ್ಲಿ ತನ್ನ ಮದುವೆಯ ಪ್ರಸ್ತಾಪವನ್ನು ಮುಂದಿಟ್ಟ. ಅವಳೂ ಅದಕ್ಕೆ ಸಿದ್ಧಳಾದಳು. ಅವಳೊಂದಿಗೆ ವರ್ಣಿಸಲಾಗದಷ್ಟು ಸುಖವಾಗಿದ್ದ. ಅವಳೆಷ್ಟು ಮಿತವ್ಯಯ ಮತ್ತು ಕುಶಲತೆಯಿಂದ ಸಂಸಾರ ನಡೆಸುತ್ತಿದ್ದಳೆಂದರೆ ತಾವಿಬ್ಬರೂ ಬಹಳ ಠೀಕ್ ಠಾಕ್ ಆಗಿ ಜೀವನ ನಡೆಸುತ್ತಿದ್ದೇವೆಂದು ತಿಳಿದಿದ್ದರು. ಸಣ್ಣ ಪುಟ್ಟ ವಿಷಯಗಳಲ್ಲೆಲ್ಲ ತನ್ನ ಗಂಡನ ಬಗ್ಗೆ ನಿಗಾ ವಹಿಸುತ್ತಿದ್ದಳು. ಸದಾ ಅವನ ಮನಸ್ಸಿಗೆ ಸಂತೋಷವುಂಟುಮಾಡುತ್ತ ಪ್ರೀತಿ ತೋರಿಸುತ್ತಿದ್ದಳು.ಮಿಸ್ಟರ್ ಲೆಂಟಿನ್‌ಗೆ ಅವಳೊಂದಿಗಿನ ಸಹಬಾಳ್ವೆ ಅದೆಷ್ಟು ಸಂತಸಕರವಾದ ಮತ್ತು ಹಿತಕರವಾದ ಅನುಭವವಾಗಿತ್ತೆಂದರೆ ಮದುವೆಯಾಗಿ ಆರು ವರ್ಷಗಳ ನಂತರದಲ್ಲಿ ಈಗಲೂ ಮದುವೆಯಾದ ಆರಂಭದ ದಿನಗಳಿಗಿಂತ ಹೆಚ್ಚು ಪ್ರೀತಿಸುತ್ತಿರುವುದಾಗಿ ಹಾಗೂ ಅಷ್ಟೇ ಇಷ್ಟಪಡುತ್ತಿರುವುದಾಗಿ ಅನಿಸಿತು.

ತನ್ನ ಹೆಂಡತಿಯ ಎರಡು ಅಭಿರುಚಿಗಳ ವಿಷಯದಲ್ಲಿ ಅವನು ಯಾವಾಗಲಾದರೂ ದನಿ ತಗ್ಗಿಸಿ ಮಾತನಾಡುವುದಿತ್ತು. ಥಿಯೇಟರ್‌ಗಳಿಗೆ ಹೋಗುವ ಮತ್ತು ನಕಲಿ ಒಡವೆಗಳನ್ನು ಶೇಖರಿಸುವ ಹುಚ್ಚು. ಅವಳ ಜೊತೆಗಾತಿಯರು (ಅವಳಿಗೆ ಕೆಲವು ದೊಡ್ಡ ದೊಡ್ಡ ಅಧಿಕಾರಿಗಳ ಪತ್ನಿಯರ ಪರಿಚಯವಿತ್ತು) ಬಹುಶಃ ಹೊಸ ನಾಟಕಗಳ ಪ್ರದರ್ಶನವಿದ್ದಾಗ ಬಾಕ್ಸ್‌ನ ಟಿಕೆಟ್ ತೆಗೆದಿಟ್ಟಿರುತ್ತಿದ್ದರು. ಗಂಡನಿಗೆ ಇಷ್ಟವಿರಲಿ ಬಿಡಲಿ ಹೆಂಡತಿಯನ್ನು ಸಂತೋಷಪಡಿಸಲು ಅವಳ ಜೊತೆ ಹೋಗಬೇಕಾಗುತ್ತಿತ್ತು. ಅವಳ ಗೆಳತಿಯರೂ ಅವನು ಹಗಲೆಲ್ಲಾ ಆಫೀಸಿನಲ್ಲಿ ದುಡಿದು ಆಯಾಸಗೊಂಡಿದ್ದರೂ ಜೊತೆಯಲ್ಲಿ ಬರಬೇಕೆಂದು ಹಟಹಿಡಿಯುತ್ತಿದ್ದರು.

ಕೆಲವು ಸಮಯ ಕಳೆದ ಮೇಲೆ ತನ್ನನ್ನು ಕರೆದೊಯ್ಯಲು ಅವಳು ತನ್ನ ಗೆಳತಿಯರಿಗೆ ಹೇಳಬಾರದೆಂದು ಮಿಸ್ಟರ್ ಲೆಂಟಿನ್ ಹೆಂಡತಿಯನ್ನು ಪ್ರಾರ್ಥಿಸಿಕೊಂಡ. ಮೊದಮೊದಲು

ಅವನ ಹೆಂಡತಿ ಈ ನೂತನ ವ್ಯವಸ್ಥೆಯನ್ನು ವಿರೋಧಿಸಿದಳಾದರೂ ಗಂಡ ತುಂಬ ಒತ್ತಾಯ ಮಾಡಿದ ಮೇಲೆ ತನ್ನ ಗಂಡನ ಮೇಲಿನ ಅಪಾರ ಪ್ರೇಮದಿಂದಾಗಿ ಒಪ್ಪಿಕೊಂಡಳು.

ಈಗ ಥಿಯೇಟರ್‌ಗೆ ಹೋಗುವ ಚಾಳಿಯ ಜೊತೆ ಜೊತೆಗೆ ಅಲ್ಲಿಯ ಪಾತ್ರಗಳೊಂದಿಗೆ ಅವಳಿಗೆ ಪ್ರೇಮುಂಟಾಯಿತು. ಅವಳ ಉಡುಪು ಈಗ ಮೊದಲಿ ಗಿಂತಲೂ ಹೆಚ್ಚು ಸಾದಾ ಆದ ಚೆನ್ನಾಗಿ ಹೊಲಿದಿರುತ್ತಿದ್ದ ಉಡುಪಗಳಾಗಿರುತ್ತಿದ್ದವು. ಆದರೆ ಬಹುಬೇಗನೆ ತನ್ನ ಕಿವಿಗಳನ್ನು ಬಹಳ ಬೆಲೆಬಾಳುವ ಹರಳುಗಳಿಂದ ಅಲಂಕರಿಸಿ ಕೊಳ್ಳತೊಡಗಿದಳು. ಅವು ಅಸಲಿ ವಜ್ರದ ಹಾಗೆ ಹೊಳೆಯುತ್ತಿದ್ದುವು. ತನ್ನ ಕೊರಳ ತುಂಬ ನಕಲಿ ಮುತ್ತಿನ ಹಾರಗಳು, ಕೈಗಳಲ್ಲಿ ನಕಲಿ ಚಿನ್ನದ ಬಳೆಗಳನ್ನು ಧರಿಸಲು ಶುರು ಮಾಡಿದಳು.

ಅವಳ ಗಂಡ ಆಗಾಗ "ಪ್ರಿಯೆ ಎಲ್ಲಿಯವರೆಗೆ ನಿನಗೆ ಅಸಲಿ ವಜ್ರಗಳನ್ನು ಖರೀದಿಸಲು ಸಾಧ್ಯವಿಲ್ಲವೋ ಅಲ್ಲಿಯ ವರೆಗೂ ನೀನು ನಿನ್ನ ಸೌಂದರ್ಯ ಮತ್ತು ಸರಳತೆಗನ್ನೇ ಅಲಂಕರಿಸಿಕೊಳ್ಳಬೇಕು. ಅವೇ ಅತ್ಯಮೂಲ್ಯ ಒಡವೆಗಳು". –ಎಂದು ತಿಳಿಯ ಹೇಳುತ್ತಿದ್ದನು. ಅವಳು ಮಧುರವಾದ ಮುಗುಳ್ನಗೆಯೊಂದನ್ನು ತುಳುಕಿಸಿ–"ನಾನೇನು ಮಾಡಲಿ? ಒಡವೆಗಳ ಬಗ್ಗೆ ನನಗೆ ಅತಿಯಾದ ಹುಚ್ಚು. ಇದೇ ನನ್ನ ಒಂದು ದೌರ್ಬಲ್ಯ." ಎನ್ನುತ್ತಿದ್ದಳು. "ನಾವು ನಮ್ಮ ನಮ್ಮ ಸ್ವಭಾವವನ್ನು ಬದಲಾಯಿಸಿಕೊಳ್ಳಲಾಗುವುದಿಲ್ಲವೆ?" ಎಂದು ಕೇಳಿದನು. ಅದರ ನಂತರ ಅವಳು ತನ್ನ ಗಂಡನ ಅಭಿರುಚಿಯನ್ನು ಪರೀಕ್ಷಿಸಲು ತನ್ನ ನಕಲಿ, ಮುತ್ತಿನ ಹಾರಗಳನ್ನು ತನ್ನ ಬೆರಳುಗಳಲ್ಲಿ ಸುತ್ತಿಕೊಂಡು ಅವುಗಳ ಹೊಳೆಯುವ ಮಣಿಗಳನ್ನು ಅವನ ಮುಂದಿಟ್ಟು ಪ್ರೀತಿಯಿಂದ "ನೋಡಿ ಇವು ನಿಜಕ್ಕೂ ಬಹಳ ಸುಂದರವಾಗಿವೆಯೆ?"–ಎಂದು ಕೇಳುತ್ತಿದ್ದಳು.

"ಇವು ನಿಜಕ್ಕೂ ಅಸಲಿ ಒಡವೆಗಳೆಂದು ಯಾರ ಮೇಲೆ ಬೇಕಾದರೂ ಆಣೆಯಿಟ್ಟು ಹೇಳುತ್ತೀನಿ. ನಿನ್ನ ಅಭಿರುಚಿ ಥೇಟು ಶ್ರೀಮಂತ ವಂಶಸ್ಥರ ಅಭಿರುಚಿಯಂತಿದೆ"–ಎಂದು ಅವನು ನಗುತ್ತ ಉತ್ತರಿಸುತ್ತಿದ್ದನು.

ಎಂದಿನಂತೆ ಅವರು ಬೆಂಕಿಗೂಡಿನ ಬಳಿ ಕುಳಿತು ಸಂಜೆಯ ಚಹಾ ಹೀರುತ್ತಿದ್ದರು. ಮೇಡಮ್ ಲೆಂಟಿನ್ ಚಹಾ ಟೇಬಲ್ ಮೇಲೆ ಒಂದು ಚರ್ಮದ ಪರ್ಸ್ ಮತ್ತು ಲಾಕರ್ ತಂದಿಟ್ಟಳು. ಅದರಲ್ಲಿ ಕೆಲವು ಒಡವೆಗಳಿದ್ದುವು. ಒಮ್ಮೊಮ್ಮೆ ಲೆಂಟಿನ್ ಅವುಗಳನ್ನು ವ್ಯರ್ಥ ಖರ್ಚಿನವು ಎನ್ನುತ್ತಿದ್ದನು. ಆದರೆ ಅವಳು ಅವು ಯಾವುದೋ ಕಣ್ಣಿಗೆ ಕಾಣದ

ಆನಂದ ಮತ್ತು ರಹಸ್ಯಕ್ಕೆ ಸಂಬಂಧಿಸದವೇನೋ ಎನ್ನುವ ಹಾಗೆ ತುಂಬ ಪ್ರೀತಿ ಮತ್ತು ಆಸೆಯ ಕಣ್ಣುಗಳಿಂದ ಆಗಾಗ್ಗೆ ಅವುಗಳನ್ನು ನೋಡುತ್ತಾ ಇದ್ದಳು. ಯಾವುದಾದರೂ ಹಾರವನ್ನು ತನ್ನ ಪತಿಯ ಕೊರಳ ಸುತ್ತ ಹಾಕಿ ನಗು ಅರಳಿಸುತ್ತ ಗಟ್ಟಿಯಾಗಿ –"ಓಹ್ ನೀನು ಅದೆಷ್ಟು ಚೆನ್ನಾಗಿ ಕಾಣ್ತಿದ್ದೀಯಾ!" ಎಂದು ಹೇಳುತ್ತಿದ್ದಳು. ಅನಂತರ ತಾನೇ ಅವನ ತೋಳಿಗೆ ಜೋತುಬಿದ್ದು ಅವನನ್ನು ಚುಂಬಿಸುತ್ತಿದ್ದಳು.

ತುಂಬಾ ಥಂಡಿ ಹಿಡಿದಿದ್ದ ಒಂದು ಸಂಜೆ ಥಿಯೇಟರ್‌ಗೆ ಹೋಗಿ ಅಪೇರಾ ನೋಡಿಕೊಂಡು ವಾಪಸಾದಳು. ದಾರಿಯಲ್ಲಿ ಅವಳಿಗೆ ಶೀತ ಗಾಳಿ ತಾಗಿ ಮರು ದಿನ ಬೆಳಿಗ್ಗೆ ಅವಳಿಗೆ ತೀರಾ ಥಂಡಿ ಹಿಡಿದುಬಿಟ್ಟಿತು. ಎಂಟು ದಿನ ಶ್ವಾಸಕೋಶದಲ್ಲಿ ಶೀತ ಸೇರಿಕೊಂಡದ್ದರಿಂದ ತೀರಿಕೊಂಡಳು.

ಮಿಸ್ಟರ್ ಲೆಂಟಿನ್ ಮೇಲೆ ಈ ಆಘಾತ ಅದೆಷ್ಟು ಭೀಷಣವಾಗಿತ್ತೆಂದರೆ ದುಃಖದಿಂದಾಗಿ ಒಂದು ತಿಂಗಳ ಒಳಗೇ ಅವನೆಲ್ಲ ಕೂದಲುಗಳು ಬೆಳ್ಳಗಾದವು. ಒಂದೇ ಸಮನೆ ಅಳುತ್ತಿದ್ದನು. ಅವನ ಹೃದಯ ಅಗಾಧ ದುಃಖದಿಂದ ತುಂಬಿಹೋಗಿತ್ತು. ಅವನ ಮನಸ್ಸು ಸದಾ ತನ್ನ ಗತಿಸಿದ ಹೆಂಡತಿಯ ಅದ್ಭುತ ಸೌಂದರ್ಯ, ಅವಳ ಮಧುರ ಮುಗುಳ್ನಗೆ, ಕರ್ಣಾನಂದಕರವಾದ ಅವಳ ದನಿ, ಮತ್ತು ಅವಳ ನೆನಪುಗಳಿಂದ ವ್ಯಥಿತಗೊಂಡಿತ್ತು.

ಎಲ್ಲ ಗಾಯಗಳನ್ನೂ ಮಾಯಿಸುವ ಮುಲಾಮಾದ ಕಾಲಕ್ಕೂ ಅವನ ದುಃಖವನ್ನು ಅಳಿಸಲಾಗಲಿಲ್ಲ. ಕಛೇರಿಯ ವೇಳೆಯಲ್ಲಿ ಅವನ ಸಹೋದ್ಯೋಗಿಗಳು ಅಂದಿನ ಕೆಲಸ–ಕಾರ್ಯಗಳ ಬಗ್ಗೆ ಚರ್ಚಿಸುತ್ತಿದ್ದರೆ ಅವನ ಕಣ್ಣುಗಳು ಒಮ್ಮೆಲೇ ತುಂಬಿಕೊಳ್ಳುತ್ತಿದ್ದವು. ಹೃದಯ ಭೇದಕವಾದ ಬಿಕ್ಕುಗಳ ಮೂಲಕ ತನ್ನ ದುಃಖವನ್ನು ವ್ಯಕ್ತಪಡಿಸುತ್ತ ಹೆಂಡತಿಯ ಕೋಣೆಯಲ್ಲಿ ಪ್ರತಿಯೊಂದು ವಸ್ತುವನ್ನೂ ಅವಳ ಸಾವಿಗೆ ಮುಂಚೆ ಯಾವ ಸ್ಥಿತಿಯಲ್ಲಿ ಇಟ್ಟಿರುತ್ತಿತ್ತೋ ಅದೇ ಸ್ಥಿತಿಯಲ್ಲಿ ಇಡುತ್ತಿದ್ದ. ಪ್ರತಿದಿನವೂ ಹೆಂಡತಿಯ ಕೊಠಡಿಯಲ್ಲಿ ಒಬ್ಬನೇ ಬಾಗಿಲು ಹಾಕಿಕೊಂಡು ತನ್ನ ಸರ್ವಸ್ವವೂ ಆಗಿದ್ದ, ಅವನ ಬದುಕಿನ ಏಕಮಾತ್ರ ಆಧಾರವಾಗಿದ್ದ ಅವಳ ಬಗ್ಗೆಯೇ ಯೋಚಿಸುತ್ತಿದ್ದನು.

ಬಹು ಬೇಗನೆ ಅವನ ಜೀವನ ತೊಡಕಿನಲ್ಲಿ ಸಿಕ್ಕಿಕೊಂಡಿತು. ಕಾರಣ ಇದುವರೆಗೆ ಅವನ ಪತ್ನಿಯ ಕೈಯಲ್ಲಿರುತ್ತಿದ್ದ ಅವನ ಆದಾಯ ಮನೆಯ ಖರ್ಚುಗಳಿಗೆಲ್ಲ ಸಾಕಾಗುತ್ತಿತ್ತು. ಈಗ ಅದೇ ಆದಾಯ ತನ್ನೊಬ್ಬನ ಆವಶ್ಯಕತೆಗಳಿಗೂ ಸಾಕಾಗುತ್ತಿರಲಿಲ್ಲ. ತನ್ನ ಹೆಂಡತಿಗೆ ತನಗಾಗಿ ಅದು ಹೇಗೆ ದುಬಾರಿಯಾದ ಮತ್ತು ಅತ್ಯುತ್ತಮವಾದ ಮದ್ಯವನ್ನು ಕೊಳ್ಳಲು ಸಾಧ್ಯವಾಗುತ್ತಿತ್ತು ಎಂದು ಈಗ ಅವನಿಗೆ ಆಶ್ಚರ್ಯವಾಗುತ್ತಿತ್ತು.

ತನ್ನ ಸ್ವಂತಕ್ಕೆ ಬೇಕಾದ, ತುಟ್ಟಿಯಾದ ಮತ್ತು ಸುಂದರವಾದ ಇನ್ನೂ ಅನೇಕ ಇತರೆ ವಸ್ತುಗಳನ್ನು ತನ್ನ ಮಿತವಾದ ಆದಾಯದಲ್ಲಿ ಅವನಿಗೆ ಹೆಚ್ಚು ಕೊಳ್ಳಲಾಗುತ್ತಿರಲಿಲ್ಲ.

ಕೆಲವೇ ದಿನಗಳಲ್ಲಿ ತನ್ನ ಮೇಲೆ ಸಾಲವನ್ನು ಹೆಚ್ಚಿಸಿಕೊಂಡು ಬಡವನಾಗಿಬಿಟ್ಟನು. ಒಂದು ಬೆಳಿಗ್ಗೆ ತನ್ನ ಜೇಬಿನಲ್ಲಿ ಒಂದು ಕಾಸೂ ಇಲ್ಲ ಎಂಬುದು ತಿಳಿದುಬಂದಾಗ ಮನೆಯ ಕೆಲವು ಸಾಮಾನುಗಳನ್ನು ಮಾರಿಬಿಡಲು ತೀರ್ಮಾನಿಸಿದ. ಆಗ ತಕ್ಷಣ ಅನಾಯಾಸವಾಗಿ ಅವನಿಗೆ ತನ್ನ ಹೆಂಡತಿಯ ನಕಲಿ ಒಡವೆಗಳ ನೆನಪಾಯಿತು. ಅವಳು ಗತಿಸಿದ ಮೇಲೆ ಆ ಒಡವೆಗಳು ಅವನನ್ನು ಯಾವಾಗಲೂ ಪೀಡಿಸುತ್ತಿದ್ದವು. ಅವುಗಳನ್ನು ನೋಡಿದ ಕೂಡಲೇ ಅವನು ಕೆಲ ಕಾಲ ಗತಿಸಿದ ಹೆಂಡತಿಯನ್ನು ಮರೆತುಬಿಟ್ಟನು. ತನ್ನ ಜೀವನದ ಕೊನೆಯ ದಿನಗಳಲ್ಲಿ ಅವಳು ಒಂದೇ ಸಮನೆ ಮನಸೋ ಇಚ್ಛೆ ವ್ಯಾಪಾರ ಮಾಡುತ್ತಿದ್ದಳು. ದಿನವೂ ಮನೆಗೆ ಒಂದಲ್ಲ ಒಂದು ನಕಲಿ ಒಡವೆ ತರುತ್ತಿದ್ದಳು. ಎಲ್ಲಕ್ಕಿಂತ ಮೊದಲು ಅವಳು ಹೆಚ್ಚು ಇಷ್ಟಪಡುತ್ತಿದ್ದ ಆ ಭಾರೀ ಹಾರವನ್ನು ಮಾರಲು ನಿಶ್ಚಯಿಸಿದನು.

ಮಿಸ್ಟರ್ ಲೆಂಟಿನ್ನನ ನವ ಶಿಕ್ಷಿತನೊಬ್ಬನ ಪ್ರಕಾರ ಅದರ ಅಂದಾಜು ಬೆಲೆ ಹೆಚ್ಚೆಂದರೆ ಆರು ಅಥವಾ ಏಳು ಫ್ರಾಂಕ್ ಆಗಿತ್ತು. ಅವನು ಅದನ್ನು ತನ್ನ ಜೇಬಿನಲ್ಲಿ ಹಾಕಿಕೊಂಡು ವಜ್ರ ವ್ಯಾಪಾರಿಗಳ ಅಂಗಡಿಯನ್ನು ಹುಡುಕುತ್ತ ಹೊರಟ. ಅವನಿಗೆ ಮೊದಲಿಗೆ ಯಾವುದು ಸಿಕ್ಕಿತೋ ಆ ಅಂಗಡಿಗೇ ನುಗ್ಗಿದ. ತನ್ನ ಬಡತನವನ್ನು ಪ್ರದರ್ಶಿಸಬೇಕಾಗಿ ಬಂದದ್ದಕ್ಕೆ ಹಾಗೂ ತೀರ ಅಲ್ಪ ವಸ್ತುವನ್ನು ಮಾರಲು ಹೊರಟಿರುವುದಕ್ಕೆ ಸ್ವಲ್ಪ ದುಃಖವೂ ಆಯಿತು.

ಅಂಗಡಿಯವನೊಂದಿಗೆ– "ಸ್ವಾಮಿ ನನಗೆ ಇದರ ಬೆಲೆ ತಿಳಿದುಕೊಳ್ಳಲು ಆಸೆ" ಎಂದನು. ಆ ಅಂಗಡಿಯವನು ಆ ಹಾರ ಕೈಗೆತ್ತಿಕೊಂಡು ಅದನ್ನು ಪರೀಕ್ಷಿಸಿದ. ತನ್ನ ಕಡೆಯ ಮನುಷ್ಯನೊಬ್ಬನನ್ನು ಕರೆದು ಮೆಲ್ಲಗೆ ಏನನ್ನೋ ಹೇಳಿ ಆನಂತರ ಹಾರವನ್ನು ಅವನ ಮುಂದೆ ಇಟ್ಟು ಸ್ವಲ್ಪ ಹಿಂದೆ ನಿಂತು ಅದರ ಹೊಳಪನ್ನು ಪರೀಕ್ಷಿಸತೊಡಗಿದ.

ಅವನು ಅಷ್ಟೊಂದು ಸೂಕ್ಷ್ಮವಾಗಿ ಪರೀಕ್ಷಿಸುತ್ತಿರುವುದು ನೋಡಿ ಲೆಂಟಿನ್ನನಿಗೆ ಸಿಟ್ಟು ಬಂತು. 'ನಿಜ, ಬಹುಶಃ ಇದಕ್ಕೇನೂ ಬೆಲೆ ಇಲ್ಲ ಅಂತ ನನಗೆ ಗೊತ್ತಿದೆ' ಎಂದು ಇನ್ನೇನು ಅವನಿಗೆ ಹೇಳಬೇಕೆಂದಿದ್ದ.

ಅಷ್ಟರಲ್ಲಿ ಆ ವಜ್ರದ ವ್ಯಾಪಾರಿಯು – "ಸ್ವಾಮಿ, ಇದರ ಬೆಲೆ 12 ಸಾವಿರದಿಂದ 15 ಸಾವಿರ ಫ್ರಾಂಕ್ ತನಕ ಇದೆ. ಆದರೆ ತಮಗೆ ಇದು ಎಲ್ಲಿಂದ ಬಂತು ಅಂತ ಹೇಳದ ಹೊರತು ನಾನು ಇದನ್ನು ಖರೀದಿಸಲು ಸಾಧ್ಯವಿಲ್ಲ"–ಎಂದನು. ಲೆಂಟಿನ್

ದಿಗ್ಭ್ರಮೆಯಿಂದ ಕಣ್ಣರಳಿಸಿದನು. ಅವನು ಸುಮ್ಮನಿದ್ದ. ಅವನಿಗೆ ವಜ್ರದ ವ್ಯಾಪಾರಿಯ ಮಾತೊಂದೂ ಅರ್ಥವಾಗುತ್ತಿರಲಿಲ್ಲ. ಆವೇಶದಿಂದ–"ನೀವು ಹೇಳಿದ್ದೆಲ್ಲ ಸರಿ ಅಂತ ನಿಮಗೆ ಗೊತ್ತ?" ಎಂದು ಕೇಳಿದ.

ವಜ್ರದ ವ್ಯಾಪಾರಿ ನೀರಸವಾಗಿ ಹೇಳಿದ– "ನೀವು ಬೇರೆ ಕಡೇನೂ ಪರೀಕ್ಷೆ ಮಾಡಿಸಬಹುದು. ನೋಡಿ ನಿಮಗೆ ಯಾರಾದರೂ ಇದಕ್ಕಿಂತಲೂ ಹೆಚ್ಚಿನ ಬೆಲೆ ಕೊಡಬಹುದು. ನನ್ನ ತಿಳುವಳಿಕೆಯ ಪ್ರಕಾರ ಇದಕ್ಕೆ ತೀರಾ ಹೆಚ್ಚು ಅಂದರೆ 15 ಸಾವಿರ ಫ್ರಾಂಕ್. ಒಂದು ವೇಳೆ ಇದಕ್ಕಿಂತ ಒಳ್ಳೇ ಗಿರಾಕಿ ಸಿಕ್ಕಲಿಲ್ಲ ಅಂದರೆ ದಯವಿಟ್ಟು ನನ್ನ ಅಂಗಡಿಗೇ ಮತ್ತೆ ಬನ್ನಿ"– ಎಂದನು.

ಅತ್ಯಂತ ಆಶ್ಚರ್ಯದಿಂದ ಹಾರ ಕೈಗೆತ್ತಿಕೊಂಡು ಅಂಗಡಿಯಿಂದ ಹೊರಬಂದನು. ವಿಚಾರ ಮಾಡಿ ನೋಡಲು ಅವನಿಗೆ ಅಲ್ಪ ಕಾಲಾವಕಾಶ ಬೇಕಿತ್ತು. ಅಂಗಡಿಯಿಂದ ಹೊರಬಂದು ಅವನಿಗೆ ಒಂದು ಸಲ ಜೋರಾಗಿ ನಗಬೇಕೆನ್ನಿಸಿತು. ತನ್ನಲ್ಲಿಯೇ ಅಂದುಕೊಂಡ–"ಮೂರ್ಖ! ಅವನು ಹೇಳಿದಷ್ಟಕ್ಕೇ ಎಲ್ಲಾ ನಂಬಿಬಿಡಲೆ?. ಈ ವಜ್ರದ ವ್ಯಾಪಾರಿಗೆ ಅಸಲಿ ಯಾವುದು ನಕಲಿ ಯಾವುದು ಅಂತ ಪತ್ತೆ ಹಚ್ಚುವಷ್ಟು ಬುದ್ಧಿನೇ ಇಲ್ಲ".

ಕೆಲವು ನಿಮಿಷಗಳ ನಂತರ ಇನ್ನೊಂದು ಅಂಗಡಿಗೆ ನುಗ್ಗಿದ. ಆ ಅಂಗಡಿಯವನು ಅದರ ಮೇಲೆ ಕಣ್ಣು ಹಾಯಿಸುತ್ತಿದ್ದ ಹಾಗೇ ಹೆಚ್ಚು ಕಡಮೆ ಜೋರಾಗಿ ಕಿರುಚಿದ– "ನಾನು ಇದನ್ನು ಚೆನ್ನಾಗಿ ಗುರುತಿಸಬಲ್ಲೆ. ಇದನ್ನು ಇಲ್ಲಿಂದಲೇ ಖರೀದಿಸಲಾಗಿತ್ತು."

ಲೆಂಟಿನ್ ಹತಪ್ರಭನಾದ.. ಕೇಳಿದ– "ಇದರ ಬೆಲೆ ಏನಿರಬಹುದು?"

"ನಾನು ಇದನ್ನು 20 ಸಾವಿರ ಫ್ರಾಂಕಿಗೆ ಮಾರಿದ್ದೆ. ನೀವು ಇದನ್ನು ಮಾರುತ್ತೀನಿ ಅಂತ ಹೇಳಿದರೆ ನಾನು ಪಕ್ಕಾ ರಸೀದಿ ಕೊಟ್ಟು 18 ಸಾವಿರ ಫ್ರಾಂಕ್‌ಗೆ ಕೊಂಡುಕೊಳ್ಳುತ್ತೀನಿ. ಇದು ನಿಮ್ಮ ಕೈಗೆ ಹೇಗೆ ಬಂತು?"

ಈಗಂತೂ ಲೆಂಟಿನ್ ಹೌಹಾರಿದ. ಅವನು ಹೇಗೋ ಏನೋ–"ಆದರೆ......ಆದರೆ ತಾವು ಇದನ್ನು ಸರಿಯಾಗಿ ನೋಡಿದಿರಾ? ನಾನು.....ನಾನು ಇದುವರೆಗೂ ಇದು ನಕಲೀದು ಅಂತ ಭಾವಿಸಿದ್ದೆ." ಹೇಳಿದ.

ವಜ್ರದ ವ್ಯಾಪಾರಿ ಕೇಳಿದ– "ತಮ್ಮ ಹೆಸರೇನು ಸ್ವಾಮಿ"

ಲೆಂಟಿನ್. ಗೃಹ ಇಲಾಖೆಯ ಕಛೇರಿಯಲ್ಲಿ ಕೆಲಸ ಮಾಡ್ತಿದ್ದೀನಿ. ನಂ 16, ರೂ–ಡೆ–ಮಾರ್ಟೆಯರ್‌ನಲ್ಲಿ ವಾಸ ಮಾಡುತ್ತಿದ್ದೀನಿ"

ವ್ಯಾಪಾರಿ ತನ್ನ ಹಳೆಯ ಲೆಕ್ಕದ ಪುಸ್ತಗಳನ್ನು ನೋಡಿ ಹೇಳಿದ– "ಈ ಹಾರವನ್ನು ಮೇಡಮ್ ಲೆಂಟಿನ್‌ಗೆ ನೀವು ಹೇಳಿದ ವಿಳಾಸಕ್ಕೆ 20 ಜುಲೈ 1876ರಂದು ಕಳಿಸಿಕೊಡಲಾಗಿತ್ತು"

ಇಬ್ಬರೂ ಸಂಶಯದಿಂದ ಒಬ್ಬರ ಕಣ್ಣಿನಲ್ಲಿ ಮತ್ತೊಬ್ಬರು ಕಣ್ಣಿಟ್ಟು ನೋಡಿದರು. ಆ ವಿಧುರ ಮೂಕ ವಿಸ್ಮಿತನಾದ. ಅಂಗಡಿಯವನಿಗೆ ಎದುರುಗಡೆ ನಿಂತಿರುವ ವ್ಯಕ್ತಿಯಲ್ಲಿ ಕಳ್ಳ ಕಾಣೀಸುತ್ತಿದ್ದ. ಕೊನೆಗೆ ಅಂಗಡಿಯವನೇ ಈ ಮೌನ ಮುರಿದು– "24 ಗಂಟೆಗಳ ತನಕ ಈ ಹಾರವನ್ನು ಇಲ್ಲಿ ಬಿಟ್ಟಿರಬಲ್ಲಿರಾ. ಇದರ ಪಕ್ಕಾ ರಸೀದಿ ನಾನು ನಿಮಗೆ ಕೊಡುತ್ತೀನಿ" ಎಂದ.

"ಅದಕ್ಕೇನಂತೆ" ಎಂದು ಲೆಂಟಿನ್ ತಡೆತಡೆದು ಹೇಳಿದ. ಆ ನಂತರ ಅವನು ಆ ರಸೀತಿಯನ್ನು ತನ್ನ ಜೇಬಿನಲ್ಲಿಟ್ಟುಕೊಂಡು ಅಂಗಡಿಯಿಂದ ಹೊರನಡೆದ. ರಸ್ತೆಯಲ್ಲಿ ಉದ್ದೇಶರಹಿತವಾಗಿ ಸುಮ್ಮನೆ ತಿರುಗಾಡುತ್ತ ಇದ್ದ. ಅವನ ಮನಃಸ್ಥಿತಿ ತೀರ ದ್ವಂದ್ವದಲ್ಲಿತ್ತು. ನನ್ನ ಹೆಂಡತಿ ಇಷ್ಟೊಂದು ಬೆಲೆಬಾಳುವಂಥ ಹಾರ ಖರೀದಿಸುವ ಸಾಹಸ ಮಾಡುವ ಸ್ಥಿತಿಯಲ್ಲಿರಲಿಲ್ಲ. ಯಾವತ್ತೂ ಇರಲಿಲ್ಲ. ಇದು ಖಂಡಿತವಾಗಿಯೂ ಯಾರಿಂದಲೋ ಗಿಫ್ಟ್ ಆಗಿಯೇ ಬಂದಿದ್ದಿರಬೇಕು. ಒಂದು ಗಿಫ್ಟ್, ಆದರೆ ಯಾರ ಕಡೆಯ ಗಿಫ್ಟ್? ಅವಳಿಗೆ ಇದನ್ನು ಯಾಕೆ ಕೊಟ್ಟರು?

ಅವನು ರಸ್ತೆಯಲ್ಲೇ ಅದೂ ರಸ್ತೆ ಮಧ್ಯದಲ್ಲೇ ನಿಂತುಬಿಟ್ಟ. ಒಂದು ಭಯಂಕರ ಸಂದೇಹ ಅವನ ಮನಸ್ಸಿನಲ್ಲಿ ನುಸುಳಿತು. ಅವು.... ಬಾಕಿ ಇತರೆ ಒಡವೆಗಳು, ಬೆಲೆಬಾಳುವ ಹರಳುಗಳು ಎಲ್ಲವೂ ಉಡುಗೊರೆಯಾಗಿ ಬಂದಿರಬಹುದು. ಅವನ ಕಾಲ ಕೆಳಗಿನ ನೆಲ ಕುಸಿಯುತ್ತಿರುವಂತೆ ಅನಿಸಿತು. ಎದುರುಗಡೆ ಕಾಣ್ತಾ ಇರೋ ಮರ ಬೀಳ್ತಾ ಇದೆ ಅನ್ನಿಸಿತು. ತನ್ನ ಕೈಗಳನ್ನು ಚಾಚಿಕೊಂಡು ಅವನು ಮೂರ್ಛೆಹೋಗಿ ನೆಲದ ಮೇಲೆ ಬಿದ್ದ.

ಔಷಧಿಯ ಷಾಪ್‌ನಲ್ಲಿ ಅವನ ಮೂರ್ಛೆ ತಿಳಿಯಿತು. ದಾರಿಯಲ್ಲಿ ಹೋಗುವವರು ಅವನನ್ನು ಅಲ್ಲಿಗೆ ಕರೆತಂದಿದ್ದರು. ಆ ನಂತರ ಅವನ ಮನಗೆ ಅವನನ್ನು ತಲುಪಿಸಿದರು. ಮನೆಗೆ ಬಂದ ಮೇಲೆ ಒಬ್ಬನೇ ಬಾಗಿಲು ಬಂದ್ ಮಾಡಿಕೊಂಡು ತನ್ನ ರೂಮಿನಲ್ಲಿದ್ದ. ರಾತ್ರಿಯ ತನಕ ಮನಃಪೂರ್ತಿ ಅತ್ತ. ಆಯಾಸ ಮತ್ತು ಮನಸ್ಸಿನ ಟೆನ್ಷನ್‌ನಿಂದ ಕುಸಿದುಹೋದಂತಾಗಿ ಹಾಸಿಗೆಯ ಮೇಲೆ ಹೋಗಿ ಬಿದ್ದುಕೊಂಡ. ಅಶಾಂತಿಯಿಂದ ಮಗ್ಗುಲು ಬದಲಿಸುತ್ತ ಒಂದು ರಾತ್ರಿ ಕಳೆದ.

ಮರುದಿನ ಎದ್ದು ಆಫೀಸಿಗೆ ಹೋಗಲು ಸಿದ್ಧನಾದ. ಆದರೆ ಇಷ್ಟೆಲ್ಲಾ ಶೋಕದ ಬಳಿಕ ಕೆಲಸಮಾಡುವುದು ಕಷ್ಟವೇ ಆಗಿತ್ತು. ಹಾಗಾಗಿ ಆಫೀಸಿಗೆ ರಜಾ ಚೀಟಿ ಕಳಿಸಿದ. ಆಮೇಲೆ ತಾನು ವಜ್ರದ ವ್ಯಾಪಾರಿಯ ಅಂಗಡಿಗೆ ಹೋಗಬೇಕಾಗಿದೆಯೆಂಬುದು ನೆನಪಾಯಿತು. ಮೊದಲಿಗೆ ಈ ವಿಚಾರ ಸರಿಯೆಂದೇ ಅನಿಸಲಿಲ್ಲ. ಆದರೆ ಆ ಮ,ನುಷ್ಯನ ಹತ್ತಿರ ಆ ಹಾರವನ್ನು ಬಿಟ್ಟುಬಿಡಲು ಸಾಧ್ಯವಿರಲಿಲ್ಲ. ಹಾಗಾಗಿ ಬಟ್ಟೆ ಧರಿಸಿಕೊಂಡು ಮನೆಯಿಂದ ಹೊರ ಹೊರಟನು.

ಅದೊಂದು ಸಂತಸದ ದಿನವಾಗಿತ್ತು. ಆ ಕಾರ್ಯಮಗ್ನ ನಗರದ ಮೇಲೆ ನೀಲಿ ಮೋಡಗಳು ನಿಧ ನಿಧಾನವಾಗಿ ತೇಲುತ್ತಿದ್ದವು. ಸೋಂಬೇರಿ ಜನ ಜೇಬುಗಳಲ್ಲಿ ಕೈ ಹಾಕಿಕೊಂಡು ಅತ್ತಿಂದಿತ್ತ ಅಡ್ಡಾಡುತ್ತಿದ್ದರು. ಅವರನ್ನು ನೋಡಿ ಲೆಂಟಿನ್‌ಗೆ ದುಡ್ಡಿರುವ ಶ್ರೀಮಂತರು ನಿಜಕ್ಕೂ ತುಂಬ ಸುಖಿಗಳು ಎಂದು ಎನಿಸಿತು. ಹಣವು ಭಾರಿ ಭಾರಿ ದುಃಖವನ್ನೂ ಮರೆಸಬಲ್ಲುದು.. ಯಾರು ಎಲ್ಲಿಗೆ ಇಷ್ಟ ಪಟ್ಟರೆ ಅಲ್ಲಿಗೆ ಹೋಗಬಹುದು. ಹೊರ ಪ್ರದೇಶಗಳ ಪ್ರವಾಸ, ದೇಶಾಟನೆ ಇವುಗಳು ಈ ದುಃಖಗಳನ್ನು ಹೋಗಲಾಡಿ ಸುವಲ್ಲಿ ಎಲ್ಲಕ್ಕಿಂತ ಒಳ್ಳೆ ಔಷಧಿ. ಓಹ್! ನಾನೂ ಶ್ರೀಮಂತನಾಗಿದ್ದರೆ!

ಯಾಕೋ ಹಸಿವಾಗುತ್ತಿದೆ ಎನಿಸಿತು. ಆದರೆ ಜೇಬು ಖಾಲಿ. ಅವನಿಗೆ ಮತ್ತೊಮ್ಮೆ ಹಾರದ ನೆನಪಾಯಿತು. ಹದಿನೆಂಟು ಸಾವಿರ ಫ್ರಾಂಕ್, ಹದಿನೆಂಟು ಸಾವಿರ– "ಏನು ಅಷ್ಟು ಬೆಲೆ ಬಾಳುತ್ತ?" ಎಂದು ಅನಿಸಿತು.

ಬಹಳ ಬೇಗನೆ ಆ ವಜ್ರದ ವ್ಯಾಪಾರಿಯ ಅಂಗಡಿಯ ಮುಂದಕ್ಕೆ ಬಂದ. ಹದಿನೆಂಟು ಸಾವಿರ ಫ್ರಾಂಕ್. ಅವನು ಇಪ್ಪತ್ತು ಬಾರಿ ಒಳಗೆ ಹೋಗಬೇಕೆಂದುಕೊಂಡ. ಆದರೆ ಪ್ರತಿ ಬಾರಿಯೂ ಒಂದು ಬಗೆಯ ಹಿಂಜರಿಕೆ, ಆತ್ಮಗ್ಲಾನಿ ಅವನ ಕಾಲುಗಳನ್ನು ಹಿಡಿದಿಟ್ಟವು. ಅವನಿಗೆ ಹಸಿವಾಗಿತ್ತು, ಬಹಳಾನೇ ಹಸಿವಾಗಿತ್ತು. ಅವನ ಜೇಬಿನಲ್ಲಿ ಒಂದು ಸವಕಲು ಕಾಸೂ ಇರಲಿಲ್ಲ. ಕೂಡಲೇ ನಿಶ್ಚಯಿಸಿದ. ಸ್ವಲ್ಪ ತಡಮಾಡಿದರೂ ತನ್ನ ಮನಸ್ಸೇ ಎಲ್ಲಿ ಬದಲಾಗಿಬಿಡುತ್ತೋ ಎಂಬ ಭಯದ ಕಾರಣದಿಂದ ತಕ್ಷಣವೇ ಅಂಗಡಿಯೊಳಕ್ಕೆ ನುಗ್ಗಿದ.

ಅಂಗಡಿಯವನು ಬಿರುಸಾಗಿ ಹೆಜ್ಜೆ ಹಾಕುತ್ತ ಮುಂದೆಬಂದ. ಬಹಳ ಗೌರವದಿಂದ ಅವನಿಗೆ ಕುಳಿತುಕೊಳ್ಳಲು ಕುರ್ಚಿ ನೀಡಿದ. ಅಂಗಡಿಯ ನೌಕರರೂ ಪರಿಚಿತನೆಂಬಂತೆ ಅವನತ್ತ ನೋಡತೊಡಗಿದರು.

"ನಾನು ಪೂರ್ತಿ ಚೆನ್ನಾಗಿ ಪರೀಕ್ಷೆ ಮಾಡಿ ನೋಡಿದ್ದೀನಿ ಮಿಸ್ಟರ್ ಲೆಂಟಿನ್ ಸಾಹೇಬರೆ. ಈಗಲೂ ನೀವು ಈ ಹಾರವನ್ನು ಮಾರಬೇಕೆಂದಿದ್ದರೆ ನಾನು ಈಗಾಗಲೇ

ಕಟ್ಟಿರುವ ಇದರ ಬೆಲೆಯನ್ನು ಸಂತೋಷವಾಗಿ ನೀಡಲು ಸಿದ್ಧನಿದ್ದೇನೆ."– ಎಂದು ವ್ಯಾಪಾರಿ ಹೇಳಿದ.

"ಆಗಬಹುದು, ಆಬಗಹುದು." ಲೆಂಟಿನ್ ಕೂಡಲೇ ಉತ್ತರಿಸಿದ.

ವ್ಯಾಪಾರಿಯು ಮೇಜಿನ ಡ್ರಾದಿಂದ 18 ದೊಡ್ಡ ದೊಡ್ಡ ನೋಟುಗಳನ್ನು ಎಳೆದು ಎಚ್ಚರಿಕೆಯಿಂದ ಎಣಿಸಿ ಲೆಂಟಿನ್ ಕೈಯೊಳಗಿಟ್ಟನು. ಒಂದು ರಸೀದಿಯ ಮೇಲೆ ರುಜುಮಾಡಿ ಲೆಂಟಿನ್ ನಡುಗುವ ಕೈಗಳಿಂದ ನೋಟುಗಳನ್ನು ಜೇಬಿಗೆ ಸೇರಿಸಿದ.

ಇನ್ನೇನು ಅಂಗಡಿಯಿಂದ ಹೊರಡಬೇಕೆನ್ನುವಾಗ ಅವನು ವ್ಯಾಪಾರಿಯ ಕಡೆಗೆ ತಿರುಗಿನೋಡಿದರೆ ಆಗಲೂ ಅವನು ಇವನತ್ತ ಬಹಳ ಗೌರವ ಭಾವನೆಯಿಂದ ನೋಡುತ್ತಿದ್ದ. ಲೆಂಟಿನ್ ಕೆಳಗೆ ನೋಟ ಹರಿಸುತ್ತ– "ನನ್ನ ಹತ್ತಿರ ಇದೇ ಥರದ ಇನ್ನಷ್ಟು ರತ್ನಗಳು, ಬೆಲೆಬಾಳುವ ಹರಳುಗಳು, ಮತ್ತು ಒಡವೆಗಳಿವೆ. ಇವನ್ನೆಲ್ಲ ನಾನು ಹಾರವನ್ನು ಪಡೆದುಕೊಂಡ ಹಾಗೆಯೇ ಅದೇ ಸ್ಥಳದಲ್ಲಿ ಸಿಕ್ಕಿವೆ. ನೀವು ಅವುಗಳನ್ನೂ ಕೊಳ್ಳಲಿಚ್ಚಿಸುತ್ತೀರಾ?" ಎಂದು ಕೇಳಿದ.

ವ್ಯಾಪಾರಿ ಬಹಳ ಗೌರವದಿಂದ ತಲೆ ಬಾಗಿ ಗಂಭೀರವಾಗಿ ಹೇಳಿದ– "ಖಂಡಿತಾ ಸಾಹೇಬರೆ". ಲೆಂಟಿನ್ ಗಟ್ಟಿಯಾಗಿ– "ನಾನು ಅವೆಲ್ಲವನ್ನೂ ನಿಮ್ಮ ಹತ್ತಿರಕ್ಕೇ ತರುತ್ತೀನಿ." ಎಂದನು.

ಒಂದು ಗಂಟೆಯ ನಂತರ ಎಲ್ಲ ಒಡವೆಗಳೊಂದಿಗೆ ಅಂಗಡಿಗೆ ಹಿಂತಿರುಗಿದ.

ದೊಡ್ಡ ವಜ್ರಗಳ ಕಿವಿಯ ಆಭರಣ– 20 ಸಾವಿರ ಫ್ರಾಂಕ್

ಬಳೆಗಳು 35 ಸಾವಿರ ಫ್ರಾಂಕ್

ಉಂಗುರಗಳು 16 ಸಾವಿರ ಫ್ರಾಂಕ್

ಒಂದು ಜೊತೆ ನೀಲಮ್ ಹರಳು ಮತ್ತು ಪದಕ 14 ಸಾವಿರ ಫ್ರಾಂಕ್

ಲಾಕೆಟ್ ಇರುವ ಚಿನ್ನದ ಸರ 4ಸಾವಿರ ಫ್ರಾಂಕ್

ಎಲ್ಲ ಒಟ್ಟು ಬೆಲೆ ಒಂದು ನೂರಾ ಮೂವತ್ತೈದು ಸಾವಿರ ಫ್ರಾಂಕ್

ವ್ಯಾಪಾರಿಯು ತಮಾಷೆ ಮಾಡುತ್ತ ಹೇಳಿದ– "ಒಬ್ಬ ಮನುಷ್ಯ ಇದ್ದ. ಅವನು ಬೆಲೆಬಾಳುವ ಹರಳುಗಳನ್ನು ಕೊಳ್ಳುವುದರಲ್ಲೇ ತನ್ನ ಸಂಪತ್ತನ್ನೆಲ್ಲಾ ವ್ಯಯಿಸುತ್ತಿದ್ದ."

ಮಿಸ್ಟರ್ ಲೆಂಟಿನ್ ಗಂಭೀರವಾದ ದನಿಯಲ್ಲಿ ಹೇಳಿದ– "ತನ್ನ ಹಣವನ್ನು ಖರ್ಚು ಮಾಡುವ ಒಂದು ಸುಂದರ ವಿಧಾನ ಇದು."

ಆ ದಿನ ಅವನು ಫ್ರಾಂಸಿನ ಒಂದು ದುಬಾರಿ ಹೋಟೆಲ್ 'ವೋಯಸೀನ್'ನಲ್ಲಿ ಊಟ ಮಾಡಿದ. 20 ಫ್ರಾಂಕ್‌ಗಳ ಅತ್ಯಂತ ದುಬಾರಿ ಬಾಟಲ್ ಮದ್ಯ ಸೇವಿಸಿದ. ಆ

ನಂತರ ಬಾಡಿಗೆಗೆ ಒಂದು ಕೋಚ್ ಗೊತ್ತುಮಾಡಿಕೊಂಡು ಇಡೀ ನಗರವನ್ನು ಒಂದು ಸುತ್ತುಹಾಕಿದ. ಯಾವುದೋ ಒಂದು ತಿರುವಿನಲ್ಲಿ ಹೋಗುತ್ತಿದ್ದಾಗ ಹತ್ತಿರ ನಡೆದುಹೋಗುತ್ತಿರುವ ಪಾದಚಾರಿಗಳತ್ತ ಕಣ್ಣು ಹಾಯಿಸದೆ ಇರಲು ಸಾಧ್ಯವಿಲ್ಲ. "ನಾನೂ ಈಗ ಒಬ್ಬ ಶ್ರೀಮಂತ. ಸದ್ಯ ಈಗ ನಾನು ಎರಡು ನೂರು ಸಾವಿರ ಫ್ರಾಂಕ್‌ಗಳ ಒಡೆಯ"

ಇದ್ದಕ್ಕಿದ್ದಂತೆ ಅವನಿಗೆ ತನ್ನ ಉದ್ಯೋಗ ಮತ್ತು ಯಜಮಾನನ ವಿಚಾರ ಸುಳಿಯಿತು. ಕಛೇರಿಯವರೆಗೆ ಬಂದನು. ನಿರ್ಭೀತಿಯಿಂದ ಒಳನುಗ್ಗಿ ಹೇಳಿದ– "ನನ್ನ ಕೆಲಸಕ್ಕೆ ರಾಜೀನಾಮೆ ನೀಡಲು ಬಂದಿದ್ದೇನೆ. ನನಗೆ ಈಗತಾನೆ ಮೂರು ನೂರು ಸಾವಿರ ಜಹಗೀರು ದೊರೆತಿದೆ." ತನ್ನ ಹಳೆಯ ಮಿತ್ರರೊಂದಿಗೆ ಕೈಕುಲುಕಿದ. ಕೆಲವು ಸ್ನೇಹಿತರಿಗೆ ತನ್ನ ಮುಂದಿನ ಯೋಜನೆಗಳ ಬಗ್ಗೆ ತಿಳಿಸಿದ. ಅದರ ನಂತರ ರಾತ್ರಿಯ ಊಟಕ್ಕಾಗಿ 'ಎಗ್ಲೆಸ್' ಕೆಫೆಗೆ ಹೊರಟನು.

ಒಬ್ಬ ಸುಸಂಸ್ಕೃತನಂತೆ ಕಾಣುವ ಮನುಷ್ಯನ ಪಕ್ಕದಲ್ಲಿ ಕುಳಿತಿದ್ದನು. ಊಟ ಮಾಡುವಾಗ ನಿಧಾನವಾಗಿ ಮೆಲ್ಲಗೆ ತನಗೆ ಈಗ ತಾನೆ ನಾಲ್ಕು ನೂರು ಸಾವಿರ ಫ್ರಾಂಕ್‌ಗಳ ಆಸ್ತಿ ದೊರೆತಿದೆ ಎಂದು ಹೇಳಿದನು. ಮೊದಲ ಬಾರಿಗೆ ಮಿಸ್ಟರ್ ಲೆಂಟಿನ್‌ಗೆ ತನ್ನ ಬದುಕಿನ ವಿಷಯಕ್ಕೆ, ಥಿಯೇಟರಿನ ವಿಷಯಕ್ಕೆ ಬೇಸರವೆನಿಸಲಿಲ್ಲ. ಉಳಿದ ರಾತ್ರಿಯನ್ನು ಹೀಗೆಯೇ ಭೋಗವಿಲಾಸಗಳಲ್ಲಿ ಕಳೆದನು.

ಆರು ತಿಂಗಳ ನಂತರ ಲೆಂಟಿನ್ ಎರಡನೇ ಮದುವೆ ಮಾಡಿಕೊಂಡನು. ಅವನ ಎರಡನೇ ಹೆಂಡತಿ ಕೂಡ ಅತ್ಯಂತ ಗುಣವಂತೆಯೂ ಸುಂದರಿಯೂ ಆಗಿದ್ದಳು. ಆದರೆ ಅವಳದು ಉಗ್ರ ಸ್ವಭಾವವಾಗಿತ್ತು. ಲೆಂಟಿನ್ನನ ಹಲವು ದುಃಖಗಳಿಗೆ ಅವಳು ಕಾರಣಳಾದಳು.

❖

ಹರಾಕಿರಿ

ಜಪಾನಿ : ಹೆನ್ರಿ ಸ್ಕಾಟ್ ಸ್ಟೋಕ್ಸ್

ಮಶಿತಾ ಅತ್ಯಂತ ಲಕ್ಷ್ಯಪೂರ್ವಕವಾಗಿ ಕತ್ತಿಯನ್ನು ನೋಡುತ್ತಾ ಹೇಳಿದರು– "ನೀವು ಈ ಕತ್ತಿಯನ್ನು ಏಕೆ ಇಟ್ಟುಕೊಂಡಿದ್ದೀರಿ ಎಂದು ಹೇಳುತ್ತೀರಾ?" ಮಿಶಿಮಾ ಹೇಳಿದರು– "ಕತ್ತಿ ಇಟ್ಟುಕೊಳ್ಳುವುದು ತುಂಬ ಉಚಿತ. ಇದೊಂದು ಅತ್ಯಂತ ಪ್ರಾಚೀನ ಮಿಲಿಟರಿ ಕತ್ತಿ. ನನ್ನ ಹತ್ತಿರ ಈ ಅಪರೂಪದ ಕತ್ತಿಯ ಬಗ್ಗೆ ಒಂದು ಪ್ರಮಾಣಪತ್ರ ಕೂಡ ಇದೆ. ನೀವು ಅದನ್ನು ನೋಡೋಕೆ ಇಷ್ಟಪಡುತ್ತೀರೇನು?"

ಜನರಲ್ ಹೇಳಿದರು–"ಖಂಡಿತಾ".

"ಮೊದಲು ಇದನ್ನು ಹೊರಕ್ಕೆ ತೆಗೀಬೇಕು ತಾಳಿ" ಎಂದು ಹೇಳಿ ಮಿಶಿಮಾ ಮೇಲೆದ್ದು ಕತ್ತಿಯನ್ನು ಕೈಗೆತ್ತಿಕೊಂಡರು. ಆಮೇಲೆ ತನ್ನ ನುರಿತ ಕೈಗಳಿಂದ ಕತ್ತಿಯನ್ನು ಒರೆಯಿಂದ ಹೊರಸೆಳೆದು ಹೊಳೆಯುವ ಕತ್ತಿಯನ್ನು ಮೇಲೆತ್ತಿದರು.

ಮಿಶಿಮಾ ಮತ್ತು ಮಶಿತಾ ಇಬ್ಬರೂ ಕೆಲ ಕ್ಷಣ ಕತ್ತಿಯನ್ನು ಲಕ್ಷ್ಯವಿಟ್ಟು ನೋಡಿದರು.

"ಕೋಗಾ ಒಂದು ಕರ್ಚೀಫು ತಗೊಂಡು ಬಾ" – ಎಂದು ಮಿಶಿಮಾ ಛಿಬೀ ಕೋಗಾನಿಗೆ ಹೇಳಿದರು.

ಕುಳ್ಳನೆಯ ಆಕೃತಿಯ ವಿದ್ಯಾರ್ಥಿ ಕೋಗಾ ತಾನು ಕುಳಿತಿದ್ದ ಕುರ್ಚಿಯಿಂದ ಎದ್ದು ಮಿಶಿಮಾ ಮತ್ತು ಮಶಿತಾರ ಮೇಜುಗಳ ಹತ್ತಿರ ಬಂದು ನಿಂತ. ಅವನ ಕೈಯಲ್ಲಿ ಒಂದು ದಪ್ಪನಾದ ಟವಲ್ ಇತ್ತು. ಈ ಟವಲ್ಲೇ ಮಿಶಿಮಾ ತರಲು ಹೇಳಿದ ಕರ್ಚೀಪು ಆಗಿತ್ತು. ಇದನ್ನು ಛಿಬೀ ಕೋಗಾ ಜನರಲ್ ಮಶಿತಾರ ಬಾಯಿ ಮುಚ್ಚಲು ಬಳಸುವವನಿದ್ದ. ಈ ಕರ್ಚೀಪಿನಿಂದ ಹಿಂದುಗಡೆಯಿಂದ ಮಶಿತಾನ ಬಾಯನ್ನು ಅದುಮಿಬಿಡಬೇಕೆಂದು ಅವನಿಗೆ ಈ ಮುಂಚೆಯೇ ಆದೇಶ ನೀಡಲಾಗಿತ್ತು.

ಛಿಬೀ ಕೋಗಾ ಧರ್ಮಸಂಕಟದಲ್ಲಿ ಸಿಕ್ಕಿದ್ದ. ಅವನು ಇನ್ನೂ ಹೆಚ್ಚು ಹೊತ್ತು ನಿರೀಕ್ಷಿಸುವಂತಿರಲಿಲ್ಲ. ಕಾರಣ ಅವರು ಮೊದಲೇ ನಿಶ್ಚಯಿಸಿದ್ದ ಹಂಚಿಕೆಯಂತೆ ಹೀಗಾಗ ಕೂಡದು. ತಕ್ಷಣ ಏನಾದರೂ ಬದಲಿಯಾಗಿ ಮಾಡಲೂ ಅಸಮರ್ಥನಾಗಿದ್ದ.

ಬೇರೆ ಏನೂ ತೋಚದೆ ಇದ್ದಾಗ ಅವನು ಮಿಶಿಮಾರಿಗೆ ಟವಲ್ ಕೊಟ್ಟು ತನ್ನ ಕುರ್ಚಿಯಲ್ಲಿ ಕೂತುಬಿಟ್ಟ.

ಮಿಶಮಾ ತುಂಬಾ ಚೊಕ್ಕಟವಾಗಿ ಕತ್ತಿಯನ್ನು ಒರೆಸಿದರು. ಆಮೇಲೆ ಅದನ್ನೆತ್ತಿ ಅದರ ಅಲಗನ್ನು ಮೆಚ್ಚಿಗೆಯ ದೃಷ್ಟಿಯಿಂದ ನೋಡತೊಡಗಿದರು. ಅಲಗು ಒಂದು ಚೂರೂ ಮೊಂಡಾಗಿರಲಿಲ್ಲ.

ಮಶಿತಾ ಕತ್ತಿಯನ್ನು ಮಿಶಿಮಾನಿಗೆ ವಾಪಸ್ ಕೊಟ್ಟರು. ಇಬ್ಬರೂ ಕುಳಿತರು. ಆಗ ಹನ್ನೊಂದು ಗಂಟೆಯಾಗಿ ಐದು ನಿಮಿಷವಾಗಿತ್ತು.

ಛಿಬೀ ಕೋಗಾ ಇನ್ನೊಮ್ಮೆ ಎದ್ದು ಹತ್ತಿರ ಬಂದ. ಮಿಶಿಮಾ ಅವನಿಗೆ ಮೌನವಾಗಿ ಸೂಚನೆ ಕೊಟ್ಟರು.

ಛಿಬೀ ಕೋಗಾ ಒಂದು ಹೆಜ್ಜೆ ಮುಂದಿಟ್ಟು ಮಶಿತಾರ ಹಿಂದೆ ಹೋಗಿ ನಿಂತ. ಒಮ್ಮೆಲೇ ತನ್ನ ಕೈಗಳಿಂದ ಜನರಲ್ ಮಶಿತಾರ ಕುತ್ತಿಗೆ ಹಿಚುಕತೊಡಗಿದ.

ಛಿಬೀ ಕೊಗಾನ ಈ ಕಾರ್ಯತಂತ್ರ ಇತರೆ ವಿದ್ಯಾರ್ಥಿಗಳಿಗೆ ಕಾರ್ಯತತ್ಪರರಾಗಲು ಸೂಚನೆಯಾಗಿತ್ತು.

ಪುರೂ ಕೋಗಾ ಮತ್ತು ಸಣಕಲು ಶರೀರದ ಓಗಾವಾ ಇಬ್ಬರೂ ಛಿಬೀ ಕೋಗಾನ ಸಹಾಯಕ್ಕೆ ಧಾವಿಸಿದರು. ಅವರಿಬ್ಬರೂ ತಮ್ಮ ಜೇಬುಗಳಿಂದ ಹುರಿಗಳನ್ನೆಳೆದುಕೊಂಡು ಅವುಗಳಿಂದ ಮಶಿತಾರ ಕೈಕಾಲುಗಳನ್ನು ಕುರ್ಚಿಗೆ ಕಟ್ಟಿಬಿಟ್ಟರು.

ಮಿಶಿಮಾ ಕಛೇರಿಯ ನಡುವೆ ನಿಂತುಬಿಟ್ಟರು. ಅವರ ಕಣ್ಣುಗಳು ಕೆಂಪಾಗಿದ್ದುವು. ಕತ್ತಿಯನ್ನು ಮೇಲಕ್ಕೆ ಎತ್ತಿಹಿಡಿದಿದ್ದರು.

ಕೊಠಡಿಯಲ್ಲಿ ಒಂದು ಸಣ್ಣ ಕಂಡಿಯೂ ಇತ್ತು. ಅದರ ವಿಷಯ ಮಿಶಿಮಾ ಮತ್ತು ಸಂಗಡಿಗ ವಿದ್ಯಾರ್ಥಿಗಳಿಗೆ ಗೊತ್ತಿರಲಿಲ್ಲ. ಈ ಕಂಡಿ ಪ್ರವೇಶದ್ವಾರದ ಬಾಗಿಲಿನ ಎಡಗಡೆಯ ಕಿಟಕಿಯ ಗಾಜಿನ ಮರೆಯಲ್ಲಿತ್ತು. ಈ ಕಿಟಕಿಯ ಗಾಜು ಅಪಾರದರ್ಶಕವಾಗಿತ್ತು. ಈ ಕಂಡಿಯನ್ನು ಪಾರದರ್ಶಕವಾದ ಟೇಪಿನ ಚಿಕ್ಕ ಚೂರಿನಿಂದ ಮಾಡಲಾಗಿತ್ತು. ಇದರ ಮೂಲಕ ಮಶಿತಾರ ಕಛೇರಿಯ ಒಳಭಾಗವನ್ನು ಮಸಕು ಮಸಕಾಗಿ ನೋಡಬಹುದಿತ್ತು.

ಪಕ್ಕದ ಕಛೇರಿಯಿಂದ ಮೇಜರ್ ಸಾಕ್ಮೋತೋ ಹೊರಬಂದಿದ್ದ. ಆ ಕಂಡಿಯಿಂದ ಮಶಿತಾರನ್ನು ಕುರ್ಚಿಗೆ ಕಟ್ಟಿಹಾಕಿರುವುದು ಹಾಗೂ ಬಾಯಿಗೆ ಬಟ್ಟೆ ತುರುಕಿರುವುದು ಕಣ್ಣಿಗೆ ಬಿತ್ತು. ಕೂಡಲೇ ಒಳಗಡೆ ಏನೋ ಅನಾಹುತ ನಡೆದಿದೆ ಎಂದು ಗೊತ್ತಾಯಿತು. ಅವನು ಕರ್ನಲ್ ಹಾರಾನನ್ನು ಕರೆಯಲು ಓಡಿದನು.

ಒಬ್ಬೊಬ್ಬರಾಗಿ ಎಲ್ಲ ಅಧಿಕಾರಿಗಳೂ ಮಶಿತಾರನ್ನು ಕಂಡಿಯಿಂದ ಇಣುಕಿ ನೋಡಿದರು. ಅನಂತರ ಅವರೆಲ್ಲರೂ ಯಾಮಾಜಿಯ ಕಛೇರಿಯಲ್ಲಿ ಗುಂಪು ಸೇರಿದರು.

ಮಶಿತಾರ ಸಹಾಯಕ್ಕಾಗಿ ಈ ಅಧಿಕಾರಿಗಳು ಹಂಚಿಕೆ ಉಪಾಯ ಹುಡುಕುತ್ತಿದ್ದಾಗ ಅಲ್ಲಿಂದಲೇ ಬೇರೊಂದು ಬಾಗಿಲ ಕಡೆಗೆ ಸಾಗಿಸುತ್ತಿದ್ದ ಕುರ್ಚಿ ಮೇಜುಗಳ ಸದ್ದೂ ಒಂದೇ ಸಮನೆ ಕೇಳಿಸುತ್ತಿತ್ತು.

ಒಬ್ಬ ಅಧಿಕಾರಿ ಕೇಳಿದ– "ವಿಷಯವಾದರೂ ಏನು?" ಜನರಲ್ ಹೇಳಿದ– "ನಾವು ಇದರ ತಳಮುಟ್ಟ ಪರೀಕ್ಷೆಮಾಡಿ ಪತ್ತೆ ಹಚ್ಚುತ್ತೀವಿ"

ಮಿಶಿಮಾ ತನ್ನ ಎರಡನೇ ಯೋಜನೆಯನ್ನು ಜಾರಿಗೊಳಿಸುವ ಸಿದ್ಧತೆಯಲ್ಲಿ ತೊಡಗಿದ್ದರು. ಈಸ್ಟರ್ನ್ ಆರ್ಮಿ ಹೆಡ್ ಕ್ವಾರ್ಟರ್ಸ್‌ನಿಂದ ಒಂದು ಸಾವಿರ ಸೈನಿಕರನ್ನು ಕರೆಸುವಂತೆ ತಮ್ಮ ಜನರಿಗೆ ಆದೇಶ ನೀಡುವುದು ಜನರಲ್ ಅವರಿಗೆ ಅನಿವಾರ್ಯವೆನಿಸುವಂತೆ ಮಾಡಬೇಕೆಂಬುದು ಅವರ ಇರಾದೆಯಾಗಿತ್ತು. ಸೈನಿಕರು ಹೆಡ್ ಕ್ವಾರ್ಟರ್ಸ್‌ನ ಎದುರುಗಡೆ ಇರುವ ಮೈದಾನದಲ್ಲಿ ಸೇರಬೇಕೆಂಬುದು ಅವರ ಇಚ್ಛೆಯಾಗಿತ್ತು. ವಾಸ್ತವವಾಗಿ ಅವರು ಹೊರಗಡೆ ಬಾಲ್ಕನಿಯಲ್ಲಿ ನಿಂತು ದೇಶಭಕ್ತಿ ಕುರಿತು ಭಾಷಣ ಮಾಡಬೇಕೆಂದಿದ್ದರು. ಆದರೂ ಅವರ ಯೋಜನೆ ತಪ್ಪುತ್ತ ನಡೆದಿತ್ತು.

ಹನ್ನೊಂದೂ ಕಾಲರ ಸರಿಸುಮಾರಿಗೆ ಬಹಳಷ್ಟು ಜನರು ಮಶಿತಾರ ಕಛೇರಿಯ ಬಾಗಿಲನ್ನು ಬಡಿಯತೊಡಗಿದರು. "ಬಾಗಿಲು ತೆಗಿ" ಎಂದು ಅವರೆಲ್ಲ ಜೋರಾಗಿ ಕಿರುಚುತ್ತಾ ಇದ್ದರು.

ವಿದ್ಯಾರ್ಥಿಗಳಿಗೆ ತಮ್ಮ ಹಿಂದೆ ನಿಂತುಕೊಳ್ಳಲು ಹೇಳಿ ಸ್ವಯಂ ಮಿಶಿಮಾ ಅವರು ಬಾಗಿಲ ಕಡೆಗೆ ಧಾವಿಸಿದರು. ಕತ್ತಿ ಅವರ ಕೈಯಲ್ಲಿ ಹೇಗೂ ಇದ್ದೇ ಇತ್ತು. ಛಿಬೀ

ಕೋಗಾ ಮಶಿತಾರ ಪಕ್ಕದಲ್ಲಿ ಚಾಕು ಹಿಡಿದು ನಿಂತೇ ಇದ್ದ. ಮಿಶಿಮಾ ಕೋಗಾನಿಗೆ ಜನರಲ್ ಮಶಿತಾರ ಪಕ್ಕ ಬಿಟ್ಟು ಸರಿಯಕೂಡದೆಂದು ಆದೇಶ ನೀಡಿಬಿಟ್ಟಿದ್ದರು.

ಮಿಲಿಟರಿ ಅಧಿಕಾರಿಗಳು ತಮ್ಮ ಮುಷ್ಟಿಗಳಿಂದ ಬಾಗಿಲನ್ನು ಒಂದೇ ಸಮನೆ ಕುಟ್ಟುತ್ತಲೇ ಇದ್ದರು. "ಬಾಗಿಲು ತೆಗೀರಿ. ಒಳಗಡೆ ಏನಾಗುತ್ತಾ ಇದೆ. ತೆಗೀರಿ ಬಾಗಿಲು"– ಎಂದು ಜೋರಾಗಿ ಕೂಗುತ್ತಿದ್ದರು.

ಒಬ್ಬ ಬಾಗಿಲಿನ ಹ್ಯಾಂಡಲ್ ಅನ್ನು ತಿರುಗಿಸಿ ಜೋರಾಗಿ ಒದ್ದ. ಮೊದಲೇ ದುರ್ಬಲವಾಗಿದ್ದ ಬಾಗಿಲು ಕೂಡಲೇ ಬಿದ್ದುಬಿಟ್ಟಿತು. ಮೂರು ಜನ ಕರ್ನಲ್‌ಗಳು ಮತ್ತು ಇಬ್ಬರು ಮಾಸ್ಟರ್ ಸಾರ್ಜೆಂಟ್‌ಗಳು–ಒಟ್ಟು ಐದು ಜನ ಒಳಕ್ಕೆ ನುಗ್ಗಿದರು. ಕರ್ನಲ್ ಹಾರಾ ಇವರ ನೇತೃತ್ವ ವಹಿಸಿದ್ದ.

ಮಿಶಿಮಾ ಅವರಿಗೆ ಅಡ್ಡವಾಗಿ ನಿಂತರು. "ಹೊರಕ್ಕೆ ನಡೀರಿ"– ಎಂದು ಜೋರಾಗಿ ಕಿರುಚಿದರು.

ಅವರೆಲ್ಲರೂ ಮಿಶಿಮಾರ ತೀರ ಸಮೀಪದಲ್ಲಿದ್ದರು. ಅವರನ್ನು ಎದುರಿಸಲು ಹಿಂದೆಮುಂದೆ ನೋಡುತ್ತಿದ್ದರು. ಯಾರ ಹತ್ತಿರವೂ ಏನೊಂದು ಆಯುಧವೂ ಇರಲಿಲ್ಲ. ಆದರೆ ಕರ್ನಲ್ ನ ಹತ್ತಿರ ಮರದ ಒಂದು ಹಳೆಯ ಕತ್ತಿ ಇತ್ತು. ಅದನ್ನು ಅವನು ಹೊರಗೆ ಸೆಳೆದಿದ್ದ.

"ಹೊರಗೆ, ಹೊರಗೆ, ಹೊರಗೆ" ಎಂದು ಹೇಳುತ್ತಾ ಒಮ್ಮೆಲೇ ಮಿಶಿಮಾ ಅವರ ಮೇಲೆ ಆಕ್ರಮಣ ಮಾಡಿಬಿಟ್ಟರು. ಜೊತೆಗೆ ಅವರನ್ನು ಹೊಡೆಯತೊಡಗಿದರು.

ಒಬ್ಬ ಸಾರ್ಜೆಂಟ್ ಮುನ್ನುಗ್ಗಿ ಮಿಶಿಮಾರ ಮಣಿಕಟ್ಟಿನ ಮೇಲೆ ಹೊಡೆದ. ಆದರೆ ಅಂಗೈ ಮಣಿಕಟ್ಟನ್ನು ಕಡಿದುಹಾಕಬೇಕೆಂಬ ಅವನ ಉದ್ದೇಶ ಸಫಲವಾಗಲಿಲ್ಲ.

ಮಿಶಿಮಾ ಮತ್ತೆ ಜೋರಾಗಿ "ಹೊರಕ್ಕೆ ಹೊರಡಿ" ಎಂದು ಕಿರುಚಿದರು. ಅವರು ತೀವ್ರವಾದ ಹಿಂಸ್ರನೋಟದಿಂದ ಅವರೆಲ್ಲರನ್ನೂ ನೋಡಿದರು.

ಅವರು ಇನ್ನೊಬ್ಬ ಕರ್ನಲ್‌ನ ಭುಜಗಳು ಮತ್ತು ಬೆನ್ನಿನ ಮೇಲೆ ಮೂರು ಸಲ ಆಕ್ರಮಣ ಮಾಡಿದರು. ಆದಾಗ್ಯೂ ಕರ್ನಲ್ ಹಾರಾ ತಮ್ಮ ಮರದ ಕತ್ತಿಯಿಂದ ಆ ಹೊಡೆತಗಳನ್ನು ತಡೆದರು.

ಗಾಯಗೊಳ್ಳದೆ ಉಳಿದಿದ್ದ ಇಬ್ಬರು ವ್ಯಕ್ತಿಗಳಿಗೆ ಕೊಠಡಿಯ ಹೊರಗಿದ್ದ ವ್ಯಕ್ತಿಗಳು ಸಹಾಯ ಮಾಡಿದರು. ಮಿಶಿಮಾರ ಕತ್ತಿಯಿಂದ ಏಟು ತಿಂದವರ ಗಾಯಗಳಿಂದ ಬಹಳಷ್ಟು ರಕ್ತ ಸುರಿಯುತ್ತಿತ್ತು.

ಎರಡನೇ ಮೀಟಿಂಗ್‌ನ ಅನಂತರ ಜಾರಿಗೆ ಕೊಡಲಾದ ಸೂಚನೆಗಳಿಂದ ಎಲ್ಲ ಅಧಿಕಾರಿಗಳೂ ಉದ್ವೇಗಕ್ಕೆ ಒಳಗಾಗಿದ್ದರು ಹಾಗೂ ಏನು ಮಾಡಬೇಕೆಂದು ಸ್ಪಷ್ಟವಾಗಿ ಯೋಚಿಸಲಾರದಾಗಿದ್ದರು. ಇದ್ದಕ್ಕಿದ್ದಂತೆ ಬಂದೊದಗಿದ ಈ ಆಪತ್ತಿನಿಂದ ಪಾರಾಗುವುದು ಹೇಗೆ ಎಂಬ ಬಗ್ಗೆ ಅವರಾರಿಗೂ ಏನೂ ಹೊಳೆಯುತ್ತಿರಲಿಲ್ಲ. ಅವರಿಗೆ ಎಲ್ಲಕ್ಕಿಂತ ದೊಡ್ಡ ಚಿಂತೆ ಜನರಲ್ ಮಶಿತಾರ ಸುರಕ್ಷತೆಯದು. ಮಿಶಿಮಾ ಬಯಸುತ್ತಿದ್ದುದೇನು? ಈ ಪ್ರಶ್ನೆಯ ಮಹತ್ವವನ್ನರಿಯಲು ಸಮರ್ಥನಾದದ್ದರಿಂದ ಜನರಲ್ ಯಾಮಾಜಾಕಿ ಕೆಲವೊಂದು ಮೂರ್ಖ ಕೃತ್ಯಗಳಲ್ಲಿ ತೊಡಗಿದ. ಅವನು ಯಾವುದೇ ಯೋಜನೆ ಹಾಕದೆ, ಏನೂ ವಿಧ್ವಂಸಕ ಕೃತ್ಯಕ್ಕೆ ತೊಡಗದೆ ಆಯುಧವಿಲ್ಲದೆ ಬೇರೊಂದು ಪಕ್ಷ ರಚಿಸುವ ಯೋಚನೆ ಮಾಡಿದ. ತನಗೆ ಸಹಾಯ ಮಾಡಲು ಅವನು ಆರು ಮಂದಿ ಅಧಿಕಾರಿಗಳನ್ನು ಆಯ್ಕೆ ಮಾಡಿದ.

ಅಧಿಕಾರಿಗಳು ಉಪಪ್ರಧಾನರ ಕಛೇರಿಯ ಕಡೆಯಿಂದ ಮಶಿತಾರ ಕೊಠಡಿಯ ಬಾಗಿಲನ್ನು ಜಾಡಿಸಿ ಒದ್ದರು. ಯಾಮಾಜಾಕಿ ಎಲ್ಲ ಅಧಿಕಾರಿಗಳಿಗಿಂತ ಮುಂದೆ ಹೋಗಿ ಎಲ್ಲರಿಗಿಂತ ಮೊದಲು ಕೊಠಡಿಯನ್ನು ಪ್ರವೇಶಿಸಿದ.

ಕೂಡಲೇ ಅವನೆದುರು ಮಿಶಿಮಾ ಪ್ರತ್ಯಕ್ಷರಾಗಿ ನಿಂತರು. ಅವರ ಕೈಯಲ್ಲಿ ರಕ್ತಸಿಕ್ತ ಖಡ್ಗವಿತ್ತು. ಜನರಲ್ ಯಾಮಾಜಾಕಿ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ. ಮಿಶಿಮಾರ ಹಿಂದೆ ಕುರ್ಚಿಗೆ ಕಟ್ಟಿಹಾಕಿದ್ದ ಅವನ ಕಮಾಂಡಿಂಗ್ ಆಫೀಸರ ಮಶಿತಾ ಇದ್ದರು. ಅವರ ಬಲಗಡೆ ಛಿಬೀ ಕೋಗಾ ಕೈಯಲ್ಲಿ ಚಾಕು ಹಿಡಿದು ನಿಂತಿದ್ದ.

ಮಿಶಿಮಾರ ಹತ್ತಿರ ಅವರ ಮೂವರು ಶಿಷ್ಯರೂ ನಿಂತಿದ್ದರು. ಓಗವಾನ ಹತ್ತಿರ ಒಂದು ಕಪ್ಪನೆಯ ಲಾಠಿ ಇತ್ತು.

ಅವನ ಹಿಂದೆ ಘುರೂ ಕೋಗಾ ಇದ್ದ. ಅವನ ಕೈಯಲ್ಲಿ ಆಷ್ ಟ್ರೇ ಇತ್ತು. ಮಿಶಿಮಾ ಹತ್ತಿರವೇ ಚಾಕೂ ಹಿಡಿದು ಮೋರಿನಾ ಕೂಡ ನಿಂತಿದ್ದ.

ಯಾಮಾಜಾಕಿ ಇಂಥ ಒಂದು ದೃಶ್ಯದ ಕಲ್ಪನೆ ಕೂಡ ಮಾಡಿರಲಿಲ್ಲ.

ಮಿಶಿಮಾ ಸಹ, ಯಾಮಾಜಾಕಿಯ ಹಿಂದೆ ಅರ್ಧ ಡಜನ್ ಜನ ನಿಂತಿರುವುದನ್ನು ನೋಡಿದರು. ಅವನ ಹಿಂದೆ ಇನ್ನೆಷ್ಟು ಜನರಿರಬಹುದೆಂದು ಅವರು ಯೋಚಿಸ ತೊಡಗಿದರು. ಅವರು ತಮ್ಮ ಕತ್ತಿಯ ಬಲದಿಂದ ಯಾಮಾಜಾಕಿ ಮತ್ತು ಅವನ ಸಂಗಡಿಗರನ್ನು ನಿರ್ವಾಹವಿಲ್ಲದೆ ಒಂದು ಮೂಲೆಯಲ್ಲಿ ಮುದುರಿಕೊಂಡು ಒಟ್ಟಾಗಿ ನಿಲ್ಲುವಂತೆ ಮಾಡಿದರು.

ಮಿಶಿಮಾ ಕೂಗಿ ಹೇಳಿದರು–"ಸರಿ. ಈಗಂತೂ ನೀವು ನೋಡೇ ಇದ್ದೀರಿ. ಬೇಕಾದರೆ ಇನ್ನೂ ಸರಿಯಾಗಿ ನೋಡಿ. ನೀವುಗಳು ತಕ್ಷಣ ಇಲ್ಲಿಂದ ತೊಲಗದೆ ಇದ್ದರೆ ನಾನು ಜನರಲ್‌ನನ್ನು ಕೊಂದುಬಿಡ್ತೀನಿ."

ಯಾಮಾಜಾಕಿ ಮಿಶಿಮಾರ ಹಿಂದೆ ಇದ್ದ ತನ್ನ ಕಮಾಂಡಿಂಗ್ ಆಫೀಸರ್ ಅವರನ್ನು ನೋಡಿದ. ಆತನಿಗೆ ನೆರವಿನ ಆವಶ್ಯಕತೆ ಇತ್ತು.

ಮಿಶಿಮಾ ಪುನಃ ಚೀರಿ ಹೇಳಿದರು– "ನಾನು ಮತ್ತೆ ಹೇಳುತ್ತಾ ಇದ್ದೀನಿ. ಇಲ್ಲಿಂದ ಹೊರಟುಹೋಗಿ."

ಯಾಮಾಜಾಕಿ ಸಹ ಜೋರಾಗಿ ಕಿರುಚಿ ಹೇಳಿದ– "ಈ ಮೂರ್ಖತನ ಬಂದ್ ಮಾಡಿ ತೆಪ್ಪಗಾಗು"

"ನಡೀರಿ ಆಚೆ" ಮಿಶಿಮಾ ಇನ್ನೊಮ್ಮೆ ಜೋರಾಗಿ ಕೂಗಿ ಹೇಳಿದರು. ಅವರು ಕತ್ತಿಯ ಮೊನೆಯನ್ನು ಜನರಲ್ಲನ ಕುತ್ತಿಗೆಯ ಕಡೆಗೆ ಮಾಡಿಕೊಂಡು ಯಾಮಾಜಾಕಿಯ ಕಡೆಗೆ ನುಗ್ಗಿದರು.

ಯಾಮಾಜಾಕಿ ಹೇಳಿದ– "ಈ ಮೂರ್ಖತನ ನಿಲ್ಲಿಸು." ಮಿಶಿಮಾ ಕಿರುಚಿ ಹೇಳಿದರು–"ನೀನು ನನ್ನ ಮಾತಿಗೆ ಒಪ್ಪಲಿಲ್ಲ ಅಂದರೆ ನಾನು ನಿನ್ನ ಕಮಾಂಡಿಂಗ್ ಆಫೀಸರ್‌ನನ್ನು ಕೊಂದುಬಿಡುತ್ತೀನಿ."

ಸೇನೆಯ ಅಧಿಕಾರಿಗಳು ಮುಂದುವರಿಯುತ್ತಲೇ ಇದ್ದರು. ಮುಂದಿದ್ದ ಮನುಷ್ಯ ಕುರ್ಚಿ ಮೇಜುಗಳ ಅಡೆತಡೆಗಳ ಮೆಲೆ ಹತ್ತಿಬಿಟ್ಟರು. ಹಿಂದಿದ್ದವರೂ ಹತ್ತುವ ತಯಾರಿಯಲ್ಲಿದ್ದರು. ಮತ್ತೆ ಅಲ್ಲಿಯೂ ದಡಬಡ ಸದ್ದು ಮತ್ತು ಮುರಿದ ಗಾಜಿನ ಫಳ್ ಫಳ್ ಎಂಬ ಶಬ್ದ. ಜನಗಳು ಮಾರೀತಾನ ಕಛೇರಿ ಮತ್ತು ಹೊರಗಿನ ವರಾಂಡಾದ ನಡುವಿನ ಕಿಟಕಿಯ ಪಾರದರ್ಶಕ ಗಾಜನ್ನು ಒಡೆದು ಒಳಗೆ ಇಣುಕಿ ನೋಡತೊಡಗಿದರು.

ಮಿಶಿಮಾ ಒಮ್ಮೆಲೇ ಹಿಂದೆ ತಿರುಗಿದರು. ಕತ್ತಿಯನ್ನು ಚಲಾಯಿಸಲು ಅವರಿಗೆ ಜಾಗ ಬೇಕಿತ್ತು.

ಯಾಮಾಜಾಕಿ ಮತ್ತೆ ಹೇಳಿದ–"ನಿನ್ನಿಷ್ಟ ಏನು ಅನ್ನುವುದು ನಮಗಂತೂ ಬಿಲ್ಕುಲ್ ಗೊತ್ತಾಗ್ತಾ ಇಲ್ಲ.ನನಗೆ ಹೇಳು" ಇದು ಸಂಧಾನದ ಮಾತಾಗಿತ್ತು.

ಅವರುಗಳು ಯಾವುದೋ ಹೊಸ ಸಂಚು ಹೂಡುತ್ತಾ ಇರಬಹುದೆಂದು ಮಿಶಿಮಾಗೆ ಶಂಕೆಯಾಗತೊಡಗಿತು. ಯಾಮಾಜಾಕಿ ಸೇರಿದಂತೆ ಏಳೂ ಜನ ಸೈನಿಕ ಅಧಿಕಾರಿಗಳು ಮುಂದುವರಿಯುತ್ತಲೇ ಇದ್ದರು. ಮಿಶಿಮಾನೊಂದಿಗೆ ಕೇವಲ ಮೂವರಿದ್ದರು. ಛಿಬೀ ಕೋಗಾ, ಜನರಲ್ ಮಶಿತಾ ಹತ್ತಿರವೇ ಇರಬೇಕಾಗಿತ್ತು.

ಮಿಶಿಮಾ ಬೇಕಂತಲೇ ಯಾಮಾಜಾಕಿಯ ಕಡೆ ಸುಮ್ಮನೆ ಕತ್ತಿ ಚಲಾಯಿಸಿ ಹೇಳಿದರು– "ನಡೀರಿ ಆಚೆ"

ಯಾಮಾಜಾಕಿ ಮುಗ್ಗರಿಸಿದ. ಅವನ ಹಿಂದಿದ್ದ ಅಧಿಕಾರಿ ಅವನ ಸಹಾಯಕ್ಕೆ ಧಾವಿಸಿದ. ಉಳಿದವರೆಲ್ಲರೂ ಮುಂದಕ್ಕೆ ಹಾರಿದರು.

ಮುಂದಿದ್ದ ಮನುಷ್ಯ ಮೋರಿನಾನೊಂದಿಗೆ ಸೆಣಸುತ್ತಿದ್ದ. ಅವನ ಕೈಯಿಂದ ಚಾಕು ಕಿತ್ತುಕೊಳ್ಳಲು ಪ್ರಯತ್ನಿಸಿದ.

ಮೂರೂ ಜನ ಒಟ್ಟಾಗಿ ಒಮ್ಮೆಗೇ ಮಿಶಿಮಾರ ಮೇಲೆ ಮುಗಿಬಿದ್ದರು. ಮಿಶಿಮಾ ತನ್ನ ನಾಲ್ಕೂ ಕಡೆ ಎಡ, ಬಲ, ಹಿಂದೆ ಮುಂದೆ ಕತ್ತಿಯನ್ನು ಝಳಪಿಸುತ್ತ ಅವರುಗಳ ಕೈ, ಭುಜ ಮತ್ತು ಬೆನ್ನಿನ ಮೇಲೆ ಪ್ರಹಾರ ಮಾಡಿದರು.

ಮೂರೂ ಜನ ಕರ್ನಲ್‌ಗಳ ದೇಹಗಳು ರಕ್ತಸಿಕ್ತವಾದವು.

ಇತ್ತ ಮೋರೀನಾ ಕೈಯಿಂದ ಚಾಕು ಕಿತ್ತುಕೊಳ್ಳಲಾಯಿತು. ಮಿಶಿಮಾ ಅಧಿಕಾರಿಗಳಿಗೆ ಚೀರಿ ಹೇಳಿದರು– "ಹೊರಗೆ ಹೋಗಿ"

ಕತ್ತಿಯನ್ನು ಜನರಲ್ ಮಶಿತಾರ ಕುತ್ತಿಗೆಯ ಸಮೀಪಕ್ಕೆ ಕೊಂಡೊಯ್ದು ಹೇಳಿದರು– "ಹೊರಗೆ ನಡೀರಿ. ಇಲ್ಲದಿದ್ದರೆ ನಾನು ಜನರಲ್‌ರನ್ನು ಸಾಯಿಸಿಬಿಡ್ತೀನಿ".

ಯಾಮಾಜಾಕಿ ಹಾಗೂ ಅವನ ಕಡೆಯವರಿಗೆ, ಮಿಶಿಮಾ ನಿಜಕ್ಕೂ ಜನರಲ್‌ನನ್ನು ಕೊಂದುಬಿಡುತ್ತಾನೋ ಅಥವಾ ಬರಿ ಬೆದರಿಕೆ ಹಾಕುತ್ತಿದ್ದಾನೋ ಗೊತ್ತಾಗಲಿಲ್ಲ.

"ಹೊರಗೆ ನಡೀರಿ"– ಎಂದು ಮತ್ತೆ ಕಿರುಚುತ್ತಾ ತುಂಬಾ ಹತ್ತಿರಕ್ಕೆ ಬಂದರು. ಒಬ್ಬ ಕರ್ನಲ್‌ನತ್ತ ಕತ್ತಿಯನ್ನು ಚಲಾಯಿಸಿ ಅವನ ಕೈಗೆ ಸರಿಯಾಗಿ ಹೊಡೆದರು....... ಮಿಲಿಟರಿ ಜನರೆಲ್ಲಾ ಈ ಮಿಶಿಮಾನಿಗೆ ಬೇಕಾಗಿರುವುದಾದರೂ ಏನು ಎಂದು ಮೂಕವಿಸ್ಮಿತರಾದರು.

ಮಿಶಿಮಾ ಅವರುಗಳಿಗೆ ಹೆಚ್ಚು ಅವಕಾಶ ಕೊಡಲಿಲ್ಲ. ಕತ್ತಿಯಿಂದ ಅವರನ್ನು ಚುಚ್ಚಿ ಚುಚ್ಚಿ ಕಛೇರಿಯಿಂದ ಓಡಿಸಿಬಿಟ್ಟರು.

ಏಳೂ ಜನ ಹೊರಹೋಗುತ್ತಲೇ ಅವರ ಹಿಂದೆಯೇ ಬಾಗಿಲು ಮುಚ್ಚಿಕೊಂಡಿತು. ಎಲ್ಲರೂ ಉಪಪ್ರಧಾನನ ಸ್ಟಾಫ್ ರೂಮ್‌ಗೆ ಹೊರಟುಹೋದರು.

ಮಿಶಿಮಾನ ಕಡೆಯವರು ಕುರ್ಚಿ ಮೇಜುಗಳನ್ನು ಅತ್ತ ಇತ್ತ ಸರಿಸುವ ಸದ್ದು ಅವರಿಗೆ ಕೇಳಿಸಿತು.

ಯಾಮಾಜಾಕಿಗೆ ಅಂಥ ಗಂಭೀರ ಸ್ವರೂಪದ ಗಾಯವೇನೂ ಆಗದೆ ಇದ್ದರೂ ಅವನು ಈಗಲೋ ಆಗಲೋ ಎಚ್ಚರ ತಪ್ಪಬಹುದೆಂದು ತೋರಿತು. ವೈಸ್ ಕರ್ನಲ್

ಯೋಶಿಮಾಸ್ತು ಸೈನ್ಯದ ಕಮಾಂಡನ್ನು ತನ್ನ ಕೈಗೆ ತೆಗೆದುಕೊಂಡರು. ಅವರು ಮತ್ತೆ ಮೇಲಿನವರಿಂದ ಸೂಚನೆ ಪಡೆದು ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು.

ಈ ಮಧ್ಯೆ ಕಮಾಂಡಿಂಗ್ ಜನರಲ್‌ನ ಕಛೇರಿಯ ವರಾಂಡದ ಹೊರಗಡೆಯಿಂದ ಒಳಗೆ ನಡೆಯುತ್ತಿದ್ದ ವಿದ್ಯಮಾನಗಳನ್ನು ನೋಡಿ ಕರ್ನಲ್ ಈ ಕಡೆ ಹೊರಳಿದರು.

ಮುರಿದ ಕಿಟಕಿಯಿಂದ ಮಿಶಿಮಾರತ್ತ ನೋಡುತ್ತ ಕರ್ನಲ್ ಕೂಗಿ ಕೇಳದರು– "ನಿನ್ನ ಬೇಡಿಕೆ ಏನು?"

❖

ಅಂಜುಬುರುಕ

ಉರ್ದು : ಸಾದತ್ ಹಸನ್ ಮಂಟೋ

ಮೈದಾನ ಪೂರ್ತಿ ಸ್ವಚ್ಛವಾಗಿತ್ತು. ಆದರೆ ಜಾವೇದನ ಯೋಚನೆಯೆಂದರೆ ಮುನಿಸಿಪಾಲಿಟಿಯವರು ಗೋಡೆಗೆ ಹದ್ದಿದ್ದ ಲಾಂದ್ರ ತನ್ನನ್ನೇ ದುರುಗುಟ್ಟಿಕೊಂಡು ನೋಡುತ್ತಿದೆ ಎಂದು. ಅದೊಂದು ವಿಶಾಲವಾದ ಅಂಗಳ. ಅದರ ಮೇಲೆ ನಾನಕ್ ಕಾಲದ ಆಳ್ವಿಕೆಯ ಇಟ್ಟಿಗೆಗಳಿಂದ ತಗ್ಗು-ದಿಣ್ಣೆಗಳ ನೆಲಗಟ್ಟನ್ನು ನಿರ್ಮಿಸಲಾಗಿತ್ತು. ಅದು ಬೇರೆ ಕಟ್ಟಡಗಳಿಗಿಂತ ತೀರಾ ಬೇರೆಯದೇ ರೀತಿಯದಾಗಿದ್ದ ಕಟ್ಟಡವಾಗಿತ್ತು. ಜಾವೇದ್ ಅದನ್ನು ದಾಟಿ ತುದಿ ಉಳ್ಳ ಆ ಮನೆಯ ತನಕ ಹೋಗಬೇಕೆಂದು ಮತ್ತೆ ಮತ್ತೆ ನಿಶ್ಚಯಿಸುತ್ತಿದ್ದ. ಆದರೆ ಕೃತಕ ಕಣ್ಣಿನ ಹಾಗೆ ಅವನನ್ನು ಒಂದೇ ಸಮನೆ ನಿಟ್ಟಿಸಿ ನೋಡುತ್ತಿದ್ದ ಈ ಲಾಟೀನು(ದೀಪ) ಅವನ ನಿಶ್ಚಯವನ್ನು ಅಲ್ಲಾಡಿಸಿ ಬಿಡುತ್ತಿತ್ತು. ಅದರಿಂದ ಅವನು ಆ ದೊಡ್ಡ ಚರಂಡಿಯ ಇನ್ನೊಂದು ಬದಿಗೆ ಹೋಗಿಬಿಡುತ್ತಿದ್ದ. ಕೆಲವೇ ಹೆಜ್ಜೆಗಳಲ್ಲಿ ಅದನ್ನು ದಾಟಿ ಅಂಗಳವನ್ನು ತಲುಪಿ ಬಿಡಬಹುದಾಗಿತ್ತು.

ಜಾವೇದನ ಮನೆ ಈ ಸ್ಥಳದಿಂದ ಸಾಕಷ್ಟು ದೂರ ಇತ್ತು. ಆದರೆ ಬಹಳ ವೇಗವಾಗಿ ನಡೆದು ಈ ದೂರವನ್ನು ಕ್ರಮಿಸಿ ಅವನು ಅಲ್ಲಿಗೆ ಹೋಗಿಬಿಟ್ಟಿದ್ದ. ಅವನ ವಿಚಾರಗಳ ವೇಗ

ಅವನ ಹೆಜ್ಜೆಗಳ ವೇಗಕ್ಕಿಂತಲೂ ಹೆಚ್ಚಿತ್ತು. ದಾರಿಯಲ್ಲಿ ಅವನು ಬಹಳಷ್ಟು ವಸ್ತುಗಳನ್ನು ದಿಟ್ಟಿಸಿ ನೋಡಿದ. ಅವನು ಮೂರ್ಖನಲ್ಲ. ತಾನೊಬ್ಬ ವೇಶ್ಯೆಯ ಹತ್ತಿರಕ್ಕೆ ಹೋಗುತ್ತಿದ್ದೇನೆಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಯಾವ ಕಾರಣಕ್ಕೆ ತಾನು ಅವಳ ಬಳಿ ಹೋಗುತ್ತಿದ್ದೇನೆಂಬುದರ ಅರಿವೂ ಅವನಿಗೆ ಚೆನ್ನಾಗಿಯೇ ಇತ್ತು.

ಅವನಿಗೆ ಒಂದು ಹೆಣ್ಣು ಬೇಕಾಗಿತ್ತು. ಹೆಣ್ಣು ಅವಳು ಎಂಥವಳಾದರೂ ಸರಿ. ಅವನ ಜೀವನದಲ್ಲಿ ಹೆಣ್ಣಿನ ಅಗತ್ಯತೆ ಹೀಗೆ ಒಮ್ಮಿಂದೊಮ್ಮೆಗೇ ಹುಟ್ಟಿಕೊಂಡದ್ದಲ್ಲ. ಹೆಣ್ಣು ಬೇಕು ಎಂಬ ಈ ಬಯಕೆ ಒಂದು ಕಾಲದಿಂದಲೂ ಅವನ ಒಳಗಡೆಯೇ ನಿಧಾನವಾಗಿ ರೂಪುಗೊಂಡಿತ್ತು. ಅದು ವೇಗವನ್ನು ಪಡೆದುಕೊಳ್ಳುತ್ತಿತ್ತು. ಇನ್ನು ತಾನು ಹೆಣ್ಣಿಲ್ಲದೆ ಒಂದು ಕ್ಷಣವೂ ಬದುಕಿರಲಾರೆ ಎಂದು ಈಗ ಒಮ್ಮಿಂದೊಮ್ಮೆಗೇ ಅವನಿಗೆ ಅನ್ನಿಸಿಬಿಟ್ಟಿತು.

ಹೆಣ್ಣು ಅವನಿಗೆ ದೊರಕಲೇ ಬೇಕು. ಅದೂ ಎಂಥಾ ಹೆಣ್ಣು ಅಂದರೆ ತಾನು ಅವಳ ತೊಡೆಯ ಮೇಲೆ ನಿಧಾನವಾಗಿ ಒಂದು ಏಟು ಹೊಡೆದು ಅವಳ ದನಿ ಕೇಳಿಸಿಕೊಳ್ಳುವಂತಿರಬೇಕು. ಎಂಥಾ ಹೆಣ್ಣು ಅಂದರೆ ಕೆಟ್ಟ ಕೆಟ್ಟ ಮಾತುಗಳನ್ನು ತಾನು ಅವಳೊಂದಿಗೆ ಆಡಬಹುದಾದಂಥ ಹೆಣ್ಣು.

ಜಾವೇದ್ ಓದಿ ಬರೆದು ಮಾಡಿದ ತಿಳುವಳಿಕೆಯುಳ್ಳ ವ್ಯಕ್ತಿ. ಪ್ರತಿಯೊಂದು ಮಾತಿನ ಆಳ-ಅಗಲ ಬಲ್ಲಂಥವನು. ಆದರೆ ಈ ವಿಷಯದಲ್ಲಿ ಇನ್ನಷ್ಟು ಯೋಚನೆ ಗೀಚನೆ ಮಾಡಲು ಸಿದ್ಧನಿರಲಿಲ್ಲ. ಅವನ ಮನಸ್ಸಿನಲ್ಲಿ ಹುಟ್ಟಿದ ಬಯಕೆ ಹೊಸದೇನಾಗಿರಲಿಲ್ಲ.

ಇದಕ್ಕೂ ಮುಂಚೆ ಅನೇಕ ಸಲ ಈ ಆಸೆ ಅವನ ಮನಸ್ಸಿನಲ್ಲಿ ಹುಟ್ಟಿತ್ತು. ಈ ಇಚ್ಛೆಯನ್ನು ಈಡೇರಿಸಿಕೊಳ್ಳುವ ಸಲುವಾಗಿ ಬಹಳಷ್ಟು ಪ್ರಯತ್ನಗಳ ನಂತರವೂ ಸಫಲನಾಗದೆ ಇದ್ದಾಗ ತನ್ನ ಜೀವನದಲ್ಲಿ ಪೂರ್ತಿ ಹೆಣ್ಣು ಯಾವತ್ತೂ ಬರುವುದಿಲ್ಲ ಎಂಬ ತೀರ್ಮಾನಕ್ಕೆ ಬಂದುಬಿಟ್ಟ. ಒಂದು ವೇಳೆ ಅಂಥ ಪೂರ್ತಿ ಹೆಣ್ಣನ್ನು ಹುಡುಕುತ್ತಾ ಹೋದರೆ ಒಂದಲ್ಲ ಒಂದು ದಿನ ಹುಚ್ಚು ನಾಯಿಯ ಹಾಗೆ ಅವನು ದಾರಿಯಲ್ಲಿ ಹೋಗುತ್ತಾ ಇರೋ ಯಾವುದೋ ಹೆಣ್ಣನ್ನು ಕಚ್ಚಿಬಿಡುತ್ತಿದ್ದ.

ಕಚ್ಚಿಬಿಡುವ ಹಂತದ ವರೆಗೆ ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವಲ್ಲಿ ಸಫಲನಾಗದೆ ಇದ್ದಾಗ ಈಗ ಇದ್ದಕ್ಕಿದ್ದಂತೆ ಅವನ ಮನಸ್ಸಿನಲ್ಲಿ ಈ ಬಯಕೆ ಹೊಸ ತಿರುವು ಪಡೆದುಕೊಂಡಿತ್ತು. ಈಗ ಯಾವುದೇ ಹೆಣ್ಣಿನ ತಲೆಕೂದಲುಗಳನ್ನು ತನ್ನ ಕೈ ಬೆರಳಿನಿಂದ ಬಾಚುವ ಆಲೋಚನೆ ಅವನ ಮನಸ್ಸಿನಿಂದ ಹಾರಿಹೋಗಿತ್ತು. ಅವನ ಮನಸ್ಸಿನಲ್ಲಿ

ಈಗ ಹೆಣ್ಣಿನ ಒಂದು ಚಿತ್ರ ಮೂಡಿತ್ತು. ಅದರಲ್ಲಿ ಆ ಹೆಣ್ಣಿನ ಕೂದಲುಗಳನ್ನು ಅಸಭ್ಯನಂತೆ ಎಳೆಯಬೇಕೆಂಬ, ಕೀಳಬೇಕೆಂಬ ಆಸೆ ಮೂಡಿತ್ತು.

ಚಿಟ್ಟೆ ಹೂವಿನ ಮೇಲೆ ಕೂರುವ ಹಾಗೆ ತನ್ನ ತುಟಿಗಳನ್ನು ಹೆಣ್ಣಿನ ತುಟಿಗಳ ಮೇಲೆ ಇರಿಸಬೇಕೆಂಬ ಇಚ್ಛೆ ಇತ್ತು. ಈಗ ಅವನ ಮನಸ್ಸಿನಿಂದ ಆ ಹೆಣ್ಣು ಹೊರಟುಹೋಗಿದ್ದಳು. ಈಗ ಅವನು ಆ ತುಟಿಗಳನ್ನು ತನ್ನ ಬೆಚ್ಚನೆಯ ತುಟಿಗಳಿಂದ ಸುಡಬಯಸುತ್ತಿದ್ದ. ಮೆಲ್ಲ ಮೆಲ್ಲಗೆ ಪರದೆಯೊಳಗಡೆ ಮಾತನಾಡಬೇಕೆಂಬ ಇಚ್ಛೆಯೂ ಅವನ ಮನಸ್ಸಿನಲ್ಲಿರಲಿಲ್ಲ. ಈಗ ಅವನ ಮನಸ್ಸಿನಲ್ಲಿ ಹುಟ್ಟಿರುವ ಇಚ್ಛೆಯಂಥ ಬೆತ್ತಲೆ ಮಾತುಗಳನ್ನು ಉಚ್ಚಕಂಠದಲ್ಲಿ ಗಟ್ಟಿಯಾಗಿ ಆಡಬಯಸುತ್ತಿದ್ದ.

ಒಬ್ಬ ಆರೋಗ್ಯವಂತ ಹೆಣ್ಣು ಈಗ ಅವನ ಮುಂದಿರಲಿಲ್ಲ. ಅವನು ಇಷ್ಟಪಡುತ್ತಿದ್ದ ಹೆಣ್ಣೆಂದರೆ ಉಜ್ಜಿ ಉಜ್ಜಿ ಕೆಳಗೆ ಬಿದ್ದಿರುವ ಗಂಡಸಿನ ಆಕೃತಿಯ ಮೇಲೆ ಅಧಿಕಾರ ಮಾಡಿರುವಂಥ ಹೆಣ್ಣು. ಅರ್ಧ ಹೆಣ್ಣಾಗಿದ್ದು ಇನ್ನರ್ಧ ಏನೂ ಅಲ್ಲದ ಹೆಣ್ಣನ್ನು ಅವನು ಇಚ್ಛಿಸುತ್ತಿದ್ದುದು.

ಅದು ಒಂದು ಕಾಲ ಇತ್ತು . ಆಗ ಜಾವೇದ್ ಹೆಣ್ಣು ಅಂತ ಹೇಳುವಾಗ ಅವನ ಕಣ್ಣುಗಳಲ್ಲಿ ಒಂದು ವಿಶೇಷ ರೀತಿಯ ತಣ್ಪಿನ ಅನುಭವ ಉಂಟಾಗುತ್ತಿತ್ತು. ಆಗ ಹೆಣ್ಣಿನ ಕಲ್ಪನೆ ಅವನನ್ನು ಚಂದಿರನ ತಣ್ಣನೆಯ ಲೋಕಕ್ಕೆ ಕೊಂಡೊಯ್ಯುತ್ತಿತ್ತು. ಈ ನಿರ್ಜೀವ ಶಬ್ದ ಎಲ್ಲಿ ನಾಶವಾಗಿ ಬಿಡುವುದೋ ಎಂಬ ಹೆದರಿಕೆಯಿಂದ ಬಹು ನಿಧಾನವಾಗಿ ಎಚ್ಚರಿಕೆಯಿಂದ 'ಹೆಣ್ಣು' ಅಂತ ಹೇಳುತ್ತಿದ್ದ.

ಒಂದು ಕಾಲದ ವರೆಗೆ ಅವನು ಪ್ರಪಂಚ ಪರ್ಯಟನೆ ಮಾಡುತ್ತಿದ್ದ. ಆದರೆ ಕೊನೆಗೆ ಅವನ ಅನುಭವಕ್ಕೆ ಬಂದದ್ದೆಂದರೆ ಅವನ ಮನಸ್ಸಿನಲ್ಲಿರುವ ಹೆಣ್ಣಿನ ಆಸೆ ಎಂಬುದು ಹೊಟ್ಟೆ ಕೆಟ್ಟಾಗ ಕಂಡ ಅವನ ಜೀವನದ ಕನಸು ಎಂದು.

ಜಾವೇದ್ ಈಗ ಕನಸುಗಳ ಲೋಕದಿಂದ ಹೊರಬಂದಿದ್ದ. ಬಹಳ ಸಮಯದ ವರೆಗೆ ಬುದ್ಧಿಯ ಮಟ್ಟದಲ್ಲಿ ತನ್ನನ್ನು ತಾನು ಸಮಾಧಾನ ಪಡಿಸಿಕೊಳ್ಳುತ್ತಿದ್ದ. ಬಹಲಾತಾ ರಹಾ. ಆದರೆ ಈಗ ಅವನ ದೇಹ ಹೆದರಿಕೆ ಹುಟ್ಟಿಸುವ ಆಕೃತಿಯಿಂದ ಜಾಗೃತಗೊಂಡಿತ್ತು. ಅವನ ಕಲ್ಪನೆಯ ತೀವ್ರತೆಯು ಅವನ ದೈಹಿಕ ಅನುಭವಗಳನ್ನು ಎಷ್ಟು ಮೊನಚುಮಾಡಿತ್ತೆಂದರೆ ಜೀವನ ಈಗ ಅವನ ಪಾಲಿಗೆ ಸೂಜಿಗಳ ಹಾಸಿಗೆಯಾಗಿಬಿಟ್ಟಿತು. ಪ್ರತಿಯೊಂದು ಆಲೋಚನೆಯೂ ಒಂದು ಚಾಕು ಆಯಿತು. ಹೆಣ್ಣು ಅವನ ಕಣ್ಣುಗಳಲ್ಲಿ ಅದೆಂಥ ಆಕೃತಿಯನ್ನು ಮೂರ್ತಗೊಳಿಸಿತ್ತೆಂದರೆ ಅವನು ವರ್ಣಿಸಬೇಕೆಂದರೂ ಅವನ ಕೈಯಲ್ಲಿ ಆಗದಷ್ಟು.

ಜಾವೇದ್ ಒಂದು ಕಾಲದಲ್ಲಿ ಮನುಷ್ಯನಾಗಿದ್ದ. ಆದರೆ ಈಗ ಮನುಷ್ಯರೆಂದರೆ ಅವನಿಗೆ ತಿರಸ್ಕಾರ. ಎಷ್ಟೆಂದರೆ ಅವನಿಗೆ ತನ್ನ ಬಗ್ಗೆಯೇ ತಿರಸ್ಕಾರ ಉಂಟಾಗತೊಡಗಿತ್ತು. ಇದೇ ಕಾರಣದಿಂದ ತನ್ನನ್ನೇ ಮೋಸಗೊಳಿಸಿಕೊಳ್ಳಲು ಬಯಸುತ್ತಿದ್ದ. ಎಷ್ಟರ ಮಟ್ಟಿಗೆ ಎಂದರೆ ಒಂದು ಸಮಯದ ವರೆಗೆ ತನ್ನ ಮನಸ್ಸಿನಲ್ಲಿ ಹೂವುಗಳಂತೆ ಅಲಂಕರಿಸಿಟ್ಟುಕೊಂಡಿರುತ್ತಿದ್ದ ಅವನ ಸುಂದರ ಆಲೋಚನೆಗಳು ಕೊಳೆಯಿಂದ ಸಿಕ್ತವಾಗಿದುವು.

"ಶ್ರೇಷ್ಠತೆಯನ್ನು (ಉತ್ಕೃಷ್ಟತೆಯನ್ನು) ಹುಡುಕುವುದರಲ್ಲಿ ನಾನು ಸೋಲುತ್ತೇನೆ. ಆದರೆ ಹೊಲಸಂತೂ ನನ್ನ ಸುತ್ತಲೂ ಹರಡಿದೆ. ಈಗ ನನ್ನ ಆತ್ಮ ಮತ್ತು ದೇಹಗಳ ಪ್ರತಿಯೊಂದು ಅಣುವನ್ನೂ ಹೊಲಸಿನಿಂದ ಸಿಕ್ತಗೊಳಿಸಬೇಕೆಂದು ನನ್ನ ಈ ಮನಸ್ಸು ಬಯಸುತ್ತದೆ. ಇದುವರೆಗೂ ಸುವಾಸನೆಯನ್ನು ಹುಡುಕುತ್ತಿದ್ದ ನನ್ನ ಮೂಗು ಈಗ ಗಲೀಜು ವಸ್ತುಗಳನ್ನು ಮೂಸಲು ವ್ಯಾಕುಲಗೊಂಡಿದೆ (ಕಾತರಗೊಂಡಿದೆ). ಇದೇ ಕಾರಣದಿಂದ ಈ ಹೊತ್ತು ನನ್ನ ಹಳೆಯ ವಿಚಾರಗಳ ಅಂಗಿಯನ್ನು ಕಳಚಿಹಾಕಿ ಪ್ರತಿಯೊಂದು ವಸ್ತುವೂ ಒಂದಲ್ಲ ಒಂದು ವಿಭಿನ್ನ ವಾಸನೆಗಳಲ್ಲಿ ಲಿಪ್ತವಾದಂತೆ ಕಾಣುತ್ತಿರುವ ಈ ಹಾದಿಯತ್ತ ಮುಖಮಾಡಿದ್ದೇನೆ. ಈ ಪ್ರಪಂಚ ಎಷ್ಟೊಂದು ಭಯ ಹುಟ್ಟಿಸುವ ಸ್ಥಿತಿಗೆ ಬಂದುಬಿಟ್ಟಿದೆ"

ನಾನಕ ಆಡಳಿತ ಕಾಲದ ಇಟ್ಟಿಗೆಗಳ ತಗ್ಗು–ದಿಣ್ಣೆಗಳಿಂದ ಕೂಡಿದ ನೆಲ ಅವನೆದುರು ಇತ್ತು. ಲಾಟೀನಿನ(ದೀಪದ) ಮಸುಕು ಬೆಳಕಿನಲ್ಲಿ ಜಾವೇದ್ ತನ್ನ ಬದಲಾದ ದೃಷ್ಟಿಕೋನದಿಂದ ಆ ನೆಲದತ್ತ ನೋಡಿದಾಗ ಬಹಳಷ್ಟು ನಗ್ನ ಹೆಂಗಸರು ಅಸ್ತವ್ಯಸ್ತವಾಗಿ ಮಲಗಿದ್ದಾರೆಂಬುದು ಅವನ ಅನುಭವಕ್ಕೆ ಬಂತು. ಅವರ ಮೂಳೆಗಳು ಅಲ್ಲಲ್ಲಿ ಉಬ್ಬಿವೆ.

ಈ ನೆಲವನ್ನು ದಾಟಿ ತುದಿ ಇರುವ ಮನೆಗಳ ಮೆಟ್ಟಿಲುಗಳ ತನಕ ಹೋಗಿ ವೇಶ್ಯೆಯರ ಮನೆಯ ಮೇಲೆ ಹತ್ತಬೇಕೆಂದು ತೀರ್ಮಾನಿಸಿದ. ಆದರಂತೆ ಮುನಿಸಿಪಾಲಿಟಿಯವರು ಅಳವಡಿಸಿದ್ದ ದೀಪ(ಲಾಟೀನು) ಒಂದೇ ಸಮನೆ ನೆಟ್ಟ ನೋಟದಿಂದ ಅವನತ್ತ ದುರುಗುಟ್ಟಿಕೊಂಡು ನೋಡುತ್ತಿತ್ತು. ಮುಂದುವರಿಯುತ್ತಿದ್ದ ಅವನ ಹೆಜ್ಜೆಗಳು ನಿಂತುಬಿಟ್ಟುವು. ಮತ್ತು ಅವನು ದೀಪದ ಹುಳುವಿನಂತಾಗಿಬಿಟ್ಟ. "ಈ ಹಾಳು ದೀಪ ನನ್ನತ್ತ ಏಕೆ ಹೀಗೆ ದುರುಗುಟ್ಟಿಕೊಂಡು ನೋಡುತ್ತಿದೆ? ಇದು ನನ್ನದಾರಿಗೆ ಏಕೆ ಅಡ್ಡಿಪಡಿಸುತ್ತಿದೆ.?"

ಇದೊಂದು ಕೇವಲ ಭ್ರಮೆ ಎಂದು ಅವನಿಗೆ ಗೊತ್ತಿತ್ತು. ವಾಸ್ತವಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ ಎಂಬುದೂ ಅವನಿಗೆ ಗೊತ್ತಿತ್ತು. ಆದರೂ ಅವನ ಹೆಜ್ಜೆಗಳು ನಿಂತುಬಿಡುತ್ತಿದ್ದುವು ಮತ್ತು ಅವನು ತನ್ನ ಹೃದಯದಲ್ಲಿ ಪೂರಾ ಭಯಂಕರವಾದ ನಿರ್ಧಾರಗಳನ್ನು ಮಾಡಿ ಮೋರಿಯ ಆ ಬದಿಗೆ ಹೋಗಿ ನಿಂತುಬಿಡುತ್ತಿದ್ದ. ತನಗೆ ಪಿತ್ರಾರ್ಜಿತವಾಗಿ ಬಂದಿದ್ದ ತನ್ನ ಜೀವನದ ಇಪ್ಪತ್ತೇಳು ವರ್ಷಗಳ ಹಿಂಜರಿಕೆ ಆ ಲಾಟೀನಿನಲ್ಲಿ (ದೀಪದಲ್ಲಿ) ಬಂದು ಸೇರಿಕೊಂಡುಬಿಟ್ಟಿದೆ ಎನಿಸುತ್ತಿತ್ತು. ಹಾವು ತನ್ನ ಹಳೆಯ ಪೊರೆಯನ್ನು ಕಳಚಿಹಾಕುವಂತೆ ಮನೆಯಲ್ಲಿ ಬಿಟ್ಟುಬಂದಿದ್ದ ಈ ಹಿಂಜರಿಕೆ ತನ್ನ ಬದುಕಿನ ಅತ್ಯಂತ ಕೆಟ್ಟ ಆಟವನ್ನು ಆಡಬೇಕಾದ ಸ್ಥಳಕ್ಕೆ ಅವನಿಗಿಂತ ಮುಂಚೆಯೇ ಹೋಗಿಬಿಟ್ಟಿತ್ತು. ಅದು ಎಂಥಾ ಆಟವೆಂದರೆ ಅವನನ್ನು ಕೆಸರುಮಯವಾಗಿ ಮಾಡಿಬಿಡುವ ಮತ್ತು ಅವನ ಮುಖಕ್ಕೆ ಮಸಿ ಬಳಿಯುವ ಆಟವಾಗಿತ್ತು.

ಒಬ್ಬ ಕೊಳಕು ಹೆಂಗಸು ಆ ಮನೆಯಲ್ಲಿರುತ್ತಿದ್ದಳು. ಅವಳ ಬಳಿ ನಾಲ್ಕೈದು ಜನ ಯುವತಿಯರಿದ್ದರು. ರಾತ್ರಿಯ ಕತ್ತಲಿನಲ್ಲಿ ಮತ್ತು ಹಗಲಿನ ಬೆಳ್ಳಂಬೆಳಕಿನಲ್ಲಿ ಒಂದು ಕೆಟ್ಟ ಕೊಳಕು ಧಂಧೆಯನ್ನು ನಡೆಸುತ್ತಿದ್ದರು. ಈ ಹೆಂಗಸರು ಚರಂಡಿಗಳಿಂದ ಗಲೀಜು ಹೊರತೆಗೆಯುವ ಪಂಪುಗಳ ಹಾಗೆ ಹಗಲು ರಾತ್ರಿ ಕೆಲಸ ಮಾಡುತ್ತಿದ್ದರು.

ಪ್ರೇಮದ ಶವವನ್ನು ಈ ಶ್ಮಶಾನದಲ್ಲಿ ಅನೇಕ ಬಾರಿ ಹೂತುಹಾಕಿದ್ದ ಅವನ ಗೆಳೆಯನೊಬ್ಬನು ಜಾವೇದ್‌ಗೆ ಈ ದುರಾಚಾರಿಣಿಯರ ಕೇಂದ್ರದ ಬಗ್ಗೆ ತಿಳಿಸಿದ್ದ. "ನೀನು ಯಾವಾಗಲೂ ಹೆಣ್ಣು ಹೆಣ್ಣು ಅಂತ ಕೂಗಾಡ್ತಾ ಇರ್ತೀಯಾ .... ಹೆಣ್ಣು ಎಲ್ಲಿದ್ದಾಳೆ? ನನಗಂತೂ ನನ್ನ ಜೀವನದಲ್ಲಿ ಕಂಡಿದ್ದು ಒಬ್ಬಳೇ ಒಬ್ಬಳು ಹೆಣ್ಣು. ಅದು ನನ್ನ ತಾಯಿ. ಸಂರಕ್ಷಕರನ್ನು ನಿಸ್ಸಂದೇಹವಾಗಿ ನೋಡಿದ್ದೇನೆ. ಅವರುಗಳ ಬಗ್ಗೆ ಕೇಳಿಯೂ ಇದ್ದೇನೆ. ಹೆಣ್ಣಿನ ಅವಶ್ಯಕತೆ ಕಂಡುಬಂದಾಗ ಮಾತ್ರ ತಾಯಿ ಜೀವದ ದೊಡ್ಡ ಮನೆಯನ್ನು ನನ್ನ ಅತ್ಯುತ್ತಮ ಗೆಳೆಯ ಎಂದುಕೊಂಡಿದ್ದೇನೆ. ದೇವರ ಆಣೆಯಾಗಿ ಹೇಳುತ್ತಿದ್ದೇನೆ; ತಾಯಿ 'ಜೀವಾ' ಹೆಣ್ಣಲ್ಲ, ದೇವತೆ. ದೇವರು ಈ ಜಗತ್ತಿನ ಅಂತ್ಯದವರೆಗೂ ಜೀವಂತ ಇಟ್ಟಿರಲಿ".

ಜಾವೇದ್ ತಾಯಿ 'ಜೀವಾ' ಮತ್ತು ಅವಳ ಹತ್ತಿರ ಧಂಧೆ ಮಾಡುವ ಮೂರು ನಾಲ್ಕು ಹೆಂಗಸರ ಬಗ್ಗೆ ಬಹಳಷ್ಟು ಕೇಳಿದ್ದ. ಯಾವುದೋ ಕಾಯಿಲೆಯಿಂದಾಗಿ ಕಣ್ಣುಗಳು ಹಾಳಾಗಿದ್ದರಿಂದ ಅವರಲ್ಲಿ ಒಬ್ಬಳು ಯಾವಾಗಲೂ ಬಣ್ಣದ ಗಾಜಿನ ಕನ್ನಡಕ ಹಾಕಿಕೊಂಡಿರುತ್ತಾಳೆ. ಒಬ್ಬಳು ಯಾವಾಗಲೂ ನಗುತ್ತಿರುವ ಕಡುಗಪ್ಪು ಬಣ್ಣದ

ಹುಡುಗಿ. ಜಾವೇದ್ ಅವಳ ಬಗ್ಗೆ ಯೋಚಿಸಿದಾಗ ವಿಲಕ್ಷಣ ಹೆಣ್ಣಿನ ಚಿತ್ರ ಅವನ ಕಣ್ಮುಂದೆ ಬರುತ್ತದೆ.

"ನನಗೆ ಬೇಕಾಗಿರುವ ಹೆಣ್ಣು ಎಂಥವಳಾಗಿರಬೇಕೆಂದರೆ ಅವಳು ಸದಾ ನಗುತ್ತಿರುವಂಥ ಹೆಣ್ಣಾಗಿರಬೇಕು. ಇಂಥ ಹೆಣ್ಣುಗಳು ಸದಾ ನಗುತ್ತಲೇ ಇರಬೇಕು. ಅವಳು ನಗುತ್ತಿರುವಾಗ ಅವಳ ಕಪ್ಪು ತುಟಿಗಳು ದುರ್ವಾಸನೆ ಬೀರುವ ಕೊಳಕು ನೀರಿನಲ್ಲಿ ನೊರೆಗುಳ್ಳೆಗಳು ಎದ್ದು ಒಡೆಯುವ ಹಾಗೆ ಬಿರಿಯುತ್ತಿರಬಹುದು."

ತಾಯಿ 'ಜೀವಾ'ಳ ಹತ್ತಿರ ಇನ್ನೂ ಒಬ್ಬ ಹುಡುಗಿ ಇದ್ದಳು. ಈ ಧಂಧೆಗೆ ಕಾಯಿದೆಗೆ ವಿರುದ್ಧವಾಗಿ ಬರುವುದಕ್ಕೆ ಮುಂಚೆ ಅವಳು ಬೀದಿಗಳಲ್ಲಿ ಮತ್ತು ಬಾಜಾರುಗಳಲ್ಲಿ ಭಿಕ್ಷೆ ಬೇಡಿಕೊಂಡು ತಿರುಗಾಡುತ್ತಾ ಇದ್ದಳು. ಈಗ ಒಂದು ವರ್ಷದಿಂದ ಆ ಮನೇಲಿದ್ದಾಳೆ ಅವಳು. ಅಲ್ಲಿ ಕಳೆದ ಹದಿನೆಂಟು ವರ್ಷದಿಂದ ಇದೇ ಧಂಧೆ ನಡೆಯುತ್ತಿತ್ತು. ಅವಳು ಪೌಡರ್ ಮತ್ತು ಲಿಪ್‌ಸ್ಟಿಕ್ ಹಚ್ಚಿಕೊಳ್ಳುತ್ತಿದ್ದಳು. "ಅವಳ ಕೆಂಪು ಬಣ್ಣ ಹಚ್ಚಿದ ಕೆನ್ನೆಗಳು ಥೇಟು ಕಲೆ ಹತ್ತಿದ ಸೇಬುಗಳಂತೆಯೇ ಇರುತ್ತವೆ. ಯಾರು ಬೇಕಾದರೂ ಕೊಂಡುಕೊಳ್ಳಬಹುದು"- ಎಂದು ಅವಳ ಬಗ್ಗೆಯೂ ಜಾವೇದ್ ಯೋಚಿಸುತ್ತಿದ್ದ.

ಆ ನಾಲ್ಕೈದು ಜನ ಹೆಂಗಸರಲ್ಲಿ ಜಾವೇದನ ದೃಷ್ಟಿ ಯಾರೊಬ್ಬರ ಮೇಲೂ ವಿಶೇಷವಾಗೇನೂ ಇರಲಿಲ್ಲ.

"ನನಗೆ ಯಾರು ಸಿಕ್ಕಿದರೂ ಆಯಿತು...... ನಾನು ಅವಳಿಗೆ ದುಡ್ಡು ಕೊಟ್ಟುಬಿಡಬೇಕು ಮತ್ತು ನನ್ನ ಪಕ್ಕದಲ್ಲಿ ಅವಳನ್ನು ಕೂಡಿಸಿಬಿಡಬೇಕು. ಅದರಲ್ಲಿ ಒಂದು ಸೆಕೆಂಡೂ ತಡ ಆಗಬಾರದು. ಯಾವುದೇ ಥರದ ಮಾತು ಇರಕೂಡದು. ಯಾವುದೇ ಸೂಕ್ಷ್ಮವಾದ ಮಾತು ಬಾಯಿಂದ ಬರಕೂಡದು. ಹೆಜ್ಜೆಗಳ ಸಪ್ಪಳ ಕೇಳಿಬರಲಿ, ಬಾಗಿಲು ತೆಗೆಯುವ ಕಟಕಟ ಶಬ್ದ ಬರಲಿ..... ರೂಪಾಯಿಗಳ ಝಣ ಝಣ ಸದ್ದು ಬರಲಿ. ಆದರೆ ಬಾಯಿ ಮಾತ್ರ ಬಂದ್ ಇರಲಿ. ಒಂದು ವೇಳೆ ಸದ್ದು ಬರೋದಾದರೆ ಮನುಷ್ಯನ ದನಿ ಅಂತ ಗೊತ್ತಾಗೋ ಹಾಗಿರಲಿ. ಭೇಟಿ ಆಗುವುದಾದರೆ ಥೇಟು ಮೂರ್ಖರ ತರಹ ಇರಬೇಕು. ಸಭ್ಯತೆಯ ಪೆಟ್ಟಿಗೆಗೆ ಬೀಗ ಹಾಕಿರಬೇಕು. ಸ್ವಲ್ಪ ಸಮಯಕ್ಕೆ ಮೂಸುವ, ನೋಡುವ ಮತ್ತು ಕೇಳುವ ಅನುಭವಗಳೆಲ್ಲವೂ ಮೊಂಡಾಗಿರುವಂಥ ಪ್ರಪಂಚ ನೆಲಸ ಬೇಕು. ಹೇಗಂದರೆ ತುಕ್ಕು ಹಿಡಿದಿರುವ ಕತ್ತಿಯ ಹಾಗೆ ಮೊಂಡಾಗಿಬಿಡಬೇಕು."

ಜಾವೇದ್ ಅಶಾಂತನಾದ (ವ್ಯಾಕುಲಗೊಂಡ). ಅವನ ಮನಸ್ಸಿನಲ್ಲಿ ಏನೋ ಒಂದು ತೊಡಕಿನಂಥದು ಹುಟ್ಟಿಕೊಂಡುಬಿಟ್ಟಿತು. ಅವನ ಮನಸ್ಸಿನಲ್ಲಿ ನಿಶ್ಚಯ ಎಷ್ಟು ಕಠೋರವಾಗಿ

ಕೂತುಬಿಟ್ಟಿತ್ತು ಅಂದರೆ ಅವನ ದಾರಿಯಲ್ಲಿ ಪರ್ವತ ಇದ್ದರೂ ಅದರೊಂದಿಗೂ ಕಾದಾಡುವಷ್ಟು. ಆದರೆ ಒಂದೇ ಒಂದು ಸಲ ಗಾಳಿಯ ಸಣ್ಣ ಸುಳಿವು ಆರಿಸಿಬಿಡಬಹುದಾಥಂಥ, ಮುನಿಸಿಪಾಲಿಟಿಯ ಆ ಒಂದು ಮಂಕು ದೀಪ ಅವನ ದಾರಿಯಲ್ಲಿ ಬಹಳ ಕೆಟ್ಟ ರೀತಿಯಲ್ಲಿ ಅಡ್ಡಿಯಾಗಿ ನಿಂತಿತ್ತು.

ಅವನ ಪಕ್ಕದಲ್ಲಿ ಅಡಕೆಲೆ ಅಂಗಡಿ ತೆರೆದಿತ್ತು. ಅದರಲ್ಲಿದ್ದ ಸಾಮಾನುಗಳು ಅದೆಷ್ಟು ಸ್ಪಷ್ಟವಾಗಿ ಕಾಣುತ್ತಿದ್ದವೆಂದರೆ ಬಹಳಷ್ಟು ಸಾಮಾನುಗಳು ಕಣ್ಣಿಗೆ ಬೀಳುತ್ತಿರಲಿಲ್ಲ. ವಿದ್ಯುತ್ ತಂತಿಯ ಕುಮಕುಮೆ=ಪಿಂಗಾಣಿಯ ಸುತ್ತ ಮುತ್ತ ನೊಣಗಳು ಅವುಗಳ ರೆಕ್ಕೆ ಭಾರವಾಗಿಬಿಟ್ಟಿವೆಯೇನೋ ಎನ್ನುವ ಹಾಗೆ ಹಾರಾಡುತ್ತಿದ್ದವು.

ಜಾವೇದ್ ಅವರ ಕಡೆ ನೋಡಿದಾಗ ಅವನ ಸಮಸ್ಯೆ ಹೆಚ್ಚಾಯಿತು. ಅವನ ಕಣ್ಣಿಗೆ ಯಾವುದೇ ಸೋಮಾರಿ ಇಲ್ಲವೆ ಓಡುವ (ವೇಗದ) ವಸ್ತು ಕಣ್ಣಿಗೆ ಬೀಳಬಾರದೆಂಬುದು ಅವನ ಬಯಕೆ. ಮನೆಯಿಂದ ಬರುವಾಗಲೇ ಮಾಡಿಕೊಂಡು ಬಂದಿದ್ದ ನಿರ್ಧಾರವೆಂದರೆ ಏನಾದರೂ ಮಾಡಿ ಹೋಗುವ ನಿರ್ಧಾರ. ಈಗ ಆ ನೊಣಗಳು ಮತ್ತೆ ಮತ್ತೆ ಬಂದು ಇವನಿಗೆ ತಾಗುತ್ತಿದ್ದವು. ಅವುಗಳ ಅನುಭವದಿಂದ ಅವನು ಅದೆಷ್ಟೊಂದು ಚಿಂತಿತನಾದನೆಂದರೆ ಅದು ಅವನ ಮನಸ್ಸಿನಲ್ಲಿ ಒಂದು ಬಿರುಗಾಳಿಯಂತೆ ಕಾಡಲಾರಂಭಿಸಿತು.

"ನನಗೆ ಹೆದರಿಕೆ ಆಗುತ್ತೆ....... ನನಗೆ ಭಯವಾಗುತ್ತೆ...... ಈ ಲಾಟೀನಿನಿಂದ ನನಗೆ ಹೆದರಿಕೆ ಆಗುತ್ತೆ....... ನನ್ನೆಲ್ಲಾ ನಿಶ್ಚಯಗಳನ್ನೂ ಇದು ನಾಶಮಾಡಿದೆ. ನಾನು ಅಂಜುಬುರುಕ. ನನಗೆ ಧಿಕ್ಕಾರವಿರಲಿ"

ಅನೇಕ ಧಿಕ್ಕಾರಗಳನ್ನು ತನಗೆ ತಾನೇ ಹೇಳಿಕೊಂಡ. ಆದರೆ ಅದರಿಂದ ಆಗಬೇಕಾದಷ್ಟು ಪ್ರಭಾವ ಆಗಲಿಲ್ಲ. ಅವನ ಹೆಜ್ಜೆಗಳು ಮುಂದುವರಿಯಲಿಲ್ಲ. ನಾನಕ ಕಾಲದ ಇಟ್ಟಿಗೆಗಳ ತಗ್ಗು-ದಿಣ್ಣೆಗಳ ನೆಲ, ಅವನೆದುರು ಮೈಚಾಚಿ ಮಲಗಿತ್ತು.

ಬೇಸಗೆಯ ದಿನಗಳು ಅವು. ಅರ್ಧ ರಾತ್ರಿ ಕಳೆದಿದ್ದರೂ ಗಾಳಿ ತಣ್ಣಗಾಗಿರಲಿಲ್ಲ. ಪೇಟೆಯಿಂದ ಬರುವುದು-ಹೋಗುವುದು ಕಮ್ಮಿಯಾಗಿತ್ತು. ಎಣಿಕೆಗೆ ಸಿಗುವಷ್ಟು ಅಂಗಡಿಗಳಷ್ಟೇ ಇದ್ದವು. ಬಜಾರ್‌ನಲ್ಲಿ ಮೌನ ನೆಲೆಸಿತ್ತು ಯಾವಾಗಲಾದರೂ ಒಮ್ಮೊಮ್ಮೆ ಯಾವುದೋ ಕೋಣೆಯಿಂದ ಬಿಸಿ ಗಾಳಿಯ ಬೀಸುವಿಕೆಯ ಜೊತೆಗೆ ಸೋತ ಸಂಗೀತದ ಒಂದು ತುಣುಕೂ ಹಾರಿ ಇತ್ತ ಸಾಗಿ ಬರುತ್ತಿತ್ತು. ಮತ್ತು ಆಳವಾದ ವ್ರಾಮೋಶಿಯಲ್ಲಿ ಬೆರೆತುಹೋಗುತ್ತಿತ್ತು.

ಜಾವೇದನ ಎದುರು ಅರ್ಥಾತ್ ಮಾಯಿ ಜೀವಾಳ ಧರ್ಂಧೆಯ ಮನೆಯಿಂದ ದೂರವಾಗಿ ಅತ್ತ ಇತ್ತ ಇದ್ದ ದೊಡ್ಡ ಬಜಾರಿನಲ್ಲಿ ಅಂಗಡಿಗಳ ಮೇಲಿನ ಕೊಠಡಿಗಳ ಒಂದು ಸಾಲು ಇತ್ತು. ಅವುಗಳಲ್ಲಿ ಕೆಲವು ಜಾಗಗಳು ಜೀವನದ ತಳಹದಿ(ಲಕ್ಷಣ) ಎನಿಸುತ್ತಿದ್ದವು. ಸರಿಯಾಗಿ ಅದರ ಎದುರು ಕಿಟಕಿಯಲ್ಲಿ ಅತ್ಯಂತ ಪ್ರಖರವಾದ ಬೆಳಕಿನ ಒಂದು ಬಲ್ಬ್ ಕೆಳಗೆ ಒಬ್ಬ ಕಪ್ಪು ಬಣ್ಣದ ಒಬ್ಬ ವೇಶ್ಯಾ ಸ್ತ್ರೀ ಕುಳಿತುಕೊಂಡು ಬೀಸಣಿಗೆ ಬೀಸುತ್ತಿದ್ದಳು. ಅವಳ ತಲೆಯ ಮೇಲೆ ವಿದ್ಯುತ್ ಬಲ್ಬ್ ಉರಿಯುತ್ತಿತ್ತು, ಅದು ಹೇಗೆ ಕಾಣಿಸುತ್ತಿತ್ತೆಂದರೆ ಬಿಳಿಯ ಬೆಂಕಿ(ಕೆಂಡ) ಗೋಳ ಕರಗಿ ಕರಗಿ ಆ ವೇಶ್ಯೆಯ ಮೇಲೆ ಬೀಳುತ್ತಿತ್ತೇನೋ ಎಂಬಂತೆ. ಆ ಕಪ್ಪನೆಯ ವೇಶ್ಯೆಯ ವಿಷಯದಲ್ಲಿ ಜಾವೇದ್ ಇನ್ನೇನು ಸ್ವಲ್ಪ ಯೋಚಿಸಬೇಕೆಂದಿದ್ದ. ಅಷ್ಟರಲ್ಲಿ ಅವನ ಕಣ್ಣಿಂದ ಮರೆಯಾಗಿದ್ದ ಪೇಟೆಯ ಆ ತುದಿಯಿಂದ ಕೆಟ್ಟ ಘೋಷಣೆಗಳ ರೂಪದಲ್ಲಿ ಗಲಾಟೆ ಎದ್ದಿತು. ಸ್ವಲ್ಪ ಹೊತ್ತಿನ ನಂತರ ಹೆಂಡದ ನಶೆಯಲ್ಲಿ ಮುಳುಗಿಹೋಗಿದ್ದ ಮೂರು ಜನ ಕುಡುಕರು ತೂರಾಡಿಕೊಂಡು ಕಾಣಿಸಿಕೊಂಡರು. ಮೂರೂ ಜನ ಆ ಕಪ್ಪು ಹೆಂಗಸಿನ ಕೊಠಡಿಯ ಬಳಿ ಬಂದು ನಿಂತರು. ಜಾವೇದ್ ಅದೆಂಥೆಂಥ ಕೆಟ್ಟ ಮಾತುಗಳನ್ನು ಕೇಳಿಸಿಕೊಂಡನೆಂದರೆ ಅವನೆಲ್ಲ ನಿಶ್ಚಯಗಳು ಅವನೊಳಗೇ ಮುದುಡಿಕೊಂಡುಬಿಟ್ಟವು.

ತುಟಿಗಳ ಮೇಲೆ ಮೀಸೆ ಹೊತ್ತ ಕುಡುಕನೊಬ್ಬ ಅತ್ಯಂತ ಕೆಟ್ಟ ದನಿಯಲ್ಲಿ ಒಂದು ಚುಂಬನವನ್ನು ತನ್ನ ಬಾಯಿಂದ ಕಿತ್ತು ಆ ಕಪ್ಪನೆಯ ಬಣ್ಣದ ವೇಶ್ಯೆಯ ಕಡೆಗೆ ತೂರುತ್ತ ಹೇಗೆ ವ್ಯಂಗ್ಯವಾಗಿ ಆಡಿದನೆಂದರೆ ಜಾವೇದನ ಧೈರ್ಯವೆಲ್ಲಾ ಹಿಮ್ಮೆಟ್ಟಿತು. ಕೊಠಡಿಯ ಮೇಲಿನ ವಿದ್ಯುತ್ ಬಲ್ಬಿನ ಬೆಳಕಿನಲ್ಲಿ ಆ ಕಪ್ಪನೆಯ ವೇಶ್ಯೆಯ ತುಟಿಗಳು ಒಂದು ಅಟ್ಟಹಾಸದ ನಗೆಯಲ್ಲಿ ಅರಳಿದವು. ಮತ್ತು ಕುಡುಕನ ಮುತ್ತಿನ ತೂರಿಕೆಗೆ ಉತ್ತರಿಸಿದ್ದು ಒಂದು ತುಂಬಿದ ಕಸದ ಮಂಕರಿಯನ್ನು ಮೇಲಿನಿಂದ ಕೆಳಕ್ಕೆ ಎಸೆದಳೇನೋ ಎನ್ನುವಂತೆ ಕೆಳಗೆ ಹರಡಿದ ಅಟ್ಟಹಾಸಗಳ ಬುಗ್ಗೆಯಂತೆ ಹೊರಹೊಮ್ಮಿದವು. ಜಾವೇದ್ ನೋಡನೋಡುತ್ತಿದ್ದಂತೆಯೇ ಆ ಮೂವರು ಕುಡುಕರೂ ಕೊಠಡಿಯನ್ನೇರಿದರು. ಸ್ವಲ್ಪ ಹೊತ್ತಿನ ನಂತರ ಆ ವೇಶ್ಯೆ ಕುಳಿತಿದ್ದ ಜಾಗ ಖಾಲಿಯಾಯಿತು.

ಜಾವೇದ್ ತನ್ನ ಬಗ್ಗೆ ತಾನೇ ಇನ್ನಷ್ಟು ತಿರಸ್ಕಾರ ವ್ಯಕ್ತಪಡಿಸುತ್ತ– ಮೂರು ಜನ ಕುಡುಕರು ಬರುತ್ತಾರೆ. ನನ್ನ ಹಾಗೆ ಅವರ ಹೃದಯದಲ್ಲಿ ನಿಶ್ಚಯ ಇರುವುದಿಲ್ಲ. ಆದರೆ ನಿರ್ಭಯವಾಗಿ ಆ ವೇಶ್ಯೆಯೊಂದಿಗೆ ಕೆಟ್ಟ ಕೆಟ್ಟ ಮಾತುಗಳನ್ನಾಡುತ್ತಾರೆ ಮತ್ತು ನಗುತ್ತ, ಅಟ್ಟಹಾಸ ಬೀರುತ್ತ ಗಾಳಿ ಪಟ ಹಾರಿಸಲು ಹತ್ತುತ್ತಿದ್ದಾರೇನೋ ಎನ್ನುವ

ಹಾಗೆ ಕೊಠಡಿಯ ಮೇಲೆ ಹತ್ತುತ್ತಾರೆ. ನನಗೆ ಏನು ಮಾಡಬೇಕು ಅಂತ ಚೆನ್ನಾಗಿ ಗೊತ್ತಿದ್ದೂ ಹೀಗೇ ಮೂರ್ಖರ ಹಾಗೆ ಪೇಟೆಯಲ್ಲಿ ನಿಂತುಕೊಂಡು ಒಂದು ನಿರ್ಜೀವ ಲಾಟೀನಿನಿಂದ ಸೋಲು ಕಾಣುತ್ತಾ ಇದ್ದೀನಲ್ಲ? ಧಿಕ್ಕಾರವಿರಲಿ ನನಗೆ.

ಒಂದು ಕ್ಷಣಕಾಲ ಜಾವೇದನ ಒಳಗೆ ತನ್ನ ಬಗ್ಗೆ ತಾನೇ ಸೇಡು ತೀರಿಸಿಕೊಳ್ಳಬೇಕೆಂಬ ಭಾವನೆ ಹುಟ್ಟಿತು. ಅವನ ಹೆಜ್ಜೆಗಳಲ್ಲಿ ಚಲನೆ ಉಂಟಾಯಿತು. ಮೋರಿಯನ್ನು ದಾಟಿ ಜೀವಾ ತಾಯಿಯ ಕೊಠಡಿಯ ಕಡೆಗೆ ಮುಂದುವರಿದ. ಭರದಿಂದ ಮೆಟ್ಟಿಲುಗಳ ಸಮೀಪಕ್ಕೆ ಇನ್ನೇನು ತಲುಪಿಯೇ ಬಿಟ್ಟ. ಅಷ್ಟರಲ್ಲಿ ಮೇಲಿನಿಂದ ಒಬ್ಬ ಮನುಷ್ಯ ಇಳಿದ. ಜಾವೇದ್ ಹಿಂದೆ ಸರಿದ. ತನಗೇ ಗೊತ್ತಿಲ್ಲದ ಹಾಗೇ ಯಾವುದೋ ಒಂದರ ಮರೆಯಲ್ಲಿ ನಿಂತುಕೊಳ್ಳುವ ವ್ಯರ್ಥ ಪ್ರಯತ್ನವನ್ನೂ ಮಾಡಿದ. ಆದರೆ ಕೊಠಡಿಯ ಕಡೆಯಿಂದ ಕೆಳಕ್ಕೆ ಇಳಿದು ಬರುತ್ತಿದ್ದ ಮನುಷ್ಯ ಅವನ ಕಡೆ ಗಮನವನ್ನೇ ಕೊಡಲಿಲ್ಲ.

ಅವನು ತನ್ನ ತೆಳ್ಳನೆಯ ಅಂಗಿಯನ್ನು ಕಳಚಿ ಹೆಗಲ ಮೇಲೆ ಹಾಕಿಕೊಂಡಿದ್ದ. ಅವನ ಬಲ ಮಣಿಕಟ್ಟಿನಲ್ಲಿ ಮುತ್ತುಗಳ ಹೂವಿನ ಉಜ್ಜಿಹಾಕಿದ್ದ ಹಾರವೊಂದು ಅಂಟಿಕೊಂಡಿತ್ತು. ಅವನ ಇಡೀ ಶರೀರ ಬೆವರಿನಿಂದ ತೊಯ್ದು ತೊಪ್ಪೆಯಾಗಿತ್ತು. ಜಾವೇದ್ ಕಾಣಿಸಿಕೊಂಡದ್ದರಿಂದ ಅವನು ತನಗೇ ಗೊತ್ತಿಲ್ಲದಂತೆ ಎರಡೂ ಕೈಗಳಿಂದ ತನ್ನ ಲುಂಗಿಯನ್ನು ಮಂಡಿ ಮೇಲಕ್ಕೆ ಮಾಡಿಕೊಂಡು ನಾನಕ ಶಾಹಿ ಇಟ್ಟಿಗೆಗಳ ತಗ್ಗು-ದಿಣ್ಣೆಗಳ ನೆಲವನ್ನು ದಾಟಿ ಚರಂಡಿಯ ಆ ಕಡೆ ಹೋಗಿಬಿಟ್ಟ. ಇತ್ತ ಜಾವೇದ್ ಆ ಮನುಷ್ಯ ತನ್ನ ಕಡೆ ಯಾಕೆ ನೋಡಲೇ ಇಲ್ಲ ಅಂತ ಯೋಚಿಸತೊಡಗಿದ.

ಅವನು ಬೀದಿಯ ಲಾಂದ್ರದ ಕಡೆಗೆ ನೋಡಿದರೆ ಲಾಂದ್ರವು-"ನೀನು ನಿನ್ನ ಕಾರ್ಯದಲ್ಲಿ ಯಾವತ್ತೂ ಯಶಸ್ವಿಯಾಗಲ್ಲ, ಯಾಕೆ ಅಂದರೆ ನೀನೊಬ್ಬ ಹೇಡಿ, ಅಂಜುಬುರುಕ ಎಂದು ಹೇಳುತ್ತಿರುವಂತೆ ಅನ್ನಿಸಿತು. ನಿನಗೆ ನೆನಪಿದೆಯಾ – ಕಳೆದ ವರ್ಷ ಮಳೆಗಾಲದಲ್ಲಿ ನೀನು ಆ ಹಿಂದೂ ಹುಡುಗಿ ಇಂದಿರಾಗೆ ನಿನ್ನ ಪ್ರೇಮವನ್ನು ತಿಳಿಸಬೇಕು ಅಂತ ಇದ್ದೆ. ಆದರೆ ನಿನ್ನ ಶರೀರದಲ್ಲಿ ಶಕ್ತಿಯೇ ಇರಲಿಲ್ಲ. ಎಂಥೆಂಥ ಹೆದರಿಕೆ ಹುಟ್ಟಿಸುವ ಆಲೋಚನೆಗಳು ನಿನ್ನ ಮನಸ್ಸಿನಲ್ಲಿ ಹುಟ್ಟಿದವು......ಜ್ಞಾಪಕ ಇದೆಯೇನು? ನೀನು ಹಿಂದೂ- ಮುಸ್ಲಿಮ್ ಘರ್ಷಣೆಯ ವಿಷಯದಲ್ಲೂ ಆಲೋಚನೆ ಮಾಡಿದ್ದೆ. ಆದರೆ ಹೆದರಿದ್ದೆ. ಇದೇ ಹೆದರಿಕೆಯಿಂದಾಗಿಯೇ ಆ ಹುಡುಗಿಯನ್ನು ನೀನು ಮರೆತುಬಿಟ್ಟೆ. ಅಲ್ಲದೆ ಹಮೀದಾ ನಿನ್ನ ಸಂಬಂಧಿ ಅನ್ನುವ ಕಾರಣಕ್ಕೆ ನಿನಗೆ ಅವಳನ್ನು ಪ್ರೇಮಿಸಲು ಸಾಧ್ಯವಾಗಲಿಲ್ಲ. ನಿನ್ನ ಪ್ರೀತಿಯನ್ನು ತಪ್ಪು ದೃಷ್ಟಿಯಿಂದ

ನೋಡಬಹುದೆಂಬ ಭಯವಿತ್ತು ನಿನಗೆ. ನಿನ್ನ ಮೇಲೆ ಯಾವೆಲ್ಲ ಸಂದೇಹಗಳು ಆ ದಿನಗಳಲ್ಲಿ ಕವಿದಿದ್ದುವು. .... ಅನಂತರ ನೀನು ಬಿಲ್ಕೀಸ್‌ಳನ್ನು ಪ್ರೀತಿಸಲು ಬಯಸಿದೆ. ಆದರೆ ಅವಳನ್ನು ಒಮ್ಮೆ ನೋಡಿ ನಿನ್ನೆಲ್ಲ ನಿಶ್ಚಯಗಳು ಹಾರಿಹೋದವು. ಮತ್ತು ನಿನ್ನ ಹೃದಯ ಅದೇ ರೀತಿ ಬಂಜರಾಗಿತ್ತು.......ಪ್ರತಿ ಸಲವೂ ನೀನು ನಿನ್ನ ನಿಜವಾದ ಪ್ರೀತಿಯನ್ನು ನೀನೇ ಸಂಶಯದ ದೃಷ್ಟಿಯಿಂದ ಕಂಡಿರುವುದು ನಿನ್ನ ಅನುಭವಕ್ಕೆ ಬಂದಿಲ್ಲವೆ? ನಿನ್ನ ಪ್ರೀತಿಯು ಸರಿಯಾದದ್ದೇ ಎಂಬ ಬಗ್ಗೆ ನಿನಗೆ ಪೂರ್ಣವಾದ ವಿಶ್ವಾಸ ಎಂದೂ ಉಂಟಾಗಲೇ ಇಲ್ಲ. ಈಗಲೂ ನೀನು ಹೆದರುತ್ತಿದ್ದೀಯ. ಇಲ್ಲಿ ಮನೆಯ ಹೆಂಗಸರು ಮತ್ತು ಅಂಚೆಯವರ ಪ್ರಶ್ನೆ ಇಲ್ಲ. ಹಿಂದೂ ಮುಸ್ಲಿಮರ ಕಲಹದ ಭಯವೂ ಇಲ್ಲಿಲ್ಲ. ಇದರ ಹೊರತಾಗಿ ನೀನು ಎಂದೂ ಆ ಕೊಠಡಿಯ ಕಡೆ ಹೋಗಲಾರೆ..... ನೀನು ಅದು ಹೇಗೆ ಮೇಲಕ್ಕೆ ಹೋಗುತ್ತೀಯಾ ಅಂತ ನಾನು ನೋಡುತ್ತೀನಿ"

ಜಾವೇದನ ಇದ್ದಬದ್ದ ಧೈರ್ಯವೂ ಕುಸಿಯಿತು. ತಾನು ನಿಜಕ್ಕೂ ಮೊದಲ ದರ್ಜೆಯ ಅಂಜುಬುರುಕ ಎಂಬುದು ಗೊತ್ತಾಯಿತು. ಹಳೆಯ ಘಟನೆಗಳು ಜೋರಾಗಿ ಬೀಸುತ್ತಿರುವ ಗಾಳಿಗೆ ಎದುರಾಗಿ ಇಟ್ಟಿರುವ ಪುಸ್ತಕದ ಹಾಳೆಗಳಂತೆ ಅವನ ಮನಸ್ಸಿನಲ್ಲಿ ಬಹಳ ಹೊತ್ತಿನ ವರೆಗೆ ಹಾರಾಡುತ್ತಿದ್ದುವು. ಜೊತೆಗೆ ಅವನಿಗೆ ಮೊದಲ ಬಾರಿಗೆ ಅನುಭವಕ್ಕೆ ಬಂದ ಸಂಗತಿಯೆಂದರೆ ಅವನ ಅಸ್ತಿತ್ವದ ತಳಹದಿಯಲ್ಲೇ ಒಂದು ಬಗೆಯ ಹಿಂಜರಿಕೆ ಅಡಗಿದ್ದು ಅದು ಅವನನ್ನು ಕರುಣೆಯ ಅಂಚಿಗೆ ಪಾತ್ರನಾಗುವಂಥ ಹೇಡಿಯನ್ನಾಗಿ ಮಾಡಿಬಿಟ್ಟಿದೆ ಎಂಬುದು.

ಎದುರುಗಡೆಯ ಮೆಟ್ಟಿಲುಗಳಿಂದ ಯಾರೋ ಇಳಿಯುತ್ತಿರುವ ಸದ್ದು ಕೇಳಿಬಂದು ಜಾವೇದನ ಆಲೋಚನೆಗಳು ನಿಂತವು. ತಾನು ಅನೇಕ ಸಲ ಗೆಳೆಯರಿಂದ ಕೇಳಿದ್ದ ಅದೇ ಗಾಢ ಬಣ್ಣದ ಗಾಜಿನ ಕನ್ನಡಕ ಧರಿಸುವವಳು ಮೆಟ್ಟಿಲುಗಳ ಕೆಳಗೆ ಕಟ್ಟೆಯ ಮೇಲೆ ನಿಂತಿದ್ದಳು. ಜಾವೇದನಿಗೆ ಗಾಬರಿಯಾಯಿತು. ಅವನು ಮುಂದೆ ಮೆಲ್ಲಗೆ ಸರಿದುಕೊಂಡು ಹೋಗಿಬಿಡುವ ಹಂಚಿಕೆಯಲ್ಲಿದ್ದ. ಅಷ್ಟರಲ್ಲಿ ಅವಳು ಬಹಳ ಕೆಟ್ಟ ದನಿಯಲ್ಲಿ ಅವನನ್ನು ಕೂಗಿ ಕರೆದಳು– "ನನ್ನ ಪ್ರಾಣವೇ ನಿಂತುಕೋ ನೀನು! ಗಾಬರಿಯಾಗ ಬೇಡ. ..... ಬಾ..... ಬಾ" ಎಂದು ಲಲ್ಲೆಯಿಂದ ಪ್ರೇಮ ಸೂಸುವ ಮಾತುಗಳಲ್ಲಿ "ಇತ್ತ ಬಂದುಬಿಡು..... ಬಂದುಬಿಡು"

ಜಾವೇದನಿಗೆ ತಾನು ಇನ್ನೊಂದಷ್ಟು ಹೊತ್ತು ಅಲ್ಲೇ ಇದ್ದರೆ ಅವನ ಬೆನ್ನ ಹಿಂದೆ ಬಾಲ ಬೆಳೆದುಬಿಡುತ್ತೆ; ಅಷ್ಟೇ ಅಲ್ಲ ಆ ಹೆಂಗಸು ಲಲ್ಲೆಗರೆದು ಕರೆದರೆ ಆ ಬಾಲ

ಅಲ್ಲಾಡೋಕೂ ಶುರು ಆಗಿಬಿಡುತ್ತೆ ಅನ್ನಿಸಿತು. ಈ ಅನುಭವದೊಂದಿಗೆ ಅವನು ಆ ಕಟ್ಟೆ ಕಡೆಗೆ ಗಾಬರಿಗೊಂಡ ನೋಟದಿಂದ ನೋಡಿದ. ಜೀವಾ ಮಾಯಿಯ ಧಂಧೆ ಮನೆಯ ಲಕ್ಷಣವಂತ ಹೆಣ್ಣು ತನ್ನ ದೇಹವನ್ನು ಅದು ಯಾವ ರೀತಿ ವ್ಯೆಯಾರ ಮಾಡಿದಳು ಅಂದರೆ ಜಾವೇದನ ಸಕಲ ನಿಶ್ಚಯಗಳೂ ಮಾಗಿದ ಎಲಚಿ (ಬೋರೆ) ಹಣ್ಣುಗಳಂತೆ ಉದುರಿಹೋದವು.

ಅವಳು ಮತ್ತೆ ಕರೆದಳು– "ಬಾ, ನನ್ನ ಜೀವವೇ, ಈಗ ಬಂದೇ ಬಿಡು"

ಜಾವೇದ್ ಒಮ್ಮೆಲೇ ಓಡಿದ. ಯಾವಾಗ ಅವನು ಚರಂಡಿಯನ್ನು ಹಾರಿ ಪೇಟೆಯನ್ನು ತಲುಪಿದನೋ ಆಗ ಒಂದು ಅಟ್ಟಹಾಸದ ನಗೆಯ ದನಿ ಕೇಳಿ ಬಂತು. ಅದು ಅಪಾಯಕಾರಿ ಅಷ್ಟೇ ಅಲ್ಲ ಹೆದರಿಕೆ ಹುಟ್ಟಿಸುವಂಥದೂ ಆಗಿತ್ತು. ಅವನು ನಡುಗಿಬಿಟ್ಟ. ತನ್ನ ಮನೆ ತಲುಪಿದಾಗ ಅವನ ಆಲೋಚನೆಗಳ ಸಂದಣಿಯಿಂದ ಇದ್ದಕ್ಕಿದ್ದಂತೆ ಒಂದು ಆಲೋಚನೆ ಎದ್ದುನಿಂತಿತು. ಅದು ಅವನನ್ನು "ಜಾವೇದ್ ನೀನು ಒಂದು ಭಾರಿ ಪಾಪ ಕೃತ್ಯ ಮಾಡುವುದರಿಂದ ಉಳಿದುಕೊಂಡೆ. ದೇವರಿಗೆ ಧನ್ಯವಾದ ಹೇಳು" ಎಂದು ಸಮಾಧಾನ ಪಡಿಸಿತು.

❖

ಅನಾರ್ಕಲಿ ದಾಳಿಂಬೆಯ ಮೊಗ್ಗು

ಉರ್ದು : ಸಾದತ್ ಹಸನ್ ಮಂಟೋ

ಅವನ ಹೆಸರೇನೋ ಸಲೀಮ್. ಆದರೆ ಅವನ ಗೆಳೆಯರು ಸ್ನೇಹಿತರೆಲ್ಲಾ ಅವನನ್ನು ರಾಜಕುಮಾರ ಸಲೀಮ್ ಎಂದು ಕರೆಯುತ್ತಿದ್ದರು. ಕಾರಣ ಬಹುಶಃ ಅವನ ಲಕ್ಷಣ ಮೊಗಲರ ಥರದ್ದಾಗಿತ್ತು, ನೋಡೋದಕ್ಕೆ ಸುಂದರನೂ ಆಗಿದ್ದ. ಅವನ ನಡೆ ನುಡಿಗಳಲ್ಲಿ ಶ್ರೀಮಂತಿಕೆ ಅನ್ನುವುದು ತೊಟ್ಟಿಕ್ಕುತ್ತಿತ್ತು.

ಅವನ ತಂದೆ ಪಿ. ಡಬ್ಲ್ಯು. ಡಿ ಇಲಾಖೆಯಲ್ಲಿ ಒಬ್ಬ ನೌಕರ. ಸಂಬಳ ಹೆಚ್ಚೆಂದರೆ ನೂರು ರೂಪಾಯಿ ಇರಬಹುದು. ಆದರೆ ಬಹಳ ಠೀವಿಯಿಂದ ಇರುತ್ತಿದ್ದ. ಲಂಚ ತಿನ್ನುತ್ತಿದ್ದ ಅನ್ನುವುದು ಸ್ಪಷ್ಟವೇ ಇದೆ. ಇದೇ ಕಾರಣದಿಂದ ಸಲೀಮ ತುಂಬ ಒಳ್ಳೆಯ ಉಡುಪುಗಳನ್ನು ಧರಿಸುತ್ತಿದ್ದ. ತಂದೆ ತಾಯಿಗಳ ಒಬ್ಬನೇ ಮಗ ಅನ್ನುವ ಕಾರಣಕ್ಕೆ ಪಾಕಟ್ ಮನಿಯೂ ಸಾಕಷ್ಟು ಸಿಗುತ್ತಿತ್ತು.

ಅವನು ಯಾವಾಗಲೂ ಚೆನ್ನಾಗಿ ಅಲಂಕರಿಸಿಕೊಂಡು ಇರುತ್ತಿದ್ದ. ಅವನ ಹತ್ತಿರ ಕೆಲವು ಸೂಟುಗಳು, ಅನೇಕ ಷರ್ಟುಗಳು ಇದ್ದವು. ಅವುಗಳನ್ನೆಲ್ಲ ಅದಲು-ಬದಲು ಮಾಡಿಕೊಂಡು ಧರಿಸುತ್ತಿದ್ದ. ಶೂ ಕನಿಷ್ಠ ಏನಿಲ್ಲಾ ಅಂದರೂ ಸುಮಾರು ಇಪ್ಪತ್ತು ರೂಪಾಯಿನದು ಆಗಿರಬಹುದು.

ಕಾಲೇಜಿನಲ್ಲಿ ಓದುತ್ತಾ ಇದ್ದಾಗ ಹಲವಾರು ಜನ ಹುಡುಗಿಯರು ಅವನಿಗಾಗಿ ಪ್ರಾಣ ಬಿಡುತ್ತಾ ಇದ್ದರು. ಆದರೆ ಅವರ ವಿಷಯದಲ್ಲಿ ಅವನದು ಉದಾಸೀನ. ಕೊನೆಗೆ ಸೀಮಾ ಎನ್ನುವ ಒಬ್ಬ ಚಂಚಲ ಹುಡುಗಿಯ ಮೇಲೆ ಅವನಿಗೆ ಪ್ರೀತಿ ಹುಟ್ಟಿಬಿಡ್ತು. ಸಲೀಮ ಅವಳೊಂದಿಗೆ ಸ್ನೇಹ ಬೆಳೆಸಲು ಇಚ್ಛಿಸಿದ. ಅವಳ ಸ್ನೇಹವನ್ನು ಸಂಪಾದಿಸಿಯೇ ತೀರುತ್ತೇನೆಂದು ಅವನಿಗೆ ನಂಬಿಕೆ ಇತ್ತು. ಅಲ್ಲ, ಅವಳನ್ನು ಪ್ರೇಮದ ದೃಷ್ಟಿಯಿಂದ ನೋಡಿದ ಕಾರಣದಿಂದ ಸೀಮಾಳೇ ತನ್ನ ಕಾಲ ಮೇಲೆ ಬಿದ್ದು ತನಗೆ ಉಪಕೃತಳಾಗಿರುತ್ತಾಳೆ ಮತ್ತು ಕೃತಜ್ಞಳಾಗಿರುತ್ತಾಳೆ ಎಂದು ಭಾವಿಸಿದ.

ಒಂದು ದಿನ ಕಾಲೇಜಿನಲ್ಲಿ ಸಲೀಮ್ ಮೊದಲ ಬಾರಿಗೆ ಅವಳನ್ನು ಸಂಬೋಧಿಸುತ್ತ– "ತಾವು ಪುಸ್ತಕಗಳ ಇಷ್ಟೊಂದು ಭಾರವನ್ನು ಹೊತ್ತುಕೊಂಡಿದ್ದೀರಿ; ತನ್ನಿ ಅದನ್ನು ನನಗೆ ಕೊಟ್ಟುಬಿಡಿ. ನನ್ನ ಜಟಕಾ ಆಚೆಕಡೆ ಇದೆ. ತಮ್ಮನ್ನು ಮತ್ತು ತಮ್ಮ ಈ ಭಾರವನ್ನು ತಮ್ಮ ಮನೆಯ ತನಕ ನಾನು ತಲುಪಿಸುತ್ತೀನಿ." ಎಂದು ಹೇಳಿದ.

ಸೀಮಾ ತನ್ನ ಭಾರೀ ತೂಕದ ಪುಸ್ತಕಗಳನ್ನು ಕಂಕುಳಲ್ಲಿ ಒತ್ತಿ ಹಿಡಿದು ಸಂತೋಷ ಚಿತ್ತಳಾಗಿ ನುಡಿದಳು– "ತಮ್ಮ ಸಹಾಯದ ಅಗತ್ಯ ನನಗೆ ಏನೇನೂ ಇಲ್ಲ, ಆದರೂ ತಮಗೆ ಧನ್ಯವಾದಗಳನ್ನು ಹೇಳುತ್ತೀನಿ".

ರಾಜಕುಮಾರ ಸಲೀಮನಿಗೆ ಅವನ ಜೀವನದ ದೊಡ್ಡ ಪೆಟ್ಟು ತಾಕಿತು. ಕೆಲವು ಕ್ಷಣ ತನ್ನ ನಾಚಿಕೆಯನ್ನು ಕಳೆದುಕೊಂಡ. ಆಮೇಲೆ ಸೀಮಾಳಿಗೆ ಹೇಳಿದ–"ಹೆಣ್ಣಿಗೆ ಗಂಡಿನ ನೆರವಿನ ಆವಶ್ಯಕತೆ ಇರುತ್ತೆ. ನನ್ನ ಪ್ರಸ್ತಾಪವನ್ನು ತಾವು ಏಕೆ ತಿರಸ್ಕರಿಬಿಟ್ಟಿರಿ ಅಂತ ಆಶ್ಚರ್ಯ ಆಗುತ್ತೆ."

ಸೀಮಾಳ ಸ್ವರ ಇನ್ನಷ್ಟು ನೀರಸವಾಯಿತು– "ಮಹಿಳೆಯರಿಗೆ ಪುರುಷರ ನೆರವಿನ ಆವಶ್ಯಕತೆ ಉಂಟಾಗುತ್ತೆ. ಆದರೆ ಸದ್ಯಕ್ಕೆ ನನಗೆ ಇಂಥ ಯಾವುದೇ ಆವಶ್ಯಕತೆ ಇದೆ ಅಂತ ಅನ್ನಿಸ್ತಾ ಇಲ್ಲ. ನಿಮ್ಮ ಪ್ರಸ್ತಾಪಕ್ಕೆ ನಾನು ಆಗಲೇ ಧನ್ಯವಾದ ಹೇಳಿಬಿಟ್ಟಿದ್ದೀನಿ. ಇದಕ್ಕಿಂತ ಹೆಚ್ಚು ನಿಮಗೆ ಬೇರೆ ಏನು ಬೇಕು?"

ಹೀಗಂತ ಹೇಳಿ ಸೀಮಾ ಹೊರಟುಹೋದಳು. ಅನಾರ್ಕಲಿಯ ಕನಸು ಕಾಣುತ್ತಾ ಇದ್ದ ರಾಜಕುಮಾರ ಸಲೀಮ ರೆಪ್ಪೆ ಬಡಿಯುತ್ತಾ ಇದ್ದ. ಅವನು ಬಹಳ ಕೆಟ್ಟ ರೀತಿಯಲ್ಲಿ ಸೋಲು ಅನುಭವಿಸಿದ್ದ.

ಇದಕ್ಕೂ ಮುಂಚೆ ಅವನ ಅವನ ಕಣ್ಸನ್ನೆಯ ಮೇರೆಗೆ ನಡೆದುಕೊಳ್ಳುವ ಅನೇಕ ಹುಡುಗಿಯರು ಅವನ ಜೀವನದಲ್ಲಿ ಬಂದುಹೋಗಿದ್ದರು. ಇದ್ದರು. ಆದರೆ ಈ

ಸೀಮಾ ತನ್ನನ್ನು ತಾನು ಏನು ತಿಳಿದುಕೊಂಡಿದ್ದಾಳೆ? ಅವಳು ಸುಂದರವಾಗಿದ್ದಾಳೆ ಅನ್ನುವುದರಲ್ಲಿ ಸಂಶಯವಿಲ್ಲ. ಇದುವರೆಗೆ ನಾನು ನೋಡಿರುವ ಹುಡುಗಿಯರಲ್ಲೆಲ್ಲ ಅತ್ಯಂತ ಸುಂದರವಾಗಿದ್ದಾಳೆ. ಆದರೆ ನನ್ನನ್ನು ತಿರಸ್ಕರಿಸುವುದು–ಇದಂತೂ ತುಂಬ ಹೆಚ್ಚಾಯಿತು. ಬೇಕಾದ್ದಾಗಲಿ. ನಾನು ಖಂಡಿತಾ ಅವಳ ಮೇಲೆ ಸೇಡು ತೀರಿಸಿಕೊಳ್ತೀನಿ.

ರಾಜಕುಮಾರ ಸಲೀಮ್ ಅವಳ ಮೇಲೆ ಸೇಡು ತೀರಿಸಿಕೊಳ್ಳುವ ಅನೇಕ ಸ್ಕೀಮುಗಳನ್ನು ಹಾಕಿದ. ಆದರೆ ಯಾವುದೂ ಯಶಸ್ವಿಯಾಗಲಿಲ್ಲ. ಅವಳ ಮೂಗು ಕೊಯ್ದು ಬಿಡಲೆ ಅನ್ನುವವರೆಗೂ ಯೋಚಿಸಿದ. ಅವನು ಈ ಅಪರಾಧ ಮಾಡಿಬಿಡುತ್ತಿದ್ದ. ಆದರೆ ಅವನಿಗೆ ಸೀಮಾಳ ಮುಖದ ಮೇಲಿನ ಈ ಮೂಗು ತುಂಬಾ ಇಷ್ಟವಾಗಿತ್ತು. ಅತ್ಯಂತ ದೊಡ್ಡ ಚಿತ್ರಕಾರ ಕೂಡ ಇಂಥ ಮೂಗಿನ ಕಲ್ಪನೆ ಮಾಡಲಾಗುತ್ತಿರಲಿಲ್ಲ.

ಸಲೀಮನಂತೂ ತನ್ನ ನಿಶ್ಚಯಗಳಲ್ಲಿ ಸಫಲನಾಗಲಿಲ್ಲ. ಆದರೆ ಅದೃಷ್ಟ ಅವನಿಗೆ ನೆರವು ನೀಡಿತು. ಅವನ ತಾಯಿ ಅವನಿಗೆ ಸಂಬಂಧ ಹುಡುಕುವುದಕ್ಕೆ ಪ್ರಾರಂಭಿಸಿದಳು. ಹೆಣ್ಣನ್ನು ಆಯ್ಕೆ ಮಾಡುವ ಹೊಣೆ ಸೀಮಾಳ ಮೇಲೆ ಬಿತ್ತು . ಆಯ್ಕೆ ಮಾಡಿದ ಹೆಣ್ಣು ಸಲೀಮನ ತಾಯಿಯ ಗೆಳತಿಯ ಮಗಳಾಗಿದ್ದಳು.

ಮಾತು ಪಕ್ಕಾ ಆಯಿತು. ಆದರೆ ಸಲೀಮ್ ತಿರಸ್ಕರಿಸಿಬಿಟ್ಟ. ಇದರಿಂದ ಅವಳ ತಾಯಿ ತಂದೆಯರು ತುಂಬಾ ಸಿಟ್ಟಾದರು. ಮನೆಯಲ್ಲಿ ಹತ್ತು–ಹನ್ನೆರಡು ದಿನ ಇದರದ್ದೇ ಗಲಾಟೆ.

ಸಲೀಮನ ತಂದೆಯ ಆರೋಗ್ಯ ಸ್ವಲ್ಪ ಸೀರಿಯಸ್ ಆಗಿತ್ತು. ಅವರು ಅವನಿಗೆ ಹೇಳಿಬಿಟ್ಟರು– "ನೋಡು ನೀನು ನಮ್ಮ ತೀರ್ಮಾನ ಒಪ್ಪಿಕೊಳ್ಳಲೇ ಬೇಕು."

ಸಲೀಮ ಹಠವಾದಿ. ಹೇಳಿದ– "ನಿಮ್ಮ ತೀರ್ಮಾನ ಯಾವುದೋ ಹೈಕೋರ್ಟಿನ ತೀರ್ಮಾನವೇನಲ್ಲ. ನೀವು ತೀರ್ಮಾನ ಹೇಳುವಂಥ ಅಪರಾಧ ನಾನೇನು ಮಾಡಿದ್ದೀನಿ?"

ಅವನ ತಂದೆಗೆ ಇದನ್ನು ಕೇಳಿ ಕೋಪ ಬಂದುಬಿಟ್ಟಿತು. "ನಮ್ಮ ಆಜ್ಞೆಯನ್ನು ಒಪ್ಪಿಕೊಳ್ಳದಿರುವುದೇ ನಿನ್ನ ಅಪರಾಧ. ನಿನ್ನ ತಂದೆ ತಾಯಿಗಳ ಮಾತು ಕೇಳ್ತಾ ಇಲ್ಲ. ಆಜ್ಞೆಯನ್ನು ಮೀರುತ್ತಾ ಇದ್ದೀಯ. ನಾನು ನಿನ್ನನ್ನು ಆಸ್ತಿಯಿಂದ ದೂರ ಮಾಡ್ತೀನಿ"

ಸಲೀಮನ ಉತ್ಸಾಹ ಸ್ವಲ್ಪ ತಣ್ಣಗಾಯಿತು. ಹೇಳಿದ– "ಆದರೆ ಅಪ್ಪ ಮದುವೆ ನನ್ನ ಇಷ್ಟದ ಪ್ರಕಾರವೇ ನಡೀ ಬೇಕು."

"ಹೇಳು ನಿನ್ನ ಇಷ್ಟ ಏನು?"

ನೀವು ತಣ್ಣಗೆ ಕೇಳಿಸಿಕೊಳ್ಳೋದಾದರೆ ನನ್ನ ಕೋರಿಕೆ ಹೇಳಲೆ?

ನನ್ನ ಹೃದಯ ತಣ್ಣಗೇ ಇದೆ. ನೀನು ಏನು ಹೇಳಬೇಕು ಅಂತ ಇದ್ದೀಯ ತಕ್ಷಣ ಹೇಳಿಬಿಡು. ನಾನು ತುಂಬಾ ಹೊತ್ತು ಕಾಯಕ್ಕಾಗಲ್ಲ"

ಸಲೀಮ್ ತಡೆ-ತಡೆದು ಹೇಳಿದ- "ನಾನು ಒಬ್ಬ ಹುಡುಗಿಯನ್ನು ಪ್ರೀತಿಸ್ತಾ ಇದ್ದೀನಿ."

ಅವರ ಅಪ್ಪ ಗರ್ಜಿಸಿದ- "ಯಾವ ಹುಡುಗಿ"

"ಒಬ್ಬ ಹುಡುಗಿ ಇದ್ದಾಳೆ"

"ಯಾರವಳು? ಅವಳ ಹೆಸರೇನು?"

"ಸೀಮಾ! ನನ್ನ ಜೊತೆ ಕಾಲೇಜಿನಲ್ಲಿ ಓದ್ತಾ ಇದ್ದಳು"

"ಮಿಯಾ ಇಫ್ತಖಾರುದ್ದೀನನ ಮಗಳು ತಾನೆ?"

ಹೌದು, ಅವಳೇ, ಅವಳ ಹೆಸರು ಸೀಮಾ ಇಫ್ತಖಾರ್"

ಅವನ ತಂದೆ ಅಟ್ಟಹಾಸದಿಂದ ನಗತೊಡಗಿದರು."

"ಏ ಖಯಾಲೀ ಹುಡುಗಾ ನಿನ್ನ ಮದುವೆ ಅದೇ ಹುಡುಗಿಯ ಜೊತೆ ನಿಶ್ಚಯವಾಗಿದೆ. ಅವಳು ನಿನ್ನನ್ನು ಇಷ್ಟ ಪಡ್ತಾ ಇದ್ದಾಳೇನು?"

ಸಲೀಮ್ ಹುಚ್ಚು ಹಿಡಿದವನಂತಾದ. ಈ ಪ್ರಕರಣ ಹೇಗಾಯ್ತು? ಅವನಿಗೆ ಅರ್ಥವೇ ಆಗುತ್ತಿರಲಿಲ್ಲ. ಅವರ ತಂದೆ ಸುಳ್ಳು ಹೇಳುತ್ತಾ ಇಲ್ಲ ತಾನೆ? ಸಲೀಮನನ್ನು ಪ್ರಶ್ನೆ ಕೇಳಿದ್ದರು. ಅದಕ್ಕೆ ಅವನು ಉತ್ತರ ಕೊಟ್ಟಿರಲಿಲ್ಲ. ಹಾಗಾಗಿ ಅವರು ಬಹಳ ಬಿರುಸಾಗಿ ಕೇಳಿದರು- "ಸಲೀಮ್ ಸರಿಯಾಗಿ ಹೇಳು, ಸೀಮಾ ನಿನ್ನನ್ನು ಇಷ್ಟಪಡುತ್ತಾಳಾ?"

ಸಲೀಮ್ ಹೇಳಿದ-"ಇಲ್ಲ"

"ಇದು ನಿನಗೆ ಹೇಗೆ ಗೊತ್ತು?"

"ಹೌದು, ತುಂಬಾ ಒರಟಾಗಿ ಮುಖ ತಿರುಗಿಸಿಕೊಂಡು ಹೋಗ್ತಾಳೆ."

ಸಲೀಮನ ತಂದೆ ತಮ್ಮ ಬೋಳು ತಲೆಯನ್ನು ಸ್ವಲ್ಪ ಹೊತ್ತು ಅಲ್ಲಾಡಿಸಿ ಹೇಳಿದರು- "ಹಾಗಂದ ಮೇಲೆ ಈ ಸಂಬಂಧ ಆಗಕೂಡದು. ಹುಡುಗನಿಗೆ ಒಪ್ಪಿಗೆ ಇಲ್ಲ ಅಂತ ಹೇಳಿ ಹುಡುಗಿಯ ಕಡೆಯವರಿಗೆ ಹೇಳಿಬಿಡು ಅಂತ ನಿಮ್ಮ ಅಮ್ಮನ ಹತ್ತಿರ ಹೇಳಿಬಿಡ್ತೀನಿ."

ಸಲೀಮ್ ಒಮ್ಮಲೇ ಭಾವುಕನಾದ. "ಇಲ್ಲ ಅಪ್ಪಾ, ಹಾಗೆ ಮಾಡಬೇಡಿ. ಮದುವೆ ಆಯಿತು ಅಂದರೆ ಎಲ್ಲಾ ಸರಿಹೋಗಿಬಿಡುತ್ತೆ. ನಾನು ಅವಳನ್ನು ಪ್ರೀತಿಸುತ್ತೀನಿ. ಮತ್ತು ಯಾರದೇ ಪ್ರೀತಿ ಎಂದೂ ವ್ಯರ್ಥವಾಗಲ್ಲ. ಆದರೆ ನೀವು ಅವರಿಗೆ- ಅಂದರೆ ನನ್ನ ಮಾತಿನ ಅರ್ಥ ಯಾರ ಬಗ್ಗೆ ಅವಳು ಈಗಾಗಲೇ ಮುಖ ತಿರುಗಿಸಿಕೊಂಡು,

ಕಡೆಗಣಿಸಿ ನಡೆದುಕೊಂಡಿದ್ದಾಳೋ ಅಂಥ ಸೀಮಾಳ ಮದುವೆ ನನ್ನ ಜೊತೆ ಆಗುತ್ತಾ ಇದೆ ಅನ್ನುವ ವಿಷಯವನ್ನು ಅವಳಿಗೆ ಗೊತ್ತಾಗದ ಹಾಗೆ ನೋಡಿಕೊಳ್ಳಿ."

ಅವರ ತಂದೆ ತಮ್ಮ ಬೋಳು ತಲೆಯ ಮೇಲೆ ಒಮ್ಮೆ ಕೈಯಾಡಿಸಿ ಹೇಳಿದರು– "ಈ ಬಗ್ಗೆ ನಾನು ಯೋಚನೆ ಮಾಡ್ತೀನಿ"

ಮಗನ ಮದುವೆಯ ಖರ್ಚಿನ ಸಲುವಾಗಿ ಒಬ್ಬ ಗಿರಾಕಿಯಿಂದ ತಾನು ಲಂಚ ವಸೂಲು ಮಾಡಬೇಕಾಗಿದೆ ಅಂತ ಹೇಳಿ ಅವರು ಹೊರಟುಹೋದರು.

ರಾಜಕುಮಾರ ಸಲೀಮ್ ರಾತ್ರಿ ಮಲಗಲು ಮಂಚದ ಮೇಲೆ ಉರುಳಿಕೊಂಡಾಗ ಅವನಿಗೆ ದಾಳಿಂಬೆಯ ಮೊಗ್ಗುಗಳೇ ಕಂಡುಬಂದುವು. ರಾತ್ರಿಯೆಲ್ಲಾ ಅವುಗಳದೇ ಕನಸು ಕಾಣುತ್ತಿದ್ದ ಅವನು.

ಕುದುರೆ ಏರಿ ಸವಾರನು ಮದುವೆಯ ಪೋಷಾಕು ಧರಿಸಿ ತೋಟಕ್ಕೆ ಬಂದಿದ್ದಾನೆ. ಕುದುರೆಯಿಂದ ಇಳಿದು ತೋಟದ ಒಂದು ಸಸಿ ಮಡಿಗಳ ಮಧ್ಯದ ಮಾರ್ಗದಲ್ಲಿ ಸಾಗಿ ಹೋಗುತ್ತಿದ್ದಾನೆ. ನೋಡುತ್ತಾನೆ ಸೀಮಾ ದಾಳಿಂಬೆಯ ಗಿಡದ ಅತ್ಯಂತ ಎತ್ತರವಾದ ಒಂದು ಕೊಂಬೆಯಿಂದ ಒಂದು ಹೊಸ ಮೊಗ್ಗನ್ನು ಕೊಯ್ಯಲು ಯತ್ನಿಸುತ್ತಿದ್ದಾಳೆ. ಭಾರಿ ತೂಕದ ಅವಳ ದಪ್ಪ ದಪ್ಪ ಪುಸ್ತಕಗಳು ನೆಲದ ಮೇಲೆ ಹರಡಿಕೊಂಡು ಬಿದ್ದಿವೆ. ಬೆನ್ನ ಹಿಂದಿನ ಉದ್ದವಾದ ಕೂದಲುಗಳು ತಿರುಚಿಕೊಂಡಿವೆ. ಅವಳು ತುದಿಗಾಲ ಮೇಲೆ ನಿಂತು ಎಗರಿ ಎಗರಿ ಆ ಕೊಂಬೆಯನ್ನು ತನ್ನ ಕೈಗೆ ಎಟುಕಿಸಿಕೊಳ್ಳಲು ಯತ್ನಿಸುತ್ತಿದ್ದಾಳೆ.

ಸಲೀಮನು ಅವಳ ಕಡೆಗೆ ಓಡಿದ. ದಾಳಿಂಬೆಯ ಪೊದೆಯ ಹಿಂದೆ ಅವಿತುಕೊಂಡು ಅವನು ಆ ಕೊಂಬೆಯನ್ನು ಹಿಡಿದು ಬಗ್ಗಿಸಿದನು. ಸೀಮಾ ತಾನು ಎಟುಕಿಸಿಕೊಳ್ಳಲು ಯತ್ನಿಸುತ್ತಿದ್ದ ಆ ಮೊಗ್ಗನ್ನು ಕೊಯ್ದುಕೊಂಡಳು. ಆದರೆ ತಕ್ಷಣ ಅವಳಿಗೆ ಈ ಕೊಂಬೆ ಹೇಗೆ ಕೆಳಕ್ಕೆ ಬಗ್ಗಿತು ಎಂದು ಅನ್ನಿಸಿತು.

ಅವಳು ಇನ್ನೂ ಯೋಚಿಸುತ್ತಿದ್ದಳು. ಅಷ್ಟರಲ್ಲಿ ರಾಜಕುಮಾರ ಸಲೀಮನು ಅವಳ ಹತ್ತಿರಕ್ಕೆ ಹೋದನು. ಸೀಮಾ ಗಾಬರಿಗೊಂಡಳು. ಆದರೆ ಸಂಭಾಳಿಸಿಕೊಂಡು ತನ್ನ ಪುಸ್ತಕಗಳನ್ನು ಎತ್ತಿಕೊಂಡು ಕಂಕುಳಲ್ಲಿ ಇರುಕಿಕೊಂಡಳು.

ದಾಳಿಂಬೆಯ ಮೊಗ್ಗನ್ನು ಜುಟ್ಟಿನಲ್ಲಿ ಸಿಕ್ಕಿಸಿಕೊಂಡು– "ನಿಮ್ಮ ನೆರವಿನ ಅಗತ್ಯ ನನಗೆ ಇಲ್ಲ, ಎಲ್ಲ ಸಂದರ್ಭದಲ್ಲೂ ನಿಮಗೆ ಧನ್ಯವಾದ ಹೇಳುತ್ತೀನಿ" ಎಂದು ಹೇಳುತ್ತ ಅಲ್ಲಿಂದ ಹೊರಟುಹೋದಳು.

ಇಡೀ ರಾತ್ರಿ ಅವನು ಇದೇ ರೀತಿಯ ಕನಸುಗಳನ್ನು ಕಾಣುತ್ತ ಇದ್ದ. –ಸೀಮಾ, ಅವಳ ಭಾರೀ ಗಾತ್ರದ ಪುಸ್ತಕಗಳು, ದಾಳಿಂಬೆಯ ಮೊಗ್ಗುಗಳು ಮತ್ತು ಮದುವೆಯ ಸಂಭ್ರಮ.

ಮದುವೆ ಆಯಿತು. ರಾಜಕುಮಾರ ಸಲೀಮನಿಗೆ ಈ ಸಂದರ್ಭದಲ್ಲಿ ತನ್ನ ಅನಾರ್ಕಲಿಯ ಒಂದೇ ಒಂದು ನೋಟವನ್ನೂ ನೋಡಲಾಗಲಿಲ್ಲ. ಸೀಮಾ ತನ್ನ ತೋಳುಗಳಲ್ಲಿ ಇರುವ ಆ ಕ್ಷಣಗಳಿಗಾಗಿ ಚಡಪಡಿಸುತ್ತಿದ್ದ. ಅವಳನ್ನು ತಾನು ಅದೆಷ್ಟು ಪ್ರೀತಿಸುವನೆಂದರೆ ಅವಳು ಚಿಂತಿತಳಾಗಿ ಅಳುವುದಕ್ಕೆ ಪ್ರಾರಂಭಿಸಿ ಬಿಡುತ್ತಾಳೆಂದು ಭಾವಿಸಿದ.

ಸಲೀಮನಿಗೆ ಅಳುವ ಹುಡುಗಿಯರೆಂದರೆ ಬಹಳ ಇಷ್ಟ. ಅವನ ತರ್ಕವೆಂದರೆ ಹೆಂಗಸು ಅಳುತ್ತಿರುವಾಗಲೇ ಅತ್ಯಂತ ಸುಂದರವಾಗಿ ಕಾಣುವುದು. ಅವಳ ಕಣ್ಣೀರು ಇಬ್ಬನಿಯ ಹನಿಗಳಂತೆ. ಅವು ಪುರುಷನ ಭಾವನೆಗಳೆಂಬ ಹೂಗಳ ಮೇಲೆ ಬಿದ್ದದ್ದೇ ಆದರೆ ಅದರಿಂದ ಅವನಿಗೆ ಬೇರೆ ಇನ್ನಾವುದೇ ಸಂದರ್ಭದಲ್ಲೂ ಸಿಗದಂಥ ನೆಮ್ಮದಿ, ಸಂತಸ ಸಿಗುತ್ತದೆ.

ರಾತ್ರಿಯ ಹತ್ತು ಗಂಟೆಗೆ ವಧುವನ್ನು ವರನ ಕೊಠಡಿಯೊಳಕ್ಕೆ ಕಳಿಸಿಕೊಡಲಾಯಿತು. ಸಲೀಮನಿಗೂ ಆ ಕೊಠಡಿಗೆ ಹೋಗಲು ಅನುಮತಿ ಸಿಕ್ಕಿತು. ಹುಡುಗಿಯರ ಛೇಡಿಸುವಿಕೆ, ಚೇಷ್ಟೆ, ಚೆಲ್ಲಾಟಗಳು ಮತ್ತು ಸಂಪ್ರದಾಯಗಳೆಲ್ಲಾ ಮುಗಿದ ಮೇಲೆ ಅವನು ಕೊಠಡಿಯೊಳಕ್ಕೆ ಪ್ರವೇಶಿಸಿದ.

ಹೂಗಳಿಂದ ಅಲಂಕೃತವಾದ ಸೆಜ್ಜೆಯ ಮೇಲೆ ಪರದೆ ಮುಸುಕಿದ ರೇಷ್ಮೆಯ ಗೂಡೆಯಂತಾಗಿದ್ದ ವಧು ಕುಳಿತಿದ್ದಳು. ರಾಜಕುಮಾರ ಸಲೀಮನು ಹೊಡೆದು ಕೊಳ್ಳುತ್ತಿರುವ ಹೃದಯದೊಂದಿಗೆ ಸೆಜ್ಜೆಯ ಕಡೆಗೆ ನುಗ್ಗಿ ವಧುವಿನ ಬಳಿ ಕುಳಿತ.

ಬಹಳಷ್ಟು ಹೊತ್ತು ತನ್ನ ಹೆಂಡತಿಯೊಂದಿಗೆ ಅವನಿಗೆ ಏನೂ ಮಾತನಾಡಲಾಗಲಿಲ್ಲ. ಅವಳ ಕಂಕುಳಲ್ಲಿ ಪುಸ್ತಕಗಳಿರುತ್ತವಾದರೂ ಅವುಗಳನ್ನು ಎತ್ತಿಕೊಳ್ಳಲು ತನಗೆ ಅವಳು ಬಿಡುವುದಿಲ್ಲವೆಂದು ಅನಿಸಿತ್ತಿತ್ತು. ಕೊನೆಗೂ ಬಹಳ ಧೈರ್ಯಮಾಡಿ ಅವಳನ್ನು 'ಸೀಮಾ" ಎಂದು ಕರೆದ.

ಈ ಹೆಸರನ್ನು ಉಚ್ಚರಿಸುತ್ತಿದ್ದಂತೆ ಅವನ ನಾಲಿಗೆಯ ಪಸೆ ಆರಿಹೋಯಿತು. ಆದರೆ ಮತ್ತೊಮ್ಮೆ ಧೈರ್ಯವನ್ನೆಲ್ಲಾ ಒಗ್ಗೂಡಿಸಿ ತನ್ನ ವಧುವಿನ ಮುಖದ ಮೇಲಿನ ಪರದೆಯನ್ನು ಸರಿಸಿದ ಕೂಡಲೇ ಅವನಿಗಾದ ದಿಗ್ಭ್ರಮೆ ಹೇಳತೀರದು. ಕಾರಣ ಅವಳು ಸೀಮಾ ಆಗಿರಲಿಲ್ಲ. ಬೇರೆ ಇನ್ಯಾರೋ ಹುಡುಗಿಯಾಗಿದ್ದಳು. ದಾಳಿಂಬೆಯ ಮೊಗ್ಗುಗಳೆಲ್ಲವೂ ಮುರುಟಿಹೋಗಿರುವಂತೆ ಅವನಿಗನಿಸಿತು.

❖

ಅನುಬಂಧ

ಲೇಖಕರ ಕಿರು ಪರಿಚಯ

ಲಕ್ಷ್ಮೀನಾಥ್ ಬೇಜ್ ಬರೂವ (1868–1938)

ಆಧುನಿಕ ಅಸ್ಸಾಮಿ ಭಾಷಾ ಸಾಹಿತ್ಯಗಳ ಬಹುದೊಡ್ಡ ಕವಿ, ಕಥೆಗಾರ, ಕಾದಂಬರಿಕಾರ, ನಾಟಕಕಾರ ಮತ್ತು ಪತ್ರಕರ್ತ. ಅಸ್ಸಾಮೀ ಭಾಷೆಯ ಪುನರುತ್ಥಾನಕ್ಕೆ ಬಹಳಷ್ಟು ಶ್ರಮಿಸಿದವರು. ಆಧುನಿಕ ಅಸ್ಸಾಮೀ ಸಾಹಿತ್ಯದ ಉದ್ಘಾಟಕ ರೆಂದೇ ಅವರನ್ನು ಕೈವಾರಿಸಲಾಗಿದೆ. ಅವರ ಅತ್ಯಂತ ಜನಪ್ರಿಯ ಮತ್ತು ಹೆಸರಾಂತ ಕಾದಂಬರಿ 'ಪೊದುಮ್ ಕುನ್‌ವೋರೀ'. 'ಕದಮ್ ಕಲಿ' ಕವನ ಸಂಗ್ರಹವಾದರೆ 'ಸುರಭಿ' 'ಜನೋಬಿರಿ' ಮತ್ತು 'ಕೆಹೋಕಲಿ' ಕಥಾ ಸಂಕಲನಗಳು. 'ಜಾಯ್ ಮತಿ ಕುನ್ ವರಿ', 'ಚಕ್ರಧ್ವಜ ಸಿಂಫ' ಮತ್ತು 'ಬೇರಿಮಾರ್' ಅವರ ನಾಟಕಗಳು.

ಪ್ರೇಮಚಂದ್(1880–1936)

ಹಿಂದೀ ಸಾಹಿತ್ಯದಲ್ಲಿ 'ಕಾದಂಬರೀ ಸಾರ್ವಭೌಮ' ಎಂದೇ ಹೆಸರಾದ ಪ್ರೇಮಚಂದ್ ಭಾರತೀಯ ಸಾಹಿತ್ಯದಲ್ಲೇ ಅತ್ಯಂತ ಅನನ್ಯರಾದ ಲೇಖಕರು. ಅವರ ನಿಜವಾದ ಹೆಸರು ಧನಪತರಾಯ್ ಶ್ರೀವಾಸ್ತವ. ವಾರಣಾಸಿಯ ಹತ್ತಿರದ ಲಮಹಿ

ಎಂಬ ಹಳ್ಳಿಯಲ್ಲಿ ಹುಟ್ಟಿದ ಪ್ರೇಮಚಂದ್ ಬಿ. ಎ. ತೇರ್ಗಡೆಯಾಗಿ ಅಧ್ಯಾಪಕರಾಗಿ ಆಮೇಲೆ ಶಾಲಾ ಇನ್‌ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸಿದರು. ಮೊದಲು ನಿಜ ನಾಮಧೇಯದಲ್ಲೇ ಬರೆಯುತ್ತಿದ್ದವರು ಜಿಲ್ಲಾ ಕಲೆಕ್ಟರ್ ಅವರು ಅವರ ಬರಹಗಳಿಗಾಗಿ ಜೇಲಿಗೆ ಹಾಕುವುದಾಗಿ ಹೇಳಿದ್ದರಿಂದ 'ಪ್ರೇಮಚಂದ್'ಎಂಬ ಹೆಸರಿನಿಂದ ತಮ್ಮೆಲ್ಲ ಬರವಣಿಗೆ ಮಾಡಿದರು. ಮೊದಲಿಗೆ ಉರ್ದು ಭಾಷೆಯಲ್ಲಿ ಬರೆಯುತ್ತಾ ಇದ್ದವರು ಆ ಮೇಲೆ ಹಿಂದಿಯಲ್ಲಿ ಬರೆಯಲಾರಂಭಿಸಿದರು. ಅವರ ಎಲ್ಲ ರಚನೆಗಳೂ ಹಿಂದೀ ಮತ್ತು ಉರ್ದು ಎರಡರಲ್ಲೂ ಪ್ರಕಟವಾದುವು. 'ಜಾಗರಣ' ಎಂಬ ವಾರ್ತಾ ಪತ್ರಿಕೆ ತದನಂತರ 'ಹಂಸ' ಎಂಬ ಸಾಹಿತ್ಯಿಕ ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದರು. ಅವರ ಮೊದಲ ವಿವಾಹ ಮುರಿದುಬಿದ್ದ ನಂತರ ಬಾಲವಿಧವೆಯದ ಶಿವರಾನಿ ದೇವಿಯವರನ್ನು ಮದುವೆಯಾದದ್ದು ಆ ಕಾಲಕ್ಕೆ ಅತ್ಯಂತ ಕ್ರಾಂತಿಕಾರಿ ನಡೆಯಾಗಿತ್ತು.

ಶ್ರೇಷ್ಠ ಕಥೆಗಾರರು ಮತ್ತು ಕಾದಂಬರಿಕಾರರೆಂದು ಖ್ಯಾತರಾದ ಪ್ರೇಮಚಂದ್ ಅವರ 301 ಕಥೆಗಳು 'ಸಪ್ತ ಸರೋಜ', 'ನವನಿಧಿ', 'ಪ್ರೇಮಪಚ್ಚೀಸೀ' ಮೊದಲಾದ ಶೀರ್ಷಿಕೆಗಳಲ್ಲಿ ಮೊದಲು ಪ್ರಕಟವಾಗಿ ಅವರ ಮರಣಾನಂತರದಲ್ಲಿ 'ಮಾನಸರೋವರ' ಶೀರ್ಷಿಕೆಯ ಎಂಟು ಭಾಗಗಳಲ್ಲಿ ಪ್ರಕಟವಾದವು. 'ಸೇವಾಸದನ', 'ರಂಗಭೂಮಿ' 'ಪ್ರೇಮಾಶ್ರಮ' 'ಕರ್ಮಭೂಮಿ', 'ಗೋದಾನ', ನಿರ್ಮಲಾ ಮೊದಲಾದ 8 ಕಾದಂಬರಿಗಳಲ್ಲದೆ, ಅವರ ಲೇಖನಗಳು ಮೂರು ಸಂಪುಟಗಳಲ್ಲಿ ಸಂಗ್ರಹಿತವಾಗಿವೆ.

ಅತ್ಯುನ್ನತ ಕಥನಕಲೆಗೆ ಹೆಸರಾದ ಪ್ರೇಮಚಂದ್ ಅವರ ಕಥೆ ಕಾದಂಬರಿಗಳಲ್ಲಿ ಗ್ರಾಮೀಣ ಭಾರತದ ಕೆಳವರ್ಗದ ಜನತೆಯ ಬದುಕು ಅದರೆಲ್ಲ ವಾಸ್ತವದಲ್ಲಿ ಎಳೆಎಳೆಯಾಗಿ ಚಿತ್ರಿಸಲ್ಪಟ್ಟಿದೆ. ಸಾಮಾನ್ಯ ಮನುಷ್ಯನೇ ಅವರೆಲ್ಲ ಸಾಹಿತ್ಯದ ಕೇಂದ್ರ. ಅವರ ಬರವಣಿಗೆಯ ಕಾಲಖಂಡ ಹಿಂದೀ ಸಾಹಿತ್ಯ ಚರಿತ್ರೆಯಲ್ಲಿ 'ಪ್ರೇಮಚಂದ ಯುಗ' ಎಂದೇ ಹೆಸರಾಗಿದೆ. ಅವರ ಸಾಹಿತ್ಯದ ಚಿತ್ರಣದ ರೀತಿಯನ್ನು 'ಆದರ್ಶೋನ್ಮುಖ ಯಥಾರ್ಥವಾದ' ಎಂದು ಕರೆಯಲಾಗಿದೆ.

ಅಮೃತಾ ಪ್ರೀತಮ್ (1919–2005)

ಪಂಜಾಬಿ ಭಾಷೆಯ ಅತ್ಯಂತ ಪ್ರಮುಖ ಲೇಖಕಿಯಾದ ಅಮೃತಾ ಪ್ರೀತಮ್ ಅವಿಭಜಿತ ಭಾರತದ ಪಂಜಾಬ್‌ನ ಗುಜರನ್ ವಾಲಾದಲ್ಲಿ ಹುಟ್ಟಿದವರು. ದೇಶವಿಭಜನೆಯ ಸಮಯದಲ್ಲಿ ದೆಹಲಿಗೆ ಬಂದು ನೆಲೆಸಿದರು. ಚಿಕ್ಕವಯಸ್ಸಿನಲ್ಲೇ ಬರವಣಿಗೆ ಪ್ರಾರಂಭಿಸಿ,

ಕವಯಿತ್ರಿ, ಕಥೆಗಾರ್ತಿ ಕಾದಂಬರಿಗಾರ್ತಿ, ಪ್ರಬಂಧಕಾತಿ ಮತ್ತು ಪತ್ರಕರ್ತೆ ಕೂಡ ಆಗಿ, 18 ಕವನ ಸಂಗ್ರಹಗಳು, 28 ಕಾದಂಬರಿಗಳು ಹಾಗೂ 5 ಕಥಾ ಸಂಕಲನಗಳೂ ಸೇರಿದಂತೆ ಸುಮಾರು 75 ಕೃತಿಗಳನ್ನು ರಚಿಸುವ ಮೂಲಕ ಪಂಜಾಬಿ ಸಾಹಿತ್ಯದಲ್ಲಿ ದೊಡ್ಡ ಹೆಸರು ಮಾಡಿದವರು. 'ಕಾಗದ ಮತ್ತು ಕ್ಯಾನ್ ವಾಸ್' ಎಂಬ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಪಡೆಯುವ ಮೂಲಕ ಪಂಜಾಬಿ ಭಾಷೆಗೆ ಮೊದಲ ಜ್ಞಾನಪೀಠಪ್ರಶಸ್ತಿ ಗಳಿಸಿಕೊಟ್ಟ ಗರಿಮೆಯೂ ಅವರದೇ. 'ಸುನಹಡೆ' ಎಂಬ ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಬಂದಿದೆ.

ಅಮೃತಾ ಪ್ರೀತಮ್ ಅವರ ಕೃತಿಗಳಲ್ಲಿ ಸಾಮಾನ್ಯವಾಗಿ ಸಮಾಜ ಮತ್ತು ಕುಟುಂಬದ ಶೋಷಣೆಗೆ ಸಿಕ್ಕಿ ನಲುಗಿದ ನಾರಿಯ ಚಿತ್ರಣವಿರುತ್ತದೆ. ಸಾಮಾನ್ಯ ಗಂಡು ಹೆಣ್ಣಿನ ಸಮಸ್ಯೆಗಳು, ನೋವು, ನಲಿವು, ಆಸೆ ಆಕಾಂಕ್ಷೆಗಲು, ಹತಾಶೆಗಳು, ಅವಮನಗಳು ಅವರ ಕಥೆ ಕಾದಂಬರಿಗಳಲ್ಲಿ ಚತ್ರಿತವಾಗಿರುತ್ತವೆ. ಅವರ ಕೃತಿಗಳು ಮನುಷ್ಯ ಸಂಬಂಧಗಳನ್ನು ಕುರಿತಂತೆ ಶೋಧನೆಗೆ ತೊಡಗುವುದೇ ಹೆಚ್ಚು

ಗೌತಮ್ ಸಚ್ ದೇವ್ (1939– 2012)

ಬ್ರಿಟನ್ನಿನ ಅತ್ಯಂತ ಪ್ರಮುಖ ಭಾರತೀಯ ಲೇಖಕ. ಕವಿ. ಕಥೆಗಾರ ಮತ್ತು ಪ್ರಬಂದಕಾರ. 'ಸಾಥೇ ಸಾಥ್', 'ದರ್ಜನ್ ಪಿಂಜಾರೇ', 'ಅಟಕಾ ಹುವಾ ಪಾನಿ' ಅವರ ಕಥಾ ಸಂಕಲನಗಳು. 'ಸೂರಜ್ ಕೀ ಪಂಖುಡಿಯಾ' ಅವರ ಕವಿತಾ ಸಂಕಲನ. ಹಿಂದೀ ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಭಾರತೀಯ ಹೈ ಕಮೀಷನ್ನಿನ ಅವಾರ್ಡ್ ಪಡೆದ ಲೇಖಕ.

ತೋಷಿ ಅಮೃತಾ

ಅನಿವಾಸಿ ಭಾರತೀಯ ಬರಹಗಾರ್ತಿಯಾದ ತೋಷಿ ಅಮೃತಾ ಅವರು ಉತ್ತರ ಲಂಡನ್ನಿನ 'ಫಿಂಚ್ ಲೇ' ಯಲ್ಲಿ ವಾಸಿಸುತ್ತಿದ್ದಾರೆ. ಅವರ ಹಲವು ಸಣ್ಣ ಕಥೆಗಳು ಮತ್ತು ಕವಿತೆಗಳು ಭಾರತೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಉಷಾ ವರ್ಮ

ಬಾರಾ ಬಾಂಕಿಯಲ್ಲಿ ಜನಿಸಿದ ಉಷಾವರ್ಮ ಖ್ಯಾತ ಅನಿವಾಸಿ ಭಾರತೀಯ

ಲೇಖಕಿ. ಎರಡು ಕವಿತಾ ಸಂಕಲನಗಳು ಮತ್ತು ಒಂದು ಕಥಾಸಂಕಲನವನ್ನು ಪ್ರಕಟಿಸಿದ್ದಾರೆ. 'ಕಾರಾವಾಸ್' ಎಂಬ ಎರಡು ಕಥಾ ಸಂಕಲನ ಸಂಪಾದಿಸಿದ್ದಾರೆ.

ನೆಥೇನಿಯಲ್ ಹೊಥೋರ್ನ್ (1804–1864)

ಅಮೆರಿಕಾದ ಮೆಸಾಚುಸೆಟ್ಸ್ ನಲ್ಲಿ ಜನಿಸಿದ ನೆಥೇನಿಯಲ್ ಹೊಥೋರ್ನ್ ಅಮೆರಿಕಾದ ಪ್ರಸಿದ್ಧ ಕಥೆಗಾರ ಮತ್ತು ಕಾದಂಬರಿಕಾರ. ಅಮೆರಿಕನ್ ಸಮಾಜದ ಅನುಭವದ ಚಿತ್ರಣ ಮೊದಲಬಾರಿಗೆ ಕಾಣಿಸಿಕೊಂಡದ್ದು ಹೊಥೋರ್ನ್ ಅವರಲ್ಲಿಯೇ ಎಂದು ಹೇಳುತ್ತಾರೆ. ಅದು ಇಂಗ್ಲೆಂಡಿನ ಸಮಾಜಕ್ಕಿಂತ ವಿಭಿನ್ನವಾದ್ದು ಎಂದು ಸಾಧಿಸಿ ತೋರಿಸಿದ ಲೇಖಕ. 'ಸ್ಕಾರ್ಲೆಟ್ ಲೆಟರ್' ಅವರ ಸುಪ್ರಸಿದ್ಧ ಕಾದಂಬರಿಯಾದರೆ 'ಟ್ವೈಸ್ ಟೋಲ್ಡ್ ಟೇಲ್ಸ್' ಅವರ ಪ್ರಸಿದ್ಧ ಕಥೆಗಳ ಸಂಕಲನ.

ಎಡ್ಗರ್ ಅಲೆನ್ ಪೋ (1809–1849)

ಅಮೆರಿಕಾದ ಸುಪ್ರಸಿದ್ಧ ಕಥೆಗಾರ ಕವಿ ಮತ್ತು ವಿಮರ್ಶಕ ಎಂದು ಹೆಸರಾಗಿದ್ದರೂ ತನ್ನ ಕಥೆಗಳಿಗಾಗಿಯೇ ಖ್ಯಾತನಾದ ಬರಹಗಾರ. ಯೂರೋಪಿನ ಬಹಳಷ್ಟು ಕಥೆಗಾರರು ಪೋ ನಿಂದ ಬಹಳ ಪ್ರಭಾವಿತರಾದರು. ಕಥೆಯ ಶಿಲ್ಪದ ಮೇಲೆ ಅಸಾಧಾರಣವಾದ ಪ್ರಭುತ್ವ ಹೊಂದಿದವರೆಂಬುದು ಅವರ ಖ್ಯಾತಿ.

ಅರ್ನೆಸ್ಟ್ ಹೆಮಿಂಗ್ ವೇ (1898–1961)

ಅಮೆರಿಕಾದ ಕಥೆಗಾರ, ಕಾದಂಬರಿಕಾರ ಹೆಮಿಂಗ್ ವೇ ಹುಟ್ಟಿದ್ದು ಚಿಕಾಗೋದಲ್ಲಿ. ಜಾಗತಿಕ ಯುದ್ಧದ ಸಮಯದಲ್ಲಿ ಅಮೆರಿಕನ್ ರೆಡ್ ಕ್ರಾಸ್‌ನಲ್ಲಿ ಆಂಬುಲೆನ್ಸ್‌ನ ಡ್ರೈವರ್ ಆಗಿ ಕೆಲಸ ಮಾಡಿದರು. ಚುರುಕಾದ, ಸುಟಿಯಾದ ಸಂಭಾಷಣಾ ಶೈಲಿಗೆ ಹೆಸರಾದ ಹೆಮಿಂಗ್ ವೇ 'ಓಲ್ಡ್ ಮ್ಯಾನ್ ಅಂಡ್ ದಿ ಸೀ' ಕಿರುಕಾದಂಬರಿಗೆ ನೊಬೆಲ್ ಪ್ರಶಸ್ತಿ ಪಡೆದವರು. 'ಐಲೆಂಡ್ ಇನ್ ದಿ ಸ್ಟ್ರೀಮ್', 'ಫಾರ್ ಹೂಮ್ ದಿ ಬೆಲ್ ಟೋಲ್ಸ್'. 'ಎ ಫೇರ್ವೆಲ್ ಟು ಆರ್ಮ್ಸ್' ಅವರ ಕೆಲವು ಪ್ರಸಿದ್ಧ ಕೃತಿಗಳು.

ಡಾಸ್ಟೋವೆಸ್ಕಿ (1821–1881)

ನವೆಂಬರ್ 11, 1821ರಲ್ಲಿ ಮಾಸ್ಕೋದಲ್ಲಿ ಜನಿಸಿದ ಡಾಸ್ಟೋವೆಸ್ಕಿ ರಷ್ಯಾದ ಸುಪ್ರಸಿದ್ಧ ಕಾದಂಬರಿಕಾರ ಮತ್ತು ಕಥೆಗಾರ. ಅವರ ಕೃತಿಗಳೆಂದರೆ ಸಮಾಜದಲ್ಲಿ

ಬಡವರು, ತುಳಿತಕ್ಕೊಳಗಾದವರ ಚಾರಿತ್ರ್ಯದ ದಾಖಲೆಗಳು ಎನ್ನಬಹುದು. ಪೂರ್ ಫೋಕ್, ಹೌಸ್ ಆಫ್ ಡೆಡ್, 'ನೋಟ್ಸ್ ಫ್ರಮ್ ಅಂಡರ್ ಗ್ರೌಂಡ್'"ಕ್ರೈಮ್ ಅಂಡ್ ಪನಿಷ್ ಮೆಂಟ್', 'ಗ್ಯಾಂಬ್ಲರ್', 'ಈಡಿಯಟ್','ಬ್ರದರ್ಸ್ ಕರಮಜೋವಾ' ಅವರ ಜಗತ್ಪ್ರಸಿದ್ಧ ಕೃತಿಗಳು.

ಸೋಲ್ಜೆ ನಿಟ್ಸನ್ (1918)

ಅಲೆಕ್ಸಾಂಡರ್ ಸೋಲ್ಜೆ ನಿಟ್ಸನ್ ರಷ್ಯಾದ ಪ್ರಸಿದ್ಧ ನೊಬೆಲ್ ಪುರಸ್ಕೃತ ಲೇಖಕ. ಗಣಿತ ಮತ್ತು ಭೌತಶಾಸ್ತ್ರದ ಅಧ್ಯಯನ ಮಾಡಿ ಸಾಹಿತ್ಯಕ್ಕೆ ತಿರುಗಿದ ವಿಶಿಷ್ಟ ಬರಹಗಾರ. ಸ್ಟಾಲಿನ್ ಕುರಿತು ಕಟುವಾದ ಪತ್ರವೊಂದನ್ನು ಮಿತ್ರನೊಬ್ಬನಿಗೆ ಬರೆದ ಕಾರಣಕ್ಕೆ ಅವರು ಎಂಟು ವರ್ಷ ಸೆರೆವಾಸ ಅನುಭವಿಸಬೇಕಾಯಿತು.ಕಮ್ಯುನಿಸ್ಟ್ ಆಡಳಿತದ ಬಗ್ಗೆ ಟೀಕೆ ಮಾಡಿದ್ದಕ್ಕೆ ರಷ್ಯಾದಿಂದ ಗಡೀಪಾರು ಮಾಡಲಾಗಿತ್ತು. ಜೂರಿಕ್ ಮತ್ತು ಅಮೆರಿಕಾದಲ್ಲಿ ಇದ್ದರು. ಅವರ ಪ್ರಸಿದ್ಧ ಕಾದಂಬರಿ 'ಕ್ಯಾನ್ಸರ್ ವಾರ್ಡ್'.

ಲೂಯಿ ಪಿರೈನೆಲಾ (1867–1939)

ಇಟ್ಯಾಲಿಯನ್ ಮೂಲದ ಪಿರೈನೆಲಾ ನೊಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕ (1934). 1867ಲ್ಲಿ ಹುಟ್ಟಿದ ಲೂಯಿ ಸಿಸಿಲಿ ದೇಶದವರು. ಅನೇಕ ಕಥೆಗಳು ಮತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಆದರೆ ಅವರಿಗೆ ಹೆಚ್ಚಿನ ಖ್ಯಾತಿ ತಂದುಕೊಟ್ಟಿರುವುದು ಅವರ ನಾಟಕಗಳು. 'six characters in search of an author' ಎಂಬುದು ಅವರ ಅಂತರ ರಾಷ್ಟ್ರಿಯ ಖ್ಯಾತಿಯ ನಾಟಕ.

ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ (1927 ಮಾರ್ಚ್– 2014 ಏಪ್ರಿಲ್)

ಕೊಲಂಬಿಯಾದ ಖ್ಯಾತ ಕಾದಂಬರಿಕಾರ, ಕಥೆಗಾರ, ಮತ್ತು ಪತ್ರಕರ್ತ ಮಾರ್ಕ್ವೆಜ್ 1982 ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ಪಡೆದವರು. ಮೆಕ್ಸಿಕೋ ಮೂಲದ ಬರಹಗಾರ. ಇಪ್ಪತ್ತನೇ ಶತಮಾನದ ದೈತ್ಯ ಲೇಖಕ ಎಂದು ಹೆಸರಾದವರು. 15 ಕಾದಂಬರಿಗಳು, ಮತ್ತು ಹಲವಾರು ಸಣ್ಣ ಕಥೆಗಳನ್ನು ಬರೆದವನು. ಕಥೆ ಕಾದಂಬರಿಗಳಲ್ಲದೆ ಕವಿತೆ ಮತ್ತು ರಂಗನಾಟಕಗಳನ್ನು ಬರೆದವರು. ಲ್ಯಾಟಿನ್ ಅಮೆರಿಕಾದ ಜನಜೀವನವನ್ನು ಅದರೆಲ್ಲ ವಿವರಗಳಲ್ಲಿ ಕಟ್ಟಿಕೊಟ್ಟವರು. ಅವರ ಬರವಣಿಗೆ ಮಾಂತ್ರಿಕ ವಾಸ್ತವತೆ (ಮ್ಯಾಜಿಕ್ ರಿಯಲಿಸಮ್) ಎಂದು ಹೆಸರಾಗಿದೆ. ನೂರು ವರ್ಷಗಳ ಏಕಾಂತ (ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್) ಅವರ ಹೆಸರಾಂತ ಕಾದಂಬರಿ.

ಗೈದ ಮೊಪಾಸ (1850– 1893)

ಫ್ರೆಂಚ್ ಕಾದಂಬರಿಕಾರ ಮತ್ತು ಕಥೆಗಾರ ಮತ್ತು ಕವಿ ಮೊಪಾಸಾ ಅತ್ಯುತ್ತಮ ಸಣ್ಣ ಕಥೆಗಳ ಲೇಖಕ ಎಂದೇ ಹೆಸರಾಗಿದ್ದಾರೆ. ಆರು ಕಾದಂಬರಿಗಳು, 260 ಸಣ್ಣ ಕಥೆಗಳನ್ನು ರಚಿಸಿರುವ ಮೊಪಾಸಾ ಕೆಳ ಮತ್ತು ಮಧ್ಯಮ ವರ್ಗದವರ ಜೀವನ ಚಿತ್ರಣಕ್ಕೆ ಹೆಸರಾದವರು. ನೆಕ್ ಲೇಸ್, ಹೊರ್ಲ್ಲಾ ಅವರ ಕೃತಿಗಳು.

ಸಾದತ್ ಹಸನ್ ಮಂಟೋ (1912–1955)

ಪಾಕಿಸ್ತಾನೀ ಉರ್ದೂ ಲೇಖಕ ಹಸನ್ ಮಂಟೋ ಅವಿಭಜಿತ ಭರತದ ಪಂಜಾಬಿನ ಲೂಧಿಯಾನದಲ್ಲಿ ಜನಿಸಿದವರು. ಕಾಶ್ಮೀರಿ ಕಣಿವೆಗೆ ಸೇರಿದವನು. 22 ಕಥಾ ಸಂಕಲನಗಳು, 5 ರೇಡಿಯೋ ನಾಟಕಗಳು, ಮೂರು ಪ್ರಬಂಧ ಸಂಕಲನಗಳು, ಒಂದು ಕಾದಂಬರಿ ಪ್ರಕಟವಾಗಿವೆ. 'ದುಹಾ', 'ಕಾಲೀ ಸಲ್ವಾರ್', 'ಬೂ', 'ಶಿಕಾರಿ' 'ಠಂಡಾ ಗೋಶ್ತ್', 'ತೋಬಾ ಟೇಕ್ ಸಿಂಗ್', 'ಆಯೇಷಾ' ಅವರ ಕೆಲವು ಕಥಾ ಸಂಕಲನಗಳು. ಎಲ್ಲ ರೀತಿಯ ಕಥೆಗಳನ್ನು ಬರೆದಿದ್ದಾರಾದರೂ ದೇಶವಿಭಜನೆಯ ದುರಂತಗಳು ಅವರ ಬಹುತೇಕ ಕಥೆಗಳ ವಸ್ತು. ಅವರ ಕಥೆಗಳು ಲೈಂಗಿಕತೆ. ಕಾಮ. ರಾಜಕೀಯ ಭ್ರಷ್ಟಾಚಾರ, ಮಾದಕ ವ್ಯಸನ ಇವುಗಳ ಸುತ್ತಲೂ ಇರುತ್ತವೆ.

ಹೆನ್ರಿ ಸ್ಕಾಟ್ ಸ್ಟೋಕ್ಸ್ (ಜನನ: 15–6–1938)

ಇವರು ಒಬ್ಬ ಬ್ರಿಟಿಷ್ ಪತ್ರಕರ್ತ ಮತ್ತು ಲೇಖಕ. ಆಕ್ಸ್‌ಫರ್ಡಿನ ವಿಂಚೆಸ್ಟರ್ ಕಾಲೇಜು ಮತ್ತು ನ್ಯೂ ಕಾಲೇಜಿನಲ್ಲಿ ಪದವೀಧರರಾದ ಮೇಲೆ ಜಪಾನಿಗೆ ಹೋಗಿ ಅಲ್ಲಿ ಟೋಕಿಯೋ ಬ್ಯೂರೋ ಆಫ್ ಟೈಮ್ಸ್ ನಲ್ಲಿ ಪತ್ರಕತರಾದರು. ಟೈಮ್ಸ್ ಬ್ಯೂರೋದಲ್ಲಿ ಫೈನಾನ್ಷಿಯಲ್ ಟೈಮ್ಸ್, ದಿ ಟೈಮ್ಸ್ ಮತ್ತು ನ್ಯೂ ಯಾರ್ಕ್ ಟೈಮ್ಸ್ ಗಳ ಮುಖ್ಯಸ್ಥರಾಗಿ ಕೆಲಸಮಾಡಿದರು. ತನ್ನ ತಲೆಮಾರಿನ ಪ್ರಸಿದ್ಧ ಲೇಖಕನೆಂದು ಸ್ಥಾಪಿಸಿಕೊಂಡವರು. ಇವರ ಕೃತಿಗಳೆಂದರೆ

1) The Life and death ofYukio Mishima(1974),2)The kwangju uprising (2004), 3) Fallacies in the allied Nations 4) Samurai company

❖



ಯಾವುದೇ ನೆಲದ ಬೆಳೆ ಹುಲುಸಾಗಿ ಬೆಳೆಯಲು ಹೊರಗಿನಿಂದ ನೀಡುವ ನೀರು, ಗೊಬ್ಬರ ಹೇಗೆ ಕಾರಣವೋ ಹಾಗೆ ಈ ನೆಲದ ಭಾಷೆ, ಸಾಹಿತ್ಯ ಬೆಳೆಯಲು ಹೊರಗಿನಿಂದ ಬರುವ ಸಾಹಿತ್ಯ ಕೂಡ ಅಷ್ಟೇ ಮುಖ್ಯವಾಗುತ್ತದೆ. ಹಿರಿಯ ಲೇಖಕರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಅಷ್ಟೇ ಆಸ್ಥೆಯಿಂದ ಸ್ವದೇಶೀ ಹಾಗೂ ವಿದೇಶೀ ಭಾಷೆಗಳ ಇಪ್ಪತ್ತೊಂದು ಕಥೆಗಳನ್ನಿಲ್ಲಿ ಅನುವಾದಿಸಿಕೊಟ್ಟಿದ್ದಾರೆ.

ಭಾರತೀಯ ಭಾಷೆಗಳಿಂದ ಪ್ರೇಮಚಂದ್, ಅಮೃತಾ ಪ್ರೀತಂರಂತಹ ಅಪ್ರತಿಮ ಲೇಖಕರ ಕಥೆಗಳನ್ನೂ, ವಿದೇಶೀ ಭಾಷೆಗಳಿಂದ ದಾಸ್ತೋವಸ್ಕಿ, ಗೇಬ್ರಿಯಲ್ ಮಾರ್ಕ್ವೇಜ್, ಮೊಪಾಸಾ, ಸಾದತ್ ಹಸನ್ ಮಂಟೋರಂತಹ ಘಟಾನುಘಟಿಗಳ ಕಥೆಗಳ ಅನುವಾದಗಳನ್ನು ಒಂದೆಡೆ ಕೊಡುವ ಮೂಲಕ ಅವರೆಲ್ಲರನ್ನು ಒಟ್ಟಿಗೇ ಓದಬಹುದಾದ ಸಾಧ್ಯತೆಯನ್ನು ನಿರ್ಮಿಸಿಕೊಟ್ಟಿದ್ದಾರೆ. ಅವೆಲ್ಲಕ್ಕೆ ಕಳಸವಿಟ್ಟಂತೆ ಲಕ್ಷ್ಮೀನಾರಾಯಣರ ಅಭೂತಪೂರ್ವವಾದ ಅನುವಾದ ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

– ಕಂನಾಡಿಗಾ ನಾರಾಯಣ

ಹಲವು ಭೂಮಿ ಹಲವು ಬಣ್ಣ

ಕೆಲವು ಪ್ರಖ್ಯಾತ ಸ್ವದೇಶೀ
ಮತ್ತು
ವಿದೇಶೀ ಕಥೆಗಳು



ಸಿವಿಜಿ